
ಅನ್ವೇಷಕ



ಪ್ರೊ|| ಕೆ.ಜಿ.ಎನ್.
ಅಭಿನಂದನಾ ಗ್ರಂಥ

ಡಾ|| ಕೆ. ವಿ. ಭಟ್. ಅವರಿಗೆ,
ವಿಶ್ವಾಸದೊಂದಿಗೆ,
ಜಿ. ಟಿ. ನಾರಾಯಣ

H1

ಅನಿಕೇತನ ಪ್ರಕಟಣೆ – 5

ಅನ್ವೇಷಕ

ಪ್ರೊ॥ ಕೆ.ಜಿ.ಎನ್. ಅಭಿನಂದನಾ ಗ್ರಂಥ

ಸಂಪಾದಕರು :
ಎಂ.ಎಚ್. ನಾಗರಾಜು
ಎ.ಕೆ. ಹಂಪಣ್ಣ

ಅನಿಕೇತನ
ಸಾಹಿತ್ಯ ಸಾಂಸ್ಕೃತಿಕ ಸಂಶೋಧನಾ ಕೇಂದ್ರ
ತುಮಕೂರು

ANWESHAKA - the Felicitation Volume Presented to **Prof. K.G.Nagarajappa,** Edited by **M.H. Nagaraju** and **A.K. Hampanna**, Published by Aniketana, Sahitya Samskruthika Samshodhana kendra, Tumkur.

First Edition : 1998 : PP 274 + XIX Price Rs. 120

ಪ್ರಥಮ ಮುದ್ರಣ ಸೆಪ್ಟಂಬರ್ 1998

ಮುಖಪುಟ ವಿನ್ಯಾಸ : ಎಂ. ವಿಶ್ವನಾಥ್

ಬೆಲೆ ರೂ. 120.

ಪ್ರಕಾಶಕರು:
ಅನಿಕೇತನ
ಸಾಹಿತ್ಯ ಸಾಂಸ್ಕೃತಿಕ ಸಂಶೋಧನಾ ಕೇಂದ್ರ
ತುಮಕೂರು.

ಪ್ರತಿಗಳಿಗೆ:
ಎಂ.ಎಚ್. ನಾಗರಾಜು
ನಂ202, ಮೂರನೇ ತಿರುವು
ಹೊಸಬಡಾವಣೆ
ಗುಬ್ಬಿ - 572 216.

ಅಕ್ಷರ ಜೋಡಣೆ: ಬೆನಕ ಡಿಟಿಪಿ ಕಾಟೇಜ್, ತುಮಕೂರು

ಮುದ್ರಣ : ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್, ಬೆಂಗಳೂರು.

ಸಂಪಾದಕರ ಮಾತು

ಪ್ರೊ॥ ಕೆ.ಜಿ. ನಾಗರಾಜಪ್ಪನವರ ವಿಮರ್ಶಾ ಕೃತಿಗಳ ಬಿಡುಗಡೆ, ಬದುಕು-ಬರಹ ಕುರಿತ ವಿಚಾರಸಂಕಿರಣ ಮತ್ತು ಅಭಿನಂದನಾ ಸಮಾರಂಭದ ಸಂದರ್ಭದಲ್ಲಿ (13.09.98) 'ಅನ್ವೇಷಕ' ಎಂಬ ಶೀರ್ಷಿಕೆಯ ಅಭಿನಂದನಾ ಗ್ರಂಥವನ್ನು ಅವರಿಗೆ ಪ್ರೀತಿಯಿಂದ ಅಭಿಮಾನದಿಂದ ಅರ್ಪಿಸುತ್ತಿರುವ ಗ್ರಂಥಕ್ಕೆ ಅದರ ಸಂಪಾದಕರಾಗಿ ಎರಡು ಮಾತು ಬರೆಯುವುದು ಅತ್ಯಂತ ಸೂಕ್ತ ಎಂದು ಭಾವಿಸುತ್ತೇವೆ. ಈ ಎಲ್ಲಾ ಕಾರ್ಯಕ್ರಮ ಕುರಿತು, ಪ್ರೊ॥ ಕೆ.ಜಿ.ಎನ್. ಕುರಿತು ಏನೆಲ್ಲಾ ಹೇಳುವುದಕ್ಕೆ ಮೊದಲು ಅವರ ಮತ್ತು ನಮ್ಮ ಸಂಬಂಧವನ್ನು ಅನಾವರಣಗೊಳಿಸುವುದು ಒಳ್ಳೆಯದು. ಪ್ರೊ॥ ಕೆ.ಜಿ.ಎನ್. ಅವರಿಗೂ ನಮಗೂ ಕೇವಲ ಐದಾರು ವರ್ಷಗಳ ಪರಿಚಯ, ಸ್ನೇಹ, ಸಂಬಂಧ. ಅವರು ನಮಗೆ ಪಾಠ ಹೇಳಿದ ಗುರುಗಳಲ್ಲ, ನಾವು ಅವರಿಗೆ ಶಿಷ್ಯರೂ ಅಲ್ಲ. ಸಮೀಪ ಬಂಧುಗಳಂತೂ ಅಲ್ಲವೇ ಅಲ್ಲ. ಅವರಿಂದ ಯಾವುದೇ ರೀತಿಯ ಬೆನಿಫಿಟ್ ಪಡೆದವರೂ ಅಲ್ಲ. ಆದರೂ ನಮ್ಮ ಅವರ ನಡುವೆ ಗಾಢವಾದ ಸಂಬಂಧ, ವಿಶ್ವಾಸ ಆತ್ಮೀಯತೆ ಬೆಳೆಯಲು ಬೇರೆಯದೇ ಆದ ಕಾರಣಗಳಿವೆ.

ಬಹುಶಃ ಅತಿಕಡಿಮೆ ಅವಧಿಯಲ್ಲಿ ಅತಿ ಕಡಿಮೆ ಬರಹ-ಭಾಷಣಗಳ ಮೂಲಕ ನಮ್ಮನ್ನು ಆಕರ್ಷಿಸಿದವರಲ್ಲಿ ಪ್ರೊ॥ ಕೆ.ಜಿ.ಎನ್. ಅವರೇ ಮೊದಲಿಗರೆನ್ನಬಹುದು. ಅವರ ಶುದ್ಧ ಬದುಕು-ಬರಹ, ಅಸಲಿ ಚಿಂತನೆ ನಮ್ಮನ್ನು ಪ್ರಭಾವಿತಗೊಳಿಸಿದವು. ಸಣ್ಣತನ, ಸಂಕುಚಿತ ಮನೋಭಾವದಿಂದ ದೂರವಾಗಿ, ಹಳಗನ್ನಡ-ನಡುಗನ್ನಡ-ಹೊಸಗನ್ನಡದ ಅಗಾಧವಾದ ಓದಿನ ಹಿನ್ನೆಲೆ ಇರುವ, ನೇರ ನಡೆ ನುಡಿಯ ಶುದ್ಧ ಲೇಖಕರೆಂಬ ಕಾರಣದಿಂದಲೇ ಅವರು ನಮ್ಮಂತಹವರಿಗೆ ಆಪ್ತರಾಗುತ್ತಾ ಹೋಗುತ್ತಾರೆ. ಇಂತಹ ವ್ಯಕ್ತಿತ್ವವೇ ನಮ್ಮನ್ನು ಅವರತ್ತ ಸೆಳೆಯಲು ಕಾರಣವಾಯಿತು.

ಜಾತಿ, ಧರ್ಮ, ರಾಜಕೀಯ, ಅಧಿಕಾರ, ಸ್ವಾರ್ಥಗಳಿಂದ ಸದಾ ವಿಮುಖರಾಗಿ ಬದುಕಿದ ಪ್ರೊ॥ ಕೆ.ಜಿ.ಎನ್. ಬರಹಗಾರರು ಮಾತ್ರವಲ್ಲ ಉತ್ತಮ ಸಂಶೋಧಕರು, ವಿಮರ್ಶಕರು ಮತ್ತು ಚಿಂತಕರು. ಸ್ವಂತ ವಿಚಾರವಂತಿಕೆ ಬೆಳೆಸಿಕೊಂಡವರು. ತಮ್ಮ ಬರಹ ಭಾಷಣಗಳ ಮೂಲಕ ಅಕಾಡೆಮಿಕ್ ವಲಯದಲ್ಲಿ ವಿದ್ವತ್ ಗೋಷ್ಠಿಗಳಲ್ಲಿ ಪ್ರಸಿದ್ಧರು. ಗಂಭೀರ ಸಾಹಿತ್ಯಾಸಕ್ತರನ್ನು ಸೆಳೆದವರು. ತರುಣ ಬರಹಗಾರರ ಬೆನ್ನು ತಟ್ಟಿದವರು. ಅವರ ಚಿಂತನೆ, ಆಲೋಚನೆ, ಜನಪರ ಕಾಳಜಿ, ಮಾನವೀಯತೆ, ಗ್ರಾಮೀಣ, ಹಿಂದುಳಿದ, ಕೆಳವರ್ಗದ ಜನರಿಗಾಗಿ ಸ್ಪಂದಿಸುವ ರೀತಿ, ಕೆಳವರ್ಗದ ಸಂಸ್ಕೃತಿ ಮೇಲಣ ಪ್ರೀತಿ ಅನನ್ಯವಾದದ್ದು. ತಮ್ಮ ಪ್ರಖರ ಚಿಂತನೆಗಳಿಂದ ಒಂದು ಕಾಲಘಟ್ಟದ ಕನ್ನಡ ವಿಮರ್ಶೆ ಮತ್ತು ಸಂಶೋಧನಾ ಕ್ಷೇತ್ರಗಳನ್ನು ಕಲಕಿದವರು. ಇದುವರೆವಿಗೂ ಕನ್ನಡ ಸಾಹಿತ್ಯ, ಕೆಳವರ್ಗದ ಸಂಸ್ಕೃತಿಯನ್ನು ಅಸಡ್ಡೆಯಾಗಿ ಕಂಡು ಅಧ್ಯಯನಕ್ಕೆ ಗಮನ ಕೊಡದೆ ಹೊದಿಸಿದ್ದ ಮುಸುಕನ್ನು ಕಿತ್ತೆಸೆದು, ತಮ್ಮ ಬರಹದಲ್ಲಿ ಶ್ರೀ ಸಾಮಾನ್ಯನ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತಾ ಬಂದ ಕೆಚ್ಚೆದೆಯವರು. ಯಾವ ಆಸೆ, ಆಮಿಷ, ಪ್ರಲೋಭನೆ ಮತ್ತು ಒತ್ತಡಗಳಿಗೂ

ಒಳಗಾಗದೆ ಕೆಳವರ್ಗದ ಸಂಸ್ಕೃತಿಯೊಂದಿಗೇ ತಮ್ಮನ್ನು ತಾವು ಗುರುತಿಸಿಕೊಂಡವರು. ತಾವು ಸವಾಲುಗಳನ್ನು ಎದುರಿಸುತ್ತಲೇ ಅನ್ಯರಿಗೆ ಸವಾಲುಗಳನ್ನು ಎಸೆಯುವ ಧೀಮಂತ ವ್ಯಕ್ತಿತ್ವವುಳ್ಳವರು. ಈಗಾಗಲೇ ಕನ್ನಡ ಬರಹಗಾರರಲ್ಲಿ ವಿಶಿಷ್ಟ ದಾಟಿಯ ವ್ಯಕ್ತಿತ್ವ ಉಳ್ಳವರು ಎಂಬುದನ್ನು ತಮ್ಮ ಬದುಕು ಮತ್ತು ಬರಹದ ಮೂಲಕ ದಾಖಲಿಸಿದ ಅವರ ಚಿಂತನೆಗಳು ಅನೇಕ ತರುಣ ಬರಹಗಾರರನ್ನು ಪ್ರಚೋದಿಸಿವೆ.

ಸದಾ ಶೋಷಿತರ ಪರನಿಂತು, ಚಿಕಿತ್ಸಕ ದೃಷ್ಟಿಯಿಂದ ಸಮಾಜವನ್ನು ನೋಡುವ, ಸಮಸ್ಯೆಗಳಿಗೆ ತಮ್ಮದೇ ಆದ ಪರಿಹಾರ ಮಾರ್ಗ ಸೂಚಿಸುವ, ಛಿದ್ರ ಛಿದ್ರ ಹಿಂದುಳಿದ ಜನಾಂಗಗಳನ್ನು ನೇಯ್ದು ಬಹುಸಂಸ್ಕೃತಿಯನ್ನು ಹದಗೊಳಿಸುವ ತುಡಿತದ ಪ್ರೊ॥ ಕೆ.ಜಿ.ಎನ್. ಅವರು ಅತಿ ಕಡಿಮೆ ಅವಧಿಯಲ್ಲಿ ನಮಗೆ ಹತ್ತಿರವಾದದ್ದರಲ್ಲಿ ಹೆಚ್ಚುಗಾರಿಕೆ ಏನಿಲ್ಲ. ಅವರ ಚಿಂತನೆ, ವಿಚಾರಧಾರೆ ಹರಡಲಿ ಹೆಚ್ಚು ಜನರಿಗೆ ತಲುಪಲಿ ಎಂಬ ಆಶಯದಿಂದ ಅವರ ಬರಹಗಳ ಪ್ರಕಟಣೆಯ ಕೆಲಸ ಕೈಗೊಂಡೆವು. ಈ ವಿಮರ್ಶಕ ಅಘೋರಿಯ ಬದುಕು-ಬರಹದ ಸಾಕ್ಷಿಯಾಗಿ ಅಭಿನಂದನಾ ಗ್ರಂಥ 'ಅನ್ವೇಷಕ' ವನ್ನು ಸಂಪಾದಿಸಿದೆವು. ಪ್ರಚಾರ ಪ್ರಿಯರಲ್ಲದ ಪ್ರೊ॥ ಕೆ.ಜಿ.ಎನ್. ಅಭಿನಂದನಾ ಸಮಾರಂಭಕ್ಕೆ ಒಪ್ಪಿರುವುದಕ್ಕೆ, ಅವರಿಗೆ ನಮ್ಮ ಕೃತಜ್ಞತೆಗಳು.

ಅಭಿನಂದನಾ ಗ್ರಂಥದ ಶೀರ್ಷಿಕೆ 'ಅನ್ವೇಷಕ' ಎಂದಿದೆ. ಶೀರ್ಷಿಕೆಯೇ ಪ್ರೊ॥ ಕೆ.ಜಿ.ಎನ್. ಅವರ ಅರವತ್ತೈದು ವರ್ಷಗಳು ಬದುಕು-ಬರಹ-ವ್ಯಕ್ತಿತ್ವವನ್ನ ಸಾಂಕೇತಿಸುತ್ತದೆ, ಕಟ್ಟಿಕೊಡುತ್ತದೆ. ಅವರ ಗುರುಗಳು, ಬಂಧುಗಳು, ಸ್ನೇಹಿತರು, ಶಿಷ್ಯರು, ಅಭಿಮಾನಿಗಳು ಹೀಗೆ ಎಲ್ಲರನ್ನು ಸಂಪರ್ಕಿಸಿ, ಲೇಖನಗಳನ್ನು ಸಂಗ್ರಹಿಸಿ ಎರಡು ವರ್ಷಗಳ ನಿರಂತರ ಪ್ರಯತ್ನ-ಪರಿಶ್ರಮದಿಂದ 'ಅನ್ವೇಷಕ' ವನ್ನು ಸಂಪಾದಿಸಿದೆವು. ಯಾವುದೇ ಹಣ, ಅಧಿಕಾರ, ಜಾತಿ, ಜನಾಂಗದ ಬೆಂಬಲ ಇಲ್ಲದಿದ್ದಂತಹ ಸಂದರ್ಭದಲ್ಲಿ ಇಂತಹದ್ದೊಂದು ಯೋಜನೆಯನ್ನು ಕಾರ್ಯಗತ ಗೊಳಿಸುವುದು ಎಷ್ಟು ಕಷ್ಟ, ನೋವಿನಿಂದ ಕೂಡಿದ್ದು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಹೇಳುವುದು ಸೂಕ್ತವೂ ಅಲ್ಲ. ನಮ್ಮದೊಂದೊಂದು ಪತ್ರಕ್ಕೆ ಸ್ಪಂದಿಸಿ ಶುಭಕೋರಿದ, ಲೇಖನ ಬರೆದುಕೊಟ್ಟ, ಹಿಂದಿನ ಲೇಖನ ಬಳಸಿಕೊಳ್ಳಲು ಅನುಮತಿಕೊಟ್ಟ ಎಲ್ಲಾ ಹಿರಿಯ ಕಿರಿಯ ಬರಹಗಾರರಿಗೆ ಗೌರವದ ನಮನಗಳನ್ನು ತಿಳಿಸುವುದು ಪ್ರಥಮ ಕರ್ತವ್ಯ ಎಂದು ಭಾವಿಸುತ್ತೇವೆ.

'ಅನ್ವೇಷಕ' ಹೊರಬರಲು ಎಲ್ಲಾ ರೀತಿಯ ಸಹಾಯ ಮಾಡಿದ 'ಅನಿಕೇತನ ಸಾಹಿತ್ಯ ಸಾಂಸ್ಕೃತಿಕ ಕೇಂದ್ರ'ದ ಒಡನಾಡಿಗಳಿಗೆ, ಕೆ.ಜಿ.ಎನ್. ಅಭಿಮಾನಿಗಳಿಗೆ, 'ಅರುಂಧತಿ ಗ್ರಾಮ ವಿಕಾಸ ಕೇಂದ್ರ'ದ ಸ್ವಯಂಸೇವಕರಿಗೆ, ಡಿ.ಟಿ.ಪಿ. ಮಾಡಿದ ' ಬೆನಕ ಡಿ.ಟಿ.ಪಿ ಕಾಟೇಜ್, ತುಮಕೂರು, ಇವರಿಗೆ, ಮುದ್ರಿಸಿದ ವಿನಾಯಕ ಆಫ಼ೆಸೆಟ್ ಪ್ರಿಂಟರ್ಸ್, ಜೆ.ಪಿ.ನಗರ, ಬೆಂಗಳೂರು ಇವರಿಗೆ ನಮ್ಮ ಕೃತಜ್ಞತೆಗಳು.

ಗುಬ್ಬಿ
ತಾ॥ 13-9-1998.

ಸಂಪಾದಕರು
ಎಂ. ಹೆಚ್. ನಾಗರಾಜು
ಎ.ಕೆ. ಹಂಪಣ್ಣ

ಪರಿವಿಡಿ :

ಭಾಗ - 1 ಬದುಕು

ಭಾಗ - II ಬರಹ

ಭಾಗ - III ಇತರೆ

ಭಾಗ-I
ಬದುಕು

1. ನಮ್ಮ ನಾಗರಾಜಪ್ಪ

ಡಾ|| ಜಿ.ಎಸ್. ಶಿವರುದ್ರಪ್ಪ

ಅದು ಐವತ್ತರ ದಶಕದ ಕೊನೆಯ ಭಾಗ. ಪ್ರೊ|| ತೀ.ನಂ.ಶ್ರೀಕಂಠಯ್ಯನವರು ಮಹಾರಾಜ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರು. ಶ್ರೀ ಕುವೆಂಪು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರು. ಕನ್ನಡ ಪ್ರಾಧ್ಯಾಪಕರೊಬ್ಬರು ಮಹಾರಾಜಾ ಕಾಲೇಜಿನಂಥ ಪ್ರತಿಷ್ಠಿತ ಸಂಸ್ಥೆಯ ಪ್ರಿನ್ಸಿಪಾಲರಾದದ್ದು ಅದೇ ಮೊದಲು. ಕನ್ನಡದ ಘನ ವಿದ್ವಾಂಸರಾದ ಡಿ.ಎಲ್. ನರಸಿಂಹಾಚಾರ್ಯರು, ವಿದ್ಯಾರ್ಥಿಗಳಿಗೆ ಪ್ರಿಯರಾದ ಎಸ್.ವಿ. ಪರಮೇಶ್ವರಭಟ್ಟರು, ತ.ಸು. ಶಾಮರಾಯರು, ಶ್ರೀ ಎನ್. ಅನಂತರಂಗಾಚಾರ್ಯರು, ದೇ. ಜವರೇಗೌಡರು-ಇತ್ಯಾದಿ ಕನ್ನಡದ ಕಟ್ಟಾಳುಗಳಿಂದ ಮೈಸೂರು ವಿಶ್ವವಿದ್ಯಾಲಯದಲ್ಲಿ ವಾತಾವರಣ ಕನ್ನಡಮಯವಾಗಿತ್ತು. ನಾನು ಅದೇ ತಾನೆ, ಭಾರತ ಸರ್ಕಾರದ ಸಂಶೋಧನಾ ಸಹಾಯ ಧನವನ್ನು ಪಡೆದು, ಎರಡು ವರ್ಷಗಳ ಅವಧಿಯಲ್ಲಿ ಬರೆದು ಮುಗಿಸಿದ ಪಿ.ಎಚ್.ಡಿ. ಮಹಾಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿ, ಮಹಾರಾಜಾ ಕಾಲೇಜಿಗೆ ಕನ್ನಡ ಅಧ್ಯಾಪಕನಾಗಿ ಹಿಂದಿರುಗಿದ್ದೆ.

ಪ್ರೊ|| ತೀ.ನಂ.ಶ್ರೀಕಂಠಯ್ಯನವರು ನನಗೆ ನನ್ನ ಅಧ್ಯಾಪಕತನದ ಜತೆಗೆ, ಬೇರೊಂದು ಜವಾಬ್ದಾರಿಯನ್ನು ವಹಿಸಿದರು. ಅದೇನೆಂದರೆ: ಕನ್ನಡ ಎಂ.ಎ. ತರಗತಿಯ ಸೆಮಿನಾರ್‌ಗಳನ್ನು ವ್ಯವಸ್ಥೆಗೊಳಿಸುವುದು. ಎಂ.ಎ. ತರಗತಿಯ ವಿದ್ಯಾರ್ಥಿಗಳೆಲ್ಲರೂ, ವಾರಕ್ಕೆ ಒಬ್ಬರಂತೆ ಒಂದು ನಿರ್ದಿಷ್ಟ ವಿಷಯವನ್ನು ಕುರಿತು ಅಧ್ಯಯನ ಮಾಡಿ ಪ್ರಬಂಧವೊಂದನ್ನು ಬರೆದುಕೊಂಡು ಬಂದು ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ಸಭೆಯ ಮುಂದೆ ಮಂಡಿಸಬೇಕು. ಇದು ಅಂದಿನ ಪಠ್ಯಕ್ರಮದ ಒಂದು ಅಂಗವೂ ಆಗಿತ್ತು. ಈ ಬಗೆಯ ಪ್ರಬಂಧ ಮಂಡನೆಯ ನಂತರ ಆ ಪ್ರಬಂಧವನ್ನು ಕುರಿತ ಚರ್ಚೆ-ಪ್ರತಿಚರ್ಚೆಯೂ ಇರುತಿತ್ತು. ಅಧ್ಯಾಪಕರೂ ಈ ಚರ್ಚೆಯಲ್ಲಿ ಭಾಗವಹಿಸಿ ಅನೇಕ ಹೊಸ ಸಂಗತಿಗಳನ್ನು ಸೇರಿಸುತ್ತಿದ್ದರು; ಮಾರ್ಗದರ್ಶನ ಮಾಡುತ್ತಿದ್ದರು.

ಇಂಥ ಸೆಮಿನಾರ್‌ಗಳನ್ನು ಕುರಿತು ಮುಂಗಡವಾಗಿಯೆ ವಿದ್ಯಾರ್ಥಿಗಳಿಗೆ ತಿಳಿಯಹೇಳಿ, ಯಾರು ಯಾರು ಯಾವ ಯಾವ ವಿಷಯಗಳನ್ನು ಮಂಡಿಸುತ್ತಾರೆಂಬುದೆನ್ನುವ ವೇಳಾಪಟ್ಟಿಯೊಂದನ್ನು ತಯಾರಿಸುವ ಕೆಲಸ, ಮತ್ತು ವಾರಕ್ಕೊಂದರಂತೆ ನಡೆಯುವ ಈ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸುವ ಕೆಲಸ ನನ್ನದಾಗಿತ್ತು. ಅದಕ್ಕಾಗಿ ಮೂರು ತಿಂಗಳಿಗೊಮ್ಮೆ ನಾನೇ ವಿದ್ಯಾರ್ಥಿಗಳಿಂದ ವಿಷಯಗಳನ್ನು ಮುಂಗಡವಾಗಿ ಬರಮಾಡಿಕೊಳ್ಳುತ್ತಿದ್ದೆ. ಇಂಥ ಹಿನ್ನೆಲೆಯಲ್ಲಿ, ಆ ವರ್ಷದ ಸೆಕೆಂಡ್ ಟರ್ಮಿನಲ್ಲಿ ನಡೆಯಿಸಬೇಕಾದ ಸೆಮಿನಾರ್‌ಗೆ, ವಿಷಯಗಳ ಆಯ್ಕೆಯನ್ನು ತಿಳಿಸಿರಿ ಎಂದು ಕನ್ನಡ ವಿಭಾಗದ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸಿದೆ. ಒಂದು ವಾರದ ನಂತರ ಈ ಕುರಿತು ಕೆಲವು ವಿದ್ಯಾರ್ಥಿಗಳಿಂದ, ತಾವು

ಪ್ರಬಂಧ ಮಂಡನೆಗಾಗಿ ಆಯ್ಕೆ ಮಾಡಿಕೊಂಡ ವಿಷಯಗಳೇನೆಂಬುದನ್ನು ಕುರಿತ ಪತ್ರಗಳು ನನ್ನ ಕೈಗೆ ಬಂದವು. ನಾನು ಒಂದೊಂದೇ ಪತ್ರದಲ್ಲಿ ಸೂಚಿತವಾದ ವಿಷಯಗಳನ್ನು ಪಟ್ಟಿ ಮಾಡಲು ಕೈಗೆತ್ತಿಕೊಂಡೆ: 'ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ' , 'ಮಾಸ್ತಿಯವರ ಸಣ್ಣಕತೆಗಳ ವೈಶಿಷ್ಟ್ಯ', 'ವರ್ಣನಾತ್ಮಕ ಭಾಷಾವಿಜ್ಞಾನದ ದೃಷ್ಟಿಯಿಂದ ಶಬ್ದಮಣಿ ದರ್ಪಣ', 'ಕನ್ನಡದ ನವ್ಯ ಕತೆಗಳು; 'ಎಲಿಯಟ್ ಮತ್ತು ಗೋಪಾಲಕೃಷ್ಣ ಅಡಿಗ: ಒಂದು ವಿವೇಚನೆ'- ಹೀಗೆ ಒಂದೊಂದೆ ವಿಷಯಗಳ ಸೂಚನೆಯನ್ನು ಗಮನಿಸುತ್ತ ಇದ್ದಂತೆ, 'ಕನ್ನಡ ಸಾಹಿತ್ಯದಲ್ಲಿ ದೆವ್ವಗಳು' ಎಂಬ ವಿಷಯದ ಸೂಚನಾ ಪತ್ರವನ್ನು ಓದುತ್ತಲೆ ಥಟ್ಟನೆ, ಇದ್ಯಾರಪ್ಪ ಇದು, ಇಷ್ಟೊಂದು ಘನವಾದ ವಿಷಯಗಳನ್ನು ಸೂಚಿಸಿದವರ ನಡುವೆ ಇದ್ದಕ್ಕಿದ್ದ ಹಾಗೆ; ಅನಿರೀಕ್ಷಿತವಾಗಿ ಕನ್ನಡ ಸಾಹಿತ್ಯದಲ್ಲಿ ದೆವ್ವಗಳನ್ನು ಹುಡುಕ ಹೊರಟವರು ಎಂದು ಚಕಿತನಾದೆ. ನೋಡುತ್ತೇನೆ ಈ ವಿಷಯವನ್ನು ಕುರಿತು ಪ್ರಬಂಧ ಮಂಡನೆಗೆ ಮುಂದಾದ ವಿದ್ಯಾರ್ಥಿಯ ಹೆಸರು-ಕೆ.ಜಿ. ನಾಗರಾಜಪ್ಪ.

ಕೆಲವು ವಾರಗಳ ನಂತರ ಕನ್ನಡ ಸಾಹಿತ್ಯದಲ್ಲಿ ದೆವ್ವಗಳನ್ನು ಕುರಿತ ಕಲ್ಪನೆಯ ಬಗ್ಗೆ ನಾಗರಾಜಪ್ಪ ತರಗತಿಯ ಸೆಮಿನಾರಿನಲ್ಲಿ ಪ್ರಬಂಧ ಮಂಡಿಸಿದ್ದು, ಆ ಪ್ರಬಂಧದ ವಸ್ತು ಹಾಗೂ ಸ್ವಾರಸ್ಯಗಳನ್ನು ಕುರಿತು ಸಾಕಷ್ಟು ಚರ್ಚೆಯಾದದ್ದು, ಚರ್ಚೆಯ ಸಂದರ್ಭದಲ್ಲಿ ಒಂದಷ್ಟು ನಗೆಯ ಬುಗ್ಗೆ ಪುಟಿದದ್ದೂ, ಈಗ ನನ್ನ ಪಾಲಿಗೆ ದೂರದ ನೆನಪುಗಳಾಗಿವೆ. ಆದರೆ ಈ ಸೆಮಿನಾರ್ ನಂತರ ನಾಗರಾಜಪ್ಪ ನನಗೆ ತೀರಾ ಹತ್ತಿರದವರಾಗಿ ಬಿಟ್ಟರು ಎಂಬುದಂತೂ ಸ್ಪಷ್ಟವಾದ ಸಂಗತಿ.

ನಾಗರಾಜಪ್ಪ ಗುಬ್ಬಿ ತಾಲ್ಲೂಕಿನ, ಕಡಬಾ ಹತ್ತಿರದ ಕಲ್ಲೂರು ಗ್ರಾಮದವರು. ತಾಯಿ ಕೂಲಿ ನಾಲಿ ಮಾಡಿ ದುಡಿಯುವ ಮಹಿಳೆ. ಇದ್ದುದೊಂದು ಸಣ್ಣ ಮುರುಕಲು ಮನೆ. ಬೆಳೆದದ್ದು ಕಡುಬಡತನದಲ್ಲಿ, ಆದರೂ ತಮ್ಮ ಓದನ್ನು ಮುಂದುವರಿಸಿ, ಎಂ.ಎ. ತರಗತಿಯವರೆಗೂ ಬಂದಿದ್ದರು. ಮೈಸೂರಿನಲ್ಲಿ ಎಲ್ಲೋ ಒಂದು ರೂಮು ಮಾಡಿಕೊಂಡಿದ್ದರೆಂದು ಕಾಣುತ್ತದೆ. ನನಗೆ ತಿಳಿದಂತೆ ಅವರಿಗೆ ಯಾವ ಹಾಸ್ಟಲುಗಳ ಆಶ್ರಯವೂ ದೊರೆತಿರಲಿಲ್ಲ. ಅವರ ಅಂದಿನ ಪರಿಸ್ಥಿತಿಗಳನ್ನು ಹೇಗೋ ತಿಳಿದ ನಾವು ಕೆಲವರು (ನಾನು-ಪ್ರಭುಶಂಕರ್), ಅವರಿಗೆ ಕೆಲವು ಮನೆಗಳಲ್ಲಿ ಊಟದ ಏರ್ಪಾಡು ಮಾಡಿದೆವು; ಜತೆಗೆ ನಮ್ಮ ಸ್ನೇಹಿತರ ಮನೆಯ ಹೈಸ್ಕೂಲು ಮಕ್ಕಳಿಗೆ ಪಾಠ ಹೇಳುವ ಅವಕಾಶವೂ ಕಲ್ಪಿತವಾಯಿತು. ವಾರದಲ್ಲಿ ಒಂದೆರಡು ದಿನ ನಮ್ಮ ಮನೆಯಲ್ಲೂ ಊಟ ಮಾಡುತಿದ್ದ ನಾಗರಾಜಪ್ಪ ಕ್ರಮ ಕ್ರಮೇಣ, ನನ್ನ ಮನೆಗೆ, ನನ್ನ ಮಡದಿ-ಮಕ್ಕಳಿಗೆ ಹತ್ತಿರವಾದರು. ಅಷ್ಟೆ ಅಲ್ಲ ನಮ್ಮ ಮನೆಯವರಲ್ಲಿ ಒಬ್ಬರಾದರು. ಈ ಹೊತ್ತಿಗೂ ಆಗಿದ್ದಾರೆ. ನನ್ನ ಕಷ್ಟದಲ್ಲಿ ಸುಖದಲ್ಲಿ, ಮಳೆಯಲ್ಲಿ ಬಿಸಿಲಲ್ಲಿ, ನೆರಳಿನಲ್ಲಿ ಬೆಳಕಿನಲ್ಲಿ ಅವರು ನನ್ನ ಜತೆಗೆ ಇದ್ದಾರೆ. ಅವರು ನನ್ನ ಜತೆಗೆ ಇದ್ದಾರೆ ಅನ್ನುವುದು ನನಗೊಂದು ಧೈರ್ಯದ, ಸಮಾಧಾನದ ಸಂಗತಿಯಾಗಿದೆ.

'ಕನ್ನಡ ಸಾಹಿತ್ಯದಲ್ಲಿ ದೆವ್ವಗಳು, ಅಥವಾ ದೆವ್ವದ ಕಲ್ಪನೆ' ಎಂಬ ವಿಷಯವನ್ನು

ಕುರಿತು ಮೊಟ್ಟಮೊದಲು (ಬಹುಶಃ ಇದೇ ಅವರ ಮೊದಲ ಬರಹವಾಗಿರಬಹುದು) ಪ್ರಬಂಧವನ್ನು ತಯಾರಿಸಿದ ಈ ಮನಸ್ಸು ಮೂಲತಃ ರಹಸ್ಯಗಳ ಅನ್ವೇಷಣೆಯ ಪ್ರವೃತ್ತಿಯದು. ಅವರು ಒಬ್ಬೊಬ್ಬರೇ ನಡುರಾತ್ರಿಗಳಲ್ಲಿ ದೆವ್ವಗಳನ್ನು ಹುಡುಕಿಕೊಂಡು ಸ್ಮಶಾನಗಳಿಗೆ ಹೋಗಿದ್ದುದಾಗಿಯೂ ಹೇಳುತ್ತಿದ್ದರು. ಅವರು ಹುಡುಕಿಕೊಂಡು ಹೋದ ದೆವ್ವಗಳು ಈ ಹೊತ್ತಿಗೂ ಮುಖಾ ಮುಖಿಯಾಗಿವೆಯೋ ಇಲ್ಲವೋ ತಿಳಿಯದು. ಆದರೆ ರಹಸ್ಯ ವಿಜ್ಞಾನದ (occult science) ಬಗ್ಗೆ ಅವರಿಗೆ ಅದಮ್ಯವಾದ ಆಸಕ್ತಿಯಿದೆ ಎಂಬುದು ಸ್ಪಷ್ಟ. ಮಂತ್ರ-ತಂತ್ರಾದಿ ಶಾಸ್ತ್ರಗಳ ಬಗ್ಗೆ ಅವರಿಗೆ ಅಪಾರವಾದ ಒಲವಿದೆ. ಈ ಗೂಢ ಅಥವಾ ರಹಸ್ಯ ವಿಜ್ಞಾನವು ಕರ್ನಾಟಕದ ವಿವಿಧ ಧಾರ್ಮಿಕ ಪಂಥಗಳ ಮೇಲೆ, ಮಾಡಿರುವ ಪ್ರಭಾವಗಳನ್ನೂ, ಈ ಧಾರ್ಮಿಕ ನಿಲುವಿನ ಪರಿಣಾಮವಾದ ಸಾಹಿತ್ಯದ ಸ್ವರೂಪವನ್ನೂ ನಾಗರಾಜಪ್ಪನವರ ಹಾಗೆ ಅಭ್ಯಸಿಸಿ, ವಿಶ್ಲೇಷಣೆ ಮಾಡಿರುವವರು ನಮ್ಮ ಸಾಹಿತ್ಯ ಸಂದರ್ಭದಲ್ಲಿ ತೀರಾ ಕಡಿಮೆಯೆಂದೇ ಹೇಳಬೇಕು.

ಈ ರಹಸ್ಯಾನ್ವೇಷಕ ಪ್ರವೃತ್ತಿಯು ಅವರ ವ್ಯಕ್ತಿತ್ವದಲ್ಲಿ ಒಂದು ಬಗೆಯ ಧೈರ್ಯವನ್ನು ಹುಟ್ಟು ಹಾಕಿದಂತೆ ತೋರುತ್ತದೆ. ಎಂಥ ಸಂದರ್ಭದಲ್ಲೂ ಎದೆಗುಂದದೆ ನಿಂತ ಅವರ ನಿಲುವಿನಲ್ಲಿ ನಾನು ಈ ಲಕ್ಷಣವನ್ನು ಗುರತಿಸಿದ್ದೇನೆ. ಅಷ್ಟೆ ಅಲ್ಲ ಉಳಿದವರಲ್ಲೂ ಅವರು ಈ ಬಗೆಯ ಧೈರ್ಯವನ್ನು ಪ್ರಚೋದಿಸಬಲ್ಲರು. ನಮ್ಮ ಮನೆಯ ಮಕ್ಕಳು,-ಎಲ್ಲ ಮಕ್ಕಳಂತೆ ಸಹಜವಾಗಿಯೆ ಪುಕ್ಕಲುಗಳು, ನಾಗರಾಜಪ್ಪನವರು ದೆವ್ವಗಳ-ಭೂತಗಳ ಸ್ಮಶಾನಗಳ ಬಗ್ಗೆ ರಂಜಕವಾಗಿ ಮಾತನಾಡುವುದನ್ನು ಕೇಳಿದ ನಮ್ಮ ಮನೆಯ ಮಕ್ಕಳು 'ಮಾಮ ನಮಗೂ ಅದನ್ನು ತೋರಿಸಿ' ಎಂದು ಅವರಿಗೆ ಗಂಟು ಬೀಳುತ್ತಿದ್ದರು. ಶನಿವಾರ ಭಾನುವಾರಗಳಂದು, ಈ ಮಕ್ಕಳನ್ನು ಸೈಕಲ್ ಮೇಲೆ ಕೂರಿಸಿಕೊಂಡು, ಮೈಸೂರಿನ ಚಾಮುಂಡೀಪುರಂ ಹತ್ತಿರದ ಎಲೆತೋಟಗಳನ್ನು ದಾಟಿ, ಸಂಜನಗೂಡು ರಸ್ತೆಯಾಚೆ, ಚಾಮುಂಡಿಬೆಟ್ಟದ ತಪ್ಪಲಿನ ಸ್ಮಶಾನಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಆ ಮಕ್ಕಳು ಸ್ಮಶಾನದ ಗೋರಿಗಳ ನಡುವೆ ಓಡಾಡಿ, ಆಟವಾಡಿ, ನಿರ್ಭಯರಾಗಿ ಮನೆಗೆ ಹಿಂದಿರುಗುತ್ತಿದ್ದರು. ಮಕ್ಕಳ ತಾಯಿ ಸಹಜವಾಗಿಯೆ ಆಕ್ಷೇಪಿಸಿದರೆ 'ಏನೂ ಆಗುವುದಿಲ್ಲ ಬಿಡಿ, ಒಂದಷ್ಟು ಧೈರ್ಯ ಬರುತ್ತದೆ ಅವಕ್ಕೆ' ಎಂದು ಸಮಾಧಾನ ಹೇಳುವರು. ನಾನೂ ನಾಗರಾಜಪ್ಪನವರೂ ಆಗಾಗ ಬಾಡಿಗೆ ಸೈಕಲ್ ತೆಗೆದುಕೊಂಡು, ಒಂದಿಷ್ಟು ಕಡ್ಲೆಕಾಯಿ ಕೊಂಡು ಕೊಂಡು, ಇದೇ ಚಾಮುಂಡಿ ಬೆಟ್ಟದ ಬುಡದ ಸ್ಮಶಾನಕ್ಕೆ ಹೋಗಿ ಗಂಟೆಗಟ್ಟಲೆ ಕೂತುಕೊಳ್ಳುತ್ತಿದ್ದೆವು. 'ಸಮಾಧಿ'ಗಳ ಸುತ್ತ ಬೆಳೆದ ಬಿಲ್ವ ಪತ್ರೆ, ಬನ್ನಿ ಮೊದಲಾದ ಮರಗಳ ಕೆಳಗೆ ಕೂತು ಅನತಿ ದೂರದಲ್ಲಿ ನಿಶ್ಚಲವಾಗಿ ವಿಸ್ತಾರವಾಗಿ ಹರಹಿಕೊಂಡ ಚಾಮುಂಡಿಬೆಟ್ಟವನ್ನೂ, ಪ್ರಶಾಂತವಾಗಿ ತಬ್ಬಿಕೊಂಡ ಸಂಜೆಯ ವರ್ಣವಿನ್ಯಾಸಗಳನ್ನೂ, ರುದ್ರಭೂಮಿಯ ವಿಲಕ್ಷಣ ಮೌನವನ್ನೂ ನಮ್ಮೊಳಗೆ ತುಂಬಿಕೊಳ್ಳುತ್ತಿದ್ದೆವು. ಐವತ್ತರ ದಶಕದ ಕೊನೆಯ ಈ ಅನುಭವ, ಮೂವತ್ತು ವರ್ಷಗಳ ಅನಂತರ, ಕವಿತೆಯೊಂದರಲ್ಲಿ ಮೈಪಡೆದುಕೊಂಡಿದೆ. ಕವಿತೆಯ ಹೆಸರು 'ಗೆರೆ'. 'ಪ್ರೀತಿ ಇಲ್ಲದ ಮೇಲೆ' (1987) ಎಂಬ ಸಂಕಲನದಲ್ಲಿ ಸೇರ್ಪಡೆಯಾಗಿರುವ ಕವಿತೆ ಹೀಗಿದೆ:

ರುದ್ರಭೂಮಿಯ ನಿಶ್ಶಬ್ದಗಳಲ್ಲಿ
ನಾನೊಬ್ಬನೇ,
ಸುತ್ತಲೂ ನಿಂತ ಮರಗಳಿಂದು-
ದುರುತ್ತಲಿವೆ ಎಲೆ
ಒಂದೊಂದೇ
ಗಾಳಿ ಬೀಸಿದ ಹಾಗೆ.

ಒಳಗೆ ಮಲಗಿದ್ದಾರೆ, ನಿನ್ನೆ ಮೊನ್ನೆಯ
ಮತ್ತೆ ಅದರಾಚೆ ವರ್ಷಗಳ
ನೆಲವ ತುಳಿದವರು.
ಉಸಿರಾಗಿ ಹೆಸರಾಗಿ
ಅವರಿವರ ಜತೆಯಾಗಿ
ಬದುಕಿದವರು.
ತಮ್ಮ ಕಾಲದ ಜತೆಗೆ
ಹೊಡದಾಡಿದವರು
ಮಲಗಿದ್ದಾರೆ ನಿಶ್ಶಬ್ದವಾಗಿ, ಕರಗಿ
ನೆಲದಾಳಗಳಲ್ಲಿ ಅರಗಿ,
ಮತ್ತೆ ಸುತ್ತಲೂ ನಿಂತ ಈ
ಮರಗಿಡಗಳಲ್ಲಿ ಹಸುರಾಗಿ
ಹೂವಾಗಿ, ಹಕ್ಕಿ ದನಿಯಾಗಿ
ನೆಲವ ತಬ್ಬಿರುವ ಹುಲ್ಲಾಗಿ, ಕಲ್ಲಾಗಿ
ಇನ್ನೂ ಏನೇನೋ ಆಗಿ
ಗುರುತು ಸಿಗದಾಗಿ.
ನಾನು ಕೂತಿದ್ದೇನೆ, ಈ ನಡುವೆ
ಆಕಾರವಾಗಿ
ಉಸಿರಾಡುತ್ತ, ಇದನೆಲ್ಲ ನೋಡುತ್ತ
ನನಗು ಅವರಿಗೂ ಮಧ್ಯೆ
ವ್ಯತ್ಯಾಸವೇನೆಂದು ಚಿಂತಿಸುತ್ತ
ಒಳಗು-ಹೊರಗಿನ ಗೆರೆಯ
ಗುರುತಿಸುತ್ತ.

ನಾಗರಾಜಪ್ಪನವರು ತುಮಕೂರಿನ ಸಿದ್ಧಗಂಗಾ ಕಾಲೇಜಿನಲ್ಲಿ ಅನೇಕ ವರ್ಷಗಳ ಕಾಲ ಅಧ್ಯಾಪಕರಾಗಿದ್ದ ಕಾಲದಲ್ಲಿ, ನಾನು ಆಗಾಗ ತುಮಕೂರಿಗೆ ಹೋಗಿ, ಅವರ ಜತೆ ದೇವರಾಯನದುರ್ಗ, ಮಧುಗಿರಿ, ಸಿದ್ಧರಬೆಟ್ಟ ಹೀಗೆ ಹಲವಾರು ಗುಡ್ಡ ಬೆಟ್ಟ ಕಾಡು

ಮೇಡುಗಳಲ್ಲಿ ಅಲೆದಿದ್ದೇನೆ. 'ಕಾಡಿನ ಕತ್ತಲಲ್ಲಿ' (1981) ಎಂಬ ಒಂದು ಕವಿತೆಯ ವಸ್ತು ನಾನು ಅವರ ಜತೆ ದೇವರಾಯನ ದುರ್ಗದ ಕಾಡಿನ ಕತ್ತಲಿನಲ್ಲಿ ನನಗಾದ ಅನುಭವವನ್ನು ಕುರಿತದ್ದು. ಹೀಗೆ ನನ್ನ ಎಷ್ಟೋ ಕವಿತೆಗಳ ಜತೆಗೆ ನಾಗರಾಜಪ್ಪನವರ ನೆನಪು ಹೆಣೆದುಕೊಂಡಿದೆ. ಅಷ್ಟೆ ಅಲ್ಲ ನನ್ನ ಅನೇಕ ಕವಿತೆಗಳ ಮೊದಲ ಓದುಗರೂ, ವಿಮರ್ಶಕರೂ ಅವರೇ ಆಗಿದ್ದಾರೆ. ಹಾಗೆಯೆ ಅವರು ಬರೆದ ಸಂಶೋಧನಾತ್ಮಕವೊ ವಿಮರ್ಶಾತ್ಮಕವೋ ಆದ ಲೇಖನಗಳನ್ನು ತಂದು ನನಗೆ ತೋರಿಸಿದ್ದಲ್ಲದೆ ಅವರಿಗೆ ತೃಪ್ತಿ ಇಲ್ಲ. ಸ್ವಾರಸ್ಯದ ಸಂಗತಿ ಎಂದರೆ, ಅವರೊಬ್ಬ ಲೇಖಕರೆಂದು ಸ್ಪಷ್ಟವಾಗಿ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡದ್ದೇ, ಕೇವಲ ಹತ್ತು ವರ್ಷಗಳ ಹಿಂದೆ, ಅಂದರೆ 'ಮರುಚಿಂತನೆ' ಎಂಬ ಕೃತಿಯ (1985) ಪ್ರಕಟನೆಯ ಮೂಲಕ. ಅವರಿಗೆ, ಅಧ್ಯಯನ, ಅಧ್ಯಾಪನ ಹಾಗೂ ಚಿಂತನೆಗಳಲ್ಲಿರುವ ಆಸಕ್ತಿ, ಬರೆಯುವುದರಲ್ಲಿ ಅಷ್ಟಾಗಿ ಇರಲಿಲ್ಲ-ಅನೇಕ ವರ್ಷಗಳವರೆಗೆ. ಅಂತೂ ಬಹಳ ಕಾಲ ಕಾದು, 1985 ರಲ್ಲಿ ಅವರು ಪ್ರಕಟಿಸಿದ 'ಮರುಚಿಂತನೆ' ಎಂಬ ಸಾಹಿತ್ಯ ವಿಮರ್ಶೆಯ ಕೃತಿ, ಕನ್ನಡ ಸಾಹಿತ್ಯ ವಿಮರ್ಶೆಯ ಪರಿಸರವನ್ನು ಚಕಿತಗೊಳಿಸಿತು. ಸಮಕಾಲೀನ ಸಾಹಿತ್ಯ ಸಂದರ್ಭದಲ್ಲಿ ಹೊಸ ರೀತಿಯಲ್ಲಿ ಯೋಚಿಸುವ ಅನೇಕ ತರುಣ ಲೇಖಕರನ್ನು ಈ ಕೃತಿಯ ಮೂಲಕ ನಾಗರಾಜಪ್ಪನವರು ಪ್ರಚೋದಿಸಿದರು. ಅವರು ತಮ್ಮ ವಿಮರ್ಶೆಯ ಭಿನ್ನ ಮಾದರಿಗಳಿಂದ ಮತ್ತು ಚಿಂತನೆಯ ಕ್ರಮದಿಂದ ಸಾಹಿತ್ಯ ವಿಮರ್ಶಕರ ಹಾಗೂ ಸಾಹಿತ್ಯಾಸಕ್ತರ ಗಮನವನ್ನು ಸೆಳೆದುಕೊಂಡರು.

ನಾಗರಾಜಪ್ಪನವರ ವಿಮರ್ಶೆ ಮೂಲತಃ ಮಾನವಶಾಸ್ತ್ರ ಹಾಗೂ ಸಮಾಜ ಶಾಸ್ತ್ರಗಳ ನೆಲೆಗಟ್ಟನ್ನು ಉಳ್ಳದ್ದು. ಬೇರೊಂದು ಮಾತಿನಲ್ಲಿ ಹೇಳುವುದಾದರೆ ಅದು ಸಂಸ್ಕೃತಿ ವಿಶ್ಲೇಷಣಾತ್ಮಕ ವಿಮರ್ಶೆ ಎಂದು ಕರೆಯಬಹುದು. ಅವರ ಬರಹದ ಕೇಂದ್ರ ಕಾಳಜಿ ಸಂಸ್ಕೃತಿಯನ್ನು ಕುರಿತದ್ದು. ಅದರಲ್ಲೂ ಕೆಳವರ್ಗದವರ ಸಂಸ್ಕೃತಿಯ ಮೇಲೆ ಉದ್ದಕ್ಕೂ ಮೇಲ್‌ವರ್ಗದವರು ನಡೆಯಿಸಿದ ಹಲ್ಲೆಗಳೂ, ಮತ್ತು ಕೆಳವರ್ಗದ ತಲ್ಲಣಗಳೂ, ಅಸಹಾಯಕತೆಗಳೂ ನಾಗರಾಪ್ಪನವರನ್ನು ತೀವ್ರವಾಗಿ ಕಾಡುತ್ತವೆ. ಅವರ 'ಮರುಚಿಂತನೆ' ಎಂಬ ಕೃತಿಯ ಒಂದು ಮುಖ್ಯ ವಿಚಾರಧಾರೆಯೇ ಇದು. ಈ ಕೃತಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತು ಮರುಚಿಂತನೆಗೆ ತೊಡಗಿಸುವಂಥ ಅನೇಕ ಒಳನೋಟಗಳನ್ನು ಪ್ರಕಟಿಸುತ್ತದೆ. ವೀರಶೈವ ಧರ್ಮ ಮತ್ತು ವಚನ ಚಳುವಳಿಯನ್ನು ಕುರಿತ ಬರಹಗಳೇ ಮಿಗಿಲಾಗಿರುವ ಈ ಕೃತಿಯಲ್ಲಿ, ಶರಣ ಸಾಹಿತ್ಯವನ್ನು ಕುರಿತು ಪ್ರಚಲಿತವಾಗಿರುವ 'ಜನಪ್ರಿಯ' ಹಾಗೂ ಅನೇಕ ವೇಳೆ ಏರುದನಿಯಲ್ಲಿ ಪ್ರಸ್ತಾಪಿತವಾದ ಅನೇಕ ವಿಚಾರಗಳ ಬೇರುಗಳನ್ನು ಅಲ್ಲಾಡಿಸಿ ಸಾಕಷ್ಟು ವಿವಾದದ ತರಂಗಗಳನ್ನು ಎಬ್ಬಿಸಿದ್ದಾರೆ. ಒಂದೊಂದು ಸಲ ಇವರ ಬರಹ ಉದ್ದೇಶಪೂರ್ವಕವಾಗಿಯೇ 'ನೇತಿ'ಮಾರ್ಗವನ್ನು ಹಿಡಿದಂತೆ ತೋರುವುದಾದರೂ, ಆ ಮೂಲಕ ಅವರು ಮಂಡಿಸುವ ವಿಚಾರಗಳು, ಸತ್ಯದ ಬೇರೆ ಬೇರೆ ಮಗ್ಗುಲುಗಳನ್ನು, ತೋರುತ್ತ ಅವುಗಳನ್ನು ಕುರಿತು ಓದುಗರು ಮರುಚಿಂತನೆಗೆ ತೊಡಗುವಂತೆ ಪ್ರೇರೇಪಿಸುತ್ತವೆಯೆಂಬುದರಲ್ಲಿ ಅನುಮಾನವಿಲ್ಲ. ನಿದರ್ಶನಕ್ಕೆ

ಹೇಳುವುದಾದರೆ, ವಚನ ಚಳುವಳಿ ಕೆಳವರ್ಗದ ಜನ, ಮೇಲ್‌ವರ್ಗದ ಜನರಿಂದ (ರಾಜರು-ಪುರೋಹಿತರು) ನಿರಂತರವಾಗಿ ಶೋಷಣೆಗೆ ಒಳಗಾಗುತ್ತ, ಬಿಡುಗಡೆಗೆ ಹಾರೈಸುತ್ತಿದ್ದ ಹನ್ನೆರಡನೆ ಶತಮಾನದ ಆ ಕಾಲದಲ್ಲಿ, ಶರಣ ಧರ್ಮವು ಈ ಜನವನ್ನು ಆ ಬಗೆಯ ಶೋಷಣೆಯಿಂದ ಪಾರು ಮಾಡಿ, ವೀರಶೈವವೆಂಬ ಸಂಘಟನೆಯ ನೆಲೆಯೊಂದರಲ್ಲಿ ಅವರನ್ನು ತಂದು, ಅವರಿಗೆ ಆತ್ಮಗೌರವವನ್ನೂ, ಅಭಿವ್ಯಕ್ತಿಯ ಅವಕಾಶವನ್ನೂ, ಪ್ರತಿಭಟನೆಯ ಕೆಚ್ಚನ್ನೂ ತಂದುಕೊಟ್ಟಿತು ಎನ್ನುವುದು ಮಹತ್ವದ ಚಾರಿತ್ರಿಕ ಘಟನೆಯಾಗಿದೆ. ಆದರೆ, ನಾಗರಾಜಪ್ಪನವರು ಹೇಳುತ್ತಾರೆ: ಶರಣಧರ್ಮವು ಬಹುದೇವತಾರಾಧನೆಯ ಸಾಮಾನ್ಯ ಜನರನ್ನು, ಏಕದೇವತೋಪಾಸನೆಯ ಈ ಧರ್ಮಕ್ಕೆ ತರುವುದರ ಮೂಲಕ ಕೆಳವರ್ಗದ ಸಂಸ್ಕೃತಿಯನ್ನು ನಾಶಮಾಡಿತು-ಎಂದು (ಪು.42). ಇದು ನಿಜಕ್ಕೂ ವಿಭಿನ್ನವಾದ, ಹಾಗೂ ಮೇಲುನೋಟಕ್ಕೆ ಪೂರ್ವಗ್ರಹ ಪೀಡಿತವೋ ಎಂಬಂತೆ ತೋರುತ್ತದೆ. ಹಾಗಾದರೆ, ಬಹುದೇವತಾರಾಧಕರಾದ ಈ ಕೆಳವರ್ಗವನ್ನು, ಅಂದಿನ ಶರಣಧರ್ಮ ತನ್ನ ತೆಕ್ಕೆಗೆ ತೆಗೆದುಕೊಳ್ಳದೆ ಹೋಗಿದ್ದರೆ, ಅವರೆ ತಮ್ಮ ಬಿಡುಗಡೆಯ ದಾರಿಗಳನ್ನು ಕಂಡುಕೊಂಡು, ತಮ್ಮ ಸಂಸ್ಕೃತಿಯನ್ನು ಶೋಷಣೆಗೊಳಗಾಗದಂತೆ ಕಾಯ್ದುಕೊಳ್ಳಲು ಸಾಧ್ಯವಿತ್ತೆ, ಅಥವಾ ವೀರಶೈವ ಧರ್ಮವು ಸಮಾನವಾದ ವೇದಿಕೆ ಹಾಗೂ ಸಂಕೇತವನ್ನು ಆವಿಷ್ಕಾರ ಮಾಡಿಕೊಳ್ಳದೆ, ವಿವಿಧ ಸ್ತರದ ಜನರನ್ನು ಸಂಘಟಿಸುವುದು ಸಾಧ್ಯವಿತ್ತೆ-ಎಂಬ ಪ್ರತಿ ಪ್ರಶ್ನೆಗಳನ್ನು ನಾಗರಾಜಪ್ಪನವರ ಅಭಿಪ್ರಾಯವು ಪ್ರಚೋದಿಸಿದರೂ, ಈ ಪ್ರಶ್ನೆಗಳಿಗೆ ದೊರೆಯುವ ಉತ್ತರವು 'ಸಾಧ್ಯವಿಲ್ಲ' ಎಂಬುದೇ ಆಗಿದೆ. ಆದರೆ ಈ ಶರಣ ಚಳುವಳಿ ಕೆಳಸ್ತರದ ಬಹುಸಂಖ್ಯಾತ ದುಡಿಯುವ ವರ್ಗಕ್ಕೆ, ತತ್ಕಾಲಕ್ಕಾದರೂ, ಮಾತನಾಡುವ ಬಾಯನ್ನೂ, ಪ್ರತಿಭಟಿಸುವ ಕೆಚ್ಚನ್ನೂ ತಂದುಕೊಟ್ಟಿತೆಂಬುದಾಗಲೀ, ಈ ಕೆಳವರ್ಗದ ಶೂದ್ರಶಕ್ತಿಯ ಹಿಡಿಮದ್ದಿನಿಂದ, ನೆಲೆನಿಂತ ವ್ಯವಸ್ಥೆಯನ್ನು ಸ್ಫೋಟಿಸುವ ಪ್ರಯತ್ನವೊಂದು ಘಟಿಸಿತೆಂಬುದಾಗಲೀ ಚಾರಿತ್ರಿಕವಾದ ವಾಸ್ತವಗಳೇ ಆಗಿವೆ. ಈ ಸಂಗತಿಗಳು ನಾಗರಾಜಪ್ಪನವರಿಗೆ ಗೊತ್ತಿಲ್ಲವೆಂದೇನೂ ಅಲ್ಲ. ಆದರೆ ಶರಣ ಚಳುವಳಿಯ ಈ ಚಾರಿತ್ರಿಕ ವಾಸ್ತವಗಳ ಹಿಂದೆ, ಕೆಳವರ್ಗದ ಸಂಸ್ಕೃತಿಗಳಿಗೆ ಒದಗಿದ ಆಘಾತವನ್ನೂ ನಾಗರಾಜಪ್ಪನವರು ಗುರುತಿಸುತ್ತ, ಆ ಚಾರಿತ್ರಿಕ ಸಂದರ್ಭದ ಬಹುಮುಖತ್ವವನ್ನು ಕುರಿತು ಓದುಗರನ್ನು 'ಮರುಚಿಂತನೆ'ಗೆ ತೊಡಗಿಸುತ್ತಾರೆ. ಹಾಗೆಯೇ, ವಚನಕಾರರು ಮನುಷ್ಯರೆಲ್ಲರೂ ಸಮಾನರು ಎಂಬ ಮಾತನ್ನು ಹೇಳಲಿಲ್ಲ; ಲಿಂಗದೀಕ್ಷೆಯಿಂದ ಶಿವಭಕ್ತರಾದವರೆಲ್ಲರೂ ಸಮಾನರೆಂದು ಹೇಳಿದರು-ಎಂಬರ್ಥದ (ಪು.೭೪) ಅಭಿಪ್ರಾಯವನ್ನು ಮಂಡಿಸುತ್ತಾರೆ. ಈ ಅಭಿಪ್ರಾಯವನ್ನು ಓದಿದ ಕೂಡಲೆ, ಹೌದಲ್ಲ, ಈ ಕುರಿತು ನಾವು ಯಾರೂ ಸರಿಯಾಗಿ ಗಮನಿಸಿಯೇ ಇರಲಿಲ್ಲ-ಎಂದು ಅನ್ನಿಸುತ್ತದೆ. ಆದರೆ ಚಾರಿತ್ರಿಕವಾಗಿ ನೋಡಿದರೆ, 'ಸರ್ವೇಜನಾಃ ಸುಖಿನೋ ಭವಂತು' 'ಸರ್ವಂಖಲ್ವಿದಂ ಬ್ರಹ್ಮ'ಎಂದು ಉದ್‌ಘೋಷಿಸುತ್ತಾ, ವಾಸ್ತವವಾಗಿ ಚಾತುರ್‌ವರ್ಣದ ಶ್ರೇಣೀಕರಣವನ್ನು ಎತ್ತಿ ಹಿಡಿದ ವೈದಿಕ ಪರಂಪರೆಯ ಈ 'ಹುಸಿ ಸಮಾನತೆ'ಯ ಹಿನ್ನೆಲೆಯಲ್ಲಿ, 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರೆಲ್ಲರನ್ನೂ ಒಂದೇ ಎಂಬೆ' ಎಂಬ ಬಸವಣ್ಣನವರ ಮಾತು ಮತ್ತು ಆ ಮಾತನ್ನು ಕೃತಿಗಿಳಿಸಿ ತೋರಿಸಲು ಅವರು ಮಾಡಿದ

ಪ್ರಯತ್ನ ಇಂದು ನಮಗೆ ಅತ್ಯಂತ ಮಹತ್ವದ್ದಾಗಿ ತೋರುವುದಲ್ಲದೆ, ಹನ್ನೆರಡನೆಯ ಶತಮಾನದ ಚರಿತ್ರೆಯಲ್ಲಿ ಎಂತಹ ದಿಟ್ಟ ಹೆಜ್ಜೆ ಎಂದು ಅನ್ನಿಸುತ್ತದೆ. ಹಾಗೆ ನೋಡಿದರೆ ಜಗತ್ತಿನ ಎಲ್ಲ ಧರ್ಮಗಳೂ ಯಾವುದೋ ಒಂದು ಚೌಕಟ್ಟನ್ನು ಹಾಕಿಕೊಂಡೇ, ಮೊದಲು ಆ ಚೌಕಟ್ಟಿನಲ್ಲಿ ತಮ್ಮ ಧರ್ಮದ ಆದರ್ಶಗಳ ಪಾಲನೆಯ ಪ್ರಯತ್ನಗಳನ್ನು ಒತ್ತಿ ಹೇಳುತ್ತವೆ. ಯಾವುದು ಒಂದು ಪರಿಮಿತಿಯಲ್ಲಿ ಸಾಧ್ಯವಾಗುತ್ತದೋ, ಅದು ಅನಂತರ ಆ ಪರಿಮಿತಿಯಾಚೆಗೂ ಸಾಧ್ಯವಾಗುತ್ತದೆ ಎಂಬ ನಂಬಿಕೆಯೊಂದು ಈ ಸಂಘಟನೆಗಳ ಹಿಂದಿರುತ್ತದೆ. ಹಾಗೆಯೇ ಒಂದು ಧರ್ಮ ಕ್ರಮೇಣ, ಸಾಂಸ್ಥಿಕ ಧರ್ಮವಾದಾಗ, ಅದು ತನ್ನ ಅರ್ಥವನ್ನು ಕಳೆದುಕೊಂಡು, ಹತ್ತರಲ್ಲಿ ಹನ್ನೊಂದಾಗುವ ಅವಸ್ಥೆಯನ್ನು ತಲುಪುತ್ತದೆ. ಶರಣಧರ್ಮ ಕೂಡಾ ಈ 'ದುರವಸ್ಥೆ'ಯನ್ನು ತಲುಪಿದ ಪರಿಯನ್ನು ನಾಗರಾಜಪ್ಪನವರು ಈ ಕೃತಿಯಲ್ಲಿ ತುಂಬ ಸಮರ್ಥವಾಗಿ ಗುರುತಿಸಿದ್ದಾರೆ. ಹಾಗೆಯೆ ಯಾವುದೇ ಸಾಹಿತ್ಯವಾಗಲಿ, ಧರ್ಮವಾಗಲಿ ತಾನು ಸಂಭವಿಸಿದ ನೆಲದ ಸಂಸ್ಕೃತಿಯ ಸಂಪರ್ಕವನ್ನು ಕಡಿದುಕೊಂಡು ಬೇರೆ ಬೇರೆಯ ಹಾಗೂ ಪಾರಂಪರಿಕವಾದ ಪ್ರಬಲ ಸಂಸ್ಕೃತಿಯ ಅಥವಾ ಸಾಹಿತ್ಯದ, ಪ್ರಭಾವಗಳಿಗೋ, ಅನುಕರಣೆಗೋ ಒಳಗಾಗಿ, ತನ್ನತನವನ್ನು ಉಳಿಸಿಕೊಳ್ಳಲಾಗದ ಇಕ್ಕಟ್ಟುಗಳನ್ನು ನಾಗರಾಜಪ್ಪನವರು ಕನ್ನಡ ಸಾಹಿತ್ಯ ಹಾಗೂ ಕರ್ನಾಟಕದ ಧರ್ಮಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಈ ದೇಶದ 'ಮಹತ್ ಪರಂಪರೆ'ಯನ್ನು ಎದುರಿಸಿದ ಕರ್ನಾಟಕದ ಪ್ರಮುಖ ಧರ್ಮಗಳು ಮತ್ತೆ ಬ್ರಾಹ್ಮಣೀಕರಣಕ್ಕೆ ಒಳಗಾಗುವುದರ ಮೂಲಕ ತಮ್ಮ ಸತ್ವವನ್ನು ಕಳೆದುಕೊಂಡವು (ಪು. ೭೭) ಮತ್ತು ಅವು ಕೆಳವರ್ಗದ ಸಂಸ್ಕೃತಿಯಲ್ಲಿ ಕಸಿಗೊಳ್ಳದೆ, ಕೇವಲ ಕೆಳವರ್ಗದ ಭಾಷೆಯಲ್ಲಿ ಕಸಿಗೊಂಡ ಕಾರಣದಿಂದ, ಅವುಗಳ ಪರಿಣಾಮವಾದ ಸಾಹಿತ್ಯ ನಿರ್ಮಿತಿಯು ತನ್ನ ನೆಲದ ಸಾರ ಸರ್ವಸ್ವವನ್ನು ಹೀರಿ ಪುಷ್ಟಿಯಾಗಿ ಬೆಳೆದು ಸಮಗ್ರ ಜನತೆಯ ನಾಲಗೆಯಾಗಲಿಲ್ಲ (ಮುನ್ನುಡಿ XVII)-ಎಂದು ಕನ್ನಡ ಸಾಹಿತ್ಯದ ಇತಿಮಿತಿಗಳನ್ನು ಹಾಗೂ ಅದಕ್ಕೆ ಕಾರಣಗಳನ್ನೂ ಮಂಡಿಸುತ್ತಾರೆ. ಈ ಅಭಿಪ್ರಾಯಗಳು ಖಂಡಿತವಾಗಿಯೂ ನಿಜವಾದ ಸಾಹಿತ್ಯಾಸಕ್ತರನ್ನು ಪುನರಾಲೋಚನೆಗೆ ಪ್ರಚೋದಿಸುವಂಥವು ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. ನಾನು ಇಲ್ಲಿ ಅವರ ಮೊದಲ ಕೃತಿಯಾದ 'ಮರುಚಿಂತನೆ'ಯನ್ನು ಕುರಿತು, ಮತ್ತು ಇತ್ತೀಚೆಗೆ ಅವರು ಬರೆದು ಅಲ್ಲಲ್ಲಿ ಬಿಡಿ ಬಿಡಿಯಾಗಿ ಪ್ರಕಟವಾಗಿರುವ ಬರಹಗಳನ್ನು ಕುರಿತು ವಿಮರ್ಶೆಗೆ ತೊಡಗಲು ಹೊರಟಿಲ್ಲ. ಆದರೆ ಅವರ ಬರಹದ ಹಿಂದಿರುವ ಮುಖ್ಯವಾದ ತುಡಿತಗಳೇನೆಂಬುದರ ಕಡೆ ಮಾತ್ರ ಓದುಗರ ಗಮನವನ್ನು ಸೆಳೆಯಲು ಪ್ರಯತ್ನಿಸಿದ್ದೇನೆ. ಅದೆಂದರೆ, ನಾಗರಾಜಪ್ಪನವರ ಮನಸ್ಸು ಕೆಳವರ್ಗದ ಪರವಾದ ಅಪಾರ ತಿಳಿವಿನಿಂದಲೂ ಸಹಾನುಭೂತಿಯಿಂದಲೂ ಸ್ಪಂದಿಸುತ್ತದೆ ಎನ್ನುವುದು. ಅದೇ ಅವರ ಮುಖ್ಯ ಕಾಳಜಿಯಾಗಿರುವುದರಿಂದ, ದಲಿತ-ಬಂಡಾಯ ಸಾಹಿತ್ಯದ ಬರಹಗಾರರು, ನಾಗರಾಜಪ್ಪನವರು ತಮ್ಮೊಳಗಿನ ತಳಮಳಗಳಿಗೆ ತಕ್ಕ ಧ್ವನಿಯಾಗಬಲ್ಲರೆಂದು ತಿಳಿಯುತ್ತಾರೆ. ಹಾಗೆಂದರೆ ನಾಗರಾಜಪ್ಪನವರು ದಲಿತ ಬಂಡಾಯ ಸಾಹಿತ್ಯದ ವಕ್ತಾರರೆಂದೇನೂ ಅಲ್ಲ. ಹಾಗೆ ನೋಡಿದರೆ ಅವರು ಈ ಯಾವ ಬಗೆಯ ಸಾಹಿತ್ಯ ಪಂಥಗಳೊಂದಿಗೂ ಸಂಬಂಧಿಸಿಕೊಳ್ಳುವುದನ್ನು ಅಪೇಕ್ಷಿಸುವರಲ್ಲ. ಅವರು ಈ ಎಲ್ಲದರಿಂದಾಚೆ ನಿಂತು

ತಮಗೆ ಸತ್ಯವೆಂದು ಕಂಡದ್ದನ್ನು ನಿರ್ಭಯವಾಗಿ ಹೇಳಬಲ್ಲರು. ಸುತ್ತ ಹತ್ತು ಜನಕ್ಕೆ, ಪ್ರೀತಿಯಿಂದ ನೆರವಾಗಬಲ್ಲರು. ಹೀಗಾಗಿ ನಾಗರಾಜಪ್ಪನವರ ಅಭಿಮಾನಿಗಳ ಹಾಗೂ ಗೆಳೆಯರ ಬಳಗ ದೊಡ್ಡದು.

ಗ್ರಾಮೀಣ ಪರಿಸರದಿಂದ ಬಂದ ನಾಗರಾಜಪ್ಪನವರು ಈ ಗ್ರಾಮಾಂತರ ಪರಿಸರದ ಬರಹಗಾರರು ಶಿಷ್ಟವರ್ಗದ ಸಮೂಹ ಮಾಧ್ಯಮಗಳಿಂದ ಹಾಗೂ ವಿಮರ್ಶೆಯ ಗುತ್ತಿಗೆದಾರರಿಂದ, ನಿರ್ಲಕ್ಷ್ಯ ಮತ್ತು ತಿರಸ್ಕಾರಕ್ಕೆ ಗುರಿಯಾಗಿರುವ ಪರಿಗೆ ಅತ್ಯಂತ ದುಃಖದಿಂದ ಮತ್ತು ಸಿಟ್ಟಿನಿಂದ ಪ್ರತಿಕ್ರಿಯಿಸುತ್ತಾ, ಈ ಬರಹಗಾರರಿಗೊಂದು ವೇದಿಕೆಯನ್ನು ಕಲ್ಪಿಸಬೇಕೆಂದು ಹಂಬಲಿಸುತ್ತಾರೆ. ನಾಗರಾಜಪ್ಪನವರು ನಮ್ಮೆಲ್ಲರಿಗೂ ಪ್ರಿಯವಾಗುವುದು, ಈ ಬಗೆಯ ಮಾನವೀಯ ಅಂತಃಕರಣದಿಂದ ಹಾಗೂ ಅವ್ಯಾಜವಾದ ಪ್ರೀತಿಯಿಂದ. ♦

"ದೇಸೀಯ ಸಂಸ್ಕೃತಿಗೆ ಹಿಂತಿರುಗುವುದಕ್ಕೆ ಕಂಕಣ ಬದ್ಧವಾದ ಬಂಡಾಯ ಮತ್ತು ದಲಿತ ಸಾಹಿತ್ಯ ಮತ್ತೆ ಸಾಹಿತ್ಯದಲ್ಲಿ ಕಲಾತ್ಮಕ ತತ್ವಗಳ ಮೌಲ್ಯವನ್ನು ಒಪ್ಪಿಕೊಳ್ಳುವ ಮಾತುಗಳು ಕೇಳುತ್ತಿವೆ. ಅವು ಯಾವ ಕಾವ್ಯತತ್ವಗಳು ಎಂಬ ಪ್ರಶ್ನೆ ಎದುರಾಗುತ್ತದೆ. ಈಗಿರುವ ಕಾವ್ಯ ತತ್ವಗಳನ್ನೇ ಒಪ್ಪಿದರೆ ಸಾಮಾಜಿಕ ಸಂವೇದನಗಳಿಗೆ ಅವಕಾಶವಿಲ್ಲದಂತಾಗುತ್ತದೆ. ಭಾರತೀಯ ತತ್ವಶಾಸ್ತ್ರ ಮತ್ತು ಭಾರತೀಯ ಕಾವ್ಯ ಮೀಮಾಂಸೆಗೆ ಆಧ್ಯಾತ್ಮಿಕ ಸಮಸ್ಯೆಗಳು ಮುಖ್ಯವೇ ಹೊರತು ಸಾಮಾಜಿಕ ಸಮಸ್ಯೆಗಳಲ್ಲ. ಒಂದು ಪಕ್ಷ ಮಾರ್ಕ್ಸ್‌ವಾದವೂ ಪರಿಹಾರವಲ್ಲ. ಏಕೆಂದರೆ ಸಮಕಾಲೀನ ಕನ್ನಡ ವಿಮರ್ಶೆಯ ನವ್ಯ ವಿಮರ್ಶೆಯಲ್ಲಿ ನವ್ಯೋತ್ತರ ವಿಮರ್ಶೆಯ ಪರಿಕಲ್ಪನೆಗಳು ಕಲಬೆರಕೆಯಾಗಿ ಗೊಂದಲ ಸೃಷ್ಟಿಯಾಗಿದೆ. ಇಂಥ ಬಿಕ್ಕಟ್ಟಿನಲ್ಲಿ ಕನ್ನಡ ತತ್ವ ಪದ ಸಂಪ್ರದಾಯ ಒಂದಿಷ್ಟು ಮಾರ್ಗದರ್ಶಿಯಾಗಬಹುದು. ಇದುವರೆವಿಗೂ ಅಸಡ್ಡೆಗೆ ಒಳಗಾಗಿರುವ ದೇಸೀಯ ಲಿಖಿತ ಮತ್ತು ಅಲಿಖಿತ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಅಧ್ಯಯನ ಕನ್ನಡ ಕಾವ್ಯ ತತ್ತ್ವಗಳ ಸ್ವರೂಪ ನಿರ್ಣಯಕ್ಕೆ ಹೆಚ್ಚು ಸಹಕಾರಿಯಾಗುತ್ತದೆ."

–ಪ್ರೊ॥ ಕೆ.ಜಿ.ನಾಗರಾಜಪ್ಪ

2. ಪ್ರೊ॥ ಕೆ.ಜಿ.ಎನ್

ಪ್ರೊ॥ ಎಂ. ನಜೀರ್ ಅಹಮದ್

ಸುಮಾರು ಇಪ್ಪತ್ತೈದು ವರ್ಷಗಳ ಹಿಂದಿನ ಮಾತು: ನಾಗರಾಜಪ್ಪನವರು ಸಿದ್ಧಗಂಗಾಮಠದ ಪದವಿಪೂರ್ವ ಕಾಲೇಜು ಬಿಟ್ಟು ಕನ್ನಡ ಉಪನ್ಯಾಸಕರಾಗಿ ಸಿದ್ಧಗಂಗಾ ಮೊದಲ ದರ್ಜೆಯ ಕಾಲೇಜನ್ನು ಸೇರಿದ್ದರು: ನಾನೂ ಅದೇ ವರ್ಷ ಇಂಗ್ಲಿಷ್ ಉಪನ್ಯಾಸಕನಾಗಿ ಅಲ್ಲಿ ನಿಯಮಿತನಾದೆ. ನಮ್ಮನ್ನು ಹತ್ತಿರ ತಂದದ್ದು ಒಂದು ಕರ್ಷಣ-ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯ ಮತ್ತು ವಿಮರ್ಶೆಗಳ ಮೇಲಣ ಒಲವು; ಸಾಹಿತ್ಯ ಮತ್ತು ಸಾಹಿತ್ಯೇತರ ವಿಷಯಗಳ ಚರ್ಚೆ, ಪ್ರತಿಪಾದನೆಗಳಲ್ಲಿದ್ದ ಮುಕ್ತತೆ, ಕಳಕಳಿ ಮತ್ತು ತಮ್ಮ ನಿಲುವುಗಳನ್ನು ಇತರರ ನಿಲುವುಗಳೊಂದಿಗೆ ಹೋಲಿಸಿ ಕಲಿಯಬಹುದಾದ ಅಂಶಗಳನ್ನು ಕಲಿಯುವ ಪ್ರಾಮಾಣಿಕತೆ. ತಾರುಣ್ಯದ ಉತ್ಸಾಹದ ಕಾಲವಾದರೂ ತನ್ನ ವೃತ್ತಿಯಲ್ಲಿ ಆದಷ್ಟು ಸಾಫಲ್ಯವನ್ನು ಪಡೆಯುವ ಗುರಿಯ ಗಾಂಭೀರ್ಯ ಅವಕ್ಕೆ ತಕ್ಕ ಕಡಿವಾಣ ಹಾಕುತ್ತಿದ್ದಿತು. ಸೂಕ್ಷ್ಮಪ್ರವೃತ್ತಿಯವರಾದುದರಿಂದ ಅಂದಿನ ಅಸಾಧು ಅಥವಾ ಪೂರ್ವಗ್ರಹಪೀಡಿತ ವಿಮರ್ಶೆಯಿಂದ ಮನಸ್ಸಿಗೆ ಉಂಟಾಗುತ್ತಿದ್ದ ನೋವಿನ ಪ್ರಯುಕ್ತ ಮಾತಿನಲ್ಲಿ ಕಾಣಿಸುತ್ತಿದ್ದ ಮೊನಚು, ವಿಷಾದದ ಅಥವಾ ಸಿನಿಕತನದ ಛಾಯೆಯಿರುವ ಮಾತಿನ ಪ್ರತಿಕ್ರಿಯೆ, ಇವುಗಳಿಂದ ನಮ್ಮ ಕೆಲವು ಸಹೋದ್ಯೋಗಿಗಳು ನಾಗರಾಜಪ್ಪನವರಲ್ಲಿ ಸೌಜನ್ಯದ ಕೊರತೆಯಿದೆಯೆಂದು ಹೇಳಿಕೊಳ್ಳುವಂತಾಗುತ್ತಿದ್ದಿತು. ಅಕಡೆಮಿಕ್ ವೃತ್ತದಲ್ಲಿ ಕೆಲವೊಮ್ಮೆ ಪ್ರತಿಕೂಲ ವೃತ್ತಗಳನ್ನು ಸೃಷ್ಟಿಸಿ ತಮ್ಮ ಖಾಯಂ ವೃತ್ತಿಯೇ ಆತ್ಮವಿಮರ್ಶೆಯಿಂದ ತಮ್ಮನ್ನು ಕಾಪಾಡುವ ರಕ್ಷಾಕವಚವೆಂದು ಭಾವಿಸಿದ್ದ ಕೆಲವು ಸಹ ಅಧ್ಯಾಪಕರಿಗೆ ನಾಗರಾಜಪ್ಪನವರ ಮಾತಿನ ಮೊನಚು ಒಬ್ಬ ನಿರಾಶಾವಾದಿಯ ಅರಣ್ಯ ರೋಧನವೆನಿಸುತ್ತಿದ್ದಿತು: ಇಂತಹ ಪರಿಸರದಲ್ಲಿ ಸ್ವಾಭಿಮಾನವನ್ನು ಉಳಿಸಿಕೊಂಡು ಸೃಜನಶೀಲ ಸಾಹಿತ್ಯ ರಚನೆಗೆ ತೊಡಗುವುದು ದುಸ್ಸಾಧ್ಯವೆನಿಸುತ್ತಿತ್ತು: ಭವಿಷ್ಯ ಕುರಿತ ಅನಿಶ್ಚಿತತೆ ಈ ಪರಿಸರದ ಒತ್ತಡಗಳಲ್ಲೊಂದು.

ಇದನ್ನು ಎದುರಿಸಿಕೊಂಡೇ ತನ್ನ ಸೃಜನಶೀಲತೆಯನ್ನು ಬೆಳಸಿಕೊಳ್ಳುವ ಸಂಕಲ್ಪ, ಸ್ಥೈರ್ಯ ನಾಗರಾಜಪ್ಪನವರದು: ವರ್ಷಗಳು ಕಳೆದಂತೆ ತಮ್ಮ ವಿಮರ್ಶಾ ಪ್ರಜ್ಞೆಯನ್ನು ಕೆದಕಿದ ಕನ್ನಡ ಸಾಹಿತ್ಯದ ವ್ಯಾಸಂಗ ಮತ್ತು ಅದಕ್ಕೆ ಬೇಕಾದ ಇಂಗ್ಲಿಷ್ ಗ್ರಂಥಗಳ ವ್ಯಾಸಂಗ, ಇವುಗಳನ್ನು ನಾಗರಾಜಪ್ಪನವರು ಸತತವಾಗಿ ಮಾಡತೊಡಗಿದರು. ಅವರ ಅಭಿರುಚಿಯ ಕ್ಷೇತ್ರವೂ ವಿಶಾಲವಾಗಲು ಆರಂಭವಾಯಿತು: ಇದು ಅವರ ಗಂಭೀರ ಬರಹಗಳ ಪೂರ್ವಸಿದ್ಧತೆಯ ಕಾಲ. ಇದೇ ಕಾಲದಲ್ಲಿ ಅವರು ಒಂದು ಸಣ್ಣ ಚಾರಿತ್ರಿಕ ಕಾದಂಬರಿಯನ್ನು ಬರೆದರು: ಇದೇ ದೊಡ್ಡ ಸಂಕಣ್ಣನಾಯಕ. ಇದಕ್ಕೆ ರಾಜ್ಯ ಪ್ರಶಸ್ತಿ ದೊರಕಿತು. ಇದೇ ಕಾಲದಲ್ಲಿ ಇವರ ಹಾಸ್ಯ-ವ್ಯಂಗ್ಯ ಮಿಶ್ರಿತ ಕವನಗಳು ಬೆಳಕನ್ನು

ಕಂಡವು. ಜೀವನದ ಸಿಹಿ ಕಹಿಗಳನ್ನು ಅನುಭವಿಸಿದ್ದ ಈ ಸೂಕ್ಷ್ಮ ಜೀವಿಗೆ ಇವು ಸ್ವಲ್ಪ ನೆಮ್ಮದಿ ಕೊಟ್ಟಿರಬೇಕು, ಸಾಮಾಜಿಕ ಅಂಕು ಡೊಂಕುಗಳನ್ನು ವಿಡಂಬನೆಗೆ ಒಳಪಡಿಸಿದ ನೆಮ್ಮದಿ.

ವೀರಕುಮಾರ ಸಂಗ್ರಾಮ ಕವಿತಾ ಸಂಗ್ರಹವನ್ನು ಅವರು ಸಂಪಾದಿಸಿದರೂ ಸಾಹಿತ್ಯ ಸಮಾಜಗಳ ಕೆಲವು ಅಂಶಗಳ ಕುರಿತು ಅವರ ವಿಚಾರಗಳು ಪಕ್ವವಾಗುತ್ತಿದ್ದ ಕಾಲ ಇದಾಗಿದ್ದು ಈ ಗ್ರಂಥ ಒಂದು ಸಾಮಯಿಕ ಕೃತಿಯೇ ಆಯಿತು. ಅವರ ಮಧ್ಯಕಾಲೀನ ಕನ್ನಡ ಕವಿತೆಯ ಸಂಪಾದನೆ ಈ ಕಾಲದ ಕವಿಗಳ ಗಂಭೀರ ವ್ಯಾಸಂಗದ ಫಲ. 1985 ರಲ್ಲಿ ಬೆಳಕು ಕಂಡ ಅವರ ಮರುಚಿಂತನೆ ಸಂವೇದನಾಶೀಲ ವಿಮರ್ಶಕನೊಬ್ಬ ತನ್ನ ಹೊಸ ಅಭಿಪ್ರಾಯಗಳನ್ನು ಕನ್ನಡಿಗರ ಮುಂದಿಟ್ಟ ನಿಜವಾದ ವಿಮರ್ಶೆಯ ಗುರಿಯಾದ ಸತ್ಯಾನ್ವೇಷಣೆಯ ಒಂದು ಮಾದರಿಯಾಯಿತು: ಈ ಸತ್ವಯುತ ಗ್ರಂಥ ಈಗ ಪುನರ್ ಮುದ್ರಿತವಾಗುತ್ತಿದೆ. ಇದೇ ಜಾಡಿನಲ್ಲಿದೆ ಸಾಹಿತ್ಯ ಮತ್ತು ಅದರ ಸಾಮಾಜಿಕ ಉಗಮ ಕುರಿತಾಗಿರುವ ಭಕ್ತಿ ಸಾಹಿತ್ಯ ಮತ್ತು ಪ್ರತಿಭಟನೆ.

ಇದೀಗ ನಾಗರಾಜಪ್ಪನವರು ಸಾಹಿತ್ಯ ವಿಮರ್ಶೆಯ ಜೊತೆಗೆ ಸಮಕಾಲೀನ ಸಮಾಜದ ಹಲವು ಮುಖಗಳ ವಿಮರ್ಶೆಯ ಕಡೆಗೂ ತಮ್ಮ ಗಂಭೀರ ಗಮನ ಹರಿಸಿದ್ದಾರೆ. ಬೌದ್ಧಿಕ ಪ್ರಾಮಾಣಿಕತೆ, ಧೈರ್ಯ ಮತ್ತು ಆಳವಾದ ವ್ಯಾಸಂಗಗಳಿಂದಲ್ಲದೆ ಮಾನ್ಯತೆ ಪಡೆಯಲು ಸಾಧ್ಯವಲ್ಲದ ಈ ವಿಧದ ವಿಮರ್ಶೆಯಲ್ಲಿ ಇವರು ಮೇಲುಗೈ ಸಾಧಿಸಿದ್ದಾರೆ. ನಮ್ಮ ನಡುವೆ ಇರುವ ಕೆಲವು ಬುದ್ಧಿಜೀವಿಗಳ ಸಮಯ ಸಾಧಕ ಪೊಳ್ಳು ವೈಚಾರಿಕತೆ, ಇಬ್ಬಗೆಯ ಬೌದ್ಧಿಕ ವಹಿವಾಟುಗಳನ್ನು ಅವರು ನಮ್ಮ ಮುಂದೆ ಇಟ್ಟಿದ್ದಾರೆ. ನಮ್ಮ ಸಮಾಜದ ಜ್ವಲಂತ ಸಮಸ್ಯೆಗಳಲ್ಲೊಂದಾದ ದಲಿತರ ಸಂಕೀರ್ಣ ತಾತ್ವಿಕ ಮತ್ತು ವಾಸ್ತವಿಕ ಸಮಸ್ಯೆಗಳನ್ನು ಡಾ।। ಅಂಬೇಡ್ಕರರ ಕೊಡುಗೆಯ ಸ್ವರೂಪವನ್ನು ಚರ್ಚಿಸುವ ಸಂದರ್ಭದಲ್ಲಿ ಮಾರ್ಮಿಕವಾಗಿ ವಿಮರ್ಶಿಸಿದ್ದಾರೆ.

ತಮ್ಮ ವೈಚಾರಿಕ ಪ್ರಾಮಾಣಿಕತೆಯನ್ನು ಉಳಿಸಿಕೊಂಡು ಬೆಳಸಿಕೊಂಡಿರುವ ನಾಗರಾಜಪ್ಪನವರು ತಮ್ಮ ಮಿತ್ರರ ಪ್ರೀತಿ ವಿಶ್ವಾಸಗಳನ್ನೂ ಉಳಿಸಿಕೊಂಡು ಬೆಳಸಿಕೊಂಡಿದ್ದಾರೆ. ಜೀವನದಿಂದ ಹೆಚ್ಚೇನನ್ನೂ ನಿರೀಕ್ಷಿಸದಿರುವುದು, ಆಮಿಷಗಳನ್ನು ಗುರುತಿಸಿ ಅವುಗಳಿಂದ ದೂರವಿರುವುದು, ಜೀವನ ಅವರಿಗೆ ಕಲಿಸಿರುವ ಒಂದು ಮುಖ್ಯವಾದ ಪಾಠ.

ಅವರ ಚೇತನ ಬರಹದಲ್ಲಿ, ಸಹೃದಯಿ ಭ್ರಾತೃಗಳ ಸುಖ ದುಃಖಗಳಲ್ಲಿ ಭಾಗಿಯಾಗಿ ಒಂದು ಸಮತೋಲವನ್ನು ಕಾಯ್ದುಕೊಂಡಿರುವ ಅನುಭವ ನಮಗೆ ಆಗುತ್ತದೆ.

ಯಮೇ ವೈಷ ವೃಣುತೇ ತೇನ ಲಭ್ಯಃ
ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ।।

(ಮಹತ್ವಾಕಾಂಕ್ಷೆಯಿಂದ ಏನನ್ನಾದರೂ ಅರಸಿದರೆ ಅದು ವ್ಯಕ್ತವಾಗುವುದು) ♦

3. ಪ್ರಯೋಗ ಶೀಲ-ಕೆ.ಜಿ.ಎನ್

ಡಾ|| ಕೆ.ಜಿ. ಈಶ್ವರಯ್ಯ

ಪ್ರೊ|| ಕೆ.ಜಿ. ನಾಗರಾಜಪ್ಪನವರ ಜೀವನ ಚರಿತ್ರೆಯನ್ನು ಸಮಗ್ರವಾಗಿ ಬರೆಯುವ ಸಾಮರ್ಥ್ಯ ಮತ್ತು ಅನುಭವ ನನಗಿಲ್ಲ. ಅವರ ಬಾಲ್ಯ, ವಿದ್ಯಾರ್ಥಿಜೀವನ ಮತ್ತು ವೃತ್ತಿ ಜೀವನದ ರೂಪರೇಖೆಗಳಲ್ಲಿ ಕೆಲವು ಅಂಶಗಳನ್ನು ಪರಿಚಯ ಮಾಡಿಕೊಡುವುದು ಈ ಲೇಖನದ ಉದ್ದೇಶ.

ಕೆ.ಜಿ. ನಾಗರಾಜಪ್ಪ (ಕೆ.ಜಿ.ಎನ್.) ಮತ್ತು ನಾನು ಒಂದೇ ಊರಿನಲ್ಲಿ ಹುಟ್ಟಿದವರು, ಒಂದೇ ಬೀದಿಯ ಎದುರು ಬದುರು ಮನೆಗಳಲ್ಲಿ ವಾಸಿಸಿದವರು, ಒಂದೇ ಪರಿಸರದಲ್ಲಿ ಬೆಳೆದು ಬಂದವರು. ನಮ್ಮ ಊರು ಕಲ್ಲೂರು. ಅದು ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿಗೆ ಸೇರಿದ್ದು, ದೇವಾಂಗ ಜನಾಂಗದವರೇ ಹೆಚ್ಚಾಗಿರುವ, ಸುಮಾರು 500 ಮನೆಗಳುಳ್ಳ ಒಂದು ಗ್ರಾಮ. ಅದರ ಜನಸಂಖ್ಯೆ ಸುಮಾರು ಮೂರು ಸಾವಿರ. ಮುಖ್ಯ ಕಸುಬು ನೇಕಾರಿಕೆ. ಪ್ರತಿಯೊಂದು ಮನೆಯಲ್ಲೂ ಕೈಮಗ್ಗಗಳ ನೇಯುವ ಶಬ್ದ. ಸಾವಿರಾರು ಮಗ್ಗಗಳಿದ್ದು ನೂಲು ಮತ್ತು ರೇಷ್ಮೆ ಸೀರೆಗಳನ್ನು ತಯಾರಿಸುವ ಒಂದು ವಾಣಿಜ್ಯ ಕೇಂದ್ರವಾಗಿದೆ ನಮ್ಮ ಕಲ್ಲೂರು. ತಯಾರಾದ ಮಾಲಿನ ಬಹುಭಾಗದ ಬಿಕರಿ ಬೆಂಗಳೂರು ಮಾರುಕಟ್ಟೆಯಲ್ಲಿ ನಡೆಯುತ್ತದೆ.

ಕಲ್ಲೂರಿನ ಸುತ್ತಮುತ್ತ ಪ್ರಕೃತಿ ಸೌಂದರ್ಯಕ್ಕೇನು ಕಡಿಮೆ ಇಲ್ಲ. ಊರನ್ನು ಸುತ್ತುವರೆದ ಹಳೆಯ ಕಾಲದ ಕೋಟೆ, ಕೋಟೆಯ ಹೊರಗೆ ವಿಶಾಲ ಕೆರೆ, ಕೋಡಿಹಳ್ಳ ಮತ್ತು ಚಿಕ್ಕ ಚಿಕ್ಕ ವಡವುಗಳು, ಕೆರೆಯ ಹಿಂಭಾಗದ ಹಸಿರು ಗದ್ದೆ ಬಯಲು, ಪುಟ್ಟ ತೋಟಗಳು, ಕೆರೆಯ ಏರಿ, ಬಯಲು ಪ್ರದೇಶದ ಹೊಲಗಳು, ಇವನ್ನೆಲ್ಲಾ ಬಳಸಿ ಹರಿಯುವ ಶಿಂಷಾನದಿ, ಮರಳು ಮೈದಾನ, ದೂರದಲ್ಲಿ ಕಾಣುವ ಬಾರೆ, ಬೆಟ್ಟ ಗುಡ್ಡಗಳು ಸೊಗಸಿನ ಅಂಕಣಗಳಾಗಿವೆ. ಊರಿನ ಒಳಗೆ ಪ್ರಾಚೀನ ಕಾಲದ ವಾಸುದೇವರ ದೇವಾಲಯ, ಗುಡಿ ಗದ್ದಿಗೆಗಳು, ಮಠ ಮಂದಿರಗಳು ಊರಿನ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಗಳಾಗಿವೆ. ಹಬ್ಬ ಹರಿದಿನಗಳಲ್ಲಿ ದೇವರ ಉತ್ಸವಗಳಲ್ಲಿ ಭಾಗಿಗಳಾದ ಜನ ಭಕ್ತಿಯಿಂದ ಭಜನೆ ಮಾಡುವುದು, ಪಾನಕ ಫಲಾಹಾರಗಳನ್ನು ಹಂಚುವ ಕೆಲಸವನ್ನು ತುಂಬ ಉತ್ಸಾಹದಿಂದ ಮಾಡುತ್ತಾರೆ.

ವರ್ಷಕ್ಕೊಮ್ಮೆ ದೇವರ ದಾಸಿಮಯ್ಯನವರ ಜಯಂತೋತ್ಸವ ಮಾರ್ಚ್-ಏಪ್ರಿಲ್ ತಿಂಗಳಲ್ಲಿ ನಡೆಯುತ್ತದೆ. ದೇವಾಂಗ ಜನಾಂಗಕ್ಕೆ ಅದು ದೊಡ್ಡ ಹಬ್ಬ. ಆ ದಿನ ಕಲ್ಲೂರ ಬೀದಿಗಳಲ್ಲಿ ಹೊಸ ಕಳೆ ತುಂಬಿ ಬರುತ್ತದೆ. ಬೀದಿಗಳನ್ನು ಗುಡಿಸಿ ಸಾರಿಸಿ ರಂಗೋಲೆ ಹಾಕಿ ತಳಿರು ತೋರಣಗಳಿಂದ ಅಲಂಕರಿಸುತ್ತಾರೆ. ಮನೆಯ ಬಾಗಿಲ ಹತ್ತಿರ ನಿಂತು ಬರುವ ಉತ್ಸವವನ್ನು ವೀಕ್ಷಿಸಲು ಜನರು ಕಾತುರರಾಗಿರುತ್ತಾರೆ. ಅಂದು ಪಕ್ಕದ ಗ್ರಾಮ ಗೊರಘಟ್ಟದಿಂದ ಚೌಡೇಶ್ವರಿ ಅಮ್ಮನನ್ನು ಕಲ್ಲೂರಿಗೆ ಹೊರಡಿಸಿಕೊಂಡು ಬಂದು ಮುಖ್ಯ

ಬೀದಿಗಳಲ್ಲಿ ಉತ್ಸವದ ಮೆರವಣಿಗೆ ಮಾಡುವುದು ವಾಡಿಕೆ. ದೇವರ ದಾಸಿಮಯ್ಯನವರ ಭಾವಚಿತ್ರವನ್ನು ಹೂವು ಗಂಧಗಳಿಂದ ಅಲಂಕರಿಸಿ ಎತ್ತಿಹಿಡಿದು ಮುಂದೆ ಸಾಗುವ ದೊಡ್ಡ ದೀಪದ ಕಂಬವನ್ನು ಹಿಂಬಾಲಿಸಿ ಭಜನೆ ತಂಡ ಹೊರಡುತ್ತದೆ. ಕರಡೇವುಗಳ ಬಡಿತ, ಓಲಗ ವಾದ್ಯಗಳ ಸಂಭ್ರಮದೊಡನೆ ಚೌಡೇಶ್ವರಿ ಅಮ್ಮನ ಅಲಂಕೃತ ಮೂರ್ತಿಯ ಉತ್ಸವವೂ ನಿಧಾನವಾಗಿ ಚಲಿಸುತ್ತದೆ.

ಭಕ್ತಿ ಪರವಶರಾದ ಆರಾಧಕರು ದೇಪಿಯ ಮುಂದೆ ಆವೇಶಭರಿತ ಕುಣಿತ, ಭಜನೆ ಮತ್ತು ಕತ್ತಿಸೇವೆಗಳಲ್ಲಿ ತೊಡಗುತ್ತಾರೆ. ಇದರಲ್ಲಿ ನಾಗರಾಜಪ್ಪನವರೂ ಭಾಗವಹಿಸುತ್ತಿದ್ದುದನ್ನು ಕಾತುರದಿಂದ ನಾನು ನೋಡುತ್ತಿದ್ದೆ. ಅಂದು ಇವರ ನಡೆ ನುಡಿಗಳಲ್ಲಿ ಭಕ್ತಿ ಶ್ರದ್ಧೆ ಎದ್ದುಕಾಣುತ್ತಿತ್ತು. ಅಮ್ಮನ ಆರಾಧನೆಯಲ್ಲಿ ಖಡ್ಗಸೇವೆ ಸಲ್ಲಿಸುವುದರಲ್ಲಿ ಇವರಿಗೆ ಅತಿಯಾದ ಆಸಕ್ತಿ. ಉದ್ದವಾದ ಜೋಡಿ ಖಡ್ಗಗಳನ್ನು ಎರಡೂ ಕೈಗಳಿಂದಲೂ ಎತ್ತಿಹಿಡಿದು ಆವೇಶಭರಿತರಾಗಿ ದೇಪಿಯ ಮುಂದೆ ಕುಣಿದು ಕುಪ್ಪಳಿಸಿ ಸುಮಾರು 8-10 ಮೀಟರ್ ಉದ್ದದ ರಸ್ತೆಯಲ್ಲಿ ಗುಂಪಿನ ಮಧ್ಯೆ ವೇಗವಾಗಿ ನೆಗೆಯುತ್ತಾ ಓಡಾಡಿ, ನಿಂತು ನೆಗೆದು ಬೆನ್ನು ಮತ್ತು ಎದೆಗೆ ಹೊಡೆದುಕೊಳ್ಳುತ್ತಿದ್ದ ಭಯಾನಕ ದೃಶ್ಯ ಈಗಲೂ ನನ್ನ ಕಣ್ಣು ಮುಂದೆ ಕಟ್ಟಿದಂತಿದೆ. ನಾಗರಾಜಪ್ಪನವರ ಬಾಲ್ಯಜೀವನದಲ್ಲಿ ಆವೇಶಭರಿತ ಶ್ರದ್ಧಾಭಕ್ತಿಯ ಅಂಕುರಗಳನ್ನು ಇಂತಹ ಸನ್ನಿವೇಶಗಳಲ್ಲಿ ಗುರುತಿಸಬಹುದು. ಮುಂದಿನ ಬದುಕಿನಲ್ಲಿ ಈ ಮೊಳಕೆಗಳು ಬಲಿತು ಅವರ ಕೃತಿಗಳಲ್ಲಿ ಕಾಣಿಸಿಕೊಳ್ಳುವುದನ್ನು ಗಮನಿಸಬಹುದು.

ಕಲ್ಲೂರು ಕಲೆಗೆ ಆಶ್ರಯಸ್ಥಾನ. ಅಲ್ಲಿನ ಕೆಲವರು ಸಂಗೀತ ಪ್ರಿಯರು ಮತ್ತೆ ಕೆಲವರು ಬಯಲಾಟ ಮತ್ತು ನಾಟಕಗಳಲ್ಲಿ ಪಾತ್ರ ಮಾಡುವ ಚಟ ಹಿಡಿದವರು. ವರ್ಷದಲ್ಲಿ ಒಂದೆರಡು ಸಾರಿ ಬಯಲಾಟ ಅಥವಾ ನಾಟಕ ಕಲಿತು ಆಡುವುದು ರೂಢಿಯಲ್ಲಿತ್ತು. ಶಿವರಾತ್ರಿ ಜಾಗರಣೆ ದಿನ ನಾಟಕ ಪ್ರದರ್ಶನ ಇದ್ದೇ ಇರುತ್ತದೆ. ನಾನು, ನಾಗರಾಜಪ್ಪ ಮತ್ತು ನಮ್ಮ ಸ್ನೇಹಿತರ ಸಮೂಹ ನಾಟಕ ಶುರುವಾಗುವುದಕ್ಕೆ ಮೂರು ತಾಸು ಮೊದಲು ಮುಂದಿನ ಸಾಲುಗಳಲ್ಲಿ ನಮ್ಮ ಜಾಗಗಳನ್ನು ಕಾದಿರಿಸಿಕೊಂಡು ನಾಟಕ ನೋಡುವ ಹವ್ಯಾಸ ಬೆಳೆಸಿಕೊಂಡಿದ್ದೆವು. ನಾಟಕಗಳಲ್ಲಿ ನಾಗರಾಜಪ್ಪನವರೂ ಆಗಾಗ ಪಾತ್ರ ವಹಿಸುತ್ತಿದ್ದುದು ನನ್ನ ನೆನಪಿನಲ್ಲಿದೆ.

ಇಂತಹ ಪರಿಸರದಲ್ಲಿ ಕೆ.ಜಿ.ಎನ್.ರ ಚಿಕ್ಕಂದಿನ ಜೀವನ ಸಾಗುತ್ತಿತ್ತು. ಇವರ ತಂದೆ ಮೇಸ್ತ್ರಿ ಗಂಗಣ್ಣನವರು, ತಾಯಿ ಲಕ್ಕಮ್ಮನವರು-ಜನಾಂಗದ ಕಾರ್ಯ ಚಟುವಟಿಕೆಗಳ ಮೇಲ್ವಿಚಾರಕರ (ಮೇಸ್ತ್ರಿ) ವಂಶಕ್ಕೆ ಸೇರಿದ ಕುಟುಂಬ. ಇವರ ಅಜ್ಜಿ ಮಾಳಮ್ಮನವರು ಇವರೊಡನೆಯೇ ಇದ್ದರು. ತಾಯಿ ಮತ್ತು ಅಜ್ಜಿಯ ಆಶ್ರಯದಲ್ಲಿ ಕೆ.ಜಿ.ಎನ್. ತಮ್ಮ ಬಾಲ್ಯಜೀವನವನ್ನು ಕಳೆದರು.

ಮಾಳಮ್ಮನವರು ಜೀವನದ ಕಷ್ಟ ಸುಖಗಳನ್ನು ಚೆನ್ನಾಗಿ ಬಲ್ಲ ಹಿರಿಯಜ್ಜಿ. ನೆರೆಹೊರೆಯವರು ಸಾಂಸಾರಿಕ ತೊಂದರೆಗಳಿಗೀಡಾಗಿ ಇವರ ಬಳಿ ಬಂದು ತೋಡಿಕೊಂಡಾಗ

ಅವರಿಗೆ ಸೂಕ್ತ ತಿಳುವಳಿಕೆ ನೀಡಿ ಪರಿಹಾರ ಮಾರ್ಗ ತೋರುವ ಸ್ವಭಾವದವರು. ಆ ಕಾಲದಲ್ಲಿ ವೈದ್ಯಕೀಯ ಅನುಕೂಲತೆಗಳು ಇರಲಿಲ್ಲ. ವೈದ್ಯರನ್ನು ನೋಡಬೇಕಾದರೆ ಹತ್ತಾರು ಮೈಲಿ ಸುತ್ತಬೇಕಾಗಿತ್ತು. ಮಾಳಮ್ಮನವರಿಗೆ ಖಾಸಗಿ ಔಷಧಿಗಳ ಅನುಭವ ಮತ್ತು ಚಿಕಿತ್ಸಾವಿಧಾನ ತಿಳಿದಿತ್ತು. ಹೊಟ್ಟೆನೋವು, ತಲೆನೋವು, ಚರ್ಮದ ಖಾಯಿಲೆಗಳು, ಜ್ವರ, ಕೆಮ್ಮು ಇವುಗಳಿಗೆ ನಾಟಿ ಔಷಧಿ ಕೊಟ್ಟು ಗುಣಪಡಿಸುತ್ತಿದ್ದರು. ಹೆರಿಗೆ ಮಾಡಿಸುವುದರಲ್ಲಿ ಹೆಚ್ಚು ಅನುಭವ ಪಡೆದವರಾಗಿದ್ದು ಒಳ್ಳೆಯ ಪ್ರಸವಕಾರಿಣಿ (ಸೂಲಗಿತ್ತಿ) ಯಾದುದರಿಂದ ಸುತ್ತಮುತ್ತಿನ ಹಳ್ಳಿಜನ ಸುಲಲಿತವಾಗಿ ಇವರ ನೆರವನ್ನು ಪಡೆಯುತ್ತಿದ್ದರು. ಮಕ್ಕಳನ್ನು ಸಾಕುವ ವಿಧಾನ ಮತ್ತು ಖಾಯಿಲೆಗಳು ಬರದಂತೆ ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಕರಿಗೆ ತಿಳಿಸುತ್ತಿದ್ದರು. ಇದರಿಂದಾಗಿ ನೆರೆಹೊರೆಯವರ ಪ್ರೀತಿ ವಿಶ್ವಾಸ ಗಳಿಸಿ ಜನಾನುರಾಗಿಯಾಗಿದ್ದರು. ಇವರ ಮನೆ ಬಲು ಚಿಕ್ಕದು. ಆದರೆ ಮನಸ್ಸು ವಿಶಾಲ. ಒಂದು ರೀತಿಯಲ್ಲಿ ಅನುಭವ ಮಂಟಪದಂತಿದ್ದ ಈ ಮನೆಯ ಅಜ್ಜಿಯ ಸ್ವಾಭಾವಿಕ ಗುಣಗಳ ಪ್ರಭಾವ ಮೊಮ್ಮಗ ಕೆ.ಜಿ.ಎಸ್‌ರ ವ್ಯಕ್ತಿತ್ವದಲ್ಲಿ ಮೂಡಿ ಆಗಾಗ್ಗೆ ಮರುಕಳಿಸುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ.

ನೇಕಾರ ವೃತ್ತಿಗೆ ಸಂಬಂಧಿಸಿದ ರೇಷ್ಮೆಹುರಿ ಮಾಡುವ ಕೆಲಸ ಇವರ ಮನೆಯಲ್ಲಿ ನಡೆಯುತ್ತಿತ್ತು. ಇದಕ್ಕೆ ಸಂಬಂಧಿಸಿದ ದೊಡ್ಡ ರಾಟೆ ಬೆಳಗಿನಿಂದ ಸಂಜೆಯವರೆಗೂ ತಿರುಗುತ್ತಿದ್ದು ಬಂದ ಸಂಪಾದನೆಯಿಂದ ಕುಟುಂಬದ ಖರ್ಚು ವೆಚ್ಚ ನೀಗುತ್ತಿತ್ತು. ಈ ಕಸುಬಿನಲ್ಲಿ ಕೆ.ಜಿ.ಎಸ್‌ರಿಗೆ ಆಸಕ್ತಿ ಇರಲಿಲ್ಲ. ಕಲಿಸುವ ಹಂಬಲ ಅವರ ತಾಯಿ ಮತ್ತು ಅಜ್ಜಿಯರಿಗೂ ಇರಲಿಲ್ಲ. ಇರುವ ಒಬ್ಬ ವಂಶದ ಕುಡಿಯನ್ನು ವಿದ್ಯಾವಂತನನ್ನಾಗಿ ಮಾಡುವ ಆಶೆ ಅವರಲ್ಲಿ ಅಗಾಧವಾಗಿತ್ತು. ಅದಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು ನಿರಂತರ ಗಮನಕೊಡುತ್ತಿದ್ದರು.

ನನಗೂ, ಕೆ.ಜಿ.ಎಸ್‌ರಿಗೂ ವಯಸ್ಸಿನಲ್ಲಿ ಒಂದೆರಡು ವರ್ಷಗಳ ಅಂತರವಿದ್ದು, ಇದು ಓದಿನಲ್ಲೂ ಹಾಗೇ ಸಾಗಿತ್ತು. ಹೀಗಾಗಿ ಒಂದೇ ತರಗತಿಯಲ್ಲಿ ಇಬ್ಬರೂ ಕುಳಿತು ಓದುವ ಅವಕಾಶ ದೊರೆಯಲಿಲ್ಲ. ಸಮಯ ಸಿಕ್ಕಾಗ ಶಾಲೆಯ ಹೊರಗೆ ಆಟ ನೋಟ ಗಳಲ್ಲಿ ಭಾಗವಹಿಸುತ್ತಿದ್ದೆವು. ಇತರ ಸ್ನೇಹಿತರೊಂದಿಗೆ ಸೇರಿ ಗೋಲಿ, ಗೆಜ್ಜುಗ, ಚೌಕಾಬಾರ, ಚಿಣ್ಣಿಕೋಲು, ಚಂಡಾಟಗಳನ್ನು ಆಡುತ್ತಿದ್ದೆವು. ಕೆರೆ, ವಡವುಗಳಲ್ಲಿ ಈಜಾಡುತ್ತಿದ್ದೆವು. ಸಮಾನ ಮನಸ್ಕರ ಕೂಟವೇ ಇರುತ್ತಿದ್ದುದರಿಂದ ಹೆಚ್ಚು ವೈಮನಸ್ಸು, ವಿರೋಧ ಭಾವನೆಗಳಿಗೆ ಎಡೆಯಿರಲಿಲ್ಲ. ಆದ್ದರಿಂದಲೇ ವಿರೂಪಾಕ್ಷಯ್ಯ, ರಾಮಚಂದ್ರ, ರಂಗನಾಥ, ಬಾರೆಮನೆ ಚಂದ್ರಯ್ಯ ಮುಂತಾದವರೊಡನೆ ಸೇರಿ ಮಿತ್ರಬಳಗ ಸ್ಥಾಪನೆ ಮಾಡಿದೆವು.

ಮಾಧ್ಯಮಿಕ ಶಾಲಾ ವ್ಯಾಸಂಗ ಮುಗಿದಾಗ ಕೆ.ಜಿ.ಎಸ್‌ರಿಗೆ ಸುಮಾರು 12 ವರ್ಷ ವಯಸ್ಸು. ಈ ಹಂತದಲ್ಲಿ ಪಾಠಪ್ರವಚನದ ಬಗ್ಗೆ ಚರ್ಚೆಯಾಗಲಿ, ವಿಷಯ ವಿನಿಮಯ ಮಾಡಿಕೊಳ್ಳುವ ಹವ್ಯಾಸವಾಗಲಿ ಅವರಲ್ಲಿ ಬೆಳೆದಿರಲಿಲ್ಲ. ಮೇಷ್ಟ್ರು ಹೇಳಿದ್ದನ್ನು ಮುಗ್ಧತೆಯಿಂದ ಕೇಳುವುದು, ಬರೆಯಿಸಿದರೆ ಬರೆದುಕೊಳ್ಳುವುದು, ಮನೆಯಲ್ಲಿ ಮಾಡಲು

ಕೊಟ್ಟ ಲೆಕ್ಕ, ಪ್ರಶ್ನೋತ್ತರಗಳನ್ನು ಬರೆದು ತೋರಿಸುವುದು ಇವುಗಳಲ್ಲಿಯೇ ನಿರತರಾಗಿದ್ದರು. ಮಾಧ್ಯಮಿಕ ಎಂಟನೆಯ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಆರು ಮೈಲಿ ದೂರದ ಕಡಬದ ಹೈಸ್ಕೂಲು ಸೇರಿದರು. ಬಾಡಿಗೆ ಮನೆ ಮಾಡಿಕೊಂಡು ಸ್ವಯಂಪಾಕ ಮಾಡಿಕೊಳ್ಳುತ್ತಿದ್ದರು. ವಾರಕ್ಕೊಂದು ಸಲ ಶನಿವಾರ ಊರಿಗೆ ಹೋಗಿ ಭಾನುವಾರ ಅಲ್ಲಿದ್ದು ಸೋಮವಾರ ಬೆಳಿಗ್ಗೆ ಅಡಿಗೆ ಸಾಮಾನುಗಳೊಡನೆ ಮತ್ತೆ ಕಡಬಕ್ಕೆ ಬರುತ್ತಿದ್ದರು. ಹೀಗೆ ಅವರ ವ್ಯಾಸಂಗ ನಡೆಯುತ್ತಿತ್ತು. ಈ ನಡುವೆ ಗುಬ್ಬಿಯಲ್ಲಿ ಹೈಸ್ಕೂಲು ಶಿಕ್ಷಣ ಪಡೆದು ಎಸ್.ಎಸ್.ಎಲ್.ಸಿ ಫೇಲಾಗಿ ನಾನು ಮನೆಗೆ ಬಂದಿದ್ದೆ. ಕೆಟ್ಟ ಸಹವಾಸದಿಂದ ಸಪ್ಲಿಮೆಂಟರಿ ಪರೀಕ್ಷೆಯಲ್ಲಿಯೂ ಫೇಲಾಗಿ ಜವಳಿ ಅಂಗಡಿಯೊಂದರಲ್ಲಿ ಬಟ್ಟೆ ಹೊಲಿಯುವ ವೃತ್ತಿಯಲ್ಲಿ ನಿರತನಾಗಿದ್ದೆ. ಕೆ.ಜಿ.ಎನ್ ಊರಿಗೆ ಬಂದಾಗ ನನ್ನ ಸ್ಥಿತಿಗೆ ಮರುಗಿ ಉತ್ಸಾಹ, ಧೈರ್ಯ, ಆತ್ಮವಿಶ್ವಾಸ ತುಂಬಿ ಮತ್ತೆ ಪರೀಕ್ಷೆ ತೆಗೆದುಕೊಳ್ಳಲು ಒತ್ತಾಯಿಸಿದರು. ಆದರೆ ಮನೆಯಲ್ಲಿ ಇದಕ್ಕೆ ಪ್ರೋತ್ಸಾಹ ನೀಡುವ ಸಂದೇಹವಿತ್ತು. ಕೆ.ಜಿ.ಎನ್ ನನ್ನ ತಂದೆಯವರನ್ನು ಒಲಿಸಿ ಓದಲು ನನ್ನನ್ನು ಕಡಬಕ್ಕೆ ಕರೆದುಕೊಂಡು ಹೋದರು. ಅವರ ಕೊಠಡಿಯಲ್ಲೇ ನನಗೂ ಸ್ಥಳಾವಕಾಶ ದೊರೆಯಿತು. ಆಗ ನಾನು ಇಂಗ್ಲೀಷ್‌ನಲ್ಲಿ ಹಿಂದೆ ಬಿದ್ದಿದ್ದೆ. ಅದಕ್ಕಾಗಿ ಅವರ ಹೈಸ್ಕೂಲು ಮುಖ್ಯೋಪಾಧ್ಯಾಯರಾಗಿದ್ದ ಕೆ. ದೊರೆಸ್ವಾಮಿ ಅಯ್ಯಂಗಾರ್ಯರಿಂದ ಪಾಠ ಹೇಳಿಸಿಕೊಳ್ಳುವ ವ್ಯವಸ್ಥೆ ಮಾಡಿದರು. ಅದರಿಂದಾಗಿ ಬಹಳ ಸುಲಭವಾಗಿ 1952 ರಲ್ಲಿ ಎಸ್.ಎಸ್.ಎಲ್.ಸಿ ತೇರ್ಗಡೆಯಾದೆ. ಎಲ್ಲಕ್ಕಿಂತ ಮುಖ್ಯವಾದದ್ದೆಂದರೆ ಈ ಸುಸಮಯವನ್ನು ಬಳಸಿಕೊಂಡು ದೊರೆಸ್ವಾಮಿ ಅಯ್ಯಂಗಾರ್ಯರಿಂದ ಇಂಗ್ಲೀಷ್ ಕಲಿತದ್ದು. ನಾಗರಾಜಪ್ಪನವರ ಅಮೂಲ್ಯ ಸಲಹೆ, ಕಡಬದಲ್ಲಿ ಒದಗಿ ಬಂದ ಸುಸಮಯ ಇವುಗಳನ್ನು ಸದುಪಯೋಗಪಡಿಸಿಕೊಳ್ಳದಿದ್ದರೆ ನನ್ನ ಜೀವನವೇ ಬೇರೆಯಾಗುತ್ತಿತ್ತು. ಡಾಕ್ಟರೇಟ್ (ಪಿ.ಹೆಚ್‌ಡಿ) ಪದವಿ ಮತ್ತು ಪ್ರೊಫೆಸರ್ ಹುದ್ದೆ ಎರಡನ್ನೂ ಪಡೆದು ಈ ಹಂತಕ್ಕೆ ಏರಲು ಸಾಧ್ಯವಾಗುತ್ತಿರಲಿಲ್ಲ. ಬಹಳಷ್ಟು ಸ್ಥಾನಮಾನಗಳನ್ನು ಪಡೆಯಲು ಕೆ.ಜಿ.ಎನ್ ನೀಡಿದ ಸಹಾಯಕ್ಕೆ ಬೆಲೆಕಟ್ಟಲು ಸಾಧ್ಯವಿಲ್ಲ.

ಕೆ.ಜಿ.ಎನ್‌ರು ಹೈಸ್ಕೂಲು ವ್ಯಾಸಂಗ ಮುಗಿಸಿ 1954 ರಲ್ಲಿ ತುಮಕೂರು ಇಂಟರ್ ಮೀಡಿಯಟ್ ಕಾಲೇಜು ಸೇರಿದರು. ಊಟ ಮತ್ತು ವಸತಿ ಶ್ರೀ ಸಿದ್ಧಗಂಗಾ ಮಠಾಧಿಪತಿಗಳಾದ ಶ್ರೀ ಶಿವಕುಮಾರ ಸ್ವಾಮೀಜಿಯವರ ಆಶೀರ್ವಾದದಿಂದ ದೊರೆಯಿತು. ಆ ವರ್ಷ ನಾನು ಅದೇ ಕಾಲೇಜಿನಲ್ಲಿ ಸೀನಿಯರ್ ಇಂಟರ್‌ಮೀಡಿಯಟ್‌ನಲ್ಲಿದ್ದೆ. ನಾಗರಾಜಪ್ಪ ನನ್ನನ್ನು ಆಗಾಗ ಭೇಟಿಯಾಗುತ್ತಿದ್ದರು, ಚರ್ಚೆಗಳಾಗುತ್ತಿತ್ತು, ವಿಚಾರ ವಿನಿಮಯ ನಡೆಯುತ್ತಿತ್ತು. ತರ್ಕಶಾಸ್ತ್ರದಲ್ಲಿ ಕೆ.ಜಿ.ಎನ್ ಬುದ್ಧಿವಂತರು. ಕಿರಿಯ ಇಂಟರ್ ವಿದ್ಯಾರ್ಥಿಯಾಗಿದ್ದರೂ ಹಿರಿಯ ಇಂಟರ್ ವಿದ್ಯಾರ್ಥಿಗಳಿಗೆ ತರ್ಕಶಾಸ್ತ್ರದಲ್ಲಿ ಪಾಠ ಹೇಳುತ್ತಿದ್ದರು.

1954-55 ರ ಸುಮಾರಿನಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ನಾವು 10-15 ಮಂದಿ ಬೇಸಿಗೆ ರಜೆಯಲ್ಲಿ ಊರಿಗೆ ಬಂದು ಒಟ್ಟಿಗೆ ಒಂದೆಡೆ

ಸೇರುತ್ತಿದ್ದೆವು. ಮಡಿವಾಳರ ಸಂಜೀವಯ್ಯ, ಶ್ಯಾನುಭೋಗರ ಅನಂತರಾಮಯ್ಯ ಊರಿನ ವಿದ್ಯಾರ್ಥಿಗಳಲ್ಲಿ ಹಿರಿಯರು. ಇವರ ಮುಂದಾಳತ್ವದಲ್ಲಿ ಮಾಧ್ಯಮಿಕ ಶಾಲೆಯ ಹಳೆಯ ವಿದ್ಯಾರ್ಥಿಗಳ ಒಕ್ಕೂಟ ಸ್ಥಾಪನೆಯಾಯಿತು. ಈ ಒಕ್ಕೂಟದ ಸದಸ್ಯರಲ್ಲಿ ರುದ್ರಯ್ಯ, ಕೆ.ಜಿ. ನಾಗರಾಜಪ್ಪ, ಕೆ.ಎಸ್. ಅನಂತರಾಮಯ್ಯ, ಬಸವಯ್ಯ ಮತ್ತು ನಾನು ಮುಖ್ಯರಾಗಿದ್ದೆವು. ಊರಿನ ಪ್ರಗತಿಗಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಗಳನ್ನು ಕೈಗೊಂಡೆವು. ಕೆ.ಜಿ.ಎಸ್‌ರಿಗೆ ನೈರ್ಮಲ್ಯ ಕಾಪಾಡುವ ಕೆಲಸದಲ್ಲಿ ಹೆಚ್ಚು ಆಸಕ್ತಿ. ಗ್ರಾಮದ ಬೀದಿಗಳು ಚಿಕ್ಕವಾಗಿದ್ದರೂ ಅಕ್ಕ ಪಕ್ಕದಲ್ಲಿ ಚರಂಡಿ ಮಾಡಲಾಗಿತ್ತು. ಆದರೆ ಜನರ ದಿವ್ಯ ನಿರ್ಲಕ್ಷದಿಂದಾಗಿ ಕಸಕಡ್ಡಿಗಳಿಂದ ಮುಚ್ಚಿಹೋಗಿದ್ದವು. ಕೆ.ಜಿ.ಎಸ್ ನಾಯಕತ್ವದಲ್ಲಿ ಸ್ವಚ್ಛತಾಕಾರ್ಯ ಆರಂಭವಾಯಿತು. ಗುದ್ದಲಿ, ಪಿಕಾಸಿ, ಮಂಕರಿ ಮತ್ತಿತರ ಸಲಕರಣೆಗಳೂ ಜಮಾವಣೆಯಾದವು. ಇದರಿಂದಾಗಿ ರಸ್ತೆಗಳು, ಚರಂಡಿಗಳು ಶುಚಿಯಾದವು. ಪ್ರತಿ ಗುರುವಾರ ಕಲ್ಲೂರು ಸಂತೆ ಸೇರುತ್ತಿತ್ತು. ಗಿಡಮರಗಳಿಲ್ಲದ ಸಂತೆ ಮೈದಾನದಲ್ಲಿ ಬಿಸಿಲ ಬೇಗೆಯಿಂದ ಜನರಿಗೆ ತುಂಬಾ ತೊಂದರೆಯಾಗುತ್ತಿತ್ತು. ಬೆಂಗಳೂರು ಲಾಲ್‌ಬಾಗ್ ಸಮೀಪದಲ್ಲಿಯೇ ವಾಸಿಸುತ್ತಿದ್ದ ಕಲ್ಲೂರಿನವರೇ ಆದ ಗಂಗಾಧರಪ್ಪನವರು ರೈನ್‌ಟ್ರೀ ಮತ್ತಿತರ ಸಸಿಗಳನ್ನು ಒದಗಿಸಿದರು. ಒಕ್ಕೂಟದ ವಿದ್ಯಾರ್ಥಿಗಳು ಅವುಗಳನ್ನೆಲ್ಲಾ ಸಂತೆ ಮೈದಾನದಲ್ಲಿ ನೆಟ್ಟು ಬೆಳೆಸಿದರು. ಇದರಿಲ್ಲಿ ಬಹಳ ಕ್ರಿಯಾಶೀಲವಾಗಿ ನಾಗರಾಜಪ್ಪ ತೊಡಗುತ್ತಿದ್ದರು. ಅಂದು ಕಷ್ಟ ಪಟ್ಟು ಬೆಳೆಸಿದ ಸಸಿಗಳು ಇಂದು ದೊಡ್ಡ ಮರಗಳಾಗಿ ಬೆಳೆದು ತಂಪು ನೀಡುತ್ತಿವೆ. ಇಂತಹ ಚಟುವಟಿಕೆಗಳ ಜೊತೆಗೆ ಶಾಲಾ ಕೊಠಡಿಗಳನ್ನು ಉಪಾಧ್ಯಾಯರಿಂದ ಬಿಡಿಸಿಕೊಂಡು ಕಿರಿಯ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವ ಪ್ರಯತ್ನವೂ ನಡೆಯುತ್ತಿತ್ತು. ಇಂತಹ ಎಲ್ಲಾ ಸೇವಾ ಸಂದರ್ಭದಲ್ಲಿ ಕೆ.ಜಿ.ಎಸ್‌ರ ಶಿಸ್ತು, ಪ್ರಾಮಾಣಿಕತೆ, ಕ್ರಿಯಾಶೀಲತೆಗಳು ಇತರರಿಗೆ ಸ್ಫೂರ್ತಿಯಾಗಿದ್ದವು. ಇವರಿಂದ ಸಲಹೆ-ಸೂಚನೆ ಪಡೆದು ಇವರನ್ನು ಅನುಕರಣೆ ಮಾಡಿದ ಅನೇಕರು ಉತ್ತಮ ಶಿಕ್ಷಣ ಪಡೆದು ಸರ್ಕಾರ ಮತ್ತಿತರ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಒಕ್ಕೂಟದ ಆಶ್ರಯದಲ್ಲಿ ಗ್ರಾಮದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಏರ್ಪಡಿಸಲಾಗುತ್ತಿತ್ತು. ಹುಲ್ಲೇಕೆರೆ ಸ್ನೇಹಿತರೊಡನೆ ಸೇರಿ ಸಾಮಾಜಿಕ ನಾಟಕಗಳನ್ನು ಅಭಿನಯಿಸಿದಾಗ ಹೆಚ್ಚು ಜನರ ಆಕರ್ಷಿತರಾಗುತ್ತಿದ್ದರು. ಕೆ.ಜಿ.ಎಸ್ ಈ ನಾಟಕಗಳಲ್ಲಿ ಹೆಣ್ಣಿನ ಪಾತ್ರಗಳನ್ನು ಮಾಡುತ್ತಿದ್ದುದು ನೆನಪಿನಲ್ಲಿದೆ. ಅಲ್ಲದೆ ಇನ್ನೂ ಅನೇಕ ಕಾರ್ಯಕ್ರಮಗಳು ಇಲ್ಲಿ ನಡೆಯುತ್ತಿದ್ದವು. ಮಲ್ಲಾಡಿಹಳ್ಳಿಯ ರಾಘವೇಂದ್ರ ಸ್ವಾಮಿಗಳನ್ನು ಕರೆಸಿ ಯೋಗ ಪ್ರದರ್ಶನ ವ್ಯವಸ್ಥೆ ಮಾಡಿದ್ದು ಸಂಘದ ಸಾಧನೆಗಳಲ್ಲೊಂದು. ಇಂತಹ ಸಂದರ್ಭಗಳಲ್ಲಿ ಊಟ ತಿಂಡಿಗಳಿಗಾಗಿ ಸ್ನೇಹಿತರುಗಳೆಲ್ಲಾ ಸೇರಿ ಕೆ.ಜಿ.ಎಸ್ ಮನೆಯಲ್ಲಿ ನೆರೆಯುತ್ತಿದ್ದೆವು. ಅವರ ತಾಯಿ ಮತ್ತು ಅಜ್ಜಿಯರು ಮಾಡಿ ಬಡಿಸುತ್ತಿದ್ದ ದೋಸೆ ಚಟ್ನಿ, ಶ್ಯಾವಿಗೆ ಪಾಯಸದ ಊಟದ ಸವಿಯನ್ನು ನಮ್ಮಲ್ಲಿ ಕೆಲವರು ಈಗಲೂ ಮೆಲುಕು ಹಾಕುತ್ತಾರೆ.

ಸ್ನೇಹಿತರೆಲ್ಲಾ ಸೇರಿದ ದಿನಗಳಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗುತ್ತಿತ್ತು. ಸಂಜೆಯ ವೇಳೆ ವಿರಾಮವಾಗಿ ನಡೆದಾಡಲು ಊರ ಹೊರಗೆ ಕೆರೆಯ ಏರಿಯ ಮೇಲೆ

ಅಥವಾ ತೊರೆಯ ದಂಡೆ ಕಡೆ ಹೋಗುತ್ತಿದ್ದೆವು. ನಾವು ಹೋಗುತ್ತಿದ್ದ ಸ್ಥಳಗಳು ಪ್ರಕೃತಿಯ ರಮಣೀಯ ಸುಂದರ ದೃಶ್ಯಗಳ ಬೀಡು. ಹಸಿರು ಹುಲ್ಲಿನ ಮೇಲೆ ಕುಳಿತು ಕೈಯಲ್ಲಿ ತಂದ ಕಡಲೆಪುರಿಗೆ ಖಾರದ ಸೇವಿಗೆ ಅವಲಕ್ಕಿ ಬೆರೆಸಿ ಎಲ್ಲರೂ ಒಟ್ಟಾಗಿ ಸೇರಿ ತಿನ್ನುತ್ತಿದ್ದ ಸನ್ನಿವೇಶಗಳು ಸ್ಮರಣೀಯವಾದುವು. ಈ ಸಂದರ್ಭದಲ್ಲಿ ಸಾಮಾಜಿಕ, ರಾಜಕೀಯ ವಿಷಯಗಳ ಚರ್ಚೆ ತೀವ್ರವಾಗಿ ನಡೆಯುತ್ತಿದ್ದವು. ವಾದ-ಪ್ರತಿವಾದ, ಖಂಡನೆ-ಪ್ರತಿಖಂಡನೆ, ವಿಮರ್ಶೆ-ವಿಶ್ಲೇಷಣೆ ಹೇರಳವಾಗಿದ್ದವು. ಇಂತಹ ವೇಳೆಯಲ್ಲಿ ಕೆ.ಜಿ.ಎನ್‌ರಲ್ಲಿ ವೈಚಾರಿಕತೆ, ವಿಮರ್ಶಾಪ್ರವೃತ್ತಿ ಪ್ರಖರವಾಗಿ ಎದ್ದು ಕಾಣುತ್ತಿತ್ತು. ವ್ಯಾಸಂಗ, ಸೇವಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಜೊತೆಗೆ ಪುಸ್ತಕಗಳನ್ನು ಓದುವ, ಸಾಹಿತ್ಯವನ್ನು ಗಂಭೀರವಾಗಿ ಅಧ್ಯಯನ ಮಾಡುವ ಪ್ರವೃತ್ತಿ ರಭಸವಾಗಿ ಹೆಚ್ಚುತ್ತಿತ್ತು. ವಯಸ್ಕರ ಶಿಕ್ಷಣದ ಪುಸ್ತಕ ಭಂಡಾರದ ಪುಸ್ತಕಗಳನ್ನೆಲ್ಲಾ ಓದಿದರು. ಜೊತೆಗೆ ಕುವೆಂಪು, ಶಿವರಾಮ ಕಾರಂತ, ಅನಕೃ, ತರಾಸು ಮತ್ತಿತರ ಪ್ರಮುಖ ಲೇಖಕರ ಕಾದಂಬರಿ, ಕತೆ, ಕವನ, ಪ್ರಬಂಧ, ವಿಮರ್ಶೆ ಇನ್ನಿತರ ಸಾಹಿತ್ಯ ಪ್ರಕಾರದ ಅಧ್ಯಯನ ನಿರಂತರವಾಗಿ ಸಾಗುತ್ತಿತ್ತು. ಇದರಿಂದಾಗಿ ಅವರ ವ್ಯಕ್ತಿತ್ವದಲ್ಲಿ ಆಲೋಚನಾ ತೀಕ್ಷ್ಣತೆ, ಅನ್ವೇಷಕ ಪ್ರವೃತ್ತಿ, ವಿಮರ್ಶಾ ಮನೋಭಾವ ಮೈದುಂಬಿದವು.

ಈ ನಡುವೆ ಇಂಟರ್ ಮುಗಿಸಿದ ಕೆ.ಜಿ.ಎನ್ ಶ್ರೀ ಸಿದ್ಧಗಂಗಾ ಮಠದ ಸ್ವಾಮೀಜಿಯವರ ಆಶೀರ್ವಾದ ಪಡೆದು ಮುಂದಿನ ವಿದ್ಯಾಭ್ಯಾಸಕ್ಕೆ ಮೈಸೂರಿಗೆ ತೆರಳಿದರು. ಮಹಾರಾಜ ಕಾಲೇಜಿನಲ್ಲಿ ಅರ್ಜಿ ಸಲ್ಲಿಸಿದಾಗ ಕನ್ನಡ ಬಿ.ಎ. ಆನರ್ಸ್‌ಗೆ ಸೇರಲು ಅನುಮತಿಯೇನೋ ದೊರೆಯಿತು. ಆದರೆ ಶುಲ್ಕ ಕಟ್ಟಲು ಹಣವಿಲ್ಲ. ಆರ್ಥಿಕ ಮುಗ್ಗಟ್ಟು ಕುಟುಂಬವನ್ನು ಕಾಡುತ್ತಿತ್ತು. ಆ ಸಮಯದಲ್ಲಿ ಸಿದ್ಧಗಂಗಾ ಸ್ವಾಮೀಜಿಯವರ ನೆರವು ಕೋರಲು ತುಮಕೂರಿಗೆ ಹೋದರು. ಹಲವಾರು ವಿದ್ಯಾರ್ಥಿಗಳಿಗೆ ಮಠದ ಹಣ ಕೊಟ್ಟು, ಅವರಿಂದ ವಾಪಸ್ಸು ಪಡೆಯುವುದು ಸಾಧ್ಯವಾಗದೆ ಸ್ವಾಮೀಜಿ ಬೇಸರ ಹೊಂದಿದ್ದು ಕೆ.ಜಿ.ಎನ್ ನೆರವು ಬೇಡಿದಾಗ ನಕಾರ ಶಬ್ದ ಹೆತ್ತಿದರು. ನಿರಾಶೆಯಿಂದ ಕಡಬಕ್ಕೆ ಹಿಂದಿರುಗಬೇಕಾಯಿತು. ವಿಷಯ ತಿಳಿದ ನಾಗರಾಜಪ್ಪನವರಲ್ಲಿ ವಾತ್ಸಲ್ಯ ಬೆಳೆಸಿಕೊಂಡಿದ್ದ ವೈಶ್ಯರಾದ ತುಳಸಮ್ಮನವರು ತಾವು ಧರಿಸಿದ್ದ ಆಭರಣವನ್ನು ಒತ್ತೆ ಇಟ್ಟು ಹಣ ನೀಡಿ ಸಮಸ್ಯೆಯನ್ನು ಪರಿಹರಿಸಿದರು. ಆನಂತರ ತುಳಸಮ್ಮನವರು ನಾಗರಾಜಪ್ಪನವರಿಗೆ ಸಾಕು ತಾಯಿಯೇ ಆದರು.

ಏನೆಲ್ಲಾ ಪರಿಪಾಟಲು ಪಟ್ಟು ಕಾಲೇಜಿಗೆ ಸೇರಿದ ನಾಗರಾಜಪ್ಪನವರಿಗೆ ಊಟ ಮತ್ತು ವಸತಿಯ ಸಮಸ್ಯೆ ಬೃಹದಾಕಾರವಾಗಿ ತಲೆ ಎತ್ತಿತು. ತಮ್ಮ ಹಿರಿಯ ಸ್ನೇಹಿತ ಸಂಜೀವಯ್ಯನವರ ಮನೆಯಲ್ಲಿ ತಾತ್ಕಾಲಿಕ ಆಶ್ರಯ ಪಡೆದಿದ್ದ ಇವರು ಸುತ್ತೂರು ಮಠದ ಹಾಸ್ಟೆಲ್ ಸೇರುವ ಪ್ರಯತ್ನ ಮಾಡಿದರು. ಹಲವಾರು ಸಲ ಸುತ್ತೂರು ಶ್ರೀಗಳನ್ನು ಕಂಡರೂ ಸಹಾಯ ದೊರಕಲಿಲ್ಲ. ಇಂತಹ ವೇಳೆಯಲ್ಲಿ ಯಾರ ಹಂಗೂ ಬಯಸದ, ಸ್ವಾಭಿಮಾನ, ಆತ್ಮವಿಶ್ವಾಸ ಬೆಳೆಸಿಕೊಂಡಿದ್ದ ನಾಗರಾಜಪ್ಪ ಎದೆಗುಂದದೆ ಪಡುವಾರಹಳ್ಳಿಯ ಹರಿಜನ ಕೇರಿಯಲ್ಲಿ ಬಾಡಿಗೆ ಕೊಠಡಿ ಹಿಡಿದು ಓದಲಾರಂಭಿಸಿದರು. ಊರಿನಿಂದ ತಂದ

ಆಹಾರಧಾನ್ಯಗಳಿಂದ ಅಡಿಗೆ ಮಾಡಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ತಮ್ಮ ಡಾಕ್ಟರೇಟ್ ಸಂಶೋಧನೆ ಮತ್ತು ಅಧ್ಯಯನಕ್ಕಾಗಿ ಬಂದಿದ್ದ ಜಿ.ಎಸ್. ಶಿವರುದ್ರಪ್ಪನವರು ಸರಸ್ವತೀಪುರಂನಲ್ಲಿಯೂ, ಎಂ. ಚಿದಾನಂದ ಮೂರ್ತಿಯವರು ಕಾಲೇಜ್ ಹಾಸ್ಟೆಲ್‌ನಲ್ಲಿಯೂ, ತಂಗಿದ್ದರು. ಇವರುಗಳ ಪರಿಚಯ ನಾಗರಾಜಪ್ಪನವರಿಗೆ ಮೊದಲೇ ಇದ್ದುದರಿಂದ ಇವರ ಮಾರ್ಗದರ್ಶನ ದೊರೆಯಿತು. ಕಾಲಾನಂತರ ಮಹಾರಾಜ ಕಾಲೇಜಿನಲ್ಲಿಯೇ ಅಧ್ಯಾಪಕರಾಗಿದ್ದ ಪ್ರಭುಶಂಕರ್ ರವರ ಪರಿಚಯವೂ ಆಯಿತು. ಇವರುಗಳೆಲ್ಲಾ ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಸ್ವಾಮಿ ವಿವೇಕಾನಂದರ ಅನುಯಾಯಿಗಳಾಗಿದ್ದು ಆಗಾಗ ಆಶ್ರಮಕ್ಕೆ ಭೇಟಿ ನೀಡುತ್ತಾ ಭಜನೆ, ಉಪನ್ಯಾಸ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಇವರೆಲ್ಲರ ಜೊತೆ ನಾಗರಾಜಪ್ಪನವರೂ ಆಶ್ರಮದ ಸದ್ಭಕ್ತರಲ್ಲೊಬ್ಬರಾಗಿ ಶ್ರೀರಾಮಕೃಷ್ಣರ ವಚನವೇದ, ಸ್ವಾಮಿ ವಿವೇಕಾನಂದರ ಕ್ರಾಂತಿಕಾರಕ ಹಾಗೂ ವಿಚಾರಾತ್ಮಕ ಲೇಖನಗಳು ಮತ್ತು ಇದಕ್ಕೆ ಸಂಬಂಧಿಸಿದ ಹಲವಾರು ಪುಸ್ತಕಗಳನ್ನು ಅಧ್ಯಯನ ಮಾಡಿದರು. ಇಲ್ಲಿ ಆದ ಸಂಪರ್ಕದಿಂದಾಗಿ ನಾಗರಾಜಪ್ಪನವರು ಜಿ.ಎಸ್. ಶಿವರುದ್ರಪ್ಪನವರ ಆಪ್ತರಲ್ಲೊಬ್ಬರಾದರು. ಇವರ ಪತ್ನಿ ರುದ್ರಾಣಮ್ಮನವರ ಅಕ್ಕರೆಯ ಸೋದರರಾದರು. ಇವರ ಮುದ್ದಾದ ಮಕ್ಕಳ ಜೊತೆ ಓಡಾಡುತ್ತಿದ್ದುದು ಸರಸ್ವತೀಪುರಂ ನಲ್ಲಿ ಸಾಮಾನ್ಯ ದೃಶ್ಯವಾಗಿತ್ತು. ಹೀಗೆ ಕೆ.ಜಿ.ಎನ್‌ರು ಶಿವರುದ್ರಪ್ಪನವರ ಕುಟುಂಬದ ಖಾಯಂ ಸದಸ್ಯರಾದರು.

ಕೆ.ಜಿ.ಎನ್ ಮೈಸೂರಿನಲ್ಲಿ ವ್ಯಾಸಂಗ ನಿರತರಾಗಿದ್ದುದು ವಿನೋಬಾಭಾವೆಯವರ ಭೂದಾನ ಯಜ್ಞ ರಭಸದಿಂದ ನಡೆಯುತ್ತಿದ್ದ ಕಾಲ. ಜಿ.ಎಸ್. ಶಿವರುದ್ರಪ್ಪನವರು, ಎಂ. ಚಿದಾನಂದಮೂರ್ತಿ, ಪ್ರಭುಶಂಕರ ಮೊದಲಾದವರು ಸರಸ್ವತೀಪುರಂ ಬಳಿಯ ಅಶೋಕಪುರಂ ಹರಿಜನ ಕೇರಿಯನ್ನು ಆರಿಸಿಕೊಂಡು ಸಮಾಜ ಸೇವಾ ಕಾರ್ಯಗಳನ್ನು ನಡೆಸುತ್ತಿದ್ದರು. ಹರಿಜನೋದ್ಧಾರ, ಕೊಳಚೆ ನಿರ್ಮೂಲನೆ, ನೈರ್ಮಲ್ಯ ಕಾರ್ಯ, ಹಾಲು ಹಣ್ಣು ವಿತರಣೆ ಮುಂತಾದ ಕಾರ್ಯಾಚರಣೆಗಳಲ್ಲಿ ನಾಗರಾಜಪ್ಪನವರ ಮುಂದಾಳತ್ವದಲ್ಲಿ ಆವೇಶಭರಿತ ಚಟುವಟಿಕೆಗಳು, ಸಾಮಗ್ರಿ ಸರಬರಾಜು ಕೆಲಸಗಳು ಎದ್ದು ಕಾಣುತ್ತಿದ್ದವು. ನಾನೂ ಆಗಾಗ ಅವರಿದ್ದ ಕೊಠಡಿಗೆ ಭೇಟಿಕೊಟ್ಟು, ಮಾಡಿದ ತಿಂಡಿ ತಿಂದು ಸಂಜೆ ಹಿಂದಿರುಗುತ್ತಿದ್ದೆ. ಹಲವಾರು ಉತ್ತಮ ಸ್ನೇಹಿತರಿದ್ದು, ಅವರು ತಮ್ಮೊಡನೆ ಇರಲು ಕೇಳಿಕೊಂಡರೂ ಕೆ.ಜಿ.ನ್ ಒಪ್ಪದೆ ಆ ವರ್ಷ ಹರಿಜನ ಕೇರಿಯಲ್ಲಿ ನೆಲೆನಿಂತದ್ದು ಒಂದು ಅಪೂರ್ವ ಘಟನೆ ಎಂದೇ ಕರೆಯಬಹುದು.

ವೈಚಾರಿಕತೆ, ಶೋಧನಾಪ್ರವೃತ್ತಿ ಮತ್ತು ಪ್ರಯೋಗಶೀಲತೆ ಕೆ.ಜಿ.ಎನ್‌ರ ವಿಶಿಷ್ಟ ಗುಣಗಳಾಗಿದ್ದವು. ಕೇಳಿದ್ದು, ಹೇಳಿದ್ದು, ಓದಿದ್ದು ಇವೆಲ್ಲವನ್ನು ಕಾರಣವಿಲ್ಲದೆ ಸುಮ್ಮನೆ ನಂಬುವ ವ್ಯಕ್ತಿಯಲ್ಲ. ಬದುಕಿನ ಹಲವಾರು ಮಗ್ಗುಲುಗಳ ಸ್ವಂತ ಅನುಭವ ಮಾಡಿಕೊಳ್ಳಲು ಆಗಾಗ ಪ್ರಯೋಗಗಳನ್ನೂ ಮಾಡುತ್ತಿದ್ದರು. ಅಗೋಚರ ಶಕ್ತಿಗಳ ಅಸ್ತಿತ್ವದ ಗುಟ್ಟು ಮತ್ತು ಅಘಟಿತ ಘಟನೆಗಳ ಸಾಧ್ಯತೆ ಕುರಿತು ಚಿಂತನೆ ಮತ್ತು ಅವುಗಳ ಚಲನವಲನಗಳ ರೀತಿ ನೀತಿಗಳನ್ನು ಕಂಡುಹಿಡಿಯುವ ಹಂಬಲ ಸದಾ ಇವರಲ್ಲಿ ತುಡಿಯುತ್ತಿತ್ತು. ಅತ್ಯಂತ ಗೂಢ

ಅಪಾಯಕರವೆಂದು ತಿಳಿದಿದ್ದರೂ ನೈಜತೆಯನ್ನು ತಿಳಿಯಲು ಎದೆಗುಂದದೆ ಮುನ್ನುಗ್ಗುತ್ತಿದ್ದರು. ಯಾವುದೇ ವಿಷಯವಾಗಲಿ ಅದನ್ನು ತಳಮುಟ್ಟಿ ನೋಡಿ ಸತ್ಯವನ್ನು ಅರಿಯುವ ಬಯಕೆ ಅವರದ್ದು. ಎಂದೂ ಕೆ.ಜಿ.ಎನ್ ಕಾಲ ವ್ಯರ್ಥ ಮಾಡುತ್ತಿರಲಿಲ್ಲ. ವಿಶ್ವವಿದ್ಯಾಲಯದ ಲೈಬ್ರರಿಯಲ್ಲಿ ಕೂತು ಗಂಟೆಗಟ್ಟಲೆ ಓದುತ್ತಿದ್ದರು.

ಕೆ.ಜಿ.ಎನ್‌ರ ಧೈರ್ಯ, ಸಾಹಸಗಳ ಮುಂದೆ ಬೃಹದಾಕಾರದ ಎಡರು ತೊಡರುಗಳು ಕುಬ್ಜವಾಗುತ್ತಿದ್ದವು. ಅವರು ನನ್ನ ಸಂಗಡ ಸರಸ್ವತೀಪುರಂನ ರೂಂನಲ್ಲಿದ್ದಾಗ ಅಮವಾಸ್ಯೆಯ ನಡುರಾತ್ರಿಯಲ್ಲಿ ಇದ್ದಕ್ಕಿದ್ದಂತೆ ಹೊರಟುಹೋಗುತ್ತಿದ್ದರು. ಕಗ್ಗತ್ತಲ ಅಪಾಯಕರ ಸನ್ನಿವೇಶದಲ್ಲಿ ರಾತ್ರಿಯೆಲ್ಲಾ ಸಂಚರಿಸಿ ಪಡೆದ ಅನುಭವಗಳನ್ನು ನನಗೆ ಆಗಾಗ ಹೇಳುತ್ತಿದ್ದರು. ಇಂತಹ ಒಂದು ದಿನ ಮಧ್ಯರಾತ್ರಿ ಎದ್ದು ಸ್ವಲ್ಪ ನೀರು ಕುಡಿದು ಹೊರಗೆ ಹೊರಟರು. ಆವೇಳೆಯಲ್ಲಿ ಸ್ಮಶಾನದ ಅವಲೋಕನ ಆ ದಿನದ ಅವರ ಕಾರ್ಯಕ್ರಮವಾಗಿತ್ತು. ಅವರೇ ಹೇಳಿದ ಪ್ರಕಾರ ಸರಸ್ವತೀಪುರಂನ ಕೊನೆಯಿಂದ ಹೊರಟು ರೈಲ್ವೆ ರಸ್ತೆ ದಾಟಿ ಕೋರ್ಟು ಆವರಣದ ಮುಖಾಂತರ ಸು. 4-5 ಮೈಲಿಗಳ ದೂರದಲ್ಲಿದ್ದ ಚಾಮುಂಡಿ ಬೆಟ್ಟದ ತಪ್ಪಲಿನ ಸ್ಮಶಾನಕ್ಕೆ ನಿಧಾನವಾಗಿ ಸುತ್ತಮುತ್ತ ಕಣ್ಣಾಡಿಸಿಕೊಂಡೇ ಪ್ರವೇಶಮಾಡಿದರಂತೆ. ಹೆಣ ಸುಟ್ಟ ಬೆಂಕಿ ಇನ್ನೂ ಉರಿಯುತ್ತಿತ್ತು. ಅಲ್ಲಿ ಒಬ್ಬ ಮನುಷ್ಯ ಬೆಂಕಿಯ ಮುಂದೆ ಕುಳಿತು ಬೀಡಿ ಹತ್ತಿಸಿಕೊಂಡು ಸೇದುತ್ತಾ ನಿರ್ಲಿಪ್ತನಾಗಿ ಕುಳಿತ ದೃಶ್ಯ, ಸುತ್ತಮುತ್ತಲ ನೀರವ ರಾತ್ರಿಯಲ್ಲಿ ಭಯಾನಕವಾಗಿಯೇ ಇತ್ತಂತೆ. ಅವನನ್ನು ಮಾತನಾಡಿಸುವ ಗೋಜಿಗೆ ಹೋಗದೆ 2-3 ಗಂಟೆಗಳ ಕಾಲ ಸುತ್ತಾಡಿ, ಕುಳಿತು ಬೆಳಗಿನ 5-30 ರ ಸುಮಾರಿಗೆ ಸ್ಮಶಾನದಿಂದ ಹೊರಟು ಬಂದರು. ಕೈಯಲ್ಲಿ ಸ್ಮಶಾನದ ಬೂದಿ ಇತ್ತು. ಅದು ಇನ್ನೂ ಬಿಸಿಯಾಗಿತ್ತು! ಅಂದು ಸ್ನಾನಕ್ಕಾಗಿ ಸ್ವಿಮ್ಮಿಂಗ್ ಪೂಲ್‌ಗೆ ಹೋಗುವಾಗ ದಾರಿಯಲ್ಲಿ ಅಂದು ಆದ ಅಪೂರ್ವ ಘಟನೆಗಳನ್ನು ಹೇಳಿದರು. ಕೆ.ಜಿ.ಎನ್‌ಗೆ ಮೊದ ಮೊದಲು ಈ ಸನ್ನಿವೇಶಗಳ ಭಯ ಹುಟ್ಟಿಸಿದರೂ ಸತ್ಯಾನ್ವೇಷಣೆಯ ಉತ್ಸಾಹದ ಪ್ರಾಮಾಣಿಕ ಗುಂಗಿನಲ್ಲಿ ರಾಜಿ ಮಾಡಿಕೊಳ್ಳದ ಸಾಹಸ ಪ್ರವೃತ್ತಿ ಅವರಲ್ಲಿತ್ತು. ಭಯಗಳಿಂದ ವಿಮುಕ್ತಿ ಪಡೆದು ಯಾವುದೇ ವಿಷಯದ ಆಳವಾದ ವಿಶ್ಲೇಷಣೆ ಮಾಡುವ ಮತ್ತು ನಿರ್ದಾಕ್ಷಿಣ್ಯ ವಿಮರ್ಶೆ ಮಾಡುವ ಮನೋಭಾವ ಅವರಲ್ಲಿ ಕಾಣಬಹುದು.

ಆಗ ನಾವಿಬ್ಬರೂ ಸರಸ್ವತಿಪುರಂನ ಕೊನೆಯ ಸಾಲಿನ ಮನೆಯೊಂದರ ಬಾಡಿಗೆ ಕೊಠಡಿಯಲ್ಲಿ ವಾಸಿಸುತ್ತಿದ್ದೆವು. ಒಮ್ಮೆ ಸಂಜೆ 5 ಗಂಟೆಗೆ ಯಾರೋ ಹೆಂಗಸರು ಚಿಟಾರನೆ ಕಿರುಚಿಕೊಂಡರು. ಇಬ್ಬರೂ ಹೊರಕ್ಕೆ ಓಡಿಬಂದೆವು. ಅವರು ನಮ್ಮ ಮನೆಯ ಯಜಮಾನಿ! ಮನೆಕಟ್ಟಲು ನೀರಿಗೆ ತೋಡಿದ್ದ ಬಾವಿಗೆ ಅವರ ನಾಲ್ಕು ವರ್ಷದ ಗಂಡು ಮಗು ಆಡುತ್ತಾ ಆಡುತ್ತಾ ಹೋಗಿ ಜಾರಿ ಬಿದ್ದಿತ್ತು. ಜನ ಸೇರಿದರು ಎಲ್ಲರೂ ಅಸಹಾಯಕರು. ನೆಲಮಟ್ಟದ ಮಣ್ಣಿನ ಬಾವಿಗೆ ಯಾರೂ ಇಳಿಯುವಂತಿಲ್ಲ. ಅದು ಸುಮಾರು 5-6 ಆಳುದ್ದ ಇದ್ದ ಬಾವಿ. ಹಿಂದು ಮುಂದು ನೋಡದೆ ಕೆ.ಜಿ.ಎನ್, ಪ್ರಾಣದ ಹಂಗು ತೊರೆದು ಮಗುವಿನ ಪ್ರಾಣ ಉಳಿಸಲು ಬಾವಿಗೆ ಧುಮುಕಿಯೇ ಬಿಟ್ಟರು! ನೀರು ಸೊಂಟದುದ್ದಕ್ಕೆ ಬರುತ್ತಿತ್ತು. ಕೆಸರೇ ಅಧಿಕವಾಗಿತ್ತು. ಮಗು ಕೆಸರಿನಲ್ಲಿ ಸಿಕ್ಕಿಕೊಂಡಿತ್ತು.

ಮಗುವನ್ನು ಎತ್ತಿ ನೀರಿನಲ್ಲಿ ತೊಳೆದು ಹೆಗಲ ಮೇಲೆ ಕುಳ್ಳಿರಿಸಿಕೊಂಡರು. ಜನ ಕಿಕ್ಕಿರಿದು ಸೇರಿತ್ತು. ಮೇಲೆ ನಿಂತಿದ್ದ ಜನಕ್ಕೆ ಕೆ.ಜಿ.ಎನ್ ಮತ್ತು ಮಗುವನ್ನು ಮೇಲಕ್ಕೆ ಎತ್ತುವುದು ಹೇಗೆ ಎಂಬುದೇ ಚಿಂತೆ! ಮಗು ಮತ್ತು ಕೆ.ಜಿ.ಎನ್ ಕೆಸರಿನಲ್ಲಿ ತೊಯ್ದಿದ್ದಾರೆ. ಮಗು ನಡುಗುತ್ತಾ ಅಳುತ್ತಿದೆ. ಬಾವಿಗೆ ಮೆಟ್ಟಿಲುಗಳಿಲ್ಲ. ಅದಕ್ಕೆ ಹತ್ತಿರವಾಗಿ ಸರ್ವೆಗಳು ಸೆಟ್ಟಿಲ್ಲ. ಇನ್ನೂ ಅಪೂರ್ಣಗೊಂಡ ನೆಲಮಟ್ಟದ ಬಾವಿ. ಯಾರಿಗೂ ಏನೂ ಹೊಳೆಯಲಿಲ್ಲ. ನಾಗರಾಜಪ್ಪನವರೇ ಮೇಲಿದ್ದ ನಮ್ಮನ್ನು ಕೂಗಿ ಕರೆದು ಬಾವಿಗೆ ಅಡ್ಡಡ್ಡವಾಗಿ ಸರ್ವೆಮರ ಹಾಕಿ ಅದಕ್ಕೆ ನೀರು ಸೇದೋ ಹಗ್ಗಕಟ್ಟಿ ಬಾವಿಗೆ ಬಿಡುವಂತೆ ಸೂಚಿಸಿದರು. ಹಾಗೇ ಮಾಡಿದೆವು. ಅವರು ಮಗುವಿನೊಂದಿಗೆ ಹಗ್ಗ ಹತ್ತಿ ಮೇಲಕ್ಕೆ ಬಂದ ದೃಶ್ಯ ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಮೇಲಿದ್ದವರಿಗೆ ಇದೊಂದು ಪವಾಡವಾಗಿ ಕಂಡಿತು. ಕೆ.ಜಿ.ಎನ್ ಈಗಾಗಲೇ ಕತ್ತಿವರಸೆ, ದೊಣ್ಣೆವರಸೆ ಮತ್ತು ಯೋಗಾಸನಗಳಲ್ಲಿ ಪಳಗಿದ್ದರು. ಮಗುವಿಗೆ ಬದುಕಿಸಿದರು! ತಾಯಿ ಕೃತಜ್ಞತೆಯಿಂದ ಕಣ್ಣೀರು ಸುರಿಸಿದರು. ಮಗುವಿನ ತಂದೆ ಬೆಂಗಳೂರಿನ ಆಯುರ್ವೇದ ಕಾಲೇಜಿನಲ್ಲಿ ವೈದ್ಯರು. ಮಗುವಿಗೆ ಸಂಜೆ ಬಹಳ ಜ್ವರ ಬಂದು ಬೆಚ್ಚುತ್ತಿತ್ತು. ಕೆ.ಜಿಎನ್ ಸ್ಮಶಾನದಿಂದ ತಂದ ಬೂದಿಯನ್ನು ಯಜಮಾನಿಗೆ ಕೊಟ್ಟು ಹಣೆಗೆ ಹಚ್ಚುವಂತೆ ತಿಳಿಸಿದರು. ಅವರು ಹಾಗೇ ಮಾಡಿದರು. ಮಗು ಮತ್ತೆ ಮರುದಿವಸ ಎಂದಿನಂತೆ ಓಡಾಡಿತು. ನಾಗರಾಜಪ್ಪನವರಿಗೆ ಈ ವಿಷಯ ತಿಳಿಸಿದಾಗ ನಕ್ಕು ಬಿಟ್ಟರು. ಅವರು ಸ್ಮಶಾನಕ್ಕೆ ಹೋಗುತ್ತಿದ್ದುದು ಪವಾಡ ಅಥವಾ ಸಿದ್ಧಿ ಸಾಧಿಸಲು ಅಲ್ಲ, ಕೇವಲ ಸತ್ಯಾನ್ವೇಷಣೆಗಾಗಿ ಅಷ್ಟೆ. ಅಂಥ ಸತ್ಯಾನ್ವೇಷಣೆಯಲ್ಲಿ ಅವರಿಗೆ ಅಪೂರ್ವವಾದ ಅನುಭವಗಳಾಗಿದ್ದರೂ ಎಂದೂ ಅವುಗಳನ್ನು ತಮ್ಮ ಸ್ವಾರ್ಥ ಸಾಧನೆ ಅಥವಾ ವ್ಯಾಪಾರೀಕರಣಕ್ಕೆ ಬಳಸಿದವರಲ್ಲ. ಇಂದಿಗೂ ಅವರು ಪವಾಡ ಅಥವಾ ಸಿದ್ಧರ ವೈಚಾರಿಕ ಅಧ್ಯಯನಕ್ಕೆ ಹಿಂಜರಿಯುವುದಿಲ್ಲ. ಇಂದಿಗೂ ಅವರು ಯಂತ್ರ ಮಂತ್ರ ತಂತ್ರಗಳ ವಿಷಯಗಳಲ್ಲಿ ಆಳವಾಗಿ ಅಧ್ಯಯನ ಮಾಡಿದ್ದಾರೆ, ಮಾಡುತ್ತಿದ್ದಾರೆ. ಸಾಹಿತ್ಯಾಸಕ್ತಿಯ ಜೊತೆ ಇಂಥ ಅನ್ಯ ವಿಷಯಗಳ ಆಸಕ್ತಿಯೂ ಅವರಿಗೆ ಸ್ವಾಭಾವಿಕವಾಗಿದೆ. ಬದುಕಿಗೆ ಸಂಬಂಧಿಸಿದ ಯಾವುದೇ ವಿಷಯದಲ್ಲಿಯೂ ಅವರಿಗೆ ಆಸಕ್ತಿ ಮತ್ತು ಅನ್ವೇಷಣಾ ಮನೋಭಾವ. ಹೀಗಾಗಿ ಕೆ.ಜಿ.ಎನ್ ಮುಕ್ತ ಮನಸ್ಸಿನ ಅಸಲಿ ಚಿಂತಕರು ಎನ್ನುವುದರಲ್ಲಿ ಸಂದೇಹವಿಲ್ಲ.

ಮೈಸೂರು ಮಹಾರಾಜ ಕಾಲೇಜಿನಲ್ಲಿ ಎರಡು ವರ್ಷಗಳನ್ನು ಮುಗಿಸಿ 3 ನೇ ವರ್ಷದ ಬಿ.ಎ.(ಆನರ್ಸ್) ಗೆ ಕೆ. ಜಿ.ಎನ್ ಸೇರಿದಾಗ ಡಾ॥ಜಿ.ಎಸ್. ಶಿವರುದ್ರಪ್ಪ ಮತ್ತು ಡಾ॥ ಎಂ. ಚಿದಾನಂದಮೂರ್ತಿಯವರ ಪ್ರಯತ್ನದಿಂದ ಕಾಲೇಜ್ ಹಾಸ್ಟೆಲ್‌ನಲ್ಲಿ ಒಪ್ಪತ್ತಿನ ಉಚಿತ ಊಟದ ವ್ಯವಸ್ಥೆ ದೊರೆಯಿತು. ಸರಸ್ವತಿಪುರಂನ ರೂಂನಲ್ಲಿದ್ದುಕೊಂಡೇ ವ್ಯಾಸಂಗ ಮುಂದುವರಿಸಿ 1958 ರಲ್ಲಿ ಬಿ.ಎ. ಆನರ್ಸ್ ಪದವಿ ಪಡೆದರು.

ಈ ಮಧ್ಯೆ ಕಲ್ಲೂರಿನಲ್ಲಿ ನಮ್ಮದೇ ಆದ ಒಂದು ಮಾದರಿ ವಿದ್ಯಾಸಂಸ್ಥೆ ಸ್ಥಾಪಿಸುವ ಪ್ರಯತ್ನ ಕೆ.ಜಿ.ಎನ್‌ರಿಂದ ನಡೆದಿತ್ತು. ಮಾಧ್ಯಮಿಕ ಶಾಲೆಯ ಹಳೆಯ ವಿದ್ಯಾರ್ಥಿಗಳ ಒಕ್ಕೂಟದ ಆಶ್ರಯದಲ್ಲಿ "ಪ್ರಗತಿ ವಿದ್ಯಾ ಸಂಸ್ಥೆ"ಯ ಆರಂಭೋತ್ಸವವು ಶ್ರೀ ಶ್ರೀ

ಶಿವಕುಮಾರಸ್ವಾಮೀಜಿಯವರಿಂದ ನೆರವೇರಿಸಲ್ಪಟ್ಟಿತು. ಚಿಕ್ಕ ವೆಂಕಟಪ್ಪ, ಚಂದ್ರಯ್ಯ, ಗೋವಿಂದಪ್ಪ, ವೆಂಕಟರಮಣಯ್ಯ ಮುಂತಾದವರು ಕಾಲೇಜು ವಿದ್ಯಾಭ್ಯಾಸಕ್ಕೆ ಕೈ ಹಾಕದೆ ಕೆಲಸಕ್ಕೆ ಸೇರಿ ದುಡಿಮೆಯ ಹಾದಿ ಹಿಡಿದಿದ್ದರು. ಚಿಕ್ಕ ವೆಂಕಟಪ್ಪನವರಿಗೆ ಕೆ.ಜಿ.ಎನ್ ನಾಮಕರಣ ಮಾಡಿ ಆರಂಭಿಸಿದ್ದ ಪ್ರಗತಿ ವಿದ್ಯಾಸಂಸ್ಥೆಯನ್ನು ಉಳಿಸಿ ಉತ್ತಮ ಪಡಿಸುವ ಉತ್ಸಾಹವಿತ್ತು. ಎಲ್ಲರ ಸಹಕಾರದಿಂದ 'ಪ್ರಗತಿ ವಿದ್ಯಾ ಸಂಸ್ಥೆ'ಯ ಆಶ್ರಯದಲ್ಲಿ ನರ್ಸರಿ ಪಾಠಶಾಲೆಯನ್ನು ಪ್ರಾರಂಭಿಸಲಾಯಿತು. ಚಿಕ್ಕವೆಂಕಟಪ್ಪನವರು ಆ ಸಂಸ್ಥೆಯ ಕಾರ್ಯದರ್ಶಿಯಾಗಿದ್ದು ಅವರ ಮೇಲ್ವಿಚಾರಣೆಯಲ್ಲಿ ಶಾಲೆ ಮುಂದುವರಿದು ತನ್ನದೇ ಆದ ಕಟ್ಟಡದಲ್ಲಿ ನರ್ಸರಿ ಹಾಗೂ ಪ್ರಾಥಮಿಕ ಶಾಲೆಗಳು ನಡೆಯುತ್ತಿವೆ. ಇದರಿಂದ ಕಲ್ಲೂರಿನ ಕೆಲವರಿಗೆ ಉದ್ಯೋಗಾವಕಾಶ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲಗಳು ದೊರೆತಿವೆ.

ಹೈಸ್ಕೂಲು ಸ್ಥಾಪಿಸುವ ಯೋಜನೆಯನ್ನು ಕಾರ್ಯಗತ ಮಾಡಲು ಕೆ.ಜಿ.ಎನ್ ಮತ್ತು ಚಿಕ್ಕವೆಂಕಟಪ್ಪನವರು ತೀವ್ರವಾಗಿ ಪ್ರಯತ್ನಿಸುತ್ತಿದ್ದರು. ಈ ವಿಷಯವನ್ನು ಕೆ.ಜಿ.ಎನ್‌ರು ಶ್ರೀ ಸಿದ್ಧಗಂಗಾ ಮಠದ ಸ್ವಾಮೀಜಿಯವರೊಡನೆ ಪ್ರಸ್ತಾಪಿಸಿ ಅವರ ಸಲಹೆಯನ್ನು ಕೋರಿದ್ದರು. ತುಮಕೂರು ಜಿಲ್ಲೆಯಲ್ಲಿ ಶ್ರೀ ಸಿದ್ಧಗಂಗಾ ಮಠದ ಆಶ್ರಯದಲ್ಲಿ ಹಲವಾರು ಹೈಸ್ಕೂಲುಗಳು ಸ್ಥಾಪನೆಯಾಗಿದ್ದುವು. ಸ್ವಾಮೀಜಿಯವರು ಕಲ್ಲೂರಿನಲ್ಲಿಯೂ ತಮ್ಮ ಹೈಸ್ಕೂಲು ಸ್ಥಾಪಿಸಲು ಒಪ್ಪಿಗೆ ನೀಡಿದರು. ಊರಿನ ಸಾರ್ವಜನಿಕರಿಂದ ಸುಮಾರು 10 ಸಾವಿರ ರೂ.ಗಳವರೆಗೆ ಚಂದಾ ವಸೂಲಿ ಮಾಡಿ ಸ್ವಾಮೀಜಿಯವರಿಗೆ ಒಪ್ಪಿಸಿದೆವು. ಹೈಸ್ಕೂಲಿಗಾಗಿ ಶ್ರೀ ಸುಬ್ಬರಾವ್‌ರವರು ಊರ ಹೊರಗೆ ಕಟ್ಟಿಸಿದ್ದ ತಮ್ಮ ಕಟ್ಟಡವನ್ನು ನಾಗರಾಜಪ್ಪನವರ ಒತ್ತಾಯಕ್ಕೆ ಮಣಿದು ಖರೀದಿಗೆ ಕೊಡಲು ಒಪ್ಪಿಗೆ ನೀಡಿದರು. ಆ ಕಟ್ಟಡ ಊರ ಹೊರಾಂಗಣದಲ್ಲಿದ್ದು ಹೈಸ್ಕೂಲು ಸ್ಥಾಪನೆಗೆ ಯೋಗ್ಯವಾಗಿದ್ದುದರಿಂದ ಅದನ್ನು ಖರೀದಿಗೆ ಕೊಂಡು ಅಲ್ಲಿ ಹೈಸ್ಕೂಲು ಆರಂಭಿಸಲಾಯಿತು. ಕೆ.ಜಿ.ಎನ್‌ರ ವೈಯಕ್ತಿಕ ಪ್ರಯತ್ನ ಹಾಗೂ ಸ್ನೇಹಿತರ ಸಹಕಾರದಿಂದ ಕಲ್ಲೂರಿನಲ್ಲಿ ನರ್ಸರಿ ಹಾಗೂ ಪ್ರೈಮರಿ ಮತ್ತು ಹೈಸ್ಕೂಲುಗಳು ವ್ಯವಸ್ಥಿತವಾಗಿ ಉಳಿದು ಬೆಳೆಯುತ್ತಿವೆ. ಇದರ ಫಲವಾಗಿ ಊರಿನ ಹಲವಾರು ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯ ಅವಕಾಶ ದೊರಕಿದೆ.

1960 ರಲ್ಲಿ ಎಂ.ಎ. ಮುಗಿಸಿ ಕೆ.ಜಿ.ಎನ್‌ರು ಕೆ.ಆರ್.ಎಸ್ ಹೈಸ್ಕೂಲಿನಲ್ಲಿ ಶಿಕ್ಷಕ ವೃತ್ತಿಯಲ್ಲಿ ತೊಡಗಿದರು. ಆಗ ಸ್ವಂತ ದುಡಿದು ತಿನ್ನುವ ಗುರಿ. ಈ ವೃತ್ತಿಯಲ್ಲಿ ಇವರಿಗೆ ಸ್ವಾಭಾವಿಕವಾಗಿಯೇ ಆಸಕ್ತಿಯಿತ್ತು. ಯಾವುದೇ ಕ್ಲಿಷ್ಟವಾದ ವಿಷಯವನ್ನಾಗಲಿ ಇತರರಿಗೆ ಸುಲಭವಾಗಿ ತಿಳಿಯುವಂತೆ ಸರಳವಾಗಿ ವಿವರಿಸುವ ಕೌಶಲ್ಯ ಇವರಿಗೆ ಕರಗತವಾಗಿತ್ತು. ಶಿಕ್ಷಕನ ಲಕ್ಷಣ ಹೇಗಿರಬೇಕೆಂಬ ಬಗ್ಗೆ ಇವರ ಧೋರಣೆಗಳು ವಿಚಾರ ಪ್ರಚೋದಕವಾಗಿವೆ. ಶಿಕ್ಷಕ ತಾನು ಬೋಧಿಸುವ ಯಾವ ವಿಷಯದಲ್ಲೇ ಆಗಲಿ ವಿಶಾಲವಾದ ಮತ್ತು ಆಳವಾದ ಜ್ಞಾನ ಪಡೆದಿರಬೇಕು. ವಿಷಯಗಳನ್ನು ಸುಲಭವಾಗಿ ಅರ್ಥವಾಗುವಂತೆ ಸರಳವಾಗಿ ಹೇಳುವುದನ್ನು ಕಲಿತಿರಬೇಕು. ತಾನು ವಿವರಿಸುವುದನ್ನು ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ

ಗ್ರಹಿಸುತ್ತಾರೆಂದು ಮೌಲ್ಯಮಾಪನ ಮಾಡುವುದರ ಬದಲು ಅವರು ಹೇಗೆ ಶಿಕ್ಷಕನನ್ನು ಅವನ ವೃತ್ತಿ ಕೌಶಲ್ಯದ ಮೌಲ್ಯ ಮಾಪನ ಮಾಡುತ್ತಾರೆ ಎಂಬುದರ ಕಡೆ ನಿಗ ವಹಿಸಬೇಕು ಎಂದು ಹೇಳುತ್ತಿದ್ದರು. ಕೆ.ಜಿ.ಎಸ್‌ರ ಆಸಕ್ತಿ ಕೇವಲ ಪಠ್ಯಕ್ರಮದಂತೆ ಪಾಠಹೇಳಿ ಮುಗಿಸುವುದಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಹೆಚ್ಚಿನ ಮಟ್ಟದ ಜ್ಞಾನ ಸಂಪಾದನೆಗೆ ಯಾವಾಗಲೂ ಮುಂದಾಗುತ್ತಿದ್ದರು. ಪುಸ್ತಕಗಳನ್ನು ಕೊಳ್ಳುವುದರಲ್ಲಿ ಮತ್ತು ಪುಸ್ತಕ ಭಂಡಾರವನ್ನು ನಿರಂತರವಾಗಿ ಉಪಯೋಗಿಸುವುದರಲ್ಲಿ ಇವರೇ ಮೊದಲಿಗರಾಗುತ್ತಿದ್ದರು. ಇದುವರೆವಿಗೂ ಇವರು ಕೊಂಡ ಸಾವಿರಾರು ಪುಸ್ತಕಗಳ ಉತ್ತಮ ಪುಸ್ತಕ ಭಂಡಾರವೇ ಇವರ ಮನೆಯ ಅರ್ಧಭಾಗವನ್ನು ಆವರಿಸಿ ಅಲಂಕರಿಸಿದೆ.

ಮೈಸೂರಿನ ರಾಮಕೃಷ್ಣಾ ಪದವಿಪೂರ್ವ ಕಾಲೇಜಿನಿಂದ ಬಂದ ಆಮಂತ್ರಣಕ್ಕೆ ಒಪ್ಪಿ ಅಲ್ಲಿ ಉಪನ್ಯಾಸಕರಾದರು. ಒಂದೆರಡು ವರ್ಷ ಅಲ್ಲಿ ಸೇವೆ ಸಲ್ಲಿಸಿ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯನ್ನು ಸೇರಿಕೊಂಡರು. ಡಾ|| ಜಿ.ಎಸ್. ಶಿವರುದ್ರಪ್ಪನವರ ಸಲಹೆಯಂತೆ ಶ್ರೀಮತಿ ಸಾವಿತ್ರಿಯವರ ಕೈ ಹಿಡಿದು ತುಮಕೂರಿನಲ್ಲಿ ನೆಲಸಿದರು. ಅವರ 'ದೊಡ್ಡಸಂಕಣ್ಣ ನಾಯಕ' ಪಠ್ಯಪುಸ್ತಕದಿಂದ ದೊರೆತ ಹಣ ಉಪಯೋಗಿಸಿ ಸ್ವಂತ ಮನೆ ಕಟ್ಟಿಸಿಕೊಂಡರು. ತುಮಕೂರಿನ ಇವರ ಮನೆ ಬಂದು ಹೋಗುವ ಸ್ನೇಹಿತರು ತಂಗುವ ಶಾಂತಿಧಾಮವಾಗಿತ್ತು. ಶಿಷ್ಯರ ಹಾಗೂ ಮಿತ್ರರ ಸಮುದಾಯ ದೊಡ್ಡದಾಗಿ ಬೆಳೆದು ಇವರ ಮನೆ ಅತಿಥಿ ಸತ್ಕಾರದ ಕೇಂದ್ರವಾಗಿ ವಿದ್ವಾಂಸರನ್ನು ಆಕರ್ಷಿಸಿತ್ತು. ಸಿದ್ಧಗಂಗಾ ಕಾಲೇಜಿನಲ್ಲಿ ಪ್ರೊಫೆಸರ್ ಆಗಿ ಬಹಳ ಕಾಲ ಸೇವೆ ಸಲ್ಲಿಸಿ ಬಹು ಮಂದಿ ವಿದ್ಯಾರ್ಥಿಗಳ, ಸಮೂಹದ ಪ್ರೀತಿ ವಿಶ್ವಾಸಗಳಿಸಿ ಅವರ ನೆಚ್ಚಿನ ಪ್ರಾಧ್ಯಾಪಕರಾಗಿ ಎಂದೆಂದಿಗೂ ಮರೆಯದ ಗುರುಶಿಷ್ಯ ಸಂಬಂಧದ ಸಿಹಿ ತಿನ್ನಿಸಿ ಕಾಲೇಜಿನ ಪ್ರಿನ್ಸಿಪಾಲರಾಗಿ ವಿದ್ಯಾರ್ಥಿಗಳಿಗೆ ಶಿಸ್ತಿನ ಪಾಠಕಲಿಸಿ 1992 ರಲ್ಲಿ ನಿವೃತ್ತಿಯಾದರು. ಎಂದೂ ಅವರು ವೃತ್ತಿ ದೊರಕಿಸಿಕೊಳ್ಳಲು ಜಾತಿ ಮತ್ತು ಪ್ರಭಾವ ಬಳಸಲಿಲ್ಲ.

ಕೆ.ಜಿ.ಎಸ್‌ರು ನಿವೃತ್ತಿಯಾದ ಮರುವರ್ಷ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಸ್ನಾತಕೋತ್ತರ ವಿಭಾಗದಿಂದ ಅಧ್ಯಾಪಕರಾಗಿ ಕೆಲಸ ಮಾಡಲು ಕರೆ ಬಂದಿತ್ತು. ಆ ವರ್ಷ ಅಲ್ಲಿ ಸೇವೆ ಸಲ್ಲಿಸಿ ವಿದ್ಯಾರ್ಥಿಗಳ ಪ್ರಶಂಸೆ ಗಳಿಸಿದರು. ನಂತರ 1993 ರಿಂದ ಇಲ್ಲಿಯವರೆಗೆ ಕೆಂಗಲ್ (ಚನ್ನಪಟ್ಟಣ)ನ ಶ್ರೀ ಕುವೆಂಪು ಕಾಲೇಜಿನ ಕನ್ನಡ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿ ಪ್ರಾಧ್ಯಾಪಕರಾಗಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಪ್ರಾಧ್ಯಾಪಕ ವೃತ್ತಿಯ ಜೊತೆಯಲ್ಲಿ ಅವರ ಪ್ರಗತಿ ಪೂರಕ ಲೇಖನಗಳು ಹೊರ ಬರುತ್ತಿದ್ದುವು. ಅವುಗಳಲ್ಲಿ 'ಭಕ್ತಿ ಸಾಹಿತ್ಯದಲ್ಲಿ ಪ್ರತಿಭಟನೆ' ಮತ್ತು 'ಕನ್ನಡ ಮಧ್ಯ ಯುಗದಲ್ಲಿ ಹಿಂಸೆ ಸ್ವರೂಪ', ಓದುಗರ ಮನ ಸೆಳೆದವು. ಇವರ 'ಮರುಚಿಂತನೆ'ಯ ಅಧ್ಯಾಯಗಳು ಚಿಂತನೆಯ ಹೊಸ ಮಗ್ಗುಲುಗಳ ಮಾದರಿಯಾಗಿವೆ. ಸೃಜನಶೀಲ ಸಾಹಿತ್ಯದ ಆಧುನಿಕ ಮೆಟ್ಟಿಲುಗಳಾಗಿವೆ.

ಕೆ.ಜಿ.ಎಸ್.ರ ವೈಯಕ್ತಿಕ ಜೀವನದಲ್ಲಿ ನಾನು ಗುರುತಿಸಿದ ಗುಣಗಳಲ್ಲಿ ಅವರ

ಜಾತ್ಯಾತೀತ ಭಾವನೆ ಪ್ರಮುಖವಾದದ್ದು. ಇವರು ಚಿಕ್ಕಂದಿನಿಂದಲೂ ಬೇರೆ ಬೇರೆ ಜಾತಿಯ ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿ ಬೆಳೆದು ಬಂದವರು. ಸ್ನೇಹಿತ ಸಮೂಹದಲ್ಲಿ ಅನೇಕ ಜಾತಿಗೆ ಸೇರಿದ ವ್ಯಕ್ತಿಗಳಿದ್ದರೂ ಯಾವ ಭೇದ ಭಾವನೆಗಳಿಗೂ ಎಡೆಕೊಡದ ಸೌಹಾರ್ದ ಭಾವನೆಗಳು ಬೆಳೆದವು. ಇವರು ಜಾತಿ ಜನಾಂಗಗಳ ಬಗ್ಗೆ ಮಾತನಾಡುವಾಗ ಯಾವ ಸಂಕುಚಿತ ಮನೋಭಾವಗಳಿಗೂ ಸ್ಥಾನ ಕೊಡದೆ ಯಾವುದನ್ನೂ ಮುಚ್ಚುಮರೆ ಮಾಡದೆ ಮನಸ್ಸಿನಲ್ಲಿದ್ದುದನ್ನು ನೇರವಾಗಿ ಹೇಳುವ ಪ್ರವೃತ್ತಿ ಇವರದು. ಇವರ ಟೀಕೆ ಟಿಪ್ಪಣಿಗಳು ಜನಾಂಗದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಹಿನ್ನೆಲೆಗಳಿಗೆ ಸಂಬಂಧಿಸುತ್ತವೆಯೇ ಹೊರತು ಯಾವುದೇ ಜಾತಿ ಜನಾಂಗದ ಮೇಲಿನ ದ್ವೇಷ ಅಥವಾ ಅಸೂಯೆಗಳಿಂದ ಪ್ರಚೋದಿತವಾದ ದುರುದ್ದೇಶಗಳಿಂದ ಕೂಡಿದ್ದಲ್ಲ. ಕೆ.ಜಿ.ಎನ್‌ರು ಜಾತಿ ವಾದಿಯಲ್ಲ, ಜಾತ್ಯಾತೀತವಾದಿ. ಹಿಂದುಳಿದ ಜನಾಂಗಗಳ ಹಿತಚಿಂತಕರಾಗಿ ಅವುಗಳ ಪುರೋಭಿವೃದ್ಧಿಗೆ ಶ್ರಮಿಸುತ್ತಿದ್ದರು. ಈ ಜನಾಂಗಗಳ ಸಾಂಸ್ಕೃತಿಕ ಚೌಕಟ್ಟನ್ನು ಬಿಡಿಸಿ ತೋರುವ ತೀವ್ರ ಅಧ್ಯಯನದಲ್ಲಿ ನಿರತರಾಗಿರುವ ಕೆ.ಜಿ.ಎನ್‌ರು ಪ್ರಚಲಿತ ಧರ್ಮಪಂಥಗಳ ಮೂಲದ ಬಗ್ಗೆ ಅಧಿಕಾರಯುಕ್ತ ನಿಲುವು ಸಂಪಾದಿಸಿದ್ದಾರೆ. ಇವುಗಳ ಬಳಕೆಯ ದಾರಿಯಲ್ಲಿ ತಪ್ಪು ಅಭಿಪ್ರಾಯಗಳ ಕಲ್ಪನೆ ಸಲ್ಲದು. ಕೆ.ಜಿ.ಎನ್‌ರ ಅಧ್ಯಯನ ಒಂದು ಗೊತ್ತಾದ ಕ್ಷೇತ್ರಕ್ಕೆ ಸೀಮಿತವಾಗಿಲ್ಲ. ಅದು ಸರ್ವತೋಮುಖವಾದದ್ದು. ಸಾಹಿತ್ಯ ಕಲೆಗಳ ಜೊತೆಯಲ್ಲಿ ತತ್ವಶಾಸ್ತ್ರ, ಮತ ಧರ್ಮಶಾಸ್ತ್ರ, ಸಮಾಜಶಾಸ್ತ್ರ, ಮನೋವಿಜ್ಞಾನ, ತಂತ್ರ ಮಂತ್ರವಿದ್ಯೆ, ಜಾತಿ ಜನಾಂಗಗಳ ಸಾಂಸ್ಕೃತಿಕ ಸ್ವರೂಪ ಮತ್ತು ಹಿನ್ನೆಲೆಗಳ ಅಧ್ಯಯನ ಮತ್ತು ಧಾರ್ಮಿಕ ಪಂಥಗಳು ನಂಬಿರುವ ಸಿದ್ಧಾಂತಗಳ ನಿಲುವು ಇವುಗಳನ್ನೆಲ್ಲಾ ತುಂಬಿಕೊಂಡಿರುವ ಕೆ.ಜಿ.ಎನ್‌ರು ಆಗಾಗ ತಮ್ಮ ಲೇಖನಗಳ ಮೂಲಕ ಪ್ರಕಟಿಸುವ ನಿಲುವುಗಳ ಸಂಕೀರ್ಣ ಸ್ವಭಾವ ಘಹನವಾದದ್ದು.

ಕೆ.ಜಿ.ಎನ್‌ರ ಜ್ಞಾನ ಭಂಡಾರದ ಜೊತೆಯಲ್ಲಿ ಪ್ರಾಮಾಣಿಕತೆ ಇವರ ಸಹಜ ಸ್ವಭಾವ. ಬದುಕಿನ ಯಾವ ಮಗ್ಗುಲಲ್ಲೇ ಆಗಲಿ ಇವರು ಅಪ್ರಾಮಾಣಿಕರಾಗಿ ನಡೆದಿರುವ ಕುರುಹು ಕಾಣುವುದಿಲ್ಲ. ಅಪ್ರಾಮಾಣಿಕತೆಯ ವಿರುದ್ಧ ಅವರ ಮನಸ್ಸು ಸಿಡಿದೇಳುತ್ತದೆ. ಮುಚ್ಚುಮರೆ ಇಲ್ಲದ ಬದುಕು ಕೆ.ಜಿ.ಎನ್‌ರದು. ಮಾತಿನಲ್ಲೇ ಆಗಲಿ, ನಡತೆಯಲ್ಲೇ ಆಗಲಿ ಯಾವುದೇ ಕೃತ್ರಿಮತೆ ಇರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಅಪ್ರಿಯವಾದ ಸತ್ಯವನ್ನು ನೇರವಾಗಿ ಹೇಳಲು ಅವರು ಹಿಂದೆಗೆಯುವುದಿಲ್ಲ. ಇವರು ಒಂದು ರೀತಿಯ ಪ್ರಯೋಗಿಕವಾದಿ ಹಾಗೂ ಖಂಡಿತವಾದಿ. ತಮಗೆ ಯಾವುದು ಸರಿ ಯಾವುದು ತಪ್ಪು ಎಂದು ತೋಚುತ್ತದೊ ಅದನ್ನು ಧೈರ್ಯವಾಗಿ ಹೇಳುವ ಸ್ವಭಾವ ಇವರದು. ಇವರಿಗೆ ಒಪ್ಪಿಗೆಯಾಗದ ಕೆಲಸವನ್ನು ಯಾವ ಒತ್ತಾಯಕ್ಕೂ ಮಣಿದು ಮಾಡುತ್ತಿರಲಿಲ್ಲ. ವೈಯಕ್ತಿಕ ಜೀವನದಲ್ಲೇ ಆಗಲೀ ಸಾಮಾಜಿಕ ಜೀವನದಲ್ಲೇ ಆಗಲಿ ನೀತಿ ಧರ್ಮಗಳಿಗೆ ಒಳಪಟ್ಟಿರಬೇಕೆಂಬುದು ಇವರು ನಂಬಿದ ತತ್ವ. ಪ್ರಾಮಾಣಿಕತೆ, ನಿಷ್ಕಪಟ ಸೌಶೀಲ್ಯ ಜೀವನವೇ ಇವರ ಬದುಕಿನ ಗುಟ್ಟು. ದೃಢ ನಿಲುವು, ಮುಕ್ತ ಮನಸ್ಸು, ದಿಟ್ಟತನ, ಧೈರ್ಯ, ಸಾಹಸ, ಬಿಡುವಿಲ್ಲದ ಕಾರ್ಯಾಚರಣೆ, ಆತ್ಮವಿಶ್ವಾಸ, ಕ್ರಾಂತಿಕಾರಕ ಬದುಕಿನಲ್ಲಿ ಶ್ರದ್ಧೆ ಇವು ಕೆ.ಜಿ.ಎನ್‌ರ ವ್ಯಕ್ತಿತ್ವದಲ್ಲಿ ಎದ್ದು ಕಾಣುವ ಸ್ಮರಣೀಯ ಲಕ್ಷಣಗಳು. ♦

4. ಗುದ್ದಾಡುವ ವಿದ್ವಾಂಸ

ಡಾ// ರಹಮತ್ ತರೀಕೆರೆ

ಕೆ.ಜಿ. ನಾಗರಾಜಪ್ಪನವರೆಂದರೆ ತಟ್ಟನೆ ನೆನಪಾಗುವುದು ಅವರ ಗುದ್ದಾಟದ ಗುಣ. ಲೇಖನ ಬರೆಯಲಿ, ಭಾಷಣ ಮಾಡಲಿ, ಅವರು ಯಾವುದೋ ವ್ಯಕ್ತಿಯ ಯಾವುದೋ ತತ್ವದ ಜತೆ ಜಗಳವಾಡುತ್ತಿದ್ದಾರೆಂದೇ ಅನಿಸುತ್ತದೆ. ಅವರ ಭಾಷಾ ಬಳಕೆಯಲ್ಲಿ ಹಾಗೂ ವಾಕ್ಯ ರಚನೆಯಲ್ಲಿ ಕೂಡ ಈ ಜಗಳಗಂಟಿತನದ ಲಕ್ಷಣಗಳೇ ಇವೆ. ಕೋಪ, ವ್ಯಂಗ್ಯ, ತೀವ್ರತೆ, ತಿವಿತಗಳು, ಆವೇಶ ಇವು ಅವರ ಬೌದ್ಧಿಕ ವ್ಯಕ್ತಿತ್ವದ ಭಾಗಗಳು. ಇದರ ಜತೆಗೆ 'ಹೆಂಕೊಟ್ಟೆ ಹೊಡೆತ' ಎಂಬ ಸೇಡು ತೀರಿಸಿಕೊಂಡ ಸ್ವಸಂತೋಷ ಅಲ್ಲಿ ಹೊಳೆಯುತ್ತಿರುತ್ತದೆ. ಕೆ.ಜಿ.ಎನ್. ಆಲೋಚನೆ ಮಾಡುವುದೇ ವ್ಯಗ್ರವಾದ ವರ್ಗ ಪರಿಭಾಷೆಯಲ್ಲಿ; ವೈದಿಕ-ಅವೈದಿಕ, ಬ್ರಾಹ್ಮಣ-ಶೂದ್ರ, ಕೆಳವರ್ಗ-ಮೇಲುವರ್ಗ, ಶೂದ್ರೀಕರಣ-ಸಂಸ್ಕೃತೀಕರಣ, ಅಧಿಕಾರಸ್ಥ ವರ್ಗ-ಸಾಮಾನ್ಯ ವರ್ಗ-ಎಂಬ ತಾರ್ಕಿಕ ವಿರೋಧದ ಪರಿಭಾಷೆಯಲ್ಲಿ. ಈ ವರ್ಗವಿರೋಧಿ ಪರಿಭಾಷೆಯಲ್ಲಿ ಅನೇಕ ಸರಳೀಕರಣಗಳಾಗುತ್ತಿವೆ, ಸೂಕ್ಷ್ಮಗಳು ತಪ್ಪಿಸಿಕೊಳ್ಳುತ್ತಿವೆ ಅಂತ ಆಮೇಲೆ ಅನಿಸಬಹುದು. ಆದರೆ ಕೆ.ಜಿ.ಎನ್. ಮಂಡಿಸುವ ತರ್ಕದ ಸುಳಿಯಲ್ಲಿ, ಅವರ ವಿದ್ವತ್ತಿನ ಹೊಳೆಯಲ್ಲಿ ಸಿಕ್ಕು ಸುಮ್ಮನೆ ತೇಲಿ ಹೋಗುವುದೂ ಒಂದು ಅಪೂರ್ವ ಅನುಭವವೇ.

ಪ್ರಶ್ನೆಯೆಂದರೆ ಯಾಕೆ ಈ ವ್ಯಗ್ರತೆ-ಗುದ್ದಾಟಗಳು ಸಿನಿಕತೆಯಾಗದೆ, ಪರಂಪರೆಯ ಜತೆ ವರ್ತಮಾನ ಮಾಡುತ್ತಿರುವ ಬಿರುಸು ಸಂವಾದವಾಗುತ್ತವೆ? ಇದೇ ನಾಗರಾಜಪ್ಪನವರ ವಿಮರ್ಶೆ-ಸಂಶೋಧನೆ-ಚಿಂತನೆಗಳ ಸಾಂಸ್ಕೃತಿಕ ಮಹತ್ವವನ್ನು ಹೇಳುವ ಸಂಗತಿ. ಅವರ ಗುದ್ದಾಟದಲ್ಲಿ ಗಂಭೀರ ಶ್ರದ್ಧೆಯಿದೆ. ಹುಸಿ ನಟನೆಯಿಲ್ಲ. ಪೋಸ್ ಇಲ್ಲ. ಗತದ ಜತೆ ಕೇವಲ ಹಗೆತನವಿಲ್ಲ. ಪ್ರೀತಿಯೂ ಇದೆ. ಆ ಪ್ರೀತಿಗೆ ವರ್ತಮಾನದ ಮುಖ ಇದೆ. ಪರ್ಯಾಯವನ್ನು ಹುಡುಕುವ ಕಾಳಜಿಗಳಿವೆ. ಇದರಿಂದಲೇ ಕೆ.ಜಿ.ಎನ್. ನಮ್ಮ ಕಾಲದ ಗಂಭೀರ ಸಂಸ್ಕೃತಿ ಚಿಂತಕರಲ್ಲಿ ಒಬ್ಬರಾಗುಳಿಯುತ್ತಾರೆ. ಇದು ದೃಷ್ಟಿಕೋನದ ಮಾತು.

ನಿಜವಾಗಿ ದಂಗು ಬಡಿಸುವುದು ತಮ್ಮ ಚಿಂತನೆಯನ್ನು ಮಂಡಿಸಲು ಕೆ.ಜಿ.ಎನ್. ಮಾಡಿಕೊಳ್ಳುವ ಸಿದ್ಧತೆ. ಅವರ ಪಾಂಡಿತ್ಯ ಬೆರಗುಗೊಳಿಸುತ್ತದೆ. ಸಾವಿರಾರು ವರ್ಷಗಳ ಕನ್ನಡ ಸಾಹಿತ್ಯ ಪರಂಪರೆಯ ಬಗ್ಗೆ ಒಂದೇ ಉಸಿರಿನಲ್ಲಿ ಮಾತಾಡುವ ಅನೇಕ ಜನ ವಿಮರ್ಶಕ ವಿದ್ವಾಂಸರು, ಬಿಎಂಶ್ರೀಯವರ 'ಇಂಗ್ಲೀಷ್ ಗೀತಗಳ' ಆಚೆಗೆ ಹೋಗುವುದೇ ಇಲ್ಲ. ಹೋದರೂ ಪಂಪ, ರನ್ನ, ವಚನಕಾರರು (ಅವರಲ್ಲೂ ಮೂವರು) ಹರಿಹರ, ಕುಮಾರವ್ಯಾಸ, ಜನ್ನ, ಸರ್ವಜ್ಞ ಹೀಗೆ ಎತ್ತರವಾಗಿ ಕಾಣುವ ದಿಬ್ಬಗಳ ಮೂಲಕವೇ ಕನ್ನಡ ಪರಂಪರೆಯನ್ನು ಗ್ರಹಿಸುವವರು. ಪಂಪಯುಗ, ಬಸವಯುಗ, ಕುಮಾರವ್ಯಾಸಯುಗ

ಅಂತ ಸಾಹಿತ್ಯ ಚರಿತ್ರೆಕಾರರು ಮಾಡಿಹೋದ ಹಾದಿಯ ದುಷ್ಪರಿಣಾಮದ ನಡಿಗೆಯಿದು. ಬಹಳ ಸಲ ಈ ವಿದ್ವಾಂಸರು ಮುಖ್ಯ ಕವಿಗಳ ಆಯ್ದ ಜನಪ್ರಿಯ ಪದ್ಯಗಳ ಮೂಲಕ ಕೆಲಸವನ್ನು ಸಾಗಿಸಿಬಿಡುತ್ತಾರೆ. ಕನ್ನಡ ಸಾಹಿತ್ಯ ಪರಂಪರೆಯ ಬಗ್ಗೆ ರಾಷ್ಟ್ರೀಯ ವೇದಿಕೆಗಳಲ್ಲಿ ಅಂಗ್ರೇಜಿಯಲ್ಲಿ ಮಾತಾಡುವ ವಿದ್ವಾಂಸರಿಗೆ ಪ್ರಿಯವಾದ ಹಾದಿಯಿದು. ಆದರೆ ಕೆ.ಜಿ.ಎನ್ ಕನ್ನಡದ ಪ್ರಾಚೀನ ಸಾಹಿತ್ಯದ ಜತೆ ನಡೆಸಿರುವ ಅನುಸಂಧಾನ ಬೇರೆ ತರಹದ್ದು, ವಿಸ್ತಾರವಾದುದು. 'ವೀರಭದ್ರವಿಜಯ', 'ಅಬ್ಬಲೂರು ಚರಿತೆ', 'ದೀಪ ಕಲಿಯರ ಕಾವ್ಯ' 'ಏಕೋರಾಮೇಶ್ವರ ಪುರಾಣ'-ಇವನ್ನೆಲ್ಲ ಇವರು ಎಲ್ಲಿ ಹುಡುಕುತ್ತಾರೋ ಅನಿಸುತ್ತದೆ. ಅದರಲ್ಲೂ 'ಮಧ್ಯಕಾಲೀನ' ಎಂದು ಕರೆಯುವ ಕನ್ನಡ ಸಾಹಿತ್ಯದ ಅಜ್ಞಾತ ಕವಿಗಳನ್ನೆಲ್ಲ ಅವರು ಓದತೊಡಗುತ್ತಾರೆ. ಅವರದು ಹೆದ್ದಾರಿಯಲ್ಲಿ ಪಯಣಿಸುವ ಪ್ರವಾಸಿಗನ ದೃಷ್ಟಿಯಲ್ಲ. ಚರ್ಚೆಗೆ ಬಾರದ, ಮರೆವಿಗೆ ಸಂದ, ಕೃತಿಗಳನ್ನು ಎಳೆದು ತಂದು ಕೆ.ಜಿ.ಎನ್ ತಮ್ಮ ವಾದದಲ್ಲಿ ಹಠ ಪೂರ್ವಕವಾಗಿ ಪ್ರತಿಷ್ಠಾಪಿಸುವ ಕ್ರಮ ವಿಶಿಷ್ಟವಾದುದು. ಬಸವಣ್ಣ ಕೇಂದ್ರಿತನಾಗಿರುವಂತೆ ಗ್ರಹಿಸಲಾಗಿರುವ ವಚನ ಸಾಹಿತ್ಯವನ್ನು ಅವರು ಸಹಜ ಸಾಧಕರಾದ 'ಗುಪ್ತಸಮಾಜ'ದ ವಚನಕಾರರ ಮೂಲಕ ಭೇದಿಸುತ್ತಾರೆ. ಸ್ಥಾಪಿತವಾದ 'ಲಿಂಗಾಯತ' ಸಾಂಸ್ಥಿಕ ಪರಿಕಲ್ಪನೆಯ ಒಳಗೆ 'ನಾಮಧಾರಿ ಲಿಂಗಾಯತ'ರೆಂಬ ಒಳ ವೈರುಧ್ಯವನ್ನು ಬಿಚ್ಚತೊಡಗುತ್ತಾರೆ. ಇದನ್ನು ಪ್ರಾಮಾಣಿಕ ಓದಿನ ವಿದ್ವತ್‌ಧೀರತೆ ಎಂದು ಕರೆಯಬೇಕು. ನಾಗರಾಜಪ್ಪನವರು ಮಧ್ಯಕಾಲೀನ ಸಾಹಿತ್ಯ ಕುರಿತ ತಮ್ಮ ಲೇಖನಗಳಲ್ಲಿ ಚೆಲ್ಲಾಡುವ ಒಳನೋಟಗಳಿಗೆ ಕಾರಣ, ಅವರ ವಿದ್ವತ್ತು ಮತ್ತು ಆವೇಶಗಳೇ.

ಕನ್ನಡದಲ್ಲಿ ಪ್ರಾಚೀನ ಸಾಹಿತ್ಯದ ಮೇಲೆ ಪ್ರಭುತ್ವ ಸಾಧಿಸಿದ ಅನೇಕ ಪಂಡಿತರಿದ್ದಾರೆ. ಆದರೆ ಈ ಪ್ರಾಚೀನ ಪಂಡಿತರು ಪರಂಪರೆ ಎಂಬ ಬಂಡೆಯನ್ನು ಕಷ್ಟಪಟ್ಟು ಬೆಟ್ಟದಿಂದ ಮನೆಗೆ ಉರುಳಿಸಿಕೊಂಡು ಬರುತ್ತಾರೆ. ಅದರೊಳಗಿನ ಮೂರ್ತಿಯನ್ನು ಕಡೆದು ಪಡೆಯುವುದಿಲ್ಲ. ಅಂದರೆ ಸಮಕಾಲೀನ ತುರ್ತು ತೀವ್ರವಾದ ಸಾಂಸ್ಕೃತಿಕ ನಿಲುವು ಅವರಲ್ಲಿಲ್ಲದ ಕಾರಣ ಪರಂಪರೆಯ ಜತೆ ಅರ್ಥಪೂರ್ಣ ಸಂವಾದ ಸಾಧ್ಯವಾಗುವುದಿಲ್ಲ. ಹೆದ್ದಾರಿಯಲ್ಲಿ ಕಾಣದ 'ಅಮುಖ್ಯ' ಲೇಖಕರ ಬಗ್ಗೆ ಶ್ರಮವಹಿಸಿ ಅವರು ಬರೆದರೂ ಯಾವ ಒಳನೋಟಗಳನ್ನು ಪಡೆಯಲಾಗುವುದಿಲ್ಲ. ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯ ಚರಿತ್ರೆಯಲ್ಲಿ ಇಂಥ ಪಂಡಿತರು ಕಾಣಬರುತ್ತಾರೆ. ವಚನಸಾಹಿತ್ಯದ ಬಗ್ಗೆ ರಾಶಿ ರಾಶಿ ಬರೆದ ಮತಾಭಿಮಾನಿಗಳಲ್ಲಿ ಇಂಥ ಗೊಡ್ಡು ವಿದ್ವಾಂಸರು ಸಿಗುತ್ತಾರೆ. ಅಲ್ಲಮ ಹೇಳುವಂತೆ ಕುದುರೆಯನ್ನೇರಲರಿಯದೆ ಹಲ್ಲಣವನ್ನು ಹೊತ್ತು ತಿರುಗುವ ಮಂದಿ ಇದು. ಆದರೆ ಕೆ.ಜಿ.ಎನ್ ಬೆಂಗಳೂರು ವಿಶ್ವವಿದ್ಯಾಲಯದ ಸಾಹಿತ್ಯ ಚರಿತ್ರೆ ಸಂಪುಟಕ್ಕೆಂದು ಬರೆದ 'ಕನಕದಾಸನ ಕೀರ್ತನೆ'ಗಳ ಮೇಲಿನ ಲೇಖನ ಹೀಗಲ್ಲ. ಅದು ಅಕೆಡಮಿಕ್ ಕುತೂಹಲವನ್ನು ದಾಟಿ, ತನ್ನ ವರ್ತಮಾನದ ದರ್ದಿನಲ್ಲಿ ಮಿಲಿಟಂಟ್ ಆಗಿ ನುಗ್ಗಿ ಆಸ್ಫೋಟಿಸುವ ಮಾದರಿಯ ಬರಹವಾಗಿದೆ. ಕನಕನನ್ನು ಹಾಗೂ ಕೆಳವರ್ಗದ ವಚನಕಾರರನ್ನು ಇಟ್ಟುಕೊಂಡು ಅವರು ಕನ್ನಡದ ಭಕ್ತಿಪಂಥಗಳ ಮೇಲೆ ನಡೆಸಿರುವ ಚರ್ಚೆಯಲ್ಲಿ ತುಂಬ ಮುಖ್ಯವಾದ ಮಾತುಗಳನ್ನಾಡುತ್ತಾರೆ.

ಪರಂಪರೆಯನ್ನು ಅಥವಾ ಚರಿತ್ರೆಯನ್ನು ಮರೆವಿಗೆ ಸಂದ ಸಂಗತಿಗಳ ಮೂಲಕ ನೋಡುವ ಸಬಾಲ್ಟನ್/ಉಪಸಂಸ್ಕೃತಿ ದೃಷ್ಟಿಕೋನಗಳು ಈಗ ಕನ್ನಡದಲ್ಲಿ ಏರುದನಿಯಲ್ಲಿ ಕೆಲಸಮಾಡುತ್ತಿವೆ. ಇದಕ್ಕೆ ಎಪ್ಪತ್ತು-ಎಂಬತ್ತರ ದಶಕಗಳಲ್ಲಿ ಬರೆಯಲು ಶುರುಮಾಡಿದ ಬಂಡಾಯ ಮನೋಧರ್ಮದ ಲೇಖಕರೂ ಕಾರಣವಿರಬಹುದು. ತಮ್ಮ ನಲವತ್ತನೇ ವಯಸ್ಸಿನಲ್ಲಿ ಬರೆಯಲು ಶುರುಮಾಡಿದ ಕೆ.ಜಿ.ಎನ್ ಇಂಥ ಅಲೆಯಿಂದ ಯಾವ ಬಗೆಯ ಪ್ರೇರಣೆ ಪಡೆದಿದ್ದಾರೋ ತಿಳಿಯದು. ಆದರೆ ಬಂಡಾಯದ ಸೈದ್ಧಾಂತಿಕ ಭಿತ್ತಿಯನ್ನು, ಸಾಹಿತ್ಯ ಪರಂಪರೆ ಜತೆ ವಿಮರ್ಶಾತ್ಮಕವಾಗಿ ತೊಡಗುವ ರೀತಿಯನ್ನು ರೂಪುಗೊಳಿಸಿದವರಲ್ಲಿ ಅವರೂ ಒಬ್ಬರು. ಈ ಸಬಾಲ್ಟನ್ ದಲಿತ / ಉಪಸಂಸ್ಕೃತಿಗಳ ನೆಲೆಯ ಹಾದಿಯಲ್ಲಿ ನಡೆದು ಏನೆಲ್ಲ ತೊಡಕುಗಳಾದವು ಎನ್ನುವುದು ಬೇರೆ ಪ್ರಶ್ನೆ. ಆದರೆ ಶಿವಪ್ರಕಾಶರಂಥ ಲೇಖಕರಲ್ಲಿ ಈ ಹಾದಿಯು ಹಾದು ಬೇರೆ ಬೇರೆ ಆಯಾಮ ಪಡೆಯುತ್ತಿರುವುದರ ಹಿಂದೆ ಕೆ.ಜಿ.ಎನ್. ತರಹದ ವಿದ್ವಾಂಸರ ಕೆಲಸಗಳಿವೆ ಎಂದು ನನಗನಿಸುತ್ತದೆ.

ನಾಗರಾಜಪ್ಪನವರಿಗೆ ಅವೈದಿಕ ತಂತ್ರ ಪಂಥಗಳ ಗುಪ್ತಸಮಾಜದ ಬಗ್ಗೆ ತುಂಬ ಕುತೂಹಲ. ಕನ್ನಡದಲ್ಲಿ ಈ ಬಗ್ಗೆ ಆಳವಾದ ಅಭ್ಯಾಸವುಳ್ಳವರಲ್ಲಿ ಅವರೊಬ್ಬರು. ಈ ಪಂಥಗಳನ್ನು ಹುಡುಕಿಕೊಂಡು ಅವರು ತಿರುಗಾಟ ಮಾಡಿದ್ದಾರೆ. ಅಂಥ ಕೆಲವು ಗುಪ್ತ ಸಮಾಜಗಳಲ್ಲಿದ್ದು ಬಂದ ಅನುಭವ ಕೂಡ ಅವರಿಗಿದೆ. ಅವರ ಸಂಸ್ಕೃತಿ ಚಿಂತನೆಯಲ್ಲಿ ವ್ಯಕ್ತವಾಗುವ ಸಬಾಲ್ಟನ್ ದೃಷ್ಟಿಕೋನಕ್ಕೂ, ಅವೈದಿಕ ಪಂಥಗಳ ಬಗೆಗಿನ ಅವರ ಸೆಳೆತಕ್ಕೂ ಹೀಗೆ ಒಳ ಸಂಬಂಧಗಳಿವೆ. ತಾವೇ ನಿಜವೆಂದು ಎದ್ದು ಅಬ್ಬರಿಸುವ 'ವೈದಿಕ' ಪ್ರತಿಷ್ಠಿತ ತಾತ್ವಿಕ ದರ್ಶನಗಳಿಗೆ ಬಲವಾದ ಪ್ರತಿ ಸವಾಲನ್ನು ಹಾಕಿದ ಹಾಗೂ ಜಾತಿಮತ ನಿರಾಕರಿಸಿಕೊಂಡು ದುಡಿಯುವ ಜನಸಮುದಾಯದ ಒಳಗೆ ಆಳವಾಗಿ ಬೇರುಬಿಟ್ಟಿದ್ದ ಈ 'ಅವೈದಿಕ' ದರ್ಶನಗಳನ್ನು ಚರ್ಚೆಗೆ ಒಳಪಡಿಸುವಲ್ಲಿ ಅವರಿಗಿರುವ ಶ್ರದ್ಧೆ, 'ಲೋಕಾಯತ'ದ ದೇವೀಪ್ರಸಾದ ಚಟ್ಟೋಪಾಧ್ಯಾಯರನ್ನು ನೆನಪಿಸುತ್ತದೆ.

ಚರಿತ್ರೆಯಲ್ಲಿ 'ಅವೈದಿಕ'ದ ದರ್ಶನಗಳು ಸಾಧಿಸಿದ್ದ ತಾತ್ವಿಕ ಎತ್ತರವನ್ನು ತುಳಿದುಹಾಕಿದ ಅಧಿಕಾರಸ್ಥ ಶಕ್ತಿಗಳ ಅಧಿಕಾರಸ್ಥ ಧರ್ಮ ಹಾಗೂ ಐಡಿಯಾಲಜಿಗಳ ಬಗೆಗಿನ ತೀವ್ರ ಅರಿವು ಕೆ.ಜಿ.ಎನ್. ಅವರ ಸಾಹಿತ್ಯ, ಸಂಸ್ಕೃತಿ, ಚರಿತ್ರೆ ಬಗೆಗಿನ ಬರಹಗಳ ಹಿಂದಿನ ಸ್ಥಾಯಿಪ್ರೇರಣೆ. ಅವರು ಯಾವ ವಿಷಯದ ಬಗ್ಗೆ ಬರೆಯಲೂ ಶುರುಮಾಡಿದರೂ ಬರೆಯುವುದು ಮಾತ್ರ ಇದೇ ಕಥನವನ್ನು. ಅವರ ಸಂಸ್ಕೃತಿ ಚಿಂತನೆ, ಸಾಹಿತ್ಯವಿಮರ್ಶೆ, ಸಂಶೋಧನೆಗಳೆಲ್ಲವೂ ಏಕೀಭವಿಸುವುದು ಹೀಗೆ. ಎಷ್ಟೋ ಬಾರಿ ಕೆ.ಜಿ.ಎನ್. ಅಸ್ತವ್ಯಸ್ತ ವಾಕ್ಯಗಳನ್ನು ಬರೆಯುತ್ತಾರೆ. ಎಲ್ಲೆಲ್ಲೋ ಹರಿದು ತರ್ಕ ತಪ್ಪುವಂತೆ ಮಾಡುತ್ತಾರೆ. ಒಂದು ಅಭಿಪ್ರಾಯವನ್ನು ಮತ್ತೆ ಬೇರೆಬೇರೆ ರೀತಿಯಲ್ಲಿ ಮಂಡಿಸುತ್ತಾರೆ. ಅವರ ಲೇಖನಗಳೆಲ್ಲ ಎಂಬತ್ತು ತೊಂಬತ್ತು ಪುಟಗಳ ಸೆಂಚುರಿ ಲೇಖನಗಳು ಎಂಬುದನ್ನು ನೆನೆಯಬೇಕು.

ಅವರ ಉಗ್ರಗಾಮಿತ್ವ ನಮ್ಮ ಸವೆದ ಗ್ರಹಿಕೆಗಳನ್ನು ಒಡೆದುಹಾಕುತ್ತದೆ.

ಹೊಸದಿಕ್ಕುಗಳಿಗೆ ಎಳೆದು ಹಾಕಿ ಶಾಕ್ ಕೊಡುತ್ತದೆ. ತನ್ನ ಅಪಾರವಾದ ಓದಿನ ಕಣಜದಿಂದ ಉದಾಹರಣೆಗಳನ್ನು ಮೊಗೆಮೊಗೆದು ತಂದು ಮುಂದಿಟ್ಟು ವಿಸ್ಮಯಗೊಳಿಸುತ್ತದೆ. ಅದಕ್ಕೆ ಹೇಳಿದ್ದು ಕೆ.ಜಿ.ಎನ್. ಬರವಣಿಗೆ ಎಂದರೆ ಅದೊಂದು ತಾತ್ವಿಕವಾದ ಹೊಡೆದಾಟ ಎಂದು, ಒಳನೋಟಗಳ ಚೆಲ್ಲಾಟ ಎಂದು.

ಕೇವಲ ಒಂದು ಪುಸ್ತಕ ಹಾಗೂ ಮೂರ್‍ನಾಲ್ಕು ಲೇಖನಗಳಿಂದ ಕೆ.ಜಿ.ಎನ್. ನಮ್ಮ ತಲೆಮಾರಿನ ಅನೇಕ ಯುವಕರ ಆಲೋಚನೆಯ ಮೇಲೆ ಬಲವಾದ ಪ್ರಭಾವ ಬೀರಿದರು. ಅನಗತ್ಯವಾಗಿ ವಿದೇಶಿ ವಿದ್ವಾಂಸರನ್ನು ಅವರ ಥಿಯರಿಗಳನ್ನು ಮೈಮೇಲೆ ಹಾಕಿಕೊಳ್ಳದೆ ದೇಸೀ ಪರಂಪರೆಯ ಜತೆ ಗಾಢ ಸಹವಾಸ ಮಾಡಿಯೇ ಚಿಂತನೆಯನ್ನು ಹುಟ್ಟಿಸುವ ಅವರು, ನೆಲದೊಳಗೆ ಬೇರುಬಿಟ್ಟು ನೆಳಲು ಚೆಲ್ಲಿದ ಮರವಿದ್ದಂತೆ. ಆದರೆ ಕನ್ನಡ ಜಾನಪದ ಪರಂಪರೆಯನ್ನು ಅಥವಾ ಆಧುನಿಕ ಕನ್ನಡ ಸಾಹಿತ್ಯವನ್ನು ತಮ್ಮ ಚಿಂತನೆಯಲ್ಲಿ ಸೇರಿಸಿಕೊಳ್ಳಲು ಅವರು ತೋರುವ ಹಿಂಜರಿಕೆಗಳು ದೊಡ್ಡ ಕೊರತೆಗಳಂತೆ ಭಾಸವಾಗುತ್ತವೆ. ಅವರ ಭಾವಾವೇಶವು ಸಂಸ್ಕೃತಿ ಚಿಂತನೆಯ ಸಂಕೀರ್ಣ ಹಾಗೂ ಸೂಕ್ಷ್ಮನೆಲೆಗಳಿಗೆ ವಿಸ್ತರಿಸದಂತೆ ತಡೆದುಬಿಡುತ್ತದೆ ಎಂದು ಅನಿಸುತ್ತದೆ. ನೆಲದೊಳಗೆ ಬೇರುಬಿಟ್ಟ ಮರ, ತುಂಬ ದಟ್ಟವಾದ ನೆಳಲನ್ನು ಚೆಲ್ಲಿಬಿಟ್ಟರೆ, ತುಸು ಕತ್ತಲು ಕವಿದು ಬಿಡುತ್ತದೆ ತಾನೇ? ♦

"ನನ್ನ ಗೆಳೆಯರೊಬ್ಬರು ಕೆಳವರ್ಗದ ಬರಹಗಾರರ ಸಾಹಿತ್ಯ ಎಷ್ಟು ಅಥೆಂಟಿಕ್ ಎಂದು ಪ್ರಶ್ನಿಸಿದರು. ಅದಕ್ಕೆ ನನ್ನ ಉತ್ತರ: ಈ ದೇಶದ ಒಟ್ಟು ಜನರಲ್ಲಿ ಶೇ. 5 ಮಂದಿ ಇರುವ ವರ್ಗದ ಬರಹಗಾರರ ಕೃತಿಗಳ ಅಥೆಂಟಿಸಿಟಿಯನ್ನು ಶೇ. 95 ಮಂದಿ ಇರುವ ವರ್ಗದವರು ಪ್ರಶ್ನಿಸದೆ ಒಪ್ಪಿ ಬಾಯಿ ಮುಚ್ಚಿಕೊಂಡಿರುವಾಗ, ಶೇ.5 ಮಂದಿ ಇರುವ ವರ್ಗದ ಬರಹಗಾರರರು ಶೇ. 95 ಮಂದಿ ಇರುವ ವರ್ಗದ ಬರಹಗಾರರ ಕೃತಿಯ 'ಅಥೆಂಟಿಸಿಟಿ' ಯನ್ನು ಒಪ್ಪದೆ ಪ್ರಶ್ನಿಸುವುದರಲ್ಲಿ ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳ ಸಂಬಂಧವ ದುರಂತವನ್ನು ಗುರುತಿಸಬಹುದು"

–ಪ್ರೊ// ಕೆ.ಜಿ.ನಾಗರಾಜಪ್ಪ.

5. ಪುಟಿದೆದ್ದ ಚಿನ್ನ

ಕೆ. ದೊರೆಸ್ವಾಮಿ ಅಯ್ಯಂಗಾರ್

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಕಲ್ಲೂರು ಬೆಟ್ಟಗುಡ್ಡ ಬಂಡೆಗಳಿಲ್ಲದ ಗ್ರಾಮ. ರವೆಯಷ್ಟು ಕಲ್ಲೂ ದೊರಕದ ಈ ಗ್ರಾಮಕ್ಕೆ ಕಲ್ಲೂರೆಂಬ ಹೆಸರು ಬರಲು ಕಾರಣವೇನೆಂಬುದು ಸೋಜಿಗದ ಅಂಶ.

"ಪುರಾಣಮಿತ್ಯೇವ ನ ಸಾಧು ಸರ್ವಂ". ಹಿಂದಿನ ಕಥೆ ನಾಟಕ ಕಾವ್ಯ ಮುಂತಾದ ಸಾಹಿತ್ಯ ಪ್ರಕಾರಗಳೆಲ್ಲವೂ ಹಳೆಯ ಕಂತೆಗಳೆಂದು ಜನ ಸಾಮಾನ್ಯವಾಗಿ ಆಡಿಕೊಳ್ಳುತ್ತಾರೆ. ಆದರೆ ಹಳೆಯದರಲ್ಲಿ ಹುರುಳಿದೆ, ಅರ್ಥವಿದೆ, "old is gold" ಎಂಬಂತೆ. ಅಂದ ಮೇಲೆ ಹಲವಾರು ಸ್ಥಳ ಪುರಾಣಗಳನ್ನು ಜ್ಞಾಪಿಸಿಕೊಳ್ಳುವುದು ಅತ್ಯವಶ್ಯಕ.

ವ್ಯಾಸ ಕೃತ ಮಹಾಭಾರತ ಒಂದ ಲಕ್ಷಗ್ರಂಥ; ಮಹಾಪುರಾಣ ಹಾಗೂ ಇತಿಹಾಸ. ಸುಧನ್ವನ ಕಾಳಗದ ವೈಖರಿಯನ್ನು ಒಳಗೊಂಡಿದೆ. ತರುಣ ರಾಜ ಸುಧನ್ವ ರಾಜ್ಯವಾಳುತ್ತಿದ್ದ ಪುರಾಣ ಪ್ರಸಿದ್ಧವಾದ ಸ್ಥಳವೆಂದರೆ ಚಂಪಕಾಪುರಿ. ಇದೇ ಈಗಿನ ಸಂಪಿಗೆ. ದೊರೆ ಶೃಂಗಾರಪ್ರಿಯನಾಗಿದ್ದರೂ ಯುದ್ಧವೀರ. ಇವನ ಸಾಹಸ ಮತ್ತು ದೈವಭಕ್ತಿ ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಮನಮೋಹಕವಾಗಿ ಮೈವೆತ್ತಿದೆ. ಈ ರಾಜನ ಅರಮನೆ ಹಾಗೂ ಕೋಟೆ ಕೊತ್ತಲುಗಳನ್ನು ಕಟ್ಟಲು ಬೇಕಾದ ನಯವಾದ ಕಲ್ಲುಗಳನ್ನು ಒದಗಿಸಿಕೊಡುವುದು ಆಗಿನ ಕಲ್ಲುಕುಟಿಗರ ಕರ್ತವ್ಯವಾಗಿತ್ತು. ಆದಕಾರಣ ಸುಮಾರು ಈ ಸ್ಥಳಕ್ಕೆ 'ಕಲ್ಲೂರು' ಎಂಬ ಹೆಸರು ಅನ್ವರ್ಥವಾಗಿರಬಹುದೆಂದು ತೋರುತ್ತದೆ.

ಕಲ್ಲೂರು ಶಿಂಷಾ-ಕದಂಬ ನದಿಗಳ ಸಂಗಮ ಸ್ಥಳ. ಧಾರ್ಮಿಕ ತೇಜಸ್ಸಿಗೇನೂ ಕಡಿಮೆಯಿಲ್ಲದ ನೆಲೆ. ಕಲ್ಲೂರಿ ನಾಯಕನೆಂಬ ಪಾಳೆಯಗಾರ ಊರಿನ ಸುತ್ತಲೂ ಕೋಟೆ ಕಂದಕಗಳನ್ನು ನಿರ್ಮಿಸಿದ್ದಲ್ಲದೆ ಶ್ರೀ ವಾಸುದೇವ ಸ್ವಾಮಿಯ ದೇವಸ್ಥಾನ, ಹೆಬ್ಬಾಗಿಲಿನಲ್ಲಿ ಅಭಯ ಹಸ್ತದ ಮಾರುತಿಯ ದೇಗುಲ ಮುಂತಾದುವನ್ನು ನಿರ್ಮಾಣ ಮಾಡಿದನೆಂಬುದಕ್ಕೆ ಐತಿಹಾಸಿಕ ಆಧಾರಗಳಿವೆ. ಬಿಲ್ವಾಜಮ್ಮನೆಂಬ ಕನ್ಯೆಯ ಆರಾಧ್ಯ ದೈವವಾಗಿದ್ದ ಶ್ರೀ ರುದ್ರೇಶ್ವರಸ್ವಾಮಿಯ ದೇವಸ್ಥಾನ, ನಯನ ಮನೋಹರವಾಗಿ ಕಂಗೊಳಿಸುವ ಕಲ್ಲೇಶ್ವರ ಸ್ವಾಮಿಯ ಲಿಂಗಮೂರ್ತಿ, ಪವಾಡಪುರುಷರಾಗಿದ್ದ ರುದ್ರಮುನಿಸ್ವಾಮಿಯವರ ಗುರುಮಠ, ಕಲ್ಲೂರಮ್ಮನ ದೇಗುಲ-ಇವು ಈ ಊರಿನಲ್ಲಿ ಇಂದಿಗೂ ಹೆಸರೆತ್ತಿವೆ.

ಕಲ್ಲೂರು ಕಲೆಯೂರಾಗಿತ್ತೆಂಬುದಕ್ಕೆ ಹಲವಾರು ನಿದರ್ಶನಗಳಿವೆ. "ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪಿ ಏಕಂ ಸಮಾರಾಧನಮ್" ಎಂಬ ಕಾಳಿದಾಸ ಮಹಾಕವಿಯ ಮಾತಿನ ಸತ್ಯಕ್ಕೆ ಕಲ್ಲೂರು ಅರ್ಥವತ್ತಾದ ತವರು. ಇಲ್ಲಿ ಅನೇಕರು ನಟನಟಿಯರು, ಕಲಾಪಿದರು ಇದ್ದರು. ಅಂದಮೇಲೆ ಇದು ಕಲಾಕ್ಷೇತ್ರವೆನಿಸಿ ಹಾಗೂ ಶ್ರೀರಾಮ ಸಾನ್ನಿಧ್ಯದಿಂದ ಪುಣ್ಯಕ್ಷೇತ್ರವೂ ಆಗಿದೆ; ಕಲೆಯ ಬೀಡೂ ಆಗಿದೆ.

ಇಂಥ ಕಲೆಯ ಹಿನ್ನೆಲೆಯುಳ್ಳ ಕ್ಷೇತ್ರದಲ್ಲಿ ಹುಟ್ಟಿದವರು ನಾಗರಾಜಪ್ಪನವರು;

ಕಡುಬಡ ಕುಟುಂಬವೊಂದರಲ್ಲಿ ಜನ್ಮತಾಳಿದವರು. 'ಹಗಲು ಅತ್ತರೆ ಹೊಟ್ಟೆಗೆ ಅನ್ನವಿಲ್ಲ, ಇರುಳು ಅತ್ತರೆ ದೀಪಕ್ಕೆ ಎಣ್ಣೆಯಿಲ್ಲ' ಎಂಬ ಧಾರುಣ ಪರಿಸ್ಥಿತಿ ಇವರದು. ತಂದೆಯ ಒಲವರಿಯದ ಇವರು ತಮ್ಮ ಬಡತಾಯಿಯ ವಾತ್ಸಲ್ಯದ ಮಡಿಲಿನಲ್ಲಿ ಬೆಳೆದವರು. ತಮ್ಮ ಹುಟ್ಟೂರಿನಲ್ಲಿ ಭೂಮಿ ಕಾಣೆಗಳಿಲ್ಲ; ತಲೆ ಮರೆಸಿಕೊಳ್ಳಲು ಜೋಪಡಿಯೂ ಇಲ್ಲ; ತನ್ನನ್ನು ಒಲಿಪಿಸಿಂದ ಸಾಕಿದ ತಾಯಿಯೂ ಇತ್ತೀಚೆಗೆ ತೀರಿಕೊಂಡರು; ನಾನೀಗ ಅನಾಥನೆಂದು ಕಂಬನಿ ಮಿಡಿದರು ನಾಗರಾಜಪ್ಪನವರು.

ಇವರು ತಮ್ಮ ಬಾಲ್ಯವನ್ನು ಬಹಳ ಕಷ್ಟಪರಂಪರೆಗಳ ಒಡಲಿನಲ್ಲಿ ಸಿಕ್ಕಿಕೊಂಡು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿಕೊಂಡು ಮುಂದಾವ ಗತಿ ತನಗೆಂದು ಕಲ್ಲೂರಿನಲ್ಲಿಯೇ ಯೋಚಿಸುತ್ತಿದ್ದರು. ಆ ಸಮಯಕ್ಕೆ ಸರಿಯಾಗಿ ಇಂದಿಗೆ ನಲವತ್ತೇಳು ವರ್ಷಗಳ ಹಿಂದೆ ಬಾಣಸಂದ್ರದ ಶ್ರೀ ಹುಚ್ಚೇಗೌಡರ ನೇತೃತ್ವದಲ್ಲಿ ಪ್ರೌಢಶಾಲೆ ಕಡಬದಲ್ಲಿ ಸ್ಥಾಪಿತವಾಯಿತು. ನನ್ನನ್ನು ಶಾಲೆಯ ಮುಖ್ಯೋಪಾಧ್ಯಾಯನನ್ನಾಗಿ ನೇಮಿಸಿದರು. ಆಗ ಯಾವ ಸೌಕರ್ಯಗಳೂ ಇಲ್ಲದಿದ್ದರೂ ನಾನು ಬೆಂಗಳೂರಿನಿಂದ ಬಂದು ಶಾಲೆಯ ಕಾರ್ಯಭಾರಗಳನ್ನು ವಹಿಸಿಕೊಂಡೆ. ತಿಂಗಳ ಸಂಬಳ ಅತ್ಯಂತ ಕಡಿಮೆಯಾಗಿದ್ದರೂ ಕೆಲವರು ಶಿಕ್ಷಕರು ಕೆಲಸಕ್ಕೆ ಸೇರಿಕೊಂಡರು. ಅವರಿಗೆ ಸಂಬಳಕ್ಕಿಂತ ಸೇವೆಯೇ ಮಿಗಿಲಾಯಿತು. ಪದವೀಧರರಾಗಿದ್ದ ಅವರಿಗೆ ಶಿಕ್ಷಣ ವೃತ್ತಿಗಿಂತ ಶ್ರೇಷ್ಠವಾದ ವೃತ್ತಿ ಬೇರೊಂದಿಲ್ಲವೆಂಬುದು ಮನವಟ್ಟಾಯಿತು. ಶಾಲೆಯ ಎಂಟನೆಯ ತರಗತಿಗೆ ಸುತ್ತುಮುತ್ತಿನ ಗ್ರಾಮಗಳಿಂದ ಬಂದು ಅನೇಕ ವಿದ್ಯಾರ್ಥಿಗಳು ಸೇರಿದರು. ಹೀಗೆ ಬಂದವರಲ್ಲಿ ಕಲ್ಲೂರಿನ ನಾಗರಾಜಪ್ಪನವರೂ ಒಬ್ಬರು; ಕಡುಬಡತನದ ಬಾಲಕ. ನಿತ್ಯವೂ ಮುಂಜಾನೆ ಎದ್ದು ತಮ್ಮ ತಾಯಿ ನೀಡಿದ ತಂಗಳನ್ನು ತಿಂದುಕೊಂಡು ಆರುಮೈಲಿ ದೂರದಿಂದ ನಡೆದುಕೊಂಡು ಸಕಾಲಕ್ಕೆ ನನ್ನ ಶಾಲೆಗೆ ಬರುತ್ತಿದ್ದರು. ಕೇವಲ ಬಡ ಬಾಲಕ; ದೂರದಿಂದ ನಡೆದು ಬರುತ್ತಿದ್ದ ಅವನ ಏದುಸಿರನ್ನು ಕಂಡರೆ ನನಗೆ ಸಂಕಟವುಕ್ಕಿ ಬರುತ್ತಿತ್ತು. ತರಗತಿಯಲ್ಲಿ ಆಗ ಐವತ್ತು ಬಾಲಕ ಬಾಲಕಿಯರು ಮಾತ್ರ. ಅವರಿಗೆ ಇಂಗ್ಲೀಷ್ ಗದ್ಯ-ಪದ್ಯ ಪಾಠಗಳನ್ನು ಕಲಿಸುತ್ತಿದ್ದೆ.

ಎಂಟನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೆ ನಾಗರಾಜಪ್ಪ ಉತ್ತೀರ್ಣನಾಗಿ ಶ್ರದ್ಧೆಯಿಂದ ಮುಂದುವರಿಯುತ್ತ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಕಾಲೇಜಿನ ಶಿಕ್ಷಣಕ್ಕೆ ತೆರಳಿದ. ನಾಗರಾಜಪ್ಪ ನನ್ನ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ಆತನ ದಿಟ್ಟತನವನ್ನೂ ಗುರುಭಕ್ತಿಯನ್ನೂ ನಾನು ಕಾಣುತ್ತಿದ್ದೆ. ಎಲ್ಲ ಪ್ರಶ್ನೆಗಳಿಗೂ ಬಹಳ ಧೈರ್ಯದಿಂದ ಉತ್ತರಿಸುತ್ತಿದ್ದುದು ನನಗೆ ಇಂದಿಗೂ ನೆನಪಿಗೆ ಬರುತ್ತಿದೆ. ಬೆಳೆಯುವ ಪಯಿರು ಮೊಳಕೆಯಲ್ಲಿಯೇ ಗೊತ್ತಾಗುತ್ತದೆಂಬುದಕ್ಕೆ ಆತನ ಈಗಿನ ಬರವಣಿಗೆ ಮತ್ತು ಭಾಷಣಗಳಿಂದ ಕಂಡು ಬರುತ್ತಿದೆ. ಮಹಾರಾಜಾ ಕಾಲೇಜಿನಲ್ಲಿದ್ದಾಗ ಡಾಕ್ಟರ್ ತ.ಸು. ಶಾಮರಾಯರ ಹಾಗೂ ಡಾಕ್ಟರ್ ಜಿ.ಎಸ್. ಶಿವರುದ್ರಪ್ಪ ಮುಂತಾದ ಅಚ್ಚುಮೆಚ್ಚಿನ ಸಾಹಿತಿಗಳ ಆಶ್ರಯದಲ್ಲಿ ಮುಂದುವರಿದು ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಹೆಸರಾಂತ ವಿದ್ವಾಂಸರಾಗಿದ್ದಾರೆ; ಬಡತನದ ಮೂಸೆಯಿಂದ ಪುಟಿದೆದ್ದ ಚಿನ್ನದ ಕಿಡಿಯಾಗಿದ್ದಾರೆ ಪ್ರೊಫೆಸರ್ ನಾಗರಾಜಪ್ಪ. ◆

6. ಕೆ.ಜಿ.ಎನ್. ಅವರಿಗೆ ಅಭಿನಂದನೆ

ವೀಚಿ

ನಾನು ತುಮಕೂರು ಪುರಸಭೆಯ ಅಧ್ಯಕ್ಷನಾಗಿದ್ದ ಹೊಸತು. ಆಗ ಕೆ.ಜಿ. ನಾಗರಾಜಪ್ಪನವರು ಸಿದ್ಧಗಂಗಾ ವಿಜ್ಞಾನ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದರು. ನನ್ನ ಆಫೀಸಿಗೆ ಒಂದು ದಿನ ಬಂದು "ನಮ್ಮ ಕಾಲೇಜಿನಲ್ಲಿ ಗಣಪತಿ ಇಟ್ಟಿದ್ದೇವೆ. ನಾಳೆ ವಿಸರ್ಜನೆ. ಇಂದು ನೀವು ಮಾತಾಡಬೇಕು" ಎಂದು ಕೇಳಿದರು. "ಏನು ಕಳೆದುಕೊಳ್ಳಬೇಕು, ನಡೆಯಿರಿ ಮಾತಾಡೋಣ" ಎಂದು ಹೇಳಿ ಹೋದೆ. ಗಣಪತಿಯ ಬಗೆಗಿನ ಪೌರಾಣಿಕ ಹಿನ್ನೆಲೆಯ ಕತೆಯ ಬಗೆಗೆ ನನ್ನಲ್ಲೇನೂ ಹೆಚ್ಚಿನ ಬಂಡವಾಳವಿರಲಿಲ್ಲ. ಆದರೂ ತಿಳಿದಿದ್ದ ಎರಡು ಸಂಗತಿಗಳನ್ನು ಅಚ್ಚುಕಟ್ಟಾಗಿ ನಿರೂಪಿಸಿದೆ. ಅವೆರಡೂ ಗಣಪತಿಯ ಬುದ್ಧಿವಂತಿಕೆಗೆ ಸಂಬಂಧಿಸಿದವೇ ಆಗಿದ್ದವು. ಅದರಲ್ಲಿ ಒಂದು ವೇದವ್ಯಾಸರು ತಾವು ರಚಿಸಲಿರುವ ಮಹಾಭಾರತಕ್ಕೆ ಲಿಪಿಕಾರರನ್ನಾಗಿ ಗಣಪನನ್ನು ಸೇರಿಸಿಕೊಂಡದ್ದು. ವ್ಯಾಸರು ನಿಲ್ಲಿಸದಂತೆ ಒಂದೇ ಸಮನಾಗಿ ಹೇಳುತ್ತಾ ಹೋಗುವುದನ್ನು ಗಣಪತಿ ತಡೆಯಿಲ್ಲದಂತೆ ಬರೆದುಕೊಳ್ಳಬೇಕು. ಇದು ವ್ಯಾಸರ ಕರಾರು. ಅದಕ್ಕೆ ಗಣಪತಿಯ ತಿದ್ದುಪಡಿಯೇನೆಂದರೆ ವ್ಯಾಸರು ಹೇಳಿದ್ದನ್ನು ಅರ್ಥ ಮಾಡಿಕೊಂಡು ಬರೆಯುವವರೆಗೆ ಮುಂದಿನ ಶ್ಲೋಕವನ್ನು ಹೇಳಬಾರದು ಎಂದು.

ಇನ್ನೊಂದು, ಜಗತ್ತನೆಲ್ಲ ತನ್ನ ಇಬ್ಬರು ಮಕ್ಕಳಲ್ಲಿ ಯಾರು ಬೇಗ ಸುತ್ತಿ ಕೈಲಾಸಕ್ಕೆ ಬರುತ್ತಾನೋ ಅವನೇ ಮಹಾಶಕ್ತಿಶಾಲಿ ಹಾಗೂ ಬುದ್ಧಿಶಾಲಿ ಎಂದು ಶಿವ ಆಹ್ವಾನ ಕೊಟ್ಟದ್ದು. ಇದು ಕಿವಿಗೆ ಬಿದ್ದ ಕೂಡಲೇ ಷಣ್ಮುಖ ಬಹಳ ಬಿಡುಬೀಸಾಗಿ ತನ್ನ ವಾಹನವಾದ ನವಿಲನ್ನೇರಿ ಬಿರುಸಿನ ಪರ್ಯಟನಕ್ಕೆ ಸಿದ್ಧನಾಗಿ ಹೊರಟು ಹೋದನಂತೆ. ಆದರೆ ಆನೆ ಸೊಂಡಿಲಿನ ಹೊಟ್ಟೆ ಡುಬ್ಬಣ್ಣನಾದ ನಮ್ಮ ಎಮ್ಮೆ ತಮ್ಮಣ್ಣ ಗಣಪತಿ ಕುಳಿತ ಜಾಗದಿಂದ ಎದ್ದವನೇ ಶಿವನನ್ನು ಮೂರು ಸುತ್ತು ಹಾಕಿ ಸಕಲ ಲೋಕಗಳೂ ನಿನ್ನಲ್ಲೇ ಅಡಗಿರುವ ಕಾರಣ ನಾನೇ ಗೆದ್ದೆ ಎಂದು ಚಪ್ಪಾಳೆ ತಟ್ಟಿ ಕುಣಿದಾಡಿ ನಾನೇ ಶಕ್ತಿಶಾಲಿ ಮತ್ತು ಬುದ್ಧಿವಂತ ಎಂದು ಸ್ವಘೋಷಣೆ ಮಾಡಿ ಶಿವನ ತಲೆದೂಗಿಸಿದನಂತೆ. ಆದ್ದರಿಂದ ಗಣಪತಿಯನ್ನು ಕಾಲೇಜಿನಲ್ಲಿ ಇಟ್ಟು ಆರಾಧಿಸುವ ನೀವು ಗಣಪತಿಯು ವ್ಯಾಸರು ಹೇಳಿದ ಮಹಾಭಾರತವನ್ನು ಅರ್ಥ ಮಾಡಿಕೊಂಡು ಅಂಕಿಸುತ್ತ ಹೋದಂತೆ ನಿಮ್ಮ ಗುರುಗಳು ಹೇಳಿದ್ದನ್ನು ಚೆನ್ನಾಗಿ ತಿಳಿದು ಬರೆಯುವುದನ್ನು ಕಲಿಯಬೇಕು. ಜೊತೆಗೆ ಗಣೇಶನ ಹಾಗೆ ಬುದ್ಧಿವಂತಿಕೆ ತೋರುವುದನ್ನು ಕಷ್ಟ ಪಟ್ಟು ರೂಢಿಸಿಕೊಂಡು ಜೀವನದ ಸ್ಪರ್ಧೆಯಲ್ಲಿ ಗೆಲವು ಸಾಧಿಸಲು ಅಣಿಯಾಗಬೇಕೆಂದು ತಿಳಿಸಿದೆ.

ಸುದೀರ್ಘ ಭಾಷಣಕ್ಕೆ ತೊಡಗದೆ ಸಂದರ್ಭಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಹೇಳಿ ಕೆ. ಜಿ .ನಾಗರಾಜಪ್ಪನವರಿಂದ ಪಾರಾಗಿ ಬಂದಿದ್ದೆ. ಇದಾದ ಕೆಲವು ದಿನಗಳ ಮೇಲೆ ಅವರ ಕಾಲೇಜಿಗೆ ಶಿವರಾಮ ಕಾರಂತರು ಬಂದಿದ್ದರು. ಆ ದಿನವೂ ಅಧ್ಯಕ್ಷತೆಗೆ

ನಾಗರಾಜಪ್ಪ ನನ್ನನ್ನೇ ಕರೆದೊಯ್ದರು. ಹೀಗಾಗಿ ನನ್ನ ಅವರ ಬಾಂಧವ್ಯ ಸುಮಧುರವಾಗಿ ಕುದುರಿ ಅವರನ್ನು ಹುಡುಕಿ ಆಗಾಗ ನಾನು ಹೋಗುವುದು, ನನ್ನನ್ನು ಹುಡುಕಿಕೊಂಡು ಅವರು ಬರುವುದು ಶುರುವಾಯಿತು.

ಇದೇ ಸರಿಸುಮಾರಿನಲ್ಲಿ ಜಿ. ನಾರಾಯಣರವರು ಬೆಂಗಳೂರಿನ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ತುಮಕೂರಿನಲ್ಲಿ ಮೊದಲ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಸುವ ಏರ್ಪಾಟು ಮಾಡಿದೆವು. ಆರ್. ಎಸ್. ಆರಾಧ್ಯರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲವದು. ತುಂಬ ಒಳ್ಳೆಯ ಕೆಲಸಗಾರರಾಗಿದ್ದ ಹಿಂದಿ ಉಪನ್ಯಾಸಕರಾದ ಶೇಷಾದ್ರಿಯವರು ಕಾರ್ಯದರ್ಶಿ, ವಿಜಯವಾಣಿ ಗುಂಡೂರಾಯರು ಉಪಾಧ್ಯಕ್ಷರಾಗಿದ್ದರು. ಜಿಲ್ಲಾ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷನಾಗಿ ನಾನೇ ಇದ್ದೆ. ಒಳ್ಳೆಯ ಅದ್ದೂರಿಯ ಏರ್ಪಾಡುಗಳನ್ನು ಮಾಡಿ ಬಹಳ ಚೆನ್ನಾಗಿ ಸಮ್ಮೇಳನವನ್ನು ಎರಡು ದಿನಗಳ ಪರ್ಯಂತ ನಡೆಸಿದೆವು. ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಸಮ್ಮೇಳನಾಧ್ಯಕ್ಷರು. ಬಿಡುವಿಲ್ಲದ ಗೋಷ್ಠಿಯ ಕಾರ್ಯಕ್ರಮಗಳು. ಸುಪ್ರಸಿದ್ಧ ಕಾದಂಬರಿಕಾರರಾದ ಎಸ್.ಎಲ್. ಭೈರಪ್ಪನವರನ್ನು ಸಾಹಿತ್ಯ ಗೋಷ್ಠಿಯ ಅಧ್ಯಕ್ಷರನ್ನಾಗಿ ಕರೆದಿದ್ದೆವು. ಈ ಗೋಷ್ಠಿಯಲ್ಲಿ ನಾಗರಾಜಪ್ಪನವರು ಸಣ್ಣಕತೆಗಳ ಮೇಲೋ ಕಾದಂಬರಿಗಳ ಮೇಲೋ ಲೇಖನ ಮಂಡಿಸಲು ಕೇಳಲಾಗಿತ್ತು. ಕವಿಗೋಷ್ಠಿಯಲ್ಲಿ ಒಂದು ಕವಿತೆಯನ್ನು ಓದಿದ ನೆನಪು. ಹೀಗೆ ಸಾಹಿತ್ಯಕ ಚಟುವಟಿಕೆಗಳಲ್ಲಿ ನಮ್ಮ ಜೊತೆಗಿದ್ದು ಭುಜಕ್ಕೆ ಭುಜ ಕೊಟ್ಟು ಸಮ್ಮೇಳನದ ಯಶಸ್ಸಿಗಾಗಿ ನಾಗರಾಜಪ್ಪ ದುಡಿದದ್ದು ಅವರ ಸಹೃದಯತೆಯ ದ್ಯೋತಕವೆಂದೇ ನನ್ನ ಭಾವನೆ.

ನಾಗರಾಜಪ್ಪನವರಿಗೆ ಮನಸ್ಸಿಗೆ ಬಂದ ಕೂಡಲೇ ಆ ಕೆಲಸ ಆಗಿಂದಾಗಲೇ ಆಗಿ ಬಿಡಬೇಕು. ಹಿಂದು ಮುಂದು ಆಗಲೇ ಕೂಡದು. ತನ್ನದೇ ಆದ ತೀರ್ಮಾನವುಳ್ಳ ಸಿಪಾಯಿ ಮನೋಧರ್ಮ ಅವರದು. ಒಂದು ದಿನ ಮನೆಗೆ ಏಕಾಏಕಿ ಬಂದರು. ಏನು ಸ್ವಾಮಿ ಬಂದಿರಿ ಎಂದರೆ ಹಸಿರು ನೋಡುವ ಆಸೆಯಾಯಿತು ಬಂದುಬಿಟ್ಟೆ ಎಂದರು. ನಮ್ಮ ಮನೆಗೂ ಅವರ ಮನೆಗೂ ನಾಲ್ಕಾರು ಕಿಲೋಮೀಟರುಗಳ ಅಂತರ. ಬಂದದ್ದು ಸೈಕಲ್ಲಿನಲ್ಲಿ. ಇನ್ನೊಂದು ದಿನ ಹೊನ್ನೇನಹಳ್ಳಿಯ ನಮ್ಮ ತೋಟಕ್ಕೆ ಇದ್ದಕ್ಕಿದ್ದಂತೆ ಹಾಜರಾದದ್ದುಂಟು. ಆ ದಿನ ಗಾಳಿ ಮಳೆ ರಭಸವಾಗಿ ಬಂದು ನಮ್ಮ ತೋಟದಲ್ಲಿ ನೆಟ್ಟಿದ್ದ ಕೆಲವು ತೆಂಗಿನ ಸಸಿಗಳು ವಾಲಿಕೊಂಡು ಬಿದ್ದು ಹೋಗಿದ್ದವು. ಅವುಗಳನ್ನೆಲ್ಲ ನಾನು ಕೆಲಸಗಾರರ ಸಹಾಯದಿಂದ ಎತ್ತಿ ನಿಲ್ಲಿಸಿ ಊರೆ ಕೊಡುವ ಕೆಲಸದಲ್ಲಿ ನಿರತನಾಗಿದ್ದೆ. ನಾಗರಾಜಪ್ಪನವರ ಬಳಿ ಹೆಚ್ಚು ಮಾತನಾಡುವುದಕ್ಕೂ ಆಗಲಿಲ್ಲ. ಆದರೂ ಅವರೇನೂ ಬೇಜಾರು ಮಾಡಿಕೊಳ್ಳದೆ ಅಲ್ಲೆಲ್ಲಾ ಸುತ್ತಾಡಿ ಒಬ್ಬರೇ ವಾಪಸ್ಸು ಹೋದ ನೆನಪು. ಹೀಗೆ ಮನಸ್ಸಿಗೆ ಬಂದಾಗ ದೆವ್ವ, ಪಿಶಾಚಿ, ಮಾಟ ಮಂತ್ರ ಇವುಗಳಲ್ಲಿ ನಿಜವೇ ಸುಳ್ಳೋ ಎಂದು ಪರೀಕ್ಷಿಸುವ ಸಲುವಾಗಿ ಸ್ಮಶಾನಗಳನ್ನೆಲ್ಲಾ ಅಮಾವಾಸ್ಯೆ ಕತ್ತಲಿನಲ್ಲಿ ಅಲೆದಾಡಿದ್ದುಂಟೆಂದು ಒಮ್ಮೊಮ್ಮೆ ಹೇಳುತ್ತಿದ್ದರು. ಅದೆಲ್ಲ ಸುಳ್ಳು. ದೆವ್ವವೂ ಇಲ್ಲ, ಪಿಶಾಚಿಯೂ ಇಲ್ಲ ಕಟ್ಟುಕತೆ ಮನುಷ್ಯನ ಮನಸ್ಸಿಗೆ ಹಿಡಿದ ಭ್ರಮೆ ಎನ್ನುವುದು ಇವರ ತೀರ್ಮಾನ. ಇವರು ಇಂಥಾದ್ದಕ್ಕೆಲ್ಲ ಲೆಕ್ಕಿಸದ ಮಹಾಧೈರ್ಯಶಾಲಿ.

ನಾನೂ ಗೆಳೆಯರಾದ ಹೆಚ್.ಜಿ. ಸಣ್ಣಗುಡ್ಡಯ್ಯನವರೂ ನಾಗರಾಜಪ್ಪನವರ ಮನೆಗೆ ಹೋಗಿ ಅವರ ಆದರಾತಿಥ್ಯವನ್ನು ಸವಿದಿದ್ದೇವೆ. ನಾವು ನೋಡುವಾಗ್ಗ ಇದ್ದವರು ಅವರ ತಾಯಿ. ತಾಯಿಯ ಆಸರೆಯಲ್ಲೇ ಬೆಳೆದ ಏಕೈಕ ಪುತ್ರ ನಾಗರಾಜಪ್ಪ. ಕೆಲಸವೂ ದೊರಕಿತು. ಮೈಸೂರಲ್ಲಿ ಎಂ.ಎ. ಓದುವಾಗ ಪ್ರಭುಶಂಕರ, ಜಿ.ಎಸ್. ಶಿವರುದ್ರಪ್ಪ ಮುಂತಾದವರು ಇವರ ಒಡನಾಡಿಗಳು. ಈಗಲೂ ಅವರೆಲ್ಲಾ ಕೆ.ಜಿ.ಎನ್.ರವರಿಗೆ ಆತ್ಮೀಯರೇ ಆಗಿ ಉಳಿದಿರುವುದು ನಮಗೆಲ್ಲ ಗೊತ್ತಿರುವುದೇ.

ಇವರ ತಾಯಿ ಮತ್ತು ಇವರ ಶ್ರೀಮತಿಯವರು ಮನೆಯನ್ನು ತುಂಬ ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗುತ್ತಿದ್ದುದನ್ನು ನಾವು ಕಣ್ಣಾರ ಕಂಡಿದ್ದೇವೆ. ರುಚಿಕಟ್ಟಾದ ಅಡಿಗೆ ಮಾಡಿ ಬಡಿಸಿ ನಮ್ಮನ್ನೆಲ್ಲ ತೃಪ್ತಿಪಡಿಸಿದ ಆ ಗೃಹಿಣಿಯನ್ನು ಮರೆಯುವಂತೆಯೇ ಇಲ್ಲ. ಎಷ್ಟು ಸಲ ಉಂಡು ಸಂತೋಷಪಟ್ಟೆವೋ ಅದಕ್ಕೆ ಲೆಕ್ಕವಿಲ್ಲ. ಆದರೆ ನಾನು ಕರೆದು ಸತ್ಕರಿಸಲಿಲ್ಲವಲ್ಲ ಎಂಬ ಕೊರಗು ಮಾತ್ರ ಮರೆಯಲಾಗದ ಗಾಯವಾಗಿ ಮನಸ್ಸಿನಲ್ಲಿ ಉಳಿದೇ ಇದೆ.

ನಾಗರಾಜಪ್ಪನವರ ತಾಯಿಯವರು ಕಷ್ಟಸಹಿಷ್ಣುವಾದ ಹೆಣ್ಣು. ಬಹುದೀರ್ಘಕಾಲ ಹಸುಗಳನ್ನು ಸಾಕಿ ನಿಗಾ ಮಾಡುತ್ತಿದ್ದರು. ನಾಗರಾಜಪ್ಪನವರು ಸ್ವತಃ ಹುಲ್ಲುಹೊರೆಯನ್ನು ತುಮಕೂರಿನ ಬಾಳನಕಟ್ಟೆ ಏರಿಯ ಮೇಲಿನಿಂದ ಕೊಂಡು ತಮ್ಮ ಸೈಕಲ್ಲಲ್ಲಿ ಕಟ್ಟಿಕೊಂಡು ಮನೆಗೆ ಹೋಗುತ್ತಿದ್ದಂತಹ ಯಾವ ದೊಡ್ಡಸ್ತಿಕೆಯೂ ಇಲ್ಲದ ಸರಳ ವ್ಯಕ್ತಿ. ಪುಂಡ ವಿದ್ಯಾರ್ಥಿಗಳ ಚೇಷ್ಟೆ ಇವರ ಬಳಿ ನಡೆಯುತ್ತಿರಲಿಲ್ಲವೆಂಬ ಮಾಹಿತಿಯನ್ನು ನಾನು ಬಲ್ಲೆ. ಒರಟರ ಬಳಿ ಇವರೂ ಶತ ಒರಟರೇ. ನಯವಿನಯದವರ ಬಳಿ ಅಷ್ಟೆ ನಯ ವಿನಯದ ನಡವಳಿಕೆ. ಇದು ಇವರ ಸಹಜ ಗುಣ.

ಒಂದು ಸಲ ನಾನು ನನ್ನ ಎರಡನೆಯ ಮಗಳನ್ನು ಸಿದ್ಧಗಂಗಾ ಕಾಲೇಜಿಗೆ ಸೇರಿಸಬೇಕಾಗಿತ್ತು. ಆಗೆಲ್ಲ ನನಗೆ ಬಹಳ ಕಷ್ಟದ ದಿನಗಳು. ಡೊನೇಷನ್ ಕೊಡುವ ಸ್ಥಿತಿ ಇರಲಿಲ್ಲ. ನಾಗರಾಜಪ್ಪನವರನ್ನು ಹೋಗಿ ಕಂಡೆ. ನಿಮಗೆ ಡೊನೇಷನ್ ಕೊಡಲು ಆಗದಿದ್ದರೆ ಬೇಡ. ನಾನು ಪ್ರಿನ್ಸಿಪಾಲರ ಬಳಿ ಮಾತಾಡಿ ವಿನಾಯಿತಿ ಕೊಡಿಸುತ್ತೇನೆ. ಏನು ಯೋಚಿಸುವ ಅಗತ್ಯವಿಲ್ಲವೆಂದು ಹೇಳಿ ಹಾಗೇ ಮಾಡಿದರು. ಇದರಿಂದ ನನಗೆ ಬಹಳ ಸಹಾಯವಾಯಿತು.

ಅವರಿಗೆ ಒಬ್ಬನೇ ಒಬ್ಬ ಮಗ. ನಾವು ಮನೆಗೆ ಹೋದಾಗಲೆಲ್ಲ ಆ ಹುಡುಗ ಒಳಕ್ಕೂ ಹೊರಕ್ಕೂ ಚೂಟಿಯಾಗಿ ಓಡಾಡುತ್ತಿದ್ದುದ್ದನ್ನು ಕಂಡ ಸುಖ ಮಾತ್ರ ಕಣ್ಣುಗಳಲ್ಲಿ ತಿರುಗುತ್ತಿದೆ. ಈಚೆಗೆ ಆತ ಇಂಜಿನಿಯರಿಂಗ್ ಪದವೀಧರನಾಗಿ ಬೆಂಗಳೂರಿನ ಯಾವುದೋ ಖಾಸಗಿ ಕಾರ್ಖಾನೆಯಲ್ಲಿ ಉದ್ಯೋಗದಲ್ಲಿರುವುದೂ ಆತನಿಗೆ ಮದುವೆಯಾದದ್ದೂ ಬಲ್ಲ ಸಂಗತಿಗಳೇ ಆಗಿವೆ.

ನಿವೃತ್ತಿಯ ನಂತರ ತುಮಕೂರಿನ ಪೂರ್‌ಹೌಸ್ ಕಾಲೋನಿಯಲ್ಲಿ ತಾವೇ ಕಟ್ಟಿ

ವಾಸವಾಗಿದ್ದ "ಸಂಜಯ" ಹೆಸರಿನ ಮನೆಯನ್ನು ಮಾರಿ ಬೆಂಗಳೂರಿಗೆ ಹೋಗಿ ಮಗನ ಜೊತೆಯಲ್ಲಿ ಕುಟುಂಬದವರೆಲ್ಲ ವಾಸವಾಗಿದ್ದಾರೆ.

ಅವರು ಕೆಲವಾರು ವಿಡಂಬನ ಕವಿತೆಗಳನ್ನು ಬರೆದಿದ್ದಾರೆ. ನಾನೇ ಕರೆದ ಎಷ್ಟೋ ಕವಿಗೋಷ್ಠಿಗಳಲ್ಲಿ ಅವುಗಳನ್ನು ವಾಚಿಸಿಯೂ ಇದ್ದಾರೆ. ಅನ್ಯಾಯಗಳ ವಿರುದ್ಧದ ಸಿಟ್ಟು, ಆಕ್ರೋಶಗಳನ್ನೇ ತುಂಬಿ ತುಳುಕಿಸುವ ಆ ಮಾದರಿಯನ್ನು ಅವರು ಸಾಂಗವಾಗಿ ಮುಂದುವರಿಸುವುದು ಆಮೇಲೆ ಆಗದೇ ಹೋಯಿತು. ಸಿಟ್ಟು, ಆಕ್ರೋಶಗಳಿಗೆ ಕಾವ್ಯವನ್ನು ಒಳಗು ಮಾಡುವುದರಿಂದ ವಸ್ತುವಿಗೆ ವಿಕ್ಷಿಪ್ತತೆ ಪ್ರಾಪ್ತವಾಗಿಬಿಡುತ್ತದೆ ಎನ್ನುವುದು ನನ್ನ ತಿಳುವಳಿಕೆ. ಹೀಗಾಗಿ ಅವರು ಕಾವ್ಯವನ್ನು ಮುಂದುವರಿಸುವುದು ಆಗಲಿಲ್ಲ.

ನಾಗರಾಜಪ್ಪನವರು ಮೈಸೂರಿನಂತಹ ವಿದ್ಯಾಕೇಂದ್ರ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿರುವ ನಗರದಲ್ಲಿ ಓದು ಮುಗಿಸಿದವರು. ಈಗ ಬೆಂಗಳೂರಿನಂತಹ ಬಹುದೊಡ್ಡ ನಗರದಲ್ಲಿ ವಾಸವಾಗಿದ್ದರೂ ಅವರಿಗೆ ತುಮಕೂರಿನ ಸೆಳೆತ ಜಾಸ್ತಿ. ಏಕೆಂದರೆ ಅವರ ಜೀವಿತದ ಬಹುಮುಖ್ಯವಾದ ನಡುಯೌವನವನ್ನು ಅವರು ಕಳೆದದ್ದು ಇಲ್ಲಿ. ಅವರ ನಿಜವಾದ ಕಾರ್ಯಕ್ಷೇತ್ರವಾಗಿದ್ದದ್ದು ತುಮಕೂರು ಮಾತ್ರ. ಹೀಗಾಗಿ ಅವರು ತುಮಕೂರನ್ನು ಮರೆಯುವಂತೆಯೇ ಇಲ್ಲ. ಇಷ್ಟಕ್ಕೂ ಅವರ ಹುಟ್ಟೂರು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿಗೆ ಸೇರಿದ ಕಲ್ಲೂರು ಗ್ರಾಮ. ನೇಕಾರ ಕುಟುಂಬವೊಂದರಲ್ಲಿ ಅವರ ಜನನ. ಅವರ ಬಾಲ್ಯವೆಲ್ಲ ಗೊಂದಲ ಗೋಜಲು ಗೋಜಲಿನಿಂದ ಕೂಡಿದ್ದೆಂದು ಬಾತ್ಮಿ. ಆದರೆ ಇವುಗಳಿಂದ ಹೊರಬರಲು ಅವರು ಆಯ್ದುಕೊಂಡದ್ದು ಶಿಕ್ಷಣವನ್ನು. ಸೂರ್ಯನ ಮುಖದರ್ಶನದಿಂದ ಕಗ್ಗತ್ತಲೆಯು ಹೇಳಕೇಳದೆ ಓಟ ಕೀಳುವಂತೆ ವಿದ್ಯೆಯ ಸಂಪರ್ಕದಿಂದ ಅವರ ಎಲ್ಲ ನೋವುಗಳೂ ಒಂದೊಂದಾಗಿ ನಿವಾರಣೆಯಾಗುತ್ತ ನಡೆದವು. ಅವರ ಅಸಹಾಯಕ ಸ್ಥಿತಿಯಲ್ಲಿ ನಾಗರಾಜಪ್ಪನವರ ನೆರವಿಗೆ ಬಂದದ್ದು ಸಿದ್ಧಗಂಗೆ ಮಠ ಮತ್ತು ಅದರ ಅಧ್ಯಕ್ಷರಾದ ಶಿವಕುಮಾರ ಸ್ವಾಮೀಜಿ. ಇಲ್ಲಿಂದ ಬೆಳೆದು ಎಂ.ಎ ಮಾಡಿ ನಾಡಿನ ಒಬ್ಬ ಹಿರಿಯ ವಿದ್ವಾಂಸರಾದದ್ದು ಸಾಮಾನ್ಯ ಸಂಗತಿಯಲ್ಲ. ತಮ್ಮ ಸೇವೆಯ ಪೂರ್ಣ ಅವಧಿಯನ್ನು ಪ್ರೊಫೆಸರ್ ಆಗಿ ಅವರ ಕಾಲೇಜಿನಲ್ಲೇ ಕಳೆದರು. ಇಷ್ಟಾಗಿ ನಾಗರಾಜಪ್ಪನವರದ್ದು ಸಂಶೋಧನೆಯ ಬೆನ್ನು ಹತ್ತಿ ಹೋಗುವ ವಿಮರ್ಶಕ ಮನೋಧರ್ಮ. ಈ ಕ್ಷೇತ್ರದಲ್ಲಿ ಅವರ ವ್ಯವಸಾಯ ಸಾಕಷ್ಟು ಹುಲುಸಾಗಿ ಸಾಗಿದೆ. ಅವರ ಮರುಚಿಂತನೆ ಮತ್ತು ಇತ್ತೀಚೆಗೆ ಅಲ್ಲಲ್ಲೇ ಪ್ರಕಟವಾದ ಹಲವಾರು ಬಿಡಿ ಲೇಖನಗಳು ನಾಡಿನ ತುಂಬ ಅವರಿಗೆ ಖ್ಯಾತಿಯನ್ನು ತಂದುಕೊಟ್ಟಿವೆ. ಅವರು ತಮ್ಮ ಮನಸ್ಸಿನ ವ್ಯಗ್ರತೆಯನ್ನು ನಿಗ್ರಹಿಸಿ ಇನ್ನಷ್ಟು ಸಮಾಧಾನಚಿತ್ತದಿಂದ ಬರೆಯುವುದು ಸಾಧ್ಯವಾಗಿದ್ದರೆ ಅವರಿಂದ ಮತ್ತೂ ಹೆಚ್ಚಿನ ಕೆಲಸವಾಗುತ್ತಿತ್ತೆಂದು ನನ್ನ ಭಾವನೆ. ಇರಲಿ

ಇತ್ತೀಚೆಗೆ ಅವರ ತಾಯಿಯವರು ಕಾಲವಶವಾದರೆಂದು ಹಿರಿಯರಾದ

ಹೋಮಿಯೋಪತಿ ಡಾ|| ಕೆ.ವಿ. ಸುಬ್ಬರಾಯರಿಂದ ತಿಳಿದು ಬಂತು. ಚಿಕ್ಕ ಹುಡುಗನಾಗಿದ್ದಾಗ ಅವರ ಒಬ್ಬನೇ ಒಬ್ಬ ಮಗನನ್ನು ನೋಡಿದ್ದು ಜ್ಞಾಪಕಕ್ಕೆ ಬರುತ್ತದೆ. ಹಿಂದೆ ಅವರು ತುಮಕೂರಿನ ಪೂರ್ ಹೌಸ್ ಕಾಲೋನಿಯಲ್ಲಿದ್ದಾಗ ಅವರ ಶ್ರೀಮತಿಯವರ ಕೈಯೂಟ ಉಂಡದ್ದನ್ನು ನಾನು ಮರೆತಿಲ್ಲ. ಅವರನ್ನೆಲ್ಲ ಮಾತಾಡಿಸಿ ಲೇಖನಕ್ಕೆ ಕೈಹಾಕಿದ್ದರೆ ಒಳಿತಾಗುತ್ತಿತ್ತೇನೋ ಎಂಬ ಭಾವನೆ ಕೂಡ ನನ್ನನ್ನು ಕಾಡುತ್ತಿದೆ. ಆದರೆ ವೇಗಶೀಲವಾದ ಈಗಿನ ಆಧುನಿಕ ಕಾಲದಲ್ಲಿ ಜೀವನದ ವಿಭಿನ್ನ ಸಂದರ್ಭಗಳ ದೆಸೆಯಿಂದಾಗಿ ಒಬ್ಬರನ್ನು ಒಬ್ಬರು ಸಂಧಿಸುವುದೇ ದುರ್ಲಭ. ಇಂದಿನ ದಿನಮಾನದಲ್ಲಿ ಯಾವುದೋ ಸಭೆ ಸಮಾರಂಭದಲ್ಲಿ ಪರಸ್ಪರ ಸಂಧಿಸಿದರೂ ಒಂದು ನಮಸ್ಕಾರ ಇಲ್ಲವೇ ಒಂದು ಕಿರುನಗೆಯ ವಿನಿಮಯದಲ್ಲಿಯೇ ಎಲ್ಲವೂ ಪರಿಸಮಾಪ್ತವಾಗುತ್ತದೆ. ಈಗಂತೂ ಅವರು ಕರ್ನಾಟಕದ ರಾಜಧಾನಿಯ ಖಾಯಂ ನಿವಾಸಿ. ನಾನೋ ಜಪ್ಪಯ್ಯ ಎಂದರೂ ತುಮಕೂರು ಬಿಡುವವನಲ್ಲವಾಗಿ ನಾವು ಸೇರುವುದೇ ಕಷ್ಟಕರವಾಗಿದೆ.

ಬೆಂಗಳೂರಿನಂತಹ ಬೃಹತ್ ನಗರದಲ್ಲಿ ಬೇಕಾದಷ್ಟು ಆಸ್ಪತ್ರೆ ನರ್ಸಿಂಗ್ ಹೋಂಗಳು ದಂಡಿಯಾಗಿದ್ದರೂ ಮೊನ್ನೆ ತಾನೇ ತುಮಕೂರಿನ ಆದರ್ಶ ನರ್ಸಿಂಗ್ ಹೋಂಗೆ ಬಂದು ಸೇರಿ ತಮಗೆ ಅತ್ಯಂತ ಪ್ರಿಯರಾದ ಡಾ|| ಮರಿ ಹೊನ್ನಯ್ಯನವರಿಂದ ಮುಲವ್ಯಾಧಿ ಶಸ್ತ್ರಕ್ರಿಯೆ ಮಾಡಿಸಿಕೊಂಡು ಹೋದ ಸಂಗತಿ ಗೊತ್ತಾಯಿತು. ಇದು ಅವರಿಗೆ ತುಮಕೂರಿನ ಬಗೆಗಿನ ಆತ್ಮೀಯತೆಯನ್ನು ಎತ್ತಿ ತೋರುವ ಘಟನೆಯಾಗಿದೆ.

ಗುಬ್ಬಿಯ ಜನರಿಗಂತೂ ನಾಗರಾಜಪ್ಪನವರನ್ನು ಕಂಡರೆ ಉಕ್ಕಿ ಹರಿಯುವ ಅಕ್ಕರೆ. ಗುಬ್ಬಿ ತಾಲ್ಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿ ಅವರನ್ನು ಗೌರವಿಸಲಾಯಿತು. ನಾಟಕರತ್ನರಾಗಿ ಗುಬ್ಬಿ ವೀರಣ್ಣನವರು ತಮ್ಮ ತಾಲ್ಲೂಕಿನ ಪ್ರತಿಷ್ಠೆಯನ್ನು ಹೆಚ್ಚಿಸಿರುವಂತೆ ಸಾಹಿತಿಯಾಗಿ, ವಿಮರ್ಶಕರಾಗಿ, ಸಂಶೋಧಕರಾಗಿ ಗುಬ್ಬಿಯ ಕೀರ್ತಿವರ್ಧನೆಗೆ ಇವರು ಕಾರಣರಾಗಿದ್ದಾರೆ. ಅದರಲ್ಲೂ ಸರ್ಕಾರಿ ಕಿರಿಯ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಎಂ.ಹೆಚ್. ನಾಗರಾಜು ಅವರಿಗೆ ಕೆ.ಜಿ.ಎನ್. ಎಂದರೆ ಮೈದುಂಬಿ ನಿಲ್ಲುವ ಪ್ರೀತಿ ವಿಶ್ವಾಸ.

ನಾಗರಾಜಪ್ಪನವರಾದರೋ ಉತ್ತು ಬಿತ್ತಿ ಗಿಡನೆಟ್ಟು ತೋಟ ಬೆಳೆಸಿದ ರೈತ. ಹೂವು ಹಣ್ಣು ಗಳನ್ನು ಬಿಡಿಸಿಕೊಳ್ಳುವಂತೆ ತಾವು ಕಷ್ಟಪಟ್ಟು ಕಟ್ಟಿ ನಿಲ್ಲಿಸಿದ ಬದುಕಿನಿಂದ ಫಲ ಪಡೆಯುತ್ತಿರುವುದು ನನಗೆ ವೈಯಕ್ತಿಕವಾಗಿ ಸಂತೋಷದ ಸಂದರ್ಭ. ಅವರಿಗೆ ಸಕಲ ಬಗೆಯ ಯಶಸ್ಸನ್ನು ಕೋರುತ್ತೇನೆ. ಅವರಿಗೆ ನನ್ನ ಆದರ ಪೂರ್ವಕ ಅಭಿನಂದನೆಗಳು. ♦

7. ಆತ್ಮೀಯರಾದ ಆಗಂತುಕ

-ಎಂ.ಹೆಚ್. ನಾಗರಾಜು

ಪ್ರೊ॥ ಕೆ.ಜಿ. ನಾಗರಾಜಪ್ಪನವರ ಅಭಿನಂದನಾ ಗ್ರಂಥಕ್ಕಾಗಿ ಒಂದು ಲೇಖನ ಬರೆಯ ಬೇಕು ಎಂಬ ತುದಿತದ ಅನಿವಾರ್ಯಕ್ಕೆ ಒಳಗಾಗಿ ಒದ್ದಾಡಿದೆ, ಗೊಂದಲಗೊಂಡೆ. ಎಲ್ಲಿಂದ ಬರೆಯ ಬೇಕು, ಹೇಗೆ ಬರೆಯಬೇಕು, ಏನು ಬರೆಯಬೇಕು ಎನ್ನುವ ತೊಳಲಾಟ ಹಲವು ತಿಂಗಳುಗಳಿಂದ ನಡೆಯುತ್ತಲೇ ಇತ್ತು. ಹಲವು ಸಲ ಬರೆಯಲು ಪ್ರಯತ್ನಿಸಿ ವಿಚಾರ ಹೊಳೆಯದೆ ಲೇಖನಿ ಓಡದೆ ಬರೆದದ್ದನ್ನು ಹರಿದುಹಾಕಿದೆ. ಈ ನನ್ನ ತೊಂದರೆಗೆ ಮುಖ್ಯವಾಗಿ ಮೂರು ಕಾರಣಗಳಿವೆ. ಮೊದಲಿಗೆ ನಾನು ಬರಹಗಾರನಲ್ಲ. ಎರಡನೆಯದಾಗಿ ನಾನು ಕನ್ನಡ ಸಾಹಿತ್ಯದ ಎಲ್ಲ ಮಜಲುಗಳನ್ನು ಪ್ರಾಕಾರಗಳನ್ನು ತಿಳಿದ. ಬುಡಮಟ್ಟ ಶೋಧಿಸಿದ ಸಾಹಿತ್ಯ ವಿದ್ಯಾರ್ಥಿಯಲ್ಲ.

ಈ ಎರಡೂ ತೊಂದರೆಗಳನ್ನೆದುರಿಸಿ, ಏನನ್ನಾದರೂ ಬರೆಯಲೇಬೇಕು ಎಂದು ಹೊರಟಾಗ ನಾಗರಾಜಪ್ಪನವರ ಬಗ್ಗೆ ನನ್ನ ಸ್ವಂತ ತಿಳುವಳಿಕೆ ಏನು? ಎಂಬ ಪ್ರಶ್ನೆ ಕಾಡಲಾರಂಭಿಸಿತು. ಇತ್ತೀಚೆಗಾಗಿ ಅವರ ಮರುಚಿಂತನೆ, ದೊಡ್ಡಸಂಕಣ್ಣನಾಯಕ ಮತ್ತು ಹಲವು ಸಂಪಾದನಾ ಗ್ರಂಥಗಳನ್ನು ಹಾಗೂ ಸಾಹಿತ್ಯ ಪತ್ರಿಕೆಗಳಲ್ಲಿ ಬಂದಿದ್ದ ಅವರ ಬಿಡಿ ಲೇಖನಗಳನ್ನು ಅಧ್ಯಯನ ಮಾಡಿದ್ದೆ. ಐದಾರು ವರ್ಷಗಳಿಂದ ಅವರ ವಿದ್ವತ್‌ಪೂರ್ಣ, ಅಸಲಿ ಚಿಂತನೆಯ ಭಾಷಣವನ್ನು ಆಲಿಸಿದ್ದೆ. ಒಡನಾಡಿ ಮಾತನಾಡಿದ್ದೆ. ಅವರ ಹೊಸ ವಿಮರ್ಶಾಕೃತಿ 'ಇಕ್ಕಟ್ಟು-ಬಿಕ್ಕಟ್ಟು' ಮತ್ತು ಮರು ಮುದ್ರಣದ 'ಮರುಚಿಂತನೆ' ಗಳನ್ನು ನಮ್ಮ ಅನಿಕೇತನ ಸಾಹಿತ್ಯ ಸಾಂಸ್ಕೃತಿಕ ಸಂಶೋಧನಾ ಕೇಂದ್ರದಿಂದ ಪ್ರಕಟಿಸುವ ಸಂದರ್ಭದಲ್ಲಿ ಪ್ರೂಫ್ ತಿದ್ದುವ ಅನಿವಾರ್ಯತೆಯಿಂದ ಮತ್ತೆ ಒಂದೆರಡು ಸಲ ಅವರ ಎಲ್ಲ ಬರಹದ ಮೇಲೆ ಕಣ್ಣಾಡಿಸಿದ್ದೆ. ಅವರ ಆಶಯಗಳು ನನ್ನ ಆಶಯಗಳೂ ಆಗಿದ್ದರಿಂದ ಅವರು ನನಗೆ ತೀರ ಹತ್ತಿರವಾದರು.

ಈ ನಡುವೆ ಕೆ.ಜಿ. ನಾಗರಾಜಪ್ಪನವರ ಬದುಕು-ಬರಹ ಕುರಿತು ವಿಚಾರ ಸಂಕಿರಣವೇರ್ಪಡಿಸಬೇಕು ಎಂಬ ಆಲೋಚನೆ ಮೂಡಿತು. ಈ ಸಂದರ್ಭಗಳಲ್ಲಿ ಅಭಿನಂದನೆಯೂ ನಡೆದು ಅಭಿನಂದನಾ ಗ್ರಂಥ ಹೊರತರಬೇಕು ಎಂಬ ವಿಚಾರ ಪ್ರಬಲವಾಗಿ ಲೇಖನಗಳಿಗಾಗಿ ಲೇಖಕರ ಬೆನ್ನುಹತ್ತಿದೆ. ಮರುಚಿಂತನೆಗಾಗಿ ಡಾ.ಯು.ಆರ್. ಅನಂತಮೂರ್ತಿಯವರು ಬರೆದ ಮುನ್ನುಡಿ ರೂಪದ ವಿಮರ್ಶೆಯನ್ನು, ಸಂಕ್ರಮಣ, ಅನ್ವೇಷಣೆ, ಪ್ರಜಾವಾಣಿ, ಪ್ರಜಾಮತ, ಡೆಕ್ಕನ್ ಈವಿನಿಂಗ್ ಹೆರಾಲ್ಡ್ ಮುಂತಾದ ಪತ್ರಿಕೆಗಳಲ್ಲಿ ಡಾ. ಸಿ.ಎನ್.ರಾಮಚಂದ್ರನ್, ಡಾ. ಪೋಲಂಕಿ ರಾಮಮೂರ್ತಿ, ಡಾ.ಎಲ್.ಎಸ್. ಶೇಷಗಿರಿರಾವ್ ಮೊದಲಾದ ವಿಮರ್ಶಕರು ಬರೆದಿದ್ದ ವಿಮರ್ಶಾಲೇಖನಗಳನ್ನು ಆಯ್ದುಕೊಂಡೆ. ಆ ಸಂದರ್ಭದಲ್ಲಿ ಬಂದ ಅಭಿನಂಧನಾ ಮತ್ತು ಟೀಕಾತ್ಮಕ ಪತ್ರಗಳನ್ನು, ಪತ್ರಿಕಾ ಹೇಳಿಕೆಗಳನ್ನು ಗಮನಿಸಿದ್ದೆ. ಡಾ.ಜಿ.ಎಸ್. ಶಿವರುದ್ರಪ್ಪ,

ಡಾ. ಕೆ.ಜಿ. ಈಶ್ವರಯ್ಯ, ಡಾ. ರಹಮತ್‌ತರೀಕೆರೆ, ಡಾ ಕೇಶವಶರ್ಮ, ಪ್ರೊ. ಹೆಚ್.ಜಿ. ಸಣ್ಣಗುಡ್ಡಯ್ಯ ಪ್ರೊ. ಶ್ಯಾಮಸುಂದರ ಶೋಚಿ, ಪ್ರೊ. ಎಸ್.ಜಿ. ಸಿದ್ದರಾಮಯ್ಯ, ವೀಚಿ ಮೊದಲಾದ ಹಲವು ಲೇಖಕರು ಮತ್ತು ಸ್ನೇಹಿತರು ನಾಗರಾಜಪ್ಪನವರ ಮೇಲೆ ವಿಶ್ವಾವಿಟ್ಟು ಬರೆದು ಕಳುಹಿಸಿದ ಲೇಖನಗಳನ್ನೆಲ್ಲಾ ಮತ್ತೆ ಮತ್ತೆ ಓದಿದೆ, ಪ್ರೂಫ್ ನೋಡಿದೆ. ಈ ಕಾರಣದಿಂದಾಗಿಯೇ ಲೇಖನ ಬರೆಯಲು ನನಗೆ ಮೂರನೆಯ ತೊಂದರೆ ಪ್ರಾರಂಭವಾಯಿತು. ಇಷ್ಟೆಲ್ಲಾ ಲೇಖಕರ ಲೇಖನಗಳನ್ನು ಓದಿದ ಮೇಲೆ ಹೊಸದಾಗಿ ಏನನ್ನು ಹೇಳಬೇಕು ಎಂಬ ಗೊಂದಲ, ಬೇರೆಯವರು ಹೇಳಿದ್ದನ್ನೇ ಹೇಳುವ ಭಯ ನನ್ನನ್ನು ಕಾಡಲಾರಂಬಿಸಿತು. ಆದರೂ ಬರೆಯಲು ಬಾರದಿದ್ದರೇನಂತೆ. ನನ್ನದೂ ಒಂದು ಲೇಖನ ಅಂತ ಏಕಿರಬಾರದು ಎಂದು ಮೊಂಡು ಧೈರ್ಯದಿಂದ ಬರೆಯಲು ಆರಂಭಿಸಿದೆ.

ಶೈಕ್ಷಣಿಕ ಮತ್ತು ಸಾಹಿತ್ಯಿಕವಾದ ಪರಿಚಿತ ವಲಯದಲ್ಲಿ ಕೆ.ಜಿ.ಎನ್. ಎಂದೇ ಪ್ರಸಿದ್ಧರಾಗಿರುವ ಪ್ರೊ. ಕೆ.ಜಿ. ನಾಗರಾಜಪ್ಪನವರಿಗೂ ನನಗೂ ಕೇವಲ ನಾಲ್ಕೈದು ವರ್ಷಗಳ ಪರಿಚಯ. ಇಷ್ಟು ಕಡಿಮೆ ಅವಧಿಯಲ್ಲಿ ನಮ್ಮ ಸಂಬಂಧ ಆತ್ಮೀಯತೆ ಗಾಢವಾದದ್ದು ಒಂದು ವಿಸ್ಮಯ.

ವಿದ್ಯಾರ್ಥಿ ದಿಸೆಯಲ್ಲಿ ಸ್ಪಷ್ಟ ಉದ್ದೇಶಗಳೇ ಇಲ್ಲದಿದ್ದ, ಅದನ್ನು ತಿಳಿಸಿ ಮಾರ್ಗದರ್ಶನ ಮಾಡತಕ್ಕಂತಹ ಪರಿಸರದಿಂದ ಬಂದವನಾಗಿರದ ನಾನು ಉಪನ್ಯಾಸಕನಾದದ್ದು ಒಂದು ಆಕಸ್ಮಿಕ. ಹಾಗೆಯೇ ಸಾಹಿತ್ಯವನ್ನೇ ಓದದ ನಾನು ಕೆ.ಜಿ.ನಾ ಜೊತೆ ನಿಕಟ ನೆಂಟಸ್ತಿಕೆ ಸ್ಥಾಪಿಸಿದ್ದೂ ಒಂದು ಆಕಸ್ಮಿಕವೆಂದೇ ಹೇಳಬೇಕಾಗುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನವನಾದ ನಾನು ಕನ್ನಡ ಸಾಹಿತ್ಯದ ಬಗ್ಗೆ ಸ್ವಲ್ಪಮಟ್ಟಿಗೆ ಒಲವಿದ್ದರೂ ಇತಿಹಾಸ ಎಂ.ಎ. ಮಾಡಿ ಏಳು ವರ್ಷಗಳ ಕಾಲ ಗುಲ್ಬರ್ಗಾದಲ್ಲಿ ಉಪನ್ಯಾಸಕನಾಗಿ ಕೆಲಸಮಾಡಿ 1991 ರಲ್ಲಿ ಗುಬ್ಬಿಗೆ ವರ್ಗಾವಣೆಗೊಂಡು ಬಂದೆ. ಬಂದ ಕೂಡಲೆ ಮನೆಕಟ್ಟುವ, ತಮ್ಮಂದಿರ ಮದುವೆ ಮಾಡಿಸುವ ಕೆಲಸದ ಜೊತೆಗೆ ನಿಸರ್ಗ ಬೇಸಾಯ, ಪುಕುವೊಕು, ಅಂತೆಲ್ಲಾ ತಲೆಕೆಡಿಸಿಕೊಂಡು ಕೃಷಿಕ್ರಾಂತಿ ಹಸಿರು ಕ್ರಾಂತಿ ಅಂತ ಓಡಾಡುತ್ತಿದ್ದೆ. ಎಪ್ಪತ್ತರ ದಶಕದ ಕೊನೆಯಲ್ಲಿ ಆರಂಭಗೊಂಡು, ಅಬ್ಬರಗೊಂಡು ಎಂಬತ್ತರ ದಶಕದ ಕೊನೆಯ ವೇಳೆಗೆ ಕಾವು ಕಳೆದುಕೊಂಡು ತಣ್ಣಗಾಗಿದ್ದ ಬಂಡಾಯ ಸಾಹಿತ್ಯ ಸಂಘಟನೆಗೆ ಶ್ರೀಮಾನ್ ಬರಗೂರು ರಾಮಚಂದ್ರಪ್ಪನವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಕೂಡಲೆ ಅದೇಕೊ ಇದ್ದಕ್ಕಿದ್ದಂತೆ ಮತ್ತೆ ಚಾಲನೆ ಬಂದಿತು. ತುಮಕೂರು ಜಿಲ್ಲೆಯ ಹಲವು ತಾಲ್ಲೂಕುಗಳಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯ ಚಟುವಟಿಕೆಗಳು ಆರಂಭವಾದವು. ನನಗಿಂತಲೂ ಮೊದಲೆ ಗುಬ್ಬಿಯ ನೆಲದಲ್ಲಿ ಕಾಲೂರಿದ್ದ ಗೆಳೆಯರಾದ ಎ.ಕೆ. ಹಂಪಣ್ಣ, ತಿಮ್ಮನಹಳ್ಳಿ ವೇಣುಗೋಪಾಲ್, ಕೆ.ಎಸ್.ಸಿದ್ದಲಿಂಗಪ್ಪ ಮೊದಲಾದವರು ನನ್ನನ್ನು ಬಂಡಾಯ ಸಾಹಿತ್ಯ ಸಂಘಟನೆಯ ತಾಲ್ಲೂಕು ಸಂಚಾಲಕನನ್ನಾಗಿ ಆಯ್ಕೆ ಮಾಡಿದರು. ಗುಬ್ಬಿಯ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ವಿಚಾರ ಸಂಕಿರಣ ಮತ್ತು ಕವಿಗೋಷ್ಠಿ ನಡೆಸುವುದರ ಮೂಲಕ

ಬಂಡಾಯ ಸಾಹಿತ್ಯ ಸಂಘಟನೆ ಚಟುವಟಿಕೆ ವಿಧ್ಯುಕ್ತವಾಗಿ ಆರಂಭವಾಯಿತು. ಇದನ್ನು ಉದ್ಘಾಟಿಸಿದವರು ಪ್ರೊ॥ ಕೆ.ಜಿ.ನಾಗರಾಜಪ್ಪನವರು. ಅಂದೇ ಕೆ.ಜಿ.ನಾ ರವನ್ನು ನಾನು ನೋಡಿದ್ದು, ಭಾಷಣ ಕೇಳಿದ್ದು. ಅವರ ಬದುಕು ಬರಹ ಗೊತ್ತಿಲ್ಲದ ನಾನು ಅವರ ಮಾತುಗಳತ್ತ ಗಮನಹರಿಸಿರಲಿಲ್ಲ. ಸುಮಾರು ಎರಡು ವರ್ಷ ಆಗಾಗ್ಗೆ ತುಮಕೂರಿನ ಸಾಹಿತ್ಯಿಕ ಸಭೆಗಳಲ್ಲಿ, ಗೋಷ್ಠಿಗಳಲ್ಲಿ ಅವರನ್ನು ದೂರದಿಂದಷ್ಟೆ ನೋಡುತ್ತಿದ್ದೆ, ಮಾತಾಡಿಸುತ್ತಿರಲಿಲ್ಲ. ಅವರ ಬಗ್ಗೆ ಅಂತಹ ಆಸಕ್ತಿಯಾಗಲಿ ಕುತೂಹಲವಾಗಲಿ ಆಗ ಇರಲಿಲ್ಲ.

1993 ನವೆಂಬರ್ 26 ಮತ್ತು 27 ರಂದು ಗುಬ್ಬಿ ತಾಲ್ಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುವುದೆಂದು ತೀರ್ಮಾನವಾಗಿ ಸಮ್ಮೇಳನಾಧ್ಯಕ್ಷರನ್ನು ಆಯ್ಕೆ ಮಾಡಲು ಶಾಸಕರಾದ ಜಿ.ಎಸ್. ಶಿವನಂಜಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯೊಂದು ನಡೆಯಿತು. ಹಲವು ವಿದ್ವಾಂಸರ ಹೆಸರುಗಳು ಪ್ರಸ್ತಾಪಕ್ಕೆ ಬಂದವು. ಕೆ.ಜಿ.ನಾಗರಾಜಪ್ಪನವರ ಕಾದಂಬರಿ 'ದೊಡ್ಡಸಂಕಣ್ಣನಾಯಕ' ವನ್ನು ಎಸ್.ಎಸ್.ಎಲ್.ಸಿ.ಯಲ್ಲಿ ಪಠ್ಯವಾಗಿ ಓದಿ ಪ್ರಭಾವಿತಗೊಂಡಿದ್ದ, ಅವರ ಸಾಹಿತ್ಯದ ವಿಚಾರಧಾರೆಗಳ ಅರಿವು ಇದ್ದ ಗೆಳೆಯ ಹಂಪಣ್ಣ ಸಮಯ ಸ್ಫೂರ್ತಿಯಿಂದ ಮಾತನಾಡಿ ಕೆ.ಜಿ.ನಾಗರಾಜಪ್ಪನವರೇ ಸಮ್ಮೇಳನದ ಅಧ್ಯಕ್ಷರಾಗುವುದು ಅತ್ಯಂತ ಸೂಕ್ತ ಎಂದು ಅಭಿಪ್ರಾಯ ಮುಂದಿಟ್ಟರು, ಬಹುತೇಕ ಎಲ್ಲಾ ಗೆಳೆಯರು ಅನುಮೋದಿಸಿದರು. ಹಂಪಣ್ಣನವರ ಮಾತು-ವ್ಯಕ್ತಿತ್ವದಲ್ಲಿ ವಿಶ್ವಾಸವಿದ್ದ ಶಾಸಕರೂ ಅಸ್ತು ಎಂದರು. ನಾಗರಾಜಪ್ಪನವರು ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದರು.

ವಿಷಯ ತಿಳಿಸಲು, ಅಭಿನಂದಿಸಲು ಗುಬ್ಬಿ ಗೆಳೆಯರು ತುಮಕೂರು ವಿ.ಹೆಚ್. ಕಾಲೋನಿಯಲ್ಲಿದ್ದ ಕೆ.ಜಿ. ನಾಗರಾಜಪ್ಪನವರ ಮನೆ 'ಸಂಜಯ'ಕ್ಕೆ ದಾಳಿ ಇಟ್ಟೆವು. 'ಇನ್ನಾರಾದರೂ ಹಿರಿಯರನ್ನು ಮಾಡಬಹುದಿತ್ತು' ಎಂಬ ಆಕ್ಷೇಪಣೆ ವ್ಯಕ್ತಪಡಿಸುತ್ತಾ ಕೊನೆಗೆ ಸಂಕೋಚದಿಂದಲೇ ಒಪ್ಪಿದರು. ಅಂದೇ ಪ್ರಥಮವಾಗಿ ಅವರ ಮನೆಗೆ ಭೇಟಿ ಕೊಟ್ಟಿದ್ದೆ.

ಇದಾಗಿ ಕೆಲವು ದಿನಗಳ ಮೇಲೆ ಸಮ್ಮೇಳನದ ಗೋಷ್ಠಿಗಳ ರೂಪರೇಖೆಗಳ ಚರ್ಚಿಸಲು ನಾನು, ಹಂಪಣ್ಣ ಇಬ್ಬರೂ ಕೆ.ಜಿ.ನಾ ಮನೆಗೆ ಹೋದೆವು. ಆದರದಿಂದ ಸ್ವಾಗತಿಸಿದರು. ಕಾಫಿಯ ಸತ್ಕಾರವಾಯಿತು. ಅಂದು ಏನೋ ಸ್ಫೂರ್ತಿ, ಹುರುಪಿನಿಂದ ಒಂದು ದೊಡ್ಡ ಪತ್ರಿಕೆಯ ವರದಿಗಾರನಂತೆ ನಾನು ಅವರನ್ನು ಸಾಹಿತ್ಯ, ಸಾಂಸ್ಕೃತಿಕವಾಗಿ ಪ್ರಶ್ನಿಸುತ್ತಾ ಹೋದೆ. ಒಳ್ಳೆಯ ಲಹರಿಯಲ್ಲಿ ಅವರೂ ಉತ್ತರಿಸುತ್ತಾ ಹೋದರು. ಸುಮಾರು ಎರಡು ಗಂಟೆಗಳಿಗೂ ಹೆಚ್ಚು ಕಾಲ ಚರ್ಚೆ, ಪ್ರಶ್ನೋತ್ತರ ನಡೆಯಿತು. ಯಾವುದೇ ವಿಚಾರದ ಬಗ್ಗೆ ಇದ್ದ ಆಳವಾದ ಜ್ಞಾನ, ವಿದ್ವತ್ತು, ಚಿಂತನೆ, ಅವರು ಮಂಡಿಸುತ್ತಿದ್ದ ರೀತಿ, ಆ ಮಾತು ಗಳಲ್ಲಿ ಸ್ಫುರಿಸುತ್ತಿದ್ದ ಮಾನವೀಯ ಮನೋಭಾವ, ಜನಪರ ಕಾಳಜಿ ನನ್ನನ್ನು ಪ್ರಭಾವಿತಗೊಳಿಸಿದವು. ಹೊರಡುವಾಗ ಅವರೇ ಬರೆದಿದ್ದ ಹೊಸರೀತಿಯ ಪ್ರಖರ ಚಿಂತನೆಗಳನ್ನು ಒಳಗೊಂಡಿದ್ದ ವಿಮರ್ಶಾ ಕೃತಿ 'ಮರುಚಿಂತನೆ'

ಯನ್ನು ಅವರಿಂದ ಪಡೆದೆ. ಕೆ.ಜಿ.ನಾರವರ ಮರುಚಿಂತನೆ, ದೊಡ್ಡ ಸಂಕಣ್ಣ ನಾಯಕ ಪುಸ್ತಕಗಳನ್ನು, ಅವರೇ ಸಂಪಾದಿಸಿದ ಗ್ರಂಥಗಳನ್ನು, ಬಿಡಿಲೇಖನಗಳನ್ನು ಓದಿದೆ. ಪದೇ ಪದೇ ಅವರ ಮಾತುಗಳನ್ನು ಕೇಳಿದೆ. ಗೋಸುಂಬೆತನವಿಲ್ಲದ, ಇದ್ದದ್ದನ್ನು ಇದ್ದ ಹಾಗೇ ಹೇಳುವ, ಸದಾ ಶೋಷಿತರ ಪರ ನಿಲ್ಲುವ, ಬಹು ಸಂಸ್ಕೃತಿಯ ಹಿಂದುಳಿದ ವರ್ಗಗಳ, ಗ್ರಾಮೀಣ ಜನರ ಪರ ನಿಲ್ಲುವ ನಿಲುವಿನಿಂದಾಗಿ ನನಗರಿವಿಲ್ಲದಂತೆ ಕೆ.ಜಿ.ನಾ ನನ್ನ ಗುರುಗಳಾದರು, ಮಾರ್ಗದರ್ಶಕರಾದರು, ಆಪ್ತರಾದರು, ಕೊನೆಗೆ ನನ್ನವರೇ ಆದರು. ನಾಲ್ಕೈದು ವರ್ಷಗಳ ನಮ್ಮ ಸಂಬಂಧ ನಾಲ್ಕೈದು ದಶಕಗಳದ್ದೇನೋ ಎಂಬಂತಾಯಿತು.

ಕೆ.ಜಿ.ನಾ ನನಗೇಕೆ ಇಷ್ಟವಾದರು? ನಾನೇಕೆ ಅವರ ಅಭಿಮಾನಿಯಾದೆ? ಅವರು ನನ್ನ ವಿದ್ಯಾಗುರುವಲ್ಲ. ನಾನು ಅವರ ವಿದ್ಯಾರ್ಥಿಯಲ್ಲ. ಏನೋ ಲಾಭವಾಗುತ್ತದೆ ಎಂದು ಅವರ ಬೆನ್ನು ಹತ್ತಲು ನಾನೇನು ಮರಿ ಬರಹಗಾರನಲ್ಲ. ಹಣ, ಅಧಿಕಾರ, ರಾಜಕೀಯದಿಂದ ಸದಾ ದೂರವಿರುವ ಅವರಿಂದ ಸ್ನೇಹದ ಮಾತು ಬಿಟ್ಟರೆ ನನಗೇನು ಆಗುವಂತಿರಲಿಲ್ಲ. ಲಾಭದ ಆಸೆಯಿಂದಲೇ ಸಂಬಂಧ ಬೆಳೆಸುವ ಇಂದಿನ ಸಂದರ್ಭದಲ್ಲಿ ಕೆ.ಜಿ.ನಾ ನನಗೆ ಹತ್ತಿರವಾದದ್ದು ನಾನು ಅವರಿಂದ ಆಕರ್ಷಿತನಾದದ್ದು ಇವನ್ನೆಲ್ಲಾ ಯೋಚಿಸುತ್ತಾ ಹೋದಂತೆ ಅವರ ವ್ಯಕ್ತಿತ್ವ, ಮೇರು ಸದೃಶ ವ್ಯಕ್ತಿತ್ವ, ಸಿದ್ಧಿ, ಬದುಕು, ಬದುಕಿದಂತೆ ಬರಹ, ಬರಹದಂತೆ ಬದುಕು ನನ್ನ ಕಣ್ಣ ಮುಂದೆ ಬಂದಿತು.

ತಂದೆ ಇದ್ದೂ ಇಲ್ಲದಂತೆ, ಅಜ್ಜಿ ಮತ್ತು ತಾಯಿಯ ಪಾಲನೆಯಲ್ಲಿ ಬೆಳೆದ ಬಡತನವನ್ನೇ ಹಾಸಿಹೊದ್ದು ಸವಾಲಾಗಿ ಸ್ವೀಕರಿಸಿ ಕಲ್ಲೂರು, ಕಡಬ, ತುಮಕೂರು. ಮೈಸೂರುಗಳಲ್ಲಿ ವ್ಯಾಸಂಗಮಾಡಿ ಉಪನ್ಯಾಸಕರಾಗಿ, ಪ್ರಿನ್ಸಿಪಾಲರಾಗಿ, ಪ್ರೊಫೆಸರ್‌ಆಗಿ, ಸಂಶೋಧಕರಾಗಿ, ವಿಮರ್ಶಕರಾಗಿ ಪ್ರಸಿದ್ಧರಾದ ಕಲ್ಲೂರಿನ ನಾಗರಾಜಪ್ಪನವರು ಮರುಚಿಂತನೆಯ ನಾಗರಾಜಪ್ಪನವರಾದದ್ದು ಆಕಸ್ಮಿಕವೇನಲ್ಲ. ಇದರ ಹಿಂದೆ ದೀರ್ಘವಾದ ಶ್ರಮ ಇದೆ, ಸಾಧನೆ ಇದೆ, ತ್ಯಾಗವಿದೆ, ಹೋರಾಟವಿದೆ, ಛಲವಿದೆ. 'ಸದಾ ಓದುವುದು, ಹೇಳುವುದು' ಇಷ್ಟಕ್ಕೆ ಸೀಮಿತಗೊಳಿಸಿಕೊಂಡಿದ್ದ ಕೆ.ಜಿ.ನಾ ಹೆಚ್ಚು ಬರೆದವರಲ್ಲ, ಬರೆದರೂ ಪ್ರಕಟಿಸುವ ಪ್ರಯತ್ನವನ್ನೇ ಮಾಡಲಿಲ್ಲ. ಆದರೆ ವರ್ಷಕ್ಕೆ ನಾಲ್ಕು ನಾಲ್ಕು ಪುಸ್ತಕ ಬರೆದು ಸಂಖ್ಯೆ ಹೆಚ್ಚಿಸಿಕೊಂಡಿರುವ ಲೇಖಕರಿಗೆ ಹೋಲಿಸಿದಾಗ ಇವರು ಪ್ರಕಟಿಸಿದ್ದು ಕಡಿಮೆಯಾದರೂ ಅವುಗಳಲ್ಲಿನ ಚಿಂತನೆಗಳು, ಒಳನೋಟಗಳು ಓದುಗರಿಗೆ ಹೊಸದನ್ನೇ ಕೊಡುತ್ತವೆ. ಹೊಸದನ್ನೇ ಹೇಳುತ್ತವೆ.

ನಾನು ಗಮನಿಸಿದಂತೆ ಕೆ.ಜಿ.ನಾ ಅವರು ಸದಾ ಶಿಸ್ತಿನ ವ್ಯಕ್ತಿ, ಸತತ ಅಧ್ಯಯನ ಶೀಲರು, ಚಿಂತಕರು, ಇದ್ದದ್ದನ್ನು ಇದ್ದ ಹಾಗೇ ಹೇಳುವ ಖಂಡಿತವಾದಿ. ಯಾವುದೇ ಗಿಮಿಕ್‌ಗಳಿಂದ ದೂರವಾಗಿರುವವರು. ಕೆ.ಜಿ.ನಾ ಮೂಲತಃ ಆಸ್ತಿಕರು, ದೈವಭಕ್ತರು. ಆದರೆ ಎಲ್ಲಾ ರೀತಿಯ ನಂಬಿಕೆ-ಮೂಢನಂಬಿಕೆಗಳನ್ನು ಇದ್ದಂತೆ ಒಪ್ಪಿಕೊಳ್ಳುವವರಲ್ಲ. ಸಂಪ್ರದಾಯವಾದಿಗಳಿಗೆ ಇವರು ನಾಸ್ತಿಕರಂತೆಯೂ, ಬಂಡಾಯಗಾರನಾಗಿಯೂ ಕಾಣುತ್ತಾರೆ. ಸುರಕ್ಷಿತ ವಲಯದಲ್ಲಿ ನಿಂತು ಕ್ರಾಂತಿ ಕಹಳೆ ಊದುವ ಬಂಡಾಯಗಾರರಿಗೆ

ಇವರು ಸಂಪ್ರದಾಯವಾದಿಗಳಂತೆ ಆಸ್ತಿಕರಂತೆ ಗೋಚರಿಸುತ್ತಾರೆ. ನಾನು ಅವರ ಬದುಕಿನ ಅಂತರಂಗ ಮತ್ತು ಬಹಿರಂಗವನ್ನು ಗಮನಿಸಿದಂತೆ ಕೆ.ಜಿ.ನಾ. ಮಾನವತಾವಾದಿ. ಮಾನವೀಯತೆಗಾಗಿ ತುಡಿಯುವವರು. ಅದಕ್ಕಾಗಿ ಹೋರಾಡುವವರು. ಸಂಪ್ರದಾಯವಾದಿಯಾದರು ಧರ್ಮ ಸಂಸ್ಕೃತಿಯಲ್ಲಿನ ಒಳ್ಳೆಯದನ್ನು ಮೆಚ್ಚುವ ಕೆಟ್ಟದ್ದನ್ನು ಖಂಡಿಸುವವರು. ಅದೇ ರೀತಿ ಪ್ರಗತಿಪರರು ಎಂದು ಪೋಸು ಕೊಡುವ ವ್ಯಕ್ತಿಗಳ ಅಪರಾಧಗಳನ್ನು ಕ್ಷಮಿಸುವವರಲ್ಲ. ಕೆ.ಜಿ.ನಾ ಎಡಪಂಥಿಯರೂ ಅಲ್ಲ. ಬಲಪಂಥೀಯರೂ ಅಲ್ಲ. ಕೇವಲ ಜೀವಪರವಾಗಿ ನಿಲ್ಲುವವರು.

ಕೆ.ಜಿ.ನಾ ಅವರಲ್ಲಿ ನಾವೆಲ್ಲ ಮೆಚ್ಚತಕ್ಕಂತಹ ವಿಷಯವೆಂದರೆ, ಅವರೆಂದೂ ಹಣ, ಅಧಿಕಾರ, ಪ್ರಚಾರ, ಪ್ರಸಿದ್ಧಿಗಳಿಗಾಗಿ ಹಾತೊರೆಯದಿರುವುದು. ಈ ಎಲ್ಲವನ್ನು ಪಡೆಯುವ ಸದವಕಾಶಗಳು ಹೇರಳವಾಗಿದ್ದರೂ ಅವೆಲ್ಲವನ್ನು ಧಿಕ್ಕರಿಸಿ ತಾನು ನಂಬಿದಂತೆ ಬದುಕಿದವರು. ತನ್ನ ಮನಸ್ಸಿಗೆ ಒಪ್ಪದ ಯಾವುದರ ಜೊತೆಗೂ ಹೊಂದಾಣಿಕೆ ಮಾಡಿಕೊಂಡವರಲ್ಲ. ರಾಜಕೀಯವಾಗಿ ಧಾರ್ಮಿಕವಾಗಿ ಸಾಹಿತ್ಯ ಮತ್ತು ಶೈಕ್ಷಣಿಕವಾಗಿ ತಮಗಿದ್ದ ಉನ್ನತ ವಲಯದ ಸಂಪರ್ಕವನ್ನು 'ಎನ್‌ಕ್ಯಾಷ್' ಮಾಡಿಕೊಳ್ಳಲು ಪ್ರಯತ್ನಿಸಿದವರಲ್ಲ. ಅವುಗಳಿಂದ ಎಂದೂ ಮೋಹಿತರಾದವರಲ್ಲ.

ಗುಬ್ಬಿ ತಾಲ್ಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿ ಸರ್ವಾನುಮತದಿಂದ ಕೆ.ಜಿ.ನಾ ನೇಮಕವಾದ ಮೇಲೆ ಅವರನ್ನು ಪದೇ ಪದೇ ಭೇಟಿ ಮಾಡುವ ಸಂದರ್ಭ ಬರುತ್ತಿತ್ತು. ಆಗೆಲ್ಲಾ ಕೆಲವು ಸಾಹಿತ್ಯ ವಲಯದ ವ್ಯಕ್ತಿಗಳು 'ಕೆ.ಜಿ.ನಾಗರಾಜಪ್ಪ ಒಂದು ರೀತಿ ವಿಕ್ಷಿಪ್ತ ಇದ್ದಹಾಗೆ. ಬಹಳ ಸಿಟ್ಟು, ಹುಷಾರಾಗಿ ಇರಿ' ಎಂದು ಹೇಳುತ್ತಿದ್ದರು. ತುಮಕೂರಿನ ಒಬ್ಬ ಗಣ್ಯ ಮಿತ್ರರಂತೂ "ಅವರ ಭಯಂಕರ ಕೋಪದಿಂದ ನಿಮ್ಮನ್ನು ರಕ್ಷಿಸಲು ಬಂದಿದ್ದೇನೆ" ಎಂದು ಹೇಳುತ್ತಿದ್ದರು. ಇವೆಲ್ಲ ನನಗೆ ನಗುತರಿಸುತ್ತಿತ್ತು. ಕೆಲವೇ ದಿನಗಳ ಅವರ ಒಡನಾಟದಿಂದ ತಿಳಿದು ಬಂದಂತೆ ಅವರೆಂದೂ ಸುಮ್ಮ ಸುಮ್ಮನೆ, ಅನಾವಶ್ಯಕವಾಗಿ ಸಿಟ್ಟು ಮಾಡಿಕೊಳ್ಳುವವರಲ್ಲ. ಎಲ್ಲಿ ಅನ್ಯಾಯ, ತಪ್ಪು ಕಂಡು ಬಂದಿದೆ ಅಲ್ಲಿ ಯಾವುದೇ ಎಗ್ಗಿಲ್ಲದೆ ಝಾಡಿಸಿದ್ದಾರೆ. ತಾವು ಮಾಡುವುದೆಲ್ಲಕ್ಕೂ ನಾಗರಾಜಪ್ಪ ಬೆನ್ನು ತಟ್ಟಬೇಕು, ಹೊಗಳಬೇಕು ಎಂದು ನಿರೀಕ್ಷಿಸುವ ಜನರು ಏನೆಲ್ಲಾ ಕಟ್ಟುಕತೆ ಕಟ್ಟುತ್ತಾರೆ, ಅಪಪ್ರಚಾರ ಮಾಡುತ್ತಾರೆ.

ಇನ್ನೊಂದು ನಾಗರಾಜಪ್ಪನವರ ಮೇಲಿನ ಆರೋಪವೆಂದರೆ ಕೆಲ ಬ್ರಾಹ್ಮಣರು ಇವರನ್ನು ಬ್ರಾಹ್ಮಣವಿರೋಧಿಯೆಂದೂ, ಕೆಲ ವೀರಶೈವರು ವೀರಶೈವ ವಿರೋಧಿಯೆಂದೂ ಭಾವಿಸುತ್ತಾರೆ. ಇದು ಸತ್ಯವನ್ನು ಅರಗಿಸಿಕೊಳ್ಳಲು ತಾಕತ್ತಿಲ್ಲದ ಸರ್ವಾಧಿಕಾರಿ ಮನೋಭಾವದ ಮತೀಯ ವಾದಿಗಳ ವ್ಯಥಾ ಆರೋಪ. ಕಹಿಯಾದರೂ ಸತ್ಯವನ್ನು ಒಪ್ಪಿಕೊಳ್ಳುವ ಉದಾರ ಹೃದಯದ ಜನರಿಂದ ಕೆ.ಜಿ.ನಾ ಬಗ್ಗೆ ಯಾವುದೇ ಆರೋಪ ಬರಲು ಸಾಧ್ಯವಿಲ್ಲ. ಕೆ.ಜಿ.ನಾ ಅವರು ನಮ್ಮ ಧರ್ಮದ, ಜಾತಿಯ ವಿರೋಧಿ ಎಂದು ಭಾವಿಸುವ ಜನ ಅವರೇ ಸಂಪಾದಿಸಿರುವ 'ಶಂಕರಿ' ಎಂಬ ನೆನಪಿನ ಸಂಚಿಕೆಯನ್ನು

ನೋಡಬಹುದು. ಅದರಲ್ಲಿ ಕೆ.ಜಿ.ನಾ ಅವರು ತಮ್ಮ ಜನಾಂಗದ ಧರ್ಮಗುರುವನ್ನು ಸಂದರ್ಶಿಸಿರುವ ರೀತಿ, ಕೇಳಿರುವ ಪ್ರಶ್ನೆಗಳನ್ನು ಗಮನಿಸಬಹುದು. ಈ ಸಂಚಿಕೆ ಓದಿದ ಲೋಕಜ್ಞಾನವಿಲ್ಲದ ಸಂಕುಚಿತ ಮನಸ್ಸಿನ ವ್ಯಕ್ತಿಯೂ ನಾಗರಾಜಪ್ಪನನ್ನು ತಮ್ಮ ಜನಾಂಗದ ವಿರೋಧಿಯೆಂದು ತಿಳಿದುಕೊಳ್ಳುವುದರಲ್ಲಿ ಸಂಶಯವಿಲ್ಲ.

ಈ ನಾಲ್ಕೈದು ವರ್ಷಗಳಲ್ಲಿ ಬೇರೆ ಬೇರೆ ಜನಾಂಗಕ್ಕೆ ಸೇರಿದ ನನ್ನ ಮತ್ತು ಕೆ.ಜಿ.ನಾ ಸಂಬಂಧ ಗಾಢವಾಗುತ್ತಾ ಹೋಯಿತು. ತಿಂಗಳಿಗೆ ಒಂದೆರಡು ಬಾರಿಯಾದರೂ ಭೇಟಿಯಾಗುತ್ತಿದ್ದೆವು, ಮಾತಾಡುತ್ತಿದ್ದೆವು, ಓಡಾಡುತ್ತಿದ್ದೆವು. ಈ ಅವಧಿಯಲ್ಲಿ ಅವರ ಮೇಲಿರುವ ಆರೋಪಗಳು ಸಾಭೀತಾಗುವಂತ ಸಂದರ್ಭಗಳು ಬರಲೇ ಇಲ್ಲ. ನನಗನ್ನಿಸುತ್ತದೆ ಕೆ.ಜಿ.ನಾ ಅನ್ಯಾಯದ ದ್ವೇಷಿಗಳೇ ಹೊರತು ನ್ಯಾಯ, ನೀತಿ, ಸತ್ಯದ ವಿರೋಧಿಗಳಲ್ಲ. ಅವು ಎಲ್ಲಿದ್ದರೂ ಗೌರವಿಸುತ್ತಾರೆ, ಪ್ರೀತಿಸುತ್ತಾರೆ, ಪ್ರೋತ್ಸಾಹಿಸುತ್ತಾರೆ.

ಕೆ.ಜಿ.ನಾ ಜಿಲ್ಲೆಯ ಸಾಂಸ್ಕೃತಿಕ ಪರಿಸರದ ಉಸಿರಾಗಿದ್ದೂ ತುಮಕೂರು ತೊರೆದು ಬೆಂಗಳೂರು ಸೇರಿದ ಮೇಲೆ ಅಲ್ಲಿಂದ ನನಗೆ ಬರೆದ ಪತ್ರವೊಂದರಲ್ಲಿ ಈ ಸಾಲುಗಳು ಬರೆಯಲ್ಪಟ್ಟಿವೆ. **"ನನ್ನ ಬದುಕು ತೆರೆದಿಟ್ಟ ಪುಸ್ತಕ. ಅನೇಕ ಸವಾಲುಗಳನ್ನು ಎದುರಿಸುತ್ತಾ, ಯಾರಿಗೂ ಸೊಪ್ಪುಹಾಕದೆ ಛಲದಿಂದ ನನ್ನ ಪಾಡಿಗೆ ನಾನು ಒಂಟಿ ಸಲಗದಂತೆ ಬೆಳೆದೆ. ನಾನು ಸಮಾಜಕ್ಕೆ ಪಡೆದಿರುವುದಕ್ಕಿಂತ ಕೊಟ್ಟಿರುವುದೇ ಅಧಿಕ. 'ಅಹಂ' ನಿಂದ ಈ ಮಾತನ್ನು ಹೇಳುತ್ತಿಲ್ಲ. ಯಾವುದೇ ಫಲ ನಿರೀಕ್ಷಿಸದೆ ನನ್ನ ಸಾಮರ್ಥ್ಯಕ್ಕೆ ಸಾಧ್ಯವಾದುದನ್ನೆಲ್ಲಾ ನಿಷ್ಕರ್ಮದಿಂದ ಮಾಡಿ ಮುಗಿಸಿರುವ ತೃಪ್ತಿ ನನಗಿದೆ. ಎಂದೂ ನನ್ನ ಕಲಿಕೆಯನ್ನು ಲಾಭಕ್ಕೆ ಬಳಸಿಕೊಳ್ಳಲಿಲ್ಲ. ಗೊತ್ತಿರುವುದನ್ನು ಮೋಸ ಮಾಡದೆ ಇತರರಿಗೆ ತಿಳಿಸಿದೆ. ಅಧಿಕಾರ ಮತ್ತು ಹಣಕ್ಕೆ ಆಸೆ ಪಡಲಿಲ್ಲ. ಗ್ರಾಮೀಣ ಬದುಕು ಮತ್ತು ಕೆಳವರ್ಗದ ಸಂಸ್ಕೃತಿಯ ಬಗ್ಗೆ ತಲೆಕೆಡಿಸಿಕೊಂಡೆ. ಅದರಿಂದ ಆತ್ಮವಿಶ್ವಾಸ ಬೆಳೆಯಿತು. ಮತ್ತು ನನ್ನ ಬದುಕಿಗೆ ನೆಲೆಸಿಕ್ಕಂತಾಯಿತು. ಅದನ್ನೇ ನನ್ನ ಬರವಣಿಗೆಯ ಮೂಲದ್ರವ್ಯವನ್ನಾಗಿಸಿಕೊಂಡೆ. ಕ್ರಮೇಣ ಬರಹಗಾರನಾಗಿ ಆತ್ಮವಿಶ್ವಾಸ ಮೂಡಿತು."** ಈ ಮಾತುಗಳನ್ನು, ಈಗಿರುವ ಅವರ ಬದುಕಿನ ಸ್ಥಿತಿಯನ್ನು ಗಮನಿಸಿದಾಗ ಕೆ.ಜಿ.ನಾ ಎಂದೂ ನುಡಿದಂತೆ ನಡೆದವರು. ಸ್ವಾರ್ಥ, ಆಸೆ, ಪ್ರಸಿದ್ಧಿಗಳ ಬೆನ್ನು ಹತ್ತಿದವರಲ್ಲ ಎಂಬುದು ಮನದಟ್ಟಾಗುತ್ತದೆ.

ಇನ್ನೊಂದು ಪತ್ರದಲ್ಲಿ ಬರೆಯುತ್ತಾರೆ. **"ಗ್ರಾಮಾಂತರದ ಬದುಕನ್ನು ಯಶಸ್ವಿಯಾಗಿ ಅಭಿವ್ಯಕ್ತಗೊಳಿಸುವ ಶಕ್ತಿಯನ್ನು ಸಾಧಿಸಿಕೊಳ್ಳಬೇಕು. ಆಗಲೇ ಸಮಾಜದ ಬದಲಾವಣೆ ಸಾಧ್ಯವಾಗುವುದು. ಧರ್ಮ ಮತ್ತು ವಿಜ್ಞಾನ ಎರಡೂ ಜನಜೀವನದ ಮೇಲೆ ದುಷ್ಟ ಪರಿಣಾಮ ಉಂಟುಮಾಡುತ್ತಿವೆ. ಇಂಥ ಸಂದಿಗ್ಧ ಕಾಲದಲ್ಲಿ ಹೊಸದಾಗಿ ಹೊಸ ಬದುಕು ಮೂಡಿ ಬರಬೇಕಿದೆ. ಶೋಷಿತರು ಜಾಗೃತರಾಗಿ ಮೇಲೆ ಎದ್ದಾಗಲೇ ಹೊಸ ಬದುಕು ಮತ್ತು ಬೆಳಕು ಮೈದೋರುವುದು. ಇಂಥ ಜಾಗೃತಿಯ ಹರಿಕಾರರಾಗಿ ನಿಮ್ಮಂತಹ ತರುಣರು ದುಡಿಯಬೇಕು".**

"ದನಿ ಇಲ್ಲದ ವರ್ಗದಿಂದ ನಾಲಿಗೆ ಮೂಡಿ ಬರಬೇಕು. ಅಪರಿಚಿತರ ದನಿಗಳು ಪರಿಚಯವಾಗಬೇಕು. ಆಗಲೇ ಸಾಹಿತ್ಯಕ್ಕೆ ವೈವಿಧ್ಯತೆ ಬಂದು ಬನಿ ಬರುತ್ತದೆ. ಕೇವಲ ಸಾಹಿತ್ಯಾರಾಧಕರಾಗಬೇಡಿ. ಸಾಹಿತ್ಯ ರಚನಕಾರರಾಗಿ ಸೃಜನಶೀಲ ಶಕ್ತಿ ಬೆಳೆಸಿಕೊಳ್ಳಿ."

ಇವು ಕೆ.ಜಿ.ನಾ ಅವರ ಅಂತರಂಗದ ಆಶಯಗಳು. ಶೋಷಿತರು, ಗ್ರಾಮೀಣರು, ಬಹುಸಂಸ್ಕೃತಿಯ ಕೆಳವರ್ಗದ ಜೊತೆ ನಿರಂತರವಾಗಿ ಗುರುತಿಸಿಕೊಂಡು ಅವರ ಒಳಿತಿಗಾಗಿ ಶ್ರಮಿಸುವ ಕೆ.ಜಿ.ನಾ ತರುಣರು ಮತ್ತು ತರುಣ ಬರಹಗಾರರಿಗೆ ಮಾರ್ಗದರ್ಶನ ಮಾಡುವ, ಬೆನ್ನು ತಟ್ಟುವ, ಉತ್ಸಾಹ ತುಂಬಿ ತಬ್ಬಲಿತನ ಹೋಗಲಾಡಿಸುವ ಪರಿ ಇಪಾಗಿದೆ. ಬೆಂಗಳೂರಿನಂತ ಊರಿನಲ್ಲಿ ಕಾಲಕ್ಕೆ ಬೆಲೆಯಿದೆ. ಲಾಭದಾಸೆಯಿಲ್ಲದೆ ಕಾಲ ವ್ಯಯ ಮಾಡಲು ಯಾರೂ ತಯಾರಿಸುವುದಿಲ್ಲ. ಆದರೆ ಕೆ.ಜಿ.ನಾ ಮನೆಗೆ ಹೋದರೆ ಕಾಲ ಪ್ರೀತಿಗಾಗಿ ಕೆಲಸಮಾಡುತ್ತದೆ. ಅನೇಕ ತರುಣರು ಎಂ.ಎ., ಪಿ.ಹೆಚ್.ಡಿ ಮತ್ತಿತರ ವ್ಯಾಸಂಗಗಳಿಗಾಗಿ ಸಲಹೆ ಕೇಳಲು ಮಾರ್ಗದರ್ಶನ ಪಡೆಯಲು ಬರುತ್ತಾರೆ. ಉದ್ಯೋಗದ ಬಗ್ಗೆ ತಿಳಿವು ಪಡೆಯುತ್ತಾರೆ. ಕುಟುಂಬದ ಕಷ್ಟ ಸುಖಗಳನ್ನು ಬಂದವರು ಹೇಳಿಕೊಂಡು ಕೆ.ಜಿ.ನಾ ಅವರಿಂದ ಸಾಂತ್ವನ ಪಡೆದು ನೆಮ್ಮದಿಯಿಂದ ಹಿಂದಿರುಗುತ್ತಾರೆ. ಪರಿಚಿತರ ಮನೆಯ ಸಾವು, ನೋವು, ಮದುವೆ, ಮುಂಜಿ, ಜಗಳ, ಮನಸ್ತಾಪ ಇತ್ಯಾದಿ ಏನೇ ಇದ್ದರೂ ಕೆ.ಜಿ.ನಾ ತನ ಕೆಲಸ ಬಿಟ್ಟು ಅಲ್ಲಿ ನಿಂತು ನೆರವಾಗುತ್ತಾರೆ. ಅದಕ್ಕಾಗಿ ತಮ್ಮ ಅಮೂಲ್ಯ ಸಮಯ ಮೀಸಲಾಗಿಡುತ್ತಾರೆ, ವ್ಯಯಿಸುತ್ತಾರೆ.

"ಜಾತಿ ಸಾಹಿತ್ಯ, ಸಾಹಿತಿಗಳು ಮತ್ತು ಪ್ರೋತ್ಸಾಹಕರ ಬಗ್ಗೆ ತಲೆಕೆಡಿಸಿಕೊಳ್ಳುವುದು ಬೇಡ. ನಮ್ಮ ಪಾಡಿಗೆ ನಾವು ಅಸಲಿ ಸಾಹಿತ್ಯ ಚಿಂತನೆ ಮಾಡೋಣ. ಧ್ವನಿ ಇಲ್ಲದ ಜನರ ಬದುಕಿಗೆ ಹೆಚ್ಚು ಗಮನ ಕೊಡೋಣ. ಇತ್ತೀಚೆಗಂತೂ ಯಾರಲ್ಲಿಯೂ ಒಂದಿಷ್ಟು ಕನಿಷ್ಠ ಮೌಲ್ಯಗಳೂ ಉಳಿಯುತ್ತಿಲ್ಲ. ತರುಣರು ಸರಿಯಾದ ಮಾರ್ಗದರ್ಶನವಿಲ್ಲದೆ ದಿಕ್ಕೆಟ್ಟಿದ್ದಾರೆ. ಜಾತಿ ಮತ್ತು ಜಾತ್ಯಾತೀತ ವಿಷಯಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಕ್ಕಿಂತ ಬಹುಸಮಾಜಗಳ ಬಗ್ಗೆ ಚಿಂತಿಸಬೇಕಿದೆ. ಸತ್ಯಾನ್ವೇಷಣೆಯಿಂದ ಅವರ ಸಂಸ್ಕೃತಿಯ ಸಂಶೋಧನೆಗೆ ತೊಡಗಬೇಕಿದೆ. ಹುಸಿಧರ್ಮ ನಿರಪೇಕ್ಷಿತ ಸೋಗಲಾಡಿಗಳ ಪೊಳ್ಳುತನ ಹೊರ ಗೆಡಹಬೇಕಿದೆ."

"ಹೋರಾಟ ಮತ್ತು ಚಳುವಳಿ ದುರ್ಬಲವಾಗುತ್ತಿವೆ. ರಾವಣರೆಲ್ಲರೂ ರಾಮರ ವೇಷ ತೊಟ್ಟಿದ್ದಾರೆ. ಅಸಲಿ ರಾಮ ತಬ್ಬಲಿಯಾಗಿದ್ದಾನೆ. ಹೀಗೆ ಅಸಲಿ ರಾಮ ಮತ್ತು ವೇಷಧಾರಿ ರಾಮ ಇಬ್ಬರೂ ತಬ್ಬಲಿಗಳಾಗುತ್ತಿರುವುದು ದೇಶದ ದೃಷ್ಟಿಯಿಂದ ಆರೋಗ್ಯಕರ ವಿಷಯವಲ್ಲ"

ಹೀಗೊಮ್ಮೆ ಅವರು ನನಗೆ ಬರೆದ ಪತ್ರದಲ್ಲಿ ತಿಳಿಸಿದರು. ಇವನ್ನೆಲ್ಲಾ ಅವಲೋಕಿಸಿದಾಗ ಕೆ.ಜಿ.ನಾ ಅವರ ಬರಹ-ಚಿಂತನೆಗಳು ಸಮಸ್ತ ಶೋಷಿತರ ಬೈಬಲ್ ಆಗಬೇಕಿತ್ತು, ಸಂವಿಧಾನ ವಾಗಬೇಕಿತ್ತು. ಆದರೆ ಇವ್ಯಾವುದೂ ಆದಂತೆ ಕಂಡು

ಬರುವುದಿಲ್ಲ. ಮೇಲ್ವರ್ಗದ ಜನರೂ ಅವರನ್ನು ಸ್ವೀಕರಿಸುತ್ತಿಲ್ಲ. ಶೋಷಿತ ಕೆಳವರ್ಗದ ಜನರು ಅವರ ಚಿಂತನೆಗಳನ್ನು ಅರಿಯುತ್ತಿಲ್ಲ. ದನಿ ಇಲ್ಲದವರಿಗೆ ದನಿ ಕೊಡುವ ಮಾತನಾಡುವ ಬಂಡಾಯದವರಿಗಂತೂ ಅವರು ಬೇಕಿಲ್ಲ. ಯಾಕೆ ಹೀಗೆ? ಎಂದು ಚಿಂತಿಸುತ್ತಾ ಹೋದಂತೆ ಅಕ್ಷರ ಸಂಸ್ಕೃತಿಯ ವಕ್ತಾರರ ಸರ್ವಾಧಿಕಾರ ಮನೋಗುಣ, ಕೆಳವರ್ಗದ, ದಲಿತ, ಬಂಡಾಯದ, ಬುದ್ಧಿಜೀವಿಗಳ ಸ್ವಾರ್ಥ, ಅಸೂಯೆ, ಸ್ವಪ್ರತಿಷ್ಠೆ, ಸಾಹಿತ್ಯದ ರಾಜಕಾರಣವೆನ್ನದೆ ಬೇರೆ ಮಾತುಗಳೇ ಇಲ್ಲ. ಅಥವಾ ಕೆ.ಜಿ.ನಾ ಅವರೂ ಸಹ ಕಾರಣವೇನೋ ಎಂಬ ಅನುಮಾನ ಬರುತ್ತದೆ. ಅವರು ಒಂಟಿಸಲಗದಂತೆ ತಾವೊಬ್ಬರೇ ನುಗ್ಗಿದರೇ ವಿನಃ ತಮ್ಮದೇ ಆದ ಒಂದು ವಲಯ ಸೃಷ್ಟಿಸಲಿಲ್ಲ. ಹಾಗೆ ಸೃಷ್ಟಿಸಿದ್ದರೆ, ಅನುಯಾಯಿಗಳ ಪಡೆ ನಿರ್ಮಿಸಿದ್ದರೆ, ಸಮೂಹ ಮಾಧ್ಯಮಗಳನ್ನು ಸಮರ್ಥವಾಗಿ ಬಳಸಿಕೊಂಡಿದ್ದರೆ, ವರ್ಷಕ್ಕೆ ಒಂದೆರಡಾದರೂ ಪುಸ್ತಕಗಳನ್ನು ಪ್ರಕಟಿಸಿದ್ದರೆ ಹೀಗಾಗುತ್ತಿರಲಿಲ್ಲ. ಒಳ್ಳೆಯ ಉದ್ದೇಶಕ್ಕಾಗಿ ದೇಶಿಯ ಗ್ರಾಮೀಣ ಮೂಲದ ಅಸಲಿ ಚಿಂತನೆಯ ಪ್ರಚಾರಕ್ಕಾಗಿ ಕೆಳವರ್ಗದ ಜನರ ಏಳಿಗೆಗಾಗಿ ಕೆ.ಜಿ.ನಾ. ಅವರು ಒಂದಷ್ಟು ರಾಜಕೀಯವನ್ನು, ಸಾಹಿತ್ಯದ ರಾಜಕೀಯವನ್ನು ಮಾಡಬೇಕಿತ್ತು ಎಂಬುದು ನನ್ನ ವೈಯಕ್ತಿಕ ವಾದ. 'ಎರಡು ಹೆಜ್ಜೆ ಮುಂದೆ ಹೋಗಲು ಒಂದು ಹೆಜ್ಜೆ ಹಿಂದೆ ಸರಿಯುವ' ಲೆನಿನ್ ತಂತ್ರ ಅನುಸರಿಸಿದ್ದರೆ ಚನ್ನಾಗಿತ್ತು

ಕೆ.ಜಿ.ನಾ ಅವರ ಬದುಕು ಬರಹ-ವ್ಯಕ್ತಿತ್ವದ ಬಗ್ಗೆ ಇಷ್ಟೆಲ್ಲಾ ಮಾತುಗಳನ್ನು ನಾನು ಹೇಳಿದ ಮೇಲೆ ಅವರು ತಪ್ಪೇ ಮಾಡದ ಪರಿಪೂರ್ಣ ವ್ಯಕ್ತಿಯೋ, ದೇವಮಾನವರೋ ಎಂಬ ಅನುಮಾನ ಬರಬಹುದು. ಹಾಗೆ ನೋಡಿದರೆ ಅವರಲ್ಲಿಯೂ ಮನುಷ್ಯ ಸಹಜವಾದ ಲೋಪದೋಷಗಳಿರಬಹುದು. ತಪ್ಪುಗಳಾಗಿರಬಹುದು. ಆದರೆ ಅವೆಲ್ಲಾ ಉದ್ದೇಶಪೂರ್ವಕವಾಗಿ ಯಾರನ್ನೋ ನೋಯಿಸುವಂತ ಕಾರಣದಿಂದಲೇ ಆದಂತಹವು ಎಂದು ನಾನು ತಿಳಿದಿಲ್ಲ. ಒಂದು ಮಾತು ಹೇಳುತ್ತಾರೆ. ಮಹಾತ್ಮಗಾಂಧಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ಅವರಷ್ಟೆ ಎತ್ತರದವರಿಗೆ, ಸಮಾನ ಮನಸ್ಕರಿಗೆ ಮಾತ್ರ ಸಾಧ್ಯ ಎಂದು. ಇದೇ ಮಾತನ್ನೂ ನಾವು ಕೆ.ಜಿ.ನಾ ಕುರಿತೂ ಹೇಳಬಹುದು. ಪರಸ್ಪರ ವಿರುದ್ಧ ದಿಕ್ಕಿನಲ್ಲಿರುವವರು ಒಬ್ಬರನ್ನೊಬ್ಬರು ಅರಿಯುವುದಾದರೂ ಹೇಗೆ; ಪ್ರೀತಿಸುವುದಾದರೂ ಹೇಗೆ? ಪ್ರೀತಿ ಇಲ್ಲದ ಮೇಲೆ ಹೂವು ಅರಳುವುದಾದರು ಹೇಗೆ?

ಒಟ್ಟಾರೆ ಯಾರಿಗೂ ಡೊಗ್ಗು ಸಲಾಮು ಹೊಡೆಯದ ಗೂಳಿಯಂತೆ ಮುನ್ನುಗ್ಗುವ ಕೆ.ಜಿ.ನಾ ಅವರ ಆದರ್ಶ ನಡೆ ನುಡಿ, ಬದುಕು-ಬರಹ ನನ್ನಂತಹ ತರುಣರಿಗೆ ಮಾರ್ಗದರ್ಶಕವಾಗುವುದರಲ್ಲಿ ಸಂದೇಹವಿಲ್ಲ. 'ಅಮೇರಿಕದ ನನ್ನ ಸೋದರ ಸೋದರಿಯರೇ' ಎಂಬ ತಮ್ಮ ಒಂದು ಮಾತಿನಿಂದ, ಅಂದು ಮಾಡಿದ ಒಂದು ಭಾಷಣದಿಂದ ಸ್ವಾಮಿ ವಿವೇಕಾನಂದರು ಅಮೇರಿಕನ್ನರ ಹೃದಯಗೆದ್ದಂತೆ ತಮ್ಮ ಬರಹ-ಭಾಷಣಗಳಲ್ಲಿನ ತಾತ್ವಿಕ ಚಿಂತನೆಗಳಿಂದ, ಜನಪರ ಕಾಳಜಿಗಳಿಂದ, ಶೋಷಿತರ ಪರನಿಲ್ಲುವ ಧೀಮಂತ ಗುಣಗಳಿಂದ ಕೆ.ಜಿ.ನಾ ನನ್ನ ಮನ ಗೆದ್ದಿದ್ದಾರೆ, ನನ್ನ ಮೇಲೆ ಗಾಢ ಪ್ರಭಾವ ಬೀರಿದ್ದಾರೆ. ♦

8. ಗೌರವ ಬಾಗಿನ

ಪ್ರೊ॥ ಎಂ.ಎಲ್. ನರಸಿಂಹಮೂರ್ತಿ

‘ಕೆ.ಜಿ.ಎನ್’ ಎಂದೇ ವಿದ್ಯಾರ್ಥಿ ವೃಂದದಲ್ಲಿ ಜನಪ್ರಿಯರಾಗಿರುವ ಪ್ರೊ॥ ಕೆ.ಜಿ.ನಾಗರಾಜಪ್ಪನವರು 1966 ರಲ್ಲಿ ಪಿ.ಯು.ಸಿ ವಿದ್ಯಾರ್ಥಿಯಾಗಿದ್ದ ನನಗೆ ಕನ್ನಡ ಮೇಷ್ಟ್ರು’ (ಪ್ರೀತಿಯಿಂದ ಈ ಪದವನ್ನು ಗೌರವಪೂರ್ವಕವಾಗಿ ಬಳಸಿದ್ದೇನೆ). ಆಗ ತಾನೇ ಹೈಸ್ಕೂಲ್ ಮುಗಿಸಿ ಕಾಲೇಜಿಗೆ ಸೇರಿದ್ದ ನನಗೆ ‘ಕಾಲೇಜು ಮೇಷ್ಟ್ರು’ ಅಂದರೆ ಠೀಕು ಠಾಕಾಗಿ ಸೂಟು ಧರಿಸಿಕೊಂಡು, ಕಾಲಿಗೆ ಮಿರಿ ಮಿರಿ ಮಿಂಚುವ ಶೂ ಹಾಕಿಕೊಂಡಿರುತ್ತಾರೆ ಎಂಬ ಕಲ್ಪನೆ. ಆದರೆ ಮೊದಲ ಬಾರಿಗೆ ಕೆ.ಜಿ.ಎನ್. ಅವರನ್ನು ಕಂಡಾಗ ನನ್ನ ಕಲ್ಪನೆ ಹುಸಿಯಾಗಿತ್ತು. ಸಾಧಾರಣ ಉಡುಪು ಧರಿಸಿ ಕಾಲೇಜಿಗೆ ಬರುತ್ತಿದ್ದ ಅವರನ್ನು ಕಂಡಾಗಲೇ ‘ಸರಳತೆ’ ಪದದ ನಿಜವಾದ ಅರ್ಥ ನನಗೆ ತಿಳಿದದ್ದು.

ಅವರು ತರಗತಿಯಲ್ಲಿ ‘ಕಾವ್ಯವಲ್ಲರಿ’ ಪಠ್ಯದಲ್ಲಿದ್ದ ಹಳಗನ್ನಡ ಪದ್ಯಗಳನ್ನು ನಿರರ್ಗಳವಾಗಿ ಓದುತ್ತಿದ್ದಾಗ ನಾನು ಆಶ್ಚರ್ಯದಿಂದ ತದೇಕಚಿತ್ತನಾಗಿ ಅವರ ಬಾಯನ್ನೇ ನೋಡುತ್ತಿದ್ದೆ. ಇಂಥ ಓದು ಅವರಿಗೆ ಹೇಗೆ ದಕ್ಕಿತು ಎಂಬುದೇ ನನ್ನ ಕುತೂಹಲಕ್ಕೆ ಕಾರಣವಾಗಿತ್ತು. ಯಾಕೆಂದರೆ, ಹಳಗನ್ನಡ ಪದ್ಯಗಳನ್ನು ತಡವರಿಸದೆ ಓದಲು ನಾನೆಷ್ಟು ಪ್ರಯತ್ನ ಪಟ್ಟರೂ ನನ್ನಿಂದ ಸಾಧ್ಯವಾಗಿರಲಿಲ್ಲ. ಕೆ.ಜಿ.ಎನ್ ಅವರು ಕೇವಲ ಪದ್ಯಗಳನ್ನು ಓದಿ ಅವರ ಅರ್ಥ ಬಿಡಿಸಿಹೇಳಿ, ತಾತ್ಪರ್ಯ ಹೇಳುವ ಮೇಷ್ಟ್ರಲ್ಲ. ಆ ಪದ್ಯಗಳ ಮಹತ್ವ, ವಿಶೇಷತೆಯನ್ನು ತಿಳಿಸಿ ವಿಮರ್ಶೆ ಮಾಡುತ್ತಾ ಕೆಲವೊಮ್ಮೆ ಈ ಪದ ಇಲ್ಲಿ ಬೇಕಿತ್ತೆ? ಈ ಪದ್ಯ ಕೇವಲ ಪಾಂಡಿತ್ಯ ಪ್ರದರ್ಶನಕ್ಕೆ ಬರೆದಂತಿದೆ. ಕಾವ್ಯದ ಗಟ್ಟಿತನಕ್ಕೆ ಇಂಥ ಪದ್ಯಗಳು ಕುಂದು ತರುವುದಿಲ್ಲವೆ? ಎಂದು ಪ್ರಶ್ನಿಸುತ್ತಿದ್ದರು. ಸಾಮಾನ್ಯ ವಿದ್ಯಾರ್ಥಿಯಾಗಿದ್ದ ನನಗೆ ಅವರು ಹೇಳುತ್ತಿದ್ದುದು ವಿಚಿತ್ರವಾಗಿ ಭಾಸವಾಗುತ್ತಿತ್ತು. ವಾಸ್ತವವಾಗಿ ಅವರು ನಮ್ಮ ವಿಮರ್ಶಾ ಪ್ರಜ್ಞೆಯನ್ನು ಹರಿತಗೊಳಿಸುತ್ತಿದ್ದಾರೆಂದು ಆಗ ನನಗೆ ಅನಿಸಿರಲಿಲ್ಲ. ಅಲ್ಲದೆ ಹಳಗನ್ನಡ ಕಾವ್ಯದಲ್ಲಿ ಬರುವ ಹೆಸರುಗಳನ್ನು ಕುರಿತು ಹೇಳುವಾಗ ಪಠ್ಯದ ಚೌಕಟ್ಟಿಗೆ ಮಾತ್ರ ಸೀಮಿತಗೊಳ್ಳದೆ, ಪೂರ್ವಾಪರಗಳನ್ನೆಲ್ಲಾ ಹೇಳುತ್ತಿದ್ದರು. ಈ ಮಾತುಗಳನ್ನು ಬರೆಯುವಾಗ ನನಗೆ ಕೆಲವು ‘ಕನ್ನಡ ಮೇಷ್ಟ್ರು’ಗಳ ಬಗ್ಗೆ ಸಾತ್ವಿಕವಾದ ಸಿಟ್ಟು ಕೂಡ ಇದೆ. ಯಾಕೆಂದರೆ, ಅವರು ಹಳಗನ್ನಡ ಓದುವಾಗ ತಡವರಿಸುವ ರೀತಿ, ಅದನ್ನು ಮುಚ್ಚಿಕೊಳ್ಳಲು ಮಾಡುವ ಕಸರತ್ತು, ಹಾಗೆಯೇ ಹಳಗನ್ನಡ ಪದಗಳಿಗೆ ಅರ್ಥಹೇಳುವಾಗ “ನಾಳೆ ನೋಡಿಕೊಂಡು ಬಂದು ಹೇಳುತ್ತೇನೆ” ಎಂದು ನುಣುಚಿಕೊಳ್ಳುವ ಜಾಣಾಕ್ಷತನದ ಗಿಮಿಕ್‌ಗಳು ಅಸಹನೆಯನ್ನುಂಟುಮಾಡುತ್ತವೆ.

ಕೆ.ಜಿ.ಎನ್.ಅವರು ಕೇವಲ ಪಠ್ಯಕ್ಕಷ್ಟೇ ಸೀಮಿತಗೊಂಡು ಪಾಠ ಹೇಳುತ್ತಿರಲಿಲ್ಲ.

ಸಾಂದರ್ಭಿಕವಾಗಿ ಪ್ರಚಲಿತ ವಿದ್ಯಾಮಾನಗಳ ಬಗ್ಗೆಯೂ ಆಗಾಗ ತಿಳಿಸುತ್ತಿದ್ದರು. 'ದಾಸ್ಯ ಮನೋಭಾವ'ದವರನ್ನು ಕುರಿತು 'ಬೂಟು ನೆಕ್ಕಿಗರು' ಎಂದು ವಿಡಂಬಿಸುತ್ತಿದ್ದುದು, ಇಂಡಿಯಾದಲ್ಲಿ ಮೂರು ರೀತಿಯ ಬಿ.ಪಿ.ಗಳಿವೆ . ಅವು ಬ್ಲಡ್ ಪ್ರೆಜರ್, ಬ್ರೆಡ್ ಪ್ರೆಜರ್ ಮತ್ತು ಬೆಡ್‌ಪ್ರೆಜರ್ ಎಂದು ಹೇಳಿ, ಅವನ್ನು ವಿವರಿಸುತ್ತಿದ್ದುದು ಈಗಲೂ ನನಗೆ ಜ್ಞಾಪಕವಿದೆ. ಇಂಥ ಹಲವಾರು ನುಡಿಗಟ್ಟುಗಳನ್ನು ಅವರಿಂದ ನಾನು ಕಲಿತುಕೊಂಡೆ.

ಒಮ್ಮೆ ಅವರು ತರಗತಿಗೆ ಬಂದವರೇ " ನಿಮ್ಮಲ್ಲಿ ಯಾರಾದ್ರೂ ದೆವ್ವಾ ನೋಡಿದ್ದೀರಾ?" ಎಂದು ನಮ್ಮನ್ನು ಪ್ರಶ್ನಿಸಿದರು. ಕೆಲವರು "ಇಲ್ಲಾ ಸಾರ್" ಎಂದು ಹೇಳಿದರು, ಮತ್ತೆ ಕೆಲವರು "ಸಾರ್, ಅವರ ಮೈ ಮೇಲೆ ದೆವ್ವ ಬಂದಿತ್ತು, ನಾನು ನೋಡಿದ್ದೀನಿ" ಎಂದು ರಾಗ ಎಳೆದರು. ಅದಕ್ಕೆ ಕೆ.ಜಿ. ಎಸ್.ಅವರು, "ನೀವು ನೇರವಾಗಿ ದೆವ್ವಾ ನೋಡಿದ್ದೀರಾ?" ಎಂದು ಮರುಪ್ರಶ್ನಿಸಿದರು. ಅವರು ಹಾಗೆ ನಮ್ಮನ್ನು ಪ್ರಶ್ನಿಸಲು ಕಾರಣವಿತ್ತು. ಹಿಂದಿನ ದಿನ ಅಮಾವಸ್ಯೆ. ಅಂದು ರಾತ್ರಿ ಅವರು ಸ್ಮಶಾನಕ್ಕೆ ಹೋಗಿ ದೆವ್ವಗಳು ಕಾಣಿಸುತ್ತವೆಯೆ? ಎಂದು ಕುತೂಹಲದಿಂದ ಇಡೀ ರಾತ್ರಿ ಕಾದು ಕುಳಿತಿದ್ದರಂತೆ. ಆದರೆ ಅವರಿಗೆ ದೆವ್ವ ಕಾಣಿಸಲಿಲ್ಲವಂತೆ. ಇಂಥ ವಿಚಿತ್ರ ಸಾಹಸಗಳ ವ್ಯಕ್ತಿಯನ್ನು ಕಂಡಾಗ ಯಾರಿಗೆ ತಾನೇ ಅಚ್ಚರಿಯೆನಿಸದು. ನಿಜಕ್ಕೂ ಅವರ ವೈಜ್ಞಾನಿಕ ಶೋಧನಾ ದೃಷ್ಟಿ ಮೆಚ್ಚುವಂಥದು. ಆದರೆ ಇಂಥ ವಿಷಯಗಳಲ್ಲಿಯೇ? ಎಂದು ಕೊಂಡಾಗ ಕೆ.ಜಿ.ಎಸ್. ವಿಲಕ್ಷಣ ಪ್ರವೃತ್ತಿಯವರಾಗಿ ಕಾಣುತ್ತಾರೆ.

ಪಿ.ಯು.ಸಿ. ನಂತರ ಆ ಕಾಲೇಜನ್ನು ಬಿಟ್ಟು ಸರ್ಕಾರಿ ಕಾಲೇಜಿಗೆ ಸೇರಿದೆ. ಅಲ್ಲಿ ಬಿ.ಎ. ಮುಗಿಸಿ, ಮಂಗಳೂರಿನಲ್ಲಿ ಎಂ.ಎ.ಮುಗಿಸಿ ಬಂದು, ಕೆಲಸವಿಲ್ಲದೆ ಅಡ್ಡಾಡಿಕೊಂಡು ದಿನಗಳೆಯುತ್ತಿದ್ದೆ. ಹೀಗಾಗಿ ಕೆಲವು ವರ್ಷಗಳ ಕಾಲ ನನ್ನ ಮತ್ತು ಅವರ ಭೇಟಿಗೆ ಅವಕಾಶವೇ ಒದಗಿರಲಿಲ್ಲ. ಆದರೂ ಅವರ ಬಗ್ಗೆ ನನ್ನಲ್ಲಿದ್ದ ಗೌರವ ಭಾವಕ್ಕೆ ತುಸುವಾದರೂ ಚ್ಯುತಿ ಬಂದಿರಲಿಲ್ಲ.

1978 ರಲ್ಲಿ ಅವರನ್ನು ಮತ್ತೆ ಭೇಟಿಯಾಗುವ ಅವಕಾಶ ದೊರೆಯಿತು! "ನಮಸ್ಕಾರ ಸಾರ್" ಎಂದೆ. ಅವರು ನನ್ನತ್ತ ನೋಡಿ ಮುಗುಳ್ನಕ್ಕು, "ಏನಯ್ಯಾ, ಎಲ್ಲಿದ್ದೀಯಾ?ಏನ್‌ಮಾಡ್ತಾ ಇದ್ದೀಯ?" ಎಂದು ಪ್ರಶ್ನಿಸಿದರು. "ಸಾರ್, ಮಧುಗಿರಿ ಕಾಲೇಜಿನಲ್ಲಿ ಕನ್ನಡ ಮೇಷ್ಟ್ರಾಗಿದ್ದೀನಿ" ಎಂದೆ. "ಒಳ್ಳೇದಾಯ್ತು ಬಿಡು. ಕಾಲೇಜಿನ ವಾತಾವರಣ ಹೇಗಿದೆ? ಹುಡುಗರು ಏನಂತಾರೆ....." ಎಂದು ಪ್ರಶ್ನಿಸಿದರು. "ಎಲ್ಲಾ ಚೆನ್ನಾಗಿದೆ" ಎಂದು ಮೊಟುಕಾಗಿ ಉತ್ತರಿಸಿದೆ. " ಒಂದು ಮಾತು ಜ್ಞಾಪಕದಲ್ಲಿಟ್ಕೊ. ನಾಳೆ ಏನೇನು ಪಾಠ ಮಾಡಬೇಕೊ ಅದನ್ನೆಲ್ಲಾ ಹಿಂದಿನ ದಿನಾನೇ ಚೆನ್ನಾಗಿ ಓದ್ಕೊಂಡು ಹೋಗ್ಬೇಕು. ಗೊತ್ತಾಯ್ತಾ. ನಮ್ಮ ವಿದ್ಯೆಯ ವೀಕ್‌ನೆಸ್‌ಗಳು ಹುಡುಗರಿಗೆ ತಿಳಿಬಾರದು. ಇಲ್ಲದೇ ಹೋದ್ರೆ ಹುಡುಗರಿಗೆ ವಂಚನೆ ಮಾಡ್ದಾಗಾಗುತ್ತೆ. ಅಷ್ಟೇ ಅಲ್ಲ ನಾವು ಕೂಡ ಬೌದ್ಧಿಕವಾಗಿ ಬೆಳೆಯೋಕೆ ಆಗೋಲ್ಲ. ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದಬೇಕು ತಿಳೀತಾ"

ಎಂದು ಕಿವಿಮಾತು ಹೇಳಿದರು. ಪ್ರಾಮಾಣಿಕವಾದ ಮೇಷ್ಟ್ರೊಬ್ಬರು ತನ್ನ ಶಿಷ್ಯ ಮೇಷ್ಟ್ರಾಗುತ್ತಿದ್ದ ದಿನಗಳಲ್ಲಿ ಇದಕ್ಕಿಂತ ಹೆಚ್ಚಿಗೆ ಹೇಳಲು ಏನು ತಾನೇ ಸಾಧ್ಯ. ಅವರ ಮಾತುಗಳು ಆಗಾಗ ನನಗೆ ನೆನಪಾಗುತ್ತಾ ಓದಿನ ಬಗ್ಗೆ, ತರಗತಿಗೆ ಹೋಗುವ ಮುನ್ನ ಪೂರ್ವತಯಾರಿ ನಡಸುವುದರ ಬಗ್ಗೆ ಎಚ್ಚರಿಸುತ್ತಲೇ ಇರುತ್ತವೆ. ಅದಕ್ಕಾಗಿ ಕೆ.ಜಿ.ಎನ್‌ಗೆ ನಾನು ಋಣಿ ಅಂದ್ರೆ ಕ್ಲೀಷೆ ಆಗಬಹುದು. ಆದರೂ ಹೇಳಲೇ ಬೇಕೆನಿಸಿದ್ದನ್ನು ಹೇಳದಿದ್ದರೆ ಮನಸ್ಸು ಹಗುರವಾಗುವುದಿಲ್ಲ.

ಕೆಲವು ವರ್ಷಗಳ ತರುವಾಯ, ವಿಶ್ವವಿದ್ಯಾಲಯದ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕೆ ಬೆಂಗಳೂರಿಗೆ ಹೋಗಿದ್ದೆ. ಆಗ ಅವರು ಪರಿಶೀಲಕರು (ರಿವ್ಯೂಯರ್) ನಾನು ಅವರ ತಂಡದಲ್ಲೊಬ್ಬ ಮೌಲ್ಯಮಾಪಕ (ವ್ಯಾಲ್ಯೂಯ [illegible] ಅವರು ಮೊದಲ ದಿನವೇ ನಮಗೆಲ್ಲ ಹೇಳಿದ್ದು: "ಅವಸರ ಮಾಡಬೇಡಿ, ನಿಧಾನವಾಗಿ ಓದಿ ಮಾರ್ಕ್ಸ್ ಕೊಡಿ. ಪೇಜ್ ತಿರುವಿ ಮಾರ್ಕ್ಸ್ ಹಾಕಬೇಡಿ. ಸರಿಯಾದ ಉತ್ತರ ಬರೆದವರಿಗೆ ಅನ್ಯಾಯ ಮಾಡಬೇಡಿ. ಇಲ್ಲಿ ನಾವ್ಯಾರು ಅವರನ್ನು ಪಾಸು ಮಾಡಬೇಕು, ಇವರನ್ನು ಫೇಲ್ ಮಾಡಬೇಕು ಅಂತ ಬಂದಿರುವವರಲ್ಲ. ಏನು ಬರೆದಿರುತ್ತಾರೆ ಅಷ್ಟಕ್ಕೆ ಸರಿದೂಗುವಂತೆ ಮಾರ್ಕ್ಸ್ ಕೊಡಿ. ನಂತರ ಪಾಸು ಫೇಲ್ ತಾನಾಗಿಯೇ ಆಗುತ್ತದೆ. ನೀವು ಎಷ್ಟು ಜನರನ್ನು ಪಾಸು ಮಾಡಿದ್ರಿ, ಎಷ್ಟು ಜನರನ್ನ ಫೇಲ್ ಮಾಡಿದ್ರಿ ಅನ್ನೋದು ಮುಖ್ಯ ಅಲ್ಲ. ಪ್ರತಿಭಾವಂತ ವಿದ್ಯಾರ್ಥಿಗೆ ಅನ್ಯಾಯ ಆಗದಹಾಗೆ ವ್ಯಾಲ್ಯೂಯೇಷನ್ ಮಾಡಬೇಕು."

ಇದನ್ನೆಲ್ಲಾ ಇಲ್ಲಿ ಯಾಕೆ ಹೇಳಿದೆನೆಂದರೆ, ಪ್ರತಿಯೊಂದು ವಿಷಯದಲ್ಲೂ ಅವರು ತೋರಿಸುತ್ತಿದ್ದ ಶ್ರದ್ಧೆ, ಅಚ್ಚುಕಟ್ಟು, ಶಿಸ್ತು, ಸಂಯಮಗಳನ್ನು ಹೇಳಬೇಕಾದ್ದರಿಂದ ಅವಶ್ಯವಾಗಿ ಹೇಳಬೇಕಾಯ್ತು.

ಒಂದೆರಡು ವರ್ಷಗಳ ನಂತರ ಮತ್ತೆ ಮೌಲ್ಯಮಾಪನದ ಸಂದರ್ಭದಲ್ಲಿ ಅವರನ್ನು ಭೇಟಿಯಾಗುವ ಅವಕಾಶ ದೊರೆಯಿತು. ನನ್ನನ್ನು, ಛತ್ರದ ಹಳ್ಳಿ ಕಾಮರಾಜು, ರಂಗಾರೆಡ್ಡಿ ಕೋಡಿರಾಂಪುರ ಅವರನ್ನು ಕರೆದು ನಾವೆಲ್ಲಾ ಸೇರಿ ಕನ್ನಡ ಅಧ್ಯಾಪಕರ ಒಕ್ಕೂಟ ಅಂತ ಯಾಕೆ ಸ್ಥಾಪಿಸಬಾರದು? ಎಂದು ಹೇಳಿ, ಆ ಒಕ್ಕೂಟದ ರಚನೆ, ಉದ್ದೇಶಗಳನ್ನು ಸವಿವರವಾಗಿ ವಿವರಿಸಿದರು. ಆದರೆ ಅದೇಕೋ ಅಂಥ ಒಕ್ಕೂಟದ ರಚನೆ ಸಾಧ್ಯವಾಗಲಿಲ್ಲ. ನಿವೃತ್ತಿ ವಯಸ್ಸು ಸಮೀಪಿಸುತ್ತಿದ್ದಾಗಲೂ ಅವರಲ್ಲಿದ್ದ ಅದಮ್ಯ ಉತ್ಸಾಹ ಬೆರಗುಗೊಳಿಸುವಂಥದಾಗಿತ್ತು.

ಸೇವೆಯಿಂದ ನಿವೃತ್ತಿ ಪಡೆದ ನಂತರ ಕೆ.ಜಿ.ಎನ್. ಬದಲಾಗಬಹುದು. ಉತ್ಸಾಹ ಕುಗ್ಗಬಹುದು. ಈಗಿನ ಅವರ ನಿಲುವುಗಳು ಬದಲಾಗಬಹುದು ಅಂದುಕೊಂಡಿದ್ದೆ. ಈಗ ಅವರು ಸೇವೆಯಿಂದ ನಿವೃತ್ತರಾಗಿದ್ದಾರೆ. ಆದರೆ ಅವರಲ್ಲಿದ್ದ ಧೋರಣೆಗಳು ಮಾತ್ರ

ಬದಲಾಗಿಲ್ಲ. ಅಷ್ಟೇ ಉತ್ಸಾಹಶಾಲಿಗಳಾಗಿದ್ದಾರೆ. ಅಷ್ಟೇ ಹರಿತವಾಗಿ ಮಾತನಾಡುತ್ತಾರೆ, ಬರೆಯುತ್ತಾರೆ. ತಮಗೆ ಸರಿಯೆನಿಸಿದ್ದನ್ನು ಯಾವ ಮೂಲಾಜಿಲ್ಲದೆ ಹೇಳುತ್ತಾರೆ. ಚರ್ಚೆಗೆ ಅವಕಾಶ ಮಾಡಿಕೊಡುತ್ತಾರೆ. ಇತರರು ಹೇಳುವುದನ್ನು ಕೂಡ ಸಾವಧಾನವಾಗಿ ಕೇಳುತ್ತಾರೆ. ಆರೋಗ್ಯಪೂರ್ಣವಾಗಿ ಪ್ರತಿಕ್ರಿಯಿಸುತ್ತಾರೆ. ಇತರರ ಸಾಧನೆಗಳನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಒಲ್ಲದ್ದನ್ನು ಕಂಡಾಗ, ಕೇಳಿದಾಗ ಅಸಮ್ಮತಿಸುತ್ತಾರೆ. ಬಹುಶಃ ಒಬ್ಬ ನಿಜವಾದ ಮನುಷ್ಯ ಹೇಗೆ ಬದುಕಬೇಕೆಂದು ನಾವೆಲ್ಲರೂ ಅಂದು ಕೊಳ್ಳುತ್ತೇವೊ ಹಾಗೇ ಅವರು ಬದುಕುತ್ತಿದ್ದಾರೆ. ಅವರ ಬದುಕಿನ ಸಾಚಾತನವೇ ಅವರ ಬರಹದಲ್ಲಿ ಗಟ್ಟಿತನವೊಂದು ಕೊಟ್ಟಿದೆ ಎಂದರೆ ತಪ್ಪಾಗದು.

ಕೆ.ಜಿ.ಎನ್. ಬಗ್ಗೆ ನನಗಿರುವ ಅಭಿಮಾನ, ಗೌರವದಿಂದಲೇ ಇಷ್ಟೆಲ್ಲಾ ಬರೆಯಲು ಸಾಧ್ಯವಾಯಿತು. ಇದರಲ್ಲಿ ಒಬ್ಬ ಶಿಷ್ಯ ತನಗೆ ಪಾಠ ಹೇಳಿ ಕೊಟ್ಟವರ ಬಗ್ಗೆ ತೋರುವ "ಗೌರವ ಬಾಗಿನ" ವಿದೆ ಎಂದು ಭಾವಿಸಿದ್ದೇನೆ. ♦

> " ಪ್ರತಿಷ್ಠಿತ ವರ್ಗ ಅಧಿಕ ಸಂಖ್ಯೆಯ ಅನಕ್ಷರಸ್ಥ ಬುಡಕಟ್ಟು ಸಂಸ್ಕೃತಿ ಮತ್ತು ಜಾನಪದ ಸಂಸ್ಕೃತಿಯನ್ನು ಅಸಡ್ಡೆಯಿಂದ ಕಂಡು, ತಮ್ಮ ಏಕ ಸಮಾಜ ಮತ್ತು ಏಕ ಸಂಸ್ಕೃತಿಯ ಯಜಮಾನಿಕೆಯ (Hegemony) ರಕ್ಷಣೆಗೆ ಸತತ ಪ್ರಯತ್ನ ನಡೆಸುತ್ತಿರುವುದು ಧಾರ್ಮಿಕ ಇತಿಹಾಸದಿಂದ ಸುಸ್ಪಷ್ಟ. ಬಹುಸಮಾಜ ಮತ್ತು ಬಹು ಸಂಸ್ಕೃತಿಗಳ ನಾಶ ಮತ್ತು ಅವುಗಳ ಮೇಲೆ ಒಡೆತನ ಸ್ಥಾಪಿಸುವುದೇ ಪ್ರತಿಷ್ಠಿತ ವರ್ಗಗಳ ಪರಮ ಗುರಿ. ಆದರೆ ಬಹುಸಮಾಜ ಮತ್ತು ಬಹು ಸಂಸ್ಕೃತಿಗಳಿಗೆ ತಮ್ಮ ತಮ್ಮ ಅಲಿಖಿತ ಅಭಿವ್ಯಕ್ತಿಯೇ ಪರೋಕ್ಷವಾಗಿ ತಮ್ಮ ಧಾರ್ಮಿಕ ವಿಧಿ ಮತ್ತು ಆಚರಣೆಗಳ ರಕ್ಷಣೆಯ ಭದ್ರ ಕೋಟೆಯಾಗಿ ಸವಾಲುಗಳನ್ನು ಎದುರಿಸುತ್ತ ಬಂದಿರುವ ಚಾರಿತ್ರಿಕ ಸತ್ಯವನ್ನು ಗುರುತಿಸುವುದರಿಂದ ಜನ ಸಾಮಾನ್ಯರಿಗೆ ಆಗುತ್ತಿರುವ ಶೋಷಣೆಯ ಸಮರ್ಥನೆ ಅಲ್ಲ. ಅಥವಾ ಪ್ರತಿಷ್ಠಿತ ಸಂಸ್ಕೃತಿಯ ಬೌದ್ಧಿಕ ಬರ್ಬರ ಕೃತ್ಯಗಳ ಸಮರ್ಥನೆಯೂ ಆಗುವುದಿಲ್ಲ."
>
> – *ಪ್ರೊ|| ಕೆ.ಜಿ.ನಾಗರಾಜಪ್ಪ*

9. ವಿಚಾರವಾದಿ

ಕೆ.ಜಿ. ವೆಂಕಟರಮಣಯ್ಯ

ನಾನು ಮತ್ತು ಶ್ರೀ ಕೆ.ಜಿ. ನಾಗರಾಜಪ್ಪನವರು ಒಂದೇ ಊರಿನವರಾಗಿದ್ದರೂ, ನನ್ನ ಮತ್ತು ಅವರ ಮನೆಗಳು ಒಂದೇ ಕಡೆ ಇದ್ದು, ಎರಡು ಮನೆಗಳ ಬಾಂಧವ್ಯ ಪರಸ್ಪರ ಹತ್ತಿರವಾಗಿದ್ದರೂ, ನನಗೆ ಮಾತ್ರ ಅವರ ಆತ್ಮೀಯತೆ ಸಿಕ್ಕಿದ್ದು ಹಾಗೂ ಸೋದರ ಪ್ರೀತಿ ಬೆಳೆದದ್ದು ನಾನು ಹೈಸ್ಕೂಲ್ ವಿದ್ಯಾರ್ಥಿಯಾಗಿ ನಮ್ಮ ಊರಿನಿಂದ ಹನ್ನೆರಡು ಕಿ.ಮೀ. ದೂರದ ಕಡಬದಲ್ಲಿ ಪ್ರೌಢ ಶಾಲೆ ಸೇರಿದಾಗ. ನನಗೂ ಅವರಿಗೂ ವಯಸ್ಸಿನಲ್ಲಿ ಐದಾರು ವರ್ಷಗಳ ಅಂತರವಿದ್ದರೂ ಅಂದಿನಿಂದಲೂ ಬೆಳೆದು ಬಂದಿರುವ ಅನಿರ್ವಚನೀಯ ಸೋದರ ಬಾಂಧವ್ಯ ಆತ್ಮೀಯತೆ ಇಂದಿಗೂ ನಿರಂತರವಾಗಿ ನಮ್ಮಿಬ್ಬರಲ್ಲೂ ಹರಿದು ಬಂದಿದೆ.

ನಮ್ಮ ಗ್ರಾಮದಲ್ಲಿಯೇ ಆಗ ನಾನಿನ್ನು ಮಾಧ್ಯಮಿಕ ಶಾಲೆಯ ವಿದ್ಯಾರ್ಥಿ. ಬೇಸಿಗೆ ರಜಾದಿನಗಳಲ್ಲಿ ನಮ್ಮ ಗ್ರಾಮದ ವಿದ್ಯಾವಂತರ ಗುಂಪು ವರ್ಷಕ್ಕೊಮ್ಮೆ ಸಂಘಟನೆಯಾಗುತ್ತಿತ್ತು. ಅವರಲ್ಲಿ ಬೇರೆ ಬೇರೆ ಕಡೆ ವಿದ್ಯಾಭ್ಯಾಸ ಮಾಡುತ್ತಿದ್ದರು. ಮಾಧ್ಯಮಿಕ ಶಾಲೆಯ ಒಂದು ಕೊಠಡಿಯನ್ನು ಬೇಸಿಗೆಯ ವಾಸಕ್ಕೆ ಪಡೆದು ಕೊಂಡು ಗ್ರಾಮಾಭಿವೃದ್ಧಿಯ ಯೋಜನೆಗೆ ತೊಡಗುತ್ತಿದ್ದರು. ಕಲ್ಲೂರು ಯಾವ ಮುಖಂಡತ್ವವೂ ಇಲ್ಲದೆ ಊಳಿಗ ಮಾನ್ಯ ಪದ್ಧತಿಯ ಕ್ರೂರ ದಬ್ಬಾಳಿಕೆಗೆ ಶಾಶ್ವತವಾಗಿ ತುತ್ತಾಗಿತ್ತು. ಅಜ್ಞಾನ, ಬಡತನ ಮತ್ತು ಮೌಢ್ಯತೆಗಳಿಂದ ಕೂಡಿತ್ತು. ಅಂಚೆ ಕಛೇರಿಯ ಮೇಲೂ ಶಾನು ಭೋಗರ ಹಿಡಿತವಿತ್ತು! ಸರ್ಕಾರದಿಂದ ಬರುವ ನೌಕರಿ ಆದೇಶ ಪತ್ರಗಳು ಮತ್ತಿತರ ಮುಖ್ಯ ಪತ್ರಗಳು ಯಾರಿಗೂ ತಲುಪದಂತೆ ವ್ಯವಸ್ಥೆಯಾಗಿತ್ತು. ನಮ್ಮ ಗ್ರಾಮ ನಾವು ಕಂಡಂತೆ ಸದಾ ತುರ್ತುಪರಿಸ್ಥಿತಿಯಲ್ಲಿಯೇ ಇತ್ತು. ನೇಗಿಲ ಕಸುಬಿನ ಅನಕ್ಷರಸ್ಥರಾದ ಈ ಜನಕ್ಕೆ ಇದಾವುದೂ ಅರ್ಥವಾಗುತ್ತಲೇ ಇರಲಿಲ್ಲ. ಅನೇಕ ಜನರಿಗೆ ನಮ್ಮ ಊರಿನ ಗಡಿಯೇ ಗೊತ್ತಿರಲಿಲ್ಲ. ನಿತ್ಯ ತುತ್ತಿಗಾಗಿ ಹೋರಾಡುವವರಿಗ ಕಲಿಕೆ ಒಂದು ಶಾಪವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿಯೂ ಸಹ ಕಲಿಯುತ್ತಿದ್ದ ಬೆರಳೆಣಿಕೆ ತರುಣರು ಸಂಘಟನೆಗೆ ತೊಡಗಿದರು. ನಮ್ಮ ಊರಿನ ವಿದ್ಯಾವಂತರು ಗುಬ್ಬಿ ಮತ್ತು ಹುಲ್ಲೇಕೆರೆ, ಸುತ್ತ ಮುತ್ತಿನ ಗ್ರಾಮೀಣ ತರುಣರನ್ನು ಸಂಘಟಿಸಿದರು. ಅವರ ಆದರ್ಶಗಳು ಉತ್ತಮವಾಗಿದ್ದವು. ಯೋಜನೆಯ ಗುರಿ ವಿಶಾಲವಾಗಿತ್ತು. ನಮ್ಮ ಗ್ರಾಮದಿಂದಲೇ ಯೋಜನೆಯ ವಿವಿಧ ಕಾರ್ಯಗಳನ್ನು ಕಾರ್ಯರೂಪಕ್ಕೆ ತಂದರು. ಗ್ರಾಮದ ಕೊಳಚೆ ನಿವಾರಣೆಗೆ ಚರಂಡಿ ಮತ್ತು ಹಿಂಗು ಬಚ್ಚಲುಗಳ ನಿರ್ಮಾಣ, ರಸ್ತೆಗಳ ದುರಸ್ತಿ, ಸಂತೆ ಮತ್ತು ಶಾಲೆಯ ಮೈದಾನಗಳಲ್ಲಿ ನೆರಳಿಗೆ ಗಿಡಗಳನ್ನು ನೆಡುವುದು, ವಯಸ್ಕರಿಗೆ ರಾತ್ರಿ ಶಿಕ್ಷಣ ಶಾಲೆ ನಡೆಸುವುದು, ನಮ್ಮಂತಹ ಚಿಕ್ಕವರನ್ನು ಸಂಜೆ ಹೊತ್ತು ಕಲೆ ಹಾಕಿ ಆಟ ಆಡಿಸುವುದು,

ಕತ್ತಲಾಗುತ್ತಲೇ ಕೂಡಿಸಿಕೊಂಡು ಕತೆ ಹೇಳುವುದು ಹಾಗೂ ಕಲಿಕೆಗೆ ನಮ್ಮಲ್ಲಿ ಆಸಕ್ತಿ ಮೂಡಿಸುವುದು- ಮುಂತಾದ ನಾನಾ ಕಾರ್ಯ ಚಟುವಟಿಕೆಗಳು ನಡೆಯುತ್ತಿದ್ದವು. ಅಲ್ಲದೆ ಮನರಂಜನೆಯ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಿ ಗ್ರಾಮೀಣರನ್ನು ಕಲೆ ಹಾಕಿ ತಿಳುವಳಿಕೆ ಮೂಡುವಂತೆ ಮಾಡುತ್ತಿದ್ದರು. ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳು ಮತ್ತು ಮಲ್ಲಾಡಿಹಳ್ಳಿಯ ಶ್ರೀ ರಾಘವೇಂದ್ರ ಸ್ವಾಮಿಗಳನ್ನು ಕರೆಸಿ ಜನರಿಗೆ ಹೊಸ ಅರಿವು ಉಂಟಾಗುವಂತೆ ಮಾಡುತ್ತಿದ್ದರು. ಹೀಗೆ ನಮ್ಮ ಊರಿನಲ್ಲಿ ಹೊಸ ಅಲೆ ಎದ್ದಿತು. ನಮಗೆಲ್ಲ ಇವರ ಕಾರ್ಯ ಚಟುವಟಿಕೆಗಳು ಆಕರ್ಷಣೀಯವಾಗಿದ್ದವು. ಬೇಸಿಗೆಗಾಗಿ ನಾವು ಕಾತರದಿಂದ ಕಾಯುತ್ತಿದ್ದೆವು. ಇವರ ಕಾರ್ಯಕ್ರಮಗಳಿಗಾಗಿ ಸರ್ಕಾರದಿಂದಲಾಗಲೀ ಸಾರ್ವಜನಿಕರಿಂದಾಗಲೀ ಎಂದೂ ಚಂದಾ ಅಥವಾ ನೆರವನ್ನು ಬಯಸುತ್ತಿರಲಿಲ್ಲ. ಶ್ರಮದಾನದಿಂದ ಕಾರ್ಯಗಳು ನಡೆಯುತ್ತಿದ್ದವು.

ಈ ವಿದ್ಯಾರ್ಥಿ ತರುಣರ ಗುಂಪು ಮಾಡಿಕೊಂಡಿದ್ದ ವ್ಯವಸ್ಥೆ ಆದರ್ಶವಾದುದು. ಜಾತಿ ವರ್ಗ ಭೇದ ರಹಿತವಾದುದು. ನಮ್ಮ ಹರಿಜನ ಕೇರಿಯ ಬಸವಯ್ಯನವರೂ ಇರುತ್ತಿದ್ದರು. ಪ್ರತಿ ದಿನ ಊಟತಿಂಡಿ ಒಬ್ಬೊಬ್ಬರ ಮನೆಯಲ್ಲಿ. ಹಗಲು ಗ್ರಾಮದ ಕೆಲಸಗಳು, ರಾತ್ರಿ ಹೊತ್ತು ಮಾಧ್ಯಮಿಕ ಶಾಲೆಯಲ್ಲಿ ಮಲಗುವುದು. ಅಗಸರ ಹಟ್ಟಿಯ ಡಾ॥ ಸಂಜೀವಯ್ಯ (ಮೈಸೂರು ವಿಶ್ವ ವಿದ್ಯಾಲಯದ ಮಾನಸಗಂಗೋತ್ರಿಯ ಭೌತ ಶಾಸ್ತ್ರದ ಮುಖ್ಯಸ್ಥರಾಗಿ ನಿವೃತ್ತರಾದವರು) ಪ್ರೇರಕರು ಮತ್ತು ಸೂತ್ರಧಾರರು. ಗ್ರಾಮಾಭಿವೃದ್ಧಿಯ ಎಲ್ಲಾ ಕಾರ್ಯಗಳನ್ನು ಜಾರಿಗೆ ತರುವ ಹೊಣೆ ನಾಗರಾಜಪ್ಪನವರದು. ಇವರ ಯೋಜನೆಗಳು ಅಷ್ಟು ಸುಲಭವಾಗಿ ಕಾರ್ಯರೂಪಕ್ಕೆ ಬರುವಂತಿರಲಿಲ್ಲ. ಅನೇಕ ಅಡ್ಡಿ ಆತಂಕಗಳನ್ನು ಎದುರಿಸಬೇಕಾಯಿತು. ಮನೆಯ ಮಕ್ಕಳು ಮಗ್ಗದಲ್ಲಿ ಕೂತು ದುಡಿಯುವುದಕ್ಕೆ ಕಲ್ಲು ಹಾಕಿ ಬಡವರ ಕಟುಂಬಗಳಿಗೆ ಗಂಜಿಗೆ ಗತಿಯಿಲ್ಲದಂತೆ ಗ್ರಾಮದ ತರುಣರನ್ನು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಿ ಕೆಡಿಸುತ್ತಾರೆ ಎಂದು ಜನರು ದೂರಿದರು. ಶಾನು ಭೋಗರು ಮತ್ತು ಮುಖಂಡರು 'ಇವರು ಕಡಿಯೋದು ಗೊತ್ತು, ಒಂದು ನಾಲ್ಕು ದಿನ ಹಾರಾಡ್ತಾರೆ. ಗಾಂಧಿ ಹುಚ್ಚು ಹಿಡ್ದಿದೆ. ಕ್ರಮೇಣ ಬಿಡುತ್ತೆ' ಎಂದು ಹಾಸ್ಯ ಮಾಡುತ್ತಿದ್ದರು.

ಕೆ.ಜಿ. ನಾಗರಾಜಪ್ಪನವರ ಮನೆಯಲ್ಲಿ ಕಡು ಬಡತನ. ಅವರ ತಾಯಿ ಮತ್ತು ಅಜ್ಜಿ ಅವರಿವರ ಮನೆಯಲ್ಲಿ ಕೂಲಿ ಮಾಡುವುದು, ನೂಲು ಮತ್ತು ರೇಷ್ಮೆ ತೋಡುವುದು, ಸುತ್ತುವುದು, ಹಳ್ಳಿ ತಿರುಗಿ ಗೂಡೆ ವ್ಯಾಪಾರ ಮಾಡುವುದು- ಮುಂತಾದ ಶ್ರಮ ಜೀವನ ಸಾಗಿಸುತ್ತಿದ್ದರು. ಅವರಿಗೆ ಮನೆಯ ಬಡತನವಿತ್ತೇ ಹೊರತು, ಮನದ ಶ್ರೀಮಂತಿಕೆಗೆ ಬಡತನವಿರಲಿಲ್ಲ. ಅವರ ಪುಟ್ಟ ಮನೆ ಗ್ರಾಮೀಣ ಸ್ತ್ರೀಯರಿಗೆ ತಮ್ಮ ಬದುಕಿನ ಕಾರ್ಯಗಾರವಾಗಿತ್ತು. ನಾಗರಾಜಪ್ಪನವರ ಅಜ್ಜಿ ಮಾಳಮ್ಮನವರು ತುಂಬು ಜೀವನ ನಡೆಸಿದ ಅಪಾರ ಲೋಕಾನುಭವವುಳ್ಳ ವ್ಯಕ್ತಿ. ಜೀವನದುದ್ದಕ್ಕೂ ದುಃಖ ಉಂಡವರು. ವೈದ್ಯರು ವಿಫಲರಾದ ಹೆರಿಗೆಗಳನ್ನು ಮಾಳಮ್ಮನವರು ಮಾಡಿಸಿ ಹೆಸರು ಗಳಿಸಿದ್ದರು.

ಸುತ್ತಮುತ್ತಲ ಹಳ್ಳಿಗಳಿಂದಲೂ ಜನರು ಗಾಡಿ ಕಟ್ಟಿಕೊಂಡು ಬಂದು ಕರೆದುಕೊಂಡು ಹೋಗುತ್ತಿದ್ದರು. ಮಕ್ಕಳ ಕಾಯಿಲೆಗಳಿಗಂತೂ ಸಲಹೆ ಸೂಚನೆಕೊಟ್ಟು ಔಷಧಿ ಮಾಡುವುದನ್ನು ತಿಳಿಸುತ್ತಿದ್ದರು. ಸಂಸಾರದ ಹಲವು ಸಮಸ್ಯೆಗಳಿಗೆ ಸೂಕ್ತ ಸಲಹೆಕೊಟ್ಟು ಹೆಂಗಸರ ಸಂಸಾರ ಸರಿಮಾಡುತ್ತಿದ್ದರು. ಯಾರದೇ ಕಷ್ಟ ಸುಖಕ್ಕೆ ಮುಂದಾಗಿ ಸುಖ ದುಃಖಗಳಲ್ಲಿ ಭಾಗಿಯಾಗುತ್ತಿದ್ದರು. ಎಂದೂ ಅವರು 'ನಾಟಿ' ವೈದ್ಯಕ್ಕೆ ಒಂದು ಬಿಡಿ ಕಾಸೂ ಮುಟ್ಟಿದವರಲ್ಲ . ಕಷ್ಟಸಂದರ್ಭಗಳಲ್ಲಿ ಧೈರ್ಯತುಂಬುತ್ತಿದ್ದರು. ಹೀಗಾಗಿ ಬೆಳ್ಳೂರು ಮಾಳಮ್ಮನವರನ್ನು ಕಂಡರೆ ಎಲ್ಲರಿಗೂ ಪ್ರೀತಿ ವಿಶ್ವಾಸ. ಅವರು ಕೊನೆಯ ತನಕವೂ ದುಡಿದು ತಿಂದವರೇ ಹೊರತು ಮತ್ತೊಬ್ಬರಲ್ಲಿ ಕೈಚಾಚಿ ಬೇಡಿದವರಲ್ಲ. ಎಂದೂ ಪರರಿಗಾಗಿ ಮಾಡಿದ ಕೆಲಸವನ್ನು ಸೇವೆ ಎಂದೂ ಭಾವಿಸಿದವರಲ್ಲ. ಅವರ ಮಗಳೂ ಲಕ್ಕಮ್ಮ, ಮೊಮ್ಮಗ ನಾಗರಾಜಪ್ಪ, ತಮ್ಮನ ಮಗಳೂ ಗಂಗೆ-ಇವರನ್ನು ಸಾಕುವ ಹೊಣೆ ಹೊತ್ತ ಮಾಳಮ್ಮನವರದ್ದು. ಅದು ಎಂದೂ ಯಾರಿಗೂ ಹೆದರದ, ಎದೆಗೆಡದ ಜೀವ. ಶ್ರೀ ನಾಗರಾಜಪ್ಪನವರಿಗೆ ತಮ್ಮ ಅಜ್ಜಿಯ ಗುಣಗಳು ರಕ್ತಗತವಾಗಿ ಬಂದಿವೆ. ಅಜ್ಜಿಯ 'ಗಂಡೆದೆ' ಅವರಿಗೆ ಆಸ್ತಿಯಾಗಿ ಬಂದಿದೆ. ಪರರಿಗಾಗಿ ಮರುಗುವುದು, ಬದುಕಿನಲ್ಲಿ ಬಂದದ್ದನ್ನು ಎದುರಿಸುವುದು. ಧೈರ್ಯ, ಸಾಹಸ ಅಜ್ಜಿಯ ಬಳುವಳಿಗಳು. ಅವರ ಕಲಿಕೆ, ಸ್ನೇಹಿತರು, ಅಧ್ಯಾಪಕರು, ಮಠಾಧಿಪತಿಗಳಿಗಿಂತ ಹೆಚ್ಚಾಗಿ ನಾಗರಾಜಪ್ಪನವರ ವ್ಯಕ್ತಿತ್ವ ರೂಪುಗೊಳ್ಳುವುದರಲ್ಲಿ ಪ್ರಭಾವ ಬೀರಿದವರು ಅವರ ಅನಕ್ಷರಸ್ಥರೂ, ಮುಗ್ಧರೂ ಪ್ರಾಮಾಣಿಕರು ಆದ ಅವರ ಅಜ್ಜಿ ಮಾಳಮ್ಮನವರೇ. ಇಂದಿಗೂ ಇವರ ಅಜ್ಜಿಯ ಬಗ್ಗೆ ಅಪಾರ ಅಭಿಮಾನವಿದೆ.

ನಾನು ಕಂಡಂತೆ ನಾಗರಾಜಪ್ಪನವರ ಕುಟುಂಬ ಹಲವು ವ್ಯಕ್ತಿಗಳ, ಕುಟುಂಬಗಳ, ಸಮಾಜ ಸಂಸ್ಥೆಗಳ ಶೋಷಣೆಗೆ ಒಳಗಾಯಿತೇ ಹೊರತು, ಎಂದೂ ಆ ಕುಟುಂಬ ಯಾರ ಶೋಷಣೆಯನ್ನು ಮಾಡಲಿಲ್ಲ. ನಾಗರಾಜಪ್ಪನವರು ಇಂದಿಗೂ ಹಣ ಮತ್ತು ಅಧಿಕಾರದಿಂದ ದೂರ ಉಳಿದವರು, ಅವರ ಕಾರ್ಯಗಳನ್ನು ಸಮಾಜ ಗುರುತಿಸಬೇಕೆಂದು ಆಸೆ ಪಟ್ಟವರೂ ಅಲ್ಲ. ಸವಾಲುಗಳನ್ನು ಎದುರಿಸುತ್ತಲೇ ಸ್ವಪ್ರಯತ್ನದಿಂದ ಸಾಮರ್ಥ್ಯಗಳಿಸಿದವರು, ಅಂಥ ಸಾಮರ್ಥ್ಯವನ್ನು ತಾವು ಬಂದ ವರ್ಗಕ್ಕೆ ಮೀಸಲಿಟ್ಟವರು. ಆದರೆ ಎಂದೂ ಅವರು ನಾಯಕರಾಗ ಬಯಸಲಿಲ್ಲ. ಯಾರ ಪ್ರಭಾವವನ್ನೂ ಬಳಸಿಕೊಳ್ಳಲಿಲ್ಲ. ಅವರ ಬದುಕಿಗೆ ಆದರ್ಶ ಮತ್ತು ಮೌಲ್ಯಗಳನ್ನು ತುಂಬಿದವರು ತಮ್ಮ ತಮ್ಮ ಬದುಕಿನಲ್ಲಿ ಅವುಗಳನ್ನನುಸರಿಸಲಿ ಬಿಡಲಿ, ನಾಗರಾಜಪ್ಪನವರು ಮಾತ್ರ ಇಂಥ ಆದರ್ಶ ಮತ್ತು ಮೌಲ್ಯಗಳನ್ನು ಕಾರ್ಯರೂಪಕ್ಕೆ ತಮ್ಮ ಬದುಕಿನಲ್ಲಿ ತರುವಲ್ಲಿ ಕಂಕಣ ಬದ್ಧರಾಗಿ ಹೋಗುತ್ತಿದ್ದಾರೆ. ಎಂದೂ ಅವರಿಗೆ ಅನಾಚಾರ, ಭ್ರಷ್ಟಾಚಾರ, ಸಾಮಾಜಿಕ ಅನ್ಯಾಯ ಕಂಡು ಸಹನೆಯಾಗದು. ಅವುಗಳನ್ನು ಕಂಡು ಸಿಡಿ ಮಿಡಿಗೊಳ್ಳುತ್ತಾರೆ. ಅಂಥ ಭ್ರಷ್ಟರುಗಳು ಬಂಧುವಾಗಲೀ, ಸ್ನೇಹಿತರಾಗಲೀ, ಸಮಾಜದ ವ್ಯಕ್ತಿಗಳಾಗಲೀ-ಅವರ ವಿರುದ್ಧ ಸಿಡಿದೇಳುತ್ತಾರೆ. ತುಂಬಿರುವ ಸಮಾಜದಲ್ಲಿ ಶ್ರೀ ನಾಗರಾಜಪ್ಪನವರು ಶಾಶ್ವತವಾಗಿ 'ಅಸ್ಪೃಶ್ಯ ವ್ಯಕ್ತಿ'ಯಾಗಿಯೇ ಒಂಟಿಯಾಗಿ ಮುಕ್ತ

ಚಿಂತಕರಾಗಿ ಬೆಳೆಯುವ ದುರ್ಗತಿ ಒದಗಿತು. ಕೆಲವರು ಮೆಚ್ಚಿ ಮಿತ್ರರಾದರು, ಕೆಲವರು ಕರುಬಿ ಶತ್ರುವಾದರು. ಎಂದೂ ಭ್ರಷ್ಟತೆ ಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದ ಅವರು ಒಂಟಿ ಸಲಗವಾದರು.

ಕಲ್ಲೂರಿನಲ್ಲಿ ನಾಗರಾಜಪ್ಪನವರು ಸ್ನೇಹಿತರೊಂದಿಗೆ 'ಹಳೇ ವಿದ್ಯಾರ್ಥಿಗಳ ಒಕ್ಕೂಟ' ಸ್ಥಾಪಿಸಿದರು. ಡಾ|| ಸಂಜೀವಯ್ಯನವರು, ಕೆ.ಆರ್.ಅನಂತರಾಮನ್, ಕೆ.ಜೆ. ಈಶ್ವರಯ್ಯ, ರುದ್ರಯ್ಯ, ಬಸವಯ್ಯ ಮುಂತಾದವರು ಮುಂದಾಳುಗಳಾಗಿದ್ದರು. ಶ್ರೀ ನಾಗರಾಜಪ್ಪನವರೇ ಎಲ್ಲ ಕಾರ್ಯಗಳ ಹಿನ್ನೆಲೆಯ ಪ್ರೇರಕ ಶಕ್ತಿಯಾಗಿದ್ದರು. ನಮಗೆಲ್ಲಾ ಅವರ ಚಟುವಟಿಕೆಗಳು ಕ್ರಾಂತಿಕಾರಿಯಾಗಿ ಕಂಡವು. ನಾಗರಾಜಪ್ಪನವರ ಸಲಹೆಯಂತೆ ಒಕ್ಕೂಟದ ಹೆಸರನ್ನು 'ಪ್ರಗತಿ ವಿದ್ಯಾರ್ಥಿ ಸಂಘ' ವೆಂದು ಹೆಸರಿಸಿ, ಅದು ಗ್ರಾಮದ ಶಿಕ್ಷಣ, ಸಾಮಾಜಿಕ ಮುಂತಾದ ಕಾರ್ಯಗಳಲ್ಲಿ ತೊಡಗಿತು. ಶ್ರೀಯುತರುಗಳಾದ ಚಿಕ್ಕವೆಂಕಟಪ್ಪ, ಗೋಪಾಲಕೃಷ್ಣ, ಅನಂತಯ್ಯ, ಅನಂತರಾಮಯ್ಯ ಮತ್ತು ನಾನು ಮುಂತಾದವರು-ನಾಗರಾಜಪ್ಪನವರ ಸೂಕ್ತ ಸಲಹೆಗಳಿಂದ ಊರಿನ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಿದೆವು. ದಿವಂಗತ ಶ್ರೀ ಜಿ. ಗಂಗಾಧರಯ್ಯನವರು ನಮಗೆ ಮಾರ್ಗದರ್ಶಕರಾಗಿದ್ದರು. ಈಗ ಪ್ರಗತಿ ವಿದ್ಯಾಸಂಸ್ಥೆ ನರ್ಸರಿಯಿಂದ ಮಾಧ್ಯಮಿಕ ಶಾಲೆ ತನಕ ಶಿಕ್ಷಣ ಕೊಡುತ್ತಿದೆ. ಇದಕ್ಕೂ ಮುಂಚೆ ಸ್ಥಾಪಿತವಾದ ಪ್ರೌಢಶಾಲೆ ಇದೀಗ ಬೆಳ್ಳಿಹಬ್ಬವನ್ನಾಚರಿಸಿತು.

ನಾಗರಾಜಪ್ಪನವರು ಪ್ರೌಢಶಾಲೆಗೆ ಕಲಿಯಲು ಕಡಬಕ್ಕೆ ಹೋದಾಗಿನಿಂದ ಅವರ ಪ್ರಯೋಗಾತ್ಮಕ ಬದುಕು ಪ್ರಾರಂಭವಾಯಿತು. ವೈಚಾರಿಕತೆ ಅವರ ಮೂಲ ಚಿಂತನೆಯ ಸೆಲೆಯಾಯಿತು. ಯಾವುದನ್ನು ವಿಶ್ಲೇಷಿಸುವ, ತೂಗಿ ನೋಡುವ ಮನೋಭಾವ ಚಿಕ್ಕ ವಯಸ್ಸಿನಲ್ಲಿಯೇ ಅವರದ್ದಾಯಿತು. ದೆವ್ವ, ದೇವರು ಮತ್ತು ಮನುಷ್ಯರ ಬದುಕು-ಅವರ ಅನ್ವೇಷಣೆಯ ವಲಯಗಳಾದುವು. ಅವರು 13-14 ರ ಚಿಕ್ಕ ವಯಸ್ಸಿನಲ್ಲಿಯೇ (ಐವತ್ತರ ದಶಕದಲ್ಲಿ) ನಡೆಸಿದ ಪ್ರಯೋಗಗಳ ಕೆಲವು ಪ್ರಸಂಗಗಳನ್ನು ಪ್ರಸ್ತಾಪಿಸುವುದು ಸೂಕ್ತ ಎನ್ನಿಸುತ್ತದೆ.

ಬೇಸಿಗೆ ರಜಕ್ಕೆ ಬಂದಾಗ ಅವರು ಎಂದೂ ದುಡಿಮೆಗೆ ಯೋಚಿಸಿ ದವರಲ್ಲ.ಸಾಮಾನ್ಯವಾಗಿ ನಮ್ಮ ಗ್ರಾಮದ ವಿದ್ಯಾವಂತರು ಬೇಸಿಗೆ ರಜಕ್ಕೆ ಬಂದಾಗ ಮೂರು ತಿಂಗಳು ಮಗ್ಗದಲ್ಲಿ ಕುಳಿತು ದುಡಿಯುತ್ತಿದ್ದರು. ಆದರೆ ನಾಗರಾಜಪ್ಪನವರು ತಮ್ಮ ಮನೆಯಲ್ಲಿ ಕಡು ಬಡತನವಿದ್ದರೂ, ಮಗ್ಗದಲ್ಲಿ ಕೂರದೆ, ಗ್ರಾಮೀಣ ಅಭಿವೃದ್ಧಿ ಕಾರ್ಯಗಳಲ್ಲಿ ನಿರತರಾಗುತ್ತಿದ್ದರು. ಇಲ್ಲವೆ ಗ್ರಾಮದ ಹತ್ತಿರ ಹರಿಯುವ ಶಿಂಷಾ ನದಿಯ ದಡದ ಆಚೆ ಹೊಂಗೆ ಮರದಡಿಯಲ್ಲಿ ಕುಳಿತು ಬೆಳಿಗ್ಗೆಯಿಂದ ಸಂಜೆ ತನಕ ಓದಿಕೊಂಡು ಬರುತ್ತಿದ್ದರು.

ನಮ್ಮ ಪಕ್ಕದ ಹಳ್ಳಿ 'ಬ್ಯಾಲದಕೆರೆ'ಯಲ್ಲಿ ಆ ದಿನಗಳಲ್ಲಿ ಗ್ರಾಮದೇವತೆಯ ಹಬ್ಬ ಪ್ರತಿ ವರ್ಷ ಚೈತ್ರದಲ್ಲಿ ಬಹಳ ಅದ್ಧೂರಿಯಾಗಿ ನಡೆಯುತ್ತಿತ್ತು. ಸುತ್ತಲ ಹತ್ತಾರು

ಹಳ್ಳಿಯ ಜನ ಈ ಜಾತ್ರೆಗೆ ಸೇರುತ್ತಾರೆ. ನಮ್ಮ ಊರಿನವರೂ ಈ ಜಾತ್ರೆಗೆ ಹೋಗುವುದು ರೂಢಿ. ನಾಗರಾಜಪ್ಪನವರೊಡನೆ ನಾವು ಒಮ್ಮೆ ಭೇಟಿ ಕೊಟ್ಟಿದ್ದುಂಟು. ಅಲ್ಲಿನ ಗ್ರಾಮ ದೇವತೆ ಗುಡಿ ತೋಪುಗಳ ನಡುವೆ, ಹಳ್ಳಿಗೆ ದೂರವಾಗಿ-ವಿಶಾಲವಾದ ಬಯಲಿನಲ್ಲಿದೆ. ಅಲ್ಲಿ 'ಗಾವು' ಸಿಗಿಯುವುದು ವಿಶೇಷ. ಹತ್ತಾರು ಜೀವಂತ ಕುರಿಮರಿಗಳನ್ನು ಹಲ್ಲಿನಿಂದಲೇ ಸಿಗಿಯುತ್ತಿದ್ದರು. 'ಗಾವು' ಸಿಗಿಯುವವನಿಗೆ ದೇವರು ಮೈಮೇಲೆ ಬಂದು ಆವೇಶ ಬರುತ್ತದೆ? ಅರಚುತ್ತ, ಕಿರುಚುತ್ತ, ತಮಟೆ, ಕಹಳೆ ಕೊಂಬುಗಳ ಅಬ್ಬರಕ್ಕೆ ಮತ್ತಷ್ಟು ಅಬ್ಬರಿಸುತ್ತಾ ನೆರೆದ ಜನ ಕೇಕೆ ಹಾಕುತ್ತಾರೆ. ಕುರಿಮರಿಯ ದೇಹವನ್ನು ಹೆಗಲ ಮೇಲೆ ಎಸೆದು ಅದರ ಬಾಯನ್ನು ಒಂದು ಕೈಯಲ್ಲಿ ಅಗಲಿಸಿ ಆವೇಶದಿಂದ ಹಲ್ಲಿನಿಂದ ಜೀವಂತವಾಗಿ ಸಿಗಿಯುವ ದೃಶ್ಯ ಅತ್ಯಂತ ಭಯಾನಕವಾದುದು!! ಕುರಿ ಮರಿ ಅರಚುತ್ತಿರುತ್ತದೆ, ರಕ್ತ ಸೋರುತ್ತಿರುತ್ತದೆ, ಸಿಗಿದ ತುಂಡುಗಳು ಉದುರುತ್ತಿರುತ್ತವೆ. ಇಂಥ ಗಾವು ಸಿಗಿಯುವ ದೃಶ್ಯ ಭಯಂಕರವಾದದ್ದು. ಭಯ ಭಕ್ತಿಯಿಂದ ಜನ ನೋಡಿ ಸಂತೋಷಿಸುತ್ತಾರೆ. ಒಂದು ಕುರಿಮರಿಯ ಗಾವು ಸಿಗಿದ ದೃಶ್ಯ ಶ್ರೀ ನಾಗರಾಜಪ್ಪನವರ ಮನಸ್ಸನ್ನು ತುಂಬಾ ಕಲಕಿತು. ಇನ್ನೇನು ಮತ್ತೊಂದು ಕುರಿಮರಿಯ ಗಾವು ಸಿಗಿಯಬೇಕು. ಕುರಿಮರಿ ಹಿಡಿದು, ಹೆಗಲಿಗೆ ಎಸೆದುಕೊಂಡು, ಕೈಹಾಕಿ ಹಲ್ಲಿನಲ್ಲಿ ಕಚ್ಚಿ ಸಿಗಿಯಬೇಕು ಎನ್ನುವಷ್ಟರಲ್ಲಿ ನಾಗರಾಜಪ್ಪನವರು ಜನರ ನಡುವಿನಿಂದ ಎಲ್ಲಿಂದಲೋ ಹಾರಿ ಬಂದು ಗಾವು ಸಿಗಿಯುವವನಿಂದ ಮರಿಯನ್ನು ಕಿತ್ತುಕೊಂಡರು. ಎಳೆದಾಟದಲ್ಲಿ ಒಂದಿಷ್ಟು ರಕ್ತ ಸೋರಿತು. ದೊಣ್ಣೆವರಸೆ, ಕತ್ತಿವರಸೆ ಮತ್ತು ಕುಸ್ತಿ ಕಲಿತಿದ್ದ ನಾಗರಾಜಪ್ಪನವರಿಗೆ ಕುರಿಮರಿ ಬಿಡಿಸುವುದು ಕಷ್ಟವಾಗಲಿಲ್ಲ. ಮರಿಯನ್ನು ಕಿತ್ತು ಎಸೆದರು. ಅದು ರಕ್ತ ಸೋರಿಸಿಕೊಂಡು ಓಡ ತೊಡಗಿತು. ಗಾವು ಸಿಗಿಯುವವನು ಕುರಿಯ ಬೆನ್ನತ್ತಿದ. ತಮಟೆ, ಅರೆ, ಕಹಳೆಯವರೆಲ್ಲಾ ಹಿಂಬಾಲಿಸಿದರು, ಜನರೂ ಓಡಿದರು. ಕುರಿಯೂ ಜೀವ ಉಳಿಸಿಕೊಳ್ಳಲು ಓಡಿ ಕತ್ತಲೆಯಲ್ಲಿ ಕಣ್ಮರೆಯಾಯಿತು.

ಇದು ಅಪಶಕುನವೆಂದೇ ಹಳ್ಳಿಯವರು ತಿಳಿದರು. ಗ್ರಾಮದೇವತೆ ಹಬ್ಬದ ಇತಿಹಾಸದಲ್ಲಿ ಹೀಗಾದುದು ಇದೇ ಮೊದಲ ಸಲ. ದೇವತೆಯ ಕೋಪಕ್ಕೆ ಗಾವು ಸಿಗಿಯದೆ ಅಪಶಕುನವಾದದ್ದು. ಹಳ್ಳಿಗಳಿಗೆ ಮುಂಬರುವ ಗಂಡಾಂತರದ ಸೂಚನೆ. ಎಲ್ಲರ ಸಿಟ್ಟೂ ನಾಗರಾಜಪ್ಪನವರ ಮೇಲೆ ತಿರುಗಿತು. ಅವರನ್ನೇ ಗಾವು ಸಿಗಿಯುವಂತೆ ಜನ ಮುತ್ತಿದರು. ಎಂಥ ಪರಿಸ್ಥಿತಿ ಒದಗುವುದೋ ಎಂದು ಹೆದರಿ ನಮ್ಮ ಊರಿನವರೆಲ್ಲರೂ ಓಡಿದರು. ಸುಮಾರು ಒಂದು ಗಂಟೆವರೆವಿಗೂ ಹಳ್ಳಿಗರ ಆಕ್ರೋಶ ಹಿಂಗಲೇ ಇಲ್ಲ. ಎದೆಗುಂದದೆ ನಾಗರಾಜಪ್ಪನವರು, ಏನನ್ನೋ ಹೇಳಲು ಪ್ರಯತ್ನಿಸಿದರೂ ಕೇಳುವ ತಾಳ್ಮೆ ಕಳೆದುಕೊಂಡ ಹಳ್ಳಿಗರು ಮನಸೋ ಇಚ್ಛೆ ಬಯ್ಯುತ್ತಿದ್ದರು. "ಏನಾಡ್ತೀರ್ರೋ ಎಳ್ಕಳ್ರಲಾ", "ಬಿಗೀರೋ ಅವನನ್ನ" ಎಂದು ಅರಚುತ್ತಿದ್ದರು. ಅಷ್ಟು ಹೊತ್ತಿಗೆ ಜಾತ್ರೆಗಾಗಿ ಹಾಕಿದ್ದ ಪೋಲೀಸರು ಬಂದು ನಾಗರಾಜಪ್ಪನವರಿಗೆ ರಕ್ಷಣೆ ಕೊಟ್ಟು ನಮ್ಮ ಊರಿಗೆ ಅವರನ್ನು ತಲುಪಿಸಿದರು. ಅಂದು ಊರಿನಲ್ಲಿ ಸುದ್ದಿಯೋ ಸುದ್ದಿ. ಅವರ ಅಜ್ಜಿ ಮತ್ತು ತಾಯಿ ಕಣ್ಣುಗಳಲ್ಲಿ ಕಣ್ಣೀರು! ಅವರು ಎದುರಿಸಿದ ಇಂಥ ಪ್ರಸಂಗಗಳು ಹತ್ತಾರು. ಅನಿರೀಕ್ಷಿತವಾಗಿ

ದುರಂತ ಆಹ್ವಾನಿಸಿಕೊಂಡು ಸವಾಲು ಹಾಕುವ ಗಂಡೆದೆಯ ನಾಗರಾಜಪ್ಪನವರ ಸಾಹಸಕ್ಕೆ ಇದೊಂದು ಸಾಕ್ಷಿ, ಚಿಕ್ಕವರಾಗಿದ್ದ ನಮಗೆ ಅವರು ಕ್ರಾಂತಿಕಾರಿ 'ಹೀರೊ' ಆದರು. ಅವರ ಪ್ರಭಾವದಿಂದ ಕ್ರಮೇಣ ನಮ್ಮ ಮೂಢ ನಂಬಿಕೆಗಳು ಕಡಿಮೆಯಾದವು.

ನಮ್ಮೂರಿನಲ್ಲಿಯೇ ಅವರು ನಡೆಸಿದ ಮತ್ತೊಂದು ಸಾಹಸದ ಪ್ರಸಂಗಕ್ಕೆ ನಮ್ಮ ಊರಿನ ಗ್ರಾಮದೇವತೆಯಾದ ದೊಡ್ಡಮ್ಮ ದೇವತೆಯ ಜಾತ್ರೆಯೇ ಸಾಕ್ಷಿ. ಕಲ್ಲೂರಿನಲ್ಲಿ ದೊಡ್ಡಮ್ಮನ ಹಬ್ಬದಷ್ಟು ವೈಭವದ ಮತ್ತಾವ ಹಬ್ಬವೂ ನಡೆಯುವುದಿಲ್ಲ. ಈ ಹಬ್ಬಕ್ಕೆ ಹತ್ತಾರು ಕಡೆಯಿಂದ ಜನ ಬರುತ್ತಾರೆ. ಅದರಲ್ಲಿಯೂ ಬೆಂಗಳೂರಿಂದ ಬರುವವರ, ನಂಟರಿಷ್ಟರ ಸಂಖ್ಯೆ ಅಪಾರ. ಅದು ಮಾಂಸಾಹಾರಿಗಳ ಹಬ್ಬ , ಸಾವಿರಾರು ಕುರಿ ಕೋಳಿಗಳ ಬಲಿಯಾಗುತ್ತದೆ. ಮಂಗಳವಾರ ರಾತ್ರಿ ಪ್ರಾಣಿಗಳ ಆಕ್ರಂದನ ಗ್ರಾಮದ ಗಡಿ ದಾಟುತ್ತದೆ. ಈ ಹಬ್ಬ ಯುಗಾದಿ ಹಬ್ಬ ಕಳೆದು ಹದಿನೈದು ದಿವಸಕ್ಕೆ ನಡೆಯುತ್ತದೆ.

ಹಬ್ಬವನ್ನಂತೂ ಎಲ್ಲಾ ಜನಾಂಗದವರು ಅದ್ದೂರಿಯಾಗಿ (ಈ ಹಬ್ಬಕ್ಕಾಗಿ ಯಥೇಚ್ಛವಾಗಿ ಸಾಲಮಾಡಿ ವರ್ಷವಿಡೀ ಸಾಲದ ಹಣವನ್ನು ತೀರಿಸುತ್ತಾರೆ) ಆಚರಿಸುತ್ತಾರೆ. ಈ ಸಂಬಂಧದಲ್ಲಿ ಬುಧವಾರ 'ಪರಿಶೆ' (ಜಾತ್ರೆ) ಸೇರುತ್ತದೆ. ಹರಿಜನರ, ಅಗಸರ, ಅಗ್ನಿವಂಶದವರ ಹೆಂಗೆಳೆಯರು ಅವರವರು ಪ್ರತ್ಯೇಕ ಪ್ರತ್ಯೇಕ ಕೊಂಬು, ಕಹಳೆ, ತಮಟೆ ಓಲಗದೊಡನೆ ಆರತಿಗಳನ್ನು ರಂಗುರಂಗಿನ ಉಡುಗೆ ತೊಡುಗೆಗಳನ್ನು ತೊಟ್ಟುಕೊಂಡು ಊರ ಹೊರಗಿನ ಸಂತೆಮಾಳದಲ್ಲಿರುವ ದೊಡ್ಡಮ್ಮನ ದೇವಾಲಯಕ್ಕೆ ಮೆರವಣಿಗೆ ಬರುತ್ತಾರೆ. ಎಲ್ಲಾ ಕೋಮಿನ ಆರತಿಗಳು ಬಂದ ನಂತರ ದೇವಿಯ ವಿಗ್ರಹವನ್ನು ಒಬ್ಬರು ಹೊತ್ತು ದೇವಾಲಯದಿಂದ ಹೊರಗೆ ಬಂದು, ದೇವಾಲಯವನ್ನು ಮೂರು ಬಾರಿ ಪ್ರದಕ್ಷಿಣೆ ಸುತ್ತುತ್ತದೆ. ಆ ಸಮಯದಲ್ಲಿ ಜನರೆಲ್ಲರೂ ದೇವಾಲಯದ ಹತ್ತಿರ ಸಮೀಪಿಸುತ್ತಾ, ದೇವರ ಮೇಲೆ, ಬಾಳೆಹಣ್ಣು ದವನ, ಹೂ, ಸೂರೆಗೋಳಿ, ಮುಂತಾದವುಗಳನ್ನು ಎಸೆಯುತ್ತಾರೆ. ದೇವರು ಹೊತ್ತಿದ್ದವರ ಮೇಲೆ, ದೇವರು ಮೈಮೇಲೆ ಬಂದ ಹಾಗೆ, ಭರ್ರನೆ ಮುಂದಕ್ಕೂ ಹಿಂದಕ್ಕೂ ಹೋಗುವುದು ಅವನನ್ನು ಹತ್ತಾರು ಜನರು ಹಿಡಿಯುವುದು- ಈ ದೃಶ್ಯ ಮನೋರಂಜಕವಾಗಿರುತ್ತಿತ್ತು. ಮೆರವಣಿಗೆ ಸಂತೆ ಮಾಳದ ಮೂಲಕ ಕೆರೆಯ ಕೋಡಿ ದಾಟಿ ಏರಿ ಮೇಲೆ ಸಾಗುತ್ತಿದ್ದಂತೆ ಜನ ಜಾತ್ರೆ ಕರಗುತ್ತಾ, ಸಂಜೆಗತ್ತಲು ಆವರಿಸಿ ಎರಡು ದಿನಗಳ ಹಬ್ಬದ ವಾತಾವರಣಕ್ಕೆ ತೆರೆ ಬೀಳುತ್ತದೆ.


ಈ ಹಬ್ಬದ ಹತ್ಯಾಕಾಂಡದಲ್ಲಿ ಅದೆಷ್ಟೋ ಮೂಕ ಪ್ರಾಣಿಗಳು ಬಲಿಯಾಗುತ್ತವೆನ್ನುವುದು ಲೆಕ್ಕಕ್ಕೆ ಸಿಕ್ಕದಷ್ಟು ಸಂಖ್ಯೆ ಎನ್ನುವುದನ್ನು ಹೇಳಲು ತುಂಬ ದುಃಖವಾಗುತ್ತದೆ. ಈ ಭಯಾನಕ ದೃಶ್ಯಾವಳಿ, ಅದರಲ್ಲೂ ದೇವಾಲಯದ ಎದುರು ಮಧ್ಯರಾತ್ರಿ ನಡೆಯುವ ಸುಮಾರು 30 ಕೋಣಗಳ ಬಲಿ-ಇವೆಲ್ಲವುಗಳನ್ನು ನಾನು 30 ವರ್ಷಗಳ ಹಿಂದೆಯಷ್ಟೆ ನೋಡಿದ್ದೆ. ಈಗಂತೂ ಆ ದೃಶ್ಯವನ್ನು ನೋಡುವುದಿರಲಿ, ಅಲ್ಲಿ ಸೇರುವುದೂ ಸಹ ಸಹ್ಯವೆನಿಸುವುದಿಲ್ಲ.

ಈ ಹಬ್ಬದ ಸಂದರ್ಭದಲ್ಲಿ ಶ್ರೀ ನಾಗರಾಜಪ್ಪನವರು ಊರಿನಲ್ಲಿದ್ದರು. ಮಂಗಳವಾರ ರಾತ್ರಿ ದೇವತೆಯ ವಿಗ್ರಹವನ್ನು ಮಣ್ಣಿನಿಂದ ತಯಾರಿಸಿ, ಶೃಂಗರಿಸಿ ಊರು ಬೀದಿಗಳಲ್ಲಿ ಮೆರವಣಿಗೆ ಹೊರಡಿಸುತ್ತಾರೆ. ಆಗ ಸರಿ ರಾತ್ರಿ ಸಮಯ, ಮೆರವಣಿಗೆಯ ಪ್ರತಿ ಬೀದಿಗಳಲ್ಲೂ ಒಂದೊಂದು ಕುರಿಯನ್ನು ಮಚ್ಚಿನಿಂದ ಒಂದೇ ಏಟಿಗೆ ಕಡಿದು ಶಿರವನ್ನು ನೆಲಕ್ಕುರುಳಿಸುತ್ತಿದ್ದರು. ಸಾಮಾನ್ಯವಾಗಿ ಮನೆಗಳಿಗೊಂದೊಂದರಂತೆ ಕುರಿಗಳನ್ನು ತಂದಿರುತ್ತಾರೆ. ಆಯಾ ಬೀದಿಗಳಲ್ಲಿ ಮೆರವಣಿಗೆ ಸಾಗುತ್ತಿದ್ದಂತೆ, ನಡುಮನೆಗಳಲ್ಲಿ ಆರತಿಗಳನ್ನು ಇಟ್ಟು (ಹಸಿ ಅಕ್ಕಿಹಿಟ್ಟಿನಲ್ಲಿ ಬೆಲ್ಲದ ಪಾಕವನ್ನು ಬೆರಸಿದ ಎರಡು ಚೌಕಾಕಾರದ ಮುದ್ದೆಗಳು- ತೊಂಬಿಟ್ಟಿನ) ಮಂಗಳಾರತಿ ಬೆಳಗಿ ಆರತಿ ಎದುರು ತಂದ ಕುರಿಯ ಕಿವಿಯನ್ನು ಕೊಯ್ದು ರಕ್ತ ಬಲಿಕೊಡುತ್ತಾರೆ. ಹೀಗೆ ಅಮಾಯಕ ಮೂಕ ಪ್ರಾಣಿಗೆ ಆಗಿನಿಂದಲೇ ಹಿಂಸೆ ಪ್ರಾರಂಭ.

ದೇವಿಯ ವಿಗ್ರಹವನ್ನು ದೇವಸ್ಥಾನಕ್ಕೆ ಗುಡಿದುಂಬಿಸಿದ ನಂತರ ಹರಿಜನರು ದೇವಿಯ ಎದುರು ಹೊರಗಡೆ ಸುಮಾರು ಕೋಣಗಳನ್ನು ಆಹುತಿ ಕೊಡುತ್ತಾರೆ. ಶ್ರೀ ನಾಗರಾಜಪ್ಪನವರಿಗೆ ಈ ವಿಷಯ ತಿಳಿದಿತ್ತು. ಆ ಸಮಯಕ್ಕೆ ದೇವಾಲಯದ ಸಮೀಪ ಬಂದರು. ಸಾಲಾಗಿ ಬಲಿಗಾಗಿ ನಿಂತಿದ್ದ ಕೋಣಗಳಲ್ಲಿ ಒಂದನ್ನು ಬಲಿಗಾಗಿ ಸಿದ್ಧ ಮಾಡಿದ್ದರು. ಕೂಡಲೇ ಅಲ್ಲಿಗೆ ಬಂದು ಕೋಣವನ್ನು ಪಕ್ಕಕ್ಕೆ ಎಳೆದು ನಿಲ್ಲಿಸಿ, ತಾವು ಬಲಿಸ್ಥಾನದಲ್ಲಿ ಕುಳಿತು "ನಿರಪರಾಧಿಗಳಾದ ಆ ಮೂಕ ಪ್ರಾಣಿಗಳನ್ನು ಬದುಕಲು ಬಿಡಿ, ನನ್ನನ್ನು ಬಲಿ ಕೊಡಿ" ಎಂದು ಜನ ಸಮೂಹದಲ್ಲಿ ಭಿನ್ನವಿಸಿದರು. ಹೀಗೆ ಏಕಾಏಕಿ, ಹಿಂದಿನಿಂದ ನಡೆಸಿಕೊಂಡು ಬಂದಿರುವ ಪದ್ಧತಿಯನ್ನು ಮೂಢನಂಬಿಕೆಗಳನ್ನು ಅವರು ಬಿಡಲು ತಯಾರಿಲ್ಲ. ಈ ರೀತಿ ಬಲಿ ನಿಲ್ಲಿಸಿದರೆ ಅಮ್ಮನು ಕೋಪಗೊಂಡು ಊರಿಗೇ ತೊಂದರೆವುಂಟು ಮಾಡುತ್ತಾಳೆ, ಎಂದು ಮುಂತಾಗಿ ಬೆಳಗಿನ ಜಾವದವರೆವಿಗೂ ತಕರಾರು ಮಾಡಿಕೊಂಡು ಕುಳಿತಿದ್ದ ಜನಗಳನ್ನು ಅವರು ಎಷ್ಟೇ ಹೋರಾಡಿದರೂ ಛಲ ಬಿಡದ ತ್ರಿವಿಕ್ರಮನಂತೆ- ಅವರುಗಳನ್ನು ಮಣಿಸಿ ಆ ಮೂಕ ಪ್ರಾಣಿಗಳನ್ನು ಅಂದು ಉಳಿಸುವುದರಲ್ಲಿ ಯಶಸ್ವಿಯಾದರು. ಹೀಗೆ ಎಂತಹ ಕಠಿಣ ಪರಿಸ್ಥಿತಿಯಲ್ಲೂ ಒಂಟಿಯಾಗಿಯೇ ಜಗ್ಗದೆ ಹಿಡಿದ ಗುರಿಯನ್ನು ಸಾಧಿಸುವ ಛಲವನ್ನು ಆಗಲೇ ಮೈಗೂಡಿಸಿಕೊಂಡಿದ್ದರು.

ಶ್ರೀ ನಾಗರಾಜಪ್ಪನವರ ಪ್ರಭಾವದಿಂದ, ಕಲ್ಲೂರಿನಿಂದ ಕಡಬದ ಪ್ರೌಢಶಾಲೆಗೆ ಸುಮಾರು 20-25 ಮಂದಿ ವಿದ್ಯಾರ್ಥಿಗಳು ಸೇರಿದೆವು. ಕಡಬ ಹೋಬಳಿಯ ಕೇಂದ್ರ. ಅಲ್ಲಿ ಹಳೆಯ ಬಿದ್ದ ಮನೆಗಳೇ ಹೆಚ್ಚು. ಅಧಿಕ ಸಂಖ್ಯೆಯಲ್ಲಿ ವಿದ್ಯಾವಂತರಾಗಿ ಸರ್ಕಾರಿ ನೌಕರಿ ಹಿಡಿದು ಊರು ಬಿಟ್ಟ ಕುಟುಂಬಗಳ ಸಂಖ್ಯೆ ಅಧಿಕ. ಹೀಗಾಗಿ ನಮಗೆ ರೂಮುಗಳು ಬಾಡಿಗೆಗೆ ದೊರೆಯುವುದು ಕಷ್ಟವಾಗಲಿಲ್ಲ. ಈಗಾಗಲೇ ಹಿರಿಯ ವಿದ್ಯಾರ್ಥಿಗಳಾದ ನಾಗರಾಜಪ್ಪನವರಿಂದ ನಮಗೆ ಮಾರ್ಗದರ್ಶನ ದೊರೆತು ಯಾವ ಕಷ್ಟವೂ ಆಗಲಿಲ್ಲ. ಎಲ್ಲರೂ ಒಟ್ಟಿಗೆ ತಿರುಗಾಡುತ್ತಿದ್ದೆವು. ಮಣ್ಣಿನ ಗಡಿಗೆಗಳಿಂದ ಬೆಳಗ್ಗೆ ಹೊತ್ತು ನಮ್ಮ ಗ್ರಾಮದ ವಿದ್ಯಾರ್ಥಿಗಳಾದ ನಾವೆಲ್ಲರೂ ಕಡಬದ ಕೆರೆಯಿಂದ ಅಡುಗೆಗಾಗಿ

ಪ್ರೊ॥ ಕೆ.ಜಿ.ಎನ್.



1963



1967



1968



1970




ಎಂ.ಎ. ಪದವಿ - 1960




ಅಜ್ಜಿ - ತಾಯಿಯೊಂದಿಗೆ - 1968




ಸೌ|| ಹೆಚ್. ಸಾವಿತ್ರಿಯವರೊಂದಿಗೆ ವಿವಾಹ - 1967



ಪ್ರೊ|| ಕೆ.ಜಿ.ಎನ್. ದಂಪತಿಗಳು



ಮಗನೊಂದಿಗೆ - ಅಂದು



ಮೊಮ್ಮಗಳೊಂದಿಗೆ - ಇಂದು



ಮಗ - ಸೊಸೆ



ಮಗ, ಸೊಸೆ, ಮೊಮ್ಮಗಳು - ಅಮೆರಿಕಕ್ಕೆ ಬೀಳ್ಕೊಡಿಗೆ



ಬಂಧುಗಳು



ಮಿತ್ರರು



ಬಂಧುಗಳು




1985




1994


⑦





ಸನ್ಮಾನಗಳು







ಅಧ್ಯಕ್ಷರು - ಗುಬ್ಬಿ ತಾಲ್ಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ - 1993



ನಿರ್ದೇಶಕರು - ಶ್ರೀ ಕುವೆಂಪು ಸ್ನಾತಕೋತ್ತರ ಪದವಿ ಕೇಂದ್ರ, ಚನ್ನಪಟ್ಟಣ

ನೀರು ಹೊತ್ತು ಸಾಲಾಗಿ ಬರುವ ದೃಶ್ಯ ಕಡಬದ ಜನರಿಗೆ ನೋಡಲು ತುಂಬಾ ಮೋಜು. ಶಾಲೆಗಾಗಲಿ, ಆಟಪಾಟಗಳಿಗಾಗಲಿ, ಶನಿವಾರ ಊರಿಗೆ ನಡೆದು ಹೋಗುವಾಗಲೂ ಒಟ್ಟಿಗೇ ಹೋಗುತ್ತಿದ್ದೆವು. ಬಹುತೇಕ ನಾವೆಲ್ಲರೂ ಒಂದೇ ವಠಾರದಲ್ಲಿ ನಾಲ್ಕಾರು ರೂಮುಗಳು- ರೂಮುಗಳ ಮುಂಭಾಗ, ವಿಶಾಲವಾದ ಅಂಗಳ-ಅಲ್ಲಿ ನಾವುಗಳೆಲ್ಲಾ ಬೆಳಗಿನ ಹೊತ್ತು ಇದ್ದಿಲು ಸ್ಟೌವ್‌ಗಳನ್ನು ಹೊತ್ತಿಸಿಕೊಂಡು ಚಕ್ರಾಕಾರವಾಗಿ ಕುಳಿತು ತಮ್ಮ ತಮ್ಮ ಅಡುಗೆಗಳನ್ನು ಮಾಡುತ್ತಿದ್ದ ದೃಶ್ಯ ಅಪರೂಪದ್ದು. ಮನೆಯ ಮಾಲೀಕರ ಒಂದು ವೈಶಿಷ್ಟ್ಯವನ್ನು ಇಲ್ಲಿ ಹೇಳಲೇ ಬೇಕು. ನಾವು ಒಂದೊಂದು ರೂಮಿನಲ್ಲಿ ಎಷ್ಟೆಷ್ಟು ಜನರು ಇರಬೇಕೆನ್ನುವುದನ್ನು ಮಾಲೀಕರೆ ನಿರ್ಧರಿಸಿ, ಒಂದೊಂದು ತಲೆಗೆ ಹನ್ನೆರಡು ಆಣೆಯಂತೆ ತಿಂಗಳೊಂದಕ್ಕೆ ಬಾಡಿಗೆ ಎಂದು ನಿರ್ಧರಿಸುತ್ತಿದ್ದರು. ಆ ಹಾಳು ಮನೆಗಳಲ್ಲಿ ನಮ್ಮ ಕೆಲವರಿಗೆ ದೆವ್ವದ ಭಯ. ರಂಗಯ್ಯ ಅಡಿಗೆ ಮಾಡುತ್ತಲೇ ಕಣ್ಣಿಗೆ ಕತ್ತಲು ಕವಿದು ಬಿದ್ದು ಪ್ರಜ್ಞೆ ತಪ್ಪಿದ, ಕೇಳಿದ್ದಕ್ಕೆ ಯಾರೋ ಹಿಂದಿನಿಂದ ಬಂದು ಮುಟ್ಟಿದಂತಾಯಿತಂತೆ! ಗೋಪಾಲ ಬೇರೆ ರಾತ್ರಿ ಚಾಪೆಯ ಮೇಲೆ ಮಲಗಿದ್ದವನು ಬೆಳಿಗ್ಗೆ ಬೇರೆ ಕಡೆ ನೆಲದ ಮೇಲೆ ಮಲಗಿದ್ದ. ತಿಮ್ಮಯ್ಯನಿಗೆ ರಾತ್ರಿ ಮೂತ್ರಕ್ಕೆ ಹೊರಕ್ಕೆ ಬಂದಾಗ ಭೂಮಿ ಆಕಾಶದ ಪರ್ಯಂತ ಏನೋ ನಿಂತಿದ್ದು ಕಂಡಿತು. ಹೀಗಾಗಿ ಎಲ್ಲರಿಗೂ ಒಂದಲ್ಲ ಒಂದು ರೀತಿ ದೆವ್ವ ಮತ್ತು ಮೋಹಿನಿ ಕಾಟದ ಭಯ. ನಾಗರಾಜಪ್ಪನವರು ಧೈರ್ಯ ಹೇಳಿದರು. ಹೆದರಿದ ವಿದ್ಯಾರ್ಥಿಗಳ ಕೊಠಡಿಯಲ್ಲಿ ರಾತ್ರಿ ಒಬ್ಬರೇ ಮಲಗಿ ಹೆದರಿಕೆ ಬಿಡಿಸಿದರು. ಅವರ ಮುಂದಾಳತ್ವದಲ್ಲಿ ಕಡಬದಲ್ಲಿ ನಾವು ಆಚರಿಸಿದ 'ಸರಸ್ವತಿ ಪೂಜೆ' ಇನ್ನೂ ನೆನಪಿದೆ. ನಮ್ಮ ಅಧ್ಯಾಪಕರುಗಳು ಬಂದು ನಮ್ಮನ್ನು ಅಂದು ಹರಸಿದರು. ಮುಖ್ಯೋಪಾಧ್ಯಾಯರಾಗಿದ್ದ ದೊರೆ ಸ್ವಾಮಿ ಅಯ್ಯಂಗಾರ್ ಅವರ ಅಚ್ಚುಮೆಚ್ಚಿನ ಶಿಷ್ಯರಾದರು. ನಾಗರಾಜಪ್ಪನವರು ಕಷ್ಟ ಪಟ್ಟು ಓದುತ್ತಿದ್ದರು. ನಮ್ಮಲ್ಲಿ ಕೆಲವರಿಗೆ ಸಿನಿಮಾ ನೋಡುವ ಚಟ. ಗುಬ್ಬಿ ತುಮಕೂರುಗಳಿಗೆ ಕಾಲ್ನಡಿಗೆಯಲ್ಲಿಯೇ ಹೋಗಿ ಸಿನಿಮಾ ನೋಡಿ ಬರುತ್ತಿದ್ದೆವು. ನಾನು ಮತ್ತು ನನ್ನ ಸ್ನೇಹಿತ ಒಮ್ಮೆ ಗುಬ್ಬಿಗೆ ಕಡಬದಿಂದ ನಡೆದುಹೋಗಿ ಸಿನಿಮಾ ನೋಡಿದೆವು. ಮತ್ತೆ ಜೇಬಿನಲ್ಲಿ ಉಳಿದಿದ್ದ ಚಿಲ್ಲರೆ ಕಾಸುಗಳಲ್ಲಿ ಹೋಟೆಲ್ಲಿನಲ್ಲಿ ತಿಂಡಿ ತಿಂದೆವು. ಜೇಬು ಖಾಲಿ. ಅಷ್ಟು ಹೊತ್ತಿಗೆ ರಾತ್ರಿ ಹತ್ತು ಗಂಟೆ. ಅಂಗಡಿ ಸಾಲಿನ ಒಂದು ಪಡಸಾಲೆಯ ಕೊರೆಯುವ ಸಿಮೆಂಟು ನೆಲದ ಮೇಲೆ-ನೆಲಕ್ಕೂ ಇಲ್ಲ, ಹೊದಿಯಲ್ಲೂ ಇಲ್ಲ. ಚಳಿಯೋ ಹೇಳ ತೀರದು. ಅಂತಹ ಭಯಂಕರ ಚಳಿಯಲ್ಲಿ, ತೊಡೆಸಂಧಿಗೆ ತಲೆಯನ್ನು ಕೊಟ್ಟುಕೊಂಡು ಮಲಗಿದೆವು. ಮಲಗಿದ್ದೆ ಬಂತು- ನಡುಗಿಕೊಂಡು ಆ ಕರಾಳ ರಾತ್ರಿಯನ್ನು ಕಳೆದ ಸನ್ನಿವೇಶವನ್ನು ಈಗಲೂ ನೆನದರೆ ಮೈ ಝುಮ್ಮೆನ್ನುತ್ತದೆ. ಬಹುಶಃ ಅದೇ ಕೊನೆ- ನಾನು ಮತ್ತೆ ಎಂದೆಂದೂ ಗುಬ್ಬಿಗಾಗಲೀ ತುಮಕೂರಿಗಾಗಲೀ ಹೋಗಿ ಸಿನಿಮಾ ನೋಡುವ ಸಾಹಸ ಮಾಡಲಿಲ್ಲ. ನಾಗರಾಜಪ್ಪನವರು ಮಾತ್ರ ಒಮ್ಮೆ ನಮ್ಮ ಜೊತೆ ಗುಬ್ಬಿಗೆ ಸಿನಿಮಾ ನೋಡಲು ಬಂದದ್ದುಂಟು. ಆದರೆ ಅವರು ಮಾತ್ರ ಗಂಭೀರ ಚಿಂತಕರು.

ಕಡಬಕ್ಕೆ ಐದು ಕಿ.ಮೀ.ದೂರದಲ್ಲಿ ಬೆಲವತ್ತದ ಬಳಿ ಅರೆಮಾರೇನಹಳ್ಳಿ ಎಂಬ ಗ್ರಾಮವಿದೆ. ಅಲ್ಲಿ ಶಕ್ತಿದೇವತೆಯ ಗುಡಿ ಇದೆ. ಕೆರೆ, ಕೆರೆಯ ಮುಂದೆ ಗುಡಿ. ಅದರ

ಒಂದೆ ಇನ್ನೊಂದು ಗುಡಿ ಅದರ ಗೋಡೆಯ ಮೇಲೆಲ್ಲ ರಕ್ತದ ಕೈಯ ಕಲೆಗಳು. ಶತ್ರುಗಳ ನಾಶಕ್ಕೆ ದೇವತೆಗೆ ಬಲಿಕೊಟ್ಟು ರಕ್ತದಲ್ಲಿ ಅದ್ದಿದ ಕೈಯನ್ನು ಗೋಡೆಯ ಮೇಲೆ ಬಡಿಯುತ್ತಿದ್ದರು. ಅಲ್ಲಿ ದೇವರ ಕಡೆಯವನು ಇದನ್ನು ವಿಧಿವತ್ತಾಗಿ ಮಾಡಿಸುತ್ತಿದ್ದನು. ಶಕ್ತಿ ದೇವತೆ ಗುಡಿ ಮುಂದೆ ವಿಶಾಲವಾದ ಬಯಲು. ರಾತ್ರಿ ಹತ್ತಿರವೇ ಇದ್ದ ಹಳ್ಳಿಯ ಪೂಜಾರಿ ಮನೆಯಲ್ಲಿ ಬಂದ ಭಕ್ತರಿಗೆ ಕಣಿ ಹೇಳುತ್ತಿದ್ದನು. ಅಲ್ಲಿಯ ಮುಸ್ಲಿಮ ಭಕ್ತನ ಮೇಲೂ ಶಕ್ತಿ ದೇವತೆ ಬರುತ್ತಿತ್ತು. ಬೆಳಗಿನ ಝಾವ ಶಕ್ತಿದೇವತೆಯ ಗುಡಿ ಮುಂದಕ್ಕೆ ಎಲ್ಲರೂ ಬರುತ್ತಿದ್ದರು. ಶಕ್ತಿ ದೇವತೆಗೆ ಅಲಂಕಾರ -ಅದು ಸ್ವಯಂಭೂ ಒಡಮೂಡಿದ ದೇವತೆ ಎನ್ನುತ್ತಿದ್ದರು. ದೆವ್ವ ಹಿಡಿದವರು, ಬಂಜೆಯರು, ರೋಗಿಗಳು ಮತ್ತು ಇಷ್ಟಾರ್ಥ ಕೋರಿಕೆಯ ಹೆಂಗಸರು ಗಂಡಸರು ಸೇರುತ್ತಿದ್ದರು. ಅವರೆಲ್ಲ ಕೆರೆಯಲ್ಲಿ ಸ್ನಾನಮಾಡಿ ಬಂದು ಶಕ್ತಿ ಗುಡಿಯ ಮುಂದೆ ಬಯಲಲ್ಲಿ ನಿಲ್ಲಬೇಕಿತ್ತು. ಆಗ ವಾಲಗ, ಅರೆ, ತಮಟೆ ಜೋರಾಗಿ ಬಡಿಯುತ್ತಿದ್ದರು. ಪೂಜಾರಿ ಉದ್ದವಾದ ಬೆತ್ತ ಹಿಡಿದು ಆವೇಶದಿಂದ ಕುಣಿಯುತ್ತ ಭಕ್ತರನ್ನು ಮುಟ್ಟುತ್ತಿದ್ದ. ಅವರೆಲ್ಲ ಹೆಣ್ಣು ಗಂಡು ಭೇದವಿಲ್ಲದೆ ಕುಣಿಯುತ್ತಿದ್ದರು. ಜನರು ಬಹು ದೂರದಿಂದ ಬರುತ್ತಿದ್ದರು. ನಾಗರಾಜಪ್ಪನವರು ನಮ್ಮನ್ನು ಒಮ್ಮೆ ಕರೆದುಕೊಂಡು ಹೋದರು. ಇಡೀ ರಾತ್ರಿ ಅಲ್ಲಿಯ ಎಲ್ಲ ವ್ಯವಹಾರಗಳನ್ನು ತೋರಿಸಿದರು. ಅದು ನಮಗೆ ಮನರಂಜನೆಯಾಗಿತ್ತು. ಆದರೆ ಅವರು ಅಷ್ಟಕ್ಕೇ ಬಿಡಲಿಲ್ಲ. ನಿಜವಾಗಿಯೂ ಆ ಶಕ್ತಿ ಕೇಂದ್ರದಲ್ಲಿ 'ಮಹಿಮೆ' ಇದೆಯೋ ಇಲ್ಲವೋ ಎಂಬ ಅನ್ವೇಷಣೆಗೆ ತೊಡಗಿದರು. ಸುಮಾರು ಆರು ತಿಂಗಳುಗಳ ಕಾಲ ಬೇರೆ ಬೇರೆ ವೇಷದಲ್ಲಿ ಬೇರೆ ಬೇರೆ ಕಡೆಯಿಂದ ಭಕ್ತರ ಜೊತೆ ಬೆರೆತು ಅಲ್ಲಿಯ ರಹಸ್ಯವನ್ನೆಲ್ಲ ಭೇದಿಸಿದರು. ವರ್ಷಕ್ಕೊಮ್ಮೆ ಆ ದೇವತ ಕಡಬದ ಕೆರೆಗೆ 'ಗಂಗೆ ಪೂಜೆಗೆ' ಬರುತ್ತಿತ್ತು. ಸಮಯನೋಡಿ ನಮ್ಮನ್ನೆಲ್ಲ ಕಳಿಹಾಕಿ ನಾಗರಾಜಪ್ಪನವರು ಕೆರೆಯ ಬಳಿ ಪೂಜಾರಿ ಯೊಂದಿಗೆ ವಾದಕ್ಕೆ ಇಳಿದರು. ವಾದ ಜಗಳಕ್ಕೆ ತಿರುಗಿತು. ಹಳ್ಳಿಗರು ಹೊಡೆಯಲು ಬಂದರು-ನಾವು ಕಲ್ಲು ಬೀರುತ್ತ ಕಾಲು ಕಿತ್ತು ಕಡಬ ಸೇರಿದೆವು. ಅದೊಂದು ದೊಡ್ಡ ಗ್ಯಾಂಗು. ಗುಬ್ಬಿಯ ವೇಶ್ಯ ವೃತ್ತಿಪರ ಸ್ತ್ರೀಯರನ್ನು ಬಳಸಿ, ಬರುವ ದೂರದ ಭಕ್ತರಿಗೆ ಮೋಸಮಾಡುತ್ತಿದ್ದರು. ಅವರ ಎಲ್ಲ ವ್ಯವಹಾರ ಮತ್ತು ಗುಟ್ಟನ್ನು ಪತ್ತೆ ಹಚ್ಚಿ- ನಮಗೆ ಬಯಲು ಮಾಡಿದರು. ಅಲ್ಲಿ ಮಂಗಳವಾರ ಮತ್ತು ಬುಧವಾರ ದೇವರ ಹೆಸರಿನಲ್ಲಿ ಸಾವಿರಾರು ರೂಪಾಯಿಗಳ ವ್ಯವಹಾರ ನಡೆಯುತ್ತಿತ್ತು. ಹಳ್ಳಿಗರಿಗೆ ಲಾಭದಲ್ಲಿ ಹಿಂಪಾಲು ಸಿಗುತ್ತಿತ್ತು. ಇಂಥ ಮೋಸದ ಮುಖವಾಡ ಕಳಚುವುದರಲ್ಲಿ ನಾಗರಾಜಪ್ಪನವರು ಎತ್ತಿದ ಕೈ. ಅವರು ಎಂದೂ ನಾಸ್ತಿಕರಲ್ಲ. ಆದರೆ ಭಕ್ತಿಯ ಹೆಸರಿನಲ್ಲಿ ಶೋಷಣೆ ಮತ್ತು ವ್ಯಾಪಾರವನ್ನು ಎಂದೂ ಸಹಿಸುತ್ತಿರಲಿಲ್ಲ.

ಮೇಲೆ ವಿವರಿಸಿದ ಶಕ್ತಿ ದೇವತೆಯ ಗುಡಿಯಲ್ಲಿ ನಡೆಯುವ - ನಮಗೆ ತಮಾಷೆ, ಮನರಂಜನೆ ಎನಿಸುತ್ತಿದ್ದ ಸನ್ನಿವೇಶಗಳನ್ನು ವೀಕ್ಷಿಸಲು ನನ್ನ ಒತ್ತಾಯದ ಮೇಲೆ ಕೆಲವಾರು ಮಂದಿ ಅರೆಮಾರೇನಹಳ್ಳಿಗೆ ಹೊರಟೆವು. ಅಲ್ಲಿನ ಕಾರ್ಯಚಟುವಟಿಕೆಗಳು ಮಧ್ಯರಾತ್ರಿ ನಂತರ ತಾನೆ ಪ್ರಾರಂಭ. ನಾವೇನೋ ಆ ಗುಡಿಯನ್ನು ರಾತ್ರಿ 8-30 ರ ವೇಳೆಗೆ ತಲುಪಿದೆವು. ನಾವು ತಲುಪಿ ಕೇವಲ ಅರ್ಧ ತಾಸು ಕಳೆದಿದೆ. ಶ್ರೀ ನಾಗರಾಜಪ್ಪನವರು

ಗಾಬರಿಯಿಂದ ನನ್ನಲ್ಲಿಗೆ ಬಂದು, 'ನಿಮ್ಮ ತಂದೆಯವರು ಕಡಬಕ್ಕೆ ನಿನ್ನನ್ನು ನೋಡಲು ಬಂದಿದ್ದಾರೆ' ಎಂದು ತಿಳಿಸಿದರು. ನಾನಿಲ್ಲದ್ದು ಶ್ರೀ ನಾಗರಾಜಪ್ಪನವರಿಗೆ ಗೊತ್ತು. ನಮ್ಮ ತಂದೆಯವರಿಗೆ 'ನಿಮ್ಮ ಹುಡುಗ ಪಾಠಕ್ಕೆ ಹೋಗಿದ್ದಾನೆ, ಬರುತ್ತಾನೆ' ಎಂದು ಹೇಳಿದವರೇ, ಸೈಕಲ್ಲಿನಲ್ಲಿ ನನ್ನನ್ನು ಕರೆದೊಯ್ಯಲು ಬಂದರು. ನಮ್ಮ ತಂದೆಯವರ ವಿಷಯ ಕೇಳಿ ನನಗೆ ಕೈಕಾಲುಗಳು ಅದುರುವುದಕ್ಕೆ ಪ್ರಾರಂಭವಾಗಿ, ತೀರಾ ಭಯದಿಂದ ಕಂಪಿಸಿದೆ. ಕೋಪ ಬಂದಾಗ ಅದೂ ನಾನು ಓದುವುದನ್ನು ಬಿಟ್ಟು ಈ ರೀತಿ ಪೋಲಿ ಅಲೆಯುವುದು ಅವರಿಗೆ ಗೊತ್ತಾದಲ್ಲಿ ಅದರ ಪರಿಣಾಮ ನನಗೆ ಗೊತ್ತಿತ್ತು. ಅವರ ರೌದ್ರಾವತಾರ ಹಾಗೂ ಅವರ ಕೈ ಏಟಿನ ರುಚಿಯನ್ನು ಎಷ್ಟೋ ಸಲ ಅನುಭವಿಸಿದ್ದೆ. ನಾಗರಾಜಪ್ಪನವರು ನನ್ನನ್ನು ಸಂತೈಸಿ, ತಕ್ಷಣವೇ ಸೈಕಲ್ಲಿನಲ್ಲಿ ನನ್ನ ತಂದೆಯವರ ಹತ್ತಿರ ತಂದು ಬಿಟ್ಟರು. ಆಗ ನನಗೆ ಇನ್ನೂ ಹನ್ನೆರಡು ವರ್ಷಗಳು. ಶ್ರೀ ನಾಗರಾಜಪ್ಪನವರಿಗೆ ನನ್ನ ಮೇಲೆ ಎಲ್ಲಿಲ್ಲದ ಅಕ್ಕರೆ. ನನ್ನನ್ನೂ ಅವರು ಒಡಹುಟ್ಟಿದ ತಮ್ಮನಂತೆಯೇ ನೋಡಿಕೊಳ್ಳುತ್ತಿದ್ದರು. ಈಗಲೂ ಅಷ್ಟೇ. ನನ್ನ ಮೇಲಿನ ವಾತ್ಸಲ್ಯದ ಬಗ್ಗೆ ಇದೊಂದು ಸಣ್ಣ ಉದಾಹರಣೆ.

ನಾವು ಪ್ರತಿ ಸೋಮವಾರ ಬೆಳಿಗ್ಗೆ ಊರಿನಿಂದ- ಕೆಲವರು ಬಸ್ಸಿನಲ್ಲಿ ಕೆಲವರು ಕಾಲ್ನಡಿಗೆಯಲ್ಲಿ ಕಡಬಕ್ಕೆ ಹೋಗುತ್ತಿದ್ದೆವು. ಒಂದು ವಾರಕ್ಕಾಗುವ ಅಡುಗೆಗೆ ಬೇಕಾಗುವ ಅಕ್ಕಿ, ಬೇಳೆ ಮತ್ತು ಸೋಮವಾರಕ್ಕಾಗುವ ತಿಂಡಿಗಳನ್ನು 'ಕ್ಯಾರಿಯರ್ ಬಾಕ್ಸ್' ನಲ್ಲಿ ಕೊಂಡೊಯ್ಯುತ್ತಿದ್ದೆವು. ನಡೆದು ಬರುತ್ತಿದ್ದವರಲ್ಲಿ ನನ್ನ ಒಬ್ಬ ಸ್ನೇಹಿತ ಹೊರಡುವಾಗಲೇ ಒಂದು ಕೈಚೀಲ ಸಿದ್ಧ ಮಾಡಿಕೊಂಡು ಬರುತ್ತಿದ್ದನು. ನಾವು ನಮ್ಮ ಊರಿನ ಕೆರೆ ಬೈಲಿನ ಗದ್ದೆ ಹಾಗೂ ಹೊಲಗಳ, ತೋಟಗಳ ಮಾರ್ಗವಾಗಿ (ಸಮೀಪದ ಹಾದಿ) ಬರುತ್ತಿದ್ದೆವು. ಅವನಂತೂ ಯಾವ ಯಾವ ಜಮೀನುಗಳಲ್ಲಿ ಏನೇನು ತರಕಾರಿಗಳು ಸಿಗುತ್ತವೆಯೋ ಅವೆಲ್ಲವನ್ನು ತರದು ಚೀಲ ತುಂಬಿಸಿಕೊಂಡು ಬರುತ್ತಿದ್ದನು. ನಮ್ಮನ್ನೂ ಈ ಕೆಲಸಕ್ಕೆ ಪ್ರೇರೇಪಿಸುತ್ತಿದ್ದನು. ಮೊದಲೇ ನಮಗೆ ಭಯ- ಇಂಥವನ್ನೆಲ್ಲ ಮಾಡಲು ನಮಗಂತೂ ಧೈರ್ಯ ಮತ್ತು ಮನಸ್ಸು ಬರುತ್ತಿರಲಿಲ್ಲ. ಕೈ ಹಾಕುತ್ತಲೂ ಇರಲಿಲ್ಲ. 'ಉಪ್ಪು ತಿಂದವನು ನೀರು ಕುಡಿಯಲೇ ಬೇಕು' ಎಂಬಂತೆ ನನ್ನ ಸ್ನೇಹಿತ ಒಮ್ಮೆ ತೋಟದ ಮಾಲೀಕರ ಕೈಗೆ ಸಿಕ್ಕಿ ಹಾಕಿಕೊಂಡು ಬಿಟ್ಟ! ಇನ್ನೇನು ಕೇಳಬೇಕೆ? ಅವನನ್ನು ಅಡ್ಡಾದಿಡ್ಡಿಯಾಗಿ ಬಡಿದು ಕೈಚೀಲವನ್ನು ಕಿತ್ತುಕೊಂಡು ಬೆತ್ತಲಾಗಿಸಿ, ಇಡೀ ಅರ್ಧದಿವಸ ಬಿಸಿಲಿನಲ್ಲಿ ನಿಲ್ಲಿಸಿ, ನಂತರ ಛೀಮಾರಿ ಹಾಕಿ ಬಟ್ಟೆಗಳನ್ನು ಕೊಟ್ಟು ಕಳುಹಿಸಿದರು.

ಇವನ ಇದೇ ಕೈಚಳಕ ನಮ್ಮ ರೂಮುಗಳಲ್ಲೂ ಆಗುತ್ತಿತ್ತು. ನಾವೆಲ್ಲರೂ ಊರಿಂದ ಒಂದು ವಾರಕ್ಕಾಗುವಷ್ಟು ಅಕ್ಕಿ, ಬೇಳೆ ಮುಂತಾದವುಗಳನ್ನು ತಂದಿಡುತ್ತಿದ್ದುದು ಸರಿಯಷ್ಟೆ. ನಾವು ಶಾಲೆಗೆ ಹೋದ ವೇಳೆ ಅವನು ಸಹ ಶಾಲೆಗೆ ಬಂದರೂ, ಮೊದಲ ಪೀರಿಯಡ್ ಮುಗಿದ ತಕ್ಷಣವೇ ರೂಮಿಗೆ ಹೊರಟು ಬರುತ್ತಿದ್ದನು. ಬಂದವನೇ ಎಲ್ಲರ ಚೀಲಗಳನ್ನು ಹುಡುಕುವುದು-ಚೀಲಗಳಿಂದ ಅಷ್ಟಷ್ಟು ಅಕ್ಕಿ, ಬೇಳೆಗಳನ್ನು ಎತ್ತಿ, ನಿಕ್ಕರ್ ಜೇಬಿಗಿಳಿಸಿ, ಪಕ್ಕದಲ್ಲಿಯೇ ಇದ್ದ ಅಂಗಡಿಗೆ ಮಾರಿ, ಬೇಕಾದ ತಿಂಡಿಗಳನ್ನು ತಿಂದು ಬಿಡುತ್ತಿದ್ದನು.

ಒಮ್ಮೆ ಶ್ರೀ ನಾಗರಾಜಪ್ಪನವರಿಗೆ- ಇವನನ್ನು ಮಾಲು ಸಮೇತ ಹಿಡಿಯಬೇಕೆಂದು ತೀರ್ಮಾನಿಸಿ ನಾವು ಊರಿನಿಂದ ಬಂದ ದಿವಸವೇ, ಅವರು ಸಹ ಮೊದಲ ಪೀರಿಯಡ್ ನಂತರ ರೂಮಿಗೆ ಬಂದರು. ಮಾಲು ಸಮೇತ ಅವನನ್ನು ಹಿಡಿದರು. ಮಧ್ಯಾಹ್ನ ನಾವುಗಳು ವಿರಾಮ ವೇಳೆ ರೂಮಿಗೆ ಬಂದಾಗ, ಎಲ್ಲರೆದರೂ ಛೀಮಾರಿ ಮಾಡಿ ಅವನಿಂದ 'ದಂಡ'ವನ್ನು ವಸೂಲ್ಮಾಡಿದರು. ಗುಂಪಿನ ಶಿಸ್ತನ್ನು ಮರ್ಯಾದೆಯನ್ನು ಕಾಪಾಡಲು ಅವನಿಗೆ ಸಾಕಷ್ಟು ಬುದ್ಧಿವಾದ ಹೇಳಿದರು.

ಇನ್ನು ಕೆಲವರು ನಮಗಿಂತ ದೊಡ್ಡವರು (ಗಡವಗಳು) ನಾವು ಊರಿನಿಂದ ಬರುವ ದಿವಸ ತರುತ್ತಿದ್ದ ತಿಂಡಿಗಳನ್ನು, ಕ್ಲಾಸಿಗೆ ಚಕ್ಕರೆ ಹೊಡೆದು ಅರ್ಧಕ್ಕಿಂತಲೂ ಹೆಚ್ಚು ತಿಂಡಿಗಳನ್ನು ಲಪಟಾಯಿಸಿ, ನಾವು ಬರುವ ವೇಳೆಗೆ ಅವರೂ ಶಾಲೆಯಿಂದ ಬಂದಂತೆ ನಟಿಸುತ್ತ ಏನೂ ತಿಳಿಯದವಂತೆ ಇರುತ್ತಿದ್ದರು. ತಿಂಡಿಗಳನ್ನು ಯಾರು ತಿಂದರು. ಎಂದು ಕೇಳಿದರೆ "ನಮಗೆ ಗೊತ್ತಿಲ್ಲಪ್ಪ, ಕೋತಿಗಳು ಬಂದು ತಿಂದಿರಬೇಕು" ಎಂದು ಬಿಡುತ್ತಿದ್ದರು. ಇದೇ ರೀತಿ ಪ್ರತಿವಾರವೂ ನಮ್ಮನ್ನು ಗೋಳು ಗೊಡಿಸುತ್ತಿದ್ದರು. ಶ್ರೀ ನಾಗರಾಜಪ್ಪನವರು ಅವರನ್ನು ಚೆನ್ನಾಗಿ ಬೈಯ್ದು, ಬುದ್ಧಿವಾದ ಹೇಳಿ ಇನ್ನು ಮುಂದೆ ಈ ರೀತಿ ಆಗದ ಹಾಗೆ ತಾಕೀತು ಮಾಡಿದರು. ಅಂದಿನಿಂದ ಈ ಚೇಷ್ಟೆ ನಿಂತಿತು. ನಮ್ಮ ಗುಂಪಿನಲ್ಲಿ ಶ್ರೀ ನಾಗರಾಜಪ್ಪನವರಿಗೆ ಅಷ್ಟೊಂದು ಬೆಲೆ ಇತ್ತು.

ಇಂಟರ್‌ಮಿಡಿಯೇಟ್ ಕಾಲೇಜು ಓದುತ್ತಿದ್ದಾಗ, ನಾಗರಾಜಪ್ಪನವರು ಶ್ರೀ ಸಿದ್ಧಗಂಗಾಮಠದಲ್ಲಿದ್ದರು. ವೀರಶೈವ ತತ್ವಕ್ಕೆ ವಿರುದ್ಧವಾಗಿ ಶಿವಕುಮಾರ ಸ್ವಾಮಿಗಳು ಯಂತ್ರ ತಂತ್ರ ಮಾಡುವುದು-ಭಕ್ತರ ನಂಬಿಕೆಗಾಗಿ ಮಾಡುತ್ತೇನೆಂದು ಸ್ವಾಮಿಗಳು ಎಷ್ಟೇ ಹೇಳಿದರೂ ನಾಗರಾಜಪ್ಪನವರಿಗೆ ಮಾತ್ರ ಇಂದಿಗೂ ಅದು ವೈಚಾರಿಕವೇ ಎಂಬ ಪ್ರಶ್ನೆಯಾಗಿ ಒಗಟಾಗಿಯೇ ಉಳಿದಿದೆ. ಬದುಕಿಗೆ ಸಂಬಂಧಿಸಿದ ಮೂಲಭೂತ ಸಮಸ್ಯೆಗಳ ವಿಶ್ಲೇಷಣೆ ಮತ್ತು ಅನ್ವೇಷಣೆ ಅವರಿಗೆ ಬಾಲ್ಯದಿಂದಲೇ ಬಂದದ್ದು ಹೇಗೆ ಎಂಬುದು ಇಂದಿಗೂ ನಮಗೆ ಪ್ರಶ್ನೆಯಾಗಿಯೇ ಇದೆ. ಈ ಇಳಿವಯಸ್ಸಿನಲ್ಲಿಯೂ ಅದು ಹಾಗೆಯೇ ಉಳಿದಿರುವುದಂತೂ ಮತ್ತಷ್ಟು ಅಚ್ಚರಿಯನ್ನುಂಟು ಮಾಡುತ್ತಿದೆ. ಹಾವಿನೊಂದಿಗೆ ಮತ್ತು ಅಪಾಯಗಳೊಂದಿಗೆ ಸರಸವಾಡುವುದು ಇಂದಿಗೂ ಅವರಿಗೆ ಸಲೀಸು.

ಇತ್ತೀಚೆಗೆ 1990-91 ರಲ್ಲಿ ಕಡಬದ ಕದೆಕೋಡಿ ಬಳಿ ನಡೆದ ಪವಾಡದ ಬಗ್ಗೆ ಒಂದೆರಡು ಮಾತು. ಮಲ್ಲೇಶ ಎಂಬ ಹುಡುಗ ಇದ್ದಕ್ಕಿದ್ದ ಹಾಗೆ ಪವಾಡ ಪುರುಷನಾದ. ಕಡಬ ದಿಢೀರನೆ ಪ್ರಸಿದ್ಧವಾಯಿತು. ದಿನಕ್ಕೆ ಸುಮಾರು ಐದಾರು ಸಾವಿರ ಜನರು ಸೇರುತ್ತಿದ್ದರು. ತನ್ನದು ದುಡ್ಡು ಕಾಸಿಲ್ಲದೆ, ಔಷದಿ, ಪೌಷದಿ ಇಲ್ಲದ ಮಾನವನ ಆಸ್ಪತ್ರೆ ಎಂದು ಕರೆದನು. ಕಡಬ ಒಂದು ವ್ಯಾಪಾರ ಕೇಂದ್ರವಾಯ್ತು. ಜೊತೆ ಎತ್ತುಗಳು ಕಲ್ಲುಕರಗುವ ಸಮಯದಲ್ಲಿ ನಡುರಾತ್ರಿ ಕೆರೆಯ ನೀರಿನ ಮೇಲೆ ನಡೆಯುತ್ತವೆ, ಒಂಭತ್ತು ವರ್ಷದ ಹುಡುಗಿ ಗರ್ಭಿಣಿಯಾಗಿದ್ದಾಳೆ ಎಂಬ ಸುದ್ದಿ ಹರಡಿತು. ಮಲ್ಲೇಶಿಯ ದಾಯಾದಿ

ಮನೆಗಳಲ್ಲಿಯೇ ಆಂಜನೇಯ ಮತ್ತು ವೆಂಕಟೇಶ ದೇವರುಗಳು ಮೈಮೇಲೆ ಬಂದು ಜಗಳವಾಡುತ್ತಿದ್ದವು. ಮಲ್ಲೇಶಿ ಸತ್ತ ಕುರಿ ಬದುಕಿಸಿದನಂತೆ. ಸತ್ತವರನ್ನು ಬದುಕಿಸುತ್ತೇನೆಂದು ಸಾರಿ ಬಿಟ್ಟ. ಹೀಗಾಗಿ ಜನಗಳ ಜಾತ್ರೆಯೇ ಜಾತ್ರೆ. ಹತ್ತಾರು ಕಾಯಿಲೆ ಮಂದಿ, ಕುರುಡರು, ಕುಂಟರು, ಮುದುಕರು, ಮೋಟರು ಆಸೆಯಿಂದ ಬಂದರು. ಆಣಿ ಕಾಲಿನವರಿಗೆ ಬೇಗ ಗುಣಕಾಣಿಸುತ್ತಿತ್ತು. ಕರಲು ಮಣ್ಣಿನಲ್ಲಿ ಒಂದು ಫರ್ಲಾಂಗ್ ಓಡಿಸುತ್ತಿದ್ದ. ಅವರಿಗೆ ಹಾಯ್ ಎನಿಸುತ್ತಿತ್ತು. ಅವರು ಚಪ್ಪಲಿ ಎಸೆದು ಬರಿಗಾಲಿನಲ್ಲಿ ಕುಣಿಯುತ್ತ ಹೋಗುತ್ತಿದ್ದರು. ಹತ್ತಾರು ಲಾರಿ ಚಪ್ಪಲಿ ರಾಶಿ ಬೆಟ್ಟದಂತೆ ಬೆಳೆಯಿತು. ಮಲ್ಲೇಶಿಯದು ನೀರು ನೆರಳಿಲ್ಲದ, ಹಣ್ಣುಕಾಯಿ ಇಲ್ಲದ ಜಾತ್ರೆ. ಅಲ್ಲಿ ಜನ ಮರುಳೋ ಜಾತ್ರೆ ಮರುಳೋ! ನಾಗರಾಜಪ್ಪನವರನ್ನು ಅವರ ಸ್ನೇಹಿತರು ಬಲವಂತವಾಗಿ ಕರೆದುಕೊಂಡು ಹೋದರು. ಎರಡು ದಿವಸ ಅಲ್ಲಿಯೇ ಇದ್ದು ಆಸಕ್ತಿಯಿಂದ ಎಲ್ಲ ವಿಷಯಗಳನ್ನು ಸಂಗ್ರಹಿಸಿದರು. ವಿಶ್ಲೇಷಿಸಿದರು. ಮಲ್ಲೇಶಿಯ ತಂದೆಗೆ ಇಷ್ಟರಲ್ಲಿಯೇ ಮಗನನ್ನು ಕಳೆದು ಕೊಳ್ಳುತ್ತೀಯ ಎಂದು ಹೇಳಿದರು. ಅವನು ನಕ್ಕುಬಿಟ್ಟ. ಮಗ ದೊಡ್ಡ ಪವಾಡ ಪುರುಷ ಎಂದೇ ನಂಬಿದನು. ಆದರೆ ಸ್ವಲ್ಪ ದಿನಗಳಲ್ಲೇ ಕಡಬದ ಕೆರೆಯಲ್ಲಿ ರೋಗ ವಾಸಿಗಾಗಿ ಬಂದು ನೋವನ್ನು ತಡೆಯದೆ ನೀರಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡವರ ಹತ್ತಾರು ಹೆಣಗಳು ತೇಲಿದವು. ಮರ್ಡರ್ ಕೇಸಿನಲ್ಲಿ ಮಲ್ಲೇಶಿ ದಸ್ತಗಿರಿಯಾದ. ಇತ್ತೀಚೆಗೆ ಸತ್ತೂ ಹೋದನು. ನಾಗರಾಜಪ್ಪನವರು ಇಂತಹ ನೂರಾರು ಪವಾಡಗಳ ಗುಟ್ಟನ್ನು ಬಯಲಿಗೆಳೆಯುವುದರಲ್ಲಿ ನಿಸ್ಸೀಮರು. ಮಲ್ಲೇಶಿ ನಾಗರಾಜಪ್ಪನವರ ಅನ್ವೇಷಣೆಗೆ ಸಂಪೂರ್ಣ ಸಹಕರಿಸಿದನು. ಅವನೊಂದಿಗೆ ನಡೆಸಿದ ಸಂಭಾಷಣೆಯ ಕ್ಯಾಸೆಟ್‌ನ್ನು ನಾನೂ ಕೇಳಿದ್ದೇನೆ. ಮಲ್ಲೇಶಿ ಒಬ್ಬ ಮನೋರೋಗಿ! ಪವಾಡ ಪುರುಷನಾಗಿ ಮೆರೆದ!

ತಮ್ಮ ಮೇಲೆ ಮಮತೆ ಇರಿಸಿಕೊಂಡಿದ್ದ ಇವರ ಅಜ್ಜಿ ಮತ್ತು ತಾಯಿಯವರು ತಮ್ಮ ಕಡು ಬಡತನದಲ್ಲಿಯೂ ತಮ್ಮ ವಂಶದ ಒಂದೇ ಕುಡಿಯಾಗಿರುವ ನಾಗರಾಜಪ್ಪನವರನ್ನು ಹೇಗಾದರೂ ಮಾಡಿ ವಿದ್ಯಾವಂತರನ್ನಾಗಿ ಮಾಡಿಸುವ ಹಂಬಲ ಇಟ್ಟುಕೊಂಡಿದ್ದಲ್ಲದೆ ತಮ್ಮ ಶಕ್ತಿ ಮೀರಿ ಒತ್ತಾಸೆಯಾದರು. ಇವರ ಈ ಹಂಬಲದ ಜೊತೆಗೆ ಶ್ರೀಯುತರು ಸ್ವಪ್ರಯತ್ನದಿಂದ ಗುರಿ ಸಾಧಿಸುವಲ್ಲಿ ಸಫಲರಾದರು. ಸೀನಿಯರ್ ಇಂಟರ್ ಮೀಡಿಯೇಟ್ ವರೆವಿಗೂ ಸಿದ್ಧಗಂಗಾ ಮಠದಲ್ಲಿಯೂ, ಮುಂದೆ ಬಿ.ಎ, ಎಂ.ಎ.ಪರೀಕ್ಷೆಗಳಿಗಾಗಿ ಮೈಸೂರಿನಲ್ಲಿ ರೂಮುಮಾಡಿಕೊಂಡು, ಅನೇಕ ಕಷ್ಟಕೋಟಲೆಗಳ ನಡುವೆ ಒಬ್ಬರಲ್ಲಿ ಕೈಚಾಚದೆ ಸ್ವಾಭಿಮಾನದಿಂದ ಓದಿ ಗುರಿ ಮುಟ್ಟಿದರು.ಅವಿರತ ಸಾಹಿತ್ಯಾಭ್ಯಾಸದ ಫಲವಾಗಿ, ಅವರ ವಿದ್ಯಾರ್ಥಿ ಜೀವನ ಮುಗಿದ ಒಂದು ವರ್ಷದೊಳಗೆ ನಾಗರಾಜಪ್ಪನವರು ಸಾಹಿತ್ಯ ಕ್ಷೇತ್ರದಲ್ಲಿ ಒಂದು ಮೈಲಿಗಲ್ಲನ್ನು ಸ್ಥಾಪಿಸಿದರು. 'ದೊಡ್ಡ ಸಂಕಣ್ಣನಾಯಕ' ಎಂಬ ಐತಿಹಾಸಿಕ ಕಾದಂಬರಿಯನ್ನು ರಚಿಸಿ ತಮ್ಮ ಪ್ರಥಮ ಪ್ರಯತ್ನಕ್ಕೇ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಗಳಿಸಿದರು. ಅಲ್ಲಿಂದ ಮುಂದೆ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡುತ್ತಾ, ಕನ್ನಡ ಸಾಹಿತ್ಯ ಕ್ಷೇತ್ರದ ಎಲ್ಲ ದಿಗ್ಗಜರ ಸ್ನೇಹ ಪ್ರೀತಿ ಒಡನಾಟ ಸಂಪಾದಿಸಿದರು. ಸಾಹಿತಿಯಾಗಿ ಗುರುತಿಸಿಕೊಂಡರು. ಹೆಸರಾಂತ ಸಾಹಿತಿಗಳಾದ

ಡಾ|| ಜಿ.ಎಸ್. ಶಿವರುದ್ರಪ್ಪನವರ ಕುಟುಂಬದಲ್ಲಿ ಇವರೂ ಒಬ್ಬ ಸದಸ್ಯರು. ಹೀಗೆ ಅವರ ಕುಟುಂಬದಲ್ಲಿ ಸೋದರರಂತೆ ಬೆರೆತಿದ್ದಾರೆ.

ವೀರಶೈವ ಸಮಾಜದ ಸಂಪ್ರದಾಯಗಳ ಬಗ್ಗೆ ಆಳವಾಗಿ ಅಭ್ಯಸಿಸಿ ಅದರ ಒಳಕೋರೆಗಳನ್ನು ನಿರ್ಭೀತಿಯಿಂದ ವಿಮರ್ಶಿಸಿ ರಚಿಸಿದ "ಮರುಚಿಂತನೆ" ಗ್ರಂಥ ವೀರಶೈವ ಸಮಾಜದಲ್ಲಿ ಕ್ರಾಂತಿಯನ್ನುಂಟುಮಾಡಿತು. ಇಡೀ ಸಮುದ್ರವನ್ನೇ ಎದುರು ಹಾಕಿಕೊಂಡು ನೂರಾರು ಅವಹೇಳನ ಅಪನಿಂದೆಗಳಿಗೊಳಗಾಗಿ ಕೊಲೆ ಬೆದರಿಕೆಗೂ ಜಗ್ಗದೆ, ತಮ್ಮ ಅಚಲ ನಿಲುವಿನಿಂದ ಗೆದ್ದು ಹೊರಬಂದರು. ಆ ಗ್ರಂಥದಿಂದೀಚೆಗೆ ಅವರ ಬರವಣಿಗೆಯು ಇನ್ನೂ ಹರಿತಗೊಂಡಿತು. ಕಟು ಸತ್ಯದ ವಾಸ್ತವಾಂಶಗಳ, ಉನ್ನತ ಮಟ್ಟದ ವಿಚಾರಮಂಥನ ಹಾಗೂ ಅನುಭವದ ಮೂಸೆಯಿಂದ ಹೊರಬರುತ್ತಿರುವ ಲೇಖನಗಳು ಮತ್ತು ಅನೇಕ ಸಾಹಿತ್ಯ ಸಮ್ಮೇಳನಗಳಲ್ಲಿ ಮಂಡಿಸಿದ ಇವರ ವಿಚಾರ ಪ್ರಚೋದಕ ಪ್ರಬಂಧಗಳು ಅಪಾರ ಜನ ಮೆಚ್ಚುಗೆ ಗಳಿಸಿದವು.

ಇವರ ವೈಚಾರಿಕ ವಿದ್ವತ್ತಿನ ಪ್ರಯೋಜನಗಳನ್ನು ಸಭೆ ಸಮಾರಂಭಗಳಲ್ಲಿ ವಿಚಾರ ಸಂಕಿರಣಗಳನ್ನೇರ್ಪಡಿಸುವುದರ ಮೂಲಕ ನಾಡಿನ ಉದ್ದಗಲದ ಜ್ಞಾನದಾಹಿಗಳು ಪಡೆಯುತ್ತಿದ್ದಾರೆ. ಇವರ ಇತ್ತೀಚಿನ ಇನ್ನೊಂದು ಕೃತಿ 'ದೇವಾಂಗ ಸಂಸ್ಕೃತಿ' ದೇವಾಂಗ ಸಮಾಜಕ್ಕೆ ಬೆಳಕು ಚೆಲ್ಲುವ ಅತ್ಯುತ್ತಮ ಕೃತಿ. ಇದಕ್ಕೆ ಇನ್ನೂ ಸೇರ್ಪಡೆಯಾಗಲಿರುವ ಹೊಸ ಹೊಸ ವಿಷಯಗಳ ಸಂಗ್ರಹಕ್ಕೆ ಎಲ್ಲ ಕಡೆಯೂ ಹೋಗಿ ವಿಷಯ ಸಂಗ್ರಹಣೆಯಲ್ಲಿ ತೊಡಗಿದ್ದಾರೆ. 'ದೇವರದಾಸಿಮಯ್ಯ' ಇವರ ಬಹು ಕಾಲದ ಹಂಬಲದ ಕೃತಿ ಬಹು ಬೇಗ ಹೊರಬರಲಿದೆ.

'ದೊಡ್ಡಸಂಕಣ್ಣ ನಾಯಕ' ಗ್ರಂಥಕ್ಕೆ ಸಾಹಿತ್ಯ ಪುರಸ್ಕಾರ ದೊರೆತದ್ದು ನಮಗೆಲ್ಲರಿಗೂ ತುಂಬಾ ಹೆಮ್ಮೆ ತಂದಿತ್ತು. ಶ್ರೀಯುತರಿಗೆ ನಮ್ಮ ಊರಿನಲ್ಲಿ ಒಂದು ಸನ್ಮಾನ ಸಮಾರಂಭವನ್ನು ಹಮ್ಮಿಕೊಂಡು ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಮಾರಂಭವನ್ನೇರ್ಪಡಿಸಿದೆವು. ಈ ಸಮಾರಂಭಕ್ಕೆ ತುಮಕೂರಿನ ಹೆಸರಾಂತ ಧರ್ಮ ಪ್ರಕಾಶಕ ದಿವಂಗತ ಶ್ರೀ ಜಿ.ಎಂ. ಸಿದ್ಧರಾಮಣ್ಣ ಇವರು ಸಹ ಆಗಮಿಸಿದ್ದರು. ಶ್ರೀ ನಾಗರಾಜಪ್ಪನವರ ಮೇಲೆ ಸಿದ್ಧರಾಮಣ್ಣನವರಿಗೆ ಅಪಾರ ಗೌರವ. ಅವರು ಎರಡು ದೊಡ್ಡ ಬುಟ್ಟಿಗಳಲ್ಲಿ ಕನಕಾಂಬರ ಹೂಗಳನ್ನು ನಾಗರಾಜಪ್ಪನವರ ಮೇಲೆ ಹೂಮಳೆ ಸುರಿಸಿ ಅವರೂ ಸಹ ಶಾಲು ಹೊದಿಸಿ ಸನ್ಮಾನಿಸಿದರು! ಇಷ್ಟೊಂದು ಅಭಿಮಾನ ಪಡೆದ ನಾಗರಾಜಪ್ಪನವರು ಧನ್ಯರು. ಶಿವಕುಮಾರ ಸ್ವಾಮಿಗಳು ನಾಗರಾಜಪ್ಪನವರ ಶ್ರದ್ಧೆ, ಶಿಸ್ತು ಮತ್ತು ವಿದ್ವತ್ತಿನ ಬಗ್ಗೆ ಬಹಳ ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಶ್ರೀ ಶಾರದಾದೇವಿಯವರು ಇವರಿಗೆ ಆ ದಿನಗಳಿಂದ ಆರಾಧ್ಯ, ಆದರ್ಶ ದೈವಗಳು. ಅವರ ಆದರ್ಶಗಳನ್ನೇ ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಬಹಳ ಶಿಸ್ತಿನ ಜೀವನ ನಡೆಸುತ್ತಿದ್ದರು. ಬೆಳಗಿನ

ನಾಲ್ಕು ಗಂಟೆಗೆ ಎದ್ದು ಯೋಗಾಸನ, ಪ್ರಾಣಾಯಾಮಗಳನ್ನು ಕಟ್ಟುನಿಟ್ಟಾಗಿ ಅಭ್ಯಾಸ ಮಾಡುತ್ತಿದ್ದರು. ತಣ್ಣೀರಿನ ಸ್ನಾನಾನಂತರ ಸುಮಾರು ಒಂದು ಒಂದೂವರೆ ತಾಸು ಧ್ಯಾನಕ್ಕೆ ಕುಳಿತು ಕೊಳ್ಳುತ್ತಿದ್ದರು. ಬೇಸಿಗೆ ರಜಾ ದಿನಗಳಲ್ಲಿ ಒಂದೆರಡು ತಿಂಗಳು ಅವರು ಊರಿನಲ್ಲಿ ತಂಗಿದ್ದಾಗ್ಯ, ಅವರಿಗೆ ನಾವು ಪ್ರತ್ಯೇಕ ವ್ಯವಸ್ಥೆ ಮಾಡಿ ಕೊಡುತ್ತಿದ್ದೆವು. ಅಂದೂ ಅಷ್ಟೆ ಈಗಲೂ ಅಷ್ಟೆ ಅವರಿಗೆ ನಮ್ಮ ಊರಿನಲ್ಲಿ ಯಾರಿಗೂ ದೊರೆಯದ ಗೌರವ ಮರ್ಯಾದೆಗಳು ದೊರೆಯುತ್ತಿವೆ. ತಮ್ಮ ಮುವ್ವತ್ತನೆ ವರ್ಷದಲ್ಲಿ ಗೃಹಸ್ಥಾಶ್ರಮಕ್ಕೆ ಕಾಲಿಡುವವರೆವಿಗೂ ಒಂದು ರೀತಿಯ ಸನ್ಯಾಸ ಜೀವನವನ್ನೇ ಮಾಡಿದರು. ಸರ್ವ ಸಂಗ ಪರಿತ್ಯಾಗಿಗಳಾಗಿದ್ದು, ಕಷ್ಟ ಸಾಧನೆಯಿಂದ ವಿಶ್ವಪರ್ಯಟನೆ ಮಾಡುತ್ತಾ ಇರುವ ಸನ್ಯಾಸಿಗಳನ್ನು ಇವರು ಭೇಟಿ ಮಾಡುತ್ತಿದ್ದು, ಆಮೂಲಾಗ್ರವಾಗಿ ವಿಚಾರ ಮಂಥನ ಮಾಡಿ ತಮಗೆ ಮೆಚ್ಚಿಗೆಯಾದಲ್ಲಿ ಅವರಿಗೆ ಮನ್ನಣೆ ಕೊಟ್ಟು ಪ್ರೀತಿ ಗೌರವಗಳೊಡನೆ ತಮ್ಮ ರೂಮಿಗೆ ಕರೆದುಕೊಂಡು ಹೋಗಿ ಅವರಿಗೆ ಇಷ್ಟವಾದ ತಿಂಡಿ ತೀರ್ಥಗಳನ್ನು ತಮ್ಮ ಕೈಯ್ಯಾರೆ ತಯಾರಿಸಿ ಉಣಬಡಿಸಿ ಅವರನ್ನು ತೃಪ್ತಿ ಪಡಿಸುತ್ತಿದ್ದರು. ನಾಗರಾಜಪ್ಪನವರು ಪ್ರೌಢಶಾಲೆಯ ಉಪಾಧ್ಯಾಯರಾಗಿ ಕೃಷ್ಣರಾಜಸಾಗರದಲ್ಲಿದ್ದಾಗ ಒಮ್ಮೆ ನಾನು ಹೋದಾಗ ಸ್ವತಃ ನೋಡಿದ ಅನುಭವ ಇದು.

ನಾನು ಮತ್ತು ನಾಗರಾಜಪ್ಪನವರು ಸಾಮಾನ್ಯವಾಗಿ ಇಬ್ಬರೇ ನಮ್ಮ ಊರಿನಲ್ಲಿ ಭೇಟಿಯಾಗುತ್ತಿದ್ದುದುಂಟು. ಅವರು ಇನ್ನೂ ವಿದ್ಯಾರ್ಥಿಯಾಗಿದ್ದಾಗಲೇ ನಾನು ಸರ್ಕಾರಿ ಸೇವೆಯಲ್ಲಿದ್ದೆ. ನನ್ನ ಕಾರ್ಯಕ್ಷೇತ್ರ ಸಮೀಪವಿದ್ದುದರಿಂದ ಊರಿನಲ್ಲಿಯೇ ಸಾಯಂಕಾಲದ ನಂತರ ಸೇರುತ್ತಿದ್ದೆ. ಮೈಸೂರಿನಿಂದ ಅವರು ತಿಂಗಳಿಗೊಮ್ಮೆಯಾದರೂ ಊರಿಗೆ ಬರುತ್ತಿದ್ದರು. ಊರಿಗೆ ರಾತ್ರಿ ಎಷ್ಟು ಹೊತ್ತಿಗೆ ಬಂದರೂ ಮೊದಲು ನಮ್ಮ ಮನೆಗೆ ಬರಬೇಕು. ಮಾತನಾಡಿಸಬೇಕು, ನಂತರ ನಾನು ಅವರ ಮನೆಗೆ ಹೋಗಿ ಅವರ ತಾಯಿ ಕೊಡುತ್ತಿದ್ದ ತಿಂಡಿ ತಿನಿಸುಗಳನ್ನು ತಿನ್ನಬೇಕು, ಆಗಲೇ ಅವರಿಗೆ ಸಮಾಧಾನ. ಎಷ್ಟೋ ದಿನಗಳು ಸರಿರಾತ್ರಿಯಲ್ಲಿ ಊರ ಮುಂದಿನ ಆಂಜನೇಯನ ಗುಡಿ, ಶ್ರೀ ರುದ್ರಮುನಿ ಸ್ವಾಮಿಗುಡಿ ಇವುಗಳ ಮುಂಭಾಗದ ಕಟ್ಟೆ ಮೇಲೆ ಕುಳಿತು ಮಾತನಾಡುತ್ತಾ, ಸಂತೆ ಬೀದಿಯಿಂದ ಕೆರೆ ಏರಿ ಸೇರಿ, ಒಂದೂವರೆ ಕಿ.ಮಿ. ದೂರದ ಕೆರೆ ಏರಿಯ ಕೊನೆಯವರೆವಿಗೂ, ಕಾಲದ ಪರಿವೆ ಇಲ್ಲದೆ, ದೆವ್ವಗಳ ಭೀತಿ ಇಲ್ಲದೆ ಮಾತನಾಡುತ್ತಾ ನಡೆದುಕೊಂಡು ಹೋಗುತ್ತಾ ಬೆಳಗಿನಜಾವದವರೆವಿಗೂ ಕಳೆದದ್ದುಂಟು. ಈ ಮಧ್ಯೆ ಬೆಳದಿಂಗಳ ಬೆಳಕು ಏರಿಯ ಹಿಂದೆ ಬೆಳೆದ ಪೈರು ಪಚ್ಚೆಗಳ ಮೇಲೆ ಚೆಲ್ಲಿ, ಅಲ್ಲಿಂದ ಬರುವ ಆಹ್ಲಾದಕರ ತಂಗಾಳಿಯನ್ನು ಆಸ್ವಾದಿಸುತ್ತಾ ಆ ವೇಳೆಯಲ್ಲಿ ಯಾವ ಪರಿವೆ ಇಲ್ಲದೆ, ನಮ್ಮನ್ನು ನಾವೇ ಮರೆತು ಯಾವುದೋ ಗಂಧರ್ವ ಲೋಕದಲ್ಲಿದ್ದಂತಹ ಅನುಭವ ನಮಗಾಗುತ್ತಿತ್ತು. ನನ್ನ ಅವರ ಬಾಂಧವ್ಯ ಸೋದರ ವಾತ್ಸಲ್ಯಕ್ಕೆ ಮೀರಿದ್ದು, ಒಳ್ಳೆಯ ಸ್ನೇಹಾಭಿಲಾಷಿ.

ಶ್ರೀ ಸಿದ್ಧಗಂಗಾ ಸ್ವಾಮೀಜಿಯವರು ನಾಗರಾಜಪ್ಪನವರಿಗೆ ತೋರಿದ ಪ್ರೀತಿ

ಆಶೀರ್ವಾದಗಳ ಫಲವಾಗಿ ಇವರನ್ನು ತಮ್ಮ ತುಮಕೂರಿನ ಶ್ರೀ ಸಿದ್ಧಗಂಗ ಕಾಲೇಜಿಗೆ ಕನ್ನಡ ಪ್ರಾಧ್ಯಾಪಕರನ್ನಾಗಿ ತೆಗೆದುಕೊಂಡರು. ಈ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ರೀಡರ್ ಆಗಿ ಪ್ರಾಂಶುಪಾಲರಾಗಿ ಮತ್ತೆ ಪ್ರೊಫೆಸರ್ ಹುದ್ದೆಗೇರಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಆ ಕಾಲೇಜಿನಲ್ಲಿ ದುಡಿದು ಈಗ ವಿಶ್ರಾಂತಿ ಜೀವನವನ್ನು ನಡೆಸುತ್ತಿದ್ದಾರೆ. ನಿವೃತ್ತಿ ಹೊಂದಿದ್ದರೂ ಸಹ ಒಂದು ನಿಮಿಷದಷ್ಟು ಕಾಲವನ್ನು ವ್ಯಥಾ ಕಳೆಯುವವರಲ್ಲ. ಅಧ್ಯಯನವೇ ತಮ್ಮ ಉಸಿರಾಗಿಸಿಕೊಂಡಿದ್ದಾರೆ. ಇವರ ಅನುಭವ ಜ್ಞಾನವನ್ನು ಚನ್ನಪಟ್ಟಣದ ಕೆಂಗಲ್ ಬಳಿ ಇರುವ ಕುವೆಂಪು ವಿದ್ಯಾಲಯ ಸಂಸ್ಥೆಯವರು ಪಡೆದು ಕೊಳ್ಳುತ್ತಿದ್ದಾರೆ. ಇವರಿಗೆ ಇಷ್ಟವಿಲ್ಲದಿದ್ದರೂ ಬಲವಂತದಿಂದ ಆ ಸಂಸ್ಥೆಯಲ್ಲಿ ನಿರ್ದೇಶಕರಾಗಿ, ಗೌರವ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಹೀಗೆ ನಾಗರಾಜಪ್ಪನವರು ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ, ವಿದ್ಯೆಯ ಗಂಧವೂ ಇಲ್ಲದ, ಅದಕ್ಕೆ ಪ್ರೋತ್ಸಾಹವೂ ಇಲ್ಲದ ಪರಿಸರದ ಮಧ್ಯೆ ಕೆಸರಿನ ಕಮಲವಾಗಿ ಹೊಮ್ಮಿ ತಮ್ಮ ಹಠಸಾಧನೆಯಿಂದ ಕಷ್ಟ ಅನುಭವಿಸಿ ಧ್ಯೇಯೋದ್ದೇಶವನ್ನು ಸಾಧಿಸಿದ ಧೀರರು. ಪ್ರಸ್ತುತ ಸಾಹಿತ್ಯ ಕ್ಷೇತ್ರವನ್ನೇ ತಮ್ಮ ವೃತ್ತಿಯನ್ನಾಗಿಸಿ ಕೊಂಡು, ತಮ್ಮ ಸಾಮಾಜಿಕ ಜೀವನದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಂಡು, ಪರಿಶುದ್ಧ ಹಸ್ತರಾಗಿ, ತತ್ವಕ್ಕಾಗಿ ತಮ್ಮ ಪ್ರಾಣವನ್ನು ಬೇಕಾದರೂ ಎರವು ಮಾಡಿಕೊಳ್ಳತಕ್ಕ ಯೋಧರು. ಇಂದಿನ ಭ್ರಷ್ಟಾಚಾರ, ಸ್ವಾರ್ಥ ತುಂಬಿದ ಬರೀ ಬೂಟಾಟಿಕೆಯ ಸಮಾಜದಲ್ಲಿ ಈಗಲೂ ಅವರು ಖಂಡಿತ ವಾದಿಗಳು. ◆

" ಉತ್ಪಾದನೆಯ ದುಡಿಮೆಗಾರರು ಮತ್ತು ದೇಶ ರಕ್ಷಣೆಯ ಸೈನಿಕರಾದ ಶೂದ್ರವರ್ಗ, ಉಚ್ಚವರ್ಗದವರ ಭೋಗ ಜೀವನಕ್ಕೆ ಬಂಡವಾಳವಾಗಿದ್ದರು. ಅಂಥ ಶೂದ್ರರು ತಾಂತ್ರಿಕ ಮತಕ್ಕೆ ಒಲಿದದ್ದು ಉಚ್ಚವರ್ಗದವರ ಅಸ್ತಿತ್ವಕ್ಕೇ ಕೊಡಲಿ ಪೆಟ್ಟು ಕೊಟ್ಟಂತಾಯಿತು. ಹೆಚ್ಚು ಸಂಪತ್ತು ಮತ್ತು ಪುರೋಹಿತರನ್ನು ಬಳಸದ ತಾಂತ್ರಿಕ ಪೂಜೆ ಶೂದ್ರರ ಸಂಘಟನೆಗೆ ಸಾಧನೆಯಾಗುವ ಸಂಭವ ಹೆಚ್ಚಿ, ಲೌಕಿಗ ಮಾನ್ಯ ವ್ಯವಸ್ಥೆ ಬುಡ ಮೇಲಾಗುವ ಭಯ ಉಚ್ಚವರ್ಗವನ್ನು ಮೆಟ್ಟಿತು"

-ಪ್ರೊ|| ಕೆ.ಜಿ.ನಾಗರಾಜಪ್ಪ

10. ಮರುಚಿಂತನೆಯ ಹರಿಕಾರ

ಉಪಲೀಕನಹಳ್ಳಿ ಬಿ. ರಾಜಣ್ಣ

ಹನ್ನೆರಡನೇ ಶತಮಾನ ಸಾಮಾಜಿಕ ಕ್ರಾಂತಿಯ ಅಲೆಯ ತರಂಗಗಳನ್ನು ಎಬ್ಬಿಸಿದ ಕಾಲ. ತಮ್ಮನ್ನು ಸೇರಿಸಿಕೊಂಡಂತೆ ಸಾಮಾಜಿಕ ವ್ಯವಸ್ಥೆಯನ್ನು ಕಟು ವಿಮರ್ಶೆಗೆ ಒಳಪಡಿಸಿದ್ದನ್ನು ವಚನಕಾರರಲ್ಲಿ ಕಾಣುತ್ತೇವೆ. ಬಸವಣ್ಣ ವಚನ ಚಳುವಳಿಯ ಹಾಗೂ ಸಾಮಾಜಿಕ ಆಂದೋಲನದ ಪ್ರಮುಖ ವ್ಯಕ್ತಿ. ಇಂತಹ ಬಸವಣ್ಣ ಹೊಗಳಿಕೆಗೆ ಎಂದೂ ಕಿವಿಗೊಟ್ಟವನಲ್ಲ. "ಹೊಗಳಿ ಹೊಗಳಿ ಎನ್ನ ಹೊನ್ನ ಶೂಲಕ್ಕೇರಿಸಿದರಯ್ಯಾ" ಎನ್ನುತ್ತಾನೆ. ಇದರಿಂದ ಅರಿವಾಗುವುದೇನೆಂದರೆ ಹೊಗಳಿಕೆ ಮಾನವನ ಬದುಕನ್ನ, ಅಸ್ತಿತ್ವವನ್ನು, ಅಸ್ತವ್ಯಸ್ತಗೊಳಿಸುತ್ತದೆ. ಮೌಲ್ಯರಹಿತ ಬದುಕಿಗೆ ಕಾರಣವಾಗುತ್ತದೆ. ಕೀರ್ತನಕಾರರೂ ಸಹ "ನಿಂದಕರಿರಬೇಕು ಈ ಜಗದೊಳಗೆ" ಎನ್ನುತ್ತಾರೆ. ವ್ಯಕ್ತಿಯ ಸಮಸ್ತ ಹಾಗೂ ಸಮಗ್ರ ಅಭಿವೃದ್ಧಿ ಆಗಬೇಕಾದರೆ ನಿಂದೆ ಅಥವಾ ತೆಗಳಿಕೆ ಮುಖ್ಯ ಎನ್ನುವುದನ್ನು ಮೇಲಿನ ಮಾತುಗಳು ಸ್ಪಷ್ಟಪಡಿಸುತ್ತವೆ. ಅಕ್ಕಮಹಾದೇವಿಯೂ ಸಹ "ಲೋಕದಲಿ ಹುಟ್ಟಿದ ಬಳಿಕ ಸ್ತುತಿ-ನಿಂದೆಗಳು ಬಂದರೆ ಮನದಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು" ಎನ್ನುತ್ತಾಳೆ. ಮೇಲಿನ ಈ ಮಾತುಗಳು ವ್ಯಕ್ತಿಯೊಬ್ಬನನ್ನು, ಇಡೀ ಸಮಾಜವನ್ನು ಸುವ್ಯವಸ್ಥಿತ ದಾರಿಯಲ್ಲಿ ನಡೆಸಲು ಕಾರಣೀಭೂತವಾಗುತ್ತವೆ ಎನ್ನುವ ಅಂಶವನ್ನು ಮನಗಾಣುತ್ತೇವೆ. ವಚನಕಾರರು ತಮ್ಮ ತತ್ವಗಳೊಂದಿಗೆ ತಮ್ಮನ್ನು ಆತ್ಮ ಪರೀಕ್ಷೆಗೆ ಒಳಪಡಿಸಿಕೊಂಡೇ ಬದುಕಿದವರು.

ಈ ಮಾತುಗಳೊಂದಿಗೆ ಪ್ರೊ॥ ಕೆ.ಜಿ.ಎನ್. ರವರ ವ್ಯಕ್ತಿತ್ವವನ್ನು ಅವಲೋಕಿಸಿ ನೋಡಿದಾಗ ಸತ್ಯಾಸತ್ಯತೆಯ ಅರಿವಾಗುತ್ತದೆ. ಇಂದಿನ ಸಾಹಿತ್ಯಕ ಹಾಗೂ ರಾಜಕೀಯ ಸಂದರ್ಭದಲ್ಲಿ ಗುಂಪುಗಾರಿಕೆ, ಅತೃಪ್ತಿ, ಅಸಮಾನತೆಗಳು ತಾಂಡವವಾಡುತ್ತಿವೆ. ಯಾರದೇ ಮುಲಾಜಿಗೂ ಬಗ್ಗದೆ, ಬೆದರಿಕೆಗಳಿಗೆ ಜಗ್ಗದೆ, ತಿರಸ್ಕರಿಸಿದ್ದಾರೆಂದು ಕುಗ್ಗದೆ ನಿರಂತರವಾಗಿ ಸಾಹಿತ್ಯ ಕೃಷಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ತಮಗೆ ತೋಚಿದ ಸತ್ಯವನ್ನು, ತಮ್ಮ ಚಿಂತನೆಯ ಮೂಸೆಯಲ್ಲಿ ಹೊಳೆದದ್ದನ್ನು, ದಿಟ್ಟವಾಗಿ ಹಾಗೂ ಸ್ಪಷ್ಟವಾಗಿ ಹೇಳುವ, ಪ್ರಕಟಪಡಿಸುವ ವ್ಯಕ್ತಿತ್ವದವರು.

ಪ್ರೊ॥ ಕೆ.ಜಿ.ಎನ್. ರವರ ಕ್ಷೇತ್ರ ಪ್ರಮುಖವಾಗಿ ವಿಮರ್ಶಾ ವಲಯಕ್ಕೆ ಸಂಬಂಧಿಸಿದುದಾಗಿದೆ. ಒಂದು ಕೃತಿಯನ್ನು ವಿಮರ್ಶಾ ಮಾನದಂಡಕ್ಕೆ ಒಳಪಡಿಸಿದಾಗ ಕೃತಿಯಲ್ಲಿ ಅಂತಃಸತ್ವವನ್ನು ಹೊರಗೆಳೆಯಲು ಸಾಧ್ಯವಾಗುತ್ತದೆ. ಇದರಿಂದ ಕೃತಿಗೆ ಮನ್ನಣೆ ಹಾಗೂ ಮಹತ್ವ ದೊರೆಯುತ್ತದೆ. ಮೊದಲಿಗೆ ವಿಮರ್ಶೆ ವಸ್ತು ನಿಷ್ಠತೆಯನ್ನು ಒಳಗೊಂಡಿರಬೇಕು. ವಸ್ತು ನಿಷ್ಠತೆಯನ್ನು ಮೂಲ ಮಾನದಂಡವಾಗಿ ಬಳಸಿಕೊಂಡು

ಕೃತಿಯ ವಿಮರ್ಶೆಗೆ ತೊಡಗಿದಾಗ ವಿಮರ್ಶೆಗೆ, ವಿಮರ್ಶಕನಿಗೆ ಮಹತ್ವ. ಇದರಿಂದ ಕೃತಿಯೊಂದರ ಗಟ್ಟಿ ನೆಲೆಯನ್ನು ಶ್ರೇಷ್ಠತೆಯನ್ನು ಹೊರ ಜಗತ್ತಿಗೆ ತೋರಿಸಿದಂತಾಗುತ್ತದೆ.

ವಿಮರ್ಶಕ ಜಾತಿವಾದಿಯಾದಾಗ, ಮತೀಯವಾದಿಯಾಗಿದ್ದಾಗ, ರಾಜಕಾರಣದ ಪ್ರಭಾವ, ಒತ್ತಡಗಳಿಗೆ ಮಣಿದು ಕೃತಿಯ ವಿಮರ್ಶೆಗೆ ತೊಡಗಿದಾಗ ವಸ್ತುನಿಷ್ಠತೆ ಹೊರಬರಲಾರದು. ಇದರಿಂದ ಕೃತಿಗೆ ಅಪಚಾರ ಎಸಗಿದಂತಾಗುತ್ತದೆ. ತನ್ನ ವ್ಯಕ್ತಿತ್ವಕ್ಕೆ ಮಸಿ ಬಳಿದುಕೊಂಡಂತಾಗುತ್ತದೆ.

ಆದರೆ ಇಂದಿನ ಸಾಹಿತ್ಯ ಸಂದರ್ಭದಲ್ಲಿ ಕಂಡು ಬರುತ್ತಿರುವ ಅಂಶಗಳು ಇಡೀ ಸಾಮಾಜಿಕ ಹಾಗೂ ಸಾಹಿತ್ಯಕ ವಲಯವನ್ನು ದಂಗುಬಡಿಸಿವೆ. ಇಲ್ಲಿ ವಸ್ತುವಿಗಿಂತ ಜಾತಿ, ಧರ್ಮ, ಮತ, ರಾಜಕಾರಣ ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ಇವೆಲ್ಲವನ್ನು ವಿಮರ್ಶಕರಾದವರು ಮೀರಿ ನಿಲ್ಲಬೇಕು. ಅಂತಹ ಸಂದರ್ಭದಲ್ಲಿ ವಿಮರ್ಶೆಗೆ ಮನ್ನಣೆ. ಈ ಮೀರಿ ನಿಲ್ಲುವ ಸಾಲಿಗೆ ಸೇರಿದವರು ಪ್ರೊ॥ ಕೆ.ಜಿ.ಎಸ್.ರವರು.

ನವೋದಯ ಸಾಹಿತ್ಯ ಬೆಳವಣಿಗೆಯ ಸಂದರ್ಭದಿಂದ ವಿಮರ್ಶಾ ಪಂಥ ಹುಟ್ಟಿಕೊಂಡರೂ ವಿಶೇಷವಾಗಿ ಮತ್ತು ಉತ್ಕೃಷ್ಟ ಪ್ರಮಾಣದಲ್ಲಿ ಗಣನೀಯ ಸಾಧನೆಯನ್ನು ಕಂಡುಕೊಂಡದ್ದು ಇಂದಿನ ಸಂದರ್ಭದಲ್ಲಿ. ಇಂದು ದಲಿತ-ಬಂಡಾಯ ಸಾಹಿತ್ಯ ತನ್ನದೇ ಆದ ವಿಶಿಷ್ಟವಾದ ಶೈಲಿಯನ್ನು ಪಡೆದುಕೊಂಡಿದೆ. ಶೋಷಣೆಗೆ ಗುರಿಯಾದ ವರ್ಗಗಳು ಪ್ರತಿಭಟನೆಯ ಹಾದಿಯನ್ನು ಹಿಡಿದಿವೆ. ಈ ನೆಲೆಯಲ್ಲಿ ತಮ್ಮ ಮೇಲಾದ ದೌರ್ಜನ್ಯ, ದಬ್ಬಾಳಿಕೆಯ ನೋವನ್ನು ದಾಖಲಿಸುತ್ತಾ ಬಂದಿವೆ. ಏಕಸ್ವಾಮ್ಯ ನಿರಂಕುಶಮತಿಗಳ ಹಿಡಿತವನ್ನು ತಪ್ಪಿಸಿಕೊಂಡಂತೆ ಕೆಳವರ್ಗದ ಧ್ವನಿಗಳು ಮಾತನಾಡುವ ಶಕ್ತಿಯನ್ನು ಪಡೆದುಕೊಂಡಿವೆ. ಪುರೋಹಿತ ಶಾಹಿ ವ್ಯವಸ್ಥೆಯ ಬಿಗಿ ಭದ್ರತೆಯಿಂದ ಹೊರಬಂದಾಗ ರೊಚ್ಚು, ಆವೇಶ, ಉತ್ಸಾಹಗಳು ಚಿಮ್ಮಿ ಚಿಲುಮೆಯಾಗಿ ಉಕ್ಕಿದ್ದನ್ನು ದಲಿತ-ಬಂಡಾಯ ಸಾಹಿತ್ಯದಲ್ಲಿ ಗಮನಿಸಬಹುದಾಗಿದೆ. ಪ್ರತಿಭಟನೆಯೊಂದಿಗೆ ಸಾಮಾಜಿಕ ಬದಲಾವಣೆಯನ್ನು ಪ್ರಮುಖ ಧೋರಣೆಯಾಗಿ ದಲಿತ-ಬಂಡಾಯ ಸಾಹಿತ್ಯ ಚಳುವಳಿ ರೂಪಿಸಿಕೊಂಡಿದೆ.

ಪ್ರೊ॥ ಕೆ.ಜಿ.ಎಸ್ ರವರ ವಿಮರ್ಶಾ ವಲಯವನ್ನು ಗಮನಿಸಿದಾಗ ಪ್ರತಿಭಟನೆಯ ಮೌಲ್ಯ ಎದ್ದು ಕಾಣುತ್ತದೆ. ವಿಮರ್ಶೆಯ ಸ್ವಜತೆಯನ್ನು ಕಾಪಾಡಿಕೊಳ್ಳುತ್ತಲೇ ನಿಷ್ಠುರವಾದಿ ವಿಮರ್ಶಕರೆನಿಸಿಕೊಂಡಿದ್ದಾರೆ. ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾ॥ ಯು.ಆರ್. ಅನಂತಮೂರ್ತಿಯವರು ಮರುಚಿಂತನೆಗೆ ಮುನ್ನುಡಿಯನ್ನು ಬರೆಯುತ್ತಾ ನಾಗರಾಜಪ್ಪನವರನ್ನು ಕುರಿತು ಈ ರೀತಿ ಪ್ರತಿಕ್ರಿಯಿಸುತ್ತಾರೆ. "ಹಿಂದಿನವರನ್ನು ಇಂದಿನವರೆಂದು ನಾವೆಂದುಕೊಳ್ಳುವಂತೆ ಪ್ರಸ್ತುತಗೊಳಿಸುವ ಲೇಖಕರ ಸಿಡಿಮಿಡಿ ಧಾಟಿಯೂ ವಿಮರ್ಶೆಗೆ ಹರಿತವನ್ನು ತಂದಿದೆ. ಕನ್ನಡದ ಧೀಮಂತ ವೈಚಾರಿಕ ಪರಂಪರೆಯನ್ನು ನಿರುದ್ವಿಗ್ನವಾಗಿ, ನಿರಪೇಕ್ಷವಾಗಿ ಬೆಳಸಿದ್ದಾರೆ" ಎನ್ನುವ ಮಾತುಗಳು

ನಾಗರಾಜಪ್ಪನವರ ವಿಮರ್ಶಾ ಮಾನದಂಡ ವ್ಯಕ್ತಿನಿಷ್ಠವಾದುದಲ್ಲ ವಸ್ತುನಿಷ್ಠವಾದುದು . ಮತನಿಷ್ಠವಲ್ಲ, ಸಮಾಜ ನಿಷ್ಠವಾದುದು ಎನ್ನುವುದನ್ನು ಎತ್ತಿ ತೋರಿಸುತ್ತದೆ.

ಪ್ರೊ.॥ ಕೆ.ಜಿ.ಎನ್ ರವರನ್ನು ಬಂಡಾಯ ಪಂಥದೊಳಗೆ ಸೇರಿಸುವ ಕ್ರಿಯೆಯನ್ನು ಮಾಡುತ್ತಿಲ್ಲ. ಆದರೆ ಇವರ ಒಟ್ಟಾರೆ ವಿಮರ್ಶೆಯನ್ನು ಗಮನಿಸಿದಾಗ ಇವರಲ್ಲಿರುವ ಪ್ರತಿಭಟನೆಯ ಧ್ವನಿ ಎಚ್ಚರಗೊಂಡಿರುವುದು ಕಂಡುಬರುತ್ತದೆ. ವ್ಯವಸ್ಥೆಯ ಅಸಮಾನತೆಯನ್ನು ಗಮನಿಸುತ್ತಲೇ ತಮ್ಮ ಲೇಖನಿಯಿಂದ ಸಮಾನತೆಯ ಅಂಶಗಳನ್ನು ಬಿತ್ತರಿಸುತ್ತಾ ಸಾಗಿದ್ದಾರೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂದರ್ಭದ ವೈರುಧ್ಯಗಳನ್ನು ಗಮನಿಸುತ್ತಲೇ ಅದರ ವಿರುದ್ಧ ಸಿಡಿದು ನಿಂತವರು. ಸಾಮಾನ್ಯರ ಬದುಕಿನೊಂದಿಗೆ ಸ್ಪಂದಿಸಿದವರು. ಸರಳ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಿರುವವರು.

ಇಷ್ಟೆಲ್ಲಾ ಹೇಳಿದ್ದಾದ ಮೇಲೆಯೂ ಇವರ ವಿಮರ್ಶಾ ವಿಧಾನದ ಒಂದೆರಡು ಅಂಶಗಳನ್ನು ಹೇಳದಿದ್ದರೆ ಬರೀ ಹೊಗಳಿಕೆಯಿಂದ ಹೊನ್ನ ಶೂಲಕ್ಕೇರಿಸಿದಂತಾಗುತ್ತದೆ. ಇಂದು ಸಾಹಿತ್ಯ ಕ್ಷೇತ್ರ ಹಲವಾರು-ಅಲ್ಲೋಲ-ಕಲ್ಲೋಲಗಳನ್ನು ಕಂಡಿದೆ. ಮತೀಯ ಬಿರುಗಾಳಿಯಲ್ಲಿ ಸಿಲುಕಿ ನಲುಗುತ್ತಿದೆ. ಇಂತಹ ಸಂದರ್ಭದಲ್ಲಿ ಪ್ರೊ॥ಕೆ.ಜಿ.ಎನ್ ರವರನ್ನು ಭೇಟಿಯಾಗುವ ಸಂದರ್ಭ ಒದಗಿತು. ಈ ವೇಳೆಗಾಗಲೇ ಒಂದೆರಡು ಬಾರಿ ಸಂಧಿಸಿದ್ದರೂ ಹೆಚ್ಚು ಮಾತಾಡಲಾಗಿರಲಿಲ್ಲ.

ಬೆಳಗಿನ ವೇಳೆಯಲ್ಲಿ ಅವರ ಮನೆಯಲ್ಲಿ ಕುಳಿತು ಮಾತನಾಡುತ್ತಾ ಕಾಫಿ ಕುಡಿಯುತ್ತಿದ್ದೆವು. ಹಾಗೇ ಧರ್ಮಕಾರಣ ಕೃತಿ ಕುರಿತು ಪ್ರಸ್ತಾಪ ಮಾಡಿದೆ. ಏಕೆಂದರೆ ಈ ಸಂದರ್ಭದಲ್ಲಾಗಲೇ ಧರ್ಮಕಾರಣ ಕೃತಿ ಧಾರ್ಮಿಕ ಮತ್ತು ರಾಜಕೀಯ ವಲಯದಲ್ಲಿ ಅಸಮಾನತೆಯ ಕ್ರಾಂತಿಯ ಅಲೆಗಳನ್ನು ಎಬ್ಬಿಸಿತ್ತು. ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬರುವವರೆಗೆ ಪ್ರಶಾಂತವಾಗಿದ್ದ ವಾತಾವರಣ ದುತ್ತೆಂದು ಉಲ್ಬಣವಾಯಿತು. ಅಂದರೆ ಪ್ರಶಸ್ತಿ ಬಂದರೆ ಮಾತ್ರ ಕೃತಿಗಳನ್ನು ಓದುವ ವರ್ಗವೊಂದಿದೆ ಎನ್ನುವುದರ ಅರಿವಾಯಿತು. ಅದೇನೆ ಇರಲಿ, ಆದರೆ ಆನಂತರದ ಬೆಳವಣಿಗೆ ರಾಜಕಾರಣಿಗಳ ಹಿತಾಸಕ್ತಿಯಾಗಿ, ಸ್ವಾರ್ಥಕ್ಕೆ ಬಲಿಯಾದದ್ದು ವಿಷಾದನೀಯ. ಕನ್ನಡ ಓದಲು - ಬರೆಯಲು ಬರದಂತಹ ಭೀಮಣ್ಣ ಖಂಡ್ರೆಯಂತವರು ಕೃತಿಯನ್ನು ವಿರೋಧಿಸಿ ಕೃತಿಯನ್ನು ಸುಡುವಂತಹ ಅಮಾನವೀಯ ಕೆಲಸಕ್ಕೆ ಕೈ ಹಾಕಿದ್ದು ವಿಪರ್ಯಾಸ. ಸರ್ಕಾರದ ಮೇಲೆ ಒತ್ತಡ ಹೇರಿ ಕೃತಿಯನ್ನು ಮುಟ್ಟುಗೋಲು ಹಾಕಿಕೊಂಡದ್ದನ್ನು ಕೆ.ಜಿ.ಎನ್‌ಅವರು ನಿರ್ಭಯರಾಗಿ ಖಂಡಿಸಿದಾಗ ನನಗೆ ತುಂಬಾ ಸಂತೋಷ ಆಯ್ತು. ಏಕೆಂದರೆ ಸಾವಿರಾರು ಜನ ಸಾಹಿತಿಗಳು ಸಾಹಿತ್ಯಾಸಕ್ತರು ಇರುವ ಈ ನಾಡಿನಲ್ಲಿ ಓರ್ವ ಸಾಹಿತಿಗೆ, ಕೃತಿಗೆ ಆಗುತ್ತಿರುವ ಅನ್ಯಾಯವನ್ನು ನೋಡಿಯೂ ಸುಮ್ಮನಿದ್ದುದ್ದು ಒಂದೆಡೆ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಒದಗಿದಾಗ ಮೌನಿಗಳಾದರು. ಇದನ್ನು ಗಮನಿಸಿದಾಗ ಸಾಹಿತಿಗಳಲ್ಲಿ ಸಾಹಿತ್ಯಾಸಕ್ತರಲ್ಲಿ ಇನ್ನೂ ಎಚ್ಚರ ಮೂಡಿರಲಿಲ್ಲವೇ ಎನಿಸುತ್ತದೆ. ಆನಂತರದ ಬೆಳವಣಿಗೆ ಒಂದಿಷ್ಟು

ಆಶಾದಾಯಕವಾದದ್ದು. ಜಿ.ಎಸ್. ಶಿವರುದ್ರಪ್ಪನಂತಹವರು, ಕಿ.ರಂ. ನಾಗರಾಜ್, ಬರಗೂರು ರಾಮಚಂದ್ರಪ್ಪ, ಎಂ.ಹೆಚ್. ನಾಗರಾಜ್, ಮಂಗಳೂರು ವಿಶ್ವವಿದ್ಯಾಲಯ ಹಾಗೂ ಧಾರವಾಡದ ಸಾಹಿತಿಗಳು ಸಾಹಿತ್ಯಪ್ರಿಯರು ಇದನ್ನು ಖಂಡಿಸಿದರು. ಆದರು ಇನ್ನೂ ಈ ನಾಡಿನಲ್ಲಿ ಬೇರ್‍ಯಾವ ಸಾಹಿತಿಗಳಾಗಲೀ ಸಾಹಿತ್ಯಾಸಕ್ತರಾಗಲೀ ಇಲ್ಲವೇ? ಎನ್ನುವ ಅನುಮಾನ ನನ್ನನ್ನು ಕಾಡಿದ್ದಿದೆ. ಉಳಿದವರ ದೃಷ್ಟಿಯಲ್ಲಿ "ಹಾಳು ಬಾವಿಗೆ ಬಿದ್ದವನ ಮೇಲೆ ಆಳಿಗೊಂದು ಕಲ್ಲು" ಎಂದು ಸುಮ್ಮನಾಗಿದ್ದಾರೆ ಎನ್ನುವ ವಿಷಾದವನ್ನು ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಕೆ.ಜಿ.ಎನ್. ತಮ್ಮ ಮರುಚಿಂತನೆಯಲ್ಲಿ "ಶರಣರು ಏಕ ಮುಖಿ ಚಿಂತಕರು" ಎಂಬ ಲೇಖನದಲ್ಲಿ ಚನ್ನಬಸವಣ್ಣನ ಹುಟ್ಟಿನ ಬಗ್ಗೆ ದೀರ್ಘವಾಗಿ ಚರ್ಚಿಸಿರುವ ಅಂಶವನ್ನು ಯಾವ ಬರಹಗಾರರೂ ಗಮನಿಸದಿರುವುದು ವಿಷಾದದ ಸಂಗತಿ ಎಂದು ನನಗನ್ನಿಸಿದೆ.

'ಧರ್ಮಕಾರಣ' ಕಾದಂಬರಿಯ ಬಗ್ಗೆ ಪತ್ರಿಕೆಗಳಲ್ಲಿ ನಡೆದ ಪರ ಮತ್ತು ವಿರೋಧ ಅಭಿಪ್ರಾಯಗಳನ್ನು ನಾನು ಅವರೊಂದಿಗೆ ಚರ್ಚಿಸಿದೆ. ಆ ಧರ್ಮಕಾರಣದ ವಿಷಯವಾಗಿ ಅವರು ನಿಷ್ಪಕ್ಷಪಾತವಾಗಿ ದಿಟ್ಟತನದಿಂದ ಕೊಟ್ಟ ಅಭಿಪ್ರಾಯಗಳು ನನ್ನನ್ನು ಚಕಿತಗೊಳಿಸಿದವು. ಕೆ.ಜಿ.ಎನ್‌ರವರೆಂದೂ ಪ್ರಚಾರಪ್ರಿಯರಲ್ಲ. ಸುದ್ದಿ ಮಾಧ್ಯಮಗಳ ಮೂಲಕ ಹೆಸರು ಮಾಡುವ ಇಚ್ಛೆ ಅವರಿಗೆ ಕಿಂಚಿತ್ತೂ ಇಲ್ಲ. ಧರ್ಮಕಾರಣದ ಪರವಾಗಿ ನಡೆದ ಬರಹಗಾರರ ಮತ್ತು ಕಲಾವಿದರ ದೊಡ್ಡ ಮೆರವಣಿಗೆಗಿಂತಲೂ ಮುಂಚೆಯೇ. ಧರ್ಮಕಾರಣ ಕಾದಂಬರಿಯನ್ನು ಮುಟ್ಟುಗೋಲು ಹಾಕುವುದಕ್ಕಿಂತ ಮೊದಲೇ ಯಾರ ಗಮನಕ್ಕೂ ತರದೆ, ಸದ್ದುಗದ್ದಲವಿಲ್ಲದೆ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಕೆ.ಜಿ.ಎನ್‌ರಿಗೆ ಬರೆದುಕೊಡಲು ಒಪ್ಪಿಸಿದ್ದ 'ದೇವರ ದಾಸಿಮಯ್ಯ' ಎಂಬ ಕೃತಿಯನ್ನು ಬರೆದುಕೊಡಲು ತಿರಸ್ಕರಿಸಿ ಅವರು ಬರೆದ ಪತ್ರದ ಮಾತುಗಳು ಸಮಯ ಸಾಧಕ ಬರಹಗಾರರ, ಬೌದ್ಧಿಕ ಭ್ರಷ್ಟರ ಮತ್ತು ಬರಹಗಾರರ ಸ್ವತಂತ್ರ ಹರಣ ಮಾಡುವವರನ್ನು ಬೆಚ್ಚಿ ಬೀಳಿಸಿ ಆತ್ಮ ವಿಮರ್ಶೆಗೆ ತೊಡಗಿಸುವಂತಿವೆ.

ಕೆ.ಜಿ.ಎನ್. ರವರ ಪತ್ರದ ಮಾತುಗಳು; "ವಚನಕಾರರ ಮೂಲಕ ಚಿಂತನೆಗೆ ಭಂಗ ತರುವ ಭಾವೋದ್ರೇಕದ ಪರಿಸರ ಸೃಷ್ಟಿಸಿ, ತಮ್ಮ ವರ್ಗಹಿತದ ಏಕ ಮುಖಿ ಚಿಂತನೆಯ ಒತ್ತಡದ ಮಾದರಿಯ ಬರವಣಿಗೆಗೆ ಬರಹಗಾರರನ್ನು ಒಗ್ಗಿಸಿಕೊಳ್ಳಲು ಬೆದರಿಕೆ ಒಡ್ಡಿ ಉಂಟುಮಾಡುತ್ತಿರುವ ಉಸಿರು ಕಟ್ಟಿಸುವ ವಾತಾವರಣದಲ್ಲಿ ಯಾವ ಬರಹಗಾರನಿಗೂ, ಸಾಮಾಜಿಕ ನ್ಯಾಯ ದೊರಕಲಾರದು. ಮತ್ತು ಸಮಗ್ರ ದೃಷ್ಟಿಯ ಅಧ್ಯಯನದಿಂದ ಸತ್ಯಾನ್ವೇಷಣೆಯಿಂದ ದೂರ ಸರಿದು ವೀರಶೈವೇತರನಾದ ನಾನು ಬರೆದು ನಿಮ್ಮ ಶರಣ ಸಾಹಿತ್ಯ ಪರಿಷತ್ತಿನ ಪ್ರಕಟಣೆಗೆ ಕೊಟ್ಟು ನನ್ನ ಮುಕ್ತ ಚಿಂತನೆಗೆ ಭಂಗ ತಂದುಕೊಳ್ಳಲಾರೆ. ನನ್ನ ಕೃತಿಯ ಪ್ರಕಟಣೆಗೆ ಅನ್ಯ ವ್ಯವಸ್ಥೆ ಮಾಡಿಕೊಳ್ಳುತ್ತೇನೆ." ಕೆ.ಜಿ.ಎನ್‌ರ ಮಾತು ಸರ್ಕಾರದ ಸೌಲಭ್ಯದಿಂದ ಮಠ ಮಾನ್ಯಗಳಿಂದ ಮತ್ತು ಸಂಘ ಸಂಸ್ಥೆಗಳಿಂದ ಬದುಕುವ ಇಬ್ಬಂದಿತನದ ಬರಹಗಾರರ ಮುಖಕ್ಕೆ ರಾಚಿದಂತಿದೆ.

'ಧರ್ಮಕಾರಣ' ಕಾದಂಬರಿಯ ಪರವಾದ ಮತ್ತು ಬರಹಗಾರರ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ಚಳುವಳಿ ಮತ್ತು ಬರಹಗಾರರ ಅಭಿಪ್ರಾಯಗಳು ಸಿಡಿಮದ್ದಿಗೆ ಹಸಿ ರಾಗಿಯನ್ನು ಬೆರೆಸಿದಂತೆ, ಬರಹಗಾರರು ಮತ್ತೂ ದುರ್ಬಲರಾದ ಬಗ್ಗೆ ನನ್ನ ತೀವ್ರ ವಿರೋಧವಿದೆ.

ವಚನಕಾರರಾಗಲೀ ವಚನ ಚಳುವಳಿಯಲ್ಲಿ ಬರುವ ಯಾರೇ ಆಗಲೀ ಒಂದು ವರ್ಗದ, ಧರ್ಮದ ಸೊತ್ತಲ್ಲ. ಅವರು ಎಲ್ಲಾ ವರ್ಗದ, ಎಲ್ಲಾ ಧರ್ಮದ ಅಂಶಗಳಿಗೂ ಸ್ಪಂಧಿಸಿದವರು. ಅಂತಹವರನ್ನು ಕೂಪ ಮಂಡೂಕಗಳನ್ನಾಗಿ ಕೆಲವೊಂದು ಶಕ್ತಿಗಳು ನೋಡುತ್ತಿದ್ದಾರೆ. ಒಂದು ವರ್ಗ ಹಾಗೂ ಧರ್ಮದಲ್ಲಿ ಕಟ್ಟಿಹಾಕುವ ಪ್ರಯತ್ನವನ್ನು ಕೆಲವು ಸಾಹಿತಿಗಳು ಮತ್ತು ರಾಜಕಾರಣಿಗಳು ಮಾಡುತ್ತಿದ್ದಾರೆ. ಇವರಿಗೆ ವಸ್ತುನಿಷ್ಠ ಸತ್ಯ ತಿಳಿಯಬೇಕಾದರೆ ವಚನಗಳನ್ನು ಅಧ್ಯಯನ ಮಾಡಿ ಅನಂತರ ಪಿ.ವಿ. ನಾರಾಯಣರ 'ಧರ್ಮಕಾರಣ'ವನ್ನು ಅಧ್ಯಯನಿಸಲಿ ಎಂದರವರು.

ಸಾಹಿತಿಯೊಬ್ಬನ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹೇರಲಾಗುತ್ತಿರುವ ಧಾರ್ಮಿಕ ಮತ್ತು ರಾಜಕೀಯ ಒತ್ತಡಗಳು ವ್ಯಕ್ತಿಯೊಂದಿಗೆ ವ್ಯಕ್ತಿತ್ವದ ಕುಸಿತಕ್ಕೆ ಕಾರಣವಾಗುತ್ತವೆ. ಆರೋಗ್ಯ ಪೂರ್ಣ ಮಾನಸಿಕ ಸ್ಥಿತಿ ಬೆಳೆಯುವುದಿಲ್ಲ. ಸಾಹಿತಿಯೊಬ್ಬ ಸತ್ಯಶೋಧಕನಾಗಿರಬೇಕು. ಈ ಮಾತು ಕೆ.ಜಿ.ಎನ್ನರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಂತಿದೆ. ಅವರ ನಿರ್ಣಯವೇ ಅಂತಿಮ ನಿರ್ಣಯವಲ್ಲ. ಅದರಾಚೆಗೂ ಸತ್ಯ ಇದೆ. ಇಂತಹ ಸತ್ಯವನ್ನು ಕಾಣ ಹೊರಟ ಸಂಶೋಧಕರಂತಹ ವ್ಯಕ್ತಿತ್ವ ಇವರದು. ಆ ಕಾರಣಕ್ಕಾಗಿ ಇವರ ವಿಮರ್ಶಾ ಕೃತಿಗಳನ್ನು ಅವಲೋಕಿಸಿದಾಗ ಹುಡುಕಿದ್ದರಲ್ಲಿ ಹುಡುಕುವ, ಸತ್ಯವನ್ನು ಬಯಲಿಗೆಳೆಯುವುದನ್ನು ಕಾಣುತ್ತೇವೆ. ಇವರ ವಿಮರ್ಶೆಯ ಇಕ್ಕಟ್ಟು-ಬಿಕ್ಕಟ್ಟು ಹಾಗೂ ಮರುಚಿಂತನೆ ಈ ನೆಲೆಯೊಳಗೆ ಮೂಡಿ ಬಂದಿರುವುದನ್ನು ಅಧ್ಯಯನಿಸಿದಾಗ ಅರಿವಾಗುತ್ತದೆ.

ಇವರ ಪರಿಚಯವಾದದ್ದು ಇತ್ತೀಚೆಗಷ್ಟೇ. ಆದರೆ ಇವರ ಸರಳತೆ ವಿಶಾಲ ಮನೋಭಾವಗಳು ನನ್ನನ್ನು ಆಕರ್ಷಿಸಿದವು. ಯುವ ಸಾಹಿತಿಗಳಿಗೆ ಸಾಹಿತ್ಯಾಸಕ್ತರಿಗೆ ಪ್ರೋತ್ಸಾಹ ನೀಡಿಕೊಂಡು ಬಂದಿದ್ದಾರೆ. ಏಕೆಂದರೆ ಗುಬ್ಬಿ ತಾಲ್ಲೂಕಿನ ವಲಯದೊಳಗೆ "ಕತ್ತಲೆಗೆ ಮೂರು ಬಣ್ಣ" ಕವನ ಸಂಕಲನ ಹೊರ ಬರಲು ಕೆ.ಜಿ.ಎನ್ ರವರ ಶ್ರಮವನ್ನು ಮಾತುಗಳಲ್ಲಿ ಹೇಳಲು ಸಾಧ್ಯವಿಲ್ಲ. ಈ ಕಾರಣದಿಂದ ಈ ಮಾತನ್ನು ಹೇಳುತ್ತಿಲ್ಲ. ಇವರ ಇಡೀ ವ್ಯಕ್ತಿತ್ವವನ್ನು ನೇರವಾಗಿ ಕಂಡಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಡಾ|| ನರಹಳ್ಳಿ ಬಾಲಸುಬ್ರಹ್ಮಣ್ಯಂ ರವರು ಕತ್ತಲೆಗೆ ಮೂರು ಬಣ್ಣ ಕವನ ಸಂಕಲನದ ಬಿಡುಗಡೆಯ ಸಂದರ್ಭದಲ್ಲಿ ಕೃತಿ ಕುರಿತು ಮಾತನಾಡುತ್ತಾ ಪ್ರೊ|| ಕೆ.ಜಿ.ಎನ್ ರವರು ನಿಷ್ಠುರವಾದಿ ವಿಮರ್ಶಕರು ಎನ್ನುವ ಮಾತನ್ನು ಹೇಳಿದರು. ಕತ್ತಲೆಗೆ ಮೂರು ಬಣ್ಣ ಕೃತಿ ಹೊರಬರಲು ಶ್ರಮಿಸಿದ್ದರ ಜೊತೆಗೆ ಕೃತಿಗೆ ಮುನ್ನುಡಿ ಬರೆದವರು ಕೆ.ಜಿ.ಎನ್‌ರು. ಮುನ್ನುಡಿಯ ಸಾಲುಗಳ ನೈಜತೆ ಬಾಲಸುಬ್ರಹ್ಮಣ್ಯರವರ ಮನಸ್ಸನ್ನು

ಸೆಳೆದಿರುವುದಕ್ಕೆ ಅವರ ಮಾತುಗಳು ಸಾಕ್ಷಿಯಾಗಿವೆ.

ಹೊರಗಷ್ಟೇ ಸರಳ ವ್ಯಕ್ತಿಯಾಗಿ ಕಾಣುತ್ತಿಲ್ಲ. ಮನೆಯ ಇಡೀ ಪರಿಸರವೇ ಸರಳತೆಯಿಂದ, ವಿಶಾಲ ಹೃದಯದಿಂದ ಕೂಡಿದೆ. ಇದು ನಾನು ಅವರ ಮನೆಗೆ ಭೇಟಿ ನೀಡಿದಾಗ ಕಂಡುಂಡ ಅನುಭವ. ವಿಮರ್ಶೆಯಲ್ಲಿಯ ನಿಷ್ಠುರತೆಯಂತೆ ವ್ಯಕ್ತಿತ್ವದಲ್ಲಿಯೇ ಕಾಠಿಣ್ಯ ಇರಬಹುದೆನ್ನುವ ಅನುಮಾನ ಹಾಗೂ ಭಯ ನನ್ನನ್ನು ಕಾಡುತ್ತಿತ್ತು. ಏಕೆಂದರೆ ಸಾಹಿತ್ಯದ ಬಗ್ಗೆ ಈಗ ತಾನೇ ಕಣ್ತೆರೆಯುತ್ತಿರುವ ನಮಗೆ ಎಲ್ಲಿ ಏನು ತಪ್ಪು ಮಾಡುತ್ತೇವೆಯೋ ಎನ್ನುವ ಆತಂಕ ಕಾಡುವುದು ಸಹಜ. ಅವರ ಕಿರಿಯರಿಗೆ ಹೇಳುವ ಕಿವಿಮಾತು, ಅವರು ನೀಡುವ ಮಾರ್ಗದರ್ಶನ, ನಮ್ಮ ಸಮಸ್ಯೆಗಳಿಗೆ ಕೊಡುವ ಪರಿಹಾರ ಇವೆಲ್ಲವನ್ನು ಗಮನಿಸಿದಾಗ ಮರುಚಿಂತನೆಯ ನಾಗರಾಜಪ್ಪನವರು ಇವರೇ? ಎನ್ನುವ ಅನುಮಾನ ಹಾಗೂ ಪ್ರಶ್ನೆ ಕಾಡಿದ್ದು ಸಹಜ. ಆಮೇಲೆ ಅದು ಸಂಪೂರ್ಣವಾಗಿ ಮರೆಯಾಯಿತು.

ನಾಗರಾಜಪ್ಪನವರ ಇಡೀ ಸಾಹಿತ್ಯವನ್ನು ಸಮಗ್ರವಾಗಿ ಅಧ್ಯಯಿಸಲಾಗಿಲ್ಲ. ಅವರ ಮರುಚಿಂತನೆ, ಇಕ್ಕಟ್ಟು-ಬಿಕ್ಕಟ್ಟು ಹಾಗೂ ಕೆಲವು ಬಿಡಿ ಲೇಖನಗಳನ್ನು ಅಧ್ಯಯನಿಸಿದ್ದೇನೆ. ಒಬ್ಬ ಸಾಹಿತ್ಯಾಸಕ್ತನಾಗಿ ಅವರನ್ನು ಮಾತನಾಡಿಸಿದಾಗ ಅವರಲ್ಲಿ ಕಂಡ ಸರಳತೆ, ಸಹೃದಯ ಮನೋಭಾವ, ವಿಮರ್ಶಾ ದೃಷ್ಟಿ ಇವೆಲ್ಲವೂ ನನ್ನನ್ನು ಸೆರೆಹಿಡಿದವು. ಅವರೊಂದಿಗೆ ಚರ್ಚಿಸಿದ ಹಾಗೂ ಅವರ ಕೃತಿಗಳನ್ನು ಓದಿದ ಸಂದರ್ಭದಲ್ಲಿ ಆದ ಅನುಭವಗಳನ್ನು ಇಲ್ಲಿ ಹೇಳಲು ಪ್ರಯತ್ನಿಸಿದ್ದೇನೆ ಹೊರತು ನಾನು ಒಬ್ಬ ಬರಹಗಾರನಾಗಿ ಅಲ್ಲ.

ನಿವೃತ್ತಿಯ ನಂತರವೂ ತಮ್ಮ ವಾಕ್‌ಚಾತುರ್ಯದ ಹಾಗೂ ತಮ್ಮ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಉಣಿಸುವ ದೃಷ್ಟಿಯಲ್ಲಿ ಚನ್ನಪಟ್ಟಣ ಸ್ನಾತಕೋತ್ತರ ಕೇಂದ್ರದಲ್ಲಿ ಗೌರವ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ ಸೇವೆಯನ್ನು ಕೈಗೊಂಡಿದ್ದಾರೆ. ಇಂತಹ ಇಳಿವಯಸ್ಸಿನಲ್ಲಿಯೂ ಇವರಲ್ಲಿರುವ ಕ್ರಿಯಾಶೀಲತೆ ದಂಗು ಬಡಿಸುತ್ತದೆ.

ಇವರ ಇಡೀ ವ್ಯಕ್ತಿತ್ವದ ಬಗ್ಗೆ ಏನನ್ನು ಹೇಳಲಾಗದಿದ್ದರೂ ಒಬ್ಬ ನಿಷ್ಠುರವಾದಿ ವಿಮರ್ಶಕರು ಎನ್ನುವುದನ್ನು ಹೇಳುತ್ತಾ ನನಗನಿಸಿದ್ದನ್ನು ಇಲ್ಲಿ ಹೇಳಲು ಪ್ರಯತ್ನಿಸಿದ್ದೇನೆ. ♦

" ಕನ್ನಡ ಸಂತಕವಿಗಳಲ್ಲಿ ಬ್ರಾಹ್ಮಣರ ಧಾರ್ಮಿಕ ವಿಧಿಗಳಿಗೆ ಪ್ರಧಾನವಾಗಿ ಶಾಸ್ತ್ರ ಪ್ರಮಾಣವಾದರೆ, ಬ್ರಾಹ್ಮಣೇತರ ಸಂತರಿಗೆ ಆಧ್ಯಾತ್ಮ ಸಾಧನೆ ಪ್ರಧಾನವಾಗಿ ಸ್ವಾನುಭವ ಪ್ರಮಾಣವಾಯಿತು."

– ಪ್ರೊ॥ ಕೆ.ಜಿ.ನಾಗರಾಜಪ್ಪ

11. ಅಕ್ಕರೆಯ ನೆರಳು

ಪ್ರೊ|| ಪದ್ಮಾ ಶಿವರುದ್ರಪ್ಪ

ನನ್ನ ವೈಯಕ್ತಿಕ ಜೀವನದ ಸಮಸ್ಯೆಯಿಂದಾಗಿ ನಾನು ನನ್ನ ಬಂಧು ಬಳಗದ ಎಲ್ಲರಿಂದ ದೂರವಾಗಿ ನೋವನ್ನು ಅನುಭವಿಸಬೇಕಾದ ಸಂದರ್ಭವೊಂದು ನನ್ನ ಜೀವನದಲ್ಲಿ ಒದಗಿಬಂದಿತು. ಅಂಥ ಸಂದರ್ಭದಲ್ಲಿ ಸಾಂತ್ವನದ ನುಡಿಯೊಂದು ನನ್ನ ಮನಸ್ಸಿಗೆ ತಂಪನ್ನೆರೆಯಿತು. "ನೀನೇನೂ ನೊಂದುಕೋ ಬೇಡಮ್ಮ, ನನ್ನನ್ನೇ ನಿನ್ನ ಅಣ್ಣ ಎಂದುಕೋ, ನೀನು ಯಾವಾಗ ಬೇಕಾದರೂ ಈ ನಿನ್ನ ಅಣ್ಣನ ಮನೆಗೆ ಬರಬಹುದು". ಈ ಮಾತನ್ನಾಡಿ ನನ್ನ ನೋವನ್ನು ನಿವಾರಿಸಿದವರು ಬೇರಾರೂ ಅಲ್ಲ. ಆ ವ್ಯಕ್ತಿ ಕೆ.ಜಿ. ನಾಗರಾಜಪ್ಪನವರು.

ನನ್ನ ಅವರ ಈ ಅಣ್ಣ-ತಂಗಿಯ ಸಂಬಂಧ ಸುಮಾರು ನಲವತ್ತು ವರ್ಷಗಳಷ್ಟು ದೀರ್ಘ ಕಾಲದ್ದು. ಅಂದಿನಿಂದ ಇಂದಿನವರೆಗೆ ಈ ಸಂಬಂಧ ಅಬಾಧಿತವಾಗಿ ಮುಂದುವರೆದಿದೆ. ನನ್ನ ಯಜಮಾನರನ್ನು ಹೊರತಾಗಿ ಬೇರಾವ ಗಂಡಸರ ಬಳಿಯೂ ಸಲುಗೆಯಿಂದ ಮಾತನಾಡಲು ಸಾಧ್ಯವಾಗದ ಸಂಕೋಚ ಸ್ವಭಾವದ ನನಗೆ ಅತ್ಯಂತ ಆತ್ಮೀಯರೆಂದರೆ ನಾಗರಾಜಪ್ಪನವರು. ಕಷ್ಟದಲ್ಲಿರುವವರಿಗೆ ಅವರದು ಸದಾ ಚಾಚಿದ ಸಹಾಯ ಹಸ್ತ. ತೊಂದರೆಯಲ್ಲಿರುವವರಿಗೆ ಅದನ್ನು ಎದುರಿಸುವ ಧೈರ್ಯ ಕೊಡುವ ಸಾಂತ್ವನದ ಮಾತು, ತೊಂದರೆಯನ್ನು ಪರಿಹರಿಸಬಹುದಾದ ಅನೇಕ ವಿಧಾನಗಳ ಆಲೋಚನೆ, ಅದಕ್ಕಾಗಿ ಪ್ರಯತ್ನ ಅವರ ಸಹನೆ, ತಾಳ್ಮೆ ಈ ಗುಣಗಳು ನಾಗರಾಜಪ್ಪನವರ ಬಗ್ಗೆ ನಮ್ಮಲ್ಲಿ ಆತ್ಮೀಯತೆ ಹುಟ್ಟಿಸುತ್ತವೆ. ಅನೇಕ ಬಾರಿ ಯಾರದೋ ಜೀವನದ ಸಮಸ್ಯೆಯನ್ನು ಪರಿಹರಿಸಲು ಸ್ವಂತ ಕೆಲಸವನ್ನೂ ಬದಿಗೊತ್ತಿ ಯಾವ್ಯಾವುದೋ ಊರಿಗೆ ಪ್ರಯಾಣ, ಸಂಧಾನ, ರಾಜಿ, ಬೆದರಿಕೆ ಈ ಎಲ್ಲಕ್ಕೂ ಅವರು ಸಿದ್ಧ. ಅವರ ಬಂಧುಗಳಿಗೆ, ಸ್ನೇಹಿತರಿಗೆ ಯಾರಿಗೆ ಏನೇ ಸಮಸ್ಯೆಗಳಿದ್ದರೂ ಕೂಡಲೇ ನಾಗರಾಜಪ್ಪನವರಿಗೆ ಕರೆ. ಗಂಡ ಹೆಂಡಿರ ಜಗಳ, ಯಾರಿಗೋ ದೆವ್ವ ಹಿಡಿದರೆ, ಯಾರಿಗೋ ಮಾನಸಿಕ ಅಸ್ವಸ್ಥತೆ, ಯಾರಿಗೋ ಗಂಡು ಹೆಣ್ಣು ಹುಡುಕಿಕೊಡಬೇಕು ಈ ಎಲ್ಲಕ್ಕೂ, ಎಲ್ಲರಿಗೂ ನಾಗರಾಜಪ್ಪನವರು ಬೇಕು. ಅನೇಕ ಬಾರಿ ಊರಿಂದೂರಿಗೆ ಹೋಗಿ, ನಿದ್ದೆಗೆಟ್ಟು ಆರೋಗ್ಯ ಕೆಡಿಸಿಕೊಂಡು ಬೇರೆಯವರ ಜೀವನದ ಸಮಸ್ಯೆಗಳ ಪರಿಹಾರಕ್ಕೆ ಅವರು ಪ್ರಯತ್ನಿಸಿದ್ದೂ ಉಂಟು.

ಪರಿಚಯವಾದ ಸ್ವಲ್ಪ ಹೊತ್ತಿನಲ್ಲಿಯೇ ನಾಗರಾಜಪ್ಪನವರು ಯಾರಿಗಾದರೂ ಹತ್ತಿರದವರಾಗುತ್ತಾರೆ. ಎಂಥವರೊಡನಾದರೂ ಹೊಂದಿಕೊಳ್ಳುವ ನೇರ ಸರಳ ವ್ಯಕ್ತಿ ಅವರು. ತಮ್ಮ ಕಷ್ಟ ಸುಖಗಳನ್ನು ಅವರೊಡನೆ ಹೇಳಿ ಕೊಳ್ಳಬಹುದಾದ ಆತ್ಮೀಯತೆಯನ್ನು ಪರಿಚಯದವರಲ್ಲಿ ಅವರು ಹುಟ್ಟಿಸುತ್ತಾರೆ. ನಮ್ಮ ಕುಟುಂಬ ಪ್ರವಾಸ ಹೋದಲ್ಲೆಲ್ಲ ಅವರು ಇರಲೇಬೇಕು. ಅವರು ಜೊತೆಗೆ ಬರುತ್ತಾರೆಂದರೆ ಪ್ರವಾಸ ಹೊರಟವರಿಗೆ ಉತ್ಸಾಹ. ಅವರಿದ್ದೆಡೆ ನಗು, ಸಂತೋಷ, ಉತ್ಸಾಹ ತುಂಬಿ ತುಳುಕುತ್ತವೆ. ಒಂದು

ಘಳಿಗೆ ಮುಂಕಾಗಿ ಕುಳಿತುಕೊಳ್ಳುವವರಲ್ಲ ಅವರು. ಪ್ರವಾಸ ಹೊರಟಾಗ ನಮ್ಮ ಯಜಮಾನರ ಕೋಪ ತಾಪಗಳನ್ನು ಇಳಿಸಲು, ಪ್ರವಾಸ ಕಾಲದ ಸಮಸ್ಯೆಗಳನ್ನು ನಿವಾರಿಸಲು, ಉತ್ಸಾಹ ಕಾಪಾಡಿಕೊಳ್ಳಲು ನಮ್ಮ ಕುಟುಂಬದ ಪ್ರವಾಸಕ್ಕೆ ಅವರು ಬೇಕೇ ಬೇಕು. ಎಷ್ಟೋ ವೇಳೆ ಪ್ರವಾಸ ಕಾಲದಲ್ಲಿ ಆಕಸ್ಮಿಕವಾಗಿ ಗಾಯಗೊಂಡವರನ್ನು ಅವರು ಬೆನ್ನ ಮೇಲೆ ಹೊತ್ತು ಪ್ರವಾಸಿ ಮಂದಿರಕ್ಕೆ ಸಾಗಿಸಿದ್ದೂ ಉಂಟು.

ನಾಗರಾಜಪ್ಪನವರ ಮತ್ತೊಂದು ದೊಡ್ಡ ಗುಣವೆಂದರೆ ಅವರ ಪ್ರಾಮಾಣಿಕತೆ. ಅವರು ಮನಸ್ಸು ಮಾಡಿದ್ದರೆ ಬೇಕಾದಷ್ಟು ಹಣ ಆಸ್ತಿ ಸಂಪಾದಿಸಬಹುದಿತ್ತು. ಆದರೆ ಅದಕ್ಕೆ ಬದಲಾಗಿ ಅವರು ಸಂಪಾದಿಸಿದ್ದು ಗೌರವ, ಪ್ರೀತಿ, ಸ್ನೇಹ. ಹಣ ಸಂಪಾದಿಸಲಿಲ್ಲವೆಂದು ಅವರು ಎಂದೂ ಪಶ್ಚಾತ್ತಾಪ ಪಟ್ಟವರಲ್ಲ. ಆಡಂಬರ ಪ್ರದರ್ಶನಗಳು ಅವರಿಂದ ಮೈಲಿ ದೂರ. ಅವರದು ಸರಳ, ನೇರ ನಿರಹಂಕಾರದ ನಡೆ ನುಡಿಯಾದ್ದರಿಂದ ಯಾರು ಬೇಕಾದರೂ ಅವರೊಡನೆ ಸುಲಭವಾಗಿ ವ್ಯವಹರಿಸಬಹುದು. ಅವರು ಶ್ರಮಜೀವಿ. ಚಿಕ್ಕ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದು ಕೊಂಡು, ಬಡತನದಲ್ಲಿಯೇ ಬೆಳೆದುಬಂದ ಅವರು ಬದುಕಿನಲ್ಲಿ ಈ ಮಟ್ಟಕ್ಕೆ ಏರಿರುವುದು ಅವರ ಸ್ವಂತ ಶ್ರಮ-ಸಾಧನೆಗಳಿಂದ ಮಾತ್ರ. ವಾಮ ಮಾರ್ಗಗಳಿಂದ ಗಳಿಸಬಹುದಾದ ದೊಡ್ಡಸ್ತಿಕೆಯಿಂದ ಅವರು ಬಹಳ ದೂರ. ಸಾಮಾನ್ಯವಾಗಿ ನಮ್ಮ ಅನೇಕ ಬರಹಗಾರರಲ್ಲಿ ಕಾಣಬಹುದಾದ ಜಾತೀಯತೆ, ಸಣ್ಣತನ, ಗುಂಪುಗಾರಿಕೆ ಈ ಯಾವ ಗುಣಗಳೂ ಅವರಲ್ಲಿಲ್ಲ. ಅವರ ಅಧ್ಯಯನ ಶೀಲತೆ ಯಾರಾದರೂ ಮೆಚ್ಚಬೇಕಾದ ಗುಣ. ಅವರದು ಶೋಧಕ ಪ್ರವೃತ್ತಿ. ಸಮಾಜ ಶಾಸ್ತ್ರದಿಂದ ಪ್ರೇರಿತವಾದ ಸಾಹಿತ್ಯ ಅವರದ್ದು. ತಂತ್ರ ಶಾಸ್ತ್ರದ ಬಗೆಗೆ ಅವರಿಗಿರುವ ಆಸಕ್ತಿ, ವಿದ್ವತ್ತು ಅಪಾರವಾದದ್ದು. ಅವರ ಸಂಶೋಧನೆ, ಅಧ್ಯಯನ ಗಳನ್ನೆಲ್ಲ ಅವರು ಬರಹಕ್ಕೆ ಇಳಿಸಿದ್ದಿದ್ದರೆ ಕನ್ನಡದ ಸಂಶೋಧನೆ ಇನ್ನಷ್ಟು ಶ್ರೀಮಂತವಾಗುತ್ತಿತ್ತು. ಅವರ ಅಧ್ಯಯನದ ವಿಸ್ತಾರಕ್ಕೆ ಹೋಲಿಸಿದರೆ ಅವರು ಬರೆದದ್ದು ಕಡಿಮೆ ಎನಿಸುತ್ತದೆ. ಅವರ ಆಲೋಚನೆಯ ಧಾಟಿ ಇತರರಿಗಿಂತ ಭಿನ್ನ ಹಾಗು ಹೊಸತನದಿಂದ ಕೂಡಿದ್ದು. ಅವರು ಏನೇ ಬರೆದರೂ ಮೊದಲು ನಮ್ಮ ಯಜಮಾನರಿಗೆ ತೋರಿಸಬೇಕು, ನಂತರ ನನಗೆ ಓದಿ ಹೇಳಿ, ನಾನು ಅವರ ಲೇಖನದಲ್ಲಿ ಬೇರೆಯವರು ಇದುವರೆಗೆ ಹೇಳಿರದ ಹೊಸ ಅಂಶಗಳಿವೆ ಎಂದು ಹೇಳಿದ ಮೇಲೆಯೇ ಅವರಿಗೆ ಸಂತೋಷ. ತಮಗನ್ನಿಸಿದ್ದನ್ನು ಹೇಳುವ ಸತ್ಯಪ್ರಿಯತೆ, ಎದೆಗಾರಿಕೆ ಅವರಿಗಿದೆ. ಅದರಿಂದಾಗಿ ಅನೇಕ ವೇಳೆ ಅವರು ಬೇರೆಯವರ ನಿಷ್ಠುರಕ್ಕೆ ಒಳಗಾದದ್ದೂ ಉಂಟು.

ಅವರ ಪತ್ನಿ ಸಾವಿತ್ರಿ ಮುಗ್ಧ, ನಿರಾಡಂಬರ ಸರಳಜೀವಿ. ಈ ದಂಪತಿಗಳು ಇಷ್ಟು ದೀರ್ಘ ಕಾಲದವರೆಗೆ ನಮ್ಮ ಕುಟುಂಬದ ಬಗೆಗೆ ತೋರಿರುವ ಪ್ರೀತಿ, ವಿಶ್ವಾಸ ಅಪಾರವಾದದ್ದು. ನಿರ್ಮಲವಾದ ಪ್ರೀತಿ, ಸ್ನೇಹಗಳು ದುರ್ಲಭವಾದ ಇಂದಿನ ದಿನಗಳಲ್ಲಿ ಇಂಥ ಸರಳ ಸಜ್ಜನ, ಆತ್ಮೀಯ ಅಣ್ಣನನ್ನು ಪಡೆದದ್ದು ನನ್ನ ಪುಣ್ಯ. ಅವರಿಗೆ ಜೀವನದಲ್ಲಿ ಇನ್ನೂ ಹೆಚ್ಚಿನ ಯಶಸ್ಸು, ಸಂತೋಷ, ನೆಮ್ಮದಿ ದೊರಕಲಿ ಎಂಬುದೇ ಈ ತಂಗಿಯ ಹಾರೈಕೆ. ♦

12. ವಿಮರ್ಶೆಯ ನೇರ ಮಾತುಗಾರ

ಬಾ.ಹ. ರಮಾಕುಮಾರಿ

ತುಮಕೂರು ಸರ್ಕಾರಿ ಕಾಲೇಜಿನಲ್ಲಿ 1971-72 ರಲ್ಲಿ ಪ್ರಥಮ ಬಿಎ ಓದುವ ಸಂದರ್ಭದಲ್ಲಿ ಸಿದ್ಧರಾಮಣ್ಣ ಲೇಡೀಸ್ ಹಾಸ್ಟೆಲ್‌ನಲ್ಲಿದ್ದಾಗ ಸಿದ್ಧಗಂಗಾ ಕಾಲೇಜಿನಲ್ಲಿ ಓದುತ್ತಿದ್ದವರು, ನನ್ನ ಸಹನಿವಾಸಿಗಳಾಗಿದ್ದವರು ಕೆ.ಜಿ. ನಾಗರಾಜಪ್ಪನವರ ಬಗ್ಗೆ ಹೇಳುತ್ತಿದ್ದ ಮಾತುಗಳನ್ನಷ್ಟೇ ಕೇಳುತ್ತಿದ್ದೆ. ಎಂದೂ ಅವರನ್ನು ಕಂಡಿರಲಿಲ್ಲ. ಅವರು ಸಾಹಿತಿಗಳೆಂಬುದೂ ಸಹ ಆಗ ತಿಳಿದಿರಲಿಲ್ಲ. ಆಗ ಅವರ ಬಗ್ಗೆ ಕೇಳುತ್ತಿದ್ದ ಮಾತುಗಳೆಲ್ಲಾ ಅವರನ್ನು ನೋಡಬೇಕೆನ್ನುವ ಕುತೂಹಲವನ್ನೇನೂ ಹುಟ್ಟಿಸುತ್ತಿರಲಿಲ್ಲ. ಸಧ್ಯ ಅವರು ನಮಗೆ ಉಪನ್ಯಾಸಕರಾಗಿಲ್ಲವಲ್ಲ ಎಂದೆನಿಸುತ್ತಿತ್ತು. ಬಹುಶಃ ಅವರ ನೇರ, ನಿರ್ಭಿಡೆಯ, ಸ್ಪಷ್ಟವಾದ ಮಾತುಗಳು, ಪಾಠದ ವಿವರಗಳು, ಒರಟುತನವನ್ನು (ಅವರ ಸ್ವಭಾವದ) ಸೇರಿಸಿಕೊಂಡು ವಿದ್ಯಾರ್ಥಿನಿಯರಿಗೆ ಸ್ವಲ್ಪ ಇರಿಸು-ಮುರಿಸನ್ನುಂಟು ಮಾಡುತ್ತಿದ್ದಿರಬಹುದು. ಹೀಗಾಗಿ ಕೆ.ಜಿ.ಎನ್ ಎಂದರೆ ತರಗತಿಯಲ್ಲಿ ಅಶ್ಲೀಲವಾಗಿ ಪಾಠ ಮಾಡುವವರು ಎಂಬ ಅಭಿಪ್ರಾಯ ಆಗ ಇತ್ತು. ಆಗಿನ ಸಂದರ್ಭದಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಹ ಶಿಕ್ಷಣವಿದ್ದಾಗ್ಯೂ ಹುಡುಗರೊಂದಿಗೆ ಮುಕ್ತವಾಗಿ ಬೆರೆಯುವ, ಮಾತನಾಡುವ ಅವಕಾಶ ಈಗಿನಷ್ಟು ಮುಕ್ತವಾಗಿರಲಿಲ್ಲ. ಯಾರಾದರೂ ಹಾಗೆ ಮಾತಾಡಿದ್ದರೆ, ಹೋಟೆಲು, ಸಿನಿಮಾ ಮಂದಿರದಲ್ಲಿ ಒಟ್ಟಿಗೆ ಕಂಡಿದ್ದರೆ ಇಡೀ ಕಾಲೇಜಿನ ಅಷ್ಟೇಕೆ ಇಡೀ ತುಮಕೂರಿನ ವಿದ್ಯಾರ್ಥಿವಲಯದಲ್ಲಿ ಸುದ್ದಿಯಾಗುತ್ತಿತ್ತು. ಗ್ರಾಮೀಣ ಭಾಗದಿಂದ ಬಂದಂತಹ ಹುಡುಗಿಯರು ಮುಗ್ಧತೆಯಲ್ಲಿ ಬಳಲುತ್ತಿದ್ದರೆ, ಪಟ್ಟಣ ಪ್ರದೇಶದ ಹುಡುಗಿಯರು ಮಡಿವಂತಿಕೆಯಿಂದ ತೊಳಲಾಡುವಂತಹ ಸ್ಥಿತಿ ಇತ್ತು. ಆದ ಕಾರಣ ಕೆ.ಜಿ.ಎನ್‌ರವರ ನಿರ್ಭಿಡೆಯ ರೀತಿ ನೀತಿ, ಮಾತು, ಹುಡುಗಿಯರಿಗೆ ಆ ರೀತಿ ಅನ್ನಿಸಿರಬಹುದು ಎಂದು ಈಗ ನನಗೆ ಅನ್ನಿಸುತ್ತೆ. ಅಷ್ಟೆಲ್ಲಾ ಹುಡುಗಿಯರು ಆ ರೀತಿ ಹೇಳಿದರೂ ಕೂಡ ಕೆ.ಜಿ.ಎನ್ ಬಗ್ಗೆ ಕುತೂಹಲವಾಗಲೀ, ಆಸಕ್ತಿಯಾಗಲೀ, ಅನಾಸಕ್ತಿಯಾಗಲೀ ನನ್ನಲ್ಲಿ ಉಂಟಾಗಲಿಲ್ಲ. ಓದು ಮುಗಿದು, ಉದ್ಯೋಗ ಹಿಡಿದು, ಸಾಹಿತ್ಯಕವಾಗಿ ಕಣ್ಣು ಬಿಡತೊಡಗಿದಾಗ ತುಮಕೂರಿನಲ್ಲಿರುವ ಸಾಹಿತಿಗಳು, ಲೇಖಕರು, ಅವರ ಪುಸ್ತಕಗಳು ಪರಿಚಯವಾಗ ತೊಡಗಿದಾಗ ನನಗೆ ಕಾಲೇಜಿನಲ್ಲಿ ಮೇಷ್ಟ್ರಾಗಿದ್ದ ಶ್ರೀ ಹೆಚ್.ಜಿ. ಸಣ್ಣಗುಡ್ಡಯ್ಯನವರು, ಸಮುದಾಯದ ಕಲಾವಿದರಾಗಿ ಗಮನಸೆಳೆದ ಲೋಹಿತಾಶ್ವರವರು ಮತ್ತು ಕೆ.ಜಿ.ಎನ್‌ರವರ ಕಡೆಗೆ ನನ್ನ ಗಮನ ಹರಿಯಿತು. ಅವರು ಸಾಹಿತಿಗಳಂತೆ, ಪುಸ್ತಕ ಬರೆದಿದ್ದಾರಂತೆ ಎನ್ನುವ ಕುತೂಹಲ ನನ್ನೊಳಗೆ ಗೂಡು ಕಟ್ಟತೊಡಗಿತ್ತು. ಆದರೆ ಎಂದೂ ಅವರನ್ನು ಭೇಟಿಯಾಗಿರಲಿಲ್ಲ ಹಾಗೂ ನೋಡಿರಲಿಲ್ಲ.

ಕೆ.ಜಿ.ಎನ್.ರವರನ್ನು ಪ್ರಥಮವಾಗಿ ಎಲ್ಲಿ ಭೇಟಿಯಾಗಿದ್ದೆ ಎಂಬ ನೆನಪು ಇಲ್ಲ.

ಅಂತೂ ಅವರನ್ನು ನೋಡುವ ಹೊತ್ತಿಗೆ ಮನಸ್ಸು ಬುದ್ಧಿ ಪಕ್ವಗೊಂಡಿದ್ದರಿಂದ ಕಾಲೇಜು ದಿನದ ಅಭಿಪ್ರಾಯ ಬದಲಾಗಿತ್ತು. ಸಾಹಿತ್ಯಕವಾಗಿ ಅವರನ್ನು ನೋಡತೊಡಗಿದೆ. ತುಂಬಾ ಹತ್ತಿರದಿಂದ ನೋಡುವ ಸಂದರ್ಭ-ನಾನು ಮತ್ತು ಬಿ.ಸಿ. ಶೈಲಾ ಸೇರಿ 'ಧ್ವನಿಗಳು' ಎಂಬ ಕವನ ಸಂಕಲನವನ್ನು ಸಂಪಾದಿಸಿ ಅಚ್ಚು ಹಾಕಿಸಲು ಮುನ್ನುಡಿಗಾಗಿ ಅವರ ಬಳಿ ಹೋದೆವು. ಅಷ್ಟರ ವೇಳೆಗೆ ಕೆ.ಜಿ.ಎಸ್ ವಿಮರ್ಶಾ ಕ್ಷೇತ್ರದಲ್ಲಿ ನಿಷ್ಪಕ್ಷಪಾತ ನೇರ ಮಾತುಗಾರರು ಎಂಬ ಹೆಸರು ಪಡೆದಿದ್ದರು. ನಮ್ಮ ಕೆಲಸವನ್ನು ಸರಿಯಾಗಿ ಮೌಲ್ಯಮಾಪನ ಮಾಡಲು ಅವರೇ ಸರಿ ಎಂಬ ಅಭಿಲಾಷೆ ನಮಗೆ ಮೂಡಿದ್ದರಿಂದ, ಮುಂದಿನ ಬೆಳವಣಿಗೆಗೆ ಅದು ಮಾರ್ಗದರ್ಶಕವಾಗುತ್ತದೆಯಾಗಿ ಕಟುವಾಗಿಯೇ ವಿಮರ್ಶೆ ಮಾಡಲಿ ಎಂದು ಭಾವಿಸಿ ಅವರಿಗೇ ದುಂಬಾಲು ಬಿದ್ದೆವು. ಹೊಸಬರ ಕವನಗಳು, ಒಂದು ಊರಿನವಲ್ಲ, ಒಂದು ಜಿಲ್ಲೆಯವಲ್ಲ, ಕರ್ನಾಟಕ ರಾಜ್ಯದ ವಿವಿಧ ಭಾಗಗಳ ಹಿರಿ ಮರಿ ಕವಿಗಳ ಕವನಗಳು. ಅವುಗಳನ್ನು ಓದಿ ಸಹನೆಯಿಂದ ಸುದೀರ್ಘವಾದ ಮುನ್ನುಡಿಯನ್ನೇ ಬರೆದುಕೊಟ್ಟರು. ಕೆಲವರು ಅದನ್ನು ನೋಡಿ ಮೂಗಿಗಿಂತ ಮೂಗುತಿಯೇ ಭಾರ ಎಂದದ್ದೂ ಉಂಟು. ಆದರೆ ಅವರ ಮುನ್ನುಡಿ ಕೇವಲ ಪ್ರಶಂಸೆಯಾಗದೇ ವಿಮರ್ಶಾ ಲೇಖನವಾಗಿದ್ದು, ನಮಗೆ ಇಷ್ಟವಾಯಿತು. ಪ್ರಾರಂಭದಲ್ಲಿ ಅವರ ಜೊತೆ ಮಾತಾಡಲು ನನಗೆ ಹಿಂಜರಿಕೆ ಇತ್ತು. ಯಾಕೆಂದರೆ ಅವರೊಂದಿಗೆ ಮಾತಾಡಬೇಕಾದರೆ ನಮ್ಮ ತಲೆ ಹಾಗೂ ಮನಸ್ಸಿನಲ್ಲಿ ಸಾಹಿತ್ಯಿಕ ವಿಚಾರಗಳು ಇರಬೇಕಿತ್ತು. ಅವರ ಓದು, ಅವರ ಅಭಿಪ್ರಾಯ, ಅವರ ಬರವಣಿಗೆ, ಹೊಸ ಆಲೋಚನೆ, ಹೊಸ ಒಳನೋಟ ಎಲ್ಲವನ್ನೂ ಮುಕ್ತವಾಗಿ ಚರ್ಚಿಸುತ್ತಿದ್ದರು.

ಅವರ 'ಮರುಚಿಂತನೆ' ಕೃತಿ ಬಂದಾಗ ಅದೆಷ್ಟು ಹೊಸ ದೃಷ್ಟಿಗಳನ್ನು ಸಾಹಿತ್ಯವಲಯಕ್ಕೆ ನೀಡಿದರು ಎಂಬುದು ನನಗೆ ಅದ್ಭುತವೆನಿಸಿತು. ಆದರೆ ಸ್ಥಳೀಯವಾಗಿ ಅವರನ್ನು ಸಾಕಷ್ಟು ಗುರುತಿಸಲಿಲ್ಲವೇನೋ ಎಂಬ ಕೊರತೆಯೂ ಕಂಡು ಬಂದಿತು. ಸಾಹಿತ್ಯಕವಾದ ಅವರ ವಿಮರ್ಶೆ ಹಾಗೂ ದಲಿತ ಚಿಂತನೆಗಳ ಮೂಲ ನೆಲೆಯನ್ನು ಅಲ್ಲಿ ಗುರುತಿಸಬಹುದು. ಪ್ರತಿಯೊಂದು ಲೇಖನಗಳಲ್ಲಿ ಹೊಸ ಚಿಂತನೆಗಳ ಹೊಳಹು ಕಾಣಬರುತ್ತಿದ್ದರಿಂದ ಅವರ ಹೊಸ ಲೇಖನಗಳನ್ನು ಓದಬೇಕೆನ್ನುವ, ಅವರ ಭಾಷಣವನ್ನು ಕೇಳಬೇಕೆನ್ನುವ ಹಂಬಲ ಉಂಟಾಗುತ್ತಿತ್ತು. ಅವರು ಮಿತ ಭಾಷಿಕರಾಗಿರಲಿಲ್ಲ. ಮಾತುಗಾರಿಕೆ, ಉಪನ್ಯಾಸಕ್ಕೆ ನಿಂತರೆ ಇಷ್ಟವೂ ಆಗುತ್ತಿತ್ತು. ತಲೆನೋವೂ ಬರುತ್ತಿತ್ತು. ಸಂಘಟಕರಿಗೆ ಕಾಲದ ಸಮಸ್ಯೆಯೂ ಆಗುತ್ತಿತ್ತು ಎನ್ನುವುದನ್ನೂ ಕೂಡ ನಾವೆಲ್ಲಾ ಅಷ್ಟೇ ಪ್ರೀತಿಯ ಮುನಿಸಿನಿಂದ ಹಂಚಿಕೊಳ್ಳುತ್ತಿದ್ದೆವು. ಅವರಿಗೆ ಕಡಿಮೆ ಮಾತನಾಡಿ ಎಂದು ಹೇಳುವುದಾಗಲೀ, ಚಿಕ್ಕದಾಗಿ ಬರೆಯಿರಿ ಎಂದು ಹೇಳುವುದಾಗಲೀ ಸಾಧ್ಯವಿರಲಿಲ್ಲ ಅಥವಾ ಅವರಿಗೇ ಸ್ವತಃ ಚಿಕ್ಕದಾಗಿ ಬರೆಯುವುದು ಸಾಧ್ಯವಾಗಲಿಕ್ಕಿಲ್ಲ. ಅವರ ಯಾವುದೇ ಲೇಖನ, ಪ್ರಬಂಧವಾಗಲೀ ದೊಡ್ಡದೇ ಆಗಿರು (ಅವರದೂ ದೊಡ್ಡ ವ್ಯಕ್ತಿತ್ವವೇ) ವುದನ್ನು ಕಾಣಬಹುದು. ಅಷ್ಟು ವಿವರವಾಗಿ ಉಪನ್ಯಾಸವಿರಲಿ, ಲೇಖನವಿರಲಿ ಸಂಪೂರ್ಣವಾಗಿ ಚರ್ಚಿಸುತ್ತಾರೆ.

ಕೆ.ಜಿ.ಎನ್ ಹೊರ ನೋಟಕ್ಕೆ ಯಾರಿಗೂ ಅರ್ಥವಾಗರು. ಕೆಲವೊಂದು ಧೋರಣೆಗಳು ಮೇಲ್ನೋಟಕ್ಕೆ ಕಹಿ ಎನಿಸಿದರೂ ಸೂಕ್ಷ್ಮವಾಗಿ ಅರ್ಥ ಗ್ರಹಿಕೆಯಾಗುತ್ತ ಬಂದಂತೆ ಎಂತಹವರೂ ಅವರನ್ನು ಒಪ್ಪಬೇಕು. ಇವರು ಸಾಹಿತ್ಯ ಅಕಾಡೆಮಿ ಸದಸ್ಯರಾಗಿದ್ದಾಗ ಮಾಡಿದ ಕಾರ್ಯ ವಿಶಿಷ್ಟವಾದುದು. ನಿವೃತ್ತಿ ನಂತರವೂ ವಿದ್ಯೋದಯ ಕಾನೂನು ಕಾಲೇಜಿನಲ್ಲಿ ಸೇವೆ ಸಲ್ಲಿಸುವ, ವಿವಿಧ ಸಾಹಿತ್ಯ ವಿಚಾರ-ಸಂಕಿರಣಗಳನ್ನು ಸಂಘಟಿಸುವ ಮೂಲಕ, ವೈಯಕ್ತಿಕ ಕೊಡುಗೆಯನ್ನು ನೀಡುವ ಮೂಲಕ ಸಾಹಿತ್ಯ ಕ್ಷೇತ್ರವನ್ನು ಬೆಳೆಸಿದ್ದಾರೆ.'ಸಮಕಾಲೀನ' ಎಂಬ ಮುಕ್ತ ಚಿಂತನೆಯ ಸಾಹಿತ್ಯ ಸಾಂಸ್ಕೃತಿಕ ವೇದಿಕೆಯನ್ನು ತುಮಕೂರಿನಲ್ಲಿ ಸ್ಥಾಪಿಸಿ ನೂರಾರು ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಹತ್ತಾರು ಯುವ ಬರಹಗಾರರನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದಾರೆ. ಮುನ್ನುಡಿ,ಬೆನ್ನುಡಿ ಬರೆದು ಹರಸಿದ್ದಾರೆ.

ಅಂತೇ ಗುಬ್ಬಿಯಲ್ಲಿ ನಡೆದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಗರಿಮೆ ಕೆ.ಜಿ.ಎನ್ ಪಾಲಿಗಿದೆ. ಅತ್ಯುತ್ತಮ ವಿಮರ್ಶಕರಾಗಬಹುದಿದ್ದ ಅವರು ಆ ಕ್ಷೇತ್ರದಲ್ಲಿ ಹೆಚ್ಚು ಬರೆಯಲಿಲ್ಲ. ಅಬ್ರಾಹ್ಮಣ ಲೇಖಕನೊಬ್ಬ ಬ್ರಾಹ್ಮಣ ವಿಮರ್ಶಾ ಕೋಟೆಗೆ ಲಗ್ಗೆ ಇಟ್ಟು ಕೋಟೆ ದಾಟಿ ವಿಮರ್ಶೆಯಲ್ಲಿ ಹೊಸ ದಾಖಲೆ ನಿರ್ಮಿಸುವ ಶಕ್ತಿ ಸಾಮರ್ಥ್ಯವಿದ್ದೂ ಯಾಕೆ ಹೊರಗುಳಿದರೋ ಅರ್ಥವಾಗುವುದಿಲ್ಲ. ಇಂತಹವರು ವಿಮರ್ಶಾ ಕ್ಷೇತ್ರದಲ್ಲಿದ್ದರೆ ಎಷ್ಟೋ ಅಜ್ಞಾತ ಕೃತಿಗಳು ಲೇಖಕರು ಬೆಳಕಿಗೆ ಬರಲು, ಅನರ್ಹ ಕೃತಿಗಳು ಬೆಳಕಿನಿಂದ ಹಿಂದೆ ಸರಿಯಲು ಸಂದರ್ಭ ಸಿಗುತ್ತಿತ್ತು. ಈಗಲೂ ಕೆ.ಜಿ.ಎನ್ ಸಾಹಿತ್ಯ ಕ್ಷೇತ್ರದ ವಿಮರ್ಶಕರಾಗಿ ವಿಮರ್ಶಾ ಕ್ಷೇತ್ರದ ದಿಗ್ಗಜವಾಗಬೇಕು ಎಂದು ನನ್ನ ಆಶಯ. ನಿಷ್ಠುರ ಪ್ರೀತಿಯ, ನೇರ ನಡೆ ನುಡಿಯ, ಸ್ಪಷ್ಟ ಮಾತಿನ, ನಿಷ್ಪಕ್ಷಪಾತ ಮನಸ್ಸಿನ ಒಬ್ಬ ಸಹೃದಯನನ್ನು ವಿಮರ್ಶಾಕ್ಷೇತ್ರ ಹಂಬಲಿಸುತ್ತಿದೆ ಎಂಬುದನ್ನು ಕೆ.ಜಿ.ಎನ್ ಮರೆಯದಿರಲಿ. ♦

> "ಶ್ರಮ ಜೀವನಕ್ಕೆ ಬ್ರಾಹ್ಮಣ ಬದುಕು ಎರವಾಯಿತು. ಧಾರ್ಮಿಕ ಜೀವನಕ್ಕೆ ಶೂದ್ರರ ಜೀವ ಎರವಾಯಿತು. ಶೂದ್ರರ ಶ್ರಮದ ಫಲ ಬ್ರಾಹ್ಮಣರಿಗೆ ಮೂರ್ತಸ್ವರೂಪದಲ್ಲಿ ದೊರೆಯಿತು. ಬ್ರಾಹ್ಮಣರ (ಲೋಕ ಸಂಗ್ರಹದ) ಧಾರ್ಮಿಕ ಜ್ಞಾನದ ಫಲ ಶೂದ್ರರಿಗೆ ಅಮೂರ್ತ ಸ್ವರೂಪದ್ದಾಯಿತು. ಇಂದು ಮುಂದಿನ ಸಾಮರಸ್ಯ ಅಥವಾ ಸಂಘರ್ಷಕ್ಕೆ ಬೀಜವಾಯಿತು."
>
> – *ಪ್ರೊ|| ಕೆ.ಜಿ.ನಾಗರಾಜಪ್ಪ*

13. ಸರಳ ಜೀವಿ

ಎಸ್.ಜಿ. ರಾಮಚಂದ್ರ

ಪ್ರೊ॥ ಕೆ.ಜಿ. ನಾಗರಾಜಪ್ಪನವರ ಬಗ್ಗೆ ಪ್ರಾರಂಭದಲ್ಲಿ ನಾನು ಇತರರಿಂದ ಕೇಳಿದ್ದಕ್ಕಿಂತಲೂ ಹೆಚ್ಚಿನದಾಗಿ ನಾನು ಅವರನ್ನು ಖುದ್ದಾಗಿ ಕಂಡದ್ದು, ಭಾಷಣಗಳಲ್ಲಿ ಭಾಗವಹಿಸಿದ್ದು, ಇವರ ಸಂಗಡ ಸಂಭಾಷಿಸಿದ್ದು, ಕೆಲವು ವಿಚಾರಗಳಲ್ಲಿ ಚರ್ಚಿಸಿದ್ದು, ಕೊಂಚವಾದಿಸಿದ್ದು, ಹಾಗೂ ಇವೆಲ್ಲದರಿಂದ ಅನುಭವ ಪಡೆದದ್ದು ಹೆಚ್ಚು. ಸುಮಾರು ಹತ್ತು ವರ್ಷಗಳ ಹಿಂದೆ ಇವರ ಮೊದಲನೆ ಪರಿಚಯ. ಇವರ 'ಮರುಚಿಂತನೆ' ಕೃತಿಯಲ್ಲಿ ಅಡಕವಾಗಿರುವ ವಿಮರ್ಶಾತ್ಮಕ ಹಾಗೂ ತಾರ್ಕಿಕ ಶೈಲಿಯ ಸಾಹಿತ್ಯ ವಿಚಾರ ನನ್ನನ್ನು ಹೆಚ್ಚು ಆಕರ್ಷಿಸಿತು. ಇವರು ಬರೆದ 'ದೊಡ್ಡ ಸಂಕಣ್ಣ ನಾಯಕ' ಪುಸ್ತಕ ನಾನಿನ್ನೂ ಓದದೆ ಇದ್ದರೂ, ಆ ಪತ್ರ ಪುಸ್ತಕದ ಬಗ್ಗೆ ಸಾಕಷ್ಟು ಕೇಳಿದ್ದೇನೆ. ಕೆಲವು ಸ್ಮರಣ ಸಂಚಿಕೆಗಳಲ್ಲಿನ ಇವರ ಬರವಣಿಗೆ ಹಾಗೂ ಸಾಹಿತ್ಯ ಶೈಲಿಯು ನನ್ನನ್ನು ಪುನಃ ಪುನಃ ಓದುವ ಹಾಗೆ ಮಾಡಿತು. ಅಷ್ಟೇ ಘನವಾಗಿ ಕೆಲವು ಸಾಹಿತ್ಯ ಕೃತಿಗಳಿಗೆ ಇವರು ಬರೆದಿರುವ ಮುನ್ನುಡಿಗಳನ್ನು ಓದಿರುವೆನು. ಇವರ ಬರಹಗಳನ್ನು ಪುನಃ ಪುನಃ ಓದುತ್ತಿರುವಾಗ ಅವುಗಳಲ್ಲಿ ಅಡಗಿರುವ ಸಾಹಿತ್ಯ ಸಂಪತ್ತಿನ ಬಗೆಗೆ ಹೆಮ್ಮೆ ಮೂಡಿ, ಅವರ ವ್ಯಕ್ತಿತ್ವದ ಬಗ್ಗೆ ನನ್ನ ತಲೆಯಲ್ಲಿ ಮರುಚಿಂತನೆ ಆವರಿಸಿದಾಕ್ಷಣದಿಂದ ಅವನ್ನೇ ಅಧ್ಯಯನ ಮಾಡಿದರೆ ಹೇಗೆ ಎಂದೆನಿಸಿತು.

ಸದಾ ದೀರ್ಘಾಲೋಚನೆಯ ಗುಂಗಿನಲ್ಲಿಯೇ ತೇಲಿಮುಳುಗುತ್ತಿರುವ ನಾಗರಾಜಪ್ಪನವರಿಗೆ ಹಾಸ್ಯಪ್ರವೃತ್ತಿ ಕಡಿಮೆ. ಹಾಸ್ಯ ಚಟಾಕಿ ಇದ್ದಕಡೆ ನಗೆ ಮುಖದಿಂದ ಸ್ಪಂದಿಸುವ ವ್ಯಕ್ತಿತ್ವ. ಇವರ ಬರವಣಿಗೆಯಲ್ಲೂ ಅಷ್ಟೆ, ಯಾವ ವಿಧವಾದ ಹಾಸ್ಯದ ಶೈಲಿ ನಾಕಾಣೆ. ಇವರ ನಳಪಾಕದ ರುಚಿ ನಾನಿನ್ನೂ ಸವಿಯದೇ ಇದ್ದರೂ, ಇವರು ಸ್ವತಃ ನಳಪಾಕ ಬಲ್ಲವರಂತೆ. ಇವರ ವಿದ್ಯಾರ್ಥಿ ಜೀವನದಲ್ಲಿಯೇ ಅಂದರೆ, ಬ್ರಹ್ಮಚಾರಿಯುಗದಲ್ಲಿಯೇ ಓದಿನ ಜೊತೆ ಜೊತೆಯಲ್ಲಿ ನಳಪಾಕದ ತಯಾರಿಯೂ ನಡೆಸುತ್ತಿದ್ದರಂತೆ. ಇದರಿಂದ ಇವರ ಶ್ರೀಮತಿಯವರಿಗೆ ಬಹಳಷ್ಟೇ ಇರಿಸುಮುರಿಸಾಗಿರಬೇಕು. ಏಕೆಂದರೆ ಗಂಡಸರು ರುಚಿ ಹಿಡಿಯುವ ನಳಪಾಕದ ಪ್ರವೀಣರಾಗಬಾರದೆಂದೇ ಅನೇಕ ಹೆಂಗಸರ ವಾದ. ಕಾರಣ, ತಿಂಡಿಗಾಗಿ ಹೆಂಗಸರ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆಂಬ ಪ್ರೀತಿ ವಾತ್ಸಲ್ಯದ ಅಸೂಯೆ. ಬಡತನದ ಬೇಗೆಯಿಂದ ಬೆಂದ ಇವರ ಜೀವನದ ಬದುಕು. ಅದಕ್ಕಾಗಿಯೇ ಇರಬಹುದು ಇವರು ಯಾವುದೇ ಕೆಟ್ಟ ಅಭ್ಯಾಸಗಳನ್ನು ಮೈಗೂಡಿಸಿಕೊಳ್ಳಲಿಲ್ಲ. ಬಡತನದಲ್ಲಿದ್ದವರಿಗೆ ಎಂತಹದೋ ಒಂದು ತರಹೆಯ ಕೊರತೆ ಸದಾ ಕಾಡಿಸುತ್ತಿರುತ್ತದೆ. ಆ ಕೊರತೆಯನ್ನು ತುಂಬಿಸುವುದಕ್ಕೆ ಏನೆಲ್ಲಾ ತರಹೆಯ ಕೃಷಿ ಕಸರತ್ತು ಮಾಡುತ್ತಾರೆ. ಜೀವನವಿಡೀ ಅಂದರೆ, ಆ ಕೊರತೆ ತುಂಬಿದ ಮೇಲೂ ಅದರ ಅರಿವು ಇಲ್ಲದೆ ಮತ್ತೂ ತುಂಬಿಸುವ ಕಾತುರದ ದಾಹ. ಈ ರೀತಿಯ

ಸೆಳೆತ ಧೀಮಂತ ವಿಚಾರವಾದಿಯಾದ ನಾಗರಾಜಪ್ಪನವರನ್ನು ಸಾಹಿತ್ಯದ ಉತ್ತುಂಗದತ್ತ ಎಳೆದೊಯ್ಯುತ್ತಿದೆ.

ನಾಗರಾಜಪ್ಪನವರು ಯಾವುದೇ ವಿಷಯ ಆರಿಸಿಕೊಂಡರೂ ವ್ಯಾಪಕವಾಗಿ ಬರೆಯುತ್ತಾರೆ. ಆಳವಾಗಿ ಚಿಂತಿಸುತ್ತಾರೆ. ನಗ್ನ ಸತ್ಯವಿಷಯಗಳನ್ನು ಎಂದೂ ತಿರುಚಿ ಬರೆಯುವ ಅಭ್ಯಾಸ ಇವರಲಿಲ್ಲ. ಅಂತೆಯೇ ಇವರ ಬರವಣಿಗೆ ಉನ್ನತ ಮಟ್ಟದಲ್ಲಿ ಚರ್ಚೆಯಾಗುತ್ತದೆ . ಕನ್ನಡ ಎಂ.ಎ, ಹಾಗೂ ಪಿ.ಹೆಚ್.ಡಿ ವ್ಯಾಸಂಗ ಮಾಡುತ್ತಿರುವವರೂ ಇವರ ಬರವಣಿಗೆಗಳನ್ನು ತಮ್ಮ ವ್ಯಾಸಂಗದ ಒಂದು ಭಾಗವೆಂದೇ ಪರಿಗಣಿಸುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಈ ರೀತಿ ಕೆಲವಾರು ವಿಚಾರಗಳನ್ನು ನಾಗರಾಜಪ್ಪನವರಿಗೂ ಅರಿವಿಲ್ಲದಹಾಗೆ ನಡೆಯುತ್ತಿರುವುದು. ಅಂದಹಾಗೆ, ಇವರ ಸಾಹಿತ್ಯದ ಕೃತಿಗಳಿಗೆ ಗೌರವಾನ್ವಿತ ಪ್ರಶಸ್ತಿಗಳು ದೊರೆತಿರುವುದು ಒಂದು ಸಂತಸದ ವಿಚಾರ.

ಪ್ರೊ॥ ನಾಗರಾಜಪ್ಪನವರ ಸಂಗಡದ ಖಾಸಗಿ ಸಂಭಾಷಣೆಯಲ್ಲಿಯಾ ಅಷ್ಟೇ ಗಂಭೀರದ ಗತ್ತು ಅವರದು. ಲೋಪವಿಲ್ಲದ ಕಟ್ಟೆಚ್ಚರದ ನುಡಿಮುತ್ತುಗಳು ಇವರ ಖಾಸಗಿ ವಿಚಾರದಲ್ಲಿಯೂ ಕೂಡ. ದೊಡ್ಡಸ್ತಿಕೆಗಾದರೂ ಇವರು ತಮ್ಮ ಬದುಕಿನ ಇತಿಹಾಸವನ್ನು ಬಣ್ಣ ಹಚ್ಚಿದ ರೀತಿಯಲ್ಲಿ ವರ್ಣಿಸುವವರಲ್ಲ. ಒರಟು ಭಾಷೆಯಲ್ಲಿ ಹೇಳುವುದಾದರೆ, ಇದ್ದದ್ದನ್ನು ಇದ್ದಹಾಗೆ ಒದರಿಬಿಡುವವರಾದರೂ ಅವುಗಳು ಕೇವಲ ಬಾಯ ಹೊರಗಿನಿಂದ ಉದ್ಭವಿಸದೆ ಹೃದಯದ ಅಂತರಾಳದಿಂದ ಚಿಮ್ಮುವುದು ಕಂಡು ಬರುತ್ತದೆ. ಬರವಣಿಗೆ ಯಲ್ಲಿ ಎಷ್ಟು ಆಸಕ್ತಿ ತೋರಿಸುತ್ತಾರೋ ಅಷ್ಟೇ ಅನಾಸಕ್ತಿ ಇವರ ವೈಯಕ್ತಿಕ ಬದುಕಿನ ವಿಚಾರದಲ್ಲಿ. ಇವರ ಬದುಕಿನ ನಾಣ್ಯದ ಮತ್ತೊಂದು ಭಾಗ ಖಾಲಿ ಖಾಲಿ. ಸಾಹಿತ್ಯವನ್ನೇ ಮೈಗೂಡಿಸಿಕೊಂಡಿರುವ ನಾಗರಾಜಪ್ಪನವರು ಅದೇಕೋ ಏನೋ ತಮ್ಮ ಬಾಳಿನ ಇತರೆ ಸಂಗತಿಗಳನ್ನೇ ಮರೆತಿರುವ ಹಾಗೆ ಕಾಣುತ್ತದೆ. ಅಂದರೆ, ಸಹಜವಾಗಿ ಒಂದಿಷ್ಟು ಅಲ್ಲ, ಒಂದಷ್ಟು ಆಸ್ತಿ-ಪಾಸ್ತಿ, ನಗ-ನಾಣ್ಯ, ಮನೆ-ಬಾಗಿಲು, ವಾಹನ ಇತ್ಯಾದಿಗಳನ್ನು ಮಾಡಿಡುವ ಕಡೆಗೆ ಇವರ ಗಮನವಿನ್ನೂ ಹರಿಯಲೇ ಇಲ್ಲವೆಂಬುದು ಅವರ ಜೊತೆಯ ಒಡನಾಟದಿಂದ ತಿಳಿಯುತ್ತದೆ. ಈವರೆವಿಗೂ ಅದರ ಬಗ್ಗೆ ಪ್ರಯತ್ನಪಡದೆ ಇರುವ ಅವರಿಗೆ ಪಶ್ಚಾತ್ತಾಪವೂ ಇಲ್ಲ. ಈ ವಿಷಯದಲ್ಲಿ ನಾನು ಅವರ ಜೊತೆ ರಾಜಿಮಾಡಿಕೊಂಡಿಲ್ಲ. ಅಗತ್ಯವಾದ ಒಂದು ಸೂರನ್ನು ಮಾಡುವವರೆಗೆ ನಿಮ್ಮ ಜೊತೆ ಮಾತು ಬಿಡಬೇಕು ಎಂದು ಹೇಳುವುದು ಬಾಕಿ ಉಳಿದಿದೆ. ಹೀಗೆ ಮಾಡಿದರೆ ನಷ್ಟ ನನಗೇ. ಇವರ ಸಂಗಡದ, ಸಾಹಿತ್ಯದ ಕಂಪು ನನಗೆ ಇಲ್ಲವಾಗುತ್ತದೆ. ಆದ್ದರಿಂದ ನಯವಾದ ದಾರಿ ಹಿಡಿದು, ವಿಶ್ವಾಸದ ಕೋಪತಾಪ ಮಾಡಿಕೊಂಡಿದ್ದೂ ಆಯಿತು. ಗಡುಸಿನ ಧನಿಯಲ್ಲಿಯೂ ಹೇಳಿದ್ದಾಯಿತು. ಯಾವುದಕ್ಕೂ ಅವರು ರಾಜಿಯಾಗಲಿಲ್ಲ. ತಮ್ಮ ಬರವಣಿಗೆಗಳು ಮೈಲಿಗೆ ಯಾಗಬಾರದೆಂದು ಹಣಮಾಡಿಕೊಳ್ಳಲು ಅವಕಾಶಗಳಿದ್ದರೂ ಸನ್ನಿವೇಶಗಳನ್ನು ಉಪಯೋಗಿಸಿಕೊಳ್ಳಲಿಲ್ಲ ಇವರು. ಇವರ ಕಠಿಣವಾದ ಆದರ್ಶಗಳ ಮುಂದೆ ನನ್ನ ಗೌರವ ತುಂಬಿದ ವಿಶ್ವಾಸದ ಕೋಪತಾಪಗಳು ಏನೂ ಕೆಲಸ ಮಾಡಲಿಲ್ಲ.

ಪ್ರೊ॥ ನಾಗರಾಜಪ್ಪನವರು ಸಿದ್ಧಗಂಗಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾಗಿನ ವೃತ್ತಿ ಜೀವನ ಹಾಗೂ ಸಾಹಿತ್ಯ ಜೀವನದ ಬಗೆಗೆ ಅಲ್ಲಲ್ಲಿ ನನಗೆ ಸ್ವಲ್ಪ ಪರಿಚಯ. ಇವರ 'ಮರುಚಿಂತನೆ'ಯಲ್ಲಿನ ನಗ್ನ ಸತ್ಯ ಬರವಣಿಗೆಗಳಿಂದ ಆಗಾಗ್ಗೆ ಕೆಲವು ಕಹಿ ಘಟನೆಗಳು ಅಲ್ಲಿ ನಡೆದಿರುವುದು, ಅದಕ್ಕೆ ಇವರು ಎದೆಗುಂದದೆ ತಮ್ಮತನವನ್ನು ಉಳಿಸಿಕೊಳ್ಳಲು ಸದಾ ಶಿಸ್ತಿನ ಸಂಯಮದ ಚಿಂತನೆಯತ್ತ ಗಮನ ಹರಿಸಿದುದು ತಿಳಿಯಿತು. ಪ್ರಾಣ ಬೆದರಿಕೆಗೂ ಅಂಜದ ಇವರು, ಸಲ್ಲದ ವಿಷಯಗಳಲ್ಲಿ ಎಂದೂ ರಾಜಿ ಸೂತ್ರ ಅನುಸರಿಸಿದ್ದಿಲ್ಲವೆಂಬುದು ಇವರ ವಾಗ್ಝರಿಯಿಂದ ಗೊತ್ತಾಗುತ್ತದೆ. ಯಾವುದೇ ಪ್ರಭಾವಿ ವ್ಯಕ್ತಿಗಳ ಅಥವಾ ಆಮಿಷಗಳ ಪ್ರಭಾವಕ್ಕೆ ಒಳಗಾಗಿ ಸಂದರ್ಭಕ್ಕೆ ತಕ್ಕಹಾಗೆ ತಮ್ಮ ನಿಲುವನ್ನು ಬದಲಿಸದ ಅವರ ವ್ಯಕ್ತಿತ್ವ ಧೀಮಂತವಾದದ್ದು. ಇವರ ಬರವಣಿಗೆಗಳಲ್ಲಿ ಚೈತನ್ಯದ ಚಿಲುಮೆ ಸದಾ ಚಿಮ್ಮುತ್ತಿರುತ್ತದೆ. ಅಧ್ಯಯನಕ್ಕೆಂದು ಕ್ಷೇತ್ರ ಕಾರ್ಯಕ್ಕೆ ಹೊರಟಾಗ ಈ ಇಳಿವಯಸ್ಸಿನಲ್ಲಿಯೂ ಅವರ ಉತ್ಸಾಹ, ಹುಮ್ಮಸ್ಸು ಕಂಡು ಸಂತೋಷವಾಯಿತು. ಬುಡಮುಟ್ಟ ಶೋಧಿಸದೆ, ವಿಷಯವನ್ನು ಒರೆಗೆ ಹಚ್ಚದೆ ಯಾವುದೇ ತೀರ್ಮಾನಕ್ಕೆ ಬರುಂತಹವರಲ್ಲ. ಇದನ್ನು ನಾನು ಅವರ ಜೊತೆಗಿದ್ದು ಪ್ರತ್ಯಕ್ಷವಾಗಿ ಕಂಡಿದ್ದೇನೆ.

ಕೆ.ಜಿ.ನಾ. ರವರದು ಸರಳವಾದ ಬದುಕಿನ ಮಾರ್ಗ. ಇತರರೊಂದಿಗೆ ಪೈಪೋಟಿ ಜೀವನ ನಡೆಸುವುದು ಇವರಿಗೆ ನಿಷಿದ್ಧ. ತೋರಿಕೆಯ ಜೀವನ ನಡೆಸಿದ್ದೇ ಇಲ್ಲ ಈವರೆವಿಗೂ. ಮನೆಗೆ ಬಂದ ಅತಿಥಿ ಅಭ್ಯಾಗತರಲ್ಲಿ ಸೌಜನ್ಯ ಭರಿತ ಸವಿನುಡಿಗಳೊಂದಿಗೆ ಆದರ ಸತ್ಕಾರಗಳು ಸದಾ ಸಿದ್ಧ. ಇದರಲ್ಲಿ ಇವರೊಂದಿಗೆ ಇವರ ಶ್ರೀಮತಿಯವರ ಪಾತ್ರವೂ ಹಿರಿದು. ಇನ್ನುಳಿದ ನಿವೃತ್ತಿ ಜೀವನ? ತಮ್ಮ ಸಾಹಿತ್ಯವನ್ನು ಮತ್ತೂ ಶ್ರೀಮಂತಿಕೆಯಾಗಿಸುವಲ್ಲೂ, ಹಾಗೂ ಅಮೇರಿಕಾ ದೇಶದಲ್ಲಿ ತಮ್ಮ ವೃತ್ತಿಜೀವನ ನಡೆಸುವುದಕ್ಕೆ ಪ್ರಯಾಣ ಸಿದ್ಧತೆಯಲ್ಲಿರುವ ತಮ್ಮ ಏಕಮಾತ್ರ ಪುತ್ರನ ಅಭ್ಯುದಯಕ್ಕಾಗಿಯೂ ಅದನ್ನು ಮುಡುಪಾಗಿಟ್ಟಿರುವುದೇ ಒಂದು ಸಂತಸದ ಸೂತ್ರ. ಇದಕ್ಕೂ ಇವರ ಅರ್ಧಾಂಗಿಯವರ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪೂರ್ಣಸಹಕಾರ. ಯಾರಿಗುಂಟು ಯಾರಿಗಿಲ್ಲ ಈ ಯೋಗ, ಭಾಗ್ಯ ಹಾಗೂ ಗಮ್ಮತ್ತು.

ಇವರ ಖಾಸಗಿ ಗ್ರಂಥಾಲಯ ? ಪದೇ ಪದೇ ಇವರ ಗ್ರಂಥಾಲಯವನ್ನು ವೀಕ್ಷಿಸಿದ್ದೇನೆ. ಇನ್ನೂ ಸಾಕಷ್ಟು ವಿಷಯಗಳಲ್ಲಿ ಸಂಶೋಧನೆಯ ಹಾಗೂ ಅಧ್ಯಯನದ ಹಂತದಲ್ಲಿರುವ ಮತ್ತು ಅಚ್ಚು ಹಾಕಿಸುವುದಕ್ಕೆ ಸಿದ್ಧವಿರುವ ಹಾಗೂ ಅಚ್ಚಿನಲ್ಲಿರುವ ಕೆಲವಾರು ಬರವಣಿಗೆಗಳು ಅಲ್ಲಿ ತುಂಬಿರುವುದನ್ನು ಕಂಡು ಇವರ ಬಗ್ಗೆ ನನ್ನ ಅಭಿಮಾನ ಇಮ್ಮಡಿಯಾಯಿತು. ಇದುವೆ ಸಾಹಿತ್ಯ ನಿಷ್ಠ ಪ್ರೊ॥ ಕೆ.ಜಿ. ನಾಗರಾಜಪ್ಪನವರು ತಮ್ಮ ಒಂದೊಂದು ಸಾಹಿತ್ಯ ಕೃತಿಯಲ್ಲೂ ಹಾಗೂ ಲೇಖನಗಳಲ್ಲೂ ಭಾಷಣಗಳಲ್ಲೂ ಸಮಾಜಕ್ಕೆ ಕೊಡುವ ಗೌರವಾನ್ವಿತ ಕೊಡುಗೆಯಾಗಿದೆ. ಇವರಿಗೆ ಸದಾ ನನ್ನ ಶುಭ ಹಾರೈಕೆಗಳು ಸಲ್ಲುತ್ತವೆ.◆

14. ನಾನು ಕಂಡಂತೆ ಕೆ.ಜಿ.ಎನ್.

ಕೆ.ಆರ್. ನಾಯಕ್

ಪ್ರೊ|| ಕೆ.ಜಿ. ನಾಗರಾಜಪ್ಪನವರ ಪರಿಚಯ ಎಂದಿನಿಂದ ಪ್ರಾರಂಭವಾಯಿತೆಂದು ನನಗೆ ನೆನಪಿಗೆ ಬರುತ್ತಿಲ್ಲ. ಪ್ರೊ|| ಹೆಚ್.ಜಿ. ಸಣ್ಣಗುಡ್ಡಯ್ಯ ಹಾಗೂ ವೀಚಿಯವರಂತೆ ಅವರೂ ಕೂಡಾ ನನ್ನ ಟೈಲರ್ ಅಂಗಡಿಗೆ -ಕ್ಯಾಂಟ್ ಟೈಲರ್ಸ್, ಎಂ.ಜಿ.ರೋಡ್-ಬರುತ್ತಿದ್ದರು. ನಮ್ಮಿಬ್ಬರ ಪರಿಚಯ ದಶಕಗಳಷ್ಟು ಹಳೆಯದು. ಸಾಹಿತ್ಯ, ರಾಜಕೀಯ, ಧರ್ಮ ಮುಂತಾದ ವಿಷಯಗಳ ಬಗ್ಗೆ ನನ್ನೊಡನೆ ಗಂಭೀರವಾಗಿ ಚರ್ಚಿಸಿದ್ದಾರೆ. ನನ್ನ ಅವರೆಂದೂ ಟೈಲರ್ ಎಂದು ಕಡೆಗಣಿಸಿದವರಲ್ಲ. ನಾನೂ ಅವರ ಸರಿಸಮಾನರಾದ ಸಾಹಿತ್ಯದ ವ್ಯಕ್ತಿಯೇನೋ ಎನ್ನುವಂತೆ ಅನೇಕ ಗಂಭೀರ ವಿಷಯಗಳ ಬಗ್ಗೆ ನನ್ನೊಡನೆ ಮಾತನಾಡಿದ್ದಾರೆ. ನನ್ನ ಹಾಗೇ ಅವರದೂ ಯಾವ ಮುಲಾಜೂ ಇಲ್ಲದೆ ಇದ್ದ ವಿಷಯವನ್ನು ಇದ್ದ ಹಾಗೇ ಹೇಳುವ ಸ್ವಭಾವ. ಬಹುಶಃ ಈ ಸ್ವಭಾವವೇ ನಮ್ಮ ಪರಿಚಯವನ್ನು ಇಂದಿಗೂ ಹಿಡಿದಿಟ್ಟುಕೊಳ್ಳುವಂತೆ ಮಾಡಿದೆ ಎಂದು ನನ್ನ ತಿಳುವಳಿಕೆ.

ಕೆ.ಜಿ.ಎನ್. ಎಂದೂ ತಮ್ಮ ನಿಲುವಿನಲ್ಲಿ ರಾಜಿ ಮಾಡಿಕೊಂಡವರಲ್ಲ. ಅನುಕೂಲಕ್ಕೋಸ್ಕರ ಆಷಾಡಭೂತಿತನ ಪ್ರದರ್ಶಿಸಿದವರಲ್ಲ. ಅವರು ಕೆಲಸ ಮಾಡಿದ ಸಿದ್ಧಗಂಗಾ ಕಾಲೇಜಿನಲ್ಲಿ ಅನೇಕ ಬಗೆಯ ಕಿರುಕುಳಗಳನ್ನೆದಿರಿಸಿದರು. ಅವರ ವಿಮರ್ಶಾ ಗ್ರಂಥ "ಮರುಚಿಂತನೆ" ಪ್ರಕಟಗೊಂಡಾಗ ವೀರಶೈವರ ವಿರೋಧವನ್ನು ಕಟ್ಟಿಕೊಳ್ಳಬೇಕಾಯಿತು. ಅದಕ್ಕೆಲ್ಲಾ ಅವರು ಮಣಿಯಲಿಲ್ಲ. ಯಾವುದೇ ಗುಂಪು ಕಟ್ಟದೇ ಅವರೊಬ್ಬರೇ ಪರಿಸ್ಥಿತಿಯನ್ನು ನಿಭಾಯಿಸಿದರು. ತಮ್ಮ ನಂಬಿಕೆ ಹಾಗೂ ವಿಚಾರವನ್ನು ಎಲ್ಲಾ ಒತ್ತಡಗಳ ನಡುವೆಯೂ ಮಲಿನವಾಗದಂತೆ ನೋಡಿಕೊಂಡಿರುವುದೇ ಅವರ ಹೆಗ್ಗಳಿಕೆ.

ಕೆ.ಜಿ.ಎನ್. ಅತ್ಯಂತ ಹಿಂದುಳಿದ ವರ್ಗದಿಂದ ಮೂಡಿಬಂದ ಬರಹಗಾರ, ಚಿಂತನಶೀಲ. ಬಾಲ್ಯದಲ್ಲಿ ಬಹಳ ಕಷ್ಟಪಟ್ಟವರೆಂದು ಕೇಳಿದ್ದೇನೆ. ಸಿದ್ಧಗಂಗಾ ಮಠದಲ್ಲಿ ವ್ಯಾಸಂಗ ಮಾಡಿದ್ದರೆಂದೂ ನನಗೆ ಗೊತ್ತು. ಅವರು ಸನ್ಯಾಸಿಯಾಗಲೂ ಬಯಸಿ ನಂತರ ಆ ಆಸೆಯನ್ನು ಕೈಬಿಟ್ಟವರೆಂದು ಹೇಳುವುದನ್ನು ಕೇಳಿದ್ದೇನೆ. ಹಾಗೆಯೇ ಮಂತ್ರವಾದಿಗಳನ್ನು ಬೆನ್ನಟ್ಟಿ ಸ್ಮಶಾನದಲ್ಲಿ ಕಳೆದ ರಾತ್ರಿಗಳೂ ಅವರ ಬದುಕಿನಲ್ಲಿ ಬಂದು ಹೋಗಿದ್ದವಂತೆ. ಅವರು ನನಗೆ ಪರಿಚಯವಾಗುವ ವೇಳೆಗೆ ಈ ಎಲ್ಲಾ ಪ್ರಯೋಗಗಳನ್ನೂ ಮಾಡಿ ಅವುಗಳ ನಿಷ್ಪ್ರಯೋಜಕತೆಯನ್ನು ಅರ್ಥಮಾಡಿಕೊಂಡಿದ್ದರೆಂದು ನನಗನಿಸಿದೆ.

ಅವರು ಬರೆದ ಪುಸ್ತಕಗಳನ್ನು ನನಗೆ ಓದಲು ನೀಡಿದ್ದಾರೆ. ಏನಾದರೂ ಹೊಸ ವಿಷಯಗಳ ಬಗ್ಗೆ ಬರೆದಾಗ ನನ್ನ ಬಳಿ ಬಂದು ಅವುಗಳನ್ನು ಓದಿ ಹೇಳಿದ್ದಾರೆ. ನಾನು

ಅವರ ಲೇಖನಗಳನ್ನು ಓದಿದ್ದರೂ ಅವುಗಳ ಬಗ್ಗೆ ನಿಖರವಾಗಿ ಏನಾದರೂ ಹೇಳುವಷ್ಟು ಅಭ್ಯಾಸ ಮಾಡುವ ತಂಟೆಗೆ ಹೋಗಿಲ್ಲ. ಆದರೂ ಅವರ ಬರಹಗಳ ಮುಖ್ಯ ಪ್ರೇರಣೆ ಕೆಳವರ್ಗದ ಸಂಸ್ಕೃತಿಯ ಅಂತರಂಗದ ತುಮುಲವನ್ನು ಪ್ರತಿಬಿಂಬಿಸುವುದೇ ಆಗಿದೆ ಎಂದು ನನ್ನ ಅನಿಸಿಕೆ. ಶೂದ್ರ ವರ್ಗದ ಸಂಸ್ಕೃತಿಯನ್ನು ಹೇಗೆ ಮೇಲ್ವರ್ಗದ ಸಾಮ್ರಾಜ್ಯಶಾಹಿ ಶಕ್ತಿಗಳು ಸಂಸ್ಕೃತೀಕರಣದ ಹೆಸರಿನಲ್ಲಿ ತುಳಿಯಲ್ಪಟ್ಟಿವೆ ಎಂದು ಅವರ ಬರಹಗಳು ಬಯಲುಗೊಳಿಸಿವೆ. ಜನಮುಖೀ ಸಂಸ್ಕೃತಿಯ ಬೇರುಗಳನ್ನು ಗುರುತಿಸುವಲ್ಲಿ ಅವರ ಬರಹಗಳು ಯಾವ ಮುಲಾಜಿಗೂ ಒಳಗಾಗದೆ ತನ್ನ ಗಟ್ಟಿತನವನ್ನು ಪ್ರದರ್ಶಿಸಿವೆ.

ನಾಗರಾಜಪ್ಪ ಬದುಕು-ಬರಹ ಬೇರೆ ಬೇರೆ ಎಂದು ನಂಬಿರಲಿಲ್ಲ. ಅವರನ್ನು ಕೆಲವರು ಒರಟು ಮನುಷ್ಯ ಎಂದು ಜರಿದವರುಂಟು. ನನ್ನಂತೆಯೇ ಅವರೂ ಕೂಡಾ ಮುಖಕ್ಕೆ ರ...ವಂತೆ ದೇಸೀ ಭಾಷೆಯ ಸೊಗಡಿನಲ್ಲಿಯೇ ಉತ್ತರ ಕೊಡುವ ಸ್ವಭಾವದವರು. ಅವರೆ ಸಮಯಕ್ಕೊಂದು ಬಣ್ಣ ಬದಲಾಯಿಸಿ ಅನುಕೂಲ ಪಡೆಯಲು ಎಂದೂ ಹುಸಿ ನಾಟಕವಾಡಿದವರಲ್ಲ. ಕಡೆಯ ಘಳಿಗೆಯವರೆವಿಗೂ ಒಂದೇ ಬಗೆಯ ಸ್ವಭಾವ. ಗೋಸುಂಬೆತನವಿಲ್ಲದ ಅವರ ನೇರ ನಡೆ ನುಡಿ ನನಗೆ ಅವರ ಬಗ್ಗೆ ಗೌರವ ಮೂಡುವಂತೆ ಮಾಡಿದೆ.

ಮೂರು ದಶಕಗಳಷ್ಟು ಕಾಲ ತುಮಕೂರಿನಲ್ಲಿದ್ದ ನಾಗರಾಜಪ್ಪ ನಿವೃತ್ತಿಯ ನಂತರ ಬೆಂಗಳೂರಿಗೆ ಹೋಗುವಾಗ ಅವರು ಊರು ಬಿಡುವ ವಿಷಯ ನನಗೆ ತಿಳಿಸದೇ ಹೋದರು. ಆಮೇಲೊಂದು ದಿನ ಈ ಬಗ್ಗೆ ಪ್ರಶ್ನಿಸಿದಾಗ "ಇಲ್ಲಿ ಯಾರಿಗಾಗಿ ಇರಲಿ, ಇದ್ದಷ್ಟು ದಿನ ಅನುಭವಿಸಿದ್ದು ಸಾಕು. ಜೀವನದಲ್ಲಿ ಕೆಲವು ದಿನವಾದರೂ ನೆಮ್ಮದಿ ಪಡೆಯೋಣ ಎಂದು ಬೆಂಗಳೂರಿಗೆ ಹೋದೆ" ಎಂದರು. ಅವರ ಮಾತುಗಳ ಹಿಂದಿರುವ ನೋವಿನ ಪರಿಚಯ ನನಗಿತ್ತು. ಅವರು ಅನುಭವಿಸಿದ ನೋವುಗಳು ಹೇಗೆ ಕೆಳವರ್ಗದ ಪ್ರತಿಭೆಗಳು ಮೇಲ್ವರ್ಗದ ವ್ಯವಸ್ಥೆಯಲ್ಲಿ ಉಪೇಕ್ಷಿತಗೊಳ್ಳುತ್ತವೆ ಎನ್ನುವುದಕ್ಕೆ ಜ್ವಲಂತ ಉದಾಹರಣೆಯಾಗಬಲ್ಲವು. ♦

> "ಶಾಸ್ತ್ರ ಮತ್ತು ಕಾವ್ಯಗಳಲ್ಲಿ ಚಿತ್ರಿಸಿರುವ ಶೂದ್ರ ಪಾತ್ರಗಳು ಮೇಲು ಜಾತಿ ಪ್ರತಿಷ್ಠಿತ ಬರಹಗಾರರ ಸೂತ್ರದ ಬೊಂಬೆಗಳು. ಬರಹಗಾರರು ಕಲಿಸುವ ಗಿಳಿಪಾಠವನ್ನು ಒಪ್ಪಿಸುವ ಗಿಳಿಗಳು, ಬರಹಗಾರರನ್ನು ಮೀರಿ ಅವು ಎಂದೂ ಬೆಳೆಯುವುದೇ ಇಲ್ಲ! ಶೂದ್ರ ಪಾತ್ರಗಳು ಪ್ರತಿಷ್ಠಿತ ವರ್ಗದ ಹಿತ ರಕ್ಷಿಸುವ, ತಲೆದಂಡ ಕೊಡುವ, ಸ್ವಾಮಿ ನಿಷ್ಠೆ ಮೆರೆಯುವ ಪಡಿಯಚ್ಚುಗಳು"
>
> *- ಪ್ರೊ|| ಕೆ.ಜಿ.ನಾಗರಾಜಪ್ಪ*

15. ಚೈತನ್ಯದ ಚಿಲುಮೆ

ಹೆಚ್. ಕೆ. ನರಸಿಂಹಮೂರ್ತಿ

-೧-

"ಸಾಹಿತ್ಯದ ವಸ್ತುನಿಷ್ಠ ಅಧ್ಯಯನದಿಂದ ಮೂಡಿರುವ ಒಳನೋಟಗಳನ್ನು ಬಿಚ್ಚು ಮನಸ್ಸಿನಿಂದ ತಿಳಿಸುವ ಗುರಿ ನನ್ನದು. ಅದರಿಂದ ಸಹೃದಯರ ಚಿಂತನೆ ಹರಿತಗೊಂಡರೆ ನನ್ನ ಶ್ರಮ ಸಾರ್ಥಕ. ನನ್ನ ತೀರ್ಮಾನಗಳೇ ಅಂತಿಮ ಎಂಬ ದಾರ್ಷ್ಟ್ಯ ನನ್ನದಲ್ಲ. ಅವುಗಳ ಮೇಲೆ ಮುಕ್ತ ಚರ್ಚೆಯಾದರೆ ಒಳ್ಳೆಯದು. ಆರೋಗ್ಯಕರ ವಾಗ್ವಾದಗಳಿಂದ ಸಾಹಿತ್ಯವು ಬೆಳೆಯುವುದಕ್ಕೆ ಸಹಕಾರಿಯಾಗುತ್ತದೆ. ಸಾಹಿತ್ಯದಲ್ಲಿ ಗೋಜುಗೊಂಡಿರುವ ಇತಿಹಾಸ, ಪುರಾಣ, ಬದುಕು ಮತ್ತು ಕಲೆಗಳಲ್ಲಿ ಸತ್ಯದ ಎಳೆಗಳನ್ನು ಬಿಡಿಸುವ ಪ್ರಯತ್ನ ನನ್ನದು. ಅದನ್ನು ಒಪ್ಪುವ ಬಿಡುವ ಪುರಸ್ಕರಿಸುವ ತಿರಸ್ಕರಿಸುವ ಪ್ರತಿಕ್ರಿಯಿಸುವ ತಟಸ್ಥರಾಗುವ ತೀರ್ಮಾನ ಸಂಬಂಧಿಸಿದವರಿಗೆ ಸೇರಿದುದು." **-ಮರುಚಿಂತನೆ.**

ಇಂತಹ ಅಮೂಲ್ಯ ವಿಚಾರಧಾರೆ ಮಂಡಿಸಿದವರು ಶ್ರೀ ಕೆ.ಜಿ.ಎನ್. ತುಮಕೂರು ಜಿಲ್ಲೆಗುಬ್ಬಿ ತಾಲ್ಲೋಕಿನ ಕಲ್ಲೂರು ಗಂಗಪ್ಪ ಮತ್ತು ಲಕ್ಕಮ್ಮನವರ ಸುಪುತ್ರ ನಾಗರಾಜಪ್ಪನವರು. ಕಷ್ಟ ನಷ್ಟಗಳ ನಡುವೆ ಹೋರಾಟದಿರಿದಲೇ ಉನ್ನತ ವಿದ್ಯಾಭ್ಯಾಸ ಪಡೆದವರು. ಗ್ರಾಮೀಣ ಪರಿಸರದ ಹಿಂದುಳಿದ್ದ ವರ್ಗದಲ್ಲಿ ಮೂಡಿಬಂದ ಅಪ್ಪಟ ಪ್ರತಿಭಾವಂತರು. ಧಾರ್ಮಿಕ ಸಂಸ್ಥೆಯೊಂದು ನಡೆಸುತ್ತಿದ್ದ ಪದವಿ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಯಲ್ಲಿದ್ದು ನಿರ್ಭೀತ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ ಸ್ವಾಭಿಮಾನಿಯಾಗಿ ಹೋರಾಡಿದ ಏಕಾಂಗಿ. ಸ್ನಾತಕೋತ್ತರ ಕೇಂದ್ರದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ನಿಷ್ಪಕ್ಷಪಾತತೆಯಿಂದಿರುವ ಕರ್ತವ್ಯ ನಿಷ್ಠರು. ಸಾಹಿತ್ಯಸಂಘ, ಸಂಸ್ಥೆ ಮತ್ತು ಅಕಾಡೆಮಿಗಳ ಪದಾಧಿಕಾರಿಗಳಾಗಿ, ಸಲಹೆಗಾರರಾಗಿ, ಸಭೆ ಸಮ್ಮೇಳನಗಳಲ್ಲಿ ಪ್ರಬಂಧ ಮಂಡಿಸಿ ಉಪನ್ಯಾಸ ಮಾಡಿ ಮನಸೆಳೆದವರು. ಕಾದಂಬರಿ, ಸಾಹಿತ್ಯ ಸಂಪಾದನೆ, ವಿಮರ್ಶೆ ಮೊದಲಾದ ಸಾಹಿತ್ಯಕ್ಷೇತ್ರಗಳಲ್ಲಿ ಕೃಷಿ ಮಾಡಿ ಗಮನಾರ್ಹರಾದವರು, ಅಧ್ಯಾಪಕರು, ಚಿಂತಕರು, ವಾಗ್ಮಿಗಳು, ವಿಮರ್ಶಕರು ಆದ ಕೆ.ಜಿ.ಎನ್ ತೋರಿಸುವ ಪ್ರೀತಿ ವಿಶ್ವಾಸ ಮಾರ್ಗದರ್ಶನಗಳನ್ನು ನಿಜಕ್ಕೂ ಮರೆಯಲಾಗದು. ಎಲ್ಲ ಸಾಂಸ್ಕೃತಿಕ ಸಮಾರಂಭಗಳಲ್ಲಿ ಆಸಕ್ತಿಯಿಂದ ಭಾಗವಹಿಸುವ ಮುಕ್ತ ಸ್ವಭಾವ. ಮೊದಲಿಗೆ ಇವರ ಬಗ್ಗೆ ಕೇಳಿದ್ದು-ಬೆಂ.ವಿ.ವಿ ಯಲ್ಲಿ ಕನ್ನಡ ಎಂ.ಎ., ಓದುವಾಗ ಪ್ರೊ॥ ಕಿ.ರಂ. ನಾಗರಾಜರು ತರಗತಿಗಳಲ್ಲಿ ಕೆ.ಜಿ.ಎನ್ ರ ಬಗ್ಗೆ ಉದಾಹರಿಸುತ್ತಿದ್ದರು. ಮೊದಲಿಗೆ ಓದಿದ್ದು-ನಾನು ಉಪನ್ಯಾಸಕನಾಗಿ ಸೇವೆಗೆ ಸೇರಿದ ಮೇಲೆ ಗ್ರಂಥಾಲಯದಲ್ಲಿ ದೊರೆತ 'ದೊಡ್ಡಸಂಕಣ್ಣನಾಯಕ' ಕಾದಂಬರಿಯನ್ನು. ಮೊದಲಿಗೆ ಕಂಡಿದ್ದು-1993ರಲ್ಲಿ ತಾಲ್ಲೋಕು ಮೊದಲ ಕನ್ನಡ ಸಾಹಿತ್ಯ ಸಮ್ಮೇಳನ ಗುಬ್ಬಿಯಲ್ಲಿ ನಾಗರಾಜಪ್ಪನವರ ಅಧ್ಯಕ್ಷತೆಯಲ್ಲಿ ನಡೆದಾಗ. ಆಗ ನಾಟಕ ಗೋಷ್ಠಿಯಲ್ಲಿ

ಗುಬ್ಬಿ ವೀರಣ್ಣನವರ ಬದುಕು ಮತ್ತು ಸಾಧನೆ ಕುರಿತು ಪ್ರಬಂಧ ಮಂಡಿಸಿದಾಗ ಮೆಚ್ಚಿ ಮಾತಾಡಿಸಿ ಬೆನ್ನು ತಟ್ಟಿದರು. ಹೆಚ್ಚು ಓದಬೇಕು, ಮಾತಾಡಬೇಕು, ಬರೆಯಬೇಕು ಎಂದರು. ಹೀಗೆ ಅವರ ಪರಿಚಯವಾದ ಮೇಲೆ ಪತ್ರಗಳ ಮೂಲಕ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದೆ. ನನ್ನ ಕುಟುಂಬದ ಕಷ್ಟ ನಷ್ಟಗಳ ಬಗ್ಗೆ ತೋಡಿಕೊಂಡಾಗ- 'ವೈಯಕ್ತಿಕ ಬದುಕಿನಲ್ಲಿ ಏಳುಬೀಳು ಸುಖ ದುಃಖ ಎಲ್ಲ ಇರುತ್ತವೆ. ಸಮಸ್ಯೆಗಳನ್ನು ಎದುರಿಸಿ ಬದುಕಬೇಕು', ಎಂದು ಸೂಚಿಸಿದರು.

ಶಿಕ್ಷಣ ವ್ಯವಸ್ಥೆ ಹದಗೆಟ್ಟಿದೆ, ಸಾಂಸ್ಕೃತಿಕ ರಂಗ ಕಲುಷಿತವಾಗಿದೆ, ಸಮೂಹ ಸಂಸ್ಕೃತಿಗೆ ಬೇರುಗಳಿಲ್ಲ. ಮಾನವೀಯತೆ ಮಾಯವಾಗಿದೆ. ಸಮಾಜವು ಹಾದಿತಪ್ಪಿದೆ, ಮೊದಲಾದ ಪ್ರಸ್ತುತ ಸನ್ನಿವೇಶಗಳಿಗೆ ಸ್ಪಂದಿಸಿ ನಿರ್ಭೀತ ಅಭಿಪ್ರಾಯ ವ್ಯಕ್ತಪಡಿಸುವುದರಲ್ಲಿ ಹಿಂದೆ ಮುಂದೆ ನೋಡುವುದಿಲ್ಲ. "ವ್ಯಾಸ, ಮಾರ್ಕಂಡೇಯ, ಅಗಸ್ತ್ಯ, ಕೌಂಡಿನ್ಯ ಮುಂತಾದ ಋಷಿಗಳ ಹುಟ್ಟನ್ನು ನಿರ್ಭಯವಾಗಿ ಪ್ರಶ್ನಿಸುವ ಶರಣರೇ, ಏಕೆ ಶರಣರ ಹುಟ್ಟನ್ನು ನಿರ್ಭಯವಾಗಿ ಮುಕ್ತ ಚರ್ಚೆಗೆ ಒಡ್ಡಲು ಹಿಂಜರಿಯುತ್ತಾರೆ? ಅಂದರೆ ಅನ್ಯನಿಂದೆ, ಆತ್ಮಸ್ತುತಿ ನಡೆನುಡಿ ಸಿದ್ಧಾಂತದ ಮೂಲ ತತ್ವವೇ?" ಎಂಬ ಅನಿಸಿಕೆಗಳನ್ನು ನಿರ್ದಾಕ್ಷಿಣ್ಯವಾಗಿ ವ್ಯಕ್ತಪಡಿಸುವ ಎದೆಗಾರಿಕೆಯಿದೆ. ಜೊತೆಗೆ ಇತರರ ಭಾವನೆಗಳನ್ನು ಗೌರವಿಸುವ ಔದಾರ್ಯವೂ ಇದೆ. ನಿರುತ್ಸಾಹಿಗಳಿಗೆ ಉತ್ಸಾಹ ತುಂಬಿ ಕಾರ್ಯವನ್ನು ಪೂರೈಸಲು ಸೂಚಿಸುವ ಸಜ್ಜನಿಕೆಯಿದೆ. ಸಾಹಿತ್ಯವನ್ನು ಒರೆಗಲ್ಲಿಗೆ ಹಚ್ಚಿ ಹೊಸ ರೀತಿಯಲ್ಲಿ ಮೌಲ್ಯಮಾಪನ ಮಾಡಿ ಕನ್ನಡದಲ್ಲಿ ವಿಮರ್ಶಾ ಸಾಹಿತ್ಯ ಬೆಳವಣಿಗೆಗೆ ಅನುವು ಮಾಡಿಕೊಟ್ಟ ಧೀಮಂತ ಬರಹಗಾರ. ದಪ್ಪಕಟ್ಟಿನ ಕನ್ನಡಕ, ಪೆನ್ನು, ಬಿಳಿ ಕಾಗದ, ಹೆಗಲುಚೀಲ, ಸಾಧಾರಣ ಚಪ್ಪಲಿಗಳಿಂದ ಸರಳ ಬದುಕು ಉನ್ನತ ಚಿಂತನೆ ಇವರ ವ್ಯಕ್ತಿತ್ವದ ಚಿತ್ರ. ಅಪೂರ್ವ ಪ್ರತಿಭೆಯಿದ್ದರೂ ಪ್ರಸಿದ್ಧರಾಗಲಿಲ್ಲ. ಪ್ರಚಾರದ ಬೆನ್ನತ್ತಲಿಲ್ಲ. ಪ್ರಶಸ್ತಿಗಾಗಿ ಬಾಯಿ ಬಿಡಲಿಲ್ಲ. ತಾನು ನೇರ ದಾರಿಯಲ್ಲಿಯೇ ನಡೆದು ಬೇರೆಯವರಿಗೂ ನೇರ ದಾರಿಯನ್ನೇ ತೋರಿಸಿದವರು.

ಕತ್ತಿ ಕೋವಿಗಳಿಲ್ಲದೆ ಕನ್ನಡದ ಕೆಚ್ಚು ತೋರಿದ ಇವರ ನಡೆ-ನುಡಿಗಳೆರಡೂ ಒಂದೇ. ಸುಸಂಬದ್ಧ ವಿಷಯ ಪ್ರತಿಪಾದನೆ ಸತ್ವ ಪೂರಿತ ವಿಚಾರಧಾರೆಗಳಿಂದ ಓದುವವರ ಹೃದಯ ಕೆಣಕಿ ಕೆದಕಿ ಕೆರಳಿಸುವ ನಿರ್ಭಯ ಸಾಹಿತ್ಯ ರಚನೆಗೆ ಸಿದ್ಧಹಸ್ತರು. ಬದುಕಿನಲ್ಲಿ ನೊಂದರೂ ಕೂಡಾ ಎಂದಿಗೂ ತಮ್ಮ ಗೋಳನ್ನು ಇತರರಿಗೆ ಹಂಚಿದವರಲ್ಲ. ಕಷ್ಟ ಬಂದಾಗ ಕುಗ್ಗಿ ಕುಸಿದಿಲ್ಲ. ಸುಖ ಬಂದಾಗಲೂ ಕುಣಿದು ಕುಪ್ಪಳಿಸಿಲ್ಲ. ಸಮಚಿತ್ತರು. ಬಾಲ್ಯದಿಂದಲೂ ಆತ್ಮಗೌರವಕ್ಕೆ ತುಂಬಾ ಮನ್ನಣೆ ನೀಡಿದ ಶ್ರೀಯುತರ ಜೀವನೋತ್ಸಾಹ ಮೆಚ್ಚುವಂತಹದ್ದು.

-೨-

ಕನ್ನಡನಾಡಿನ ತುಮಕೂರು ಜಿಲ್ಲೆ ಗುಬ್ಬಿ ತಾ||ನ ಕಲ್ಲೂರಿನಲ್ಲಿ ಹುಟ್ಟಿದ ಕೆ.ಜಿ. ನಾಗರಾಜಪ್ಪನವರು ಸಾರ್ಥಕ ವಿಮರ್ಶಕರಲ್ಲೊಬ್ಬರು. ಬಡತನದ ಬದುಕು, ಹಿಂದುಳಿದ

ವರ್ಗದ ಕುಟುಂಬ, ಹೆಚ್ಚು ಓದುವ ಹಂಬಲ, ಸತತ ಅಧ್ಯಯನ, ಒಟ್ಟಿನಲ್ಲಿ ಇವರ ಜೀವನವೇ ಒಂದು ಪ್ರಯೋಗ. ಬಾಲ್ಯದಲ್ಲಿ ಸರ್ಕಾರದ ಯೋಜನೆಯನ್ವಯ ಊರಿನ ಶಾನುಭೋಗರಿಂದ ಅಕ್ಕಿಗಂಜಿಯನ್ನು ದೀನದಲಿತರಿಗೆ ಹಂಚುವಲ್ಲಿ ಭಾಗಿಯಾಗಿ ಖುಷಿಪಟ್ಟಿದ್ದು. ಹೆರಿಗೆ ತಜ್ಞೆಯಂತಿದ್ದ ಅಜ್ಜಿಯಿಂದ ಧೈರ್ಯ ಸ್ಥೈರ್ಯ, ವಿಶ್ವಾಸ, ಸೇವಾಪರತೆಗಳನ್ನು ರೂಢಿಸಿಕೊಂಡದ್ದು, ಗಿಡನೆಡುವ ಬಗ್ಗೆ ಅತೀವ ಕಾಳಜಿಹೊಂದಿ ಸಾರ್ವಜನಿಕ ಸ್ಥಳಗಳಲ್ಲಿ ಹಾಕಿದ ಗಿಡಗಳು ಇಂದು ಬೃಹತ್ ಮರಗಳಾಗಿ ನಮ್ಮೊಂದಿಗಿವೆ.

ಬಿಡುವಿನ ವೇಳೆಯಲ್ಲಿ ಮಿತ್ರರ ಸಹಕಾರದಿಂದ ಸಮಾಜಸೇವೆ ಬಗ್ಗೆ ಬೆಳದಿಂಗಳ ವೇಳೆ ಚರ್ಚಿಸುತ್ತಿದ್ದರು, ಚರಂಡಿ ಸ್ವಚ್ಛತೆ, ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು ನಿತ್ಯ ಅಭ್ಯಾಸವಾಗಿತ್ತು. ಪಕ್ಕದೂರಿನಲ್ಲಿ ದೇವರು ಮೈಮೇಲೆ ಬರುವುದೆಂಬ ಸುದ್ಧಿ ತಿಳಿದು ಕುತೂಹಲದಿಂದ ಹೋಗಿ ಪರೀಕ್ಷಿಸಿ ಅದರಲ್ಲಿ ಹುರುಳಿಲ್ಲವೆಂದು ತಿಳಿದರು, ಇತರರಿಗೂ ತಿಳಿಸಿದರು, ತಾರತಮ್ಯದ ನಡುವೆ ಹಗಲಿರುಳು ವಿದ್ಯೆಯನ್ನು ಮುಂದುವರೆಸಿ ಪವಿತ್ರವಾದ ಸಿದ್ಧಗಂಗೆಯಲ್ಲಿ ವಿದ್ಯಾರ್ಥಿಯಾಗಿದ್ದಾಗ ಕೃಷಿಕಾರ್ಯ, ಕಟ್ಟಡನಿರ್ಮಾಣ ಮೊದಲಾದ ಕಾರ್ಯಗಳಿಂದ ಮಠಾಧಿಪತಿಗಳ ಮೆಚ್ಚುಗೆಗೆ ಪಾತ್ರರಾದರು. ಹೆಚ್ಚಿನ ವ್ಯಾಸಂಗಕ್ಕೆ ಮುಂದವರಿದಾಗ ಧರ್ಮ ಪೀಠಾಧಿಕಾರಿಗಳು ಸಹಾಯ ನೀಡದಿದ್ದಾಗ ವೈಶ್ಯ ಮತದ ವಿಧವೆ ತುಳಸಮ್ಮ ಒಡವೆ ಒತ್ತೆಯಿಟ್ಟು ನೆರವಾದಳು. ಸ್ನೇಹಿತರಲ್ಲಿ ಕೆಲವರು ಇವರನ್ನು ಸೇವಕರಂತೆ ಕಂಡಾಗ ಬೇಸರಪಟ್ಟುಕೊಳ್ಳುತ್ತಿದ್ದರು. ಅಜ್ಜಿ ಹೇಳಿದ್ದ "ಸ್ವತಂತ್ರವಾಗಿ ಬಾಳು" ಎಂಬ ಸಂದೇಶ ಎಚ್ಚರಿಸುತ್ತಿತ್ತು.

ಜೀವನವು ಅಸ್ತವ್ಯಸ್ತವಾಗಿದ್ದಾಗ ಮೈಸೂರಿನಲ್ಲಿ ಹಿರಿಯ ಕವಿ ವಿಮರ್ಶಕ ಜಿ.ಎಸ್. ಶಿವರುದ್ರಪ್ಪ ಮತ್ತು ರಾಮಕೃಷ್ಣಾಶ್ರಮ ನೆಲೆ ನೀಡಿದ್ದುಂಟು. ಆಗ ಕರ್ನಾಟಕ ಪ್ರವಾಸದಲ್ಲಿದ್ದ ಭೂದಾನ ಚಳುವಳಿ ನೇತಾರ ವಿನೋಬಾಬಾವೆಯುವರನ್ನು ಭೇಟಿಮಾಡಬೇಕೆಂಬ ಹಂಬಲವಾಯಿತು. ಅವರ ಜೊತೆ ಪಾದಯಾತ್ರೆ ಮಾಡಿ ಮಾತುಕತೆ ನಡೆಸಿದರು. ವಿನೋಬಾ ಸರ್ಕಾರಿ ಸಂತನೆಂದು ನಿರ್ಧರಿಸಿ ಆದರ್ಶವು ಅಪಹಾಸ್ಯಕ್ಕೀಡಾದ ಬಗ್ಗೆ ವಿಷಾಧಿಸಿದರು. ರಾಮಕೃಷ್ಣಾಶ್ರಮದ ಶಾಂಭವಾನಂದರು ದಕ್ಷಿಣೇಶ್ವರ ಯಾತ್ರೆ ಮಾಡಿಸಿ ಸನ್ಯಾಸದತ್ತ ಎಳೆಯಲು ಹವಣಿಸಿದ್ದರು. ಈ ನಡುವೆ ವಿಶ್ವಮಾನವ ಸಂದೇಶ ನೀಡಿದ ರಾಷ್ಟ್ರಕವಿ ಕುವೆಂಪು ಅವರನ್ನು ಕಂಡರು. ಕಬೀರ ಮಠಾಧಿಪತಿಯೊಬ್ಬ ಧರ್ಮ ವಿಷಯುಗಳನ್ನು ಚರ್ಚಿಸಲು ಕರೆಸಿ ಸನ್ಯಾಸದತ್ತ ಸೆಳೆಯುಲೆತ್ನಿಸಿ ವಿಫಲರಾದರು. ಕನ್ನಡ ಎಂ.ಎ., ಓದುವಾಗ ಆರ್.ಎಲ್. ಅನಂತರಾಮುಯ್ಯನವರ ಸಹಪಾಠಿಯಾಗಿ ಪ್ರಭುಶಂಕರರಿಗೆ ನಿಕಟವಾಗಿ ಜಿ.ಎಸ್.ಎಸ್.ರವರ ಕುಟುಂಬ ಸದಸ್ಯರಾಗಿದ್ದರು. ಎಂ.ಎ., ಪಡೆದ ನಂತರ ಓದಿದ ಪ್ರೌಢಶಾಲೆ ಸಿದ್ಧಗಂಗೆಯಲ್ಲಿ ಅಧ್ಯಾಪಕರಾದರು. ವಿವಾಹ ಜೀವನಕ್ಕೆ ಕಾಲಿಟ್ಟು ಹುದ್ದೆಯಲ್ಲಿ ಬಡ್ತಿ ಪಡೆದು ಕಾಲೇಜು ಉಪನ್ಯಾಸಕರಾದರು. ಮಠದ ಕೆಲಸಕಾರ್ಯಗಳಿಗೆ ತಮ್ಮನ್ನೆ ತಾವು ಅರ್ಪಿಸಿಕೊಂಡರು. ಹಗಲಿರುಳು ಪ್ರಾಮಾಣಿಕತೆ ನಿಷ್ಠೆಯಿಂದ ದುಡಿದು

ಶ್ರೀಗಳ ನಿಕಟ ಸಂಪರ್ಕ ಪಡೆದರು. ಇಲ್ಲಿ ದುಷ್ಟಕೂಟದ ನಿರಂತರ ಪಿತೂರಿಯ ನಡುವೆ ಸ್ವಂತಿಕೆ ಉಳಿಸಿಕೊಂಡು ಸ್ವಾಭಿಮಾನಿಯಾಗಿದ್ದು ಮಹತ್ವದ ಸಂಗತಿ. ಪ್ರತಿಷ್ಠಿತ ಸ್ವಜಾತಿಯ ವಿವಿಧ ವಿದ್ಯಾಸಂಸ್ಥೆಗಳಿಂದ ಆಸೆ ಆಮಿಷಗಳು ಬಂದರೂ ಅನ್ನ ಹಾಕಿದ ಸಂಸ್ಥೆ ಬಿಡಲಿಲ್ಲ. ಕರ್ತವ್ಯ ದಕ್ಷತೆ ತೋರಿದ್ದು ಇಂದಿಗೂ ಅನುಕರಣೀಯವಾಗಿದೆ.

ಅಂತರಜಾತಿ ವಿವಾಹ, ಅಸಹಾಯಕರಿಗೆ ಆಶ್ರಯ, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ, ಒಡೆದ ಕುಟುಂಬಗಳಿಗೆ ಸೌಹಾರ್ದ ಪರಿಹಾರ, ಬರಹಗಾರರಿಗೆ ಮಾರ್ಗದರ್ಶನ ಮೊದಲಾದ ಸಮಾಜಸೇವೆಯಲ್ಲಿ ಸದಾ ಕೆ.ಜಿ.ಎನ್. ನಿರತರಾಗಿರುವರು. ಮೌಢ್ಯದ ವಿರುದ್ಧ ಹೋರಾಡಿದ ದಿಟ್ಟ ವಿಚಾರವಾದಿಗೆ ಸ್ನೇಹಿತರೇ ಸಂಪತ್ತು. ಸದಾಚಾರವೇ ಅಂತಸ್ತು, ತರ್ಕಬದ್ಧ ವಿಚಾರ, ದೀರ್ಘಪರಿಶ್ರಮ, ವ್ಯಾಪಕ ವಿದ್ವತ್ತುಗಳಿಂದ ಅನಿಸಿಕೆಗಳನ್ನು ನಿಷ್ಠೂರತೆಯಿಂದ ಬರಹದಲ್ಲಿ ಹಿಡಿದಿಟ್ಟರು. ಭಾಷಣಗಳ ಮೂಲಕ ಅನೇಕ ಸಂಕಿರಣಗಳಲ್ಲಿ ಭಾವನೆಗಳನ್ನು ಹಂಚಿದರೂ ಎಲೆಮರೆಯ ಹೂವಿನಂತಿರುವ ಇವರು ಪದವಿ ಪ್ರಶಸ್ತಿಗಳನ್ನು ಅರಸಿದವರಲ್ಲ. ಉದ್ದಕ್ಕೂ ಬದುಕಿನ ಬಗ್ಗೆ ಅಸಮಾಧಾನವಿದ್ದರೂ ಇಳಿವಯಸ್ಸಿನಲ್ಲಿಯೂ ಕರ್ತವ್ಯ ನಿರ್ವಹಿಸುವುದನ್ನು ಓಡಾಡುವುದನ್ನು ಕಂಡಾಗ ಅಚ್ಚರಿಯಾಗುತ್ತದೆ. ಸ್ವಲ್ಪ ಸ್ಥೂಲಕಾಯದ ರೀತಿ ಕಂಡರೂ ನಿಜವಾಗಿಯೂ ಮೊದಲ ದರ್ಜೆಯ ಪ್ರತಿಭಾವಂತರಾಗಿದ್ದಾರೆ. ಅಪರೂಪದ ಇಂತಹವರನ್ನು ಗುರುತಿಸುವ ಗೌರವಿಸುವ ಶಕ್ತಿಯನ್ನು ಈಗ ನಮ್ಮ ಸಮಾಜವು ಕಳೆದುಕೊಂಡಿರುವಂತೆ ತೋರುತ್ತದೆ. ಇವರಿಗಿಂತ ಕಡಿಮೆ ಕೆಲಸ ಮಾಡಿದವರೆಲ್ಲ ದೊಡ್ಡ ಅವಕಾಶ ಪಡೆದಿದ್ದರೂ ಮನಸ್ಸು ಕಹಿ ಮಾಡಿಕೊಂಡಿಲ್ಲ, ಸಿನಿಕರಾಗಿಲ್ಲ.

ಆಕರಗಳನ್ನೆಲ್ಲ ಬೆರಳಿಟ್ಟು ತೋರಿಸುವ ಪ್ರಾಮಾಣಿಕ ಯತ್ನದಿಂದ ಸಹಾನುಭೂತಿಯುತ ವಿಮರ್ಶೆ ಮಾಡುವ ರೀತಿ ಅನುಕರಣೀಯವಾಗಿದೆ. ದೋಷಗಳನ್ನು ನಿರ್ಲಕ್ಷ್ಯ ಮಾಡುವುದಿಲ್ಲ. ಸಹೃದಯ ಮಾದರಿ ಬರವಣಿಗೆ, ಕತ್ತಿ ಮಸೆಯುವ ರೀತಿಯಂತೂ ಖಂಡಿತಾ ಅಲ್ಲ. ಪೂರ್ವಾಗ್ರಹಗಳಿಗೆ ಎಂದಿಗೂ ಆಸ್ಪದಕೊಡದ ತೆರೆದ ಮನಸ್ಸಿನವರು. ಸತ್ಯವನ್ನು ಪ್ರಿಯವಾಗಿ ಹೇಳುವ ಕಲೆಗಾರಿಕೆ, ಕಹಿಯನ್ನು ಕಾರಿದರೂ ಸಿಹಿಯನ್ನು ಅರಸುವ ಸೂಕ್ಷ್ಮತೆಗಳು ಕೆ.ಜಿ.ಎನ್. ಬರವಣಿಗೆಯಲ್ಲಿ ಕಾಣಬರುತ್ತವೆ. ಹೊಸ ಲೇಖಕರನ್ನು ಪ್ರೋತ್ಸಾಹಿಸಿದರು. ಮುನ್ನುಡಿ ಬರೆದು ಧೈರ್ಯ ತುಂಬಿದರು, ತಾವು ಬುದ್ಧಿಜೀವಿಯೆಂದು ಭಾವಿಸಿಲ್ಲ, ಆದರೆ ನಿಜಕ್ಕೂ ಅವರು ಬುದ್ಧಿಜೀವಿಗಳು, ದ್ವೇಷವಿಲ್ಲದವರು ಎಂದು ಕೆಲವರು ಹೇಳುವುದನ್ನು ಕೇಳಿದ್ದೇನೆ. ಜಾತಿ ಗುಂಪುಗಳ ಬೆಂಬಲವಿಲ್ಲ. ಗೂಂಡಾಗಿರಿಯಿಲ್ಲ, ಮಾಧ್ಯಮಗಳ ಬೆನ್ನುಹತ್ತಿಲ್ಲ. 'ನೆಮ್ಮದಿಯಿಂದ ಇರುವೆನು, ಯಾರ ಹಂಗೂ ನನಗಿಲ್ಲ' ಎನ್ನುವ ಇವರು ಸ್ನೇಹಕ್ಕೆ ಬೆಲೆಕೊಡುವವರು. ಮೂರು ದಶಕಗಳ ಸತತ ದುಡಿಮೆ, ಬಡತನ, ಅನಾರೋಗ್ಯ ದೇಹವನ್ನು ಬಳಲಿಸಿದ್ದರೂ ಅವರ ಉತ್ಸಾಹ ಆಸಕ್ತಿ ಕಾರ್ಯಪ್ರವೃತ್ತಿಗಳು ತರುಣರನ್ನು ನಾಚಿಸುತ್ತವೆ. "ಕಾಲ ಬದಲಾಗುತ್ತದೆ, ಬದಲಾಗಬೇಕಾದ್ದು ಅಗತ್ಯ. ಆದರೆ ಮುಚ್ಚು ಹೊಳೆಯಲ್ಲಿ ತೇಲಿಹೋಗಬಾರದು, ಸ್ವಂತಿಕೆಯಿರಬೇಕು, ವಿವೇಚನೆಯನ್ನು ಕಳೆದುಕೊಳ್ಳಬಾರದು" ಎಂದು ಮತ್ತೆ ಮತ್ತೆ ಹೇಳುತ್ತಿರುತ್ತಾರೆ. ♦

16. ಇಕ್ಕಟ್ಟು-ಬಿಕ್ಕಟ್ಟಿನ ನಡುವೆ

ಜಿ. ಇಂದ್ರ ಕುಮಾರ್.

'ಕನ್ನಡ ಭಾಷೆ ವಿವಿಧ ಸಂಸ್ಕೃತಿಗಳ ಅಭಿವ್ಯಕ್ತಿ ಮಾಧ್ಯಮವಾಗಿ ತನ್ನನ್ನು ಎರವಲು ಕೊಟ್ಟುಕೊಂಡಿತೇ ಹೊರತು, ತನ್ನ ನೆಲದ ಸಂಸ್ಕೃತಿಯ ಸಾರಸರ್ವಸ್ವದ ಸತ್ವಹೀರಿ ಪುಷ್ಟಿಯಾಗಿ ಬೆಳೆದು ಸಮಗ್ರ ಜನತೆಯ ಬರವಣಿಗೆಯ ನಾಲಿಗೆಯಾಗಲಿಲ್ಲ. ಅದು ಕೆಲವು ಜನಾಂಗದ ಸಂಸ್ಕೃತಿಗಳಿಗೆ ಮಾತ್ರ ಮೀಸಲಾಯಿತು..............'

ಈ ಮಾತುಗಳನ್ನು ಕಂಚಿನ ಕಂಠದ, ವಿದ್ವಾಂಸ ಪ್ರೊ|| ಕೆ.ಜಿ.ನಾಗರಾಜಪ್ಪ ಅವರು ಸಭೆಯೊಂದರಲ್ಲಿ ಹೇಳಿದ್ದರು. ಇದೇ ಮಾತುಗಳನ್ನು ತಮ್ಮ 'ಮರುಚಿಂತನೆ' ಎಂಬ ವಿಮರ್ಶಾತ್ಮಕ ಕೃತಿಯಲ್ಲಿಯೂ (ಪ್ರಸ್ತಾವನೆಯಲ್ಲಿ) ಪ್ರಸ್ತಾಪಿಸಿದ್ದಾರೆ. ಈ ಮಾತನ್ನು ಯಾಕೆ ಹೇಳಿದೆನೆಂದರೆ ನಡೆ, ನುಡಿ, ಕೃತಿಗಳಲ್ಲಿ ಪ್ರೊ|| ಕೆ.ಜಿ.ಎನ್. ಒಂದೇ ತೆರನಾಗಿರುತ್ತಾರೆ. ಇಂತಹ ಲೇಖಕರು ಕೇವಲ ಬೆರಳಣಿಕೆಯಷ್ಟು ಮಾತ್ರವೆಂಬ ಸತ್ಯ ಈಗಾಗಲೇ ನನ್ನ ಒಳಗಣ್ಣಿಗೆ ತಿಳಿದುಹೋಗಿದೆ.

ತಮ್ಮ ವಿಶಿಷ್ಟ ಮತ್ತು ವೈಚಾರಿಕ ವಿಮರ್ಶಾ ಪ್ರಜ್ಞೆಯಿಂದ ಕನ್ನಡ ಸಾರಸ್ವತ ಲೋಕದಲ್ಲಿ ಎಷ್ಟು ಜನರನ್ನು ಎದುರು ಹಾಕಿಕೊಂಡಿದ್ದಾರೋ ಅಷ್ಟೇ ಮಂದಿಯ ಸ್ನೇಹಿತರನ್ನು ಹೊಂದಿರುವ ಪ್ರೊ|| ಕೆ.ಜಿ. ಎನ್ ಬಗ್ಗೆ ನಾನು ಕಾಳಿದಾಸ ಪದವಿಪೂರ್ವ ಕಾಲೇಜಿನಲ್ಲಿ ಪಿ.ಯು.ಸಿ ಓದುವಾಗ ಕೇಳಿದ್ದೆ. ಆ ಸಂದರ್ಭದಲ್ಲಿ 'ಮರುಚಿಂತನೆ' ಬಗ್ಗೆ ಪತ್ರಿಕೆಗಳಲ್ಲಿ, ನಾನು ಓದುತ್ತಿದ್ದ ಕಾಲೇಜಿನ ಕೆಲ ಉಪನ್ಯಾಸಕರಿಂದ ಚರ್ಚೆಯಂತಹ ಮಾತುಗಳು ನನ್ನ ಕಿವಿ ಮೇಲೆ ಬಿದ್ದಿದ್ದವು. ಅಂದಿನಿಂದ ಅವರನ್ನು ನೋಡಬೇಕೆಂಬ ಕುತೂಹಲ ಹುಟ್ಟಿತು. ನಂತರದ ದಿನಗಳಲ್ಲಿ ಯಾವುದೋ ಸಾಹಿತ್ಯ ಸಮಾರಂಭದಲ್ಲಿ ನೋಡಿದೆ. ಆ ವ್ಯಕ್ತಿಯ ಸರಳತೆ ನನಗೆ ಆಶ್ಚರ್ಯ ತಂದಿತು. ಯಾಕೆಂದರೆ ಯಾವುದೇ ಆಡಂಬರದ ಉಡುಪು ಧರಿಸದೆ, ಸಾಮಾನ್ಯ ಜನ ಧರಿಸುವ ಉಡುಪಿನಲ್ಲಿದ್ದರು. ಸಭೆ ಮುಗಿದ ಮೇಲೆ ತಮ್ಮ ಗೆಳೆಯರೊಂದಿಗೆ ರಸ್ತೆಯಲ್ಲಿ ನಡೆದುಕೊಂಡೇ ಹೋದರು. ಮಾತನಾಡಿಸುವ ಎಂಬ ಆಸೆಯಾದರೂ ಸಹ ಸಂಕೋಚ, ಯಾವುದೋ ಅವ್ಯಕ್ತ ಭಯದಿಂದ ಮೌನವಾದೆ.

ಕೊನೆಗೂ ಒಂದು ದಿನ ಸಾಲಾವಳಿ ಕೂಡಿ ಬಂದು ಧೈರ್ಯಮಾಡಿ ಭೇಟಿಯಾದೆ. ಅದು ಇಂತಹ ಸಂದರ್ಭ ಎಂದು ಅಧಿಕೃತವಾಗಿ ಹೇಳಲು ಆ ನೆನಪು ಮಾಸಿದೆ. ಮುಂದೆ ಕಾಲೇಜು ಸೇರಿಕೊಂಡೆ. ಅನಿವಾರ್ಯ ಕಾರಣಗಳಿಂದ ಉನ್ನತ ವಿದ್ಯಾಭ್ಯಾಸಕ್ಕೆ ಹೋಗಲಾಗಲಿಲ್ಲ. ನನ್ನ ಬದುಕಿನಲ್ಲಿ ಕೆಲ ಅನಿರೀಕ್ಷಿತ ಘಟನೆಗಳು ನಡೆದು, ನಾನು ಪತ್ರಕರ್ತನಾದೆ. ಪತ್ರಿಕೋದ್ಯಮಕ್ಕೆ ಇಂತಿಷ್ಟೇ ಎಂಬ ಗಡಿಯಿಲ್ಲ. ಹೀಗಾಗಿ ಅಲ್ಲೇ ಠಿಕಾಣಿ ಹೂಡಿದೆ. ಉತ್ತಮ ಹೆಸರು ಗಳಿಸಿಕೊಳ್ಳುತ್ತಾ, ಒಂದಿಷ್ಟು ಸಾಹಿತ್ಯ ಬರವಣಿಗೆಯನ್ನು ಆರಂಭಿಸಿದೆ. ನಂತರದ ದಿನಗಳಲ್ಲಿ ಸಾಹಿತ್ಯ ಸಂಘ-ಸಂಸ್ಥೆ, ಪರಿಷತ್ತುಗಳು ಹೆಚ್ಚಾದವು. ಹೀಗಾಗಿ ಪ್ರೊ|| ಕೆ.ಜಿ. ಎನ್ ಅವರ ಸ್ನೇಹ ಸಂಪಾದಿಸಲು ಹೆಚ್ಚು ದಿನ ಬೇಕಾಗಲಿಲ್ಲ.

ಅವರ ಮರುಚಿಂತನೆ ಬಿಡಿಲೇಖನಗಳು, ಅವರು ಸಂಪಾದಿಸಿದ ಸ್ಮರಣ ಸಂಚಿಕೆಗಳನ್ನು ಓದುತ್ತಾ ಹೋದಂತೆ ಅವರು ನನ್ನ ಹೃದಯದೊಳಗೆ ಅದಾವಾಗಲೋ ನನಗೆ ಗೊತ್ತಿಲ್ಲದಂತೆ ಸೇರಿಕೊಂಡಿದ್ದರು.

ಯಾವುದೇ ವಿಷಯದ ಮೇಲೆ ಅಧಿಕೃತವಾಗಿ, ಸ್ಪಷ್ಟವಾಗಿ, ನೇರವಾಗಿ ಮಾತನಾಡುವ ಪ್ರೊ|| ಕೆ.ಜಿ.ಎನ್. ತಮಗೆ ಗೊತ್ತಿಲ್ಲದ್ದನ್ನು ನನಗೆ ಗೊತ್ತಿಲ್ಲ ಎನ್ನುವರು. ನಾನು ಒಬ್ಬ ವಿದ್ವಾಂಸ, ನಾನು ಕಟಾಚಾರಕ್ಕೆ ಏನನ್ನೋ ಬೇಕಾದರೂ ಹೇಳಿದರೂ ಜನ ಕೇಳುತ್ತಾರೆಂಬ ಸಿನಿಕತನ ಅವರಲ್ಲಿ ಇಲ್ಲ. ಒಮ್ಮೆ ಇವರ ಸಮಕಾಲೀನ ಕವಿಯೊಬ್ಬರ ಜೊತೆ 'ಮರುಚಿಂತನೆ' ಕುರಿತು ಮಾತನಾಡುವಾಗ, ಅದ್ಯಾವ ಮಹಾ ಕೃತಿ. ಮೇಲ್ಜಾತಿಯವರನ್ನು ಹೀಯಾಳಿಸಿ, ಬೈಯ್ಯುವುದರಲ್ಲೇ ಅವರ ಸಾಹಿತ್ಯಕ ಶಕ್ತಿ ಕುಂದಿದೆ. ನೀನು ಸರಿಯಾಗಿ ಆ ಕೃತಿಯನ್ನು ಓದು. ಅತನೊಬ್ಬ ಒರಟ, ಮಾತಿನಲ್ಲಿ ನಯವಿಲ್ಲ ಎಂದು ಕೆಟ್ಟದಾಗಿ ಮಾತನಾಡಿದ್ದರು. ಆದರೂ ಸಹ ಮತ್ತೆ 'ಮರುಚಿಂತನೆ'ಯನ್ನು ನಾನು ಕಲಿತ ವಿದ್ಯೆಗೆ ತಕ್ಕಂತೆ, ಗಳಿಸಿಕೊಂಡ ಅನುಭವಗಳ ಮೂಲಕ ಓದಿ ನಿಕಷಕ್ಕೆ ಹಚ್ಚಿದೆ. ನನಗೆ ಹೆಚ್ಚಿನ ಲಾಭವಾಯಿತು. ಅದೊಂದು ಶುಷ್ಕ ಪಾಂಡಿತ್ಯದ ಕೃತಿ ಎಂದು ಅನ್ನಿಸಲೇ ಇಲ್ಲ.

ಈ ಘಟನೆ ನಡೆದು ಎರಡ್ಮೂರು ವರ್ಷಗಳಾದ ನಂತರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಸದಸ್ಯನಾಗಿ ನೇಮಕಗೊಂಡೆ. ಒಮ್ಮೆ ಪರಿಷತ್ತಿನ ಸಭೆಯಲ್ಲಿ ಪ್ರೊ|| ಕೆ.ಜಿ.ಎನ್.ಅವರ ಸಮಗ್ರ ಸಾಹಿತ್ಯ ಕುರಿತು ವಿಚಾರ ಸಂಕಿರಣ ನಡೆಸುವಂತೆ ಸಲಹೆ ನೀಡಿದೆ. ಈ ಸಲಹೆ ಕಾರ್ಯ ರೂಪದ ಅಂಕಿತ ಪಡೆಯಲು ಪರಿಷತ್ತಿನ ಜಿಲ್ಲಾ ಕಾರ್ಯದರ್ಶಿ ಬಾ.ಹ.ರಮಾಕುಮಾರಿಯವರ ಸಹಕಾರ ದೊರೆಯಿತು. ನಮ್ಮ ಪರಿಷತ್ತಿನ ಈ ನಿರ್ಧಾರವನ್ನು ಪ್ರೊ|| ಕೆ.ಜಿ.ಎನ್‌ಗೆ ತಿಳಿಸಿದೆವು. (ಈ ವೇಳೆಗಾಗಲೇ ಅವರು ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು.) ಅವರು ಸ್ವಲ್ಪ ಕಾಲ ಯೋಚಿಸಿ ಒಪ್ಪಿಕೊಂಡರು. ತಮ್ಮ ಕೃತಿಗಳ ಮೇಲೆ ಪ್ರಬಂಧ ಮಂಡಿಸಲು ಯಾವ-ಯಾವ ಸಾಹಿತಿಗಳನ್ನು ಕರೆಸೋಣವೆಂದು ಕೇಳಿದಾಗ, ದೊಡ್ಡದಾಗಿ ನಕ್ಕು 'ನಿಮಗೆ ಸರಿ ಅನ್ನಿಸಿದ ವ್ಯಕ್ತಿಗಳನ್ನು ಕರೆಯಿರಿ. ಆದರೆ ಅವರು ವಸ್ತುನಿಷ್ಠವಾಗಿ, ನಿಷ್ಠೂರವಾಗಿ ಮಾತನಾಡುವವರು ಆಗಿದ್ದರೆ ಸಾಕೆಂದು' ಮತ್ತೆ ಗೊಳ್ಳನೆ ನಕ್ಕರು. ಮತ್ತೆ ಮಾತು ಮುಂದುವರೆಸಿ 'ಹ್ಞಾ ವಿಮರ್ಶೆಯ ಮಾನದಂಡ ಗೊತ್ತಿಲ್ಲದ, ಶುಷ್ಕ ಪಾಂಡಿತ್ಯವುಳ್ಳವರು ಬೇಡ ಎಂದರು. ನಂತರ ವಿಚಾರ ಸಂಕಿರಣಕ್ಕೆ ಜಿಲ್ಲಾ ಕಸಾಪ ಕಾರ್ಯಕಾರಿ ಸಮಿತಿ ನಿರ್ಧರಿಸಿದ ಸಾಹಿತಿಗಳನ್ನು (ವಿಮರ್ಶಕರನ್ನು) ಹಾಕಿಕೊಂಡೆವು. ಆಹ್ವಾನ ಪತ್ರಿಕೆ ನೋಡಿದ ಪ್ರೊ|| ಕೆ.ಜಿ.ಎನ್. ಯಾವುದೇ ಚಕಾರವೆತ್ತಲಿಲ್ಲ.

ನಾನು ಮಾತ್ರ ಪ್ರೊ|| ಕೆ.ಜಿ.ಎನ್. ಅವರನ್ನು ಹೀಯಾಳಿಸಿದ್ದ ಆ ಕವಿವರ್ಯರನ್ನು ಈ ವಿಚಾರ ಸಂಕಿರಣಕ್ಕೆ ಭಾರಿ ಪ್ರೀತ್ಯಾದರಗಳಿಂದ ಆಹ್ವಾನಿಸಿದ್ದೆ. ಈ ವಿಚಾರ ಸಂಕಿರಣಕ್ಕೆ ಆ ಕವಿವರ್ಯರು ಬಂದಿದ್ದರು. ಒಮ್ಮೆ ನಾವು ಭೇಟಿಯಾದಾಗ, ಸ್ವತಃ ಅವರೆ, ಇಂದ್ರಕುಮಾರ್....... ನಾನು ನಾಗರಾಜಪ್ಪನ ಮರುಚಿಂತನೆ ಬಗ್ಗೆ ಪೂರ್ವಗ್ರಹ ಪೀಡಿತನಾಗಿದ್ದೆ. ವಿಚಾರ ಸಂಕಿರಣದ ನಂತರ ಮತ್ತೆ ಮರುಚಿಂತನೆಯನ್ನು ಓದಿದೆ. ನೀನು ಮರುಚಿಂತನೆ ಬಗ್ಗೆ ಮಾಡಿದ್ದ ವಾದ ಸರಿ. ಆ ಪುಸ್ತಕದಿಂದ ನನ್ನ ಕಾವ್ಯ ಕೃಷಿಗೆ ಇನ್ನಷ್ಟು ಬಲ ಬಂದಿದೆ" ಎಂದರು. ಇಂತಹ ಸಂಗತಿಗಳು ನಮ್ಮ ಸಾಹಿತ್ಯ ಲೋಕದಲ್ಲಿ ಮಾಮೂಲು. ಇಲ್ಲಿ

ಅಪ್ರಸ್ತುತ ಎನ್ನಿಸಿದರೂ ಒಂದು ಮಾತನ್ನು ಹೇಳುತ್ತೇನೆ. ನನ್ನ ಅತ್ಯಂತ ಇಷ್ಟದ ಪ್ರೊ।। ಹೆಚ್. ಜಿ. ಸಣ್ಣಗುಡ್ಡಯ್ಯ ಅವರ 'ಏಕಾಂತ ಮತ್ತು ಇತರೆ ಪ್ರಬಂಧಗಳು' ಬಗ್ಗೆ ಕೂಡ ಕನ್ನಡ ಪ್ರಭದಲ್ಲಿ ಅತ್ಯಂತ ಕೆಟ್ಟ ವಿಮರ್ಶೆಯನ್ನು ಪ್ರೊ।। ಮಲ್ಲೇಪುರಂ ಜಿ.ವೆಂಕಟೇಶ್ ಮಾಡಿದ್ದರು. ನಾನು ಮತ್ತು ನನ್ನ ಆಪ್ತಸ್ನೇಹಿತರೆಲ್ಲಾ ಸೇರಿ ಪ್ರೊ।। ಹೆಚ್.ಜಿ.ಸಣ್ಣಗುಡ್ಡಯ್ಯ ಎಂತಹ ಮಹತ್ವದ ಲೇಖಕರೆಂಬುದನ್ನು ಕಾಮಾಲೆ ಕಣ್ಣಿನ ಜನಕ್ಕೆ ತೋರಿಸಿ ಕೊಡಲೇಬೇಕೆಂದು ಅವರ ಸಮಗ್ರ ಸಾಹಿತ್ಯ ಕುರಿತ ವಿಚಾರ ಸಂಕಿರಣವೊಂದನ್ನು ಏರ್ಪಡಿಸಿದೆವು. ನಂತರ ಆ ಕೃತಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂತು. ಬಿ.ಎ ಗೆ ಪಠ್ಯಪುಸ್ತಕವಾಗಿದ್ದು ಈಗ ಗತ ನೆನಪು. ನನ್ನ ಮಟ್ಟಿಗೆ ಯಾವುದೇ ಕೃತಿಯನ್ನು ಆ ಕೃತಿಯ ಲೇಖಕನನ್ನು ಮರೆತು (ಕ್ಷಣಕಾಲ) ಅಧ್ಯಯನದ ದೃಷ್ಟಿಯಿಂದ ಓದಿದರೆ ಆ ಕೃತಿಯ ಸತ್ವ ಏನೆಂಬುದು ತಿಳಿಯುತ್ತದೆ.

ಈ ವಿಚಾರ ಸಂಕಿರಣಕ್ಕೂ ಮುಂಚೆ ಗುಬ್ಬಿಯ ಗೆಳೆಯ ಎಂ.ಹೆಚ್. ನಾಗರಾಜರು ಕಟ್ಟಿದ 'ಅನಿಕೇತನ ಸಾಹಿತ್ಯ-ಸಾಂಸ್ಕೃತಿಕ ಸಂಶೋಧನಾ ಕೇಂದ್ರ'ದಿಂದ ಪ್ರಥಮ ಕೃತಿಯಾಗಿ ಹೊರತಂದ 'ಕತ್ತಲೆಗೆ ಮೂರು ಬಣ್ಣ' ಎಂಬ ಕೃತಿಗೆ ಪ್ರೊ।। ಕೆ.ಜಿ.ಎನ್ ಅವರದ್ದೇ ಮುನ್ನುಡಿ. ಅದರಲ್ಲಿ 'ಸಾಹಿತ್ಯದಲ್ಲಿ ಯೂನಿವರ್ಸಲ್ ಮತ್ತು ಪ್ರೊವಿನ್ಸಿಯಲ್' ಎಂಬ ಪರಿಕಲ್ಪನೆಗಳನ್ನು ಬಳಸಿ, ಸಂದರ್ಭೋಚಿತ ಸೋಗಿನಿಂದ ಸಂಸ್ಕೃತಿಯ ಹೆಸರಿನಲ್ಲಿ ಸಂಪತ್ತು ಲೂಟಿಯಾಗಿ, ಎಡ ಮತ್ತು ಬಲ ಪಂಥೀಯ ವಿದ್ರೋಹ ಕೃತ್ಯಗಳು ಸಾಹಿತ್ಯದಲ್ಲಿ ಹೆಚ್ಚುತ್ತಿವೆ ಎಂಬ ಮಾತು ಬರುತ್ತದೆ. ಈ ಮಾತುಗಳನ್ನೇ ನೆಪಮಾಡಿಕೊಂಡು ಪ್ರೊ।। ಕೆ.ಜಿ.ಎನ್ ಯಾವ ಪಂಥ ಎಂದು ತಿಳಿಯುವ ಕುತೂಹಲ ಉಂಟಾಯಿತು. ಈವರೆಗೆ ಅವರೂ ಬರೆದಿರುವ ಮುನ್ನುಡಿ, ಬೆನ್ನುಡಿ ಲೇಖನ ಮತ್ತು ದೊರೆತ ಅವರ ಪುಸ್ತಕಗಳನ್ನು ಓದಿದೆ. ಆಗ ನನಗೆ ಸ್ಪಷ್ಟವಾಗಿ ಅನ್ನಿಸಿದ್ದು 'ಈ ವ್ಯಕ್ತಿ ಮನುಷ್ಯ ಪ್ರೀತಿ' ಇರುವ ಮಾನವತಾವಾದದ ಬಗ್ಗೆ ಆಸಕ್ತಿಯಿರುವರೆಂದು! ಈ ಸಂದರ್ಭದಲ್ಲೇ 'ಅನಿಕೇತನ' ದಿಂದ ಹೊರತರುತ್ತಲಿರುವ ಪ್ರೊ।। ಕೆ.ಜಿ.ಎನ್ ರವರ ಎರಡನೆ ವಿಮರ್ಶಾ ಸಂಕಲನವಾದ 'ಇಕ್ಕಟ್ಟು-ಬಿಕ್ಕಟ್ಟು' ಕೃತಿಯ ಬಹುತೇಕ ಲೇಖನಗಳ ಕರಡು ತಿದ್ದುವ ಕೆಲಸ ನನ್ನ ಹೆಗಲಿಗೆ ಬಿತ್ತು. ಆಗ ಕೆ.ಜಿ.ಎನ್. ಏನೆಂದು ನನಗೆ ಇನ್ನಷ್ಟು ಸ್ಪಷ್ಟವಾಗ ತೊಡಗಿದರು.

ಗುಬ್ಬಿ ತಾಲ್ಲೂಕಿನ ಕಲ್ಲೂರು ಗ್ರಾಮದ ಬಡ ನೇಕಾರರ ಕುಟುಂಬದಿಂದ ಬಂದ ಪ್ರೊ।। ಕೆ.ಜಿ.ಎನ್. ತಮ್ಮ ಜೀವನದ ಉದ್ದಕ್ಕೂ (ಬಹುಶಃ ಅವರು ಉಪನ್ಯಾಸಕರಾಗುವವರೆಗೆ) ಬಡತನವನ್ನು ಬೆನ್ನಿಗೆ ಕಟ್ಟಿಕೊಂಡು ಸ್ವಾಭಿಮಾನದಿಂದ ಬದುಕಿದವರು. ಅವರ ಸಮಕಾಲೀನರು ಹೇಳುವಂತೆ 'ತಮ್ಮ ಆತ್ಮಸಾಕ್ಷಿ ನಿಯತ್ತಿನಿಂದ ಬದುಕಿದವರು. ತಮ್ಮ ಬದುಕಿನಲ್ಲಿ ರಾಜಿಮಾಡಿಕೊಂಡಿದ್ದರೆ ಅವರಿಗೆ ಇವತ್ತಿಗೂ ಕೂಡ ಏನೆಲ್ಲಾ ಪ್ರಶಸ್ತಿ, ಸೌಲಭ್ಯಗಳು ದೊರೆಯುತ್ತಿದ್ದವೆಂಬುದನ್ನು ಅವರ ಅತ್ಯಂತ ಆಪ್ತ ಸ್ನೇಹಿತರೇ ಹೇಳುತ್ತಾರೆ. ಪ್ರೊ।। ಕೆ.ಜಿ.ಎನ್. ಸಿದ್ಧಗಂಗಾ ಮಠದ ವ್ಯವಸ್ಥೆಯಲ್ಲಿ ಪ್ರಮುಖರಾಗಿದ್ದಾಗಲೂ ಸಹ ಯಾವುದೇ ಆಸೆ, ಆಮಿಷ, ಕೀರ್ತಿ ಶನಿಗಳ ಬೆನ್ನತ್ತಿ ಹೋದವರಲ್ಲ. ನಿರ್ಭಿಡೆಯ ನಿಷ್ಠೂರಿಗರಾಗಿಯೇ ಉಳಿದ ಪ್ರೊ।। ಕೆ.ಜಿ.ಎನ್ ವ್ಯಕ್ತಿತ್ವದ ಎದುರು ಮಾತನಾಡಲು ಅವರ ಸಮಕಾಲೀನ ಕೆಲ ಸಾಹಿತಿಗಳಿಗೆ ಆಂತರಿಕ ಭಯವಿರುವುದು ನನ್ನಂತಹ ಅವರ ಒಡನಾಡಿಗಳಿಗೆ ಗೊತ್ತಿರುವ ವಿಷಯವೇ ಆಗಿದೆ.

ಒಮ್ಮೆ ಬೆಂಗಳೂರಿಗೆ ಹೋಗಿದ್ದೆ. ಯಾಕೊ ದಿಢೀರನೆ ಪ್ರೊ॥ ಕೆ.ಜಿ.ಎನ್. ನೆನಪಿಗೆ ಬಂದರು. ಅವರ ಮನೆಗೆ ಹೋದೆ. ಪುಣ್ಯ, ಮನೆಯಲ್ಲೇ ಇದ್ದರು. ಅದೂ ಇದೂ ಮಾತನಾಡಿದೆವು. ಆಗ ಪಕ್ಕನೆ ಒಂದು ವಿಷಯ ನನ್ನ ಮಿದುಳಲ್ಲಿ ಮಿಂಚಿತು. 'ಸಾರ್, ವಿಮರ್ಶೆಯ ಇಕ್ಕಟ್ಟು-ಬಿಕ್ಕಟ್ಟು ಕೃತಿ ಹೊರಬಂದ ಕೂಡಲೇ ಇನ್ನೊಂದು ಸುತ್ತು ಚರ್ಚೆ, ವಾಗ್ವಾದ, ಪ್ರತಿಭಟನೆಗಳಾಗುತ್ತವೆ. ನಾನು ಆ ಕೃತಿಯ ಲೇಖನಗಳ ಕರಡು ತಿದ್ದುವಾಗ ಹಾಗೆ ಅನ್ನಿಸಿತು' ಎಂದೆ. ನನ್ನ ಮಾತಿಗೆ ಬರಿದೇ ನಕ್ಕು, ಕ್ಷಣಕಾಲದ ನಂತರ 'ಈಗ ನನ್ನ ತಲೆಯಲ್ಲಿ ಬೇರೆ-ಬೇರೆ ಆಲೋಚನೆಗಳಿವೆ. ಅವನ್ನು ಕೃತಿರೂಪಕ್ಕೆ ಇಳಿಸಬೇಕು ಇಂದ್ರಕುಮಾರ್, ಅಂದಹಾಗೆ ನನ್ನ ಬದುಕಿನಲ್ಲಿ ಚರ್ಚೆ, ವಾಗ್ವಾದ, ಪ್ರತಿಭಟನೆ, ನಿಂದನಾ ಪತ್ರಗಳು ಮಾಮೂಲು,' ಎಂದು ಯಾವುದೇ ವ್ಯಂಗ್ಯವಿಲ್ಲದೆ, ಗಂಭೀರವಾಗಿ ನುಡಿದರು. ನಾನು ಮಾತು ಬದಲಿಸಿದೆ. 'ಅಲ್ಲಾ ಸಾರ್, ಶಂಕರಿ ಸ್ಮರಣ ಸಂಚಿಕೆಯಲ್ಲಿ (ದೇವಾಂಗ ಜನಾಂಗದ ಸ್ಮರಣ ಸಂಚಿಕೆ) ದೇವಾಂಗ ಜನಾಂಗಕ್ಕೆ ಸೇರಿದ ಹೇಮಕೂಟ ಶ್ರೀಗಳ ಜೊತೆ ತಾವು ನಡೆಸಿರುವ ಸಂದರ್ಶನವನ್ನು ಓದಿದೆ. ನಾನು ಬೇರೆ-ಬೇರೆ ಜಾತಿಯ ಮಠಾಧಿಪತಿಗಳ ಸಂದರ್ಶನವನ್ನೂ ಓದಿದ್ದೇನೆ. ಆದರೆ ಅಲ್ಲಿ ನೀವು ಕೇಳಿರುವಂತೆ ಯಾವುದೇ ದಯೆ, ದಾಕ್ಷಿಣ್ಯ, ಸ್ವಜಾತಿ ಮೋಹವನ್ನು ಸಂದರ್ಶಕರು ತೋರಿಸಿಲ್ಲ. ನಿಮಗೆ ನಿಮ್ಮ ಜನಾಂಗದ ಸ್ವಾಮಿ ಎಂಬ ಮಮಕಾರವಿಲ್ಲವೆ? ಎಂದು ಪ್ರಶ್ನಿಸಿದೆ. ನಾನು ಈ ಪ್ರಶ್ನೆಯನ್ನು ಬೇಕೆಂದೆ ಕೇಳಿದ್ದೆ. ಅವರ ಮುಖದಲ್ಲಿ ಗಂಭೀರತೆ ಮನೆ ಮಾಡಿತು. ನೋಡಿ ಇಂದ್ರಕುಮಾರ್, ಇವತ್ತು ಜಾತಿಗೊಂದು ಮಠ, ಜಾತಿಗೊಬ್ಬ ನಾಯಕ ಹುಟ್ಟಿ, ತಮ್ಮ ಮತ್ತು ತಮ್ಮ ಪರಮಾಪ್ತರ ಪರ ಬೇಳೆ ಬೇಯಿಸಿಕೊಳ್ಳಲು ಹೋಗುತ್ತಿದ್ದಾರೆ. ಕರ್ಮಠ ಬ್ರಾಹ್ಮಣರಿಗಿಂತ ಅಥವಾ ಇತರ ಮಠಾಧಿಪತಿಗಳಿಗಿಂತ ಈ ಕೆಳಜಾತಿ ಮಠದ ಪೀಠಾಧಿಪತಿಗಳು ಕಡಿಮೆ ಇಲ್ಲ. ದೇವಾಂಗ ಜನಾಂಗ ತಮ್ಮಲ್ಲಿನ ಮೌಢ್ಯತೆಯಿಂದ ಸಂಘಟಿತರಾಗಿಲ್ಲ. ಶ್ರೀಮಂತ ನೇಕಾರರು ಬಡ ನೇಕಾರರನ್ನು ಶೋಷಿಸುತ್ತಿದ್ದಾರೆ. ಈ ಜನಾಂಗವನ್ನು ಸಂಘಟಿತರನ್ನಾಗಿ ಮಾಡಿ, ಆರ್ಥಿಕ ಅಸಮಾನತೆ ನೀಗಿ, ಶೈಕ್ಷಣಿಕ, ಮತ್ತು ರಾಜಕೀಯ ರಂಗಗಳಲ್ಲಿ ಬಲಿಷ್ಠ ಶಕ್ತಿ ಪಡೆಯುವಂತಹ ಕೆಲಸವನ್ನು ಹೇಮಕೂಟದ ಶ್ರೀಗಳು ಮಾಡಬೇಕಾಗಿ ಬಂದಿದೆ. ಆ ಸ್ವಾಮಿಗಳ ಅಂತರಂಗದಲ್ಲಿರುವುದನ್ನು ದೇವಾಂಗ ಜನಾಂಗಕ್ಕೆ ತಿಳಿಸಿಕೊಡಬೇಕಾಗಿತ್ತು. ಅದಕ್ಕೆ ಹಾಗೆ ಪ್ರಶ್ನಿಸಿರುವೆ ಎಂದರು.

ವಚನ ಸಾಹಿತ್ಯದಲ್ಲಿ ವಿಶೇಷ ಅಧ್ಯಯನ ನಡೆಸಿರುವ ಮತ್ತು ವೀರಶೈವರ ಕುಲಾಚಾರಗಳ ಬಗ್ಗೆಯೂ ಸಾಕಷ್ಟು ಜ್ಞಾನವುಳ್ಳವರಾಗಿರುವ ಅವರು ತಮ್ಮ ಪಾಂಡಿತ್ಯದಿಂದ 'ಇಕ್ಕಟ್ಟು- ಬಿಕ್ಕಟ್ಟು' ಕೃತಿಯಲ್ಲಿ ಕನ್ನಡ ಸಾಹಿತ್ಯಾಸಕ್ತರಿಗೆ ಮಾರ್ಗದರ್ಶನ ನೀಡುವ ಹಾಗೂ ಹೊಸ ಹೊಳವುಗಳನ್ನು ದಾಖಲಿಸಿದ್ದಾರೆ. ಕನ್ನಡ ವಿಮರ್ಶಾ ಕ್ಷೇತ್ರದಲ್ಲಿ ಅದೊಂದು ಅಪೂರ್ವ ಕೃತಿಯಾಗಲಿದೆ. ಪ್ರೊ॥ ಕೆ.ಜಿ.ಎನ್. ನಮ್ಮೊಡನಿದ್ದು ಇಂತಹ ಗಟ್ಟಿಬರಹದ (ಅಕ್ಯಾಡಮಿಕ್ ಶಿಸ್ತಿನ ಮತ್ತು ಜೀವನಾನುಭವದ) ಕೃತಿಗಳನ್ನು ಕೊಟ್ಟು ಕನ್ನಡ ಸಾರಸ್ವತ ಲೋಕವನ್ನು ಉದ್ಧರಿಸಲಿ ಎಂಬುದೇ ನನ್ನ ಆಶಯವಾಗಿದೆ. ಕೊನೆಯದಾಗಿ ಒಂದು ಮಾತು 'ಮರುಚಿಂತನೆಯ ಪ್ರೊ॥ ಕೆ.ಜಿ. ನಾಗರಾಜಪ್ಪ ಎಂದೇ ಹೆಸರಾದ ಅವರು 'ಇಕ್ಕಟ್ಟು - ಬಿಕ್ಕಟ್ಟು' ಕೃತಿ ನಂತರ ಇಕ್ಕಟ್ಟು-ಬಿಕ್ಕಟ್ಟಿನ ಪ್ರೊ॥ ಕೆ.ಜಿ.ನಾಗರಾಜಪ್ಪ ಎಂದು ಕೀರ್ತಿವಂತರಾಗುತ್ತಾರೆಂಬುದೇ ನನ್ನ ಅನಿಸಿಕೆ. ♦

17. ಅಪೂರ್ವ ಸಿದ್ಧಿಯ ಲೇಖಕ

ಕವಿತಾಕೃಷ್ಣ

ಇಂದಿಗೆ ಸುಮಾರು 36 ವರ್ಷಗಳ ಹಿಂದಿನ ಮಾತು. ಆಗ ನಾನು ಶ್ರೀ ಸಿದ್ಧಗಂಗಾಮಠದ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಒಂದು ದಿನ ಡಾ|| ಶಿವಕುಮಾರಸ್ವಾಮಿಗಳನ್ನು ಕಾಣಲು ಹೋದೆ. ನಾನು ಆಗ ಎಸ್.ಎಸ್.ಎಲ್.ಸಿ ವಿದ್ಯಾರ್ಥಿ. 'ಕವನ ತರಂಗ' ಎಂಬ ಕವನ ಸಂಕಲನ ಹೊತ್ತಿಗೆ ರೂಪದಲ್ಲಿ ಪ್ರಕಟಿಸಿದ್ದೆ. ಅದರ ಪ್ರತಿಯೊಂದನು ಶ್ರೀಗಳವರಿಗೆ ನೀಡಲು ಹೋದೆ. ಸ್ವಾಮೀಜಿಯವರು ಓರ್ವ ವ್ಯಕ್ತಿಯೊಡನೆ ಸಮಾಲೋಚನೆಯಲ್ಲಿ ಮುಳುಗಿದ್ದರು. ನಾನು ಇದ್ದ ಪುಸ್ತಕವೊಂದನ್ನು ಶ್ರೀಗಳಿಗೆ ಇತ್ತೆ. ಅವರು ಪುಟಗಳನ್ನು ತಿರುವಿ, 'ಎಲ್ಲಿ ಪದ್ಯ ಹಾಡು' ಎಂದರು. ನಾನು ರಾಗವಾಗಿ ಹಾಡಿದೆ. ಶ್ರೀಗಳು ಸಂತೃಪ್ತಿಗೊಂಡು ಭಕ್ತಾದಿಗಳು ಮುಂದಿರಿಸಿದ್ದ ತಟ್ಟೆಯಿಂದ ಎರಡು ಕಿತ್ತಲೆಹಣ್ಣುಗಳನ್ನೆತ್ತಿ ನನ್ನ ಕೈಗಿತ್ತು ಹರಸಿದರು. ಸ್ವಾಮೀಜಿಗಳೊಡನೆ ಮಾತಿನಲ್ಲಿ ತಲ್ಲೀನರಾಗಿದ್ದ ವ್ಯಕ್ತಿ ನನ್ನನ್ನು ದಿಟ್ಟಿಸಿ ನೋಡಿ, ನಿನ್ನ ಹೆಸರೇನು? ಎಂದು ಕೇಳಿದರು. 'ಕವಿತಾಕೃಷ್ಣ' ಎಂದು ಉತ್ತರಿಸಿದೆ. ಅವರು ಪುಟಗಳನ್ನು ತಿರುವಿ, 'ನೋಡು ಚೆನ್ನಾಗಿ ಓದು, ಆನಂತರ ಬರಿ. ನಿನಗೆ ಒಳ್ಳೆ ಭವಿಷ್ಯ ಇದೆ' ಎಂದು ಶ್ರೀಗಳ ಮುಖ ನೋಡಿದರು. ಶ್ರೀಗಳು ಸಂತೃಪ್ತಿಯಿಂದ ನಕ್ಕು ಬೀಳ್ಕೊಟ್ಟರು.

"ನೋಡು, ಚೆನ್ನಾಗಿ ಓದು. ಆನಂತರ ಬರಿ. ನಿನಗೆ ಒಳ್ಳೆ ಭವಿಷ್ಯ ಇದೆ" ಎಂದ ವ್ಯಕ್ತಿ ಬಿಳಿಯ ಜುಬ್ಬ ಪೈಜಾಮ ಧರಿಸಿದ್ದರು. ಮಾಟವಾದ ಮೈಕಟ್ಟು. ಮಟ್ಟಸವಾದ ನಿಲುವು, ಕೈಯ್ಯಲ್ಲೊಂದು ಶ್ರೀರಾಮಕೃಷ್ಣಾಶ್ರಮದ ಪುಸ್ತಕ. ತೇಜಸ್ಸು ತುಂಬಿದ ಮುಖ. ಹರಳು ಹುರಿದಂತೆ ಮಾತು. ಆಕರ್ಷಕ ನಿಲುವು. ಶ್ರೀಗಳೊಡನೆ ಆಡಿದ ಮಾತುಗಳೆಲ್ಲ ಅಧ್ಯಾತ್ಮ ವಿಚಾರಧಾರೆ. ನಯ-ವಿನಯಗಳೊಂದಿಗೆ ಕೊಂಚ ಕಾಠಿಣ್ಯಭಾವವು ತುಂಬಿತ್ತು. ಶ್ರೀಗಳ ಸಾನಿಧ್ಯದಲ್ಲಿ ನಿಂತ ಆ ವ್ಯಕ್ತಿಯನ್ನು ಇವರು ಯಾರೋ ಮರಿಸ್ವಾಮಿಗಳಿರಬೇಕು ಎಂದುಕೊಂಡೆ! ಕೆಲ ದಿನಗಳನಂತರ ಗೊತ್ತಾಯಿತು. ಇವರು ಮರಿಸ್ವಾಮಿಗಳಲ್ಲ; ರಾಮಕೃಷ್ಣಾಶ್ರಮದಲ್ಲಿದ್ದು ಎಂ.ಎ. ಮುಗಿಸಿ ಬಂದಿರುವ ಸ್ನಾತಕೋತ್ತರ ಪದವೀಧರ. ಹೆಸರು ಕೆ.ಜಿ.ನಾಗರಾಜಪ್ಪ.

ಕನ್ನಡ ನಾಡಿಗೆ ಕೆ.ಜಿ. ನಾಗರಾಜಪ್ಪ ಎಂದು ಖ್ಯಾತರಾಗಿ, ನಮ್ಮೆಲ್ಲರ ಪಾಲಿಗೆ ಕೆ.ಜಿ. ಎನ್ ಎನಿಸಿದ ಇವರ ಪರಿಚಯ ನನಗೆ ಹೀಗಾಯಿತು. ನಾನು ವ್ಯಾಸಂಗ ಮಾಡುವ ಕಾಲದಲ್ಲಿ ಪ್ರಣತಿ ಪ್ರಕಾಶನ ಆರಂಭಿಸಿ 'ಶಿವಕುಮಾರನ ವಾಣಿ' ಪ್ರಕಟಿಸಿದರು. ಶ್ರೀಗಳ ಉಪನ್ಯಾಸ ಅಮೂಲ್ಯವಾದುದು. ಸಮಾಜಕ್ಕೆ ಅದು ಹೆಚ್ಚು ಅಗತ್ಯ ಎಂದು ತಿಳಿದವರಲ್ಲಿ ಶ್ರೀ ಕೆ.ಜಿ. ನಾಗರಾಜಪ್ಪ ಮೊದಲಿಗರೆಂದರೆ ಉತ್ಪ್ರೇಕ್ಷೆಯಾಗದು. ಕ್ಷೇತ್ರದ ಬಗ್ಗೆ, ಶ್ರೀಗಳ ಬಗ್ಗೆ ಹಲವಾರು ಲೇಖನ ಬರೆದು ಬೆಳಕು ಚೆಲ್ಲಿದರು. ಕೆ.ಜಿ.ಎನ್. ಪ್ರೌಢಶಾಲಾ

ಶಿಕ್ಷಕರಾಗಿ ಮುಂದೆ ಕಾಲೇಜು ಉಪನ್ಯಾಸಕರಾಗಿ, ಪ್ರವಾಚಕರಾಗಿ, ಪ್ರೊಫೇಸರ್ ಆಗಿ ಸಲ್ಲಿಸಿದ ಸೇವೆ ಅತ್ಯಂತ ಸ್ಮರಣೀಯ. ಅವರು ಆದರ್ಶ ಗುರುವಾಗಿದ್ದರು. ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯವನ್ನು ಹೆಚ್ಚಿಸಿದರು.

ನಾನು ಕಲ್ಲೂರಿನ ಸಮೀಪದ ಬಿಳಿನಂದಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕನಾಗಿದ್ದೆ. ನನ್ನ ಶಿಕ್ಷಕವೃತ್ತಿ ಅಲ್ಲೇ ಆರಂಭವಾದರೂ ಕಲ್ಲೂರಿನಲ್ಲಿ ವಾಸವಾಗಿದ್ದೆ. ನಮ್ಮ ಮನೆ ಸಮೀಪದಲ್ಲಿ ಗಂಗಣ್ಣ ಎಂಬುವರಿದ್ದರು. ಅವರ ಶ್ರೀಮತಿ ತುಂಬಾ ಸಾಧ್ವಿ. ನನ್ನನ್ನು ತುಂಬಾ ಮಮತೆಯಿಂದ ಕಾಣುತ್ತಿದ್ದರು. ದಿನಗಳೆದಂತೆ ಅರಿವಾಯ್ತು ಮಿಠಾಯಿ ಗಂಗಣ್ಣ ದಂಪತಿಗಳೇ ಕೆ.ಜಿ.ನಾಗರಾಜಪ್ಪ ಅವರ ತಾಯಿ ತಂದೆ ಎಂದು. 'ನಮ್ಮ ಮಗಾ ಅವರು ನಿಂಗೂ ಗೊತ್ತಾಪ್ಪಾ' ಆ ತಾಯಿ ಮಗನನ್ನು ನೆನೆದು, ಹಂಬಲಿಸಿ ಆನಂದಿಸಿದ ದೃಶ್ಯ, ಆಡಿದ ಮಾತು ನನ್ನ ಮನದಲ್ಲಿ ಇಂದಿಗೂ ಅಚ್ಚೊತ್ತಿದೆ.

ಕೆ.ಜಿ.ಎನ್. ಚಿಕ್ಕಪ್ಪ ಲಿಂಗಣ್ಣ. ಅವರ ಮಗ ನಾಗರಾಜು ನನಗಲ್ಲಿ ಪ್ರಾಣಾಪ್ತ ರಾಗಿದ್ದರು. ನಾಗರಾಜು ಹೇಳುತ್ತಿದ್ದರು: 'ನಮ್ಮಣ್ಣ ಅವರು ಸ್ವಾಮಿಗಳಂತೆ ತಿಳಿವು ಉಳ್ಳವರು. ಆಶ್ರಮದಲ್ಲಿ ಓದಿದವರು. ತುಂಬಾ ಬುದ್ಧಿವಂತರು. ಈಗ ಮಠದಲ್ಲಿದ್ದಾರೆ:

ಒಮ್ಮೆ ಕಲ್ಲೂರಿನಲ್ಲಿ ಪ್ರಗತಿ ವಿದ್ಯಾಸಂಸ್ಥೆಯ ಯುವಕರು ಪ್ರೌಢಶಾಲೆಯೊಂದನ್ನು ಆರಂಭಿಸಿದರು. ಅಂದು ಡಾ|| ಶಿವಕುಮಾರಸ್ವಾಮಿಗಳು ಆಗಮಿಸಿದ್ದರು. ಸಾವಿರಾರು ಮಂದಿ ಜನ ಸೇರಿದ್ದರು. ಸುತ್ತೇಳು ಹಳ್ಳಿಯ ಭಕ್ತಾಭಿಮಾನಿಗಳೂ ಬಂದಿದ್ದರು. ಅಂದಿನ ಸಭೆಯಲ್ಲಿ ಕೆ.ಜಿ. ನಾಗರಾಜಪ್ಪನವರು ಮಾಡುವ ಭಾಷಣ ಕೇಳಲು ಜನ ಕಿವಿದು ನಿಂತಿದ್ದರು. ಅಂದು ಕೆ.ಜಿ.ಎನ್. ಸುಮಾರು 40 ನಿಮಿಷಗಳ ಕಾಲ ನಿರರ್ಗಳವಾಗಿ ಮಾತನಾಡಿದರು. ಕಂಚಿನ ಕಂಠದಿಂದ ಮಿಂಚಿನಂತಹ ಚುಚ್ಚು ನುಡಿಗಳನ್ನು ಆಡಿದರು. ಊರಿನ ಕೆಲವರ ಧೋರಣೆ ಖಂಡಿಸಿದರು. ಜಾತಿ-ಕುಲ-ಗೋತ್ರ-ಮಡಿ-ಮೈಲಿಗೆ ವಿರುದ್ಧ ಬಿರುಸಾಗಿ ಮಾತನಾಡಿದರು. ಅವರ ಎದೆಗಾರಿಕೆ ಕಂಡು ನಾನು ಬೆರಗಾದೆ. ಕೆ.ಜಿ.ಎನ್ ಯಾರಿಗೂ, ಯಾವುದಕ್ಕೂ ಸೊಪ್ಪುಹಾಕದ ನಿಷ್ಠುರವಾದಿ ಎಂಬುದು ಅಂದೇ ನನಗೆ ಖಚಿತವಾಯ್ತು.

ತುಮಕೂರಿನಲ್ಲಿ ಪ್ರಥಮ ಜಿಲ್ಲಾ ಸಾಹಿತ್ಯ ಸಮ್ಮೇಳನ ನನ್ನ ಬಾಲ್ಯದಲ್ಲಿ ಜರುಗಿತ್ತು. ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಆ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕ.ವೆಂ.ರಾಘವಾಚಾರ್ ಸಮ್ಮೇಳನ ಉದ್ಘಾಟಿಸಿದರು. ಎಸ್.ಎಲ್. ಭೈರಪ್ಪ, ಮಾನ ಚೌಡಪ್ಪ, ಟಿ.ಸುನಂದಮ್ಮ ಮೊದಲಾದವರು ಪಾಲುಗೊಂಡಿದ್ದರು. ಅಂದಿನ ಕವಿಗೋಷ್ಠಿಯಲ್ಲಿ ಕೆ.ಜಿ. ನಾಗರಾಜಪ್ಪ ಅವರು ಕವಿತೆಯೊಂದನ್ನು ವಾಚಿಸಿದರು. ಅದು ನಾನು ಕೇಳಿದ ಅವರ ಮೊದಲ ಕವಿತಾ ವಾಚನವಾಗಿತ್ತು. ಕವನದ ಸಾಲುಗಳು ಕ್ರಾಂತಿಯ ಕಿಡಿಗಳಾಗಿದ್ದವು. 'ಕಂತ್ರಿನಾಯಿ' ಮುಂತಾದ ಪದಗಳನ್ನು ಧಾರಾಳವಾಗಿ ಬಳಸಿದ್ದರು. ಉಗ್ರತೆಯೊಂದಿಗೆ

ವಿಡಂಬನೆಯೂ ಇತ್ತು. ಜನ ಕವಿತೆಗೆ ಸ್ಪಂದಿಸಿದರು. ಕೆ.ಜಿ.ಎನ್. ವಾಚಿಸಿದ ರೀತಿ ಸಹ ಆಕರ್ಷಕವಾಗಿತ್ತು.

ಅಂದಿನಿಂದ ನಾನು ಸಾಹಿತ್ಯ ವಲಯದಲ್ಲಿ ಅವರ ಉಪನ್ಯಾಸ, ಭಾಷಣ, ಸಂದೇಶ, ಕವಿತಾವಾಚನ ಕೇಳುತ್ತಿದ್ದೆ. ಅವರು ಶ್ರೀ ಸಿದ್ದಗಂಗಾ ಕಾಲೇಜಿನ ಅಧ್ಯಾಪಕರಾದ ಮೇಲೆ ತುಂಬಾ ಜನಪ್ರಿಯರಾದರು. ಇದ್ದುದನ್ನು ಇದ್ದಂತೆ ಹೇಳುವ ಎದೆಗಾರಿಕೆ ಅವರ ಜಾಯಮಾನವಾಗಿತ್ತು. ಅವರಲ್ಲಿ ಸಮಯ ಸಾಧಕತನ, ಕೀರ್ತಿಶನಿ ಹಿಡಿಯುವ ಬಯಕೆ, ಅಗ್ಗದ ಜನಪ್ರಿಯತೆ ಗಳಿಸುವ ವಿಧಾನ, ಗುಂಪುಗಾರಿಕೆ ಇವುಗಳಿಂದ ಮೈಲುಗಟ್ಟಲೆ ದೂರ. ಇನ್ನು ಜಾತಿಯತೆಯ ವಿಷಜಾಲವೆಂದರೆ ಇವರಿಗೆ ಒಗ್ಗದ ವಿಚಾರ. ಮನಸ್ಸಿಗೆ ಒಗ್ಗದ ವಿಚಾರಗಳೊಂದಿಗೆ ಎಂದೆಂದೂ ರಾಜಿ ಮಾಡಿಕೊಳ್ಳದ ಕೆ.ಜಿ.ಎನ್. ಲೇಖಕರ ತಾರಾಬಳಗದಲ್ಲಿ ಅವರೋರ್ವ ಧ್ರುವತಾರೆ.

ಕೆ.ಜಿ.ಎನ್. ಕೆಲವರಿಗೆ ಅತ್ಯಂತ ಒರಟು ವ್ಯಕ್ತಿಯಾಗಿ ಕಂಡಿದ್ದಾರೆ. ಅವರು ಕಡ್ಡಿಮುರಿದಂತೆ ಹೇಳುವ ಗುಣ ಈ ಭಾವನೆಗೆ ಕಾರಣವಾಗಿದೆ. ಆದರೆ ನಾನು ಮೂರು ದಶಕಗಳಿಗೂ ಹೆಚ್ಚಾಗಿ ಅವರನ್ನು ಕಂಡಿದ್ದೇನೆ. ಬರಹಗಾರನಾಗಿ, ಜಿಲ್ಲಾ ಕ.ಸಾ.ಪ. ಅಧ್ಯಕ್ಷನಾಗಿ ಒಡನಾಡಿ ನೋಡಿದ್ದೇನೆ. ಅವರು ಓರ್ವ ಸುಸಂಸ್ಕೃತ ವ್ಯಕ್ತಿ. ಆಳವಾಗಿ ಅಧ್ಯಯನ ಮಾಡಿ ಮೇಲೆ ಬಂದ ಮಹಾನ್ ಸಾಧಕ. ಎಂದೂ ಗುಂಪುಗುಳಿತನ ಮಾಡಿದವರಲ್ಲ. ಸನ್ಮಾನಕ್ಕೆ ಮನಸೋಲುವವರಲ್ಲ. ಹೊಗಳಿಕೆಗೆ ಹಿಗ್ಗದ, ತೆಗಳಿಕೆಗೆ ಕುಗ್ಗದ ಅವರ ಗುಣ ಸ್ಥಿತ ಪ್ರಜ್ಞನ ಲಕ್ಷಣಗಳನ್ನು ಹೋಲುತ್ತದೆ. ಕೆಟ್ಟದನ್ನು ಕಂಡರೆ ಕೆ.ಜಿ.ಎನ್. ವಜ್ರದಷ್ಟು ಕಠಿಣ ಚಿತ್ತರಾಗುತ್ತಾರೆ. ಒಳ್ಳೆಯದನ್ನು ಕಂಡಾಗ ಹೂವಾಗಿ ಅರಳುತ್ತಾರೆ. ಸುವಾಸನೆ ಬೀರಿ ಆನಂದೋಲ್ಲಾಸ ವ್ಯಕ್ತ ಪಡಿಸುತ್ತಾರೆ.

ನಮ್ಮ ಕವಿತಾ ಪ್ರಕಾಶನಕ್ಕೆ 25 ವರ್ಷ ತುಂಬಿದಾಗ ಒಂದು ದಿನದ ಸಾಹಿತ್ಯೋತ್ಸವ ನಡೆಯಿತು. ವಿಚಾರಗೋಷ್ಠಿ, ಕವಿಗೋಷ್ಠಿ, ಪುಸ್ತಕ ಬಿಡುಗಡೆ, ಸನ್ಮಾನಾದಿಗಳು ಜರುಗಿದವು. ಪೂರ್ವಭಾವಿ ಸಭೆಯಲ್ಲಿ ಈ ಮೇಳಕ್ಕೆ ಯಾರನ್ನು ಸರ್ವಾಧ್ಯಾಕ್ಷರನ್ನಾಗಿ ಆರಿಸುವುದು? ಎಂದು ವಿಜಯವಾಣಿ ಸಂಪಾದಕ ಹಾಗೂ ನನ್ನ ಗುರುಶ್ರೀಗಳಾದ ಹೆಚ್.ಆರ್ ಗುಂಡೂರಾವ್ ಕೇಳಿದರು. ನಾನು, ಇನ್ನಾರು ಕೆ.ಜಿ. ನಾಗರಾಜಪ್ಪ ಎಂದೆ, 'ಇರಲಿ ಕಣಯ್ಯ' ಎಂದರು. ಸಭೆ ಚಪ್ಪಾಳೆ ತಟ್ಟಿತು. ಅವರ ಅಧ್ಯಕ್ಷತೆಯಲ್ಲಿ ವೈಭವೋಪೇತವಾಗಿ ಕವಿತಾ ಪ್ರಕಾಶನದ ಬೆಳ್ಳಿ ಹಬ್ಬ ಜರುಗಿತು. ಇನ್ನೊಂದು ವಿಶೇಷವೆಂದರೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಅಂದೇ ಕೆ.ಜಿ.ಎನ್. ಅವರಿಗೆ ಸದಸ್ಯತ್ವ ಇತ್ತು ಗೌರವಿಸಿತು.

ಕೆ.ಜಿ.ಎನ್. ತುಂಬಾ ಶಿಸ್ತಿನ ಜೀವಿ. ಅವರು ಎಂದೂ ಪ್ರಶಂಸೆಯ ಕುದುರೆ ಏರಿ ಸವಾರಿ ಮಾಡಲಿಲ್ಲ. ಉತ್ತಮ ವಾಗ್ಮಿ. ವಿಚಾರ ಪರರು. ಕಂಡದ್ದನ್ನು ಕಂಡಂತೆ

ಹೇಳುವುದು ಅವರ ಜಾಯಮಾನ. ನಾನು ಕ.ಸಾ.ಪ. ಅಧ್ಯಕ್ಷನಾಗಿದ್ದಾಗ ಕಂಡ ತಪ್ಪುಗಳನ್ನು ಭೇಟಿಯಾದಾಗ ಖಂಡಿಸುತ್ತಿದ್ದರು. ತುಮಕೂರಿನಿಂದ ಬೆಂಗಳೂರಿಗೆ ಹೊರಟಾಗ ರೈಲಿನಲ್ಲಿ ಭೇಟಿಯಾಗುತ್ತಿದ್ದರು. ಹಿರಿ ಅಣ್ಣನಂತೆ ಬುದ್ಧಿ ಹೇಳುತ್ತಿದ್ದರು. ನನ್ನ ಬರಹ, ಭಾಷಣಗಳ ಬಗ್ಗೆಯೂ ವಿಚಾರ ನಡೆಸುತ್ತಿದ್ದರು. ಈಚೆಗೆ ಏನು ಬರೆದಿರಿ? ಎಂದು ಬಹುವಚನದಲ್ಲೇ ಮಾತನಾಡಿಸುತ್ತಿದ್ದರು. ಒಳ್ಳೆಯದನ್ನು ಕಂಡಾಗ 'ಭೇಷ್' ಎಂದು ಬೆನ್ನು ತಟ್ಟುತ್ತಿದ್ದರು.

ಎದುರು ಕಂಡಾಗ ಬಾಯ್ತುಂಬ ಹೊಗಳಿ, ಮರೆಯಾದ ಕೂಡಲೆ ಹೀನಮಾನವಾಗಿ ನಿಂದಿಸಿ ಆಡಿಕೊಳ್ಳುವ ಪರಿಸರದಲ್ಲಿ ಬೆಳೆದ ನನಗೆ ಈ ನಿಷ್ಠುರವಾದಿ ಕೆ.ಜಿ.ಎನ್. ಓರ್ವ ಅಪೂರ್ವ ವ್ಯಕ್ತಿಯಾಗಿ ಕಾಣುತ್ತಾರೆ. ತನ್ನ ದಾರಿಗೆ ತಾನೇ ಗುರುವಾಗಿ, ತನ್ನ ಸಾಹಿತ್ಯ ಶಿಲ್ಪಕ್ಕೆ ತಾನೇ ರೂವಾರಿಯಾಗಿ, ತನ್ನವೇ ಆದ ಪರಿಕಲ್ಪನಾನುಭಾವಗಳಿಗೆ ಮೂರ್ತರೂಪ ನೀಡುವ ಸೃಜನಶೀಲ ವ್ಯಕ್ತಿಯಾಗಿ ಕಾಣುತ್ತಾರೆ.

ಕೆ.ಜಿ.ಎನ್. ತುಮಕೂರು ವಲಯದಿಂದ ದೂರಾಗಿ ಬೆಂಗಳೂರು ಸೇರಿದ್ದು ನನಗಂತು ಅಪಾರ ವೇದನೆಯನ್ನುಂಟುಮಾಡಿದೆ. ಓರ್ವ ಸುಸಂಸ್ಕೃತ, ಸೃಜನಶೀಲ, ವಿಚಾರಪರ ವ್ಯಕ್ತಿತ್ವದ ಅಪೂರ್ವ ಶಕ್ತಿಶಾಲಿ, ಆಳವಾದ ಚಿಂತನಾಲಹರಿ ಹರಿಸುವ ಬರಹಗಾರ ಇಲ್ಲೇ ನೆಲಸಬೇಕಿತ್ತು. ಹತ್ತು ಹಲವು ಮಂದಿಗೆ ದಾರಿ ದೀಪವಾಗಬೇಕಿತ್ತು. ಕೆ.ಜಿ.ಎನ್. ಸಿದ್ಧಾಂತ ಸರ್ವಕಾಲಿಕ ಸತ್ಯವಾದುದು. ಅಧರಕ್ಕೆ ಔಷದಿ ಕಹಿಯಾದರೂ ಉದರಕ್ಕೆ ಸಿಹಿ, ಆರೋಗ್ಯಶಾಲಿ, ಕೆ.ಜಿ.ಎನ್. ಇಲ್ಲದ ತುಮಕೂರು ಉಪ್ಪಿಲ್ಲದ ಊಟವಾಗಿದೆ.

ಕತ್ತಲ ದೂಡುವುದು ದೀಪದ ಕೆಲಸ, ಬೆಳಕು ಚೆಲ್ಲುವುದು ಬರಹಗಾರನ ಕೆಲಸ, ಕಣ್ಣು ತೆರೆಸುವುದು ವಿಮರ್ಶಕನ ಕೆಲಸ. ಕೆ.ಜಿ.ಎನ್‌ರವರು ಅತ್ಯುತ್ತಮ ಕೆಲಸ ಮಾಡಿದ್ದಾರೆ. ಅವರು ಅತ್ಯಂತ ಕುಶಲಿ. ಸತ್ಯಾಸತ್ಯ ವಿಚಾರವನ್ನು ಹೆಕ್ಕಿ ತರುವಲ್ಲಿ ಪಾತಾಳಗರಡಿ ಅವರು. ಪರಂಪರಾಗತ ವಿಚಾರಗಳನ್ನು ವೈಜ್ಞಾನಿಕ ಚಿಂತನೆಗಳಿಂದ ಪಾರದರ್ಶಕಗೊಳಿಸುವ ಸಂಶೋಧಕ ಅವರು. ಮನ ಉಳ್ಳವರು ತಲೆದೂಗುವ ಶೈಲಿ. ಅಂತರಂಗದ ಅರಿವು ಹೆಚ್ಚಿಸುವ ವಿಷಯ ಸಂಪತ್ತು. ಮಂಡಿಸುವ ಜಾಣ್ಮೆ ತುಂಬಾ ಪ್ರಿಯ. ಮರುಚಿಂತನೆ ಮರು ಮುದ್ರಣಗೊಳ್ಳುತ್ತಿರುವುದು ಸ್ವಾಗತಾರ್ಹ ಸಂಗತಿ.

ಹಳಗನ್ನಡ ಮತ್ತು ನಡುಗನ್ನಡದ ಅವಧಿಯ ಸಾಹಿತ್ಯವನ್ನು ಕುರಿತ ಶ್ರೀ ಕೆ.ಜಿ. ನಾಗರಾಜಪ್ಪನವರ 'ಮರುಚಿಂತನೆ' ಕೃತಿ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಅಲೆಯನ್ನೇ ಎಬ್ಬಿಸಿದೆ. ಅದು ಕೆಲವು ಮಂದಿಗೆ ಅರಗಿಸಿಕೊಳ್ಳಲಾಗದ ವಸ್ತುವಾಗಿದ್ದರೆ, ಮತ್ತೆ ಕೆಲವರಿಗೆ ಸ್ವಾದಿಸಲು ಅರ್ಹವಾದ ವಸ್ತುವಾಗಿದೆ. ಒಟ್ಟಾರೆ ಲೇಖಕರು ಇಲ್ಲಿ ಕನ್ನಡ ಸಾಹಿತ್ಯ ಪ್ರಿಯರನ್ನೂ, ಧರ್ಮ ಭೀರುಗಳನ್ನೂ ಮರು ಚಿಂತನೆಗೆ ಹಚ್ಚಿದ್ದಾರೆ. ಧೀಮಂತ

ವೈಚಾರಿಕ ಪ್ರಜ್ಞೆಯನ್ನು ಅಭಿವ್ಯಕ್ತಿ ಗೊಳಿಸುವಲ್ಲಿ ಶ್ರೀಯುತರು ತೋರಿಸಿರುವ ಧೈರ್ಯ ಅಸಾಧಾರಣವಾದದ್ದು. ಆಧಾರಪೂರ್ವಕವಾಗಿ ಅನಿಸಿದ್ದನ್ನು ಕಡ್ಡಿ ಮುರಿದಂತೆ ಹೇಳಿದ್ದಾರೆ. ಅವರ ಸಿಂಹಾವಲೋಕನ ಕ್ರಮದ ಪ್ರತಿಭೆಯನ್ನು ಎಂತಹವರೂ ಮೆಚ್ಚಲೇಬೇಕು. ಈಗಾಗಲೆ ಈ ಕೃತಿಯು ಕನ್ನಡ ಸಾಹಿತ್ಯ ಜಗತ್ತಿನಲ್ಲಿ ವಿಮರ್ಶಿಸಲ್ಪಟ್ಟು ಮಿಶ್ರ ಪ್ರತಿಕ್ರಿಯೆಗಳನ್ನು ಪಡೆದಿದೆ. ವಾದ ವಿವಾದಗಳನ್ನು ಎಬ್ಬಿಸಿದೆ, ಕೆಲವರಿಗೆ ತಲೆಕೆರೆಯುವಂತೆ ಮಾಡಿದೆ, ಮತ್ತೆ ಕೆಲವರಿಗೆ ನುಂಗಲಾಗದ ತುತ್ತಾಗಿದೆ, ಮತ್ತೆ ಹಲವರಿಗೆ ಕುತ್ತು ಬರಿಸಿದೆ. ಮತ್ತೆ ಕೆಲವರನ್ನು ಮರುಚಿಂತನೆಯ ಮತ್ತಿನಲ್ಲಿ ಮಲಗಿಸಿದೆ. ಇದೆಲ್ಲಾ ಒಳ್ಳೆಯ ಲಕ್ಷಣಗಳೆ. ಒಂದು ಕೃತಿ ಹೀಗೆ ಸಮಾಜವನ್ನು ಪರೀಕ್ಷೆಗೆ ಒಳಪಡಿಸುವುದು ಆರೋಗ್ಯದ ಲಕ್ಷಣ ಎಂಬುದನ್ನು ನಾವು ಮರೆಯಬಾರದು.

ಮರುಚಿಂತನೆಯಲ್ಲಿ ಕಾವ್ಯ-ಹೊಸದೃಷ್ಟಿ-ಹಳಗನ್ನಡ ನಡುಗನ್ನಡ, ಅಲ್ಲಮನ ಒಂದು ವಚನದ ಅರ್ಥ, ಶರಣರು ಏಕಮುಖ ಚಿಂತಕರು, ವೀರಶೈವಧರ್ಮ ಮತ್ತು ಕನ್ನಡ ಸಾಹಿತ್ಯ, ಕನಕದಾಸರ ಕೀರ್ತನೆಗಳು, ನಾಮಧಾರಿ ಲಿಂಗಾಯಿತರು ನೆಲೆ-ಹಿನ್ನೆಲೆ, ಹೀಗೆ ಅಮೂಲ್ಯವಾದ ನಾನಾ ವಿಷಯಗಳನ್ನು ತೊಳೆ ತೊಳೆಯಾಗಿ ಬಿಡಿಸಿರುವ ಆರು ಲೇಖನಗಳಿವೆ. ಈ ಕೃತಿಯನ್ನು ಓದಲು ಆರಂಭಿಸುವಾಗ ನಾವು ಪೂರ್ವಗ್ರಹ ಪೀಡೆಯನ್ನು ಊರಾಚೆ ಬಿಟ್ಟು ಬಂದಿರಬೇಕು. ಪ್ರಾಂಜಲ ಚಿತ್ತದಿಂದ ಓದಿ ಮೆಲುಕು ಹಾಕುವ ಹವ್ಯಾಸವಿರಬೇಕು. ಇಲ್ಲವಾದರೆ ಕಬ್ಬನ್ನು ಜಗಿಯಲಾಗದ ಆಡು ಕೇವಲ ಗರಿಗಳನ್ನು ಮೇದು, ಕಬ್ಬನ್ನು ತಿಂದೆ ಎಂದು ಭಾವಿಸಿದಂತಾಗುತ್ತದೆ. ಇದರಲ್ಲಿರುವ ಮೊದಲ ಲೇಖನವು ಕೈವಾರ ಸಾಹಿತ್ಯ ಸಮ್ಮೇಳನದಲ್ಲಿ ಆಗಲೆ ವಾಚಕರ ಮುಂದಿರಿಸಲಾಗಿದೆ. ವಸ್ತುಕ ವರ್ಣಕ, ಕಾವ್ಯ ತತ್ವ ಧರ್ಮ ದೃಷ್ಟಿಗಳ ಬಗ್ಗೆ ಇಲ್ಲಿ ವಿಚಾರ ಮಾಡಲಾಗಿದೆ. ಜೈನ ಸಾಹಿತ್ಯ, ವಚನಸಾಹಿತ್ಯ ಕುರಿತು ನಡೆಸಿರುವ ಚಿಂತನ ಮನೋಜ್ಞವಾಗಿದೆ. ಇನ್ನು ಎರಡನೆ ಲೇಖನ ಅಲ್ಲಮನ ಒಂದು ವಚನ ಕುರಿತದ್ದು. ಇಲ್ಲಿ ಗುರು ಕಲಿಸುವ ವಿದ್ಯೆ ಆತ್ಮವಿದ್ಯೆಯೇ ಹೊರತು ಲೋಕ ವಿದ್ಯೆಯಲ್ಲ ಎಂಬ ಅಲ್ಲಮನ ದೃಷ್ಟಿಯನ್ನು ಚೆನ್ನಾಗಿ ವಿಚಾರ ಮಾಡಿದ್ದಾರೆ. ಮೂರನೆಯ ಲೇಖನ ಹೆಚ್ಚು ಮಹತ್ವದಿಂದ ಕೂಡಿದೆ. ಶರಣರು ಏಕಮುಖ ಚಿಂತಕರು ಎಂಬ ಅಭಿಪ್ರಾಯವನ್ನು ಪುಷ್ಟಿಗೊಳಿಸಲು ಅವರು ನೀಡಿರುವ ಉದಾಹರಣೆಗಳು ನಮ್ಮನ್ನು ತುಂಬಾ ಸೋಜಿಗಗೊಳಿಸುತ್ತವೆ. 'ಹಚ್ಚಿದ ಸಿಡಿಮದ್ದನ್ನು ಮಡಿಲಲ್ಲಿ ಕಟ್ಟಿಕೊಂಡೇ ಮತ್ತೊಂದು ಗುಡಾರಕ್ಕೆ ಸಿಡಿಮದ್ದು ಹಚ್ಚುವ ಸಾಹಸವೆ ಶರಣರ ಚಳವಳಿ' ಎಂಬ ಲೇಖಕರ ಮಾತು ಭಾವೋದ್ವೇಗ ಎಂದು ಮೇಲು ನೋಟಕ್ಕೆ ಅನಿಸಿದರೂ ಅವರ ಸಮರ್ಥನೆ ತಳ್ಳಿಹಾಕುವಂತದ್ದಲ್ಲ, ಬಹುಮುಖ ದೃಷ್ಟಿಯಿಂದ ಓದಿದರೆ ವಾಚಕರಿಗೆ ಅಪಾರ ಲಾಭವಾದೀತು. ಬುದ್ಧಿಗೆ ಒರೆಯಿಡುವಂತಹ ಮತ್ತೊಂದು ಲೇಖನ "ವೀರಶೈವ ಧರ್ಮ ಮತ್ತು ಕನ್ನಡ ಸಾಹಿತ್ಯ". ಹಾಗೆಯೆ ಕನಕದಾಸರ ಕೀರ್ತನೆಗಳ ವಿಮರ್ಶೆ ಕೂಡ ಮೆಚ್ಚುವಂತಿದೆ. ಶೂದ್ರನ ಗ್ರಾಮ್ಯ ಭಾಷೆಯ ಬಗ್ಗೆ ಅವರು ತೋರಿರುವ ಕಳಕಳಿ ಅಪೇಕ್ಷಣೀಯ. ಇನ್ನು ಕೃತಿಯ ಕೊನೆ ಲೇಖನ "ನಾಮಧಾರಿ ಲಿಂಗಾಯಿತರು-ನೆಲೆ-ಹಿನ್ನೆಲೆ ತುಂಬಾ ಗಮನಾರ್ಹವಾದದ್ದು. ನಾಮಧಾರಿಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಶಿವ ಒಬ್ಬನೇ ಅಲ್ಲ. ಹಲವು ಶಿವರಿದ್ದಾರೆ ಎಂಬ ಅವರ ಮಾತು ಬುದ್ಧಿ

ಜೀವಿಗಳೆಲ್ಲರೂ ಒಪ್ಪುವಂತದು. ನಿಜಕ್ಕು ಲೇಖಕರ ಶ್ರಮ ಸಾರ್ಥಕವಾಗಿದೆ. ಕರ್ನಾಟಕ ಸಂಸ್ಕೃತಿಗೆ ಹೊಸ ಬೆಳಕು ಚೆಲ್ಲಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ.

ಮರುಚಿಂತನೆ ಕುರಿತು ಕನ್ನಡದ ಹಲವಾರು ದಿಗ್ಗಜಗಳು ನಾನಾ ರೀತಿ ಅಭಿಪ್ರಾಯ ವ್ಯಕ್ತಪಡಿಸಿವೆ. ಮರುಚಿಂತನೆಯಲ್ಲಿ ತೋರಿರುವ ಒಳನೋಟಗಳು ವೈಜ್ಞಾನಿಕವಾಗಿವೆ ಎಂದು ಡಾ|| ಎಸ್.ಎಲ್. ಭೈರಪ್ಪರವರು ಅಭಿಪ್ರಾಯಪಟ್ಟರೆ ನಿಮ್ಮ ಚಿಂತನೆಗಳು ಇಷ್ಟು ಸ್ಫೋಟಜ್ಞವಾದವೆಂದು ನನಗೆಂದೂ ತಿಳಿದಿರಲಿಲ್ಲ ಎಂದು ಡಾ|| ಹಾ.ಮ.ನಾ ನುಡಿದಿದ್ದಾರೆ. ನಿಮ್ಮ ವೈಚಾರಿಕ ಧೋರಣೆ ಕುರಿತಂತೆ ನನಗಿರುವ ಆಸಕ್ತಿ ಭರವಸೆ ಇನ್ನೂ ಹೆಚ್ಚಿನದೆಂದು ಡಾ|| ಎಲ್. ಬಸವರಾಜು ಹುರಿದುಂಬಿಸಿದರೆ, ಚೆಂಕಿಯಂತಹ ಬರವಣಿಗೆ ಏಕಮುಖಿ ಚಿಂತಕರು ಬೆಚ್ಚಿ ಬೀಳುವ ಕೃತಿ. ಅನೇಕ ದೃಷ್ಟಿಗಳಿಂದ ನಾಮಧಾರಿ ಲಿಂಗಾಯಿತರು ಮಹತ್ವದ ಲೇಖನ ಎಂದಿದ್ದಾರೆ, ಡಾ|| ಎಂ.ಎಂ. ಕಲ್ಬುರ್ಗಿ. ಹೆಚ್.ಎಸ್. ವೆಂಕಟೇಶಮೂರ್ತಿ ಇದೊಂದು ಶ್ರೇಷ್ಠ ಕೃತಿ ಎಂದಿದ್ದಾರೆ. ಪ್ರೊ|| ಕೆ.ಜಿ.ನಾ ಅವರ ಮರುಚಿಂತನೆ ಬುದ್ಧಿ ಜೀವಿಗಳ ರನ್ನಗನ್ನಡಿ, ಅವರ ಸಾಹಸ ಕರಿಯ ಕನ್ನಡಿಯಲ್ಲಿ ಹಿಡಿದು ತೋರುವಂತದ್ದು. ಅದು ಏಕಮುಖಿ ಚಿಂತಕರಿಗೆ ಲಾತ ಕೊಡಬಹುದು. ಪ್ರಜ್ಞಾವಂತರಿಗೆ ಮಾತ್ರ ಹಿತವನ್ನು ಕೊಡುತ್ತದೆ.

ಶ್ರೀ ಕೆ.ಜಿ.ನಾ ತುಮಕೂರು ಜಿಲ್ಲೆಯ ಕಲ್ಲೂರಿನವರು. 1934 ರಲ್ಲಿ ಜನಿಸಿದ ಇವರು ಸ್ನಾತಕೋತ್ತರ ಪದವಿ ಮುಗಿಸಿ ಮೈಸೂರಿನ ಶ್ರೀ ರಾಮಕೃಷ್ಣಾಶ್ರಮದಲ್ಲಿ ಕೆಲವಾರು ವರ್ಷ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಈಗ 1966 ರಿಂದ ತುಮಕೂರಿನ ಸಿದ್ಧಗಂಗಾ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ಅವರು ಎರಡು ದಶಕಗಳ ಹಿಂದೆಯೆ **ದೊಡ್ಡ ಸಂಕಣ್ಣ ನಾಯಕ** ಎಂಬ ಕೃತಿ ಬರೆದು ರಾಜ್ಯ ಪ್ರಶಸ್ತಿ ಗಿಟ್ಟಿಸಿದ್ದಾರೆ. ಅವರ ಸಂಪಾದನಾ ಕೃತಿ ವೀರ ಕುಮಾರ ಸಂಗ್ರಾಮ ಪಠ್ಯ ಪುಸ್ತಕವಾಗಿತ್ತು. ಹಾಗೆ ಶಿವಕುಮಾರ ವಾಣಿ ಎಂಬ ಸಂಪಾದನಾ ಕೃತಿಕೂಡ ಪ್ರಕಟಿಸಿದ್ದಾರೆ. ಅವರ ಬಿಡಿ ಲೇಖನಗಳು ರುಜುವಾತು ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಅವರಿಗೆ ಈಗ ವಯಸ್ಸು ಅರವತ್ತೈದು. ಈ ಸುದೀರ್ಘ ಕಾಲದ ಅಧ್ಯಯನ ಸಂಶೋಧನ ಗುಣಗಳಿಂದ ಅವರ ಪ್ರತಿಭೆ ಪುಟಪಿಟ್ಟಂತಾಗಿದೆ. ಅದಕ್ಕೆ ಸಾಕ್ಷಿ ಮರುಚಿಂತನ ಕೃತಿ: ಜನರನ್ನು ಚಿಂತನೆಗೆ ಹಚ್ಚುವ ಲೇಖಕರಿಗೆ ಬರವಿರುವ ಕಾಲದಲ್ಲಿ ಶ್ರೀ ಕೆ.ಜಿ. ನಾಗರಾಜಪ್ಪನವರಂತ ವಿಚಾರಪರರು ನಮ್ಮೊಂದಿಗಿರುವುದು ನಮ್ಮ ಭಾಗ್ಯ, ಮರುಚಿಂತನೆ ಓದಿ ಚಿಂತನೆ ಮಾಡೋಣ, ತಪ್ಪಿದ್ದರೆ ಲೇಖಕರನ್ನು ಮರುಚಿಂತನೆಗೆ ಹಚ್ಚೋಣ. ◆

18. ಶ್ರೀಮತಿ ಸಾವಿತ್ರಿ ಕಂಡ ನಾಗರಾಜಪ್ಪ

ಎಚ್. ಜಯಮ್ಮ ಕರಿಯಣ್ಣ

ಸುಮಾರು 10-12 ವರ್ಷಗಳ ಹಿಂದಿನ ಮಾತು. ನಾನು ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ಎಂ.ಎ., (ಸಾಹಿತ್ಯ) ಗೆ ಸೇರಿದಾಗ ಅನೇಕ ಸಾಹಿತಿಗಳ, ವಿದ್ವಾಂಸರ ಪರಿಚಯವಾಯಿತು. ಒಮ್ಮೆ ನಮ್ಮ ಸಹಪಾಠಿಯಾಗಿದ್ದ ಡಾ॥ ಪುಟ್ಟಶಂಕರಪ್ಪ ಅವರು ಪ್ರೊ॥ ಕೆ.ಜಿ. ನಾಗರಾಜಪ್ಪ ಅವರ 'ಮರುಚಿಂತನ' ಕೃತಿಯನ್ನು ತಂದು 'ಇದು ಓದಬೇಕಾದ ಪುಸ್ತಕ ಓದಿ ನೋಡಿ. ನೀವೆಲ್ಲಾ ಸಾಹಿತ್ಯದ ವಿದ್ಯಾರ್ಥಿಗಳು' ಎಂದು ಕೊಟ್ಟರು. ಆ ಕೃತಿ ನಮ್ಮ ಮೇಲೆ ಬಹಳ ಪ್ರಭಾವ ಬೀರಿತು. ಅಂದು ಪ್ರೊಫೆಸರ್ ಅವರ ಮುಖ ಪರಿಚಯ ವಿರಲಿಲ್ಲವಾದರೂ, ಕ್ರಮೇಣ ಸಾಹಿತ್ಯ ಚಟುವಟಿಕೆ ಕಾರ್ಯಕ್ರಮಗಳಲ್ಲಿ ಸೇರಿದಾಗ ಬೆಳೆದ ಪರಿಚಯ ಕ್ರಮೇಣ ಆತ್ಮೀಯತೆಯಿಂದ ಯೋಗಕ್ಷೇಮ ವಿಚಾರಿಸುವಷ್ಟು ಬೆಳೆಯಿತು.

ಹೀಗೆ ಬೆಳೆದ ಪರಿಚಯ ಸ್ನೇಹವಾಗಿ ರೂಪಗೊಂಡಾಗ ಆಗಾಗ್ಗೆ ಅವರ ಮನೆಗೆ ಹೋಗಿ ಬರುವ ಹವ್ಯಾಸವೂ ಬೆಳೆಯಿತು. ಶ್ರೀಮತಿ ಸಾವಿತ್ರಿ ನಾಗರಾಜಪ್ಪನವರು ಮಿತ ಭಾಷಿಯೂ ಹಾಗೂ ಬಸವನ ಹುಳುವಿಂತೆ ತಮ್ಮ ವ್ಯಕ್ತಿತ್ವವನ್ನೆಲ್ಲಾ ಬಹಿರಂಗ ಪಡಿಸಲಾರದಂತಹ ಮುಗ್ಧ ಮನಸ್ಸಿನವರು ಎಂದು ಅರಿವಾಯಿತು. ಒಂದು ಸಂಜೆ ಸಾವಿತ್ರಯವರ ಮನೆಗೆ ಸುಮಾರು ನಾಲ್ಕು ಗಂಟೆ ಹೊತ್ತಿಗೆ ಹೋದೆ. ಒಬ್ಬರೆ ಟಿ.ವಿ. ನೋಡುತ್ತಾ ಹಸಿ ಅವರೇಕಾಯಿ ಚಿಲುಕಿಸುತ್ತಾ ಕುಳಿತಿದ್ದರು. ಆತ್ಮೀಯವಾಗಿ ಮಾತನಾಡಲು ಪ್ರಾರಂಭ ಮಾಡಿದೆವು. ಹೀಗೆ ಆಗಾಗ್ಗೆ ಶ್ರೀಮತಿ ಸಾವಿತ್ರಿಯವರನ್ನು ಸಂಧಿಸುತ್ತಿದ್ದಾಗ ಅವರು ತಮ್ಮ ಮತ್ತು ತಮ್ಮ ಪತಿಯ ಹಾಗೂ ಕುಟುಂಬದ ಬಗ್ಗೆ ಆಡಿದ ಮಾತುಗಳೇ ಈ ನನ್ನ ಲೇಖನಕ್ಕೆ ಸ್ಫೂರ್ತಿಯಾಗಿದೆ.

ಶ್ರೀಮತಿ ಸಾವಿತ್ರಿಯವರು ಹುಟ್ಟಿದ್ದು ಭದ್ರಾವತಿಯಲ್ಲಿ. ತಂದೆ ಹನುಮಯ್ಯ, ತಾಯಿ ಸಂಕಮ್ಮ ಬಾಲ್ಯದ ವಿದ್ಯಾಭ್ಯಾಸ ಭದ್ರಾವತಿಯಲ್ಲಿ, ಉನ್ನತ ಶಿಕ್ಷಣ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ. ನನಗೆ ಅವರನ್ನು ನೋಡಿದರೆ ಕಾಲೇಜಿನಲ್ಲಿ ಕಲಿತವರಂತೆ ಅನ್ನಿಸುವುದೇ ಇಲ್ಲ. ಅವರ ಉಡಿಗೆ-ತೊಡಿಗೆ, ನಡೆ-ನುಡಿ, ಆಚಾರ-ವಿಚಾರ ಯಾವುದರಲ್ಲಿಯೇ ಆಗಲಿ ಆಡಂಬರವಿಲ್ಲ. ಎಲ್ಲವೂ ಅಷ್ಟೊಂದು ಸರಳ, ನೇರ.

ತನಗೆ ತೋಚಿದ್ದನ್ನು ಸಮಯ ಸಂದರ್ಭ ನೋಡದೆ ಮುಖಕ್ಕೆ ನೇರವಾಗಿ ರಾಚುವಂತೆ ಹೇಳಿಯೇ ಬಿಡುತ್ತಾರೆ. ಒಮ್ಮೆ ಇದ್ದಕ್ಕಿದ್ದ ಹಾಗೆ "ನಾವು ಗಂಡ ಹೆಂಡತಿ ನಿತ್ಯ ಜಗಳವಾಡುತ್ತಿರುತ್ತೇವೆ" ಎಂದಾಗ ಅದನ್ನು ಕೇಳಿ ನನಗೆ ಗಾಬರಿಯಾಯಿತು. ಗಂಡ ಹೆಂಡಿರಲ್ಲಿ ಅಷ್ಟೊಂದು ಹೊಂದಾಣಿಕೆ ಇರುವುದನ್ನು ಕಂಡ ದಾಂಪತ್ಯದಲ್ಲಿ ಇದೆಂಥ ಬಿರುಕು ಎನ್ನಿಸಿತು! ನನ್ನ ಪೆಚ್ಚಾದ ಮುಖವನ್ನು ನೋಡಿದ ಸಾವಿತ್ರಿ ವಿವರಿಸಿದಾಗ

ನಕ್ಕುಬಿಟ್ಟೆ, ಹಗುರ ಮನದಿಂದ, ಅವರದ್ದು ಜಗಳವೆಂದರೆ ದಾಂಪತ್ಯದ ವಿರಸವಲ್ಲ, ಅದು ಪ್ರೀತಿಯ ಜಗಳ. ನೋಡಿ "ನಮ್ಮ ಯಜಮಾನರು ಕಟ್ಟು ನಿಟ್ಟಿನ ಶಿಸ್ತಿನ ಜೀವಿ. ಅದನ್ನೇ ಅವರು ತಮ್ಮ ಕುಟುಂಬದ ಎಲ್ಲಾ ಸದಸ್ಯರಲ್ಲಿಯೂ ನಿರೀಕ್ಷಿಸುತ್ತಾರೆ. ಒಂದಿಷ್ಟು ವ್ಯತ್ಯಾಸವಾದರು ಆಕಾಶವೇ ತಲೇ ಮೇಲೆ ಕಳಚಿ ಬಿದ್ದಂತೆ ಸಿಡಿ ಮಿಡಿಗೊಳ್ಳುತ್ತಾರೆ." ಮನೆಯಲ್ಲಿನ ವಸ್ತುಗಳು ಕ್ರಮಬದ್ಧವಾಗಿ ಇದ್ದ ಜಾಗದಲ್ಲಿಯೇ ಇರಬೇಕು. ನಾಗರಾಜಪ್ಪನವರು ಚಾಚೂ ತಪ್ಪದೆ ಸಮಯ ಪಾಲಿಸುತ್ತಾರೆ. ಎಂದೂ ಕೊಟ್ಟ ಮಾತಿಗೆ ತಪ್ಪದೆ ನಡೆದುಕೊಳ್ಳುತ್ತಾರೆ. ಅವರದ್ದು ಅಚ್ಚುಕಟ್ಟಾದ ಜೀವನ, ಅವರು ಇಂದಿಗೂ ಮನೆಯ ಖರ್ಚಿನ ಲೆಕ್ಕವನ್ನು ನಿತ್ಯವೂ ಬರೆಯುತ್ತಾರೆ. ಆದಾಯಕ್ಕಿಂತ ಖರ್ಚು ಮೀರಬಾರದು 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ನಿಯಮವನ್ನು ವ್ಯವಹಾರ ಮತ್ತು ಬದುಕಿಗೂ ಅನ್ವಯಿಸಿ ಅನುಸರಿಸುತ್ತಾರೆ.

ಪ್ರಾಧ್ಯಾಪಕ ವೃತ್ತಿಯನ್ನಾಗಲಿ, ಬರವಣಿಗೆಯನ್ನಾಗಲಿ ಎಂದೂ ಅವರು ಸಂಪಾದನೆಯ ಸಾಧನೆಯನ್ನಾಗಿ ಬಳಸಿಕೊಳ್ಳಲಿಲ್ಲ. ಹಣ ಮಾಡುವ ಅನೇಕ ಮಾರ್ಗಗಳಿದ್ದರೂ ಎಂದೂ ಅಂತಹ ಆಮಿಷಗಳಿಗೆ ಬಲಿಯಾಗಿ ಭ್ರಷ್ಟರಾಗಲಿಲ್ಲ, ಸಾವಿತ್ರಿಯವರ ಮಾತಿನಲ್ಲಿಯೇ ಹೇಳುವುದಾದರೆ "ಆಸ್ತಿ ಮಾಡುವುದು ನಮ್ಮವರ ಸ್ವಭಾವಕ್ಕೆ ವಿರುದ್ಧ. 1970 ರಲ್ಲಿ ತುಮಕೂರಿನಲ್ಲಿ ಮನೆ ಕಟ್ಟಿದರು 1992 ರಲ್ಲಿ ಬೆಂಗಳೂರಿನಲ್ಲಿ ನೆಲಸಬೇಕೆಂದು ನಿರ್ಧರಿಸಿದಾಗ ಅದನ್ನು ಮಾರಿಯೇ ಬಿಟ್ಟರು, ಆ ಹಣದಿಂದ ಇಲ್ಲಿ ಒಂದು ಸೈಟನ್ನೂ ಕೊಳ್ಳಲಿಲ್ಲ. ಹೇಗಾದರೂ ಒಂದು ಸ್ವಂತ ಮನೆ ಮಾಡಿ ಎಂದು ಒತ್ತಾಯಿಸಿದರೂ ನನ್ನ ಮಾತನ್ನು ಕಿವಿಗೇ ಹಾಕಿಕೊಳ್ಳುತ್ತಿಲ್ಲ. ನಿವೃತ್ತರಾದ ಮೇಲೂ ಅವರು ದುಡಿಯುತ್ತಿರುವುದನ್ನು ಕಂಡರೆ ನನಗೆ ವ್ಯಥೆಯಾಗುತ್ತದೆ. ಹೇಳಿದ ಮಾತು ಕೇಳದೆ ನಿರ್ಲಿಪ್ತವಾಗಿದ್ದು ಬಿಡುತ್ತಾರೆ." 65ನೇ ವಯಸ್ಸಿನಲ್ಲಿಯೂ ಪ್ರೊಫೆಸರ್ ಅವರ ಉತ್ಸಾಹ ಹುಮ್ಮಸ್ಸು, ಕ್ರಿಯಾಶೀಲ ಚಟುವಟಿಕೆಯ ಬದುಕನ್ನು ಕಂಡಾಗ ಯಾವ ತರುಣರಿಗೂ ನಾಚಿಕೆಯಾಗದಿರದು.

ಪ್ರೊ॥ ನಾಗರಾಜಪ್ಪನವರ ಅತಿಥಿ ಸೇವೆಯನ್ನು ಎಲ್ಲರೂ ಅನುಭವಿಸದ್ದಾರೆ. ಅವರ ಮನೆಗೆ ವಿವಿಧ ವರ್ಗದ ಜನರು, ವಿದ್ಯಾರ್ಥಿಗಳು, ಬಂಧುಗಳು, ಪರಿಚಿತರು, ಬಂದು ಹೋಗುತ್ತಲೇ ಇರುತ್ತಾರೆ. ಯಾರನ್ನು ಅತಿಥ್ಯವಿಲ್ಲದೇ ಹಾಗೆಯೇ ಕಳಿಸುವುದಿಲ್ಲ. ತುಮಕೂರಿನಲ್ಲಿಯಂತೂ ನಿತ್ಯ ಮನೆಯಲ್ಲಿ ಯಾರಾದರೊಬ್ಬರು ಇದ್ದೇ ಇರುತ್ತಿದ್ದರು. ಅಲ್ಲದೇ ಸಾಹಿತಿ ಮಿತ್ರರು ಆಗಾಗ್ಗೆ ಸೇರುತ್ತಿದ್ದರು, ಆಗ ಸಾವಿತ್ರಿಯವರು ತುಟಿಪಿಟಕ್ಕೆನ್ನದೆ ನಿತ್ಯ ತಿಂದಿ ಮಾಡಿ ಬಡಿಸುತ್ತಿದ್ದರು. " ಈಗ ವಯಸ್ಸಾಗಿದೆ. ಮೊದಲಿನ ಉತ್ಸಾಹ ಲವಲವಿಕೆ ಉಳಿದಿಲ್ಲ. ಅಲ್ಲದೆ ಮನೆಯಲ್ಲಿ ಸಹಾಯಕ್ಕೆ ಯಾರು ಇಲ್ಲವಾದರೂ ಬಂದವರಿಗೆ ಯಾವುದಕ್ಕೂ ಕೊರತೆಯಾಗದಿದ್ದರೂ ಇಂದಿನದು ಏನೇನು ಅಲ್ಲ" ಎನ್ನುತ್ತಾರೆ. ಆದರೆ ನಾನು ಅವರ ಮನೆಗೆ ವಾರಕ್ಕೆರಡು ದಿನವಾದರೂ ಹೋಗುತ್ತಿರುತ್ತೇನೆ, ಎಂದೂ ನನಗೆ ಉಪಚರಿಸದೆ ಕಳಿಸಿದ ದಿನ ನೆನಪಿಗೆ ಬಾರದು. ಕಡೇ ಪಕ್ಷ ಹಣ್ಣು ಹಾಲು ಟೀ ಕಾಫಿ ಇಲ್ಲದೆ ನಾನು ಹೊರಬಂದಿಲ್ಲ.

ಜಾತೀಯತೆ ಅವರ ಮನೆಯಲ್ಲಿ ಸುಳಿಯುವುದಿಲ್ಲ. ಅವರ ಮನೆಗೆ ಯಾರೇ ಬಂದರೂ ಕುಲ, ಗೋತ್ರ, ಜಾತಿ ಒಂದನ್ನೂ ವಿಚಾರಿಸದೆ ಆದರಿಸುತ್ತಾರೆ. ಅವರು ಓದುತ್ತಿದ್ದಾಗಲೇ ಮೈಸೂರಿನಲ್ಲಿ ಹರಿಜನ ಕಾಲೋನಿಯಲ್ಲಿ ರೂಮು ಮಾಡಿಕೊಂಡಿದ್ದರು. ತುಮಕೂರಿನಲ್ಲಿ ದಲಿತ ಚಳುವಳಿಗಾರರು ಮೆರವಣಿಗೆಯಲ್ಲಿ ಹೋಗುವಾಗ ನಾಗರಾಜಪ್ಪನವರನ್ನು ಪರೀಕ್ಷಿಸಲು ದಲಿತ ತರುಣರು ಮನೆ ಮುಂದೆ ನಿಂತು ಕುಡಿಯಲು ನೀರು ಕೇಳಿದಾಗ "ಬೀದಿಯಲ್ಲಿ ನಿಂತು ನೀರು ಕೇಳಿದರೆ ಮುಂದೆ ಬೀದಿ ನಲ್ಲಿ ಇದೆ ಅಲ್ಲಿ ಹೋಗಿ ಕುಡಿಯಿರಿ. ನಮ್ಮ ಮನೆಯಲ್ಲಿ ನೀರು ಬೇಕಿದ್ದರೆ ಗೇಟು ತೆಗೆದು ಒಳಗೆ ಬಂದು ಕೀಳಿರಿಮೆ ಬಿಟ್ಟು ಕುಳಿತು ನೀರು ಕುಡಿದು ಹೋಗಿ" ಎಂದಾಗ ಆ ದಲಿತ ತರುಣರು ತಲೆ ತಗ್ಗಿಸಿದರು. ಪ್ರೊಫೆಸರ್ ಅವರ ತಾಯಿ ಸಂಪ್ರದಾಯ ಶರಣರು. ಅವರ ಶ್ರೀಮತಿಯವರೂ ಅಷ್ಟೆ ಸಂಪ್ರದಾಯದ ಕುಟುಂಬದಿಂದ ಬಂದವರು. ಅವರದ್ದು ಸಂಪ್ರದಾಯದ ಮದುವೆ. ಆದರೆ ಮನೆಯ ವಾತಾವರಣ ಸಂಪೂರ್ಣವಾಗಿ ಬದಲಾವಣೆಯಾಗಿದೆ. ಕುಟುಂಬದ ಆಲೋಚನೆ, ಚಿಂತನೆಗಳು ಅತ್ಯಂತ ಜಾತ್ಯಾತೀತ, ಆಧುನಿಕ ಮತ್ತು ಪ್ರಗತಿ ಶೀಲವಾದವು. ಹಳ್ಳಿಯಿಂದ ಬಂದ ಹರಿಜನ ಕಾರ್ಮಿಕ ಮನೆಯೊಳಕ್ಕೆ ಬರಲು ನಾಚಿ ಕಾಂಪೌಂಡಿನಲ್ಲಿ ಊಟಕ್ಕೆ ಕುಳಿತಾಗ ಸಾವಿತ್ರಿಯವರೇ ಒಳಗೆ ಕರೆದು ಕೂಡಿಸಿ ಊಟಕ್ಕೆ ಬಡಿಸಿ ಕಳುಹಿಸಿದ್ದಾರೆ. ಜಾತ್ಯಾತೀತ ಮಾತುಗಳನ್ನಾಡಿ ಜಾತೀಯತೆ ಅನುಸರಿಸುವ ಬುದ್ಧಿ ಜೀವಿಗಳ ಇಬ್ಬಂದಿತನ, ಅಂತರ್ಜಾತಿ ವಿವಾಹವೆಂದು ಮೇಲೆ ಸೆಕ್ಯೂಲರ್ ಆಗಿದ್ದು ಒಳಗೆ ಎರಡೂ ಜಾತಿಯ ಸೌಲಭ್ಯ ಪಡೆಯುತ್ತಿರುವ ಇಬ್ಬಂದಿತನ ನಾಗರಾಜಪ್ಪನವರ ಕುಟುಂಬದಲ್ಲಿ ಇಲ್ಲ. ಹೇಳುವುದೊಂದು ಮಾಡುವುದೊಂದು ಸಂಪ್ರದಾಯ ಅವರ ಕುಟುಂಬದ ಬಳಿಯು ಸುಳಿಯುವುದಿಲ್ಲ.

ಪ್ರೊ॥ ನಾಗರಾಜಪ್ಪನವರು ಸಂತರು, ಪವಾಡ ಪುರುಷರು, ಮತ್ತು ಸ್ಮಶಾನಗಳಲ್ಲಿ ನಡೆಸಿರುವ ಪ್ರಯೋಗಗಳು ಶ್ರೀಮತಿ ಸಾವಿತ್ರಿಯವರಿಗೆ ಗೊತ್ತೇ ಇರಲಿಲ್ಲ. ತೀರಾ ಇತ್ತೀಚೆಗೆ ಅವರ ಯಜಮಾನರ ಸ್ನೇಹಿತರಿಂದ ತಿಳಿದು ಬಂದಿದೆ. ಸ್ಮಶಾನ - ಹೆಣ ಎಂದರೆ ಅವರಿಗೆ ಹೆದರಿಕೆಯೇ ಇಲ್ಲ. ಸಾವಿತ್ರಿಯವರು "ನಮ್ಮ ಮನೆಯವರು - ಯಾರೇ ಬಂದು ತಮ್ಮ ಕಷ್ಟ ಹೇಳಿಕೊಂಡರೂ ಸಹಾಯ ಮಾಡುತ್ತಾರೆ. ಅವರಿಗೆ ಪರಿಚಿತರು ಅಥವಾ ಅಪರಿಚಿತರು ಎಂಬ ಭೇದವಿಲ್ಲದೆ ಆಯಾಚಿತವಾಗಿ ಕಷ್ಟಕ್ಕೆ ಸಿಕ್ಕವರಿಗೆ ಸಹಾಯಕ್ಕಾಗಿ ಧಾವಿಸುತ್ತಾರೆ. ಯಾರ ಮನೆಯಲ್ಲಿ ಸತ್ತದ್ದು ಕಂಡರೆ, ಸ್ವಯಂ ಪ್ರೇರಿತರಾಗಿ ಸತ್ತವರ ಮನೆಗೆ ಹೋಗಿ ಅಗತ್ಯವಾದ ಸಹಾಯ ನೆರವು ನೀಡುತ್ತಾರೆ. ಸತ್ತವರ ಮನೆಯಿಂದ ಕರೆ ಬಂದರಂತೂ ತಮಗೆ ಎಂಥ ಕೆಲಸವಿದ್ದರೂ ಬಿಟ್ಟು ಹೊರಟೇ ಬಿಡುತ್ತಾರೆ. 'ಸುಖಕ್ಕಿಂತ ದುಃಖದಲ್ಲಿ ನೆರವಾಗಬೇಕು' ಎನ್ನುವ ನಮ್ಮವರ ಇಂಥ ಅತ್ಯಂತ ಮಾನವೀಯ ಗುಣಗಳು ತುಂಬಾ ಹಿಡಿಸಿದೆ. ಅವರ ಇಂತಹ ಮಾನವೀಯ ಕಾರ್ಯಗಳು ನಮ್ಮ ಕುಟುಂಬಕ್ಕೆ ಎಷ್ಟೇ ಸಮಸ್ಯೆ ಸೃಷ್ಟಿಸಿದರೂ. ನಾವುಗಳು ಎಂದೂ ಅಂಥ ಕಾರ್ಯಕ್ಕೆ ಅಡ್ಡಿ ಬರುವುದಿಲ್ಲ."

ನಾಗರಾಜಪ್ಪನವರು ವಿಚಾರ ಸಂಕಿರಣ, ಲೇಖನ ಬರೆದುಕೊಡಲು ಒಪ್ಪಿಕೊಂಡರೆ

ಸಾವಿತ್ರಿಯವರಿಗೆ ತಲೆ ನೋವು. ಅವುಗಳ ಪೂರ್ವ ಸಿದ್ಧತೆಗೆ ತುಂಬಾ ಶ್ರಮಿಸುತ್ತಾರೆ. ಅವರ ಬರವಣಿಗೆಗೆ ನಿಶ್ಶಬ್ದತೆ ಮತ್ತು ತಿಳಿಯಾದ ವಾತಾವರಣ ಅಗತ್ಯ. ಹಗಲು ಹೊತ್ತು ಅವರಿವರು ಮನೆಗೆ ಬಂದು ಹೋಗುತ್ತಿರುತ್ತಾರೆ. ಆದ್ದರಿಂದ ಅವರು ರಾತ್ರಿ ಹೊತ್ತೇ ನಿರಂತರವಾಗಿ ನಿದ್ದೆಗೆಟ್ಟು ಬರೆಯುತ್ತಾರೆ. ಮತ್ತೆ ಯಥಾ ಪ್ರಕಾರ ಬೆಳಗ್ಗೆ ದಿನ ನಿತ್ಯದ ಕೆಲಸಕ್ಕೆ ತೊಡಗುತ್ತಾರೆ. "ಬರವಣಿಗೆಗೆ ಒಪ್ಪಿಕೊಳ್ಳಬೇಡಿ ವಿದ್ಯಾರ್ಥಿಯಂತೆ ಇನ್ನು ಓದುವುದು, ಬರೆಯುವುದು ಸಾಕು. ಇದರಿಂದ ನಮ್ಮ ಜೀವನವೇನೂ ನಡೆಸಬೇಕಾಗಿಲ್ಲ. ಅಲ್ಲದೆ ನಿಮ್ಮ ಈ ಶ್ರಮವನ್ನು ಯಾರು ಗುರುತಿಸುವುದಿಲ್ಲ. ನಿದ್ದೆಗೆಟ್ಟು ಆಯಾಸ ಮಾಡಿಕೊಂಡರೆ ಆರೋಗ್ಯ ಕೆಟ್ಟರೆ ನಮಗೆ ಯಾರಿದ್ದಾರೆ. ಕಡೆಪಕ್ಷ ಆರೋಗ್ಯದ ದೃಷ್ಟಿಯಿಂದಲಾದರು ಈ ಹವ್ಯಾಸಗಳನ್ನು ಬಿಡಿ ಎಂದರೆ ಅವರು ತಮ್ಮ ಕಿವಿಗೇ ಹಾಕಿಕೊಳ್ಳುವುದಿಲ್ಲ. ನಿನಗೆ ಗೊತ್ತಿಲ್ಲ ಓದು ಬರಹದಿಂದ ನನ್ನ ಆರೋಗ್ಯ ಉತ್ತಮವಾಗುತ್ತದೆ. ನೀನು ತಲೆಕೆಡಿಸಿಕೊಳ್ಳಬೇಡ ಎಂದು ನನ್ನ ಬಾಯಿ ಮುಚ್ಚಿಸುತ್ತಾರೆ".

ತನ್ನ ಯಜಮಾನರ ಬಗ್ಗೆ ತುಂಬ ಪ್ರೀತಿ, ಗೌರವವನ್ನಿಟ್ಟಿರುವ ಸಾವಿತ್ರಿಯವರು ತಮ್ಮ ಪತಿಯ ಬಗ್ಗೆ ಮಾತನಾಡುವಾಗ ಅವರ ಮುಖ ನಾಚಿಕೆಯಿಂದ ಆರಕ್ತವಾಗುತ್ತದೆ. ಅವರು ತಲೆ ತಗ್ಗಿಸಿ "ತಮ್ಮ ಹೆಂಡತಿಯ ಬಗ್ಗೆ ಪ್ರೀತಿ ಇದ್ದರೂ ಅದನ್ನು ವ್ಯಕ್ತಪಡಿಸುವುದು, ತಮಾಷೆ ಮಾಡುವುದನ್ನು ಅರಿಯರು" ಎನ್ನುತ್ತಾರೆ. "ಅಲ್ಲದೆ ಅದು ಅವರ ಸ್ವಭಾವ. ಅದಕ್ಕಾಗಿ ನಿರೀಕ್ಷಿಸುವುದು ಇಲ್ಲ, ಹಾಗೆ ದೂರುವುದೂ ಇಲ್ಲ. ತಾವು ಅಳವಡಿಸಿಕೊಂಡಿರುವ ಶಿಸ್ತಿನ ಜೀವನವನ್ನು ನಮ್ಮಿಂದಲೂ ಬಯಸುತ್ತಾರೆ. ಹಾಗೆ ಬದುಕುವುದನ್ನು ತಮ್ಮ ಪ್ರೀತಿಯ ಒಬ್ಬನೇ ಮಗನಿಗೂ ಕಲಿಸಿರುವರು. ಹೊರಗೆ ದುಡಿಯುವ ಗಂಡಸರಿಗೆ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬರಬಹುದು. ನಾವು ಮನೆಯಲ್ಲಿರುವ ಹೆಂಗಸರಿಗೆ ಅವರ ಒತ್ತಡ, ಕಾರ್ಯಗೌರವ ತಿಳಿಯದೆ ಕೆಲವು ಸಲ ಬೇಸರ ಪಟ್ಟುಕೊಂಡಿರುವುದು ಉಂಟು. ಈಗ ಅದೆಲ್ಲಾ ಅಭ್ಯಾಸವಾಗಿ ಹೋಗಿದೆ" ಎಂದು ನಗುತ್ತಾ "ಅವರು ದುಡಿದು ಬಂದ ನಂತರ ಹೆಂಡತಿಯ ಬಳಿ ತಮ್ಮ ಕಷ್ಟ ಸುಖಗಳನ್ನು ಹೇಳಿ ಆತ್ಮೀಯತೆಯಿಂದ ಮಾತನಾಡಿದ ನೆನಪಿಲ್ಲ. ತಾವಾಯಿತು ತಮ್ಮ ಕೆಲಸ, ಪಾಠ ಪ್ರವಚನಗಳಲ್ಲಿ ತಲ್ಲೀನರಾದರೆ ಮನೆಯ ಹೆಂಡತಿ ಮಗನ ನೆನಪು ಇದೆ ಎಂದೇ ಅನ್ನಿಸುತ್ತಿರಲಿಲ್ಲ. ರಾತ್ರಿ ಹಗಲು ಎನ್ನುವುದನ್ನು ಮರೆಯುತ್ತಿದ್ದರು. ಲಘು ಮಾತು ಹರಟೆ ಹೊಡೆಯುವುದು ಅವರಿಗೆ ಎಂದೂ ಸೇರುತ್ತಿರಲಿಲ್ಲ. ಆದರೆ ತಮ್ಮ ಮುದ್ದಿನ ಮೊಮ್ಮಗಳು ಸೋನಿಷಾ 'ಬೋಡು ತಾತ ಬಂತು'ಎಂದು ಚಪ್ಪಾಳೆ ತಟ್ಟಿ ಕೇಕೆ ಹಾಕಿ ನಗುವಾಗ, ಹರಳು ಹುರಿದಂತೆ ಮಾತನಾಡುವ ಮೊಮ್ಮಗಳನ್ನು ಎತ್ತಿ ಆಡಿಸಿ ಮುದ್ದು ಮಾಡುತ್ತಾರೆ."

ಮೊಮ್ಮಗಳ ವಿಷಯ ಬಂದಾಗ ಸಾವಿತ್ರಿಯವರ ಮುಖ ಮ್ಲಾನವಾಗಿ ಹೇಳಲಾರದ ದುಃಖ ನೋವು ಅನುಭವಿಸುತ್ತಾರೆ. "ನೋಡಿ ನನ್ನ ಮಗ ಸಂಜಯ್ ಜುಲೈ 1968 ರಲ್ಲಿ ಜನ್ಮ ತಾಳಿದ, ಇವನು ಬಿ.ಇ., ಪದವೀಧರ. ಇವನ ಹೆಂಡತಿ ಸಹ ಬಿ.ಇ., ಪದವೀಧರೆ. ಮಗನಿಗೆ ಅಮೇರಿಕೆಯಲ್ಲಿ ಕೆಲಸ. ಇನ್ನು ಕೆಲವು ದಿವಸಗಳಲ್ಲಿ ಸೊಸೆ ಶೈಲಾ, ಮೊಮ್ಮಗಳು ಅಮೇರಿಕೆಗೆ ಹೋದರೆ ಮನೆ ನಿರ್ಜೀವವಾಗಿ ಬಿಡುತ್ತದೆ. ಇರುವ

ಒಬ್ಬ ಮಗ ಅಷ್ಟು ದೂರ ಯಾಕೆ ಹೋಗಬೇಕು. ಇಲ್ಲಿಯೇ ಕೆಲಸ ಮಾಡಬಾರದೆ ಎಂದು ಎಷ್ಟು ಸಾರಿ ಯಜಮಾನರ ಬಳಿ ಚರ್ಚಿಸಿ ಜಗಳವಾಡಿದ್ದೇನೆ. ಅದಕ್ಕೆ ಅವರದ್ದು ಒಂದೇ ಉತ್ತರ. "ನೀನು ಯಾಕೆ ಯೋಚನೆ ಮಾಡುತ್ತಿ. ಎಲ್ಲಿದ್ದರೂ ನಮ್ಮ ಮಕ್ಕಳು ಸುಖವಾಗಿರಲಿ ಬಿಡು. ಅಲ್ಲದ ಅವರವರ ಭವಿಷ್ಯವನ್ನು ಅವರೇ ರೂಪಿಸಿಕೊಳ್ಳುತ್ತಿರುವಾಗ, ಅವರಿಗೆ ಪ್ರೋತ್ಸಾಹ ಕೊಟ್ಟು ಬೆಳೆಯುವುದನ್ನು ನೋಡಿ ಸಂತೋಷಪಡಬೇಕು. ಅವರೂ ಆಗಾಗ್ಗೆ ಇಲ್ಲಿ ಬಂದು ಹೋಗುತ್ತಿರುತ್ತಾರೆ. ನಾಲ್ಕು ದಿವಸ ಈ ನೋವು ಸಂಕಟ ಇದ್ದದ್ದೆ. ನಂತರ ಎಲ್ಲಾ ಮಾಮೂಲಿ ಪರಿಸ್ಥಿತಿಗೆ ಬರುತ್ತದೆ". ಎಂದು ಹೇಳುವ ಅವರು ಮನದಲ್ಲೆ ಕೊರಗುತ್ತಾರೆ. "ಅವರದ್ದು ತುಂಬಾ ಹೆಂಗರುಳು ತಮ್ಮ ಹೋವು ಸಂಕಟಗಳನ್ನು ವ್ಯಕ್ತಪಡಿಸಿದರೆ ಹೆಂಡತಿ ಇನ್ನೂ ಹೆಚ್ಚು ಸಂಕಟ ಪಡುತ್ತಾಳೆ ಎಂದು ಸಮಾಧಾನ ಮಾಡುತ್ತಾರೆ. ಅನಿವಾರ್ಯವಾದಾಗ ಗದರಿಸಿದ್ದೂ ಉಂಟು" ಎಂದು ಮೌನ ತಾಳಿದರು.

ಸ್ವಲ್ಪ ಸಮಯದ ನಂತರ ನಾನೇ ಸಾವಿತ್ರಿಯವರನ್ನು "ನಿಮ್ಮ ಪತಿ ಗೃಹ ಕೃತ್ಯದಲ್ಲಿ ನಿಮಗೇನು ಸಹಾಯ ಮಾಡುತ್ತಾರೆ" ಎಂದಾಗ-ಈ ಮೊದಲೆ ಹೇಳಿದಂತೆ ಅವರ ಬದುಕು ಬಹಳ ಶಿಸ್ತಿನಿಂದ ಕೂಡಿದ್ದು. ಬೆಳಿಗ್ಗೆ 4 ಗಂಟೆಗೆ ಎದ್ದರೆ ತಮ್ಮ ನಿತ್ಯಕರ್ಮಗಳನ್ನು ತೀರಿಸಿ ಬೆಳಗಿನ ತಿರುಗಾಟ ಮುಗಿಸಿ ಬರುವಾಗ 6 ಗಂಟೆ. ನಂತರ ಹಾಲಿನ ಬೂತಿನಿಂದು ಮನೆಗೆ ಹಾಲು ತಂದಿಟ್ಟು ಸ್ನಾನಕ್ಕೆ ಹೊರಡುತ್ತಾರೆ. ತಿಂಡಿ ತಿಂದು 8 ಗಂಟೆಗೆ ಮನೆ ಬಿಡುತ್ತಾರೆ. ಸಂಜೆ ಕಾಲೇಜು ಮುಗಿದ ನಂತರ ಬೇರೆ ಕಾರ್ಯಕ್ರಮವಿದ್ದರೆ, ಅದು ಮುಗಿದ ನಂತರ ಮನೆಗೆ ಬರುತ್ತಾರೆ. ಹೊರಗೆ ಕೆಲಸವಿಲ್ಲವಾದರೆ ಸೀದಾ ಮನೆಗೆ ಬರುತ್ತಾರೆ. ಮಲಗುವುದು ಮಾತ್ರ ರಾತ್ರಿ ಹನ್ನೆರಡು ಗಂಟೆಗೆ. ಅವರಿಗೆ ಚೆನ್ನಾಗಿ ಅಡಿಗೆಯೂ ಬರುತ್ತದೆ.

ಶುಚಿ, ರುಚಿ ಎರಡನ್ನು ಮೆಚ್ಚುವ ಪ್ರೊಫೆಸರ್ ಮನೆಗೆ ಬೇಗ ಬಂದ ದಿನ ಕಾಫಿ ಜೊತೆ ಕುರುಕು ತಿಂಡಿಯನ್ನು ಇಷ್ಟಪಡುತ್ತಾರಂತೆ. "ಎಣ್ಣೆಯಲ್ಲಿ ಕರಿದ ತಿಂಡಿ ಪದಾರ್ಥ ಮೈಗೆ ಒಳ್ಳೆಯದಲ್ಲ, ವಯಸ್ಸಾಯಿತು ಸ್ವಲ್ಪ ಡಯಟ್ ಮಾಡಿ ಎಂದರೂ ಕಿವಿಯ ಮೇಲೆ ಬೀಳದಂತೆ ವರ್ತಿಸಿ ಮನಸ್ಸು ತೃಪ್ತಿಯಾಗುವಂತೆ ಮಕ್ಕಳಂತೆ ತಿನ್ನುತ್ತಾರೆ". ಊಟದ ವಿಷಯದಲ್ಲಿಯೂ ಅಷ್ಟೆ. ಸಿಹಿ, ಖಾರ ಎರಡರ ಮೇಲೆಯೂ ಒಂದೇ ವಿಧವಾದ ಆಸಕ್ತಿ ಮತ್ತು ಅಭಿರುಚಿ. ಊಟ ತಿಂಡಿ ವಿಷಯದಲ್ಲಿಯೂ ನಮ್ಮಲ್ಲಿ ಸಣ್ಣ ಪುಟ್ಟ ಜಗಳ ನಡೆಯುತ್ತಿರುತ್ತದೆ. ಇಷ್ಟೆಲ್ಲಾ ಮಾತನಾಡಿದ ಸಾವಿತ್ರಿಯವರು ಮತ್ತೊಂದು ಮಾತನ್ನು ಹೇಳಲು ಮರೆಯಲಿಲ್ಲ. "ತಮ್ಮ ಯಜಮಾನರಿಗೆ ತುಂಬಾ ಹೆಲ್ಪಿಂಗ್ ನೇಚರ್ ನೋಡಿ. ಯಾರೇ ಆಗಿರಲಿ ತಮ್ಮ ಇತಿ ಮಿತಿ ಮರೆತು ಸಹಾಯ ಮಾಡುತ್ತಾರೆ" ಎಂದರು. ಇದು ನನ್ನ ಅನುಭವಕ್ಕೂ ಬಂದಿದೆ. ನೋಡಲು ನಾಗರಾಜಪ್ಪನವರು ಎಷ್ಟು ಗಡಸು, ನಿಷ್ಠೂರರಾಗಿ ಕಾಣಿಸುತ್ತಾರೆಯೋ ಅಷ್ಟೇ ಸರಳ ಹಾಗೂ ಸ್ನೇಹಮಯಿ ಕೂಡ. ಪ್ರತಿ ಕೆಲಸದಲ್ಲಿ ತುಂಬಾ ಶಿಸ್ತು. ತಮಗೆ ಸರಿ ಕಂಡದ್ದನ್ನು ನೇರವಾಗಿ ನಿಷ್ಠೂರವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಾರೆ - ಎನ್ನುವ ನನ್ನ ಯೋಚನೆಗೆ ಇಂಬು ಕೊಟ್ಟಂತೆ ಸಾವಿತ್ರಿಯವರು ತಮ್ಮ ಮಾತಿಗೆ ಪೂರ್ಣ ವಿರಾಮ ಹಾಕಿದರು.

ಶ್ರೀಮತಿ ಸಾವಿತ್ರಿ ನಾಗರಾಜಪ್ಪನವರಿಗೆ ಇಂದು ಜೀವನದಲ್ಲಿ ಯಾವುದೇ ಆಸಕ್ತಿ ಉಳಿದಿಲ್ಲ. ಸ್ಪಷ್ಟವಾದ ಕಾರಣಗಳು ಗೊತ್ತಾಗುವುದಿಲ್ಲ. ನಾನು ಕಂಡಂತೆ ನಾಗರಾಜಪ್ಪನವರಂತೂ ಸಾವಿತ್ರಿಯವರನ್ನು ಅತ್ಯಂತ ಪ್ರೀತಿಯಿಂದಲೇ ನಡೆಸಿಕೊಳ್ಳುತ್ತಾರೆ. ಅವರಿಗೂ ತಮ್ಮ ಪತಿಯ ಬಗ್ಗೆ ಗಾಢವಾದ ಪ್ರೀತಿ. ಹೀಗಿದ್ದರೂ "ನನಗೆ ಇಂದು ಯಾವುದರಲ್ಲಿಯೂ - ಊಟ, ಉಪಚಾರಗಳಲ್ಲಿಯೂ ಆಸಕ್ತಿಯಿಲ್ಲ. ಕಟ್ಟಿಸಿದ ಮನೆ ಹೋಯಿತು, ಪ್ರೀತಿಯಿಂದ ಸಾಕಿ ಬೆಳಸಿದ ಮಗ ಅಮೇರಿಕೆಗೆ ಹಾರಿದ. ಸೊಸೆ ಮತ್ತು ಮುದ್ದಿನ ಮೊಮ್ಮಗಳು ಹೋದ ತಿಂಗಳು ಅಮೇರಿಕೆಗೆ ಹೋದರು. ಇನ್ನು ಯಜಮಾನರೂ ಸದಾ ಒಂದು ಕಾಲನ್ನು ಹೊರಗೇ ಇಟ್ಟಿರುತ್ತಾರೆ. ಇಡೀ ದಿವಸ ಮನೆಯಲ್ಲಿ ನಾನೊಬ್ಬಳೇ ಕಾಲ ಕಳೆಯಬೇಕು" ಎಂದು ಸಾವಿತ್ರಿಯವರು ಮಾತಿನಲ್ಲಿ ಮೂಡಿದ ಛಾಯೆ ಎದ್ದು ಕಾಣುತ್ತದೆ. ಯಾರನ್ನೂ ಅಷ್ಟಾಗಿ ಹಚ್ಚಿಕೊಳ್ಳದ, ಯಾವ ಹವ್ಯಾಸವನ್ನೂ ರೂಢಿಸಿಕೊಳ್ಳುವ ಯಾವ ಸಂಘ ಸಂಸ್ಥೆಯ ಸಂಪರ್ಕವನ್ನು ಅಂಟಿಸಿ ಕೊಳ್ಳದ ಸಾವಿತ್ರಿಯವರ ಜೀವನ ನಾಗರಾಜಪ್ಪನವರಿಗೆ ಹೋಲಿಸಿದರೆ ಭಿನ್ನವಾದುದು. ಆದರೆ ಅವರ ಪತಿಯ ಸಾಹಸ ಮತ್ತು ಸವಾಲಿನ ಬದುಕು ಅವರನ್ನು ಅಭದ್ರತೆ ಮತ್ತು ಅನಿಶ್ಚಿತೆಯಲ್ಲಿಯೇ ಇಟ್ಟಿದೆ. ಸಾವಿತ್ರಿಯವರಿಗೆ ಸೃಜನಾತ್ಮಕ ಚಟುವಟಿಕೆಗಳಿಗೆ ನಾಗರಾಜಪ್ಪನವರ ಪ್ರೋತ್ಸಾಹ ಮತ್ತು ಸಹಕಾರ ಇದ್ದೇ ಇದೆ. ಆದರೆ ಸಾವಿತ್ರಿಯವರ ಸ್ವಭಾವ ಮಾತ್ರ ತುಂಬಾ ಸಂಕೋಚದ ಹಿಂದಿನ ಬೆಂಚಿನ ವಿದ್ಯಾರ್ಥಿ ಜೀವನ, ಸಾವಿತ್ರಿ ತಮ್ಮ ವಿವಾಹ ಪೂರ್ವದಲ್ಲಿ ತುಂಬಾ ಪುಸ್ತಕಗಳನ್ನು ಓದಿದ್ದಾರೆ. ಅದೂ ಕನ್ನಡ ಕಾದಂಬರಿಗಳನ್ನಂತೂ ಒಂದನ್ನೂ ಬಿಡದೆ, ಇಂದಿಗೂ ಹೊಸ ಕಥೆ, ಕಾದಂಬರಿಗಳನ್ನು ಓದುತ್ತಾರೆ. ನಾಗರಾಜಪ್ಪನವರು "ನನ್ನ ಶ್ರೀಮತಿಯೇ ನನ್ನ ಬರವಣಿಗೆಯ ಮೊದಲ ವಿಮರ್ಶಕಳು" ಎನ್ನುತ್ತಾರೆ. ಇಷ್ಟೆಲ್ಲಾ ಸಾಮರ್ಥ್ಯ, ಪ್ರತಿಭೆ ಇರುವ ಸಾವಿತ್ರಿಯವರು ತಮ್ಮ ವೈಯಕ್ತಿಕ ಆಮೇ ಚಿಪ್ಪಿನ ಜೀವನದಿಂದ ಹೊರಗೆ ಬಂದರೆ ಗೃಹಿಣಿಯಾಗಿ ಅಚ್ಚುಕಟ್ಟಾಗಿ ಜೀವನ ತೂಗಿಸಿಕೊಂಡು ಹೋಗುತ್ತಿರುವುದರ ಜೊತೆಗೆ, ರಚನಾತ್ಮಕ ಕಾರ್ಯ ಸಾಧಿಸುವುದರಲ್ಲಿ ಸಂಶಯವೇ ಇಲ್ಲ.

ಪ್ರೊಫೆಸರ್ ನಾಗರಾಜಪ್ಪನವರು ತಮ್ಮ ವ್ಯಕ್ತಿತ್ವವನ್ನು ಅಸ್ತಿತ್ವವನ್ನು ಉಳಿಸಿ ಕೊಂಡಿರುವುದು ಅವರ ನಿರ್ಭಿಡೆಯ ನಿಷ್ಠೂರ ನಡತೆಯಿಂದ. ಇಲ್ಲವಾದರೆ ಹತ್ತರಲ್ಲಿ ಹನ್ನೊಂದಾಗುತ್ತಿದ್ದರೇನೊ ? ಆದರೆ ಅದೇ ಅವರ ಜೀವನದ ಪ್ಲಸ್ ಪಾಯಿಂಟ್ ಹೌದು ಮೈನಸ್ ಪಾಯಿಂಟು ಹೌದು. ಇದರ ನಡುವೆ ಒಂಟಿಯಾಗಿರುವ ತಮ್ಮ ಶ್ರೀಮತಿಯವರ ಜೊತೆ ಹೆಚ್ಚು ಸಮಯ ಕಳೆದು ಜೀವಕ್ಕೆ ಉತ್ಸಾಹ ತುಂಬಲಿ ಎಂದು ಹಾರೈಸುತ್ತ ಅತ್ಯಂತ ಮಾನವೀಯತೆಯಿಂದ ಕೂಡಿರುವ ಈ ಕುಟುಂಬದಲ್ಲಿ ನೆಮ್ಮದಿ ಸಂತೋಷ ನೆಲಸಲಿ. ಇಳಿವಯಸ್ಸಿನಲ್ಲಿ ಗಂಡ-ಹೆಂಡತಿ ಮನೆಯಲ್ಲಿ ಇಬ್ಬರೇ ಇದ್ದರೂ ದಂಪತಿಗಳ ಆತ್ಮ ವಿಶ್ವಾಸ, ಸ್ವಾವಲಂಭನೆ ಮತ್ತು ಸಹಾಯ ಮನೋಭಾವ ಅನ್ಯರಿಗೆ ಅನುಕರಣೀಯ ಬದುಕಾಗಿದೆ. ♦

19. ವ್ಯಕ್ತಿತ್ವ ನಿರ್ಮಾಪಕ ಕೆ.ಜಿ.ಎನ್.

ಪ್ರೊ|| ಹೆಚ್. ಚಲುವೇಗೌಡ

ಶ್ರೀ ಕೆ.ಜಿ. ನಾಗರಾಜಪ್ಪನವರಿಗೂ ನನಗೂ ಬಹು ಹಿಂದಿನಿಂದಲೂ ಪರಿಚಯ. ಅವರು ನನ್ನ ಪೂಜ್ಯ ಗುರುಗಳಾಗಿದ್ದರು. 1958/59 ರಿಂದ 1960/61 ರವರೆಗೆ ಮೂರು ವರ್ಷಗಳ ಕಾಲ ಮೈಸೂರು ಜಿಲ್ಲೆ ಕೆ.ಆರ್. ಸಾಗರದಲ್ಲಿದ್ದ ಡಿಸ್ಟ್ರಿಕ್ಟ್ ಬೋರ್ಡ್ ಪ್ರೌಢಶಾಲೆಯಲ್ಲಿ ಅವರ ಶಿಷ್ಯನಾಗಿದ್ದೆ. ಅವರ ಶಿಷ್ಯನಾಗಿ ವಿದ್ಯಾಭ್ಯಾಸ ಮಾಡುವ ಭಾಗ್ಯ ನನ್ನ ಪಾಲಿಗೆ ಒದಗಿ ಬಂದದ್ದು ನನ್ನ ಜೀವನದ ದಿಕ್ಕನ್ನೇ ಬದಲಾಯಿಸಲು ಕಾರಣವಾಯಿತು.

ನಾನು ಹಾಗೂ ನನ್ನ ಸಹಪಾಠಿಗಳಾದ ಇಬ್ಬರು ಸ್ನೇಹಿತರು ಕೆ.ಜಿ. ನಾಗರಾಜಪ್ಪನವರ ಮನೆಯಲ್ಲಿಯೇ ಇದ್ದುಕೊಂಡು ವ್ಯಾಸಂಗ ಮಾಡುತ್ತಿದ್ದೆವು. ಅವರ ಅಡುಗೆಯ ರುಚಿಯನ್ನು ಸವಿಯುತ್ತಿದ್ದೆವು. ಅವರು ಊರಿಗೆ ಹೋದ ಸಂದರ್ಭದಲ್ಲಿ ಅವರ ಮನೆಯನ್ನು ಕಾಯುವ ಸಂಪೂರ್ಣ ಜವಾಬ್ದಾರಿ ನಮ್ಮ ಪಾಲಿಗೆ ಒದಗಿ ಬರುತ್ತಿತ್ತು. ಅನಕ್ಷರಸ್ಥ ಹಳ್ಳಿಯ ಪರಿಸರದಿಂದ ಬಂದ ನನಗೆ ಅವರ ಸಂಪರ್ಕ ದೊರಕಿದ್ದು ನನ್ನ ಸೌಭಾಗ್ಯವೇ ಸರಿ. ಅವರ ಮನೆಯಲ್ಲಿದ್ದ ನಮಗೆ ಪಾಠ ಪ್ರವಚನಗಳನ್ನು ಓದುವ ರೀತಿ, ಅರ್ಥಮಾಡಿಕೊಳ್ಳುವ ರೀತಿ ಹಾಗೂ ವಿದ್ಯಾರ್ಥಿ ಜೀವನದ ನಡವಳಿಕೆಗಳ ಬಗ್ಗೆ ಮಾರ್ಗದರ್ಶನ ನೀಡುತ್ತಿದ್ದರು. ನಮ್ಮ ಓರೆಕೋರೆಗಳನ್ನು ತಿದ್ದುತ್ತಿದ್ದರು. ಅವರ ಬದುಕಿನ ಶೈಲಿ ನಮಗೆ ಸ್ಫೂರ್ತಿದಾಯಕವಾಗಿತ್ತು.

ಶ್ರೀ ಕೆ.ಜಿ.ನಾ ಅವರ ಮಾರ್ಗದರ್ಶನದಿಂದಲೇ ವಿದ್ಯಾಕ್ಷೇತ್ರದಲ್ಲಿ ಉನ್ನತ ಮಟ್ಟವನ್ನು ತಲುಪಿದ್ದೇನೆ. ಒಂದು ವಿದ್ಯಾಸಂಸ್ಥೆಯ ಪ್ರಾಚಾರ್ಯನಾಗಿದ್ದೇನೆ. ಇಂತಹ ಉನ್ನತ ಮಟ್ಟವನ್ನು ತಲುಪಲು ನಾನು ಇಂದಿನ ಸ್ಥಿತಿಗೇರಲು ಅವರೇ ಕಾರಣರಾಗಿರುತ್ತಾರೆ. ಕೆ.ಜಿ.ನಾ ಅವರು ಬೋಧಿಸಿದ ದಾರಿಯಲ್ಲಿ ಸಾಗಿದ ವಿದ್ಯಾಭ್ಯಾಸ ಮಾಡಿದ ನನ್ನ ಮತ್ತೋರ್ವ ಸ್ನೇಹಿತ ಶ್ರೀ ಗೋವಿಂದಯ್ಯನವರು ಮೈಸೂರು ವಿಶ್ವವಿದ್ಯಾಲಯ ಮಾನಸ ಗಂಗೋತ್ರಿಯಲ್ಲಿ ಆಂಥ್ರಪಾಲಜಿ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದೇ ರೀತಿ ಅವರ ನೂರಾರು ಶಿಷ್ಯರು, ವಿದ್ಯಾರ್ಥಿಗಳು ಸರ್ಕಾರ, ಸಮಾಜದಲ್ಲಿ ಉನ್ನತ ಸ್ಥಾನಗಳಲ್ಲಿರಬಹುದೆಂದು ಭಾವಿಸುತ್ತೇನೆ.

ನಾಗರಾಜಪ್ಪನವರ ಮನೆಯಲ್ಲಿ ಮೂರು ವರ್ಷವಿದ್ದು ಹೊಟ್ಟೆಯ ಹಸಿವು ಮತ್ತು ಜ್ಞಾನದ ಹಸಿವು ಎರಡನ್ನು ಹೋಗಲಾಡಿಸಿಕೊಂಡ (ಹಿಂಗಿಸಿಕೊಂಡ) ನನಗೆ ಅಂದಿನ

ಒಂದು ಪ್ರಸಂಗ ನೆನಪಿಗೆ ಬರುತ್ತಿದೆ. ಹಲವಾರು ವರ್ಷ ಪ್ರೌಢ ಶಾಲೆಯ ತರಗತಿಗೆ ಪಠ್ಯ ಪುಸ್ತಕವಾಗಿದ್ದ ಅವರ ಕಾದಂಬರಿ 'ದೊಡ್ಡ ಸಂಕಣ್ಣನಾಯಕ' ವನ್ನು ಬರವಣಿಗೆಯ ಹಂತದಲ್ಲಿ ಗಮನಿಸುತ್ತಿದ್ದೆ. ಅವರು ಊರಿಗೆ ಹೋದ ಸಂದರ್ಭದಲ್ಲಿ ಒಬ್ಬ ಪ್ರೌಢಶಾಲಾ ವಿದ್ಯಾರ್ಥಿಯಾಗಿ ಕುತೂಹಲದಿಂದ ಭಯದಿಂದ ಬಿಡಿ ಬಿಡಿ ಹಾಳೆಯಲ್ಲಿ ಬರೆದಿದ್ದ ಅದನ್ನು ಕದ್ದು ಓದುತ್ತಿದ್ದೆ.

ನಾನು ಶಿಕ್ಷಣ ಮುಗಿಸಿ ಉಪನ್ಯಾಸಕನಾಗಿ ಚನ್ನಪಟ್ಟಣದ ಬಳಿ ಕೆಂಗಲ್‌ನಲ್ಲಿರುವ ಶ್ರೀ ಕುವೆಂಪು ಪ್ರಥಮ ದರ್ಜೆ ಕಾಲೇಜು ಸೇರಿದೆ. ಇದಾಗಿ ಹಲವು ವರ್ಷಗಳ ನಂತರ ನಾನು ಪ್ರಾಚಾರ್ಯನೂ ಆದೆ. ನಮ್ಮ ಸಂಸ್ಥೆಯಲ್ಲಿ ಕನ್ನಡ ವಿಭಾಗದ ಸ್ನಾತಕೋತ್ತರ ತರಗತಿ ಆರಂಭವಾಯಿತು. ಆ ವೇಳೆಗಾಗಲೇ ನಿವೃತ್ತರಾಗಿದ್ದ ಪ್ರೊ. ಕೆ.ಜಿ ನಾಗರಾಜಪ್ಪನವರು ನಮ್ಮ ಕನ್ನಡ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿ ಬಂದರು. ಇದರಿಂದ ಮತ್ತೊಮ್ಮೆ ಅವರನ್ನು ಕೂಡುವ, ಅವರ ಜೊತೆಯಲ್ಲಿ ಸೇವೆ ಸಲ್ಲಿಸುವ ಅವಕಾಶ ದೊರಕಿದ್ದು ನನಗೆ ತುಂಬಾ ಸಂತೋಷವನ್ನು ತಂದಿದೆ.

ಮೂರ್‍ನಾಲ್ಕು ವರ್ಷಗಳಿಂದ ಪ್ರೊ. ಕೆ.ಜಿ.ನಾ ಅವರು ಬೆಂಗಳೂರಿನಿಂದ ಬಂದು ಹೋಗಿ, ಕೆಲವೊಮ್ಮೆ ಕಾಲೇಜು ಆವರಣದಲ್ಲಿರುವ ಹಾಸ್ಟೆಲ್‌ನಲ್ಲಿ ಉಳಿದುಕೊಂಡು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡುತ್ತಿದ್ದಾರೆ. ಪಠ್ಯದ ಜೊತೆಗೆ ಪಠ್ಯೇತರ ಸೃಜನಶೀಲ ಸಾಹಿತ್ಯ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿದ್ದಾರೆ. ಜೊತೆಗೆ ನುರಿತ ಅಧ್ಯಾಪಕರನ್ನು ವಿದ್ವಾಂಸರನ್ನು ಕರೆತಂದು ಅವರಿಂದ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಿ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಶ್ರಮಿಸುತ್ತಿದ್ದಾರೆ. ಇದರಿಂದಾಗಿ ಕನ್ನಡ ಎಂ.ಎ. ತರಗತಿಯಲ್ಲಿ ಉತ್ತಮ ಫಲಿತಾಂಶ ಬಂದಿದೆ. ಜ್ಞಾನಭಾರತೀಯ ಕನ್ನಡ ವಿಭಾಗದಲ್ಲಿ ಬಂದ ಫಲಿತಾಂಶಕ್ಕಿಂತಲೂ ನಮ್ಮ ಕೇಂದ್ರದಲ್ಲಿ ಉತ್ತಮ ಮಟ್ಟದ ಫಲಿತಾಂಶ ಬಂದಿರುವುದು ಪ್ರೊ. ನಾಗರಾಜಪ್ಪನವರ ಶ್ರಮದ ಪ್ರತಿಫಲ ಎಂದೇ ಹೇಳಬೇಕಾಗುತ್ತದೆ.

ಪ್ರೊ. ನಾಗರಾಜಪ್ಪನವರು ಅತಿ ನಿಷ್ಠುರವಾದಿಗಳಾಗಿದ್ದು ಪ್ರಾಮಾಣಿಕತೆಯ ಪ್ರತೀಕವಾಗಿದ್ದಾರೆ. ಅವರು ಯಾವುದೇ ಜವಾಬ್ದಾರಿ ವಹಿಸಿಕೊಂಡರೂ ಪರಿಪೂರ್ಣವಾಗಿ ವಿಷಯ ತಿಳಿದು ಸಮರ್ಥವಾಗಿ, ಪ್ರಾಮಾಣಿಕವಾಗಿ ನಿರ್ವಹಿಸಿ ಯಶಸ್ಸು ಸಾಧಿಸುತ್ತಾರೆ. ಇದಕ್ಕೆ ಅವರ ತೆರೆದ ಬದುಕೇ ಸಾಕ್ಷಿ. ♦

20. ಕುವೆಂಪು ಸ್ನಾತಕೋತ್ತರ ಕೇಂದ್ರದ ನಿರ್ದೇಶಕ

ಪ್ರೊ|| ಎಸ್. ಬಸವರಾಜು,

ನಾನು ಪ್ರೊ. ಕೆ.ಜಿ. ನಾಗರಾಜಪ್ಪನವರನ್ನು ಮೊದಲು ನೋಡಿದ್ದು 1967 ರ ಸುಮಾರಿಗೆ. ಚೇಳೂರಿಗೆ (ಗುಬ್ಬಿ ತಾಲ್ಲೂಕು) ಸಮೀಪದ ಕೊಡಿಯಾಲದ ಕಬಡ್ಡಿ ಟೂರ್ನಮೆಂಟ್ ಒಂದರ ಸಮಾರಂಭದಲ್ಲಿ. ಆಗ ನಾನು ಪಿ.ಯು.ಸಿ. ವಿದ್ಯಾರ್ಥಿ. ಆ ಸಮಾರಂಭದ ಅಧ್ಯಕ್ಷತೆಯನ್ನು ಕನ್ನಡ ಚಿತ್ರರಂಗದ ಹಿರಿಯ ನಟರಾದ ಕೆ.ಎಸ್. ಅಶ್ವತ್ಥ್ ವಹಿಸಿದ್ದರು. ಮುಖ್ಯ ಅತಿಥಿಯಾಗಿದ್ದ ನಾಗರಾಜಪ್ಪನವರು ಸುಮಾರು ಒಂದೂವರೆ ಗಂಟೆಗೂ ಹೆಚ್ಚು ಕಾಲ ಮಾತನಾಡಿದರು. ಹಾದಿತಪ್ಪಿ ದಿಕ್ಕೆಟ್ಟಿರುವ ಯುವಜನತೆ, ರಾಜಕೀಯ ರಂಗದ ರಾಡಿ, ಸಾಮಾಜಿಕ ಬದ್ಧತೆಯಿಲ್ಲದ ಸಿನಿಮಾ ತಾರೆಯರ ಥಳುಕಿನ ಜೀವನ ಇತ್ಯಾದಿ ಅವರ ಭಾಷಣದ ವಿಷಯವಾಗಿದ್ದವು. ಅಂದಿನ ಅವರ ಭಾಷಣ ತುಂಬಾ ಪ್ರಭಾವಿಯಾಗಿತ್ತು. ನನ್ನ ಕಾಲೇಜು ವಿದ್ಯಾರ್ಥಿ ಜೀವನದ ದಿನಗಳಲ್ಲಿ ಊಟ ವಸತಿಗೆ ಸಿದ್ಧಗಂಗಾ ಮಠವನ್ನು ಆಶ್ರಯಿಸಿದ್ದೆ. ಆ ಸಂದರ್ಭದಲ್ಲಿ ಆಗಾಗ ನಾಗರಾಜಪ್ಪನವರು ಕಾಲೇಜು ವಿದ್ಯಾರ್ಥಿಗಳ ಮಾತುಕತೆಗೆ ವಸ್ತುವಾಗುತ್ತಿದ್ದರು. ಅವರು ಮಠದಲ್ಲಿದ್ದಾಗ ಅಲ್ಲಿನ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಮೂಡಿಸಲು ಮಾಡಿದ ಪ್ರಯತ್ನ, ಆ ದಿಶೆಯಲ್ಲಿ ಅವರು ಕೈಗೊಂಡ ಕ್ರಮಗಳು ಚರ್ಚೆಗೊಳಗಾಗುತ್ತಿದ್ದವು.

ಕಾಲೇಜು ಅಧ್ಯಾಪಕನಾಗಿ ನಾನು ಕೆಲಸಕ್ಕೆ ಸೇರಿದ ಮೇಲೆ ಬೆಂಗಳೂರು ವಿಶ್ವವಿದ್ಯಾಲಯದ ಮೌಲ್ಯಮಾಪನ ಕೇಂದ್ರದಲ್ಲಿ, ಒಮ್ಮೆ ಅವರೇ ನನಗೆ ಪರಿಶೀಲಕರಾದಾಗ ಅವರ ಪರಿಚಯವಾಯಿತು. ಆಗ ಮೌಲ್ಯಮಾಪನ ಕೇಂದ್ರದಲ್ಲಿ, ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವಲ್ಲಿ, ಪಠ್ಯಪುಸ್ತಕಗಳ ನೇಮಕದಲ್ಲಿ ಸೇವಾ ಹಿರಿತನವನ್ನು ಕಡೆಗಣಿಸಿ ನಡೆಯುತ್ತಿದ್ದ ಜಾತೀಯತೆ, ಗುಂಪುಗಾರಿಕೆಗಳನ್ನು ಖಂಡಿಸಿ ಮಾತನಾಡಿ, ಮುಂದೆ ಗ್ರಾಮೀಣ ಪ್ರತಿಭೆಗಳನ್ನು ಸಂಘಟಿಸುವ ಪ್ರಯತ್ನ ಮಾಡುವುದಾಗಿ ಹೇಳಿದರು. ಬಳಿಕ ಅವರ ಸಂಪರ್ಕ ನನಗೆ ಹೆಚ್ಚಾಗಿ ಒದಗಿ ಬರಲಿಲ್ಲ.

ನಮ್ಮ ಕಾಲೇಜಿನ ಸ್ನಾತಕೋತ್ತರ ಕೇಂದ್ರಕ್ಕೆ 1994 ರಲ್ಲಿ ಅವರು ಪ್ರಾಧ್ಯಾಪಕರಾಗಿ ಬಂದಾಗ, ಅವರ ಒಡನಾಟ ದೊರೆತು ಪರಸ್ಪರ ಸ್ನೇಹ-ವಿಶ್ವಾಸಗಳು ನಿಕಟವಾದವು. ಮರುವರ್ಷ 1995 ರಲ್ಲಿ ಅವರೇ ಕೇಂದ್ರದ ನಿರ್ದೇಶಕರಾದರು. ಈ ಸಂದರ್ಭದಲ್ಲಿ ಅವರೊಡನೆ ಕೆಲಸ ಮಾಡುವಾಗ ಅವರ ಸಂಪರ್ಕ ಇನ್ನಷ್ಟು ನಿಕಟವಾಗಿ ಅವರ ವಿಸ್ತಾರವಾದ ಅಧ್ಯಯನ, ಗ್ರಹಿಕೆ, ವೈಚಾರಿಕ ಧೋರಣೆ, ನಿರ್ದಾಕ್ಷಿಣ್ಯ ಪ್ರವೃತ್ತಿಗಳ ಗಾಢ ಅರಿವಾಯಿತು.

ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ, ರಾಮನಗರ-ಚನ್ನಪಟ್ಟಣ ನಗರಗಳಿಗೆ ಸಮಾನ ಅಂತರದಲ್ಲಿ ಸುಂದರವಾದ ನಿಸರ್ಗದ ನಡುವೆ ಇರುವ ನಮ್ಮ ಕಾಲೇಜಿನ

ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿ ಪ್ರೊ. ಕೆ.ಜಿ. ನಾಗರಾಜಪ್ಪನವರು ವಹಿಸಿದ ಪರಿಶ್ರಮ, ಆಸಕ್ತಿ ಪ್ರಶಂಸನೀಯವಾದುದು. ಕನ್ನಡ ಎಂ.ಎ. ವಿದ್ಯಾರ್ಥಿಗಳ ಪಠ್ಯಕ್ರಮಕ್ಕೆ ಹಾಗೂ ಪರಾಮರ್ಶನಕ್ಕೆ ಅಗತ್ಯವಾದ ಪುಸ್ತಕಗಳನ್ನು ಪುಸ್ತಕದ ಅಂಗಡಿಗಳಿಂದ, ಪ್ರಕಾಶನ ಸಂಸ್ಥೆಗಳಿಂದ ರಿಯಾಯಿತಿ ದರದಲ್ಲಿ ಕಾಲೇಜಿನ ಗ್ರಂಥಾಲಯಕ್ಕೆ ತಂದು ಹಾಕುವುದರಿಂದ ಹಿಡಿದು, ಗೊತ್ತು ಪಡಿಸಿದ ಪತ್ರಿಕೆಗಳಿಗೆ ಸೂಕ್ತ ಅರ್ಹ ಅಧ್ಯಾಪಕರನ್ನು ಆರಿಸಿ, ಅವರ ಮನವೊಲಿಸಿ ಕೇಂದ್ರಕ್ಕೆ ನಿಯತವಾಗಿ ಬರುವಂತೆ ಮಾಡಿ, ತರಗತಿಗಳು ಅನಿರ್ಬಾಧಿತವಾಗಿ ನಡೆಯಲು ಅವರು ವಹಿಸಿದ ಶ್ರಮ ಅಪಾರ. ಪ್ರೊ. ನಾಗರಾಜಪ್ಪನವರ ಸೌಜನ್ಯಕ್ಕೆ ಮಣಿದು ಕೇಂದ್ರಕ್ಕೆ ಬಂದು ಪಾಠ ಹೇಳಿದ ಅಧ್ಯಾಪಕರಲ್ಲಿ ಹೆಸರಾಂತ ಲೇಖಕರಾದ ಅ.ರಾ. ಮಿತ್ರ, ಎಂ.ಎಚ್. ಕೃಷ್ಣಯ್ಯ, ಕ.ವೆಂ. ರಾಜಗೋಪಾಲ, ಡಾ॥ ಎಚ್.ಎಸ್. ರಾಘವೇಂದ್ರರಾವ್, ಟಿ. ಶ್ರೀನಿವಾಸ ರಾಜು, ಡಾ॥ ಮಂಗಳಾ ಪ್ರಿಯದರ್ಶಿನಿ, ಡಾ॥ ಕೃಷ್ಣಪರಮೇಶ್ವರ ಭಟ್, ಎಂ.ಜಿ. ನಾಗರಾಜ್ ಮುಂತಾದವರು ಸೇರಿದ್ದಾರೆ.

ವಿದ್ಯಾರ್ಥಿಗಳ ಹೆಚ್ಚಿನ ಉಪಯೋಗಕ್ಕಾಗಿ ಬೆಂ.ವಿ.ವಿ.ದ ಪ್ರಸಾರಾಂಗದ ಅಧಿಕಾರಿಗಳನ್ನು ಕಂಡು ಅವರನ್ನು ಒಪ್ಪಿಸಿ, ಪ್ರಸಾರಾಂಗದ ವತಿಯಿಂದ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾದ ವಿಷಯಗಳ ಬಗ್ಗೆ ಪರಿಣತರಾದ ವಿದ್ವಾಂಸರಿಂದ ವಿಶೇಷೋಪನ್ಯಾಸಗಳನ್ನು ವ್ಯವಸ್ಥೆ ಮಾಡಿದ್ದು ಒಂದು ಉಲ್ಲೇಖಾರ್ಹವಾದ ಸಂಗತಿ. ಈ ಸಂಬಂಧವಾಗಿ ಹಿರಿಯ ವಿಮರ್ಶಕರಾದ ಎಲ್.ಎಸ್. ಶೇಷಗಿರಿರಾವ್, ಜಿ.ಎಸ್. ಆಮೂರ, ಎಸ್.ಬಿ. ಮಿಣಜಿಗಿ ಮೊದಲಾದವರು ಕೇಂದ್ರಕ್ಕೆ ಬಂದು ಉಪನ್ಯಾಸಗಳನ್ನು ನೀಡಿ ಹೋಗಿದ್ದಾರೆ. ಅಲ್ಲದೆ ನಾಡಿನ ಹೆಸರಾಂತ ಕವಿ-ವಿಮರ್ಶಕರಾದ ಡಾ॥ ಜಿ.ಎಸ್. ಶಿವರುದ್ರಪ್ಪನವರು ನಾಗರಾಜಪ್ಪನವರ ಮೇಲಿನ ಅಭಿಮಾನದಿಂದ ಕೇಂದ್ರಕ್ಕೆ ಮೂರು ಸಲ ಬಂದು ತಮ್ಮ ಮೆಚ್ಚಿನ ವಿಷಯಗಳನ್ನು ಕುರಿತು ವಿಶೇಷೋಪನ್ಯಾಸಗಳನ್ನು ನೀಡಿ ಹೋಗಿದ್ದಾರೆ.

ಇನ್ನು, ವಿದ್ಯಾರ್ಥಿಗಳಿಂದ ವಿಚಾರ ಸಂಕಿರಣಗಳ ವ್ಯವಸ್ಥೆ, ಆಂತರಿಕ ಪರೀಕ್ಷೆಗಳ ವಿಷಯದಲ್ಲೂ ಪ್ರೊ. ನಾಗರಾಜಪ್ಪನವರ ಶಿಸ್ತು, ಅಚ್ಚುಕಟ್ಟು ಮೆಚ್ಚುಗೆಗೆ ಪಾತ್ರವಾಗಿದೆ. ಹಾಗೆಯೇ ವಿದ್ಯಾರ್ಥಿಗಳ ನಡತೆ, ಶಿಸ್ತು, ವ್ಯಾಸಂಗದ ವಿಚಾರದಲ್ಲೂ ಅವರು ಅತ್ಯಂತ ಕಟ್ಟುನಿಟ್ಟು. ಅಶಿಸ್ತಿನಿಂದ ವರ್ತಿಸುವ ವಿದ್ಯಾರ್ಥಿಗಳನ್ನು ಬರಟಾಗಿಯೇ ಬೈದು ಹದ್ದುಬಸ್ತಿಗೆ ತರುವಲ್ಲಿ, ಅವರ ಸ್ವೇಚ್ಛಾಚಾರಕ್ಕೆ ಕಡಿವಾಣ ಹಾಕುವುದರಲ್ಲಿ ಪ್ರೊ. ನಾಗರಾಜಪ್ಪನವರು ನಾಗರಾಜಪ್ಪನವರೇ!

1995ರಲ್ಲಿ ಸ್ನಾತಕೋತ್ತರ ಕೇಂದ್ರದ ಕಟ್ಟಡದ ಪ್ರಾರಂಭೋತ್ಸವದ ಸಂದರ್ಭದಲ್ಲಿ, ಕೇಂದ್ರದಲ್ಲಿ ವ್ಯವಸ್ಥೆಯಾಗಿದ್ದ ಕವಿಗೋಷ್ಠಿ ಪ್ರೊ. ನಾಗರಾಜಪ್ಪನವರ ಸಂಘಟನಾಶಕ್ತಿಗೆ ಒಂದು ನಿದರ್ಶನ. ನಾಡಿನ ಪ್ರಸಿದ್ಧ ಕವಿಗಳಾದ ಬಿ.ಸಿ. ರಾಮಚಂದ್ರಶರ್ಮ, ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಸುಮತೀಂದ್ರ ನಾಡಿಗ, ಎಚ್.ಎಸ್. ಶಿವಪ್ರಕಾಶ್ ಅವರಲ್ಲದೆ

ಯುವಕವಿ ಎಲ್.ಎನ್. ಮುಕುಂದರಾಜ್, ಕವಯಿತ್ರಿ ಎಂ.ಆರ್. ಕಮಲ ಹಾಗೂ ಅನೇಕ ಮಂದಿ ಸ್ಥಳೀಯ ಕವಿಗಳು ಭಾಗವಹಿಸಿದ್ದ ಈ ಕವಿಗೋಷ್ಠಿ ಒಂದು ಅತ್ಯಂತ ಸ್ಮರಣೀಯವಾದ ಕಾರ್ಯಕ್ರಮವಾಗಿತ್ತು.

ಮುಖ್ಯವಾಗಿ ಇಲ್ಲಿ ಉಲ್ಲೇಖಿಸಬೇಕಾದ ಸಂಗತಿಯೆಂದರೆ ನಮ್ಮ ಸ್ನಾತಕೋತ್ತರ ಕೇಂದ್ರದ ಫಲಿತಾಂಶ. ಹಲವು ಕೊರತೆಗಳ ನಡುವೆಯೂ ಈ ಕೇಂದ್ರದ ಪರೀಕ್ಷಾ ಫಲಿತಾಂಶ ಬೆಂಗಳೂರು ವಿಶ್ವವಿದ್ಯಾಲಯದ ಬೇರೆಲ್ಲಾ ಕೇಂದ್ರಗಳಿಗಿಂತ ಉತ್ತಮವಾಗಿದೆ. 1996-97 ರಲ್ಲಿ ಪರೀಕ್ಷೆ ತೆಗೆದುಕೊಂಡ ಅಂತಿಮ ವರ್ಷದ ಒಟ್ಟು 20 ಮಂದಿ ವಿದ್ಯಾರ್ಥಿಗಳಲ್ಲಿ 15 ಮಂದಿ ಪ್ರಥಮ ಶ್ರೇಣಿಯಲ್ಲೂ, 5 ಮಂದಿ ದ್ವಿತೀಯ ದರ್ಜೆಯಲ್ಲೂ ಉತ್ತೀರ್ಣರಾಗಿ ಕೇಂದ್ರಕ್ಕೆ ದಾಖಲೆಯ ಫಲಿತಾಂಶವನ್ನು ದೊರಕಿಸಿ ಕೊಟ್ಟಿದ್ದಾರೆ. ಇದುವರೆಗೆ ಪ್ರತಿ ವರ್ಷವೂ ಮೊದಲನೆಯ ಮತ್ತು ಎರಡನೆಯ ವರ್ಷದಲ್ಲಿ ಈ ಕೇಂದ್ರ ಶೇಕಡ ನೂರರಷ್ಟು ಫಲಿತಾಂಶವನ್ನು ಪಡೆದಿದೆ.

ಗ್ರಾಮೀಣ ವಿದ್ಯಾರ್ಥಿಗಳ ಏಳಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸ್ಥಾಪಿತವಾಗಿರುವ ಗ್ರಾಮಾಂತರ ಪ್ರದೇಶದ ಈ ಸ್ನಾತಕೋತ್ತರ ಕೇಂದ್ರವನ್ನು ಶೈಕ್ಷಣಿಕವಾಗಿ ಮುನ್ನಡೆಸುತ್ತಿರುವ ಪ್ರೊ. ಕೆ.ಜಿ. ನಾಗರಾಜಪ್ಪನವರು ಅಭಿನಂದನೆಗೆ ಅರ್ಹರಾಗಿದ್ದಾರೆ. ♦

" ಯಜ್ಞಯುಗದಲ್ಲಿ ಅಧರ್ಮಿಗಳನ್ನು ಕೊಲ್ಲುವುದರಿಂದ ಕ್ಷತ್ರಿಯರಿಗೆ ಪಾಪ ತಟ್ಟುವುದಿಲ್ಲ ಎಂಬುದು ಭಗವಂತನ ಸಂದೇಶವಾದರೆ ಭಕ್ತಿಯುಗದಲ್ಲಿ ಪರಸಮಯಿಗಳನ್ನು ಕೊಲ್ಲುವುದದಿಂದ ಅಥವಾ ಶೋಷಿಸುವುದರಿಂದ ಭಕ್ತರಿಗೆ ಪಾಪ ತಟ್ಟುವುದಿಲ್ಲ ಎಂಬುದು ಭಗವಂತನ ಸಂದೇಶ. ಅಧರ್ಮಿಗಳನ್ನು, ಅನ್ಯ ಧರ್ಮಿಯರನ್ನು ಕೊಲ್ಲಲು ಬಳಸುವ ಹಿಂಸೆಯಿಂದ ಪುಣ್ಯ ಸಂಚಯವೇ ಆಗುತ್ತದೆ."

– ಪ್ರೊ|| ಕೆ.ಜಿ.ನಾಗರಾಜಪ್ಪ

21. ನನ್ನ ಪೂಜ್ಯ ಗುರುಗಳು

ಕೆ. ಉಮಾಲಕ್ಷ್ಮಿ

ನಾನು ಜ್ಞಾನಭಾರತಿಯಲ್ಲಿ ಓದುತ್ತಿದ್ದ ಪ್ರಥಮ ಎಂ.ಎ. ತರಗತಿಯನ್ನು ನೆನೆದೊಡನೆ ಪ್ರೊ॥ ಕೆಜಿಎಸ್ ನೆನಪಾಗುತ್ತಾರೆ. ಅವರು ಪದವಿಯಿಂದ ಬೋಧನೆಯಿಂದ ಮಾತ್ರವಲ್ಲ, ಬೃಹತ್ ವಿದ್ವತ್ತಿನಿಂದ. ಸರಳ ಪಾರದರ್ಶಕ ವ್ಯಕ್ತಿತ್ವ, ನಡೆ-ನುಡಿಯ ಸಾಮರಸ್ಯ, ಅವರು ನಮ್ಮಂಥ ವಿದ್ಯಾರ್ಥಿಗಳ ಆದರ್ಶದ ಸ್ವರೂಪವಾಗಿ ಗೋಚರಿಸುತ್ತಾರೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಿಶ್ವಸನೀಯ ಸಂಗಾತಿಯಾಗಿ ಅಂದಂದಿಗೇ ಇವರು ಸ್ಥಾಪಿಸಿರುವ ಪರಿ ಅನನ್ಯ-ಯಾವುದೇ ಸಭೆ ಸಮಾರಂಭಗಳಲ್ಲಿ ಕೆ.ಜಿ.ಎಸ್ ಇದ್ದಾರೆಂದರೆ ನಮ್ಮೆಲ್ಲರಿಗೂ ಸಂತೋಷ. ಇಂದಿಗೂ ಅವರ ಲವಲವಿಕೆ ಹದಿಹರೆಯದವರನ್ನು ನಾಚಿಸುವಂತಹದ್ದು.

ತುಂಬಾ ಸರಳಜೀವಿ, ಪ್ರಚಂಡ ವಿದ್ವಾಂಸರಾದ ನನ್ನ ಗುರುಗಳ ಚಿಂತನೆಗಳು ಅಷ್ಟೇಕೆ ಪ್ರಸಿದ್ಧಿ ಪಡೆದಿಲ್ಲ? ನೆನೆದರೆ ನೋವಾಗುತ್ತದೆ. ಯಾವುದೇ ವಿದ್ವತ್‌ಗೋಷ್ಠಿಯಲ್ಲೂ ಪ್ರಸ್ತುತ ಸಂದರ್ಭವನ್ನು ವೈಭವೀಕರಿಸದೆ, ಅಲ್ಲಿನ ದ್ವಂದ್ವ, ವೈರುಧ್ಯಗಳನ್ನು ಎಳೆಎಳೆಯಾಗಿ ಬಿಡಿಸಿ, ಚಿಂತಿಸುವ, ಮರುಚಿಂತನೆಗೊಳಪಡಿಸುವ ಪರಿ ವಿಚಾರ ಯೋಗ್ಯ. "ಅಪ್ರತಿಮ ಮರುಚಿಂತಕ"ರೆಂದೇ ಖ್ಯಾತಿ. ಬಹುಶಃ ಇವರ "ಮರುಚಿಂತನೆ" ಕೃತಿಯೊಂದೇ ಸಾಕು ಇವರ ವಿಚಾರ ಮಂಥನದ ವೈಖರಿಗೆ. ಅಲ್ಲಿ ನಾ ಕಂಡ ಕನಕದಾಸನೆ ದ್ವಂದ್ವ ಮನಸ್ಸುಳ್ಳ ಪ್ರಪ್ರಥಮ ಕನಕದಾಸ. ಅಲ್ಲಮನ ಒಂದೇ ಒಂದು ವಚನವನ್ನು ಅದರ ವಿಭಿನ್ನ ಒಳಾರ್ಥಗಳೊಂದಿಗೆ ಬಿಡಿಸಿರುವ ರೀತಿಯೆ ಅಚ್ಚರಿ ಹುಟ್ಟಿಸುತ್ತದೆ.

ತರಗತಿಯಲ್ಲಂತೂ ಅದ್ಭುತ ಪಾಠಪ್ರವಚನ, ಅಂದಂದಿನ ಯುಗ-ಧರ್ಮ-ದರ್ಶನಗಳ ಹಿನ್ನೆಲೆಯಲ್ಲಿಯೇ ಪ್ರಸ್ತುತಕ್ಕನ್ವಯಿಸಿ ವಿವೇಚಿಸುವ ಬಗೆಯೇ ಮನನೀಯ. 'ಭಕ್ತಿಪಂಥ'ವನ್ನು ಕೆ.ಜಿ.ಎಸ್ ತೆಗೆದುಕೊಳ್ಳುತ್ತಾರೆ ಎಂಬ ಸುದ್ದಿ ತಿಳಿದೊಡನೆಯೆ ಕೆಲಮಾತ್ರರಿದ್ದ ಕೊಠಡಿ ಸಂಪೂರ್ಣ ಭರ್ತಿಯಾದುದಷ್ಟೆ ಅಲ್ಲ ಆ ವರ್ಷ ಅತ್ಯುತ್ತಮ ಫಲಿತಾಂಶ ಪಡೆದುದೇ ವಿದ್ಯಾರ್ಥಿಗಳಿಂದ ಅವರಿಗೆ ಸಂದ ಗೌರವ. ಅವರ ವಿಚಾರದ ತಲಸ್ಪರ್ಶತೆ, ವಾಗ್ಝರಿ, ವೇದದಿಂದಿಡಿದು ಇತ್ತೀಚಿನ ಕಿರಿಯ ಬರಹಗಾರರೆಲ್ಲರ ಬಗ್ಗೆ ತುಂಬು ಪ್ರೀತಿಯಿಂದ, ವಿಚಾರಗಳ ಗೊಂದಲದಲ್ಲಿ ನಯವಾಗಿಯೆ ತಿದ್ದುವ ವಿಶೇಷತೆ ಇವರಲ್ಲಿದೆ. ವೈಯಕ್ತಿಕವಾಗಿ ಸಾವಿರ ಕಷ್ಟಗಳೆ ಬಂದರೂ, ಎದೆಗುಂದದ, ಯಾರಿಗೂ ಬಗ್ಗದ, ಡೊಗ್ಗು ಸಲಾಮೊಡೆಯದ, ಅಭಿಮಾನದ ಮೇಷ್ಟ್ರಮನೆಗೆ ಕಾಲಿಟ್ಟರೆ ಪ್ರೀತ್ಯಾಧಾರದ ಸ್ವಾಗತ; ಧೈರ್ಯ ತುಂಬುವ ರೀತಿ ಬಹುಶಃ ಹಿಂದಿನ ಗುರುಶಿಷ್ಯ ಪರಂಪರೆಯ ಸಾರ್ಥಕ್ಯದ ಅನುಭವವಾಗುತ್ತದೆ. ನನ್ನ ಅಲ್ಪಮತಿ, ಗುರುಗಳಂತಹ ಮೇರುಸದೃಶ ಮೇಧಾಶಕ್ತಿ; ಅಬ್ಬಾ! ನೆನೆಮೊಡನೆಯೆ ಗೌರವ ಮೂಡುತ್ತದೆ. ತರಗತಿಯಲ್ಲಿ ಒಂದೇ ವರ್ಷ ಮಾತ್ರ ಪಾಠ ಕೇಳುವ ಸುಯೋಗ ಬಂತಲ್ಲಾ ಎಂದು ಮುಂದೆ ಕೊರಗುವ ಸಂದರ್ಭವೇ ಹೆಚ್ಚಿತ್ತು. ಮುಂದೆಯೂ ಗುರುಗಳು ಮಾರ್ಗದರ್ಶಕರಾದರು. ನನ್ನ ಮುಂದಿನ ಸಂಶೋಧನಾ ವ್ಯಾಸಂಗಕ್ಕೆ ಸೂತ್ರಧಾರರು ಅವರೇ. ನನಗೆ ಮಾತ್ರವಲ್ಲ, ನನ್ನಂತಹ ಎಷ್ಟೋ ವಿದ್ಯಾರ್ಥಿಗಳ ಪಾಲಿಗೆ. ♦

22. ನೆನಪಿನಂಗಳದಿಂದ

ಜಿ. ನಾಗರತ್ನ

ಶಿಕ್ಷಣ ಕ್ಷೇತ್ರದಲ್ಲಿ ಸುದೀರ್ಘ ಸೇವೆ ಸಲ್ಲಿಸಿ, ಉನ್ನತ ಹುದ್ದೆ ಅಲಂಕರಿಸಿ, ಅಪಾರ ಶಿಷ್ಯ ವೃಂದವನ್ನು ಹೊಂದಿರುವ, ವಿಶ್ರಾಂತ ಜೀವನವನ್ನು ನಡೆಸುತ್ತಿದ್ದರೂ ಸೃಜನಶೀಲ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರೊ॥ ಕೆ.ಜಿ.ಎನ್. ರವರ ಬಗ್ಗೆ ಒಂದೆರಡು ಮಾತು ನೆನಪಿನಂಗಳದಿಂದ.......

ಪ್ರೊ॥ ಕೆ.ಜಿ.ಎನ್. ನನಗೆ ಪಾಠ ಹೇಳಿರುವ ಗುರುಗಳು. ಸಿದ್ಧಗಂಗಾ ಮಹಿಳಾ ಕಾಲೇಜಿನಲ್ಲಿ ೧೯೮೪ ರಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದ ದಿನಗಳಲ್ಲಿ ದ್ವಿತೀಯ ಪದವಿ ತರಗತಿಗೆ 'ಹ್ಯಾಮ್ಲೆಟ್' ನಾಟಕವನ್ನು ಬೋಧಿಸಲು ಬರುತ್ತಿದ್ದ ಕೆ.ಜಿ.ಎನ್. ರವರ ಬಗ್ಗೆ ಮೊದ ಮೊದಲು ಭಯ ಮಿಶ್ರಿತ ಗೌರವ ಇದ್ದರೂ ಅವರ ಉಪನ್ಯಾಸ ಕೇಳಿದ ನಂತರವೇ ಅವರ ವೃತ್ತಿ ಶ್ರದ್ಧೆ, ಸಮಯಪ್ರಜ್ಞೆಗಳೂ ನನ್ನನ್ನು ಆಕರ್ಷಿಸಿದವು. ನಾನಾಗೇ ಇಷ್ಟಪಟ್ಟು ಕನ್ನಡ ಸಾಹಿತ್ಯವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಸ್ವಪ್ರೇರಣೆಯಿಂದ ತರಗತಿಗಳಿಗೆ ಹೋಗುತ್ತಿದ್ದೆ. ವಿದ್ಯಾರ್ಥಿಗಳಲ್ಲಿನ ಅಶಿಸ್ತು ಕೆ.ಜಿ.ಎನ್.ರವರು ಸಹಿಸದ ಗುಣವಾಗಿದ್ದು, ನೇರವಾಗಿ ತರಗತಿಯಲ್ಲಿ ಟೀಕಾಪ್ರಹಾರ ಮಾಡುತ್ತಿದ್ದುದುಂಟು. ಆದರೆ ಅವರ ಮಾತಿನ ಹಿಂದಿನ ಸಾಮಾಜಿಕ ಕಳಕಳಿ, ಮುಂದಿನ ಪ್ರಜೆಗಳಾಗುವ ವಿದ್ಯಾರ್ಥಿಗಳನ್ನು ತಿದ್ದುವ ಅವರ ಶಿಕ್ಷಕ ಹೃದಯದ ಚಿಂತನೆ ಅರ್ಥವಾಗ ತೊಡಗಿರುವುದು ಇಂದು ನಾನು ಶಿಕ್ಷಕವೃತ್ತಿಯನ್ನು ಅವಲಂಬಿಸಿದ ನಂತರವೇ ಎನ್ನಬಹುದು. ಪ್ರತಿಮೆ-ಹೋಲಿಕೆ-ಉಪಮೆಗಳನ್ನು ಒಳಗೂಡಿಸಿಕೊಂಡು ಹೇಳುವ ನಿರೂಪಣ ಶೈಲಿ, ತರ್ಕಬದ್ಧವಾದ ಬೋಧನೆ ನನ್ನ ಮೇಲೆ ಪ್ರಭಾವ ಬೀರಿದೆಯೆಂದರೆ ತಪ್ಪಾಗಲಾರದು.

ಕೆ.ಜಿ.ಎನ್. ರವರ ಉಪನ್ಯಾಸದ ಶೈಲಿ ನಿಧಾನವಾದರೂ ಸ್ಪಷ್ಟತೆಯನ್ನು ಹೊಂದಿತ್ತು. ಅದರಲ್ಲೂ 'ಹ್ಯಾಮ್ಲೆಟ್' ನಾಟಕದಂತಹ ಮೇರು ಕೃತಿಯೊಂದರ ಬೋಧನೆ ಮೂಲಕೃತಿಗೆ ಭಂಗ ಬಾರದಂತಹ ಸನ್ನಿವೇಶಗಳನ್ನು ಅರ್ಥವತ್ತಾಗಿ ಹೇಳಲು ಕಷ್ಟವಾದರೂ, ಕನ್ನಡಾನುವಾದವನ್ನು ರಸವತ್ತಾಗಿ ಹೇಳುವ, ಸಂದರ್ಭೋಚಿತ ಪ್ರಸಂಗಗಳನ್ನು ರಸಾಸ್ವಾದನೆಗೆ ಅನುಕೂಲವಾಗುವಂತೆ, ಅರ್ಥವ್ಯಾಪ್ತಿಯನ್ನು ವಿಸ್ತರಿಸಿ ಹೇಳುವ ಸಾಹಿತ್ಯಾಭಿವ್ಯಕ್ತಿ ಮತ್ತು ಕಾರ್ಯ ಶ್ರದ್ಧೆ ಅವರನ್ನು ಶಿಕ್ಷಣ ಕ್ಷೇತ್ರ ಮತ್ತು ಸಾಹಿತ್ಯಲೋಕದಲ್ಲಿ ಉತ್ತಮ ಸೇವೆಸಲ್ಲಿಸುವಂತೆ ಮಾಡಿದೆಯೆಂದರೆ ತಪ್ಪಾಗಲಾರದು. ಅವರ ಉಪನ್ಯಾಸ ಶೈಲಿಯು ಧುಮ್ಮಿಕ್ಕುವ ಜಲಪಾತದಂತಿರದೆ ಪ್ರಶಾಂತವಾಗಿ ಹರಿವ ನದಿಯಂತಿತ್ತು. ಇತ್ತೀಚಿಗೆ 'ಅನಿಕೇತನ' ಸಂಸ್ಥೆಯಿಂದ ಬಿಡುಗಡೆಯಾಗಿರುವ ಕವನಸಂಕಲನ 'ಕತ್ತಲೆಗೆ ಮೂರು ಬಣ್ಣ' ದಲ್ಲಿನ ಮುನ್ನುಡಿಯನ್ನು ಓದಿದ ನಂತರ ಅವರನ್ನು ಭೇಟಿಯಾಗುವ ಅವಕಾಶದ ಬಗ್ಗೆ ಯೋಚಿಸುತ್ತಿದ್ದೆ. ಗುಬ್ಬಿಯ ಸಾಹಿತ್ಯ ಸಮ್ಮೇಳನದಲ್ಲಿ ಅವರ ಪ್ರಬಂಧ ಮಂಡನೆ, ಕುವೆಂಪು ಹುಟ್ಟುಹಬ್ಬದ ಸಂದರ್ಭದ ಸಮಾರಂಭದಲ್ಲಿ ಸಾಹಿತ್ಯ- ವೈಚಾರಿಕತೆಯ ಬಗ್ಗೆ ಅವರು ನೀಡಿದ ಉಪನ್ಯಾಸ ಕೇಳುವ ಅವಕಾಶ ಒದಗಿ ಬಂದಿತ್ತು. ' ಜೀವ ಹಿರಿದಾದರೆ ನಡೆ-ನುಡಿ ಜೀವನ ಎಲ್ಲವೂ ಹಿರಿದೆ ' ಎಂಬುದು ಬಲ್ಲವರು ಹೇಳುವಮಾತು ಅದು ಕೆ.ಜಿ.ಎನ್. ರವರಿಗೂ ಅನ್ವಯಿಸುತ್ತದೆ. ♦

23. ಬಂಡಾಯದ ದನಿ

ಸಿ. ಚೌಡಪ್ಪ

ಗುಬ್ಬಿ, ತುಮಕೂರು ಜಿಲ್ಲೆಯ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಕೇಂದ್ರ. ರಾಷ್ಟ್ರೀಯ ಮಟ್ಟದ ಕ್ರೀಡಾ ಪಟುಗಳು ತಯಾರಾಗುತ್ತಿರುವ ಜಾಗ. ಹಾಗೆಯೇ ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ. ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದ ಹಿರಿಮೆ. ಇಲ್ಲಿ ಅನಿಕೇತನ ಎಂಬ ಸಂಸ್ಥೆ ಇತ್ತೀಚಿನ ದಿನಗಳಲ್ಲಿ ಹುಟ್ಟಿ ಉದಯೋನ್ಮುಖ ಲೇಖಕರಿಗೆ ದಾರಿದೀಪವಾಗಿದೆ. ಅದು ಹಮ್ಮಿಕೊಂಡಿದ್ದ ಕುವೆಂಪು- ೯೪ ಒಂದು ವಿಚಾರ ಸಂಕಿರಣ ತುಮಕೂರಿನ ವಿದ್ಯೋದಯ ಕಾನೂನು ಕಾಲೇಜಿನಲ್ಲಿ ನಡೆದಾಗ ನಾನೂ ಅದರಲ್ಲಿ ಭಾಗಿಯಾಗಿದ್ದೆ. ಹಿರಿಯ ಸಾಹಿತಿ ಮತ್ತು ಕುವೆಂಪು ವಿಚಾರದಲ್ಲಿ ಅಥಾರಿಟಿ ದೇ.ಜ.ಗೌ. ಭಾಗವಹಿಸಿದ್ದ ಕಾರ್ಯಕ್ರಮದ ನಿರೂಪಣೆ ಮತ್ತು ನಿರ್ವಹಣೆ ಕಂಡು ಹರ್ಷಿಸಿದೆ. ಇವರು ನಾಡಿನ ಗಂಭೀರ ಬರಹಗಾರರು, ಕುವೆಂಪು ಸಾಹಿತ್ಯಾಸಕ್ತರು ಭಾಗವಹಿಸಿದ್ದ ಸಂಕಿರಣ ಶ್ರೇಷ್ಠ ಮಟ್ಟದ್ದಾಗಿತ್ತು.

ಅನೇಕ ಸಾಹಿತ್ಯ ಕಾರ್ಯಕ್ರಮಗಳನ್ನು ಸಂಘಟಿಸುತ್ತಾ ವೇದಿಕೆ ಇಲ್ಲದ ಯುವ ಬರಹಗಾರರ ಅಭಿವ್ಯಕ್ತಿಗೆ ಸಮರ್ಥ ವೇದಿಕೆ ಒದಗಿಸಿ ಅವರ ಸಾಹಿತ್ಯ ಕೃಷಿಗೆ ಒತ್ತಾಸೆಯಾಗಿ ಕೆಲಸ ಮಾಡುತ್ತಿರುವ ಅನಿಕೇತನ ಸಾಹಿತ್ಯ ಸಾಂಸ್ಕೃತಿಕ ಸಂಶೋಧನಾ ಕೇಂದ್ರದ ಗೌರವ ಕಾರ್ಯದರ್ಶಿ ಎಂ.ಎಚ್. ನಾಗರಾಜು ಅವರು ಖ್ಯಾತ ವಿಮರ್ಶಕ ಪ್ರೊ|| ಕೆ.ಜಿ.ನಾಗರಾಜಪ್ಪನವರ ಸಾಹಿತ್ಯ ಕುರಿತ ವಿಚಾರ ಸಂಕಿರಣ ಮತ್ತು ಅಭಿನಂದನಾ ಸಮಾರಂಭವೇರ್ಪಡಿಸುತ್ತಿದ್ದೇವೆ ಮತ್ತು ಅಭಿನಂದನಾ ಗ್ರಂಥವೊಂದನ್ನು ಸಮರ್ಪಿಸುತ್ತಿದ್ದೇವೆ ಅವರ ಬಗ್ಗೆ ಅಭಿಪ್ರಾಯ ರೂಪದ ಎರಡು ಮಾತು ಬರೆದುಕೊಡಿ ಎಂದು ಕೇಳಿದಾಗ ನನಗೆ ದಿಗ್ಭ್ರಮೆ ಮತ್ತು ಸಂಕೋಚವಾಯಿತು. ಕೆ.ಜಿ.ನಾ ಅವರನ್ನು ಪರಿಚಯಿಸುವುದು ಸೂರ್ಯನನ್ನು ಸೊಡರು ಪರಿಚಯಿಸಿದಂತೆ ಎಂಬ ಅಳುಕು. ಆದರೂ ಇಂತಹ ಸಂತೋಷ ಸಮಾರಂಭದ್ದ ನಿಮಿತ್ತ ಎರಡು ಮಾತು ಬರೆದು ಕೊಡುವುದು ಸಮಯೋಚಿತ ಎಂದು ಭಾವಿಸಿ ನನ್ನ ಅನಿಸಿಕೆಗಳನ್ನು ದಾಖಲಿಸುತ್ತಿದ್ದೇನೆ.

ನಾನು ಶ್ರೀ ಸಿದ್ಧಗಂಗಾ ಮಠದಲ್ಲಿ ವಿದ್ಯಾರ್ಥಿಯಾಗಿದ್ದಾಗ (1966 - 69), ಪ್ರತಿದಿನ ಸಂಜೆ 6 ಗಂಟೆಗೆ ಶ್ರೀ ಶ್ರೀ ಶ್ರೀ ಡಾ|| ಶಿವಕುಮಾರ ಸ್ವಾಮಿಗಳು ನಮಗೆ ಇಂಗ್ಲೀಷ್ ಹಾಗೂ ವೇದೋಪನಿಷತ್ ವ್ಯಾಖ್ಯೆ ಮತ್ತು ವಿವೇಕಾನಂದ ರಾಮಕೃಷ್ಣರ ಸಂದೇಶಗಳನ್ನು ವ್ಯಾಖ್ಯಾನಿಸುತ್ತಿದ್ದರು. ಅವರ ಮುಂದೆ ಬಿಳಿ ಜುಬ್ಬ ಪೈಜಾಮಧಾರಿಯಾಗಿ ಟಾಕು ಟೀಕಾಗಿ ಶಿಸ್ತಿನಿಂದ ಕುಳಿತು ಟಿಪ್ಪಣಿ ಮಾಡಿಕೊಳ್ಳುತ್ತಿದ್ದವರು, ಮಿತ ಭಾಷಿ, ತೀಕ್ಷ್ಣನೋಟ ಮತ್ತು ಸಿಪಾಯಿನಡಿಗೆ, ನಾನು ವಾಸವಾಗಿದ್ದ ಗಿರಿದರ್ಶಿನಿ ಪಕ್ಕದಲ್ಲಿಯೇ ವಾಸ, ನಿತ್ಯದ ಟಿಪ್ಪಣಿ “ ಶ್ರೀ ಶಿವಕುಮಾರ ವಾಣಿ ” ಪುಸ್ತಕರೂಪದಲ್ಲಿ ಪ್ರಕಟಿಸಲು ಪ್ರಯತ್ನಿಸುತ್ತಿದ್ದವರೇ ಕೆ.ಜಿ. ನಾಗರಾಜಪ್ಪನವರು.

ಪ್ರೊ. ಕೆ.ಜಿ.ನಾ ರವರು ಗುಬ್ಬಿ ತಾ|| ಕಲ್ಲೂರಿನ ಬಡನೇಕಾರ ಕುಟುಂಬದಲ್ಲಿ

ಜನಿಸಿ, ಬಾಲ್ಯದಲ್ಲಿ ಕಷ್ಟಕಾರ್ಪಣ್ಯಗಳ ನಡುವೆ ತಮ್ಮ ಜೀವನ ಧ್ಯೇಯವನ್ನು ಗುರುತಿಸಿ ಕೊಂಡು ಎಂ.ಎ. ಓದಿ ಶ್ರೀ ಸಿದ್ಧಗಂಗಾ ಮಠದಲ್ಲಿ ಉಪಾಧ್ಯಾಯ ವೃತ್ತಿಗೆ ಸೇರಿದವರು. ಮುಂದೆ ತುಮಕೂರಿನಲ್ಲಿ ಸಿದ್ಧಗಂಗಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ 33 ವರ್ಷ ಅಖಂಡ ಸೇವೆ ಸಲ್ಲಿಸಿದವರು. ನಿವೃತ್ತಿಯ ನಂತರ ಬೆಂಗಳೂರಿನಲ್ಲಿ ನೆಲಸಿ, ಕೆಂಗಲ್‌ಬಳಿ ಇರುವ ಕುವೆಂಪು ಕಾಲೇಜಿನಲ್ಲಿ ಗೌರವ ಪ್ರಾಧ್ಯಾಪಕರಾಗಿ ವೃತ್ತಿಯಲ್ಲಿ ಮುಂದುವರೆಯುತ್ತಿರುವವರು.

ಶ್ರೀ ಮಠದಲ್ಲಿ ವಾಸವಾಗಿದ್ದಾಗ ಅವರಿಗೆ ವಿರಕ್ತ ಜೀವನದ ನಂಟು. ಹುಲಿ ಚರ್ಮದ ಹಾಸಿಗೆ ಗಂಟು. ಅಧ್ಯಾಪನ ಮತ್ತು ಬರವಣಿಗೆಯ ತಪಸ್ಸು. ತುಮಕೂರಿನಲ್ಲಿ ವೃತ್ತಿ ಪ್ರಾರಂಭಿಸಿದ ಮೇಲೆ ಶ್ರೀ ವಿದ್ಯಾಭೂಷಣ ಸ್ವಾಮಿಗಳಂತೆ ತಮ್ಮ ವಿರಕ್ತ ಜೀವನ ತ್ಯಜಿಸಿ ತಮ್ಮ ಬಾಳ ಸಂಗಾತಿಯನ್ನು ಆಯ್ದುಕೊಂಡು ವಾಸ್ತವ್ಯವನ್ನು ತುಮಕೂರಿಗೆ ಬದಲಾಯಿಸಿದರು. ಕಷ್ಟ ಸುಖ ಎರಡರಲ್ಲೂ ಸಮಭಾಗಿಯಾಗಿ ಸ್ಪಂದಿಸುವ ನಲ್ಮೆಯ ಪತ್ನಿಯೊಂದಿಗೆ ಸಂಸಾರಿಕ ಸುಖ ಅನುಭವಿಸಿದರು. ತಮ್ಮ ಏಕಮಾತ್ರ ಪುತ್ರ ಅಮೇರಿಕಾದಲ್ಲಿ ವೃತ್ತಿ ಹಿಡಿದು ಅಲ್ಲಿಯೇ ನೆಲೆಸಿದ್ದಾರೆ. ಸೊಸೆ ಮತ್ತು ಮುದ್ದಿನ ಮೊಮ್ಮಗಳು ಅಮೇರಿಕ ಸೇರುವ ನಿರೀಕ್ಷೆಯಲ್ಲಿದ್ದಾರೆ.

ಪ್ರೊ. ಕೆ.ಜಿ.ನಾ ರನ್ನು ನೋಡಿದರೆ ಒರಟು ಮನುಷ್ಯನಂತೆ ಕಾಣುತ್ತಾರೆ. ಬರವಣಿಗೆಯೂ ಅಷ್ಟೇ ತೀಕ್ಷ್ಣ. ಯಾರ ಭಯವೂ ಇಲ್ಲದೆ ತಮಗೆ ಸರಿತೋರಿದ್ದನ್ನು ಹೇಳುವ, ಬರೆಯುವ ನಿರ್ಭಿಡೆಯ ಛಾತಿ. ಸಮಾಜದಲ್ಲಿ ಪ್ರಧಾನ ಸಂಸ್ಕೃತಿಯಿಂದ ಉಪಸಂಸ್ಕೃತಿಗಳು ತುಳಿತಕ್ಕೊಳಗಾಗಿ ನಶಿಸಿ ಹೋಗದಂತೆ ಇವರದು ಬಂಡಾಯದ ದನಿ. ಸಮಾಜದ ಕಪಟ ಮೋಸ ಆಶಾಢಭೂತಿತನ ಮತ್ತು ದಬ್ಬಾಳಿಕೆಯಿಂದ ಬೇಸತ್ತು ಸಿಡಿದು ತಮ್ಮ ಬರವಣಿಗೆಯಿಂದ ತದುಕಿ ಬುದ್ಧಿ ಕಲಿಸುವ ಸಾಹಸ. ಇವರು ಬಾಹ್ಯದಲ್ಲಿ ಎಷ್ಟು ಒರಟೋ ಆಂತರ್ಯದಲ್ಲಿ ಅಷ್ಟೇ ಮೃದು. ತಮ್ಮ ಸ್ನೇಹಿತರಿಗೆ ಮನಕ್ಕೆ ತಂಪೆರೆಯುವ ಒಡನಾಟ. ಅವಿಸ್ಮರಣೀಯ ಆತಿಥ್ಯ.

ಇವರ ದೊಡ್ಡ ಸಂಕಣ್ಣ ನಾಯಕ ಐತಿಹಾಸಿಕ ಕಾದಂಬರಿಗೆ 1962 ರಲ್ಲಿ ಕರ್ನಾಟಕ ಸರ್ಕಾರ ಪ್ರಶಸ್ತಿ ಇತ್ತು ಗೌರವಿಸಿದೆ. ಇವರ ಮರುಚಿಂತನೆ ಎಂಬ ಗ್ರಂಥಕ್ಕೆ 1985 ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಉತ್ತಮ ವಿಮರ್ಶಗ್ರಂಥಗಳನ್ನು ವೈಚಾರಿಕ ಲೇಖನಗಳನ್ನು ಬರೆದಿದ್ದಾರೆ. ಇವರ ಕೆಲವು ಅಭಿಪ್ರಾಯಗಳಿಗೆ (ನಾಮಧಾರಿ ಲಿಂಗಾಯಿತರು) ಕೆಲವರು ವಿವಾದವನ್ನು ಹಬ್ಬಿಸಿ ವಿರೋಧಿಸಿದ್ದಾರೆ. ಆದರೆ ಇವರ ವಿಚಾರಧಾರೆ ಮತ್ತು ತೀಕ್ಷ್ಣಮತಿಗಳನ್ನು ಮೆಚ್ಚಿರುವವರನೇಕರಿದ್ದಾರೆ. ಖ್ಯಾತ ವಿಮರ್ಶಕ ಮತ್ತು ವಿಚಾರವಾದಿ ಬರ್ಟ್‌ರೆಂಡ ರಸೆಲ್ ರನ್ನು ಎಷ್ಟು ಜನ ಮೆಚ್ಚಿದ್ದರು? ಟೀಕಿಸುವವರು ಇದ್ದರೂ ರಸೆಲ್ ಪ್ರಖ್ಯಾಸರಾಗಲಿಲ್ಲವೆ. ಸಕಾರಣವಾಗಿದ್ದರೆ, ವಿರೋಧಕ್ಕೆ ಅರ್ಥವಿದೆ. ಪೂರ್ವಾಗ್ರಹ ಪೀಡಿತ ರಾಗಿದ್ದರೆ ಉಪೇಕ್ಷಿಸುವುದು ವಿಹಿತ. ರಸೆಲ್‌ರಂತೆ ಕೆ.ಜಿ.ನಾ ಚಿಂತನೆಗಳು ಎಲ್ಲಾ ಕಡೆ ಪ್ರಚಾರವಾಗಲೆಂದು ಹಾರೈಸುತ್ತೇನೆ. ♦

24. ಸಾಹಿತ್ಯ ಮಾರ್ಗ ದರ್ಶಕ

ಕೆ.ಹೆಚ್. ಸಂಜೀವಯ್ಯ

ಕಲ್ಪತರು ನಾಡಿನ ಹೆಬ್ಬಾಗಿಲು ಎಂಬ ಖ್ಯಾತಿಗೆ ಒಳಗಾಗಿರುವ ಗುಬ್ಬಿ (ಅಮರಗೊಂಡ) ತಾಲ್ಲೂಕಿನ ಕಲ್ಲೂರು ಗ್ರಾಮದವರಾದ ಕೆ.ಜಿ.ನಾಗರಾಜಪ್ಪನವರು ನಾಡಿನ ಹಿರಿಯ ಬರಹಗಾರರಲ್ಲಿ ಒಬ್ಬರು. ಗಂಭೀರ ಸ್ವಭಾವದ ಸಿಂಹ ಸದೃಶ ವ್ಯಕ್ತಿತ್ವದ ಸೃಜನ ಶೀಲ ಸಂಶೋಧಕರು ಮತ್ತು ವಿಮರ್ಶಕರು. ಅವರು ನನ್ನಂತಹ ಅನೇಕ ಯುವಕರಿಗೆ ಸಾಹಿತ್ಯದ ಮಾರ್ಗದರ್ಶಕರಾಗಿದ್ದಾರೆ. ಗುಬ್ಬಿಯ ನೆನಪಾಗುವುದು ಗುಬ್ಬಿಯ ಮಲ್ಲಣಾರ್ಯ ಎಂಬ ಪ್ರಾಚೀನ ಕವಿ ಹಾಗೂ ವೃತ್ತಿರಂಗ ಭೂಮಿಯ ಅಭಿಜಾತ ಕಲಾವಿದ ಡಾ। ಗುಬ್ಬಿ ವೀರಣ್ಣನವರಿಂದ ಹೇಗೋ ಹಾಗೆ ಪ್ರೊ। ಕೆ.ಜಿ.ನಾಗರಾಜಪ್ಪನವರಿಂದ ಎಂದರೆ ಅತಿಶಯೋಕ್ತಿ ಅಲ್ಲ. ಇಂತಹ ಕವಿ, ಕಲಾವಿದ, ಬರಹಗಾರರಿಂದ ಗುಬ್ಬಿ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ.

ಹಿರಿಯ ಗೆಳೆಯರಾದ ಶ್ರೀ ಎಂ.ಹೆಚ್.ನಾಗರಾಜು ಮತ್ತು ಶ್ರೀ ಎ.ಕೆ. ಹಂಪಣ್ಣನವರು ಕೊಟ್ಟ ಪ್ರೋತ್ಸಾಹ, ಒತ್ತಾಸೆಯಿಂದಾಗಿ ನಾವು ಹಲವು ಯುವ ಬರಹಗಾರರು, ಸಾಹಿತ್ಯಾಸಕ್ತರು ಸೇರಿ 'ಸೃಜನಶೀಲ ಸಾಹಿತ್ಯ ಸಂಸತ್ತು' ಎಂಬ ಸಾಹಿತ್ಯ ಅಧ್ಯಯನ ಕೂಟವನ್ನು ಸ್ಥಾಪಿಸಿಕೊಂಡೆವು. ಮನೆ ಮನೆಯಲ್ಲಿ ಸಾಹಿತ್ಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು, ಪ್ರತಿವಾರ ಸಾಹಿತ್ಯಾಸಕ್ತರು ಒಂದೆಡೆ ಸೇರಿ ಸಾಹಿತ್ಯ ಚರ್ಚೆ, ವಿಚಾರ ವಿನಿಮಯ, ಕವಿಗೋಷ್ಠಿ ಮುಂತಾದುವುಗಳನ್ನು ನಡೆಸುತ್ತಾ ಯುವ ಬರಹಗಾರರಿಗೆ ಒಂದು ಸಮರ್ಥ ವೇದಿಕೆ ಒದಗಿಸುವುದು, ಆ ಮೂಲಕ ಸೃಜನಶೀಲ ಸಾಹಿತ್ಯದ ವಾತಾವರಣ ನಿರ್ಮಿಸುವುದು ನಮ್ಮ ಸಂಸತ್ತಿನ ಅಂತರಂಗದ ಆಶಯವಾಗಿತ್ತು. ತಿಂಗಳಿಗೊಮ್ಮೆ ಹಿರಿಯ ಸಾಹಿತಿಗಳೊಂದಿಗೆ ಸಂವಾದ ಗೋಷ್ಠಿ ಏರ್ಪಡಿಸುವುದು ನಮ್ಮ 'ಸೃಸಾಸಂ' ನ ಗುರಿಯಾಗಿತ್ತು.

ದಿನಾಂಕ 2-9-1995 ರಂದು ನಮ್ಮ ಕರೆಗೆ ಓಗೊಟ್ಟು ಬೆಂಗಳೂರಿನಿಂದ ಬಂದು ಪ್ರಥಮ ಸಂವಾದ ಗೋಷ್ಠಿ ನಡೆಸಿಕೊಡುವುದರ ಮೂಲಕ ನಮ್ಮ ನೂತನ ಸಂಸ್ಥೆ ಸೃಜನ ಶೀಲ ಸಾಹಿತ್ಯ ಸಂಸತ್ತನ್ನು ಪ್ರೊ।। ಕೆ.ಜಿ.ನಾಗರಾಜಪ್ಪನವರು ಉದ್ಘಾಟಿಸಿದರು. ಅಂದು ಅವರು ಸುಮಾರು ಒಂದೂವರೆ ಗಂಟೆಗಳ ಕಾಲ ಮಾಡಿದ ಭಾಷಣ ಮತ್ತು ಸಾಹಿತ್ಯಾಸಕ್ತರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ರೀತಿ ಇಂದಿಗೂ ನನಗೆ ಕಣ್ಣಿಗೆ ಕಟ್ಟಿದಂತಿದೆ. ಇಡೀ ಕನ್ನಡ ಸಾಹಿತ್ಯ ಶತ ಶತಮಾನಗಳಿಂದ ಬೆಳೆದು ಬಂದ ಹಾದಿಯ ಸಿಂಹಾವಲೋಕನ ಮಾಡಿದ ಕೆ.ಜಿ.ನಾಗರಾಜಪ್ಪನವರು ಯುವ ಬರಹಗಾರರು ಕಥೆ, ಕಾವ್ಯ, ಗದ್ಯವನ್ನು ಹೇಗೆ ಬರೆಯಬೇಕು, ಹೇಗೆ ಶೈಲಿಯನ್ನು ಮೈಗೂಡಿಸಿ ಕೊಳ್ಳಬೇಕು, ಹೇಗೆ ಅಧ್ಯಯನ ನಿರತರಾಗ ಬೇಕು ಎಂಬುದನ್ನು ಮನಮುಟ್ಟುವಂತೆ ಹಲವು ಅನುಭವ, ದೃಷ್ಟಾಂತಗಳ ಮೂಲಕ ತಿಳಿಸಿಕೊಟ್ಟರು.

ಇಂದಿನ ಸಮೂಹ ಮಾಧ್ಯಮಗಳಿಂದಾಗಿ ನಮ್ಮ ಜನರ ಸಾಂಸ್ಕೃತಿಕ ಬದುಕು

ಸವಗೆಡುತ್ತಿರುವುದರ ಬಗ್ಗೆ ವಿಷಾದಿಸಿದ ನಾಗರಾಜಪ್ಪನವರು **"ಗ್ರಾಮಾಂತರ ನೆಲೆಗಳಿಂದ ಬಂದ ಪ್ರತಿಭಾವಂತ ಯುವಕ-ಯುವತಿಯರಿಗೆ ಅವಕಾಶಗಳಿಲ್ಲದೆ ಸೊರಗಿ ಹೋಗಿರುವುದೇ ಹೆಚ್ಚು. ಆದರೂ ಹದಿವಯಸ್ಸಿನ ಯುವ ಜನತೆ ಕನಸುಗಳನ್ನು ಹಂಚಿಕೊಂಡು ಬದುಕಬೇಕು. ಈಗಿನ ಸಂಕೀರ್ಣ ವಿದ್ಯಮಾನದಲ್ಲಿ ವಿದ್ಯಾವಂತ ಯುವ ಜನಾಂಗ ಗ್ರಾಮೀಣ ಸಂಸ್ಕೃತಿಯ ಸಂರಕ್ಷಕರಾಗಬೇಕು"** ಎಂಬುದಾಗಿ ಹೇಳಿದರು. ಹಾಗೆಯೇ ತಮ್ಮ ಭಾಷಣವನ್ನು ಮುಂದುವರೆಸುತ್ತಾ **"ಅದೃಷ್ಟ, ಭಾಗ್ಯ ಎಂಬುದು ಒಂದು ಮೋಸ. ಶಕ್ತಿ ಮತ್ತು ಪರಿಶ್ರಮ ಲೇಖಕರಿಗೆ ಅತ್ಯಾವಶ್ಯಕ. ಸೃಜನಶೀಲ ಎಂಬುದೇ ಒಂದು ಮುಕ್ತ ಚಿಂತನೆ. ಭಕ್ತಿ, ಆವೇಶ, ಅಭಿಮಾನಗಳು ಸಾಹಿತ್ಯವನ್ನು ಬೆಳೆಸಲಾರವು. ಅದು ಮನುಷ್ಯನ ಅಂತರಾಳಕ್ಕೆ ಇಳಿಯಬೇಕು........"** ಹೀಗೆ ಸುದೀರ್ಘವಾಗಿ ಮಾತನಾಡಿದ ಪ್ರೊಫೆಸರ್ ಅವರು ಅಂದು ನೆರೆದಿದ್ದ ಯುವ ಬರಹಗಾರರಲ್ಲಿ ಆತ್ಮವಿಶ್ವಾಸವನ್ನು, ದೃಢತೆಯನ್ನು ತುಂಬಿದ್ದರು. ನಮ್ಮಂತಹ ಹುಡುಗರು ಸಮಾವೇಶಗೊಳಿಸಿದ್ದ 50-60 ಜನರಿದ್ದ ಪುಟ್ಟ ಸಭೆಗೆ ಅವರು ಬಂದಿದ್ದು ನಮ್ಮೆಲ್ಲರಿಗೂ ಹುರುಪು, ಧೈರ್ಯ ಸ್ಫೂರ್ತಿ ತಂದುಕೊಟ್ಟಿತು. ಆ ನಂತರದ ನಮ್ಮ ಸೃಸಾಸಂ ನ ಅನೇಕ ಸಭೆ, ವಿಚಾರಸಂಕಿರಣಗಳಿಗೆ ದೂರದಿಂದಲೇ ಅವರು ಮಾರ್ಗದರ್ಶನ ಮಾಡುತ್ತಿದ್ದರು.

ಇದಾಗಿ ಹಲವಾರು ತಿಂಗಳುಗಳ ನಂತರ ಮತ್ತೊಮ್ಮೆ ನಮ್ಮ ಕರೆಗೆ ಓಗೊಟ್ಟು ಕೆ.ಜಿ.ಎನ್ ಅವರು ನಮ್ಮ ವೇದಿಕೆ ಬಂದಿದ್ದರು. ಅದು ಗುಬ್ಬಿ ತಾಲ್ಲೂಕಿನ ಅತ್ಯಂತ ಹಿರಿಯ ಬರಹಗಾರರಾದ ಮತ್ತು ಕೆ.ಜಿ.ಎನ್ ರವರ ಪ್ರೌಢಶಾಲಾ ವಿದ್ಯಾಗುರುಗಳಾದ ಶ್ರೀಯುತ. ಕಡಬ ದೊರೆಸ್ವಾಮಿ ಅಯ್ಯಂಗಾರ್‌ರವರ ಬದುಕು-ಬರಹ ಕುರಿತು ವಿಚಾರ ಸಂಕಿರಣವೇರ್ಪಡಿಸಿ ಸನ್ಮಾನಿಸುವ ಸಂದರ್ಭ. ಅಂದಿನ ಕಾರ್ಯಕ್ರಮ ಗುರು-ಶಿಷ್ಯರ ಅಪೂರ್ವ ಸಮ್ಮಿಲನದಿಂದ ಹೃದಯ ಸ್ಪರ್ಶಿಯಾಗಿತ್ತು. ಶಿಷ್ಯರಾದ ಪ್ರೊ॥ಕೆ.ಜಿ.ನಾಗರಾಜಪ್ಪನವರು ತಮ್ಮ ಗುರುವನ್ನು ವಿಮರ್ಶಿಸುತ್ತಾ, ಹೊಗಳುತ್ತಾ ಹೋದದ್ದು ಅದೇ ರೀತಿ ಕಡಬ ದೊರೆಸ್ವಾಮಿ ಅಯ್ಯಂಗಾರರು ತಮ್ಮ ಶಿಷ್ಯನನ್ನು ಮೆಚ್ಚುತ್ತಾ ನಡೆದದ್ದು ಮಹಾಭಾರತದಲ್ಲಿ ಅರ್ಜುನ ಮತ್ತು ದ್ರೋಣರ ಸಂಬಂಧವನ್ನು ನೆನಪಿಗೆ ತರುತ್ತಿತ್ತು.

ನಮ್ಮ ಸೃಜನಶೀಲ ಸಾಹಿತ್ಯ ಸಂಸತ್ತಿನ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದ ಅನಿಕೇತನ ಸಾಹಿತ್ಯ ಸಾಂಸ್ಕೃತಿಕ ಸಂಶೋಧನಾ ಕೇಂದ್ರದ ಗೌರವ ಕಾರ್ಯದರ್ಶಿಗಳೂ ಮತ್ತು ನಮ್ಮ ಕಾರ್ಯಕ್ರಮಗಳ ರೂವಾರಿಯೂ ಆಗಿದ್ದ ಶ್ರೀ ಎಂ.ಹೆಚ್. ನಾಗರಾಜು ರವರು ನಮ್ಮ ವೇದಿಕೆಯ ಯುವ ಬರಹಗಾರರನ್ನು ಪ್ರೋತ್ಸಾಹಿಸಲು, ಗುಬ್ಬಿ ತಾಲ್ಲೂಕಿನ ಎಲ್ಲಾ ಕವಿಗಳನ್ನು ಒಂದೆಡೆ ಸೇರಿಸಲು ತಮ್ಮ ಸಂಸ್ಥೆಯ ವತಿಯಿಂದ ಗುಬ್ಬಿ ತಾಲ್ಲೂಕಿನ ಪ್ರಾತಿನಿಧಿಕ ಕವನ ಸಂಕಲನವಾದ 'ಕತ್ತಲೆಗೆ ಮೂರು ಬಣ್ಣ"ವನ್ನು ಪ್ರಕಟಿಸಿದರು. ಇದಕ್ಕೆ ಮುನ್ನುಡಿ ಬರೆದು ಮುಕ್ತ ಕಂಠದಿಂದ ವಿಮರ್ಶಿಸಿ, ಹರಸಿ ಹಾರೈಸಿದವರು ಪ್ರೊ॥ ಕೆ. ಜಿ.ನಾಗರಾಜಪ್ಪನವರು. ಅವರು ಬರೆದಿರುವ ಮುನ್ನುಡಿ ಅಲ್ಲಿ ಸಂಕಲನ ಗೊಂಡಿರುವ ಕವಿಗಳಿಗೆ ಮಾತ್ರವಲ್ಲ ಎಲ್ಲಾ ಬರಹಗಾರರಿಗೂ ಲಿಖಿತ ಸಂವಿಧಾನದಂತಿದೆ.

ನಿಷ್ಠುರತೆ ಮತ್ತು ವಿಚಾರಶೀಲತೆಗೆ ಹೆಸರಾದ ಪ್ರೊ॥ ಕೆ.ಜಿ. ನಾಗರಾಜಪ್ಪನವರು ಸಾಹಿತ್ಯದಲ್ಲಿ ಸೃಜನಶೀಲ ಶಕ್ತಿ ಬರಡಾಗಿ, ಈ ಕಾಲಧರ್ಮದ ಗುಣಗಳಲ್ಲಿ ಒಂದಾದ ವ್ಯಾಪಾರೀಕರಣವೇ ಮುಖ್ಯವಾಗುತ್ತಿರುವುದರ ಬಗ್ಗೆ ವಿಷಾದಿಸಿ ಮೂಲಭೂತವಾದ ಧಾರ್ಮಿಕ ಮಿಲಿಟಂಟ್ ಪಂಗಡಗಳ ಹಾವಳಿ ಅಧಿಕ ಗೊಳ್ಳುತ್ತಿರುವ ನಗ್ನ ಸತ್ಯವನ್ನು ನಿರ್ಭೀತರಾಗಿ ಗುರುತಿಸಿರುವುದು ಸಂಕಲನದ ಗುಣಾತ್ಮಕ ಅಂಶವಾಗಿದೆ. **“ ಹಿಂದೆ ಅಕ್ಷರಸ್ಥ ವರ್ಗದ ವಂಶಸ್ಥರೇ ಸಾಹಿತ್ಯ ನಿರ್ಮಾಪಕರಾದರೆ ಇಂದು ಅನಕ್ಷರಸ್ಥ ವರ್ಗದಿಂದ ಬಂದ ಬರಹಗಾರರ ಬೇರೆ ಬೇರೆ ಸ್ತರದ ಸಂವೇದನೆಗಳು ಸಾಹಿತ್ಯದ ಹೊಸಯುಗದ ಆರೋಗ್ಯಕರ ವಾತಾವರಣ ನಿರ್ಮಾಣ ಮಾಡುತ್ತಿವೆ. ಹಿಂದೆ ಕವಿಯಿಂದ ಯುಗ, ಯುಗದಿಂದ ಕವಿ ಸೃಷ್ಟಿಯಾದರೆ ಇಂದು ಕವಿ ಮತ್ತು ಯುಗ ಎರಡನ್ನು ಜನ ಸಂವೇದನೆ ನಿಯಂತ್ರಿಸುವ ಕಾಲ ಬಂದಿದೆ......”** ಎಂದು ಅಭಿಪ್ರಾಯ ಪಟ್ಟಿರುವುದು ನಾಗರಾಜಪ್ಪನವರ ದೂರದೃಷ್ಟಿ ಚಿಂತನೆಯ ಜಾಣ್ಮೆಯಾಗಿದೆ.

ಯಾವುದೇ ಒಂದು ಸಾಹಿತ್ಯದ ಗುಂಪಿಗೂ ಸೇರದ ಕೆ.ಜಿ.ನಾಗರಾಜಪ್ಪನವರು ಅವರ ಜೀವಮಾನದಲ್ಲಿ ಅದೆಷ್ಟೊ ಯುವ ಬರಹಗಾರರು ಬೆಳಕಿಗೆ ಬರಲು, ಈ ಕ್ಷೇತ್ರದಲ್ಲಿ ಕಾಲೂರಲು ಸಹಾಯ ಮಾಡಿದ್ದಾರೆ. ಅವರ ಬದುಕು-ಬರಹ-ಚಿಂತನೆ-ವಿಚಾರಗಳಿಂದ ಸಾವಿರಾರು ಯುವಜನರು ಪ್ರಭಾವಿತರಾಗಿದ್ದಾರೆ. ಸಮಯವಿದ್ದು ಆರೋಗ್ಯ ಅವಕಾಶ ಕೊಟ್ಟರೆ ಕರೆದಲ್ಲಿಗೆ ಹೋಗಿ ಭಾಷಣ ಮಾಡುವ, ಪ್ರಬಂಧ ಮಂಡಿಸುವ, ಅಧ್ಯಕ್ಷತೆ ವಹಿಸಿ ಕಾರ್ಯಕ್ರಮ ನಡೆಸಿಕೊಡುವ ನಾಗರಾಜಪ್ಪನವರು ಕೇವಲ ಬರಹಗಾರರು ಮಾತ್ರವಲ್ಲ, ಸಂಘಟಕರೂ ಹೌದು. ನಮ್ಮಂತೆಯೇ 'ಸಮಕಾಲೀನ' ಎಂಬ ಮುಕ್ತ ಚಿಂತನೆಯ ವೇದಿಕೆ ಕಟ್ಟಿಕೊಂಡು ತುಮಕೂರಿನಲ್ಲಿ ಸಾಂಸ್ಕೃತಿಕ ವಾತಾವರಣ ನಿರ್ಮಿಸಿದವರು. ಹಲವಾರು ಉದಯೋನ್ಮುಖ ಬರಹಗಾರರಿಗೆ ಬೆನ್ನುತಟ್ಟಿದವರು. ಆತ್ಮವಿಶ್ವಾಸ ತುಂಬಿ ಪ್ರೋತ್ಸಾಹಿಸಿದವರು. ಸಾಹಿತ್ಯ-ಸಾಂಸ್ಕೃತಿಕ ಚಟುವಟಿಕೆಗಳು ಜಿಲ್ಲೆಯಲ್ಲಿ ನಿರಂತರವಾಗಿ ನಡೆಯಲು ಸಂಘಟಕರಿಗೆ ಕಾಲಕಾಲಕ್ಕೆ ಸೂಕ್ತ ಸಲಹೆ-ಸೂಚನೆ ನೀಡಿದ್ದಾರೆ. ಈ ಕಾರಣದಿಂದ ಪ್ರೊ॥ ಕೆ.ಜಿ. ನಾಗರಾಜಪ್ಪನವರು ತುಮಕೂರು ಜಿಲ್ಲೆಯ ಸಾಂಸ್ಕೃತಿಕ ಬದುಕಿನ ಅವಿಭಾಜ್ಯ ಅಂಗವಾಗಿದ್ದಾರೆ. ♦

“ ರಕ್ತ ಹರಿಸದೆ ರಕ್ತ ರಕ್ಷಣೆ ಅಸಾಧ್ಯ ಎಂಬುದೇ ಇಂದಿನ ಬದುಕಿನ ಸೂತ್ರ. ಅಹಿಂಸೆ ಬಹಿರಂಗದ ದೀಕ್ಷೆಯಾದರೆ, ಹಿಂಸೆ ಅಂತರಂಗದ ಸಾಧನೆ. ಅಧಿಕಾರ ಮತ್ತು ಧರ್ಮಪೀಠ ಎರಡೂ ಹಿಂಸೆಯ ಚಾಲನೆಯ ಎರಡು ಗಾಲಿಗಳು. ಅಹಿಂಸೆಯ ಮೊಳಕೆಗೆ ಹಿಂಸೆಯೇ ಬೀಜ ”

-ಪ್ರೊ॥ ಕೆ.ಜಿ.ನಾಗರಾಜಪ್ಪ.

25. ಸಾಂಸ್ಕೃತಿಕ ರಂಗದ ಉರಿವ ನಾಲಿಗೆ.

ಈಚನೂರು ಇಸ್ಮಾಯಿಲ್.

ಜಾತಿಯಿಂದ ಕತ್ತರಿಸುವ, ಮುಖವಾಡ ಧರಿಸಿರುವ ನಯವಂಚಕರು, ಗುಂಪುಗಾರಿಕೆ, ಸ್ವಾರ್ಥ, ತಿಕ್ಕಲುತನ, ಪಟ್ಟಭದ್ರ ಹಿತಾಸಕ್ತಿಗಳ ವಿರ್ಪಯಾಸ, ಸಂಸ್ಕೃತಿಯ ವಕ್ತಾರರಂತೆ ಪೋಜುಕೊಡುವ ಜಾತ್ಯಾತೀತರೆಂದು ಜಾತಿವಾದಿಗಳಾಗಿರುವ ಬಚ್ಚಿಟ್ಟುಕೊಂಡವರು. ಮಾತಿನಲ್ಲಿ ಸಂಸ್ಕೃತಿಯ ಹುಸಿಭ್ರಮೆ ಹುಟ್ಟಿಸಿ, ಅಂತರಂಗದಲ್ಲಿ ರಾಕ್ಷಸ ಪ್ರವೃತ್ತಿಯ ರೂಪ ಹೊತ್ತಿರುವ ಸೋಗಲಾಡಿತನದಲ್ಲಿ, ಸಂಸ್ಕೃತಿಯನ್ನು ಸರಿಯಾಗಿ ಗ್ರಹಿಸದೆ, ತಪ್ಪುದಾರಿಗೆ ಎಳೆಯುವ ಚಲಾವಣೆ ಬಯಸುವ ವೇದಿಕೆ ಅಲಂಕಾರಪ್ರಿಯರು ಅಸಂಖ್ಯಾತರಿರುವ ಸಂದರ್ಭದಲ್ಲಿ, ಮುಕ್ತ ಗ್ರಹಿಕೆಯ ಚೇತನ ಹುಡುಕುವುದೆಲ್ಲಿ....? ರಾಷ್ಟ್ರೀಯ ಪ್ರಜ್ಞೆ, ಸಂಸ್ಕೃತಿ, ಸಾಹಿತ್ಯ, ಬದುಕು, ಪ್ರಕೃತಿ, ಮಾನವೀಯ ಮೌಲ್ಯಗಳು, ವಸ್ತುನಿಷ್ಠೆ ವಿಮರ್ಶೆ, ಜೀವನ ಪ್ರೀತಿ, ವಿನಯ ಮತ್ತು ವಿಸ್ಮಯಗಳ ಗ್ರಹಿಕೆ, ಅರ್ಥಪೂರ್ಣ ಬದುಕಿಗೆ ಕ್ರಿಯಾ ಶೀಲರಾದವರಷ್ಟು? : ಚಿಂತನೆಯ ಹರಿಕಾರರೆಂದು ಘೋಷಿಸುವವರ ಸಣ್ಣತನ, ಅಹಂನಲ್ಲಿ ಕಚ್ಚಾಡುವ ರಂಧ್ರಗಳಲ್ಲಿ, ನಾನೇ ಶ್ರೇಷ್ಠನೆಂದು, ಜಾತಿಯವರನ್ನು ಬೆಳೆಸುತ್ತಾ ಬೇರೆಯವರನ್ನು ಕತ್ತರಿಸುವ ಸೋಗಲಾಡಿಗಳಲ್ಲಿ ಆತ್ಮೀಯ ಕವಚಗಳಲ್ಲಿ ಡಾಂಗುರಮಾಡುವ ಪ್ರಸಿದ್ಧರು: ಸಾಂಸ್ಕೃತಿಕ ಲೋಕದಲ್ಲಿ ಜಾತೀಯತೆಯ ಸೋಂಕು ಬೆಳಸಿರುವ ಪ್ರತಿಷ್ಠಿತ ಪ್ರಶಸ್ತಿಗಳ ಪಡೆದ ಮೇಧಾವಿಗಳಲ್ಲಿ ಹುಡುಕುವುದೆಲ್ಲಿ? ಮಾನವ - ಪ್ರೇಮ.

ತಹ ತಹಿಸುವ, ಕೊತ ಕೊತನೆ ಉರಿಯುವ ಕೆಂಡಗಳಲ್ಲಿ, ಶ್ರೀಯುತ ಕೆ.ಜಿ. ನಾಗರಾಜಪ್ಪ, ಸಾಂಸ್ಕೃತಿಕ ಲೋಕದಲ್ಲಿ ಕಂಡ ಪ್ರಬುದ್ಧ ಚಿಂತಕರೆಂದು ಗುರುತಿಸಲ್ಪಟ್ಟಿದ್ದು, ಸಂಸ್ಕೃತಿಯ ಸೂಕ್ಷ್ಮ ನವಿರುಗಳನ್ನು ಸಂಶೋಧಿಸಿ, ನಿಷ್ಠೂರತೆ ಮೈಗೂಡಿಸಿಕೊಂಡು, ನೇರವಾದ ವಿಚಾರಗಳನ್ನು ಅಭಿವ್ಯಕ್ತಿಸಿ, ಶುದ್ಧಾಂಗ ಲೌಕಿಕತೆ ಬೆಳೆಸಿಕೊಂಡರು. ಸಾಹಿತ್ಯಕ್ಷೇತ್ರದಲ್ಲಿ ತಮ್ಮದೇ ಆದ ವ್ಯಕ್ತಿತ್ವವನ್ನು ಬೆಳಸಿಕೊಂಡು, ಸಂಶೋಧನ ಕಾರ್ಯದಿಂದ, ವಿಮರ್ಶೆಯ ನಿಜವಾದ ವ್ಯಾಖ್ಯೆಯನ್ನು ಗ್ರಹಿಸಿ, ಕಾಲಘಟ್ಟದಲ್ಲಿ ಎಲ್ಲರನ್ನು ಚಕಿತಗೊಳಿಸಿದ್ದು ಪ್ರತಿಷ್ಠಿತರ ಗುಂಗಿಗೆ ಸವಾಲೊಡ್ಡಿದ ಆವಿಷ್ಕಾರ ಕುತೂಹಲ, ಅರ್ಥಪೂರ್ಣ. ಸಾಹಿತ್ಯ ಕ್ಷೇತ್ರದಲ್ಲಿ ಪ್ರಖರ ಪಾಂಡಿತ್ಯ ಪಡೆದಿದ್ದೂ ಎಲ್ಲರಿಂದ ದೂರವಾದದ್ದು, ಸಾಂಸ್ಕೃತಿಕಲೋಕದ ದುರಂತ ಮನಸ್ಸುಗಳಲ್ಲಿ ಜಾತೀಯತೆಯ ಗೋಡೆ ಇನ್ನು ಭದ್ರವಾಗಿರೋದು ಸಾಂಸ್ಕೃತಿಕಲೋಕದ ಅಪಾಯದ ಸಂಕೇತ.

ನನಗೆ ಕೆ.ಜಿ. ನಾಗರಾಜಪ್ಪನವರ ನೇರ ಸಂಪರ್ಕವಿಲ್ಲ. ಅವರನ್ನು ಎಂದೂ ಮಾತನಾಡಿಸಿಲ್ಲ. ಅವರು ಯಾವ ಗುಂಪಿಗೂ ಸೇರಿದವರಲ್ಲ. ಬರವಣಿಗೆಯಲ್ಲಿ ಆತ್ಮಸಂತೋಷ ಕಂಡಿರುವ, ಅಂತರಂಗದ ಮೆಲುದನಿಯಲ್ಲಿ ತನ್ನೊಳಗೆ ತಾನು

ಮಾತನಾಡುತ್ತಾ ಕಂಡುಂಡ ಅನುಭವಗಳನ್ನು ದಾಖಲಿಸುವ ಕೈಂಕರ್ಯ. ನಾಗರಾಜಪ್ಪನವರನ್ನು ನೋಡಿದ್ದು, ಅವರ ಭಾಷಣ ಕೇಳಿದ್ದು, ಎರಡು ಮೂರು ಸಲ. ಒಂದು 'ಸಂವೇದನೆ' ಯಲ್ಲಿ ರಾಮಚಂದ್ರಶರ್ಮರ ಹುಟ್ಟು ಹಬ್ಬದ ಸಂಭ್ರಮದಲ್ಲಿ, ಗೊರೂರು ಪ್ರತಿಷ್ಠಾನ ಸಮಾರಂಭದಲ್ಲಿ ಉಪನ್ಯಾಸ ನೀಡಿದ ಸಂದರ್ಭದಲ್ಲಿ, ಮತ್ತು ಬಂಡಾಯ ಸಾಹಿತ್ಯ ಸಂಘಟನೆಯ ಸಂದರ್ಭದಲ್ಲಿ. ಅವರ ಮಾತು ಕೇಳಿ ಆಶ್ಚರ್ಯ, ಕುತೂಹಲ ಹುಟ್ಟಿತು. ಮನಸ್ಸಿನಲ್ಲಿ ನೂರಾರು ತರಂಗಗಳು ಝೇಂಕರಿಸಿದವು. ಇಂದಿಗೂ ಮನಸ್ಸಿನಲ್ಲಿ ಗೊಂದಲವಿದೆ.

ನಿಷ್ಠುರಮಾತು, ವೈಚಾರಿಕತೆ, ವೈಜ್ಞಾನಿಕತೆಗಳ ಸ್ಪಷ್ಟನಿಲುವು, ಸಂಸ್ಕೃತಿಯ ಅರಿವು, ಮನುಷ್ಯ ಪ್ರೀತಿಯ, ಅರ್ಥಪೂರ್ಣ ವಿಚಾರವನ್ನು ಯಾವ ಮುಲಾಜಿಲ್ಲದೆ ಹೇಳುವ ಧೈರ್ಯ, ಸೋಗಲಾಡಿಗಳ, ಮತಾಂಧರ, ಚರಿತ್ರೆಯ ತಪ್ಪುಗಳನ್ನು ಸರಿಯೆಂದು ಪ್ರತಿಪಾದಿಸುವ ಅಪಾಥಮೂರ್ತಿಗಳಿಗೆ. ಇದೇ ಹೀಗೆಯೇ? ಇದು ನಿಜವಾದ ಸಂಸ್ಕೃತಿ ಎಂದು ಹೇಳುವ ಧೈರ್ಯ ಮಾಡಿದವರು ಕೆ.ಜಿ.ಎಸ್. ಪ್ರಖರ ಪಾಂಡಿತ್ಯ, ಚಿಂತನೆಯ ನಿಗಿ ನಿಗಿ ಕೆಂಡ, ವ್ಯವಸ್ಥೆಯ ಅನಿಷ್ಟಗಳು, ಸೃಜನಶೀಲ ಮನಸ್ಸು, ಸದಾ ಕೊತಕೊತನೆ ಉರಿಯುವಂತೆ ಧ್ವನಿಸುತ್ತಿತ್ತು. ಸುಸಂಸ್ಕೃತರೆಂದು ರಾರಾಜಿಸುವ ಮೂಲಭೂತವಾದಿಗಳು ಶ್ರೇಷ್ಠತೆಯ ಪಟ್ಟ ಅಲಂಕರಿಸಿ, ಬೇರೆಯವರನ್ನು ಕಡೆಗಣಿಸುವ ಪ್ರತಿಷ್ಠಿತ ವರ್ಗಗಳು. ಇವರ ನಿರ್ಭಯ ವಿಚಾರಗಳು, ಖಡಾಖಂಡಿತ ನಿಲುವು, ಸಾಹಿತ್ಯ ರಂಗದಲ್ಲಿ ಈಗಾಗಲೇ ಪ್ರತಿಷ್ಠಾಪಿಸಿಕೊಂಡಿರುವ "ಅಹಂ"ಗಳಲ್ಲಿ ನಾಗರಾಜಪ್ಪ ದೂರವಾದದ್ದು ಆಶ್ಚರ್ಯ, ವಾಸ್ತವ. ನಾಗರೀಕತೆ ಬೆಳದಂತೆಲ್ಲ, 21 ನೇ ಶತಮಾನಕ್ಕೆ ಕಾಲಿಡುತ್ತಿರುವಂತೆ, ಬಹುರಾಷ್ಟ್ರೀಯ ಕಂಪನಿಗಳು, ದೃಶ್ಯಮಾಧ್ಯಮಗಳು, ಭಾರತೀಯ ಸಂಸ್ಕೃತಿಯ ಬೇರುಗಳನ್ನು ಅಲ್ಲಾಡಿಸುತ್ತಿರುವಂತೆ ಮನುಷ್ಯ ಹೆಚ್ಚು ಹೆಚ್ಚು ನಾಗರೀಕನಾದಂತೆ, ಅಷ್ಟೆ ಮತಾಂಧನಾಗುತ್ತಾ ಬಂದಿರುವುದು, ಜಾತಿಯನ್ನು ಪ್ರತಿಷ್ಠಿಸಿಕೊಳ್ಳುವ ಸಂದರ್ಭಗಳು ನಿಜಕ್ಕೂ ಅಪಾಯಕಾರಿ. ಮನುಷ್ಯ ಸಂಬಂಧ ನಿಗೂಢ ಏಕೆಂದರೆ ಮನುಷ್ಯ ಪೂರ್ಣವಾಗಿ ಅರ್ಥವಾಗಿಲ್ಲ...... !

ಅವರಿಗೆ ಸಿಗಬೇಕಾದ ಮನ್ನಣೆ ಸಿಗಲಿಲ್ಲ, ಸಾಹಿತ್ಯ ಕ್ಷೇತ್ರದಲ್ಲಿ ಅವರ ಸೇವೆಗೆ ನಿಜವಾದ ಅರ್ಥಸಿಗಲಿಲ್ಲ. ಹಾಗಂತ ಅವರು ನಿರಾಶರಾಗಿಲ್ಲ. ಸದಾ ಸ್ಪಟಿಸುವ ಸಲಾಕೆಯಂತೆ ವ್ಯವಸ್ಥೆಯ ಭಾಗವಾಗಿ, ಸೃಜನಶೀಲ ಮನಸ್ಸನ್ನು, ಸಂತೋಷವನ್ನು ಉಳಿಸಿ ಕೊಂಡಿದ್ದಾರೆ. ಸಾಹಿತ್ಯದ ಗುಂಪುಗಾರಿಕೆಯಲ್ಲಿ, ಸ್ವಾರ್ಥ, ಜಾತೀಯತೆಯ ವಿರುದ್ಧದ ಹೋರಾಟದಲ್ಲಿ ಕೆ.ಜಿ.ಎಸ್ ಚೇತನ ಕಡಿಮೆಯಾದಂತೆ ಕಂಡರು ಅವರ "ಬದುಕಿನ ನಿರ್ದಯಿ ನಿಷ್ಠುರ ಪ್ರಜ್ಞೆ" ಸದಾ ಜಾಗ್ರತವಾಗಿರುತ್ತದೆ. "ಈ ಸುಂದರ ಕ್ಷಣಿಕ, ರಂಜಕ, ಮೋಹಕದ ಬದುಕಿನಲ್ಲಿ ಇವರ ಚೇತನ, ನಿಷ್ಠೂರ ಮಾತು, ಗ್ರಹಿಸಿದ ಸೃಷ್ಟಿ, ಸಮಷ್ಟಿಯ ನಿಜವಾದ ತಿಳುವಳಿಕೆ ಸೂಕ್ಷ್ಮ, ಪ್ರಜ್ಞಾವಂತರ ಮನಸ್ಸು ಕಲಕಿರುವುದು ನಿಜಕ್ಕೂ ಸಾಹಿತ್ಯ ಸಂದರ್ಭದ ಆರೋಗ್ಯ ಕಾಲಘಟ್ಟಗಳು" ಈ ಬದುಕು, ಸಾಹಿತ್ಯ, ಸಂಗೀತ, ಸಾಮಾಜಿಕ, ರಾಜಕೀಯ, ಆರ್ಥಿಕ, ಭೌಗೋಳಿಕ ಪದರಗಳನ್ನೊಳಗೊಂಡ ಸುಂದರ - ಕವನ. ನಾಗರಾಜಪ್ಪನವರ ಚೇತನ ನನಗೆ ಇಷ್ಟೆಲ್ಲಾ ಚಿಂತನೆಗೆ ಹಚ್ಚಿತು. ♦

26. ಸಹಜ ಚಿಂತಕ

– ಎ. ಕೆ. ಹಂಪಣ್ಣ

20 ನೇ ಶತಮಾನದ ಕೊನೆಯ ಹಂತದ ತಲ್ಲಣಗಳು ಆತಂಕಗಳ ನಡುವೆ ನಾವು ಬದುಕುತ್ತಿದ್ದೇವೆ. ರಾಜಕೀಯದ ಭ್ರಷ್ಟತೆ ಮತ್ತು ದೌಲತ್ತು, ಜಾತೀಯತೆಯ ಝೇಂಕಾರಗಳ ಮಧ್ಯೆಯೇ ಜನಸಾಮಾನ್ಯ ಆಶಯಗಳು ಛಿದ್ರಗೊಳ್ಳುತ್ತಿವೆ. ಬದುಕಿನ ಬಗೆಗೆ ಕನಸು ಕಟ್ಟಿಕೊಂಡಷ್ಟು ಬೇಸರ ತರಿಸುವ ಸಂಗತಿಗಳು ಎದುರಾಗುತ್ತಿವೆ ಸವಾಲಾಗುತ್ತಿವೆ. ಈ ಮಧ್ಯೆ ಸಹಜವಾಗಿ ಚಿಂತಿಸುವ ಬಂದದ್ದನ್ನು ಬಂದಂತೆ ಎದುರಿಸುವ ಸಾಹಿತಿ, ಕಲಾವಿದರು, ಚಿಂತಕರು ವ್ಯಕ್ತಿಗತ ನೆಲೆಗಳಲ್ಲಿ ತಮ್ಮನ್ನು ಕಂಡುಕೊಳ್ಳುವ ಹಂತದಲ್ಲಿ ಯಾವ - ಯಾರ ಹಂಗುಗಳಿಲ್ಲದ ಗುಂಗುಗಳಲ್ಲಿ ಬರಹದಲ್ಲಿ ತೊಡಗಿಕೊಂಡಿದ್ದಾರೆ. ಹೀಗೆ ತೊಡಗಿಕೊಂಡಿರುವವರಲ್ಲಿ ಹಿರಿಯ ಪ್ರಾಧ್ಯಾಪಕ - ಚಿಂತಕ - ಮರುಚಿಂತನೆಯ ವಿಮರ್ಶಕ ಕೆ.ಜಿ. ನಾಗರಾಪ್ಪ ಒಬ್ಬರು. ನೇರ ನಿಷ್ಠುರ ನಡೆಯ, ಆಳದಲ್ಲಿ ಗಾಂಭೀರ್ಯದ, ಹತ್ತಿರದಿಂದ ಕಂಡಾಗ ಆತ್ಮೀಯತೆಯ ಸಂಕೇತದಂತಿರುವ ಕೆ.ಜಿ.ಎನ್ ಬದುಕು - ಬರಹ ವಿಭಿನ್ನವಾದದು.

ಗುಬ್ಬಿ ತಾಲ್ಲುಕು ಕಲ್ಲೂರು ಗ್ರಾಮದ ಹಿಂದುಳಿದ ಬಡ ನೇಕಾರರ ಮನೆತನದಿಂದ ಬಂದ ಅವರು ಸ್ವಾಭಿಮಾನ ಛಲದ ಜೊತೆಗೆ ಬಡತನ ಕಟ್ಟಿಕೊಂಡೇ ಬಂದವರು ಸ್ವಸಾಮರ್ಥ್ಯದ - ಪ್ರತಿಭೆಯಲ್ಲಿ ಬೆಳೆದವರು. ಅವರ - ನನ್ನ ನಡುವಿನ ಸ್ನೇಹ ಹೊಸದೇನೂ ಅಲ್ಲ. ನಾನು ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗ - ಅವರ ಐತಿಹಾಸಿಕ ಕಾದಂಬರಿ 'ದೊಡ್ಡ ಸಂಕಣ್ಣ ನಾಯಕ' ಪಠ್ಯವಾಗಿದ್ದ ಕಾದಂಬರಿಯ ಮೊದಲ ಓದು ನನ್ನದಾಗಿತ್ತು ಹಾಗೂ ಸಾಹಿತ್ಯದ ಪ್ರವೇಶಿಕೆ ಮತ್ತು ಆಸಕ್ತಿಯೂ ಅದಾಗಿತ್ತು. ಮೂವತ್ತು ವರ್ಷಗಳಷ್ಟು ಹಿಂದಿನ ಘಟನೆ ಈಗಲೂ ನೆನಪೆ. ಹಾಗಾಗಿ ಕೆ.ಜಿ.ಎನ್ ಅವರ ನನ್ನ ನಡುವಿನ ಸ್ಥಾಯಿಯಾಗಿದ್ದ ಹಳೆಯ ಈ ಬಗೆಯ ಅಪ್ರಜ್ಞಾಪೂರಕ ಸ್ನೇಹ - ಗೌರವಗಳು ಈಗ ಸಂಚಾರಿಯಾಗಿ ಸ್ಥಾಯಿಯಾಗಿ ಆಪ್ತವಾಗಿ ಕವಲೊಡೆದಿದೆ.

ಹಲವು ಅಲೆದಾಟಗಳ ಅಲೆಗಳ ಮಧ್ಯೆ ಗುಬ್ಬಿ ತಾಲ್ಲುಕಿನಲ್ಲಿ ನಡೆದ ಪ್ರಥಮ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಕೆ.ಜಿ.ಎನ್. ಬದುಕು - ಬರಹ ಕುರಿತಂತೆ ಚಿಂತನೆ ನಡೆಸಬೇಕೆಂದು ನಮ್ಮ ಸ್ನೇಹಿತರ ವಲಯದಲ್ಲಿ ಚರ್ಚಿತಗೊಂಡು ನಂತರ ಐದಾರು ವರುಷಗಳ ನಂತರ ಅದಕ್ಕೊಂದು ಸಾಕಾರ ರೂಪ ಬರುತ್ತಿದೆ. ಈ ಮದ್ಯೆ ಕೆ.ಜಿ.ಎನ್. ಅವರ ನಮ್ಮ ನಡುವೆ ಹಲವು ಬಗೆಯ ಸಂವಾದ - ಚರ್ಚೆ ನಡೆದಿವೆ. ಬರಹದ ಜೊತೆಗೆ ಬದುಕನ್ನ ಅಗಾಧವಾಗಿ ಪ್ರೀತಿಸುವ ಅವರು ತಲ್ಲಣಗಳಿಗೆ ಬೇಸರಗೊಳ್ಳುವವರಾದರೂ ಭಾವನಾತ್ಮಕ ನೆಲೆಗಳಿಗೆ ವಿವೇಕವನ್ನು ಬಲಿ ಕೊಡುವವರಲ್ಲ. ಹಾಗಾಗಿಯೇ ಅವರೊಂದಿಗೆ ವಿವೇಕ - ಜೀವಂತವಾಗಿರುವುದು ಚಿಂತನೆಗಳು ಸಹಜವಾಗಿರುವುದು.

ದೂರದಿಂದ ಕಂಡಾಗ ಕೆ.ಜಿ.ಎನ್. ನಮ್ಮಂತಹವರ ಕೈಗೆಟುಕದ ಚಿಂತಕ -

ವಿಮರ್ಶಕರಿರಬಹುದೆಂದು ಅನಿಸಿದರೆ ಹತ್ತಿರದಿಂದ ಕಂಡಾಗ ಮಾತ್ರ ಅವರ ಸೃಜನ ಶೀಲ ಹುಡುಕಾಟದ, ಜನಾಂಗೀಕ ಕಲ್ಪನೆಯ ಸಮಗ್ರ ವ್ಯಕ್ತಿತ್ವದ ವ್ಯಕ್ತಿಯಾಗಿ ಪರಿಚಿತರಾಗುತ್ತಾರೆ. ಬದುಕು ಬರೀ ಬಣ್ಣದ ಚಿತ್ತಾರ ಬಿಡುಸುವುದಿಲ್ಲ. ಜನಾಂಗದ ಗೋರಿಗಳ ಆದರಾಳದ ನೋವುಗಳ, ಬಿಕ್ಕಳಿಕೆಗಳ ಪರಿಚಯಿಸಬಲ್ಲವರು ಎನಿಸುತ್ತದೆ. ಸಾಹಿತ್ಯ - ಸಾಂಸ್ಕೃತಿಕ ಬದುಕು ಕೆಲವರ ಸ್ವತ್ತಾಗಿದ್ದ ಸಂದರ್ಭವಾಗಿದ್ದಿದ್ದರೆ ನಮ್ಮಂತಹವರು - ಕೆ.ಜಿ.ಎನ್ ಅಂತಹವರು ಮುಖಾಮುಖಿಯಾಗುವ ಸಂದರ್ಭಗಳೇ ಬರುತ್ತಿರಲಿಲ್ಲ. ನಮ್ಮೊಳಗಿನ ಅಂತರಂಗದ ತುಮುಲಗಳು - ಪಿಸು ಮಾತುಗಳು ನಮ್ಮೊಳಗೆ ಉಳಿಯುತ್ತಿದ್ದವು. ಒಂದಷ್ಟು ಕಲಿತ ಅರಿವು ಪಡೆದ ಹಿನ್ನೆಲೆಯಲ್ಲಿ ಮಾತುಗಳು ಮಾತುಗಳಾಗುಳಿಯದೆ ಬದುಕುಗಳಾಗಿವೆ. ಬದುಕಿನ ಸತ್ಯಗಳು ಕಹಿ ಮತ್ತು ಕಟುವಾಗಿರಬಲ್ಲವು. ಸಾಹಿತ್ಯದ ಒಡನಾಟದಲ್ಲಿ ಪ್ರೀತಿ ಮಮತೆಗೆ ಅಷ್ಟಾಗಿ ತಲೆ ಬಿಸಿ ಮಾಡಿಕೊಳ್ಳದ ಕೆ.ಜಿ.ಎನ್. ಸಾಹಿತ್ಯಾಸಕ್ತ ಆಪ್ತರನ್ನೂ ಇಷ್ಟಪಡುವುದು ಮನುಷ್ಯತ್ವದ ಕಾಳಜಿಗಳ ನೆಲೆಯಲ್ಲಿ. ಇದೇ ಕಾರಣಕ್ಕೆ ವರ್ಗ-ವರ್ಣಗಳ ಬಗೆಗೂ ಅವರಿಗೆ ಸ್ಪಷ್ಟ ಅರಿವಿದೆ.

'ದೇವಾಂಗ ಜನಾಂಗ - ಚಿಂತನ ಮಂಥನ' ಎಂಬ ಲೇಖನದಲ್ಲಿ ಅವರ ಜನಾಂಗದ ಬಗೆಗೆ ಚಿಂತಿಸುವಾಗ ಪರಿಚಯಿಸುವಾಗಲೂ ಭಾವುಕ ಪ್ರೀತಿಗೆ - ತಬ್ಬಿಗೆ ಒಳಗಾಗುವುದಿಲ್ಲ. ಬದುಕಿಗಾಗಿ ಹೋರಾಡುವ ದೇವಾಂಗ ಜನಾಂಗ ಬುದ್ಧಿ ಬಳಸುವ ಆತುರದಲ್ಲಿ ವ್ಯಕ್ತಿ ಪ್ರಜ್ಞೆ ಕುಟುಂಬ ಹಾಗೂ ವಂಶ ಪ್ರಜ್ಞೆ ಬೆಳಸಿಕೊಂಡು ಮುಂದುವರೆದವರೆ ಹೊರತು ಜನಾಂಗದ ಸಾಮೂಹಿಕ ಅಭಿವೃದ್ಧಿಯ ಕಡೆಗೆ ಗಮನ ಹರಿಸಲಿಲ್ಲ. ಹಾಗಾಗಿ ಜನಾಂಗದ ಪ್ರಜ್ಞೆ ಬೆಳೆಯಲೇ ಇಲ್ಲವೆಂದು ನೊಂದು ನುಡಿಯುತ್ತಾರೆ. ಜಾತ್ಯಾತೀತ ಕಲ್ಪನೆಯ ಅವರು ಜನಾಂಗದ ಅಭಿವೃದ್ಧಿಯ ಬಗೆಗಿನ ಕಾಳಜಿ ಸಂಕುಚಿತವಾಗಿರದೆ ಜನಾಂಗಿಕ ಕಲ್ಪನೆಯ ಮಾತುಗಳಾಗಿರುವುದು ವೇದ್ಯವಾಗಿದೆ. ದಲಿತ ಸಮುದಾಯ, ಹಿಂದುಳಿದ ವರ್ಗಗಳ ಶ್ರಮ ಜೀವನದ ಅರಿವು ಪ್ರೀತಿ ಇರುವ ಕೆ.ಜಿ.ಎನ್. ಅವರ ಬದುಕು ದಿಕ್ಕು ತಪ್ಪಿದಾಗಲೂ ಬೇಸರವಿದೆ. ಜನಾಂಗದ ಮೌಢ್ಯ ಅಜ್ಞಾನ, ಒಂದುಗೂಡದಿರುವಿಕೆ ಸೀಮಿತ ವಲಯಗಳ ಬಗೆಗೆ ಆಕ್ರೋಶವಿದೆ. ಈ ಜನಾಂಗಗಳು ಉದ್ಧಾರವಾಗುವುದೆಂದು ಎಂದು ಚಿಂತಿಸುತ್ತಲೆ ಅವರಿಗಿರುವ ಜನಪರ ಸಂಸ್ಕೃತಿ ಮತ್ತು ಬದುಕುಗಳ ಬಗ್ಗೆ ಗೌರವವಿದೆ.

ಆದ್ಯ ವಚನಕಾರ ದೇವರ ದಾಸಿಮಯ್ಯನನ್ನು ಕುರಿತಂತೆ ಬರೆದ ಮರು ವಿಮರ್ಶೆಯಲ್ಲೂ ಸಹ ಈವರೆಗಿನ ದಾಸಿಮಯ್ಯನ ಬಗೆಗಿದ್ದ ಸಂಕುಚಿತ ದೃಷ್ಟಿ ಧೋರಣೆಗಳ ಕಲ್ಪಿತ ಮಾತುಗಳನ್ನು ಬದಿಗೆ ಸರಿಸಿ, ದಾಸಿಮಯ್ಯನ ವಚನಗಳ ಆಧಾರದ ಮೇಲೆ ವಸ್ತುನಿಷ್ಠ ಚರ್ಚೆಗೆ ಅವಕಾಶ ಕಲ್ಪಿಸುತ್ತಾರೆ. ದಾಸಿಮಯ್ಯನ ಬದುಕಿನ ನೆಲೆಗಳನ್ನು ಎಳೆ ಎಳೆಯಾಗಿ ಬಿಡಿಸುತ್ತ ವೈಭವೀಕರಣ ಮಾಡದೆ ಆತನ ಕಾಯಕ ಬದುಕನ್ನು ಚಿತ್ರಿಸುತ್ತಾರೆ. 'ವ್ಯಷ್ಟಿಯಲ್ಲಿ ಸಮಷ್ಟಿ ತತ್ವ ಅಡಗಿರುವುದನ್ನು ಸಾಧಿಸುವ ಮಾರ್ಗ ದಾಸಿಮಯ್ಯನ ವಚನಗಳಲ್ಲಿ ನಿಚ್ಚಳವಾಗಿದೆ. ಗಂಡು ಹೆಣ್ಣು ಎನ್ನದೆ, ಸಂಸಾರ ಬಿಡದೆ, ಸನ್ಯಾಸ ಸ್ವೀಕರಿಸದೆ, ಹೊಟ್ಟೆ ಬಟ್ಟೆ ಕಟ್ಟದೆ, ಅಮಾವಾಸ್ಯೆ - ಪೌರ್ಣಮೆ ಆಚರಿಸದೆ ದಿಟ್ಟತನದಿಂದ

ಬಂದ ಬದುಕನ್ನು ಬಂದಂತೆ ಸ್ವೀಕರಿಸಿದ ಮಹಾಪುರುಷನೆಂದು ದಾಸಿಮಯ್ಯನ ವ್ಯಕ್ತಿತ್ವ ಬಣ್ಣಿಸುತ್ತಾರೆ.

ಇದ್ದುದನ್ನು ಇದ್ದಂತೆ ಮಾತನಾಡುವ, ಬಂದ ಬದುಕನ್ನು ಬಂದಂತೆ ಸ್ವೀಕರಿಸಿ ಎದುರಿಸುವ ಸವಾಲುಗಳ ಮಧ್ಯೆ ಬದುಕಿದ ಕೆ.ಜಿ.ಎನ್ ಕೂಡ ದಾಸಿಮಯ್ಯನ ನಿಲುವಿನವರು - ಯಾವ ರಾಜಿಗೂ ಸಿದ್ದರಿರದ ಕೆ.ಜಿ.ಎನ್ ತಮ್ಮದೇ ಜನಾಂಗದ ಮಾಠಾಧಿಪತಿಗಳನ್ನ ಸಂದರ್ಶಿಸಿ ಸಂವಾದಿಸುವ ಸಂದರ್ಭದಲ್ಲೂ ಜನಾಂಗೀಕ ಮಮಕಾರ ತೊರೆದು ಕೆಲವು ಪ್ರಶ್ನೆಗಳನ್ನ ಎಸೆಯುತ್ತಾರೆ. ಅವುಗಳಲ್ಲಿ ಮುಖ್ಯ ಪ್ರಶ್ನೆಗಳೆಂದರೆ. ಯಾರು ಕರೆಯದ ದೇವಾಂಗ ಬಡಕುಟುಂಬದ ಮನೆಗಳಿಗೆ ಹೋಗಿದ್ದೀರಾ ? ಜನಾಂಗದ ಮಠಕ್ಕೆ ಒತ್ತಾಯದಿಂದ ಹಣ ಸಂಗ್ರಹಿಸುತ್ತಿದ್ದೀರಂತಲ್ಲ, ಮತ್ತು ಮಠದ ಹಣ ರಕ್ತ ಸಂಬಂಧಿಗಳಿಗೆ ಹರಿಯುತ್ತಿದೆಯಂತಲ್ಲಾ. ಈ ತರಹದ ಸ್ವಾಮೀಜಿಗೆ ಮುಜುಗರ ಉಂಟು ಮಾಡುವ ಪ್ರಶ್ನೆಗಳ ಹಿಂದಿನ ಎಚ್ಚರಿಕೆ ಕಾಳಜಿಗಳು ವ್ಯಕ್ತವಾಗುತ್ತವೆ. ದೇವಾಂಗ ಮಠಕ್ಕಾಗಲಿ, ಜನಾಂಗಕ್ಕಾಗಲಿ ಹೇಳಿ ಕೊಳ್ಳುವ ಆಕರ ಗ್ರಂಥಗಳಿಲ್ಲವೆಂದು ಉಲ್ಲೇಖಿಸುತ್ತಾರೆ ಜನಾಂಗಿಕ ಪ್ರೀತಿ ಎನ್ನವುದು ಅರಿವಿನಿಂದ ಮೂಡಬೇಕೆಂದು ಅದು ಭಾವನಾತ್ಮಕ ನೆಲೆಯಾಗಬಾರದೆನ್ನುತ್ತಾರೆ. ಯೂವುದೇ ಜನಾಂಗ ಬರೀ ಜನಾಂಗ - ಜನಾಂಗವೆಂದು ಪರಿತಪಿಸುವುದು ಅರ್ಥವಿಲ್ಲದ್ದು. ಮುಂದುವರೆದ ಜನಾಂಗ - ಹಿಂದುಳಿದ ಜನಾಂಗಗಳ ಬಗೆಗೆ ನಮ್ಮೊಂದಿಗೆ ಚರ್ಚಿಸುವಾಗಲು ಅವರ ಚಿಂತನೆ ಪೂರ್ಣ ದೃಷ್ಟಿಯಿಂದ ಕೂಡಿರುತ್ತಿತ್ತು.

'ಕಲ್ಲೂರಿನ ಸಂತಕವಿ ರುದ್ರಮುನಿ' ಅವರ ಬಗೆಗೂ ಸಂಶೋಧನಾತ್ಮಕವಾಗಿ ಬರೆದಿರುವ ನಾಗರಾಜಪ್ಪ ಸಂತಕವಿಯ ಗುರುಪರಂಪರೆ - ಹಿನ್ನೆಲೆ ಕವಿ ಕಲ್ಲೂರಿಗೆ ಬಂದು ನೆಲಸಿದ, ಸಮಾಧಿ ಹೊಂದಿದ, ಸಮಾಜದೊಂದಿಗೆ ಸಂಬಂಧ ಹೊಂದಿದ, ರಾಜ್ಯದೆಲ್ಲೆಡೆ ಸುತ್ತಾಡುವಾಗಿನ ನೋವಿನ - ಅವಮಾನದ ಅನುಭವಗಳನ್ನು ಸಾಕಾರವಾಗಿಯೇ ವರ್ಣಿಸುತ್ತಾರೆ. ಕವಿಯ ವಚನಗಳ ಮೂಲಕ ಅವನ ಇದೇ ಬದುಕನ್ನ ವರ್ಣಿಸುತ್ತ ಮೇಲುವರ್ಗದ ಪುರೋಹಿತಶಾಹಿಯೊಂದಿಗೆ ನಡೆಸಿದ ಸಂಘರ್ಷದ, ಮಾತೃ ಸಂಸ್ಕೃತಿಯ ಬೇರುಗಳನ್ನ ಹುಡುಕಿ ತೆಗೆಯುತ್ತಾರೆ.

ಆದ್ಯ ವಚನಕಾರ ದೇವರ ದಾಸಿಮಯ್ಯ, ಸಂತಕವಿ ರುದ್ರಮುನಿ ಅವರ ಪರಂಪರೆ - ಹಿನ್ನೆಲೆ ಹೊಂದಿರುವ ಕೆ. ಜಿ. ನಾಗರಾಜಪ್ಪ ಕೂಡ - ಅವರಿಬ್ಬರ ಭಿನ್ನ ನೆಲೆಗಳ ಆಧುನಿಕ ಮನೋಧರ್ಮದ ಚಿಂತನೆಯಲ್ಲಿ ಮೂಡಿ ಬಂದವರು. ಬವಣೆಗಳ ನಡುವೆ ಬದುಕು ರೂಪಿಸಿಕೊಂಡು ಬರಹಗಳ ಮಧ್ಯೆ ಬವಣೆಗಳನ್ನು ಹಗುರ ಮಾಡಿಕೊಂಡು ಇಹ - ಪರಗಳಗೊಡವೆ ಬೇಡವೆನ್ನುತ್ತ ಮನುಷ್ಯ ಸಂಬಂಧಗಳ ತಾಕಲಾಟ - ತಾದಾತ್ಮ ಭಾವಗಳೊಂದಿಗೆ ಹೆಣೆದು ಕೊಂಡವರು, ಗುಪ್ತ ಸಮಾಜ, ಅನುಭಾವ ಸಾಹಿತ್ಯ, ತಂತ್ರ - ಸಾಹಿತ್ಯದ ಬಗೆಗೆ ತಮ್ಮದೆ ಒಳನೋಟ ಹೊಂದಿರುವ ಕೆ.ಜಿ. ಎನ್. ತಮ್ಮ ಅನುಭವದ - ಓದಿನ ಸಮಗ್ರತೆಯನ್ನ ಮತ್ತಷ್ಟು ಪ್ರಖರವಾಗಿ ಪುಸ್ತಕ ರೂಪದಲ್ಲಿ ಹೊರತರಬೇಕಾಗಿದೆ.♦

27. A Happy man to know!

B.C.Ramachandra Gowda

Karma willed me away and busy in distant **Dakshina America.** During nearly five decades in exile, the hope of returning some day to dear Karnataka, hug both old and new relatives, relearn a few words of Kannada-totally forgotten due to lack of exercise, remained. Another cherished wish was to discover if true masters of kriya and Tantra yoga were still to be found in our land.

The stars have always been kind on my desires. Two years have now gone by, Since my to return to our punya Bhumi. In search of the peace and silence needed to carry on with an unsought literary job, cast upon me thirty years ago, and which I hope to complete some day, moving into my brother's house in Vijayanagar, where the simple and solitary life he leads, seemed to be a good choice.

Mr. Nagarajappa along with his wife, and son's family inhabit the ground floor of the building. We had met on some earlier occasion. I was duly informed that the professor was an old family friend and a "controvertial" writer. Little did I then suspect our formal acquaintace was destined to blossom into a bond of mutual respect and common understanding.

No sooner had I installed myself to work in this new environment, than both cook and maid decided to abandon my brother's service. This seemingly unfortunate situation led to a most surprising discovery: our neighbour was a thought reader, and task master in the art of practical learning!

It was one of those sultry hot days of May. We sat together on the terrace under a cloudless starry night, praying for a gasp of fresh and cool air, when Nagarajappa suddenly asks:

- You enjoy cooking, don't you?

I am convinced Sir, that no self respecting writer can do well, if he is unable to prepare a decent meal...

If such be the case, then how is it that you are feeding yourself and your distraught brother only to bread, noodles, rice, and bananas

The man not only reads your thoughts and feelings but can also see through the ceiling, said I to myself, before proceeding to explain that I could roast a fine **asado,** produce **tortillas, papas-fritas, ensaladas, etc**. My brother having been with my family in Argentina could testify to the truth of my statement. But here, in my own land I was at a loss. The vendors at the market would be unable to understand my needs. Moreover, I was incompetent in Indian cooking expertise.

Early next morning this chela found himself under the guidance of his new found guru. The quasi bohemian life I had led abruptly came its end with Nagarajappa naming and pointing out at **alugedde, menasinakaee, eerulli**, and a host of other articles at the vegetable market. I was forced to pronounce correctly not wanting to be shamed in public.

Back home the professor had this learner squatting on the kitchen floor, scraping coconuts for chutney, and shedding tears while mincing onions. By the time the monsoon rains

arrived, and the Professor was back to his lectures on literature at the University, this assistant was capable of producing acceptable **uppittu, tilisaru, iddli, dosa,** etc. This art of learning to help yourself is to my personal appreciation, the key to kriya Yoga.

No need of my trekking like Brunton, Lanza del Vasto, David O'Neele or Sir Arthur Avalon, - to name only a few seekers- the length and breadth of **Jambudwipa**. No torturing of mind and body, on climbing up and down the Vindhyas or Himalayas, visiting sadhus tucked away in ashrams today exposed in the dwindling forests of our god-forsaken towns and villages. During the morning kitchen classes, evening walks and starbound meditations, any remaining doubts on Tantra and as to how this great and formidable land of hoary Rshis was heading towards limbo and compounded misery, were easily cleared. The wisdom of our sages who declare that the true teacher descends on the student was proved beyond all doubt.

But remembering that one should always be on guard, aware of fakes and crafty pundits, in no hurry to blindly accept or admit without prior proof and adequate testing, I decided to keep a closer watch on my new friend's daily habits, his thoughts and ideas. Vivekananda himself has said that the master of Tantra and Yoga, Sri Ramakrishna: "always used to insist on my accepting every word of his only after clear comprehension of it. Walk on your path only, with what sound principle, clear reasoning and scripture all declare as true. Thus by constant reflection, the intellect will become clear, and then only can Brahman be reflected therein."[1]

---

f.n 1) : **Talks with Swami Vivekananda** Advaita Ashrama, 7th edition, Calcutta, 1993, p.89.

At 5 a.m The front door gate squeeks open and clangs shut. This tells me that the professor is out for his morning walk occasionally I get a glimpse of Jolly smile, when he rushes upstairs to make an urgent phone call before dashing off to catch the morning bus leading him to a P.G. Centre in Chennapattna, Bangalore Rural.

Back home in the evenings, our busy neighbour attends to relatives, friends, and ex-students who swarm to his door seeking guidance and free counselling. As per the strictest codes of traditional hospitality and reverence such pilgrims will be treated to a cool drink, or coffee, tea, fruits, etc., by Savitramma, the writer's wife.

If Sri Ganesha has decreed that the family ought to be given some respite from darshan seekers, and the professor provided a chance to polish some meditated sutra, he will be closeted in his **"sanctus-sanctorum,"** accompanied by a thousand and one books, files, papers and manuscripts stacked on all four quarters, distributed around his desk. Once or twice I was privileged to step into this literary workshop, the master's hideout, and thereupon it dawned on me that this affable and kindly neighbour was no common journalist nor wanton lecturer. Here was a cosmic traveller, a true treasure hunter! So, I humbly gathered the courage to enquire if any material, in English, which might enlighten me on his writings, could be provided. In answer, I obtained a time worn, yellowed copy of an article on the Professor's essay, **"Maruchintane"**. The critic's perceptive observations, serve our purpose today. Let me share some of his views with the kind reader:[2]

---

fn. 2): " Pfor. Nagarajappa's controversial book", by L.S. Seshagiri Rao; Literary Scene, Deccan Evening Herald, (Vol. III, No 228), Bangalore, October 1, 1985. p.3:

A controversial book has just appeared: prof. K.G. Nagarajappa's **"Maruchintane"** (Reconsideration) :

(. . .) The book has a collection of six essays. The last one, entitled **"Naamadhaari Lingaayatharu"** is also the longest, but it is exclusively sociolgical.....

. . . the essay fits into the pattern of the book because prof. Nagarajappa's approach to literature is that of a Sociologist. In every essay he is interested in what the literature of an era or school tells us about the economic and social pressures of the period and the reactions of the sects involved. He is interested in the flow of history and the forces at work in determing it.

This, in effect, means that the book studies literature as a source of information- information which it yields directly or by inference. Literary criteria is not indicated. In other words, if the essay concentrates on a particular **"Vachana"** or **"Keerthane"** or poem it is for its sociological importance and not its literary quality. Not that prof. Nagarajappa is not aware that literature has its own criteria; he is! but, in these essays at any rate, his interest is primarily that of the student of the evolution of society".

Mr L.S. Seshagiri Rao's observations, made in 1985, prove to us the consistency of prof. Nagarajappa's research. In this new book, under the heading: "Saahitya mattu samaajika niluvugalu" (*) we read; "....... to arrive at a coherent theory of literature we want, we must do what all other disciplines do: isolate our object, establish our subject matter, distinguish the study of literature from other related persuits.." and proceeds

---

* Ikkattu Bikkattu: (Ch.ll, p. 167)

to underline: "............Harry Levin's criticism rooted in Social History, develops general arguments out of an astonishing breadth of knowledge and treats literary works thematically within their socio-historical context..."

To this we may add that professor Nagarajajppa's observations evolve from an astounding trove of knowledge. Like gems, the quotes, are generously strewn around, thus providing the reader access to broaden the scope of his own vision and study. This proceedure is bound to met with the natural resistance of shabby professionals accustomed to hide the sources of information and try to pass on these ideas as personal property to their students. Such plagiarists also find good company in the midst of academics hanging on to fossilized thinking steeped in the feudal mentality of bygone ages. To such eunuchs and chauvinists who hold on to superstition, and remain tied to orthodox **" Brahminism,"** our scholar's work will always remain a challenge, a heresy, as do these words spoken a century ago by the Profet of Modern India: " The Brahmanas, in fact, gradually took to course of gross immorality and oppression. Through selfishness they introduced a large number of strange, non-Vedic, immoral and unreasonable doctrines - simply to keep intact their own prestige.(...)

" It is simply due to your having despised the masses of India that you have been now living a life of slavery for the last thousand years it is therefore that you are objects of hatred in the eyes of foreigners and are looked upon with indifference by your contrymen." [3]

---

fn.3: Ibid Ref. 1: " Talks with Swami Vivekananda" Advaita ashrama, Mayavati, Seventh Impression, 1993, p. 260

Nagarajappa's way of thinking is akin to those few women and men who stand on his own legs, having learnt to walk unfettered by chains, with opens eyes, able to see unhindered by traditional blinkers which are only fit for our jatka horses, plying their abject slavery on the roads and highways of modern India. The company he shares is with those possessed with open minds. This we can prove by sampling a few quotations gathered from an essay dated 1989:[4]

" In a historical sense, no orthodoxy is pure and in India this particularly is true. "[4a]

" They (Sudras) were the backbone of rural economy, and it was important to the state that they continue to function within the Economy"...[b]

"A Candala versed in the knowledge of the kaulika doctrine (Tantra Sastra) excells a Brahman and a Brahman who is wanting in this, is below even a Candala".[c]

"The culture of the intelligentia cannot and must not be antithetic to the culture of the people. Rather, it must be an offshoot of it, permanently drawing nourishment from it so as not to become barren. Having emerged from the people our intelligentia must learn how to return to the people and become their critical consciousness, a force working against humbug and deceit, living close to the masses, sharing their hopes and

---

fn.4: a: (Glen E Yocum)p. 39. K.G. Nagarajappa, " Bhakti Sahityadalli pratibhataneya manodharma", in: G.S. Shivarudrappa's anthology. " kannada Sahitya mattu pratibhatane." Ed. Karnataka Sahitya Akademy, nov. 1989;

(b) : Ib.4; (Patrick Olivelle) p.40

(c) Ib.4; (Mahanirvana Tantra) p.44

anxieties and giving them vent in political projects or expression in a doctrine of renewal ..." [d]

"In short, the culture of our intelligentia must cease to be the worship of knowledge as a means to power and possessions and must become the will power which the people have been waiting for to catalyse their aspirations and energies, in other words a mediatory force". [e]

" It is much more difficult to eliminate culture of poverty than poverty".[f] This terrible truth can be accertained by having a closer look at the trials and tribulations undergone in each and every nation in the huge central and South American continent. Most of these nations obtained their independence from Spain's colonial rule a century ahead of our own. The problems which are to be faced, remain however, surprisingly similar both in their degree and content: illiteracy, exploitation and violence.

As pointed out earlier, Nagarajapa the writer is a treasure seeker and finds pleasure in handing the hard sought gems over to the student and reader. Throughout mileniums, all orthodoxies have led to the slavery, pilferage, destruction and genocide of the same people they were supposed to educate and to protect. Not even a single continent on our mother earth has been spared this misery. All one has to do is read history. Nehru's World History will serve this purpose as well as well as Toynbee's or Durant's. He who does not conform to the rules and tyranny of the patrilineal order, based on **"macho"** hierarchy of the leader will always be stigmatized as a rebel, a mad or dangerous being fit to be crucified, stoned, burned at

---

(d) Ib.4; (Humayun Kabir) p. 74
(e) Ib.4; (Alphonse Que'num) p.105
(f) Ib.4; (Charles A. Valentine) p.107

the stake, tortured and dumped, to rot for life, in a dark dungeon.

We have been trained by the neo-colonial system of education to pride ourselves to be civilized by aping the west and have thus turned callous, blind, and hardhearted, exchanging the best of our local cultures and traditions for fancy blue, red and green credit-cards, for cheap plastic globalization. Let us not commit the folly of mistaking this, with **"universal thought,"** inner joy or unalterable happiness attained only through knowledge.

We have also made strides in the field of modern linguistics. The sudras, candalas and untouchables have been ascended to the status of scheduled castes, seheduled tribes, advasis, dalits, slum-dwellers, etc. **"Scheduled"**, with legal and official sanction as mere vote banks, merchandize to be bought, sold and exchanged together with their women and brood of children as bonded labour.

And who cares about the destitute widows and hapless children! You can see them by the dozen in stone quarries, dingy factories, in hotels and restaurants toiling for a morsel of food, clothed in miserable rags. Our well fed elite, VVIPs, brown sahibs and politicians dressed in **" foren"** suits, boots and ties, are a happy lot in the belief that our country folk can be entertained with high decibel speeches. The version of **"purushamedha"** in its new disguise has been created for our well-being.

"Purusamedha could be performed by any wealthy individual. The list of different classes of human victims to be offered in the purusamedha sacrifices, as we find in the

---

Scheduled : List of rates or prices ; tabulated list, etc.,

(Pocket oxford Dictionary)

Brahmana literature, proves that such victims could be bought or managed from the conquered and exploited peoples". [5a]

Thus our proud Maitreyis, Gargis, Draupadis and Damayantis, who once upon a time held high their dignity, both in knowledge and virtue alongside their men, thanks to our great shastric law giver and thanks again to his progeny, have been today reduced to the level of common chattel, to be bought and sold in the market. We may daily read in our twentieth century newspapers the advertisements where our yougsters duly classified by caste, sex and religion are marketed. If the family is unhappy with the newly aquired bargain, due to the lack of sufficient dowry, or any other failing, the wretched wife can be beaten up, poisoned or burnt to death; (a kitchen accident)! you read about this every day, in the very same newspaper.

Woman has long since been forgotten to be our main Deity, the companion soul to be worshipped with reverence, as the earthbound manifestation of Mother Shakti the consort of Maheshwara.

"Woman, verily, is a sacrificial fire, O! Gautama. The sexual organ in truth, is its fuel; the hairs, the smoke; the vulva, the flame, when one inserts the coals; the feeling of pleasure, the sparks...... In this oblation the Gods offer semen! From this oblation a peron arises" [b]

(...) " Ending gender inequality is the necessary move in the uneven division of labour and inequitable access to the means of economic independence. Social and economic

---

fn 5 (a) : (N.N. Bhattacharya): prof. K.G. Nagarajappa :
* Madhyakaaleena Sahityadalli Himseya Abhivyakti Svaroopa* in "Kannada Sahityadalli Himseya Svaroopa" Ed. Kannada Sahitya Academy, Bangalore, 1993. P. 62

Ib.5 (b): (Brihadharnyaka Upanishad: 6,2,13; Hume's Translation) p. 66

equality is fundamental if sexism, racism and class aggression must be transformed."[c]

"If Manu were read for practical guidance today, if were better for us that Manu had not been born" [d]

Manu starts with the fundamental principle that day and night women must be kept in dependence by the males of thier families. Her father protects her in youth, and her sons in old age a woman is never fit for independence. Narada justifies this on the ground that women, having no knowledge of **"Shastras,"** are unable to discern what is good and what is bad. Manu, however, goes one step further, and regards women, by nature, as of such depraved character that they are sure to go astray if they are not kept under rigid control. Verses 14 and 15 of ch. IX in Manusmiriti depict the licentious and grossly sensous character of women in general in such terms as connot be reproduced without violating decency and modesty.'

(...) It is well known how Christian monks gathered at the synod of Macon in 585 A.D. seriously discussed whether women were human being at all'. [6]

" Religion - said Bentham- did not meet the test of utility, on the contrary, it manifestly injures both society and individual. It injured by instilling in him fears of endless torment, depriving him of innocent pleasures and subjecting him to the will of capricious tyrants. It injured society by creating intolerance of unbelievers and heretics, impending intellectual progress, and giving powers to priests who convince with rules to plunder the community and maintain the social status quo. " (e)

Ib.5 (c): (Science and Hegemony of violence) P.141
Ib.5 (d): (Freedom and Culture, P. 39) P. 88

fn. 6: Great Women of India; PP. 18-22.
(e) Ib. 5: P. 139

Is there any way to help change all this misery which tends to pull us down into deeper violence day after day? will this pervading **"machista order"** and man-made curse lead to the annihilation of mankind? On such issues and on higher hopes and ideals we converse, exchanging thoughts as veteran optimists. These are the issues I am unfortunately unable to read in Kannada and hope someone will soon translate into English!

In the opening chapter of "**Ikkattu Bikkattu**" dedicated to Dr. Ambedkar and his message, one comes accross the following lines:

" Learn to live in this world with self respect. You should always cherish some ambition to do something in this world. They alone rise who strive. Some of you nurse the wrong notion that you will not rise in the world. But remember that the age of the helpless is ended. A new epoch has set in. All things are now possible because of your being able to participate in the politics and legislatures of this country".[7]

The words of all great modern poets, of all true lovers of humanity, of all noble planetary teachers, whitman or thoreau, Tagore or Jose Hernandez, the message is the same: " **Learn to live in this world with self-respect."**

In Pampa-desha, I was feeling depressed, downtrodden when the poet and **Gaucho, Musiquero** descended from the Quechva and Cholo Amerindian tribes in Dakshina America, the noble musician Don Anastasio Quiroga, said: "Rama, our grand parents used to say, my child, always remember that there is no love where there is no respect! There is no respect when you have lost self-respect!, And this you loose when you are unhappy!"

---

fn. 7 Ikkattu Bikkattu P.7 (Dhananjaya Keer q: Dr. Ambedkar):

Here was a true Brahmana who had never heared of our Vedas or shastras, but one who attended to his inner light and universal wisdom which shines in every being. Let me add that these our distant sisters and brothers, with whom I have had the privilege of sharing my years, adore their "pachamama* (Mother of Creation) and Virakocha (The Father Virakesh=Ishwara?). and never have I come across envy or hatred amongst these people who worship no idols.

To conclude, I shall borrow a few words from the late French critic, academic and poet Valery Larbaud, who in a letter adressed to the "controvertial" Argentine poet and novelist Ricardo Guiraldes has written: " .... you were a professional of literature if by that we are to assess a man who consecrates the best of his life, his spirit and effort to literary composition, but as you are fully aware, you are as yet an **amateur**, if by this we are to understand a man who writes for its own pleasure, because he loves this mode of intellectual activity" [8]. For I guess that professor Nagarajappa will always remain an **amateur**. He is in love with this ongoing process of Tantra, as one who observes, thinks and writes for its own pleasure'. He enjoys being as the **gauchos** call their unseen poets and wise men a '**tapao**' (enshrouded, hidden). This I adduce because the author of **"Ikkattu Bikkattu"** has sent the **Anugrah** to the very end of the presentation.

This **grace** I wish to **destapar** (uncover) earlier inviting the reader to approach the subject matter with both a rational mind and mystical respect. These two attitudes are not antithetical and should supplement each other. For is this not the very basis of Tantra and all other allied yogas? Watch, learn to observe this great miracle of life with **buddhi** for the great

---

fn. 8: alberto G. Lecot: " Ricardo Guiraldes", Ed. Rivolin, Buenos Aires, 1986. P. 141: (my Own Translation from spanish).

Yantra of Creation hides no secret to a man endowed with fiery Vairagya, and a tender heart.

Thou hast made us for thyself O God, and our hearts are restless till they rest in Thee....." **-St. Augusting**

"God gives the dervish love and love is woe. By dying near and dear Him they grow. The generous youth will freely yeild his life. The man of god cares naught for worldly show".

"We ought to get over amusing ourselves with such raptures for the sake of that better love, and to accomplish through loving service what men most need spiritually, socially and physically. As I have often said, if a person were in such a rapturous state as st. paul once entered, and he knew of a sick man who wanted a cup of soup, it would be far better to withdraw from the rapture for love's sake and serve him who is in need." **-Meister Eckhart**

Like wise, Romain Rolland the French Nobel Laureate has highlighted a great secret declared by Vivekananda while dealing with Karma Yoga. It is to be hoped the youger generations will try to remember this report: "The page is a striking one, not easily forgotten: " The greatest men in the world have passed away unknown. The Buddhas and the Christs that we know, are but second-rate heroes in comparison with the greatest men of whom the world knows nothing. Hundreds of these unknown heroes have lived in every country working silently. Silently they live and silently they pass away; and in time their thoughts find expression in Buddhas and Christs; and it is these latter that become known to us. The highest men do not seek to get any name or fame from their knowledge. They leave their ideas to the world; they put forth no claims for themselves and establish no schools or systems in their name. Their whole nature shrinks from sucha thing. They are pure Satvitvikas, who can never make any stir, but

only melt down in love'........" [9]

" The doctrine of Karma, as enunciated by the scriptures and the systems of caste determined by birth were far from conductive to the development of the individual and the lower class felt the oppressive yoke of the mental subjugation which was ever more terrible than Economic slavery. In this way Brahmanism strengthened the hands of the ruling power, which in turn, assumed responsibility for the welfare of the Brahmans and saw to it that nothing undermined the social standing of this class". [10]

If we wish to make a respectable place for ourselves in this world, we must do away with loads of superstitious nonsense from our body system and mental setup. We should do well to underline many of Mr. Nagarajappa's observations and learn that "Mysiticism does not stand apart from the lay world of duty, station, prudence, law and order, labour, etc. It is woven together into a whole **pattern** or **form of life** and the institution within which it flourishes help to give it its particular character".[11]

And thank you dear professor and Master weaver for just being here and writing with the conscience and heart of a youthfull **amateur"!** ♦

[ಸೂಚನೆ :ಶ್ರೀಮತಿ ಕೌಸಲ್ಯದೇವಿ ಮತ್ತು ಶ್ರೀ ಬಿ.ಆರ್. ಚನ್ನೇಗೌಡರ ಐವರು ಮಕ್ಕಳಲ್ಲಿ ಶ್ರೀ ಬಿ.ಸಿ. ರಾಮಚಂದ್ರಗೌಡ **1936**ರಲ್ಲಿ ಬೆಂಗಳೂರಿನಲ್ಲಿ ಹುಟ್ಟಿದರು. ದಂಪತಿಗಳಿಬ್ಬರೂ ಕನ್ನಡದಲ್ಲಿ ಅಂದಿನ ಜನಪ್ರಿಯ ಬರಹಗಾರರು. ಇಂದಿಗೂ ಚನ್ನೇಗೌಡರ 'ದಿನಚರಿ ಧ್ಯಾನ'

---

fn. 9: Romain Rolland: " The Life of Vivekannanda and the Universal Gospel". Advaita Ashrama, Mayavati, 1975. P. 202

10: "Ikkattu Bikkattu" (prof. G.B. Sardar), P. 128

fn: 11: Ikkattu Bikkattu; (Robert M. Gimello), P. 121

* " amateur"*: The wod is derived from Latin (amator). In French it also means: " Lover"

ಕನ್ನಡದಲ್ಲಿಯೇ ಒಂದು ಅಪರೂಪದ ವಿಶಿಷ್ಟ ಕೃತಿ. ಚನ್ನೇಗೌಡರ ಕುಟುಂಬಕ್ಕೆ ರಾಮಕೃಷ್ಣಾಶ್ರದಲ್ಲಿ ವಿದೇಶಿ ಮಹಿಳೆ ಅಡೆಲಿನ ಡೆಲ ಕರಿಲ ಪರಿಚಯವಾಗಿ, ಕ್ರಮೇಣ ಅವರೊಂದಿಗೆ ನಿಕಟ ಸಂಪರ್ಕ ಬೆಳೆಯಿತು. ಅಡೆಲಿನ ಭಾರತದಲ್ಲಿ ಎಲ್ಲರಿಗೂ 'ಮಮಿತ' ಎಂಬ ಹೆಸರಿನಿಂದಲೇ ಪರಿಚಿತರು. ಅಡೆಲಿನ ದಕ್ಷಿಣ ಅಮೆರಿಕಾದ ಅರ್ಜಂಟೈನಾದ ರಾಜಧಾನಿ ಬೋವನಿಸ್ ಐರ್ಸ್ (Buenes Aires) ದೇಶದ ಅತ್ಯಂತ ಶ್ರೀಮಂತ ಕುಟುಂಬಕ್ಕೆ ಸೇರಿದವರು. ಅಡೆಲಿನರ ಪತಿ ರಿಕಾರ್ಡೊ ಗಿರಾಲ್ಡಿಸ್ ದಕ್ಷಿಣ ಅಮೆರಿಕಾದ ಪ್ರತಿಭಾವಂತ ಹಾಗೂ ಪ್ರಭಾವ ಶಾಲಿ ಸೃಜನ ಶೀಲ ಬರಹಗಾರ. ಅವರ ಕವನಗಳಲ್ಲಿ ಪ್ರಕೃತಿ ಪ್ರೇಮ ಮತ್ತು ಅನುಭಾವ ಅಭಿವ್ಯಕ್ತವಾಗಿದೆ. ಅವರ ಪ್ರಸಿದ್ಧ ಕಾದಂಬರಿ 'ಡಾನ್ ಸೆಗುಂಡೊ ಸೊಂಬ್ರ' (Don Segundo Sombra) ಸುಮಾರು ಮೂವತ್ತು ಭಾಷೆಗಳಿಗೂ ಮೀರಿ ಅನುವಾದವಾಗಿದೆ. ಅಡೆಲಿನ ಭಾರತಕ್ಕೆ ಬರುವ ಮುನ್ನವೇ ಬೋವನಿಸ್ ಐರಿಸ್‌ನಲ್ಲಿ ಶ್ರೀರಾಮಕೃಷ್ಣ ಆಧ್ಯಾತ್ಮಿಕ ಕೇಂದ್ರ (Hogar espiritual Sri Ramakrishna) ಸ್ಥಾಪಿಸಿದ್ದರು. ಅವರೂ ಅನೇಕ ಭಾರತೀಯ ಕೃತಿಗಳನ್ನು ಸ್ಪಾನಿಷ್ ಭಾಷೆಗೆ ಅನುವಾದಿಸಿದ್ದಾರೆ.

ಗಿರಾಲ್ಡಿಸ್ ಸತ್ತ ಅನಂತರ ಅಡೆಲಿನ ಆಧ್ಯಾತ್ಮಿಕ ತೃಷೆಯಿಂದ, ನೆಮ್ಮದಿ ಅರಸುತ್ತ ಬಂದು ಬೆಂಗಳೂರಿನಲ್ಲಿ 1936ರಲ್ಲಿ ನೆಲಸಿದರು. ಬೆಂಗಳೂರಿನ ರಾಮಕೃಷ್ಣಾಶ್ರಮದಲ್ಲಿ ಆಧ್ಯಾತ್ಮ ಕಾರ್ಯಗಳಲ್ಲಿ ಅಡೆಲಿನ ಮತ್ತು ಶ್ರೀ ಕೌಸಲ್ಯದೇವಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಅಡೆಲಿನರಿಗೆ ಬಾಲಕ ರಾಮಚಂದ್ರನ ಮೇಲೆ ವಾತ್ಸಲ್ಯ ಉಂಟಾಯಿತು. ರಾಮಚಂದ್ರ ದಿನದ ಹೆಚ್ಚು ಕಾಲವನ್ನು ಅಡೆಲಿನ ಮನೆಯಲ್ಲಿಯೇ ಕಳೆಯುತ್ತ ಅವರ ಮುದ್ದಿನ ಮಗುವಾದ. 1951ರಲ್ಲಿ ಅಡೆಲಿನರಿಗೆ ತಾಯಿ ನಾಡನ್ನು ನೋಡಿ ಬರುವ ಮನಸ್ಸಾಗಿ, ಜೊತೆಯಲ್ಲಿ ಬಾಲಕ ರಾಮಚಂದ್ರನನ್ನೂ ಕರೆದುಕೊಂಡು ಹೋದರು. ಅನಿವಾರ್ಯ ಪರಿಸ್ಥಿತಿಯಿಂದ ಮತ್ತೆ ಅಡೆಲಿನ ಭಾರತಕ್ಕೆ ಹಿಂತಿರುಗಲಿಲ್ಲ. ಈಗಾಗಲೇ ಅವರ ಕರುಳ ಕುಡಿಯಂತಿದ್ದ ಬಾಲಕ ರಾಮಚಂದ್ರನೂ ತಾಯ್ನಾಡಿಗೆ ಹಿಂತಿರುಗಲು ಇಚ್ಛಿಸಲಿಲ್ಲ. ಅಡೆಲಿನ ರಾಮಚಂದ್ರನ ಸಾಕು ತಾಯಾದರು.

ಬೋವನಿಸ್ ಐರ್ಸ್‌ನಲ್ಲಿ ನೆಲೆನಿಂತ ರಾಮಚಂದ್ರ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಬಾಹ್ಯ ವಿದ್ಯಾರ್ಥಿಯಾಗಿ ಶಿಕ್ಷಣ ಮುಗಿಸಿ, ಇಂಗ್ಲೀಷು ಭಾಷೆಯನ್ನು ಕಲಿಸುವ ವೃತ್ತಿ ಹಿಡಿದರು. ಅಲ್ಲಿಯೇ ಅನ ಮರಿಯ ಅವರನ್ನು ಮದುವೆಯಾಗಿ ತುಂಬು ಕುಟುಂಬಸ್ಥರಾದರು ಅಮರ ಶಾಂತಿ, ಜಾನ್ ಹರಿದಾಸ್, ರಿಕಾರ್ಡೊ ರಾಮಲಾಲ್, ಮರಿಯ ಕೌಶಲ್ಯ ಮತ್ತು ಮಾರ್ಕೊಸ್ ಕೃಷ್ಣ ಅವರ ಮಕ್ಕಳು. ರಾಮಚಂದ್ರ ಕ್ರಮೇಣ ಪ್ರಾಧ್ಯಾಪಕ ವೃತ್ತಿ ತೊರೆದು, 'ಪರ್ಮನೆಂಟ್ ಎಜುಕೇಷನ್' ಅಂದರೆ ಇಂಗ್ಲೀಷ್ ಭಾಷೆಯನ್ನು ಆಧುನಿಕ ತಂತ್ರ ಜ್ಞಾನ ಮತ್ತು ಅತ್ಯಾಧುನಿಕ ಯಂತ್ರ ಸಲಕರಣೆಯಿಂದ ಸ್ವಯಂ ಕಲಿಕೆಯ ಯೋಜನೆಯ ಮಾರ್ಗದರ್ಶಕರಾದರು. ಅರ್ಜಂಟೈನಾದಲ್ಲಿ ರಾಮಚಂದ್ರ ಪ್ರೊ|| ಗೌಡ ಎಂದೇ ಚಿರ ಪರಿಚಿತರು. ಅಡೆಲಿನ ತೀರಿಕೊಂಡ ಮೇಲೆ ಗಿರಾಲ್ಡಿಸ್ ಮತ್ತು ಅಡೆಲಿನ ಸ್ಪಾನಿಷ್ ಭಾಷೆಯಲ್ಲಿ ಬಿಟ್ಟು ಹೋಗಿರುವ ಅಪಾರ ಜ್ಞಾನ ಸಂಪತ್ತನ್ನು ರಕ್ಷಿಸುವುದು ತಮ್ಮ ಮೊದಲ ಕರ್ತವ್ಯ ಎಂದು ಭಾವಿಸಿ, ಸುಮಾರು ಮೂವತ್ತು ವರ್ಷಗಳಿಂದ ಅವರ ಕೃತಿಗಳ ಸಂಗ್ರಹ, ಸಂಪಾದನೆ, ಪ್ರಕಟಣೆ ಮತ್ತು ಪ್ರಚಾರ ಕಾರ್ಯದಲ್ಲಿ ಪ್ರೊ|| ಗೌಡ ತೊಡಗಿದ್ದಾರೆ. ಈಗಾಗಲೇ ಸುಮಾರು ಇಪ್ಪತ್ತಕ್ಕೂ ಮೀರಿ ಕೃತಿಗಳನ್ನು ಸ್ಪಾನಿಷ್ ಭಾಷೆಯಲ್ಲಿ ಪ್ರಕಟಿಸಿದ್ದಾರೆ. ಗಿರಾಲ್ಡಿಸ್ ಅವರ ವಿಚಾರ ಪ್ರಚೋದಕ ಮಾನವೀಯ ಚಿಂತನೆಗಳನ್ನು ದಕ್ಷಿಣ ಅಮೆರಿಕಾದ ಸಾಮಾನ್ಯ ಜನರಿಗೂ ಮುಟ್ಟಿಸುವ ಸಲುವಾಗಿ ಪ್ರಚಾರ ಪ್ರವಾಸ ಮಾಡುತ್ತಿದ್ದಾರೆ. ಸ್ಪಾನಿಷ್ ಮತ್ತು ಇಂಗ್ಲೀಷ್ ಭಾಷೆಯ ಮೇಲೆ ಹಿಡಿತ ಸಾಧಿಸಿರುವ ಪ್ರೊ|| ಗೌಡರಿಗೆ ಮಾತೃಭಾಷೆ ಕನ್ನಡವನ್ನು ಓದಲು ಮತ್ತು ಬರೆಯಲು ಬರುವುದಿಲ್ಲ. ಅರ್ಜಂಟೈನಾದ ಜನರಿಗೆ ಅವರ ಸಾಂಸ್ಕೃತಿಕ ಸಂಪತ್ತಿನ ಬಗ್ಗೆ ಕಣ್ಣು ತೆರೆಸಿ, ಜಾಗ್ರತರನ್ನಾಗಿಸುವ ಕಾರ್ಯನಿರತರಾಗಿದ್ದಾರೆ. ಪ್ರೊ|| ಬಿ.ಸಿ. ರಾಮಚಂದ್ರ ಗೌಡರು ಭಾರತ ಸಂಸ್ಕೃತಿಯ ಅನಧಿಕೃತ ರಾಯಭಾರಿಯೇ ಆಗಿದ್ದಾರೆ.

ಬೆಂಗಳೂರಿಗೆ ಬಂದು ಪರಿಚಯವಾದ ಅಲ್ಪ ಸಮಯದಲ್ಲಿಯೇ ನಾಗರಾಜಪ್ಪನವರ ಬದುಕನ್ನು ಕಂಡು, ಅವರ ಬರಹದ ಇಂಗ್ಲೀಷ್ ಉದ್ಧರಹಣೆಗಳಿಂದಲೇ, ಅವರ ಸಮಗ್ರ ವ್ಯಕ್ತಿತ್ವದ ಚಿತ್ರವನ್ನು ಈ ಲೇಖನದಲ್ಲಿ ಕಟ್ಟಿಕೊಟ್ಟಿದ್ದಾರೆ. -ಸಂಪಾದಕ]

ಭಾಗ-II
ಬರಹ

1. ಪ್ರೊ॥ ಕೆ.ಜಿ. ನಾಗರಾಜಪ್ಪನವರ ಪದ್ಯಗಳು

ಪ್ರೊ॥ ಎಚ್. ಜಿ. ಸಣ್ಣಗುಡ್ಡಯ್ಯ

ಪ್ರೊ॥ ಕೆ.ಜಿ. ನಾಗರಾಜಪ್ಪನವರ ಸನ್ಮಾನದ ಅಂಗವಾಗಿ ಒಂದು ಪುಸ್ತಕವನ್ನು ತರುತ್ತೇವೆ, ಲೇಖನ ಬರೆದುಕೊಡಿ ಎಂದು ಗುಬ್ಬಿ ತಾಲ್ಲೂಕಿನ ಸ್ನೇಹಿತರುಗಳು ಕೇಳಿದಾಗ ನನಗೆ ಬಹಳ ಹಿಂದೆ ಓದಿದ್ದ ನಾಗರಾಜಪ್ಪನವರ ಪದ್ಯಗಳು ಕೆಲವು ನೆನಪಾದವು. ಕೆಲವು ಲೇಖನಗಳನ್ನು ಬಿಟ್ಟರೆ ಅವರ ಗದ್ಯವನ್ನೆಲ್ಲ ನಾನು ಓದಿರಲಿಲ್ಲ. ಈಗ ಗದ್ಯಕೃತಿಗಳನ್ನು ಹುಡುಕಿ ಹೊಸದಾಗಿ ಓದಿ ಲೇಖನ ಬರೆಯುವುದಕ್ಕಿಂತ ಅವರ ಪದ್ಯಗಳ ಬಗ್ಗೆ ಏನಾದರೂ ಬರೆಯುವುದು ಸುಲಭವಾದೀತು ಎಂಬ ಸೌಲಭ್ಯಾಕಾಂಕ್ಷೆಯು ಇದಕ್ಕೆ ಕಾರಣವಿರಬಹುದು.

ಅವರ ಪದ್ಯಗಳು ನೆನಪಿಗೆ ಬಂದರೂ ಅವುಗಳನ್ನು ಪ್ರಕಟಿತ ಸಂಕಲನದಲ್ಲಿ ಓದಿದ್ದೇನೇ ಅಥವಾ ಬಿಡಿಯಾಗಿ ಪತ್ರಿಕೆಗಳಲ್ಲಿ ಓದಿ ಕವಿಗೋಷ್ಠಿಗಳಲ್ಲಿ ಕೇಳಿ ನೆನಪಿನಲ್ಲಿ ಉಳಿದಿವೆಯೇ ಎಂಬುದು ಕೂಡ ನನಗೆ ಮರೆತು ಹೋಗಿತ್ತು. ನನ್ನ ಈ ಕಷ್ಟವನ್ನು ತಿಳಿದ ಗುಬ್ಬಿ ತಾಲ್ಲೂಕಿನ ಗೆಳೆಯರು ಪ್ರೊ॥ ಕೆ.ಜಿ.ಎನ್ ಅವರನ್ನು ಸಂಪರ್ಕಿಸಿ ಅವರ ಎಲ್ಲ ಪ್ರಕಟಿತ ಕವನಗಳ ಪ್ರತಿಗಳನ್ನು ಒದಗಿಸಿ ಕೊಟ್ಟದ್ದರಿಂದ ಇನ್ನೊಂದು ಸಲ ಪದ್ಯಗಳನ್ನು ಓದುವ ಅವಕಾಶ ಸಿಕ್ಕಿತು. ಓದಿದ ನಂತರ ಪದ್ಯಗಳ ಬಗೆಗೆ ಹೇಳಬೇಕೆನಿಸಿದ ಕೆಲವು ಮಾತುಗಳನ್ನು ಈ ಚಿಕ್ಕ ಲೇಖನದಲ್ಲಿ ಹೇಳಲು ಪ್ರಯತ್ನಿಸಿದ್ದೇನೆ.

ಕೆ.ಜಿ.ಎನ್. ಅವರ ಪದ್ಯಗಳು ನೆನಪಿನಲ್ಲಿ ಉಳಿಯುವುದು ಅವುಗಳ ಆಕರ್ಷಕ ಶೀರ್ಷಿಕೆಗಳ ಮೂಲಕ. 'ಖಾಲಿ ಬೋರ್ಡು', 'ಅನ್ನ ಕುರುಕ್ಷೇತ್ರ', 'ಇದು ಪುರುಷಾವತಾರ', 'ಧರ್ಮಾ ಮೀಟರು', 'ಬೂಟು ಲಿಕ್ಕರಿಗ', 'ಓ ಸ್ತುತಿ ಪಾಠಕ ಶುಕವೇ', 'ನಿಷ್ಠೆಯ ನೀರ್ಗಂಟೆ', 'ಗ್ರಾಮಸಿಂಹ' ಮುಂತಾದ ಕೆಲವು ಹೆಸರುಗಳು ಪದ್ಯಗಳನ್ನು ಓದಿದ ಬಹಳ ದಿನ ನೆನಪಿನಲ್ಲಿ ಉಳಿಯುತ್ತವೆ. ಪದ್ಯಗಳ ಹೆಸರುಗಳು ಅವುಗಳಲ್ಲಿರುವ ವಸ್ತುವಿಗೆ ಕನ್ನಡಿಯಾಗುತ್ತವೆ. ಬಹುತೇಕ ಪದ್ಯಗಳ ವಸ್ತು ಸಾಮಾಜಿಕ ವಿಡಂಬನೆ ಎಂಬುದನ್ನು ಮರೆಮಾಚುವುದು ಸಾಧ್ಯವಿಲ್ಲ.

ಇಂಥ ಹತ್ತೊಂಬತ್ತು ಪದ್ಯಗಳು ನನಗೆ ಲಭ್ಯವಾದುವು. ಸುಮಾರು ೧೯೬೮ ರಿಂದ ೧೯೭೧ರವರೆಗೆ-ಹದಿಮೂರು ವರ್ಷಗಳ ಅವಧಿಯಲ್ಲಿ ಬರೆದ ಪದ್ಯಗಳು ಇವು. ೭೧ ರ ನಂತರ ಬರೆದ ಯಾವ ಪದ್ಯವೂ ಇದ್ದಂತೆ ಕಾಣಲಿಲ್ಲ. ಬಹುಶಃ ೭೦ ರ ದಶಕದಿಂದ ಮುಂದಕ್ಕೆ ಅವರು ಹೆಚ್ಚು ಗದ್ಯವನ್ನು ಬರೆದಂತೆ ಕಾಣುತ್ತದೆ. 'ಮರುಚಿಂತನೆ' ಎಂಬ ಅವರ ಬಹಳ ಆಸಕ್ತಿಯಿಂದ ಚರ್ಚಿತವಾದ ಲೇಖನಗಳ ಸಂಕಲನ ಪ್ರಕಟವಾದದ್ದು ಈ ಅವಧಿಯಲ್ಲಿ.

'ಹದಗೊಳಿಸು' ಎಂಬ ಅವರ ಮೊದಲ ಪದ್ಯದಲ್ಲೇ **'ಕುರಿ ಮಂದೆ ಸಾಗುತಿದೆ। ಕುರುಚು ಗಿಡ ಸ್ವಾಗತಿಸುತಿದೆ'** ಎಂಬ ಅರ್ಥ ಪೂರ್ಣ ಮಾತುಗಳ ಚಿತ್ರ ಎದುರಾಗುತ್ತದೆ.

ಅದೇ ಪದ್ಯದಲ್ಲಿ '**ಬುದ್ಧ ರಾಮಕೃಷ್ಣ ಬಸವ ಗಾಂಧಿ। ಎಲ್ಲರೂ ಒಂದು ಸೀಸೆ ಬ್ರಾಂದಿ**' ಎಂಬ ಸಾಲುಗಳು ಸಿಗುತ್ತವೆ. ಪದ್ಯದ ವಸ್ತು ಕಾವಿ, ಖಾಕಿ, ಖಾದಿಗಳನ್ನು ವಶೀಕರಿಸಿಕೊಂಡು ಬಡ್ಡಿಗೆ ಬಡ್ಡಿ, ಚಕ್ರಬಡ್ಡಿಯ ವ್ಯವಹಾರದಲ್ಲಿ ಹಣ ಮಾಡುವವನೊಬ್ಬನ ಚಿತ್ರ. ಎರಡನೆಯ "ಖಾಲಿ ಬೋರ್ಡು" ಎಂಬ ಪದ್ಯ ಒಬ್ಬ ವಿಧವೆಯ ಚಿತ್ರವಾಗಿ ಕಾಣುತ್ತದೆ. ನನಗೆ ಹೊಳೆದ ಈ ಅರ್ಥ ನಿಜವಾದಲ್ಲಿ ಭಗ್ನವಾದ ಬದುಕಿನ ವಿಧವೆಗೆ ಒಡ್ಡಿದ ಈ ಸಂಕೇತ ಅಥವಾ ಚಿತ್ರ ಅತ್ಯಂತ ಶಕ್ತಿಶಾಲಿಯಾದದ್ದು. ಅವಳ ನಿತ್ಯದ ಬದುಕಿನ ನೀರಸತೆಯನ್ನು ವರ್ಣಿಸುವ '**ಸಡಗೆ। ಗಂಟೆ ಬಡಿದುಕೊಂಡು ಓಡಾಡುವ ಆಂಬುಲೆನ್ಸ್..............ಎದೆ। ಪ್ರಪಂಚದಲ್ಲೆ ಅತಿದೊಡ್ಡ ಮೃಗಾಲಯ............ಹಡೆದ ಮನೆಗೆ। ಮೂಡಣ ದಿಕ್ಕಿನಲಿ ಮೂಡಿ ಬರುವ ಧೂಮಕೇತು**' ಇತ್ಯಾದಿ ಸಾಲುಗಳಲ್ಲಿ ವರ್ಣಿಸಿದೆ. ಇದೊಂದು ವಾಸ್ತವ ಚಿತ್ರ. ಅವಳನ್ನು ಕುರಿತಾಗಲಿ, ಭಾರತಕ್ಕೆ ವಿಶಿಷ್ಟವಾದ ವೈಧವ್ಯದ ಸಮಸ್ಯೆಯನ್ನು ಕುರಿತಾಗಲಿ ಈ ಕವಿ ಏನೂ ವ್ಯಾಖ್ಯಾನ ಅಥವಾ ಜಿಜ್ಞಾಸೆಯ ಗೋಜಿಗೆ ಹೋಗಿಲ್ಲ. ಸ್ಥಗಿತಗೊಂಡ ನಮ್ಮ ಸಾಮಾಜಿಕ ಪರಿಸ್ಥಿತಿಯ ಒಂದು ವಾಸ್ತವ ಚಿತ್ರವನ್ನು ಒಂದು ವರ್ಣಚಿತ್ರದಲ್ಲೆಂಬಂತೆ ಪಡಿಮೂಡಿಸಿದೆ. ಪದ್ಯದ ಕಡೆಯ ಸಾಲು ಈ ಚಿತ್ರಕ್ಕೆ ಶಿಖರವಿಟ್ಟಂತೆ 'ಬೆಂಕಿ ಬಿದ್ದು ದಗ್ಧಗೊಂಡು ಅಳಿಮುಳಿದ ಸೇತುವೆ' ಎಂಬ ಇನ್ನೊಂದು ಪ್ರಖರವಾದ ಚಿತ್ರವನ್ನು ಕೊಟ್ಟು ಮುಗಿಸಿದೆ. ವಿಧವೆಯ ಈ ರೇಖಾಚಿತ್ರ ಮುಂದಕ್ಕೇನನ್ನೂ ನಿರ್ದೇಶನ ಮಾಡದೆ ಕೇವಲ ಹೆಣ್ಣಿನ ಒಂದು ಅನಾಥ ಸ್ಥಿತಿಯನ್ನು ಚಿತ್ರಿಸುವುದರಲ್ಲೇ ತೃಪ್ತವಾಯಿತೆ ಎಂಬ ಅತೃಪ್ತಿಯನ್ನು ತರಬಹುದು. ಆದರೆ ನಮ್ಮ ಸಮಾಜದ ಇತಿಹಾಸದಲ್ಲಿ ಈ ಅನಾಥಸ್ಥಿತಿಯನ್ನು ಮುರಿದು ಕೆಡಹಿ ತಾನು ಮಾಡಿದ ತ್ಯಾಗದಿಂದ ಸುತ್ತಿನವರ, ವಿಶೇಷವಾಗಿ ಸ್ತ್ರೀ ಸಮುದಾಯದ, ಬಾಳಿಗೆ ಬೆಳಕಾದ ಚೇತನಗಳ ಅನೇಕ ನಿದರ್ಶನಗಳಿವೆ. ಅಂಥ ವೀರವನಿತೆಯಾಗುವುದಕ್ಕೆ ಎಲ್ಲರಿಗೂ ಸಾಧ್ಯವಾಗದಿರಬಹುದು. ಅದಕ್ಕೂ ಉದಾರ ಹೃದಯಿಗಳ ಪ್ರೋತ್ಸಾಹ, ಬೆಂಬಲ ಬೇಕಾಗುತ್ತದೆ. ಈ ಒಂದು ವಿಕಸನ ಸಾಹಸ ನಿಷಿದ್ಧವಲ್ಲವಾದರೂ ಅಂತಹ ದಿಟ್ಟ ಹೆಜ್ಜೆಯನ್ನು ಇಡುವ ಮೊದಲು ಅವಳೆದುರಿನ ಪರಿಸ್ಥಿತಿ ಕೇವಲ ಒಂದು ಖಾಲಿ ಬೋರ್ಡೇ ಅಲ್ಲವೆ? ಆ ಬೋರ್ಡಿನ ಮೇಲೆ ಬೆಲೆಯುಳ್ಳ ಏನನ್ನಾದರೂ ಬರೆದು ತುಂಬುವ ಛಾತಿ ಆ ವಿಧವೆಗೆ ಇದೆಯೇ? ಈ ಸವಾಲಿಗೆ ಕೂಡ ಖಾಲಿ ಬೋರ್ಡು ಎಂಬ ಚಿತ್ರ ಅತ್ಯಂತ ಸಮರ್ಥ.

ಇಲ್ಲಿನ ಕೆಲವು ಪ್ರಮುಖವಾದ ಪದ್ಯಗಳು ಡಾಂಭಿಕತೆಯನ್ನು ಖಂಡಿಸುವುದಕ್ಕೆ, ಅಸಹಜ ವೈರಾಗ್ಯವನ್ನು ಅವಹೇಳನ ಮಾಡುವುದಕ್ಕೆ ಮೀಸಲಾಗಿವೆ. ಇಂತಹ ವಿರಕ್ತರಿಗೆ ಆಶ್ರಯವಾಗಿ ಕೆಲಸಮಾಡುವ ಮಠಗಳ ಚಿತ್ರಣ ಈ ಪದ್ಯಗಳಿಗೆ ಹಿನ್ನೆಲೆಯಾಗಿ ಬರುತ್ತದೆ. ಶ್ರೀ ಕೆ.ಜಿ.ಎಸ್. ಅವರಿಗೆ ಮಠಗಳ ಬದುಕು, ಅಲ್ಲಿನ ಪರಿಸರ, ಅಲ್ಲಿ ಆಶ್ರಯ ಪಡೆಯುವ ಜನರ ಚಾರಿತ್ರ್ಯಗಳ ಪರಿಚಯ ನಿಕಟವಾಗಿ ಇದ್ದಿರಬಹುದಾದ ಸಾಧ್ಯತೆಗಳು ಈ ಪದ್ಯಗಳಿಂದ ಕಂಡು ಬರುತ್ತವೆ. 'ಕಾಸಿಲ್ಲದೆಯೂ ದಕ್ಕೀತು', 'ಧರ್ಮಾ ಮೀಟರು', 'ಸಮಯಾಚಾರ', 'ಓ ಸ್ತುತಿಪಾತಕ ಶುಕವೇ', 'ಕಲ್ಲರಳಿ ಹೂವಾಯ್ತು' ಮುಂತಾದ ಪದ್ಯಗಳು ಈ ಬಗೆಯವು. ಮಠಗಳನ್ನು ಮರೆಹೋಗುವ ಕಪಟಗಳನ್ನು ಮೂದಲಿಸುತ್ತ

'ರಕ್ತದ ಸೋನೆಗೆ ಬಿಚ್ಚಿ ಧರ್ಮದ ಕೊಡೆ
....
ನಂಬಿದವಗೆ ಹಾಕಿ ಬೆನ್ನಿಗೆ ಚೂರಿ
ಸತ್ತವನ ಕೈಲಿಸಿರಿ ನೆತ್ತರಿನ ಕತ್ತಿಯನು
ಜಪದ ಮಾಲೆ ಹಿಡಿದು ಮಂತ್ರ ಪಠಿಸು'

ಎಂದು ಹೇಳುವ ಕವಿ

'ಸದಾ ಎದೆಯ ಮೇಲಿರಲಿ ಮಠದ ಬ್ಯಾಡ್ಜು
ಇದು ನಿನ್ನ ಬದುಕನು ದಾಟಿಸುವ ಬ್ರಿಡ್ಜು'

ಎಂದು ಅವನಿಗೆ ಯಶಸ್ಸಿನ ಗುಟ್ಟನ್ನು ಹೇಳಿ ಕೊಡುತ್ತಾನೆ.

'ಕಲ್ಲರಳಿ ಹೂವಾಯ್ತು' ಎಂಬ ಒಂದು ಪದ್ಯದಲ್ಲಿ ಹಣ ಮಾಡುವ ಕಸುಬಿನಲ್ಲಿ ಪರಿಣತನಾದ ಒಬ್ಬ ಇಸಮು ಸ್ವಚ್ಛಂದ ಜೀವನದ ನಂತರ ಬದುಕಿನಲ್ಲಿ ಜಿಹಾಸೆ ಬೆಳೆದು ತಾನು ದುಡಿದ ಸಂಪತ್ತನ್ನೆಲ್ಲ ಮಠವೊಂದಕ್ಕೆ ದಾನವಾಗಿ ಕೊಟ್ಟು ಶರಣಾಗತಿಯ ಮಾರ್ಗವನ್ನು ಆಯ್ದುಕೊಂಡುದರ ವಿವರಗಳಿವೆ. 'ಕಣ್ತಪ್ಪಿಸುವ ಕಲೆಗೆ ಸಾಕೆ ಕಲ್ಲಾಗಿ' ಬದುಕಿದವನು ಅವನು. ಶೀಲಕ್ಕೆ ಶೂಲವಾಗಿ ಕಂಡ ಕಂಡ ಮನೆಯ ಚಿಲಕವಲ್ಲಾಡಿಸಿ 'ಮಾನ ಮರ್ಯಾದೆಗಳಿಗೆ ಕಂಟಕವಾಗಿ' ಬೆಳೆದ ಅವನಿಗೆ ಸಂಪತ್ತು ಒದ್ದರೂ ಬಿಡದೆ ಕಾಲಿಗೆ ಬಿದ್ದು ವೃದ್ಧಿ ಹೊಂದಿತು. ಬಹುಶಃ ಅವನ ಸ್ವಚ್ಛಂದ ನಡತೆಯ ಫಲವಾಗಿ ಸಂತಾನಶಕ್ತಿ ಸತ್ತು ತಾನು ಗಳಿಸಿದ ಸಂಪತ್ತಿಗೆ ಉತ್ತರಾಧಿಕಾರಿಗಳಿಲ್ಲ ಎಂಬಂತಾದಾಗ ಅವನಲ್ಲಿ ಒಂದು ಬಗೆಯ ವಿರಕ್ತಿ ಮೂಡಿದ್ದರ ಸಂಕ್ಷಿಪ್ತವಾದ ವಿವರಗಳು ಇದರಲ್ಲಿ ಬರುತ್ತವೆ.

'ಅನ್ನ ಕುರುಕ್ಷೇತ್ರ' ಎಂಬ ಪದ್ಯದಲ್ಲಿ ಭ್ರಷ್ಟಾಚಾರದ ಪೌರೋಹಿತ್ಯದಲ್ಲಿ ಮಾನವೀಯತೆಯ ಪಶುವನ್ನು ಬಲಿಗೊಟ್ಟು ನೆರವೇರಿಸುವ ಯೋಜನೆಗಳ ಪ್ರಗತಿ ಯಜ್ಞದ ವರ್ಣನೆಯಿದೆ. ಈ ಪದ್ಯ ಮತ್ತು 'ಮೆರವಣಿಗೆ' ಎಂಬ ಇನ್ನೊಂದು ಪದ್ಯ ನಮಗೆ ನಿತ್ಯ ಎದುರಾಗಬಹುದಾದ ಬಡವರ ಬದುಕಿನ ಭೀಕರ ದೃಶ್ಯಗಳ ಕೆಲವು ಚಿತ್ರಗಳನ್ನು ತರುತ್ತವೆ. ಸಿರಿವಂತರ ಮನೆಯ ಮದುವೆಯ ಮೆರವಣಿಗೆ, ಅದರ ಹಿಂದೆಯೇ ನೋಡಬೇಕಾಗಿ ಬಂದ ಒಂದು ಅಂತಿಮ ಯಾತ್ರೆ ಇವುಗಳ ನಡುವೆ ಬೀದಿಯಲ್ಲಿ ಕಂಡ ವೈಪರೀತ್ಯದ ಚಿತ್ರಗಳು ಮೆರವಣಿಗೆಯಲ್ಲಿ ಬರುತ್ತವೆ. ಸತ್ತವನ ಸತದೃಷ್ಟ ಹೆಂಡತಿ ಅತ್ತು ಅತ್ತು ನಿತ್ರಾಣವಾಗಿ ಕುಳಿತಿದ್ದಾಳೆ. ಅವಳನ್ನು ಆಶ್ರಯಿಸಿ ತೊಡೆಯ ಮೇಲೆ ಹರಿದಾಡುತ್ತಿರುವ ಒಂದು ಮಗುವಿನ ಚಿತ್ರದಲ್ಲಿ ಬರುವ ಸಾಲುಗಳು ಇವು:

'ಮೌನದ ಕೋಳಿ ಗದ್ದಲದ ಗೆದ್ದಲನು ಮೇಯುತಿದೆ
ಪಿಳ್ಳೆಗಳು ಬಾಳಿನ ಕಸದ ಗುಡ್ಡೆಯ ಕೆದರುತಿವೆ
ಸುತ್ತಿ ಸುತ್ತಿ ಬರುತಿದೆ ಲಗಡ (ಲಗಡ=ಗಿಡುಗ)

ಮುಗಿಲ ಮುಖ ಮೈಯಿಳಿದು ಬಿಳಿಚಿಕೊಂಡಿದೆ
ಇರುಳ ಗರಗಸ ಬಾನ ಬೆಳಕಿನ ದಿಮ್ಮಿಯನು ತುಂಡು ತುಂಡು ಮಾಡುತಿದೆ.

ಇವು ಉತ್ಕೃಷ್ಟವಾದ ಕವಿತೆಯ ಸಾಲುಗಳಾಗಿದ್ದು ಮತ್ತೆ ಮತ್ತೆ ಪರಿಭಾವಿಸುವಂತೆ ಮಾಡಿ ನಮ್ಮನ್ನು ಕಾಡುತ್ತವೆ.

'ಕ್ರಾಂತಿಯ ಸೀಲು' ಎಂಬ ಒಂದು ಪದ್ಯದಲ್ಲಿ ವ್ಯಕ್ತಿಯೊಬ್ಬ ತನ್ನ ಹಳೆಯ ನಿಷ್ಠೆಯನ್ನು ಬದಲಾಯಿಸಿ ಹೊಸ ಮೌಲ್ಯಗಳು, ಹೊಸ ಯುಗದ ನಿರೀಕ್ಷೆಗಳ ಕಡೆ ದೃಷ್ಟಿಯನ್ನು ಕೇಂದ್ರೀಕರಿಸುವ ಚಿತ್ರ ಬರುತ್ತದೆ. ಈ ನಿಷ್ಠೆಯ ವರ್ಗಾವಣೆ ಈ ಸಾಲುಗಳಲ್ಲಿ ವ್ಯಕ್ತವಾಗುತ್ತದೆ:

'ಒಂದೊ ನೀನು ಹಾಕಿದೊಂದು ತುತ್ತಿಗೆ
ಇದೀ ಬದುಕ ನಿನಗೆ ಬರೆಯಬೇಕೆ
ಹೆಜ್ಜೆ ಹೆಜ್ಜೆಗೂ ಅಂಜಿ ನಡೆಯಬೇಕೆ
ಕಳ್ಳನಂತೆ ಕದ್ದ ಬದುಕ ನಡೆಸಬೇಕೆ'

ಹಳೆಯ ನಿಷ್ಠೆಯನ್ನು ಬದಲಾಯಿಸಲೊಲ್ಲದವರ ಮಾತುಗಳಿಗೆ ಈತನ ಪ್ರತಿಕ್ರಿಯೆ 'ನಿನ್ನ ನಂಬಿ ಬದುಕಿದವೆಂಬರ ನುಡಿ। ಬಡವರೆದೆಯನು ಹೀರಿ ಕಟ್ಟಿದ ಗುಡಿ' ಎಂಬ ಸಾಲುಗಳಲ್ಲಿ ಮೂಡಿದೆ. ಹಳೆಯ ಯಜಮಾನನಿಗೆ ಕವಿ ನಿಷ್ಠುರವಾಗಿ ಹೇಳುತ್ತಾನೆ:

'ನಡೆಯದಣ್ಣ ಇನ್ನು ನಿನ್ನ ರಾಜಾ ಪಾರ್ಟಿ
ಕ್ರಾಂತಿಯ ಸೀಲು ಸಿದ್ಧವಾಗುತ್ತಲಿದೆ'.

ಎರಡು ಮೂರು ಪದ್ಯಗಳಲ್ಲಿ ತೀವ್ರವಾದ ಕಟಕಿ ಮತ್ತು ಮೂದಲಿಕೆಯ ಭಾಷೆ ಪ್ರಯೋಗವಾಗಿದೆ. 'ಇದು ಪುರುಷಾವತಾರ', 'ಮಹಾಸತಿ', 'ಬೂಟಲಿಕ್ಕರಿಗ', 'ನಿಷ್ಠೆಯ ಸೀರ್ಗಂಟ್' ಮೊದಲಾದ ಪದ್ಯಗಳು ಈ ಬಗೆಯವು. ಈ ಪದ್ಯಗಳಲ್ಲಿ ಬರುವ ಕೆಲವು ಸಾಲುಗಳು ಕೆ.ಜಿ.ಎನ್. ಅವರು ಎಂಥ ಖಾರವಾದ ಭಾಷೆಯನ್ನು ಬಳಸಬಲ್ಲರು ಎಂಬುದಕ್ಕೆ ಉದಾಹರಣೆಯಾಗುತ್ತವೆ.

'ಇವನ ಅಂತರಂಗವೊ
ಟಾರು ರಸ್ತೆಯ ನಡುವೆ ಒಡೆದ ಸೆಪ್ಟಿಕ್ ಪೈಪು'
(ಇದು ಪುರುಷಾವತಾರ)

'ಸಾರ್ವಜನಿಕ ಟಾರು ರಸ್ತೆಯ ಗರತಿ
ಕೌಟಲ್ಯ ನಗರದ ಚಿರ ಸುಂದರಿ' (ಮಹಾಸತಿ)

'ನೆಕ್ಕು ನೆಕ್ಕಿಸಿಕೊಳ್ಳುವವನ
ಮುಖ ಕಾಣುವ ತನಕ ನೆಕ್ಕು
....
ಹಸಿರು ಕಂಡ ಕಡೆ ಮುಸುಡಿ ಹಾಕಿ

ಹೊಡೆಯ ಬಂದವರಿಗೆ ಕೋಡ ತೋರಿ
....
ತಬ್ಬುವೆ ಉತ್ತುಂಗ ಶಿಖರವ ಹಾರಿ
ಬೂಟು ಲಿಕ್ಕರಿಗರ ಬೀಜದ ಹೋರಿ
....
ಸ್ವತಂತ್ರ ಭಾರತದ ಅಯೋನಿಜ ನವಾವತಾರಿ
ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ
ವಿಶ್ವಾದ್ಯಂತ ನಡೆಯಲಿ ನಿನ್ನ ಒಡ್ಡೋಲಗದ ಸವಾರಿ'

(ಬೂಟು ಲಿಕ್ಕರಿಗ)

ಈ ಪದ್ಯಗಳಲ್ಲಿ ಕ್ರಮವಾಗಿ ತನಗೆ ದಕ್ಕಿರುವ ಸ್ಥಾನಮಾನಗಳಿಂದ ಮೈಮರೆತ ಡಾಂಭಿಕ ಕವಿಯೊಬ್ಬನ ಪ್ರತಿಷ್ಠೆಯ ವರ್ಣನೆ; ಸಾರ್ವಜನಿಕ ಸೇವೆಯ ಹೆಸರಿನಲ್ಲಿ ತನ್ನ ಹುಸಿ ಪಾತಿವ್ರತ್ಯದ ಧ್ವಜವನ್ನು ಪ್ರದರ್ಶಿಸುತ್ತ ರಾಷ್ಟ್ರ ಪ್ರಶಸ್ತಿಗಳ ನಿಚ್ಚಣಿಗೆಯನ್ನು ಏರಿ ಸಾಗುತ್ತಿರುವ ಮಹತ್ವಾಕಾಂಕ್ಷಿ ಮಹಿಳೆಯೊಬ್ಬಳ ಚಿತ್ರ; ಭಟ್ಟಂಗಿತನ (Sycophancy) ಒಂದನ್ನೇ ಅರ್ಹತೆ ಮಾಡಿಕೊಂಡು ಏರಬಾರದಲ್ಲಿಗೆಲ್ಲ ಏರಿ ಮಾಡಬಾರದ ಅವಾಂತರ ಮಾಡುವ ದೇಶದ ಇಂದಿನ ಜನ ನಾಯಕನೊಬ್ಬನ ಚಿತ್ರ ಇವು ಕ್ರಮವಾಗಿ ಈ ಮೂರೂ ಪದ್ಯಗಳ ವಸ್ತು ಎಂಬುದನ್ನು ಗಮನಿಸಿದರೆ ಬಳಸಲಾದ ಇಲ್ಲಿನ ಭಾಷೆಯ ಔಚಿತ್ಯ ಮನವರಿಕೆಯಾಗುತ್ತದೆ.

ಇಲ್ಲಿನ ಬಹುತೇಕ ಪದ್ಯಗಳು ಸಾಮಾಜಿಕ ವಿಡಂಬನೆಗಳಾಗಿರುವುದರಿಂದ ಕೆ.ಜೆ.ಎನ್. ಅವರ ಕಾವ್ಯದಲ್ಲಿ ವೈವಿಧ್ಯತೆಗೆ ಕೊರತೆ ಉಂಟಾಗಿದೆ ಎಂಬುದು ನಿಜ. ಆದರೆ ಈ ಪದ್ಯಗಳಲ್ಲಿ ವ್ಯಕ್ತವಾಗಿರುವ ಸಾತ್ವಿಕ ಕ್ರೋಧ ಆರೋಗ್ಯಪೂರ್ಣವಾದದ್ದು ಮತ್ತು ಅದರ ಅಭಿವ್ಯಕ್ತಿಗೆ ಒದಗಿಬಂದ ಭಾಷೆ ಕನ್ನಡಕ್ಕೆ ಸಾಧ್ಯವಿರುವ ಹಲವು ಬಗೆಯ ಶೈಲಿಗಳಲ್ಲಿ ಒಂದರ ಸಾಚಾ ಮಾದರಿಯಾಗಿದೆ. ಇಂತಹ ಕಾವ್ಯವನ್ನು ಬರೆಯಬಲ್ಲವರು ಯಾವುದೇ ಭಾಷೆಯಲ್ಲಿ ಹೆಚ್ಚು ಸಂಖ್ಯೆಯಲ್ಲಿಲ್ಲ. ಕನ್ನಡದಲ್ಲಂತೂ ಇನ್ನೂ ವಿರಳ. ಹೀಗಿರುವಾಗ ಕೆ.ಜೆ.ಎನ್. ಅವರು ಪದ್ಯಗಳನ್ನು ಬರೆಯದೆ ನಿಲ್ಲಿಸಿದ್ದು ಒಂದು ನಷ್ಟವೆಂದೇ ನನಗನ್ನಿಸುತ್ತದೆ. ಆದರೆ ಪದ್ಯ ರಚನೆ ನಿಲುಗಡೆಗೆ ಬಂದ ಮೇಲೆ ಅವರು ವೈಚಾರಿಕ ಮತ್ತು ಶೋಧನಾತ್ಮಕ ಗದ್ಯವನ್ನು ಬರೆಯತೊಡಗಿದ್ದಾರೆ ಎಂಬುದು ಒಂದು ಸಮಾಧಾನದ ಸಂಗತಿ. ತಮ್ಮ ಸುತ್ತಿನ ಜನಜೀವನ ಮತ್ತು ಸಾಮಾಜಿಕ ವಿದ್ಯಮಾನಗಳಿಗೆ ಒಂದು ರೀತಿಯ ತಟಸ್ಥ ಸಾಕ್ಷೀಪ್ರಜ್ಞೆಯಾಗಿ ಪ್ರತಿಕ್ರಿಯೆ ತೋರಿಸುವವರು ಜನಪ್ರಿಯ ಕವಿಗಳೆನಿಸಿಕೊಳ್ಳುತ್ತಾರೆ. ಸಮಾಜ ಬದಲಾಗಬೇಕೆಂಬ ಮಹತ್ವಾಕಾಂಕ್ಷೆಯಿಂದ ಕೂಡಿ ವಿದ್ಯಮಾನಗಳಿಗೆ ಇನ್ನೂ ಹೆಚ್ಚು ತೀವ್ರ ಪ್ರತಿಕ್ರಿಯೆ ತೊರಿಸುವವರು ಗದ್ಯಕಾರರಾಗುತ್ತಾರೆ (ವೈಚಾರಿಗ ಗದ್ಯ?). ಈ ಎರಡೂ ಬಗೆಯ ಪ್ರತಿಕ್ರಿಯೆಯಿಂದ ತೃಪ್ತರಾಗದ ಕೆಲವರು ಕ್ರಿಯಾಶೀಲರು ಕ್ರಾಂತಿಕಾರಿ ಹೋರಾಟಗಾರರಾಗುತ್ತಾರೆ. ಪ್ರೊ|| ಕೆ.ಜೆ.ಎನ್. ಅವರು ಮೇಲೆ ಹೇಳಿದವರಲ್ಲಿ ಎರಡನೆಯ ವರ್ಗಕ್ಕೆ ಸೇರುತ್ತಾರೆ ಎನ್ನಬಹುದು. ♦

2. ದೊಡ್ಡ ಸಂಕಣ್ಣ ನಾಯಕ ಕುರಿತು

ಪ್ರೊ// ಜಿ.ಎಸ್. ಸಿದ್ಧರಾಮಯ್ಯ

ಇಲ್ಲಿಗೆ ಮೂವತ್ತೆರಡು ವರ್ಷಗಳ ಹಿಂದೆ (೧೯೬೯) ಪ್ರೊ. ಕೆ.ಜಿ. ನಾಗರಾಜಪ್ಪನವರಿಂದ ರಚಿತವಾದ ಕಾದಂಬರಿ ದೊಡ್ಡಸಂಕಣ್ಣನಾಯಕ. ಅವರ 'ಮರುಚಿಂತನೆ' (೧೯೮೫) ಓದಿದ್ದವರಿಗೆ ಬೆರಗುಹುಟ್ಟಿಸುವಷ್ಟರ ಮಟ್ಟಿನ ವೈರುಧ್ಯಗಳನ್ನು ಕಾಣಿಸುವ ಕೃತಿ ದೊಡ್ಡಸಂಕಣ್ಣನಾಯಕ. ಮರುಚಿಂತನೆ ಸಂಸ್ಕೃತಿ ಪ್ರಧಾನ ವಿಶ್ಲೇಷಣಾ ದೃಷ್ಟಿಯನ್ನೊಳಗೊಂಡ ವಿಮರ್ಶಾಕೃತಿ. ಉಪಸಂಸ್ಕೃತಿಗಳ ಬಗ್ಗೆ ತಾಯಿಯ ಅಂತಃಕರಣವನ್ನು ತೋರಿದಂತೆ ಇಂಡಿಯಾದ ಚರಿತ್ರೆಯನ್ನೇ ಮರುಚಿಂತನೆಗೆ ಒಡ್ಡಿರುವ ನಾಗರಾಜಪ್ಪನವರು ಕನ್ನಡ ವಿಮರ್ಶೆಗೆ ಒಂದು ಹೊಸ ಆಯಾಮವನ್ನು ಕಾಣಿಸಿದ ಸಂಶೋಧಕ ಮನಸ್ಸಿನ ವಿಮರ್ಶಕರು. ಇವರು ದೊಡ್ಡಸಂಕಣ್ಣನಾಯಕ ಕಾದಂಬರಿಯನ್ನು ಮರುಚಿಂತನೆಯ ನಂತರ ರಚಿಸಿದ್ದರೆ ಯಾವ ಸ್ವರೂಪದಲ್ಲಿರುತ್ತಿತ್ತು ಎಂಬ ಪ್ರಶ್ನೆ ಕೇವಲ ಕುತೂಹಲಿತ ಭಾವಮಾತ್ರವಾಗಿ ಹುಟ್ಟುವುದಲ್ಲ; ಸಂಸ್ಕೃತಿ ಸಾಹಿತ್ಯ ಕುರಿತಂತೆ ಆಗಿರುವ ಆಗುತ್ತಿರುವ ದೃಷ್ಟಿಧೋರಣೆಗಳ ಅಧ್ಯಯನ ಸ್ವರೂಪವನ್ನೂ ಒಳಗೊಂಡ ವಿಚಾರವಾಗಿ ಈ ಪ್ರಶ್ನೆ ಮುಖ್ಯವಾಗುತ್ತದೆ. ದೊಡ್ಡಸಂಕಣ್ಣನಾಯಕ ಕಾದಂಬರಿಯಲ್ಲಿ ಸನಾತನ ಧರ್ಮ ಸಂಸ್ಕೃತಿ ದೇಶಭಕ್ತಿ ಹಿಂದೂಪ್ರಜ್ಞೆ ಮೊದಲಾದ ವಿಚಾರಗಳು ಪ್ರತಿಪಾದಿತವಾಗಿರುವ ಬಗೆಯನ್ನು ಬಹುಶಃ ಈಗ ನಾಗರಾಜಪ್ಪನವರೇ ಒಪ್ಪಲಿಕ್ಕಿಲ್ಲ. ಸಂಸ್ಕೃತಿ ಕುರಿತಂತೆ ಸಂಶೋಧಕ ಮನಸ್ಸಿನಲ್ಲಿ ಶೋಧನೆಗೆ ಒಳಗಾಗುತ್ತಿದ್ದ ಈ ಸಂಗತಿಗಳು ವಿಚಾರಗಳು ಮತ್ತು ಅವು ಪಡೆಯುತ್ತಿದ್ದ ತಾತ್ವಿಕ ಸ್ವರೂಪಗಳು ಇಲ್ಲಿ ಪ್ರತಿಪಾದಿತವಾಗಿರುವ ದೃಷ್ಟಿಗಿಂತ ಖಂಡಿತ ಭಿನ್ನವಾಗಿರುತ್ತಿದ್ದವು.

> "ಕಾವಿಯ ಕೈಯಲ್ಲಿ ಕತ್ತಿಯೊಂದು ಮುಕ್ತಿಯ ಶಕ್ತಿ.
> ಇದೇ ಭಾರತೀಯ ಸಂಸ್ಕೃತಿ. ಹಾಗೂ ದೊಡ್ಡಸಂಕಣ್ಣ
> ನಾಯಕ ಕಾದಂಬರಿಯ ತಿರುಳೂ ಹೌದು. ಚರಿತ್ರೆ ಕೇವಲ
> ಸತ್ತವರ ಕಥೆಯಲ್ಲ, ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ
> ಬಳಿಚಿಕೊಂಡು ಬದುಕುತ್ತಿರುವ ಬತ್ತಿದ ನರನಾಡಿಗಳಿಗೆ
> ಸತತವಾಗಿ ರಕ್ತವನ್ನೊದಗಿಸಿ ದೇಶಭಕ್ತಿ, ಶ್ರದ್ಧೆ, ಧೈರ್ಯ,
> ತ್ಯಾಗವನ್ನು ತುಂಬುವ ರಕ್ತಾಗಾರ"

(ದೊಡ್ಡಸಂಕಣ್ಣನಾಯಕ-ಅರಿಕೆ)

> " ಕೆಳವರ್ಗದ ಬದುಕಿಗೆ ಬೆನ್ನು ತಿರುಗಿಸಿ ಅವರ ಬದುಕನ್ನು
> ತಬ್ಬಿದ ಉಚ್ಚವರ್ಗದ ಜಾತಿಯ ಸಂಕುಚಿತ ಸೂತ್ರಗಳೇ ವಿಶ್ವ
> ಧರ್ಮಗಳಾಗಿ ಕಲೆಯ ಸ್ವರೂಪತಾಳಿ ಕನ್ನಡ ಸಾಹಿತ್ಯ ರಚನೆಯಾಯಿತು"

(ಮರುಚಿಂತನೆ - ಪ್ರಸ್ತಾವನೆ)

"ಕರ್ನಾಟಕದಲ್ಲಿ ಧಾರ್ಮಿಕ ಸಾಮಾಜಿಕ ಮತ್ತು ಆರ್ಥಿಕ
ಜೀವನ ಉಚ್ಚವರ್ಗದ ಸರ್ವಾಧಿಕಾರಕ್ಕೆ ಒಳಗಾದಂತೆ,
ಸಾಹಿತ್ಯವೂ ಪ್ರತಿಷ್ಠಿತರಿಗೆ ಶರಣಾಗಿ, ಕೆಳವರ್ಗದ
ಸಂಸ್ಕೃತಿಯ ನಾಶಕ್ಕೆ ಕಾರಣವಾಯಿತು ಎಂಬುದು
ಸಾಹಿತ್ಯ ಚರಿತ್ರೆಯ ವಸ್ತುನಿಷ್ಠ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.
ಇದರಿಂದ ಕೆಳವರ್ಗದ ಶಿಷ್ಟರಿಗೆ ಸಂಸ್ಕೃತೀಕರಣದ
ಬಂಗಾರದ ಜಿಂಕೆಯ ಬೆನ್ನುಹತ್ತುವ ಹುಚ್ಚು ಹಿಡಿಯಿತು.
ಕೆಳವರ್ಗದವರ ಬದುಕಿನ ಸಂಸ್ಕೃತೀಕರಣ ಪರಸ್ಪರ
ವಿರುದ್ಧದಿಕ್ಕಿನಲ್ಲಿ ಚಲಿಸಿದುವು. ತಮ್ಮದಲ್ಲದ್ದನ್ನು
ತಮ್ಮದನ್ನಾಗಿ ಮೈಗೂಡಿಸಿಕೊಳ್ಳುವ ವ್ಯರ್ಥಸಾಹಸದಲ್ಲಿ
ಸಾಹಿತ್ಯದ ಕೃಷಿ ಬರಡಾಯಿತು".

(ಮರುಚಿಂತನೆ-ಪ್ರಸ್ತಾವನೆ)

ಈ ಮೇಲಿನ ಮಾತುಗಳಲ್ಲಿನ ವೈರುಧ್ಯಗಳು ಕನ್ನಡ ಸಾಹಿತ್ಯದಲ್ಲಿ ಆಗಿರುವ ಸಂಘರ್ಷಾತ್ಮಕ ನೆಲೆಯ ತಿಳುವಳಿಕೆಯ ಮುಖಾಮುಖಿತ್ವವನ್ನು ಕಾಣಿಸುತ್ತವೆ. ಒಂದು ಹಂತದವರೆಗೆ ಶಿಕ್ಷಣದ ಗಿಳಿಪಾಠಕ್ಕೆ ತೆತ್ತುಕೊಂಡಿದ್ದ ಮನಸ್ಸುಗಳು, ಬೆಳೆಬೆಳೆದಂತೆ ಅಕ್ಷರದ ಬೆಳಕಿನಲ್ಲಿ ನಿಜವಾದ ವಸ್ತುಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದಕ್ಕೆ ತೊಡಗಿ ಗಿಳಿಪಾಠದ ಸಟೆಯನ್ನು ತಿರಸ್ಕರಿಸುತ್ತಾ ವಸ್ತುಸ್ಥಿತಿಯ ದಿಟದ ಕಡೆಗೆ ಎಚ್ಚರದಿಂದ ನಿರೀಕ್ಷಿಸಿದ್ದಾರೆ. ಈ ಬದಲಾವಣೆ ವೈರುಧ್ಯವನ್ನೊಳಗೊಂಡ ಸತ್ಯಾನ್ವೇಷೀ ಬೆಳವಣಿಗೆ. ಈ ಹಿನ್ನೆಲೆಯಲ್ಲಿಯೇ ಈಗ ನಾಗರಾಜಪ್ಪನವರು ದೊಡ್ಡಸಂಕಣ್ಣ ನಾಯಕ ಕಾದಂಬರಿಯನ್ನು ರಚಿಸಿದ್ದರೆ ಅದರ ಸ್ವರೂಪ ಹೇಗಿರುತ್ತಿತ್ತು? ಎಂಬ ಪ್ರಶ್ನೆ ಹುಟ್ಟಿದ್ದು.

ಸೃಜನಶೀಲ ಮನಸ್ಸೊಂದು ಐತಿಹಾಸಿಕ ಸಂದರ್ಭವೊಂದನ್ನು ಪುನಾರಚಿಸುವಾಗ ಎರಡು ಕಾಲಘಟ್ಟಗಳ ಅನುಭವವನ್ನು ಮುಖಾಮುಖಿಯಾಗಿಸಿ ಮೂರನೆಯ ಸಂದರ್ಭವೊಂದಕ್ಕೆ ತನ್ನ ಸಂವೇದನೆಯ ದ್ರವ್ಯವನ್ನು ಕಟ್ಟಿಕೊಡುತ್ತದೆ. ಈ ಮೂರನೆಯ ಸಂದರ್ಭ ಬೇರೆ ಯಾವುದೋ ಆಗಿರದೆ ಸ್ವಾನುಭವ ಸಂವೇದಿತ ಆಕೃತಿಯೇ ಆಗಿರುತ್ತದೆ. ಹೀಗಾಗಿ ಜೀವನ ದೃಷ್ಟಿಯನ್ನು ಅರ್ಥಾತ್ ಜೀವನ ಮೌಲ್ಯವನ್ನು ಕೃತಿಯ ಆಕೃತಿ ಹೇಗೆ ಧಾರಣಮಾಡಿಕೊಂಡಿರುತ್ತದೆ ಎಂಬುದು ಮುಖ್ಯವಿಚಾರ. ಕಾಲವ್ಯತ್ಯಯಗಳ ನೆಲೆಯಲ್ಲಿ ಬದುಕನ್ನು ಸಂಘರ್ಷಕ್ಕೆ ಒಡ್ಡಿಕೊಳ್ಳದ ಮನಸ್ಸಿಗೆ ಸಮಸ್ಯೆಯೇ ಆಗುವುದಿಲ್ಲ. ಸಂಘರ್ಷಕ್ಕೆ ಒಡ್ಡಿಕೊಳ್ಳುವ ಮನಸ್ಸಿಗೆ ಗೃಹೀತಗೊಂಡ ಅನುಭವ ಹಾಗೂ ಅನುಭಾವಿತವಾದ ಸತ್ಯ ಇವುಗಳನ್ನು ಮೂರ್ತಗೊಳಿಸುವುದು ಮುಖ್ಯವಾಗುತ್ತದೆ. ಕೃತಿಯ ಹೊರ ಮತ್ತು ಒಳಮೈತುಂಬಿದ ವಸ್ತುವಿನ್ಯಾಸವಾಗಿ ಈ ಪ್ರಕ್ರಿಯೆ ನಡೆಯುತ್ತದೆ. ಐತಿಹಾಸಿಕ ಸಂಗತಿಯನ್ನು ಆ ಕಾಲಮಾನದ ಅಪ್ಪಟವಾಸ್ತವತೆಯಲ್ಲಿ ಕಟ್ಟಿಕೊಡುತ್ತೇನೆನ್ನುವುದು ಕೂಡ ಹುಸಿ. ಕಾರಣ ಭೂತಕ್ಕೆ ಸಂಬಂಧಿಸಿದ ವಾಸ್ತವತೆ ಎನ್ನುವುದು, ಎಷ್ಟಾದರೂ ಊಹೆಯನ್ನು ಅವಲಂಬಿಸಿರುವುದು; ಕಲ್ಪನೆಯಲ್ಲಿ ಮೈತಾಳುವುದು. ಇಂಥ ಕಲ್ಪನೆಗಳ ಆಳದಲ್ಲಿ ಸಮಕಾಲೀನ ಸ್ಥಿತಿ ಎನ್ನುವುದು ಭೂಮಿಕೆಯಾಗಿರುತ್ತದೆ. ಭಾಷೆ ವೇಷ ಮೊದಲಾದ

ಪರಿಕರಗಳು ಕೂಡ ಕಾಲದ ಅಂತರವನ್ನು ಕಾಣಿಸುವ ತಂತ್ರವಿನ್ಯಾಸಗಳಂತೆ ಕಂಡರೂ ಸಂಸ್ಕೃತಿಯೊಂದರ ಆಕೃತಿ ಸತ್ಯಗಳಾಗಿ ಮುಖ್ಯವಾಗುತ್ತವೆ. ಹೀಗೆ ವಾಸ್ತವತೆ ಎನ್ನುವುದು ಜೀವನಸಂಬಂಧೀ ಬಾಹ್ಯ ವಿವರಣೆಗಳಿಗಿಂತ ಸಂಸ್ಕೃತಿ ಸಂಬಂಧೀ ಅಂತರ್ ನಿರೀಕ್ಷೆಯ ವಿವಕ್ಷೆಗೆ ಒಳಪಟ್ಟ ವಿಚಾರವಾಗುತ್ತದೆ. ಕಾಲಬದ್ಧವಾಗುತ್ತಲೇ ಕಾಲಾತೀತವಾಗುವ ಗತಿತಾರ್ಕಿಕ ಗುಣ ವಾಸ್ತವತೆಯ ಜೀವದ್ರವ್ಯ ವಾಗಿರುತ್ತದೆ.

" ಇತಿಹಾಸ ಎಂದು ನಾವು ಇಂದು ಕರೆಯುವುದರಲ್ಲಿಯೂ ಇತಿಹಾಸದ ಪರಂಪರಾಗತ ಬರವಣಿಗೆಯಲ್ಲಿಯೂ ಗುಣಾವಲಂಬಿಯಾದ ಬದಲಾವಣೆ ಉಂಟು. ಸಾಕ್ಷ್ಯವನ್ನು ಬಳಸುವ ವಿಧಾನದಲ್ಲಿ ಇತಿಹಾಸದ ಈಗಿನ ಬರವಣಿಗೆಯು ಎರಡು ಸಂಗತಿಗಳಿಂದ ಪ್ರಭಾವಿತವಾಗಿದೆ. ವೈಜ್ಞಾನಿಕ ಕ್ರಾಂತಿಯು ಉಂಟುಮಾಡಿದ ಬೌದ್ಧಿಕ ಪ್ರಭಾವ ಒಂದನೆಯದು; ಇದರಿಂದ ಗತಕಾಲವನ್ನು ಕ್ರಮಬದ್ಧವಾಗಿ ಬೆಳಕಿಗೆ ತರುವ ಹಾಗೂ ಐತಿಹಾಸಿಕ ಸಂಗತಿಗಳ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚುವ ನಿಲುವಿಗೆ ಮಹತ್ವ ಬಂದಿದೆ. ಒಂದು ಗುಂಪಿನ ಸಾಮಾನ್ಯ ಭಾಷೆ ಸಂಸ್ಕೃತಿ ಹಾಗೂ ಇತಿಹಾಸಗಳಿಗೆ ಮಹತ್ವನೀಡುವ ಮನೋವೃತ್ತಿಯ ರಾಷ್ಟ್ರೀಯತೆ ಯೆಂಬ ಹೊಸ ಧ್ಯೇಯವು ಇತಿಹಾಸ ರಚನೆಯ ಮೇಲೆ ಬೀರುವ ಪ್ರಭಾವವು ಎರಡನೆಯದು.......

ಭಾರತದ ಗತಕಾಲದ ಬಗ್ಗೆ ಅನ್ವೇಷಣೆ ಅಥವಾ ಪರಿಶೋಧನೆ ಗತಕಾಲದ ಬಗ್ಗೆ ಹಲವಾರು ಭಾಷ್ಯಗಳಿಗೆ ದಾರಿಮಾಡಿಕೊಟ್ಟಿತು. ಈ ಭಾಷ್ಯಗಳು ಸತತ ಪುನರುಚ್ಚರಿಸಲ್ಪಟ್ಟವು; ಏಕೆಂದರೆ ಅವು ಪ್ರಥಮವಾಗಿ ರೂಪಿಸಲ್ಪಟ್ಟಿದ್ದವು; ಇವು ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯ ಕಥನಕ್ಕೆ ಪಡಿಯಚ್ಚುಗಳಂತೆ ಆಗಿವೆ. ಅವುಗಳನ್ನು ಇಂದು ಪ್ರಶ್ನಿಸಲಾಗುತ್ತಿದ್ದರೂ ಅವು ಇಂದಿಗೂ ವ್ಯಾಪಕವಾಗಿ ಪ್ರಚಾರದಲ್ಲಿವೆ. ಇವುಗಳಲ್ಲಿ ಕೆಲವು ಪಡಿಯಚ್ಚುಗಳು ಸಾಮ್ರಾಜ್ಯಶಾಹೀ ಹಿತಾಸಕ್ತಿಗಳಿಗೂ ಇನ್ನೂ ಕೆಲವು ಆರ್ಥಿಕ ಸಾಮ್ರಾಜ್ಯಶಾಹಿಗೂ ಸಂಬಂಧಿಸಿದ್ದು ಸಾಂಸ್ಕೃತಿಕ ಹಿರಿಮೆಯ ಪ್ರಸ್ಥಾಪನೆಗಾಗಿ ಕೂಡ ಕೆಲವು ಇಂಥ ಕಥನಗಳ ಪಡಿರೂಪಗಳು ಸೃಷ್ಟಿಯಾಗಿವೆ. ಈ ಮೂಲದಿಂದ ಬಂದ ಇತಿಹಾಸಗಳು ಸಾಮ್ರಾಜ್ಯ ಶಾಹಿ ಆಳ್ವಿಕೆಗೆ ಅನುಕೂಲವಾಗುವಂತೆ ಗತಕಾಲವನ್ನು ಬಣ್ಣಿಸುವ ಗುರಿಯನ್ನು ಹೊಂದಿವೆ. ಇನ್ನೂ ಕೆಲವು, ಇದಕ್ಕೆ ವಿರುದ್ಧವಾಗಿ ಭಾರತೀಯ ರಾಷ್ಟ್ರೀಯ ಭಾವನೆಗಳಿಂದ ಪ್ರಚೋದಿತವಾಗಿ, ಸಾಮ್ರಾಜ್ಯಶಾಹೀ ಆಡಳಿತಕ್ಕೆ ವಿರುದ್ಧವಾಗಿ ಬಂದ ಬರಹಗಳಾಗಿದ್ದು ಅವು ಗತಕಾಲದ ಪುನರುಜ್ಜೀವನವನ್ನು ಸಮರ್ಥಿಸುವಂತಿವೆ. ಭಾರತೀಯ ರಾಷ್ಟ್ರೀಯತೆಯ ಧ್ಯೇಯವು ೨೦ನೆಯ ಶತಕದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಪ್ರಕಟವಾಯಿತಷ್ಟೇ ಅಲ್ಲದೆ, ತತ್ತ್ವಜ್ಞಾನ ಸಾಹಿತ್ಯ ಕಲೆಗಳು ಹಾಗೂ ಇತಿಹಾಸ ಹೀಗೆ ಎಲ್ಲ ಬೌದ್ಧಿಕ ಕ್ಷೇತ್ರಗಳ ಮೇಲೆ ಪ್ರಭಾವ ಬೀರಿತು" (ರೋಮಿಲಾ ಥಾಪರ್- ಗತಕಾಲದ ಬಗ್ಗೆ ಪೂರ್ವಗ್ರಹ - ಪುಟ 4.)

ದೊಡ್ಡ ಸಂಕಣ್ಣ ನಾಯಕ ಕಾದಂಬರಿಯು ವಸಾಹತುಶಾಹಿಗೆ ವಿರುದ್ಧವಾದ ರಾಷ್ಟ್ರೀಯವಾದದ ನೆಲೆಯಲ್ಲಿ ಕಲ್ಪಿತ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ವೈಭವೀಕರಿಸುವ ಪಡಿಯಚ್ಚಿನ ಕಥನಮಾದರಿಯಕೃತಿ. ಇಕ್ಕೇರಿಯನ್ನು ಆಳಿದ ಸದಾಶಿವನಾಯಕ ಮತ್ತು

ಅವನ ಮಗ ದೊಡ್ಡಸಂಕಣ್ಣ ನಾಯಕ ಇವರ ಜೀವಿತಾವಧಿಯ ವಸ್ತು ಸಂಗತಿಯನ್ನು ಚಿತ್ರಿಸುವಲ್ಲಿ ಈ ಕಾದಂಬರಿಯಲ್ಲಿ ಪ್ರಧಾನತೆ ಪಡೆದಿರುವ ಅಂಶಗಳೆಂದರೆ ರಾಜನಿಷ್ಠೆ ಮತ್ತು ಯುದ್ಧ ಸಂಗತಿ. ಇಲ್ಲಿಯ ರಾಜನಿಷ್ಠೆ ಸಾಮಂತನೊಬ್ಬನು ಸಾಮ್ರಾಜ್ಯಶಾಹಿ ರಾಜನೊಬ್ಬನಿಗೆ ರಾಜ್ಯವಿಸ್ತರಣೆ ಮತ್ತು ರಾಜ್ಯ ರಕ್ಷಣೆಯ ನೆಲೆಯಲ್ಲಿ ಮೆರೆಯುವ ಪರಾಕ್ರಮವೇ ಆಗಿದೆ. ಈ ಸಾಮ್ರಾಜ್ಯಶಾಹಿಯನ್ನು ಅಲ್ಲಲ್ಲಿ ರಾಷ್ಟ್ರೀಯತೆಯ ವ್ಯಾಪಕ ಚೌಕಟ್ಟಿನಲ್ಲಿಟ್ಟಂತೆ ಚಿತ್ರಿಸುವುದೂ ನಡೆದಿದೆ. ಸದಾಶಿವನಾಯಕ ವಿಜಯನಗರ ಸಾಮ್ರಾಜ್ಯಕ್ಕೆ ತೋರಿದ ನಿಷ್ಠೆ ಸಮರ್ಪಣಾ ಭಾವ ಅವನ ಮಗ ದೊಡ್ಡಸಂಕಣ್ಣ ನಾಯಕನಲ್ಲೂ ಮುಂದುವರಿದ ಕ್ರಿಯೆಗಳಾಗುತ್ತವೆ. ದೊಡ್ಡ ಸಂಕಣ್ಣನಾಯಕ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತನ್ನ ಆಡಳಿತ ವ್ಯಾಪ್ತಿಯ ಇಕ್ಕೇರಿಯನ್ನು ಬಿಟ್ಟು ಹೋಗಿ ವಿಜಯನಗರದ ಅರಸನ ಕರೆಯ ಮೇರೆಗೆ ಅವನ ಆಸ್ಥಾನದಲ್ಲಿಯೇ ಕೈಂಕರ್ಯಕ್ಕಿರುತ್ತಾನೆ. ಈ ನಿಷ್ಠೆ ವಿಜಯನಗರ ಸಾಮ್ರಾಜ್ಯದ ವಿಸ್ತರಣೆ ಮತ್ತು ರಕ್ಷಣೆಗಳನ್ನು ಅವಲಂಬಿಸಿದಂತೆ ನಡೆದ ಚಟುವಟಿಕೆ. ಈ ರಾಜನಿಷ್ಠೆ ಎಲ್ಲಿನವರೆಗೆ ಬೆಳೆಯುತ್ತದೆಯೆಂದರೆ ತನ್ನ ಮಗನಿಗೆ ಅರಸನ ಹೆಸರನ್ನಿಟ್ಟು ಗೌರವ ಭಾವ ಮೆರೆಯುವಲ್ಲಿಯವರೆಗೂ ಮುಂದುವರಿದಿದೆ. ವಂಶಪಾರಂಪರ್ಯವಾಗಿ ಬಂದ ಸಾಮ್ರಾಜ್ಯಶಾಹಿ ನಿಷ್ಠೆಯನ್ನು ಮೆರೆಯುವ ಗುಣದ ಜತೆಗೆ ದೊಡ್ಡ ಸಂಕಣ್ಣನಾಯಕನಲ್ಲಿದ್ದ ಮತ್ತೊಂದು ವಿಶೇಷವೆಂದರೆ ಆಧ್ಯಾತ್ಮಿಕ ತುಯ್ತ. ಈ ಆಧ್ಯಾತ್ಮಿಕ ತುಯ್ತಕ್ಕೆ ಕಾರಣ ಅವನಿಗೆ ಶಿಕ್ಷಣ ನೀಡಿದ ಗುರು ರುದ್ರಾರಾಧ್ಯರು. ಕಾದಂಬರಿಯಲ್ಲಿ ರುದ್ರರಾಧ್ಯರ ಕತೆ ಒಂದು ಉಪಾಖ್ಯಾನದ ರೀತಿಯಲ್ಲಿ ಬೆಳೆದಿದೆ. ಕಾದಂಬರಿಯ ನಾಯಕ ದೊಡ್ಡಸಂಕಣ್ಣನ ಆದರ್ಶ ಅವನ ಗುರು ರುದ್ರಾರಾಧ್ಯರು. ರುದ್ರಾರಾಧ್ಯರ ಸನ್ಯಾಸತ್ವದ ಹಿಂದೆ ಅವರ ಮನೆಗೆ ಬಂದ ಸನ್ಯಾಸಿಯೊಬ್ಬನು ಬೀರಿದ ಪ್ರಭಾವ ಕಾರಣವಾಗಿದೆ. ಆ ಪ್ರಭಾವ ಸಾಧನೆಯ ವಿಕಾಸಶೀಲ ನಡೆಯಾಗದೆ ವ್ಯಕ್ತಿಯ ಅಂತರ್ಯದಲ್ಲಿನ ಅಣುರೂಪೀ ಅಂಶಕ್ಕೆ ಅಗ್ನಿ ಸೇಚನಗೈಯ್ಯುವ ವಿಧಿಯಂತೆ ವಿವರಣಾತೀತ ಕ್ರಿಯೆಯಾಗಿದೆ. ಆದರೆ ಅದೇ ರುದ್ರಾರಾಧ್ಯರ ಪ್ರಭಾವಕ್ಕೆ ಒಳಗಾದ ದೊಡ್ಡಸಂಕಣ್ಣನಾಯಕನ ನಡೆಯ ಹಿಂದೆ ಬಿತ್ತನೆಗೊಳಗಾದ ಬೀಜ ಗಾಳಿನೀರಿನ ಶಾಖ ಸಂಲಗ್ನದಲ್ಲಿ ಮೊಳೆತು ಬೆಳೆದ ಕೃಷಿ ಸಾಧನೆಯ ಕರ್ಮ ಕ್ರಿಯೆಯಾಗಿದೆ. ಈ ಎರಡೂ ಮಾದರಿಗಳು ಅವುಗಳ ಪರಿಣಾಮದಲ್ಲಿ ಹೇಗೆ ಫಲರೂಪಿಗಳಾಗಿವೆ ಎಂಬುದು ಮುಖ್ಯ. ರುದ್ರಾರಾಧ್ಯರ ನಡೆ ಎಲ್ಲ ತೊರೆದು ಹೋಗುವ ನಿಷ್ಠುರ ಗತಿಯಾದಾದರೆ ದೊಡ್ಡಸಂಕಣ್ಣನಾಯಕನ ನಡೆ ಮನುಷ್ಯಸಂಬಂಧಗಳ ಒಳಸುಳಿಯಲ್ಲಿ ಮುಳುಗುತ್ತಲೇ ಮೋಕ್ಷದ ಹಾದಿಗೆ ಕ್ರಮಿಸುವ ನಮ್ಯಭಾವದ ನಡೆಯಾಗಿದೆ. ಇಂಥ ಕಡೆ ಪಾತ್ರಗಳ ಗತಿ ವಸ್ತುಗತಿಯ ಆಂತರಿಕ ತರ್ಕಶೀಲ ಸಹಜತೆಯನ್ನು ಮೈಗೂಡಿಸಿಕೊಂಡಿದೆ. ಈ ಗುರುಶಿಷ್ಯರ ಭಾವಸಂಬಂಧವನ್ನು ಕಟ್ಟಿಕೊಡುವಾಗ ಲೇಖಕರು ವ್ಯಷ್ಟಿ ಸಮಷ್ಟಿಯ ಹಿನ್ನೆಲೆಯನ್ನು ಹೊಣೆಗಾರಿಕೆಯ ಸಂಗತಿ ಮಾತ್ರವಾಗಿ ಚಿತ್ರಿಸದೆ ಇಬ್ಬರ ಅನುಭವ ವೈರುಧ್ಯಗಳಲ್ಲಿನ ಸೂಕ್ಷ್ಮಗಳನ್ನು ಮುಖಾಮುಖಿಯಾಗಿಸಿದ್ದಾರೆ. ಪಾತ್ರಗಳ ಬೆಳವಣಿಗೆಗೆ ಅಗತ್ಯವಾದ ವಸ್ತುಸಾರೂಪ್ಯದ ಸಹಜಗತಿ ಇದು. ಹೀಗಾಗಿ ಪಾತ್ರಗಳು ಸೂತ್ರಬದ್ಧ ರಚನಾಮಾದರಿಗಳಾಗಿಯೂ ಇಂಥ ಗತಿತಾರ್ಕಿಕ ಗುಣದಿಂದ ಅಲ್ಲಲ್ಲಿ ಅವು ಉಸಿರಾಡಿವೆ. ಲೌಕಿಕ-ಪಾರಲೌಕಿಕಗಳ ಬಗೆಗಿನ ಜಿಜ್ಞಾಸೆಯ ಸಂದರ್ಭದಲ್ಲಿ

ಗಹನವಾದ ವಿಚಾರಗಳನ್ನು ಹೋಲಿಕೆ ದೃಷ್ಟಾಂತಗಳ ಮೂಲಕ ಸರಳವಾಗಿ ಆದರೆ ಮನಂಬುಗುವಂತೆ ಕಟ್ಟಿಕೊಡುವ ಗುಣ ನಿರೂಪಣೆಯ ವಿಶೇಷತೆಯಾಗಿದೆ.

ಸದಾಶಿವನಾಯಕ ಸದಾ ಯುದ್ಧ ಯುದ್ಧ ಎಂದು ಯುದ್ಧೋತ್ಸಾಹದಲ್ಲಿ ಮುಳುಗಿ ತನ್ನ ಶೌರ್ಯ ಪರಾಕ್ರಮ ಮೆರೆದವನಾದರೆ ಸಂಕಣ್ಣನಾಯಕ ಜನನಾಯಕನಾಗಿ ಜನಕಲ್ಯಾಣಕ್ಕಾಗಿ ಅಷ್ಟೇ ಮಾನವೀಯ ನೆಲೆಯಲ್ಲಿ ಸ್ಪಂದಿಸಿದವನು. ಇವನ ನಡೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆದರ್ಶನಾಯಕನೊಬ್ಬ ನಡೆದುಕೊಳ್ಳಬೇಕಾದ ಮಾದರಿಯ ಬದುಕಿನದು. ಸದಾಶಿವನಾಯಕನ ಯುದ್ಧವಿವರಗಳನ್ನು ಬದುಕಿನ ಸಾಧನೆಗಳನ್ನು ಅರವತ್ತು ಪುಟಗಳಲ್ಲಿ ವಿಸ್ತರಿಸಿದಂತೆ ಬೆಳಸಿರುವ ಲೇಖಕರು ಅವನ ಅಂತ್ಯವನ್ನು ಒಂದು ವಾಕ್ಯದಲ್ಲಿ ಮುಗಿಸಿ ಕೈತೊಳೆದುಕೊಳ್ಳುತ್ತಾರೆ. ಒಂದು ರೀತಿಯಲ್ಲಿ ಸಾರಾಂಶರೂಪದ ನಿರೂಪಣೆ ಇವಾಗಿ ಕಾದಂಬರಿಯ ಬಂಧದಲ್ಲಿನ ವಸ್ತು ಸಾರೂಪ್ಯದ ಬೆಳವಣಿಗೆಯ ಕೊರತೆಗೆ ಉದಾಹರಣೆಯಾಗಿದೆ.

ದೊಡ್ಡಸಂಕಣ್ಣನಾಯಕನ ಆಡಳಿತದ ಆರಂಭಿಕ ದಿನಗಳನ್ನು ಚಿತ್ರಿಸುತ್ತಾ ಲೇಖಕರು ರಾಷ್ಟ್ರ ನಿರ್ಮಾಣದ ಪರಿಕಲ್ಪನೆಯನ್ನು ಬಳಸಿದ್ದಾರೆ. ರಾಷ್ಟ್ರೀಯತೆಯ ಕಲ್ಪನೆಯೇ ಮೊಳೆಯದಿದ್ದ ಸಂದರ್ಭದಲ್ಲಿ ಇಡೀ ದೇಶ ಪಾಳೆಯಪಟ್ಟುಗಳ ದ್ವೇಷ ಅಸೂಯೆಯ ದಳ್ಳುರಿಯಲ್ಲಿ ಛಿದ್ರಗೊಂಡಿದ್ದ ಸಂದರ್ಭದಲ್ಲಿ ಈ ರಾಷ್ಟ್ರೀಯತೆಯ ಕಲ್ಪನೆ ಅಸಂಗತವಾಗಿ ತೋರುತ್ತದೆ. ಇತಿಹಾಸವನ್ನು ಪುನಾರಚಿಸುವ ಸಂದರ್ಭದಲ್ಲಿ ಬಹುತೇಕ ಲೇಖಕರು ಈ ಆಭಾಸವೆಸಗಿದ್ದಾರೆ. ಸ್ವಾತಂತ್ರ ಹೋರಾಟದ ಸಂದರ್ಭದಲ್ಲಿ ಮೊಳಗಿದ ಇಂಥ ಪರಿಕಲ್ಪನಾತ್ಮಕ ಚಲನೆಗಳ ಪ್ರಭಾವ ಇದಕ್ಕೆ ಕಾರಣ. ಅನುಭವ ಮತ್ತು ಸಿದ್ಧಾಂತಗಳನ್ನು ವಸ್ತುವಿನಲ್ಲಿ ಸಂಕರಗೊಳಿಸುವಾಗ, ಕಾಲಬದ್ಧ ಭೂಮಿಕೆಗಿಂತ ದೂರವಾದ ನೆಲೆಯಲ್ಲಿ ಅವುಗಳನ್ನು ಪರಿಗ್ರಹಿಸುವಾಗ ಎಚ್ಚರ ಅಗತ್ಯ. ಅಸಹಜತೆ ಮತ್ತು ವೈರುಧ್ಯಭಾವ ತಲೆದೋರಿ ಇವರಿಂದ ಕೃತಿಯ ಜೀವಂತಿಕೆಯೇ ಎರವಾಗುವ ಅಪಾಯ ಒದಗುತ್ತದೆ.

ಕಾದಂಬರಿಯ ಎಲ್ಲ ಪಾತ್ರಗಳೂ ಸೂತ್ರಬದ್ಧ ವಿನ್ಯಾಸ ಕ್ರಮದಲ್ಲಿ ಚಿತ್ರಿತವಾಗಿವೆಯೇ ಹೊರತು, ಮನುಷ್ಯ ಸಹಜ ಗುಣದೋಷಗಳ ನಿಕಷದಲ್ಲಿ ಒಡ್ಡಿಕೊಂಡಂತೆ ವ್ಯಕ್ತಿತ್ವದ ಅನನ್ಯತೆಯನ್ನು ಪಡೆದುಕೊಂಡವುಗಳಾಗಿಲ್ಲ. ಸೂತ್ರಬದ್ಧಕ್ರಿಯೆ ಹೇಗೆ ಬೆಳೆದಿದೆ ಎಂದರೆ ಘಟನೆಗಳ ಸಂಯೋಜನೆಯೂ ಸಹ ಈ ಸೂತ್ರಕ್ಕೆ ಹೊಂದಿಸಿ ಕಟ್ಟಿದ್ದಾಗಿದೆ. ತಂದೆ ಸದಾಶಿವನಾಯಕ ವಿಜಯನಗರ ಸಾಮ್ರಾಜ್ಯದ ರಕ್ಷಣೆಗಾಗಿ ಮತ್ತೆ ಮತ್ತೆ ಯುದ್ಧಭೂಮಿಗೆ ತೆರಳುತ್ತಿದ್ದರೆ ಆಗಲ್ಲಿ ಮಗ ಸಂಕಣ್ಣನಾಯಕ ಇಕ್ಕೇರಿಯ ಆಡಳಿತವನ್ನು ದಕ್ಷತೆಯಿಂದ ನೋಡಿಕೊಳ್ಳುತ್ತಿದ್ದ. ತಂದೆಯ ನಿಧನಾನಂತರ ತಂದೆಯ ಸ್ಥಾನದಲ್ಲಿ ನಿಂತು ವಿಜಯನಗರ ರಕ್ಷಣೆಯನ್ನು ಇವನೇ ನಿರ್ವಹಿಸುತ್ತಾನೆ. ಅಲ್ಲಿಯೂ ಅವನು ಮೆರೆಯುವ ದಕ್ಷತೆ ರಾಷ್ಟ್ರರಕ್ಷಣೆಯ ಹೊಣೆ ಹೊತ್ತ ಆದರ್ಶಸ್ವರೂಪದ್ದು, ಇದರ ಹಿಂದೆ ಗುರುರುದ್ರಾರಾಧ್ಯರ ಕೃಪಾಶೀರ್ವಾದ ಬೆಂಗಾವಲಾಗಿದೆ. ಹಿಂದೂ ಸಾಮ್ರಾಜ್ಯದಲ್ಲಿ ಹಿಂದೂ ಸಾಮಂತರೇ ಪಿತೂರಿ ನಡೆಸಿ ಮುಸ್ಲಿಂ ದೊರೆಗಳ ಜೊತೆ ಶಾಮೀಲಾಗಿ ಧರ್ಮದ್ರೋಹವೆಸಗುವ

ಚಿತ್ರವನ್ನು ಜಂಬೂರ ವಿರೂಪಾಕ್ಷನ ಪ್ರಸಂಗ ಕಟ್ಟಿಕೊಡುತ್ತದೆ. ಇಂಥ ಧರ್ಮದ್ರೋಹಿಗಳಿಗೆ ದೊಡ್ಡಸಂಕಣ್ಣನಾಯಕ ಹೇಗೆ ಬುದ್ಧಿಕಲಿಸಿದ ಎಂಬುದೂ ಇಲ್ಲಿ ಗೊತ್ತಾಗುತ್ತದೆ. ಗೋವೆಯ ಗಡಿಯ ಅವಿಧ್ಧ ಕರ್ಣನ ಉದ್ಧಟತನ ದೇಶದ ಗಡಿಭದ್ರತೆಗೆ ಸಂಬಂಧಿಸಿದ್ದು, ಇಲ್ಲೂ ನಾಯಕನ ಪರಾಕ್ರಮ ಅಪ್ರತಿಮವಾಗಿ ಮೆರೆದಿದೆ. ಹೀಗೆ ದೃಷ್ಟಾಂತಗಳು ಪರಾಕ್ರಮದ ವೈಭವೀಕರಣಕ್ಕೆ ಒದಗಿ ಬರುವ ಸಂಗತಿ ಮಾತ್ರವಾಗುತ್ತವೆಯೇ ಹೊರತು ವ್ಯಕ್ತಿತ್ವದ ಒಳಗನ್ನು ಒರೆಗೆ ಹಚ್ಚುವ ಧಾತು ಮೂಲಗಳಾಗಿ ಅರಳಿಲ್ಲ. ಪರಾಕ್ರಮ ಮತ್ತು ವೈರಾಗ್ಯ ಇವೆರಡೂ ದ್ವಂದ್ವಾತ್ಮಕವಾದ ಸ್ಥಿತಿಯಲ್ಲಿ ದೊಡ್ಡಸಂಕಣ್ಣನಾಯಕನ ವ್ಯಕ್ತಿತ್ವವನ್ನು ರೂಪಿಸಬೇಕಾದ ಸಂಘರ್ಷಾತ್ಮಕ ಭಾವಸ್ಥಿತಿಗಳು. ಆದರೆ ಎಲ್ಲೂ ಈ ಸಂಘರ್ಷ ಜೀವಗುಣ ಕಾಣಿಸುವ ಸಹಜ ಮನೋಧರ್ಮವಾಗಿ ಮುಖಾಮುಖಿಯಾಗಿಲ್ಲ. ಯುದ್ಧ ಬೇಟೆ ಧಾರ್ಮಿಕ ಆಚಾರ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಹೇಳಿಕೆಯ ರೀತಿಯ ನಿರೂಪಣೆ ಇದೆಯೇ ಹೊರತು ಈ ಸಂಗತಿಗಳು ವಸ್ತುವಿನಲ್ಲಿ ತುಂಬಿಕೊಂಡ ರಕ್ತಮಾಂಸಗಳಾಗಿ ವರ್ಣನೆಗೊಂಡಿಲ್ಲ. ಇಲ್ಲಿಯ ಕಥೆ ಆತುರಗತಿಯ ಹೇಳುವಿಕೆಯಲ್ಲಿ ಸಂಗ್ರಹಿತವಾದಂತೆ ಕೇಳುತ್ತದೆ. ವ್ಯಕ್ತಿ ಮತ್ತು ಸಮಷ್ಟಿಯ ಬದುಕನ್ನು ಪರಿಸರಬದ್ಧ ನಿಜದಲ್ಲಿ ಆಗಿಸಿಲ್ಲ. ಆದರೆ ರುದ್ರಾರಾಧ್ಯರ ಸಾವಿನ ಸಂದರ್ಭ ಮತ್ತು ನಂತರದ ಘಟನೆಗಳ ಕಥಾನಕ ಸಂಕೀರ್ಣ ಸ್ವರೂಪದಲ್ಲಿ ಬೆಳವಣಿಗೆ ಪಡೆದಿದೆ.

ರುದ್ರಾರಾಧ್ಯರ ಸಾವಿಗೆ ಮುನ್ನ ದೊಡ್ಡಸಂಕಣ್ಣನಾಯಕ ಕಂಡ ಕನಸು ಅರ್ಥಗರ್ಭಿತವಾಗಿದೆ ; ಅವರಿಬ್ಬರ ನಡುವೆ ಹಬ್ಬಿ ಬೆಳೆದಿದ್ದ ಭಾವದಿವ್ಯತೆಯ ಪ್ರತೀಕ ದಂತಿದೆ. ಇಲ್ಲಿಂದ ಮುಂದೆ ದೊಡ್ಡ ಸಂಕಣ್ಣ ನಾಯಕನ ಬಾಳಿನಲ್ಲಿ ಆಗುವ ಬದಲಾವಣೆ ಅವನ ಬಾಳಿನ ಬಹು ಮುಖ್ಯ ಘಟ್ಟ. ಅವನ ಮನಸ್ಸಿನಾಳದಲ್ಲಿ ಮನೆಮಾಡಿಕೊಂಡಿದ್ದ ಸನ್ಯಾಸತ್ವದ ಸೆಳೆತ ಕಾಡಿಸತೊಡಗುತ್ತದೆ. ರುದ್ರಾರಾಧ್ಯರ ಸಾವು ಬದುಕಿನ ನಶ್ವರತೆಯ ಬಗ್ಗೆ ಎಚ್ಚರಿಸುತ್ತದೆ. ಸಾಯುವ ಮುನ್ನ ಆರಾಧ್ಯರು ಹೇಳಿದ್ದ ಮಾತುಗಳು ಕೂಡ ಈ ಚಿಂತನೆಗೆ ಪ್ರೇರಣೆ ನೀಡುತ್ತವೆ. ತಾತನವರ ಮುದ್ದು ಮೊಲವನ್ನು ನಾಯಿ ಹಿಡಿದು ರಕ್ತ ಚೆಲ್ಲಾಡಿದ ದೃಶ್ಯ ಶಾಂತಿ-ಹಿಂಸೆಗಳ ನಡುವಿನ ನೇರ ಸಂಘರ್ಷಕ್ಕೆ ಕಾರಣವಾಗುತ್ತದೆ. ಧರ್ಮ ಸಂಸ್ಥಾಪನಾರ್ಥವಾಗಿ ಅದುವರೆಗೆ ನಡೆಸಿದ ಯುದ್ಧಗಳ ಬಗ್ಗೆ ಕೂಡ ನಾಯಕನ ಪರಾಮರ್ಶೆ ಪ್ರಾರಂಭವಾಗುತ್ತದೆ. ಲೌಕಿಕದ ಮೋಹ ಈ ಎಲ್ಲ ಕೃತ್ಯಗಳ ಕಡೆಗೆ ಅನಿವಾರ್ಯವಾಗಿ ಕಟ್ಟಿಹಾಕುತ್ತದೆಂಬ ಆಲೋಚನೆ ಮೂಡಿದ್ದೇ ನಾಯಕ ಯಾತ್ರಾರ್ಥಿಯಾಗುತ್ತಾನೆ. ಗುರು ರುದ್ರಾರಾಧ್ಯರು ಮನೆಬಿಟ್ಟು ಹೋದ ರೀತಿಗೂ ನಾಯಕ ಯತ್ರಾರ್ಥಿಯಾಗಿ ಹೋಗುತ್ತಿರುವ ರೀತಿಗೂ ಸಾಂದರ್ಭಿಕ ವ್ಯತ್ಯಾಸಗಳು ಮೇಲ್ನೋಟಕ್ಕೆ ಭಿನ್ನವೆಂಬಂತೆ ಕಂಡರೂ ಅವುಗಳ ವ್ಯತ್ಯಯದಲ್ಲಿಯೇ ಅನುಭವ ಪರಿಣಾಮದ ಗತಿತಾರ್ಕಿಕ ಗುಣ ಈ ನಡೆಗಳಲ್ಲಿ ಅಂತರ್ಗತವಾಗಿದೆ. ನಾಯಕನ ತಾಯಿ ಭದ್ರವ್ವೆ ತಾನು ತೀರ್ಥಯಾತ್ರೆಗೆ ಹೋಗಲು ಇಷ್ಟಪಡದೆ "ಎಂದು ಅವರು ಕಣ್ಮುಚ್ಚಿ ಈ ನೆಲದಲ್ಲಿ ಸಮಾಧಿ ಸಿಂತರೋ ಅಂದಿನಿಂದ ನನಗೆ ಇದೇ ಪುಣ್ಯಕ್ಷೇತ್ರ. ಇಲ್ಲಿಯೇ ನನಗೆ ಭಗವಂತನ ದರ್ಶನ. ಕಾಶಿರಾಮೇಶ್ವರ, ಬದರಿ ಕೇದಾರ, ಎಲ್ಲವೂ ಇಕ್ಕೇರಿಯೇ" ಎಂದು ಹೇಳುವ ಮಾತುಗಳು

ಕೂಡ ಇಲ್ಲಿ ಮನಸೀಯ. ಈ ಮೂರು ಪಾತ್ರಗಳ ನಡೆಯಲ್ಲಿನ ವ್ಯತ್ಯಾಸ ಬದುಕನ್ನು ಗ್ರಹಿಸಿದ ಮನಸ್ಸುಗಳ ಅನನ್ಯತೆಯನ್ನು ಮನಗಾಣಿಸುತ್ತದೆ. ಹೀಗೆ ಒಂದೇ ವಿಚಾರದ ಬಗ್ಗೆ ಮೂರು ನೆಲೆಮೂಲದ ಮನಸ್ಸುಗಳ ನಡೆಗಳನ್ನು ಅನುಭವದ ಅನನ್ಯತೆಯಲ್ಲಿ ಚಿತ್ರಿಸಿರುವ ರೀತಿ ವಿಶಿಷ್ಟವಾಗಿದೆ.

ತೀರ್ಥಯಾತ್ರೆಯ ಅನುಭವ ವರ್ಣನಾಪೂರ್ಣವಾದ ವಿವರಗಳೊಂದಿಗೆ ಮೂಡಿಬಂದಿದೆ. ಅನುಭವ ಮಾತ್ರ ಇಂಥ ಸಹಜ ಚಿತ್ರವನ್ನು ಕಟ್ಟಿಕೊಡಲು ಸಾಧ್ಯ. ಕಾದಂಬರಿಯುದ್ದಕ್ಕೂ ಮತೀಯ ಮೋಹವಾಗಿ ಹರಿದಿರುವ ಹಿಂದೂ ಧಾರ್ಮಿಕ ಪ್ರಜ್ಞೆ ಇಲ್ಲಿಯೂ ಮುಂದುವರಿದ ಭಾವವಾಗಿದೆ.

"ದಕ್ಷಿಣದ ಗೋಪುರ ಕೋಟೆ ಕೊತ್ತಳಗಳು ಭಕ್ತಿ ಶಕ್ತಿಗಳ ಸಾಮರಸ್ಯದ ಕುರುಹಾಗಿ ಕಂಡಿತು. ದೇವಾಲಯಗಳಲ್ಲಿ ಹೊಮ್ಮುವ ಭಕ್ತಿಗೆ ಕೋಟೆ ಕೊತ್ತಳಗಳ ರಕ್ಷಣೆ ಅತ್ಯಗತ್ಯವೆಂಬುದು ಹಿಂದಿನವರ ಬದುಕಿನಿಂದ ಮೂಡಿಬಂದ ಅನುಭವದ ಅರಿವಾಯಿತು. ಹೃದಯದಲ್ಲಿ ಅನ್ಯ ಬಯಕೆಗಳ ಭಕ್ತಿಯೊಂದೇ ನೆಲೆಗೊಂಡಿತು." (ಪುಟ ೯೩)

"ಕುರುಕ್ಷೇತ್ರ ತಲುಪಿದನು. ಅದು ಪುರಾಣ ಪ್ರಸಿದ್ಧವಾದ ಸ್ಥಳ. ಧರ್ಮಾಧರ್ಮಗಳ ಹೋರಾಟದಲ್ಲಿ ನೆತ್ತರು ಹರಿದು ಹೆಪ್ಪುಗಟ್ಟಿ ಇಂದೂ ಕೆಂಪು ಕಾಣುತ್ತಿರುವ ವೀರಧರ್ಮಯೋಗ ಕ್ಷೇತ್ರ" (ಪುಟ ೯೩) ಕನ್ನಡ ಸನ್ಯಾಸಿ ಕೇಳಿದ ಮೂರು ಪ್ರಶ್ನೆಗಳು ಸನ್ಯಾಸಿಯೊಬ್ಬ ನಡೆಯುವ ಸಾಧನೆಯ ನಿಜಮಾರ್ಗವನ್ನು ನಿರ್ದೇಶಿಸಿದಂತಿದ್ದರೆ, ದೊಡ್ಡಸಂಕಣ್ಣನಾಯಕ ಈ ನಿಜಮಾರ್ಗದಲ್ಲಿ ಎಲ್ಲ ಬಿಟ್ಟರೂ ಮತೀಯ ಮೋಹ ಬಿಡದವನಾಗಿ ಚಿತ್ರಿತವಾಗಿದ್ದಾನೆ. ಈ ಮಿತಿಗೆ ಕಾರಣ ಸ್ವಾತಂತ್ರ್ಯಪೂರ್ವದಲ್ಲಿ ಪ್ರಭಾವಿಸಿದ ದೇಶಧರ್ಮದ ಬಗೆಗಿನ ಅದ್ವಿತಾರಿಕ ಆರಾಧನಾ ಸ್ಥಿತಿ. ಸೂಫಿಸಂತರು ಪ್ರಭುಶಾಹಿಯನ್ನು ಹೇಗೆ ವಿರೋಧಿಸಿದರು ಎಂಬುದು ಅಧ್ಯಯನದಿಂದ ವ್ಯಕ್ತವಾಗುವ ಸತ್ಯ. ಆದರೆ ನಾಯಕನಲ್ಲಿ ಈ ಸಂತಗುಣಕ್ಕಿಂತ ಸಾಧುವೇಶದಲ್ಲಿದ್ದರೂ ಕ್ಷಾತ್ರಗುಣವೇ ಮೆರೆಯುತ್ತದೆ. ವೀರಸನ್ಯಾಸಿ ಎನಿಸಿಕೊಂಡಿದ್ದ ವಿವೇಕಾನಂದರು ದೇಶರಕ್ಷಣೆಯ ಬಗ್ಗೆ ನೀಡಿದ ಕ್ಷಾತ್ರೋದ್ದೀಪಿತ ಹೇಳಿಕೆರೂಪದ ಕರೆಕೂಡ ಇಂಥ ಚಿತ್ರನಿರ್ಮಾಣದ ಹಿಂದಿನ ಪ್ರಭಾವೀ ಶಕ್ತಿಯಾಗಿರುವುದು ಸತ್ಯ. ಅದೇ ಕಾಲದಲ್ಲಿ ಬದುಕಿದ್ದ ಅನುಭಾವಿ ಪಂಥದ ಯಾವ ಸಂತನಲ್ಲೂ ಇಂಥ ಕ್ಷಾತ್ರ ಮೆರೆದದ್ದಿಲ್ಲ. ಎಲ್ಲ ಧರ್ಮಗಳ ಬಗೆಗೆ ಎಲ್ಲ ಮತೀಯ ಜಾತೀಯ ಜನರ ಬಗೆಗೆ ಅವರ ದೃಷ್ಟಿ ದ್ವೇಷ ಭಾವಕ್ಕಿಂತ ಪ್ರೀತಿ ಸಾಮರಸ್ಯದ ಶುದ್ಧಧಾರ್ಮಿಕ ಶೋಧನೆಯ ಮೂಲದ್ದಾಗಿತ್ತು.

ಅಂಕುಶಖಾನ ಮತ್ತು ಅಕ್ಬರರ ನಡುವಿನ ಸಂವಾದ ಅಕ್ಬರನ ಹಿರಿಯ ಗುಣಗಳನ್ನು ಕಾಣಿಸುತ್ತದೆ. ಅಂಕುಶಖಾನನ ಮತಾಂಧಮನಸ್ಸನ್ನು ಬಿಚ್ಚಿಡುತ್ತದೆ. ಅಕ್ಬರ ಚಕ್ರವರ್ತಿ ಸನ್ಯಾಸಿದೊಡ್ಡ ಸಂಕಣ್ಣನಾಯಕನನ್ನು ನಡೆಸಿಕೊಳ್ಳುವ ರೀತಿ ಅವನ ವ್ಯಕ್ತಿತ್ವದ ಔನ್ನತ್ಯವನ್ನು ಮನಗಾಣಿಸುತ್ತದೆ. ಅಕ್ಬರನ ಪಾತ್ರ ಚಿಕ್ಕದಾದ ಪ್ರಸಂಗವೊಂದರಲ್ಲಿ ಪ್ರಾಸಂಗಿಕವಾಗಿ ಪ್ರಸ್ತಾಪಿತವಾಗಿದ್ದರೂ ಅವನ ಧಾರ್ಮಿಕ ಸಹಿಷ್ಣುತೆಯ ಭಾವಸಿರಿಯನ್ನು ಆಪ್ತವಾಗಿ ಮನಗಾಣಿಸುತ್ತದೆ.

ದೊಡ್ಡ ಸಂಕಣ್ಣ ನಾಯಕನ ತೀರ್ಥಯಾತ್ರೆ ಕೇವಲ ಆತ್ಮಾನುಭೂತಿಯ ಯಾತ್ರೆಯಾಗದೆ ಆತ್ಮಶ್ರೀಯನ್ನು ಮೆರೆದ ಜೈತ್ರಯಾತ್ರೆಯೂ ಆಗಿದೆ. ಆದರೆ ಈ ಎರಡೂ ನೆಲೆಯ ಅನುಭವಗಳನ್ನು ನಿರೂಪಿಸುವಾಗ ಘಟನೆಗಳು ಹೊರ ಆವರಣಗಳಾಗಿ ಕಥೆಯ ಕೇವಲ ಕ್ರಿಯೆಗಳಾಗಿ ಬೆಳೆಯುತ್ತವೆ. ಪಾತ್ರದ ವ್ಯಕ್ತಿತ್ವವನ್ನು ಜೀವಂತಗೊಳಿಸಿದಂತೆ ಮನಸ್ಸಿನ ಒಳತೋಟಿಯಲ್ಲಿ ಚಿಂತನಾಮುಖಿಯಾದ ಯಾವುದೇ ಸಂಘರ್ಷ ಏರ್ಪಡುವುದಿಲ್ಲ. ಯಾತ್ರೆಯ ವಿವರ ಪ್ರಾದೇಶಿಕ ವಿವರಗಳಾಗಿ ಸಂಗತಿಗಳ ಸರಮಾಲೆಯಾಗಿ ಬೆಳೆಯುತ್ತದೆಯೇ ಹೊರತು ಪಾತ್ರದ ವಿಕಸನ ಸ್ಥಿತಿಗೆ ಅಗತ್ಯವಾದ ಒಳಮುಖೀ ಕರ್ಷಣತ್ವವನ್ನು ಪಡೆಯುವುದಿಲ್ಲ. ಹೀಗಿರುವುದರಿಂದಲೇ ಸಂಕಣ್ಣನ ಜೊತೆಯಲ್ಲಿ ಬಂದ ಬೆಂಗಾವಲವರು ಕೇವಲ ನೆನಪಿನ ಅನಾಮಿಕರಾಗಿ ಇದ್ದಾರೆ. ಅವರ ಜೊತೆಯಲ್ಲಿ ಬಹುತೇಕ ಭರತಖಂಡವನ್ನು ಸುತ್ತಿದ ನಾಯಕನ ಅನುಭವದಲ್ಲಿ ಅವನ ಜೊತೆಯವರ ಬಗ್ಗೆ ಬೆಳೆದ ಆಪ್ತತೆಯ ಒಂದು ಸನ್ನಿವೇಶವೂ ಕಾಣುವುದಿಲ್ಲ. ಕೆಲವು ಸನ್ನಿವೇಶಗಳಲ್ಲಿ ಸಾಮಾನ್ಯತಾ ಮನುಷ್ಯನಂತೆ ಸಾಮಂತ ಸಂಕಣ್ಣ ನಡೆದು ಕೊಂಡರೂ ಅವನ ಬೆಂಗಾವಲವರ ವೈಯಕ್ತಿಕ ಬದುಕಿನ ಇಷ್ಟಾನಿಷ್ಟಗಳ ಕಷ್ಟಕಾರ್ಪಣ್ಯಗಳ ಬಗ್ಗೆ ಆ ಭಾವ ಹೇಗೆ ಪ್ರತಿಕ್ರಿಯಿಸಿತು ಎಂಬುದು ಎಲ್ಲೂ ವ್ಯಕ್ತವಾಗುವುದಿಲ್ಲ. ಉತ್ತರಭಾರತದ ಹಲವು ಕಡೆ ಜಂಗಮ ಮಠಗಳನ್ನು ಕಟ್ಟಿಸಿದ್ದು ಕಾಶಿಯಲ್ಲಿ ಜಂಗಮಮಠದ ಜೊತೆಗೆ ಜಂಗಮ ಪುರವನ್ನು ಕಟ್ಟಿಸಿದ್ದು ಸಂಕಣ್ಣನಾಯಕನ ಜೈತ್ರಯಾತ್ರೆಯ ಹಿಂದಿನ ಧಾರ್ಮಿಕ ಸ್ಥಾವರ ಪರ ಭಾವಸ್ಥಿತಿಯನ್ನು ಕಾಣಿಸುತ್ತದೆ. ಯಾತ್ರೆಯಿಂದ ಹಿಂದಿರುಗುವ ಹೊತ್ತಿಗೆ 'ದೊಡ್ಡಸಂಕಣ್ಣ ನಾಯಕ ಭಕ್ತಿಯ ನಾಯಕನಾಗಿದ್ದನು. ಅವನ ಹೃದಯದಲ್ಲಿ ಮಡುಗಟ್ಟಿದ್ದ ಶತ್ರುಗಳ ದ್ವೇಷದ ನೆತ್ತರ ಕಟ್ಟೆಯೊಡೆದು ಬರಿದಾಗಿ ಅದಕ್ಕೆ ಬದಲಾಗಿ ಭಕ್ತಿ ಹೆಪ್ಪುಗಟ್ಟಿತ್ತು." (ಪುಟ ೧೨೪) ಹೀಗಾಗಿ ಮತೀಯ ಚೌಕಟ್ಟಿನ ಮಿತಿಯಲ್ಲಿ ಯಾತ್ರೆಗೆ ತೊಡಗಿದ ಮನಸ್ಸೊಂದು 'ಹೋದ ಪುಟ್ಟ ಬಂದ ಪುಟ್ಟ' ಎಂಬ ಸ್ಥಿತಿಯಲ್ಲಿ ಇದ್ದ ಭಾವ ಇದ್ದಂತೆ ಸ್ಥಾವರ ಆರಾಧಕ ಭಾವಸ್ಥಿತಿಯಲ್ಲಿ ಬಂದದ್ದಾಗಿದೆ. ಮಾನಸಿಕ ಬೆಳವಣಿಗೆಯ ಪರಿಪಕ್ವತೆಯಲ್ಲಿ ಆಧ್ಯಾತ್ಮಿಕ ಹಸಿವಿನ ಹಂಬಲದ ಅನ್ವೇಷಣೆಯಲ್ಲಿ ಆದ ಜಂಗಮ ನಡೆ ಇದಲ್ಲ. ಇಕ್ಕೇರಿಗೆ ಹಿಂದಿರುಗಿದ ಸಂಕಣ್ಣ ತಮ್ಮನಿಗೆ ಕಿರೀಟವನ್ನು ನಡುಬೀದಿಯಲ್ಲಿ ತೊಡಿಸಿ ಸಿಂಹಾಸನವನ್ನು ಒಪ್ಪಿಸುವ ಪ್ರಸಂಗ ದೊಡ್ಡಸಂಕಣ್ಣನಾಯಕನ ಉದಾತ್ತ ಗುಣಕ್ಕೆ ತ್ಯಾಗಭಾವಕ್ಕೆ ಹಿಡಿದ ಕನ್ನಡಿಯಾಗಿದೆ. ಆದರೆ ಇಲ್ಲಿಯ ತ್ಯಾಗ ಯುದ್ಧ ವಿರೋಧಿ ಗುಣಾತ್ಮಕ ವ್ಯಾಪ್ತಿಯ ಆಶಯವಾಗಿ ವ್ಯಂಜಿತವಾಗುವುದಿಲ್ಲ. ಅಣ್ಣ ತನ್ನ ತಮ್ಮನಿಗೆ ರಾಜ್ಯ ಒಪ್ಪಿಸಿದ ತ್ಯಾಗ ಪ್ರಸಂಗವಾಗುತ್ತದೆ. ಜೈನಕಾವ್ಯಗಳು ವ್ಯಂಗ್ಯಾತ್ಮಕ ನೆಲೆಯಲ್ಲಿ ಕಾಣಿಸುವ ಅಹಿಂಸಾಪರ ನಡೆಯಾಗಲಿ ಶಾಂತಿಪರ ಭಾವವಾಗಲಿ ಕಾದಂಬರಿಯಲ್ಲಿ ವಸ್ತುಧ್ವನಿಯಾಗಿ ಮೂಡುವುದಿಲ್ಲ. "ಕಾವಿಯ ಕೈಯಲ್ಲಿ ಕತ್ತಿಯೊಂದು ಮುಕ್ತಿಯ ಶಕ್ತಿ. ಇದೇ ಭಾರತೀಯ ಸಂಸ್ಕೃತಿ"- ಎಂಬ ಪೂರ್ವಗ್ರಹ ಭಾವಸ್ಥಿತಿಗೆ ಪೂರ್ಣವಾಗಿ ಒಪ್ಪಿಸಿಕೊಂಡ ರಚನೆಯಾಗಿ ದೊಡ್ಡಸಂಕಣ್ಣನಾಯಕ ಕಾದಂಬರಿ ನಿರೂಪಿತವಾಗಿದೆ. ಚರಿತ್ರೆಯ ಪುಟಗಳಲ್ಲಿ ಪ್ರಧಾನಧಾರೆಯಲ್ಲಿರದ ಸಾಮಂತ ರಾಜನೊಬ್ಬನನ್ನು ಕುರಿತು ಇರುವ ಅತ್ಯಲ್ಪ ಮಾಹಿತಿಗಳ ನೆರವಿನಿಂದ ಇಂಥ ಒಂದು ಕಾದಂಬರಿ ರಚಿಸಿರುವುದೇ ಹೆಗ್ಗಳಿಕೆಯ ಸಂಗತಿ. ♦

3. ಮರುಚಿಂತನೆಗೆ ಪ್ರತಿಕ್ರಿಯೆ

ಡಾ|| ಎಲ್.ಎಸ್. ಶೇಷಗಿರಿರಾವ್

ಭಾಗ-I ನಾನು ಓದಿದ ಪುಸ್ತಕ

ಈಚೆಗೆ ನಾನು ಓದಿದ ಪುಸ್ತಕಗಳಲ್ಲಿ ಒಂದನ್ನು ಇತರ ಓದುಗರಿಗೂ ಪರಿಚಯ ಮಾಡಿಕೊಡಬೇಕೆನ್ನಿಸುತ್ತದೆ.

ಪ್ರೊ|| ಕೆ.ಜಿ. ನಾಗರಾಜಪ್ಪನವರ 'ಮರುಚಿಂತನ' ಆರು ಪ್ರಬಂಧಗಳ ಸಂಗ್ರಹ. ಕೊನೆಯದು, "ನಾಮಧಾರಿ ಲಿಂಗಾಯಿತರು: ನೆಲೆ, ಹಿನ್ನೆಲೆ" ಅರವತ್ತು ಪುಟಗಳನ್ನು ಮೀರಿದ್ದು, "ನಾಮಧಾರಿ ಲಿಂಗಾಯಿತರ ಅಧ್ಯಯನ ಕರ್ನಾಟಕ ಸಂಸ್ಕೃತಿ ಅಧ್ಯಯನಕ್ಕೆ ಒಂದು ವಿಶೇಷ ಕಾಣಿಕೆಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ" ಎನ್ನುತ್ತಾರೆ ಲೇಖಕರು. "ಶಿವಭಕ್ತರಾಗಿದ್ದು ವಿಷ್ಣು ಪೂಜೆಯನ್ನು ಮಾಡುವವರೇ ನಾಮಧಾರಿ ಲಿಂಗಾಯಿತರು." ನಾಗರಾಜಪ್ಪನವರು ಈ ಗುಂಪಿನ ವಿಷಯ ಕೊಡುವ ವಿವರಗಳು ಬಹಳ ಕುತೂಹಲಕರ. "ನಾಮಧಾರಿ ಲಿಂಗಾಯಿತರು ವೀರಶೈವ ಧಾರ್ಮಿಕ ವಿಧಿಗೆ ಅನುಗುಣವಾಗಿ ದೀಕ್ಷಾಬದ್ಧರಾಗಿದ್ದು, ದೇಹದ ಮೇಲೆ ಲಿಂಗಧರಿಸಿ, ಭಕ್ತದೇಹಕ ದೇಹಿಗಳಾಗಿರುತ್ತಾರೆಯೇ ಹೊರತು ವಿಷ್ಣುಭಕ್ತಿ ಸಂಪ್ರದಾಯದ ಜನಿವಾರವನ್ನು ಧರಿಸಿರುವುದಿಲ್ಲ. ನಾಮಧಾರಿ ಲಿಂಗಾಯಿತರ ದೀಕ್ಷಾಪದ್ಧತಿ ವೀರಶೈವರದ್ದು, ಧಾರ್ಮಿಕ ಆಚರಣೆಯ ಪದ್ಧತಿ ಮಾತ್ರ ವಿಷ್ಣು ಪಂಥದ್ದು" ಹೀಗೆ ವಿವರಗಳನ್ನು ಕೊಡುತ್ತ ಪ್ರಬಂಧ, "ಹುಟ್ಟಿನಲ್ಲಿ ಯಾವ ಕೆಳವರ್ಗದವನೂ ಯಾವ ಮತದ ಪಂಥದ ತತ್ತ್ವ ಬೋಧನೆಯಿಂದಲೂ ಕೆಳವರ್ಗದಲ್ಲಿ ಇದ್ದ ಸ್ಥಿತಿಯಲ್ಲಿಯೇ ಸಿದ್ಧಿ ಪಡೆದು ಮುಕ್ತನಾಗುವುದು ಮಾತ್ರ ಸಾಧ್ಯವಿಲ್ಲ", ದೀಕ್ಷೆಯಿಂದ ಮತಾಂತರಿಯಾಗಿಯೊ ಹಲವು ಜನ್ಮಾಂತರದಿಂದಲೊ ತೀವ್ರ ಸಾಧನೆಯ ಫಲವಾಗಿ ಮಾತ್ರ ಶೂದ್ರನಾದವನು ಮುಕ್ತಿ ಪಡೆಯಬಹುದೇ ಹೊರತು ನೇರವಾಗಿ ತನ್ನ ಹುಟ್ಟಿನ ಜನ್ಮದಿಂದ ಅಂಥ ಜ್ಞಾನಕ್ಕೆ ಅರ್ಹನಾಗುವ ಹಕ್ಕನ್ನು ಮಾತ್ರ ಪಡೆಯುವಂತಿಲ್ಲ. ಶೂದ್ರರು ಸೇವೆಯಿಂದ ಮಾತ್ರ ಮುಕ್ತಿಗೆ ಅರ್ಹರು ಎಂದು ವೈದಿಕರ ವರ್ಣವ್ಯವಸ್ಥೆಯ ಸಿದ್ಧಾಂತದ ತತ್ತ್ವವಾದರೆ, ಶೂದ್ರರು ಮತಾಂತರದಿಂದ ಮಾತ್ರ ಬದುಕನ್ನು ಸಾರ್ಥಕ ಪಡಿಸಿಕೊಳ್ಳುವುದು ಎಂಬುದು ಸುಧಾರಿತ ಮತಗಳ ಬೋಧನೆಯ ಸಾರವಾಯಿತು. ವೈದಿಕಮತ ಶೂದ್ರರ ಸೇವೆಯನ್ನು ದೂರದಿಂದ ಬಯಸಿದರೆ ಸುಧಾರಿತ ಮತಗಳು ಹತ್ತಿರಕ್ಕೆ ಕರೆದು ಶೂದ್ರರಿಂದ ಕಾಲೊತ್ತಿಸಿಕೊಳ್ಳುವ ತಂತ್ರವನ್ನು ಅನುಸರಿಸಿದರು"ಮುಂತಾದ ನಿರ್ಣಯಗಳನ್ನು ಮುಂದಿಡುತ್ತದೆ. ಇಡೀ ಪ್ರಬಂಧ ಕುತೂಹಲಕರವಾಗಿದ್ದು, ಆಳವಾಗಿ ಹಿಂದೂ ಸಮಾಜವನ್ನು ಅಧ್ಯಯನ ಮಾಡಿದವರು ಇದನ್ನು ವಿಮರ್ಶಿಸಲು ಸಾಧ್ಯ.

ಉಳಿದ ಐದು ಪ್ರಬಂಧಗಳು ಇವು: "ಕಾವ್ಯ-ಹೊಸ ದೃಷ್ಟಿ ಹಳಗನ್ನಡ-ನಡುಗನ್ನಡ," ಅಲ್ಲಮನ ವಚನದ ಒಂದು ಅರ್ಥ", "ಶರಣರು ಏಕಮುಖದ ಚಿಂತಕರು", 'ವೀರಶೈವ ಧರ್ಮ ಮತ್ತು ಕನ್ನಡ ಸಾಹಿತ್ಯ,' ಮತ್ತು 'ಕನಕದಾಸರ ಕೀರ್ತನೆಗಳು'. ಮುಖ್ಯವಾಗಿ ಸಮಾಜ ಶಾಸ್ತ್ರೀಯ ದೃಷ್ಟಿಯಿಂದ ಸಾಹಿತ್ಯವನ್ನು ಅಧ್ಯಯನ ಮಾಡಿರುವ

ಪ್ರಬಂಧಗಳು ಇವು. ಕನ್ನಡ ಸಾಹಿತ್ಯವನ್ನು ವರ್ಗಗಳ ಸ್ಪರ್ಧೆಯ ಹಿನ್ನೆಲೆಯಲ್ಲಿಯೇ ನಾಗರಾಜಪ್ಪನವರು ವಿಶ್ಲೇಷಿಸುತ್ತಾರೆ. "ಕರ್ನಾಟಕದಲ್ಲಿ ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಜೀವನ ಉಚ್ಚ ವರ್ಗದ ಸರ್ವಾಧಿಕಾರಕ್ಕೆ ಒಳಗಾದಂತೆ, ಸಾಹಿತ್ಯವೂ ಪ್ರತಿಷ್ಠಿತರಿಗೆ ಶರಣಾಗಿ ಕೆಳವರ್ಗದ ಸಂಸ್ಕೃತಿಯ ನಾಶಕ್ಕೆ ಕಾರಣವಾಯಿತು ಎಂಬುದು ಸಾಹಿತ್ಯ ಚರಿತ್ರೆಯ ವಸ್ತುನಿಷ್ಠ ಅಧ್ಯಯನದಿಂದ ಸ್ಪಷ್ಟವಾಗುತ್ತದೆ" ಎನ್ನುತ್ತಾರೆ ಅವರು. ವೈದಿಕಮತದಿಂದ ಬೇರೆಯಾಗಿ ಹುಟ್ಟಿಕೊಂಡ ಮತಗಳು ಕೆಳವರ್ಗದವರನ್ನು ಹಾಗೆಯೇ ಸ್ವೀಕರಿಸಲು ಸಿದ್ಧವಾಗಿರಲಿಲ್ಲ ಎನ್ನುತ್ತ "ಕೆಳವರ್ಗದ ಬದುಕಿಗೆ ಬೆನ್ನು ತಿರುಗಿಸಿ, ಅವರ ಬದುಕನ್ನು ತಬ್ಬದ ಉಚ್ಚವರ್ಗದ ಜಾತಿಯ ಸಂಕುಚಿತ ಸೂತ್ರಗಳೇ ವಿಶ್ವಧರ್ಮಗಳಾಗಿ ಕಲೆಯ ಸ್ವರೂಪ ತಾಳಿ ಕನ್ನಡ ಸಾಹಿತ್ಯ ರಚನೆಯಾಯಿತು" ಎನ್ನುತ್ತಾರೆ. "ಕೆಳವರ್ಗದ ಸಂಸ್ಕೃತಿಯ ಉತ್ತಮ ಮೌಲ್ಯಗಳಿಗೆ ಬಾಧ್ಯಸ್ಥನಾಗುವುದು ಅವಮಾನಕರವಲ್ಲ ಎಂಬುದು ನನ್ನ ವಾದ" ಎಂದು ಹೇಳಿ, ಇಂದು ಶೂದ್ರ ಬರಹಗಾರರ ಹೃದಯ ಸಂಸ್ಕೃತೀಕರಣದತ್ತ ತುಡಿಯುತ್ತಿರುವುದನ್ನು ಪ್ರಸ್ತಾಪಿಸಿ, ಇದು "ಕೆಳವರ್ಗದ ಸಂಸ್ಕೃತಿಗೆ ಬಗೆದ ಆತ್ಮವಂಚನೆಯಾಗುತ್ತದೆ" ಎಂದು ತೀರ್ಮಾನಿಸಿದ್ದಾರೆ.

ಇಲ್ಲಿನ ಸಾಹಿತ್ಯ ವಿಶ್ಲೇಷಣೆಗೆ ಈ ದೃಷ್ಟಿಯೇ ಬೆಳಕನ್ನು ನೀಡಿದೆ. ಕ್ರಿ.ಶ. 900-1900 ರ ಕನ್ನಡ ಸಾಹಿತ್ಯವನ್ನು ಸ್ಥೂಲವಾಗಿ ವಿಮರ್ಶಿಸುತ್ತ, "ಕನ್ನಡ ಭಾಷೆಯಲ್ಲಿ ವಿವಿಧ ಸಂಸ್ಕೃತಿಗಳು ಅಭಿವ್ಯಕ್ತಗೊಂಡಿವೆಯೇ ಹೊರತು ಕನ್ನಡ ಸಂಸ್ಕೃತಿಯ ಮೂಲ ನಾಡಿ ಬಡಿತವನ್ನು ಮಾತ್ರ ಸಾಹಿತ್ಯದಲ್ಲಿ ಗುರುತಿಸುವ ಪ್ರಯತ್ನ ಎಂದೂ ನಡೆದಿಲ್ಲ" ಎನ್ನುತ್ತಾರೆ. ಶಿವಶರಣರು ವಿರೋಧಿಸಿದ ವೈದಿಕ ಮತ್ತು ಜೈನ ಪುರಾಣಗಳ ಅನುಕರಣೆಯನ್ನು ವೀರಶೈವ ಕವಿಗಳು ಯಾವ ಮುಚ್ಚು ಮರೆಯಿಲ್ಲದೆ ಮಾಡಿದರು ಎಂದು ಹೇಳುತ್ತಾರೆ. "ಕನಕದಾಸ ಒಬ್ಬ ಶೂದ್ರಬ್ರಾಹ್ಮಣ ಎಂದರೆ ತಪ್ಪಿಲ್ಲ........ ಭಾಷೆಯ ದೃಷ್ಟಿಯಿಂದ ನಾರಣಪ್ಪನನ್ನು ಬ್ರಾಹ್ಮಣ ಶೂದ್ರನೆಂದರೆ ತಪ್ಪಾಗಲಾರದು."

ನಾಗರಾಜಪ್ಪನವರ ವಿಚಾರವೈಖರಿ ಎಷ್ಟು ಹೊಚ್ಚ ಹೊಸದು, ನಮ್ಮನ್ನು ತಿವಿದು ಎಬ್ಬಿಸುವಂತಹದು, ನಾವು ಸಾಮಾನ್ಯವಾಗಿ ಸ್ವೀಕರಿಸಿದ ಅಭಿಪ್ರಾಯಗಳನ್ನು ಬೇರಿನವರೆಗೆ ಶೋಧಿಸಿ ನೋಡುವಂತೆ ಮಾಡಬಲ್ಲದು ಎನ್ನುವುದಕ್ಕೆ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಟ್ಟಿದ್ದೇನೆ. ಪುಸ್ತಕ ಬಿಡುಗಡೆಯಾದ ಸಂದರ್ಭದಲ್ಲಿ ಒಬ್ಬ ಭಾಷಣಕಾರರು ಹೇಳಿದ ಒಂದು ಮಾತನ್ನು ಇಲ್ಲಿ ನೆನಪು ಮಾಡಿಕೊಳ್ಳಬೇಕು. ನಾಗರಾಜಪ್ಪನವರು ಯಾವುದೇ ಒಂದು ಕಾಲದ ಸಮಾಜದ ಸ್ಥಿತಿಯನ್ನು ಕಲ್ಪಿಸಿಕೊಳ್ಳಲು ಆ ಕಾಲದ ಸಾಹಿತ್ಯವನ್ನು ಆಧಾರವನ್ನಾಗಿ ಬಳಸಿಕೊಳ್ಳುತ್ತಾರೆ, ಅನಂತರ ಹಾಗೆ ಮುಟ್ಟಿದ ನಿರ್ಣಯಗಳನ್ನು ಆ ಸಾಹಿತ್ಯಕ್ಕೆ ಅನ್ವಯಿಸಿ ವ್ಯಾಖ್ಯಾನ ಮಾಡುತ್ತಾರೆ. ಇದು ಎಷ್ಟರಮಟ್ಟಿಗೆ ಒಪ್ಪಬಹುದಾದಂತಹ ವಿಧಾನ ಅಲ್ಲದೆ ನಾಗರಾಜಪ್ಪನವರು 'ಮೇಲ್ವರ್ಗದವರ ಸಂಚ'ನ್ನು ಕುರಿತು ಮಾತನಾಡುತ್ತಾರೆ. ವೈದಿಕರು, ವೀರಶೈವರು, ಜೈನರು ಇವರಲ್ಲಿ ಪರಸ್ಪರ ಎಷ್ಟೇ ವಿರೋಧವಿದ್ದರೂ ಶೂದ್ರರ ವಿರುದ್ಧ ಒಂದಾಗಿ ಸಂಚು ಮಾಡಿದರು ಎನ್ನುತ್ತಾರೆ. ಅವರೆಲ್ಲರ ಮನಸ್ಸುಗಳು ಒಂದೇ ರೀತಿ ಕೆಲಸ ಮಾಡಿದವು ಎನ್ನುವುದು ಒಂದು ಮಾತು, ಅವರೆಲ್ಲ ಸಂಚು ಮಾಡಿದರು

ಎನ್ನುವುದು ಬೇರೆ ಮಾತು. ಈ 'ಸಂಚಿ'ನ ಅಭಿಪ್ರಾಯಕ್ಕೆ ಆಧಾರವೇನನ್ನೂ ಅವರು ಕೊಡುವುದಿಲ್ಲ. ಜೊತೆಗೆ, ಅವರ ಒಂದು ಆಕ್ಷೇಪಣೆ ಯಾವ ಧರ್ಮವೂ ಶೂದ್ರ ಶೂದ್ರನಾಗಿಯೆ ಉಳಿದು ತನ್ನ ಒಳ್ಳೆಯ ಜೀವನದಿಂದ ಮುಕ್ತಿ ಪಡೆಯಬಲ್ಲ ಎಂದು ಹೇಳಲಿಲ್ಲ, ಮತಾಂತರವಾಗಿಯೇ ಮುಕ್ತಿಗೆ ಅರ್ಹನಾಗಬಲ್ಲ ಎಂದೇ ಸಾರಿತು ಎನ್ನುವುದು. ಅವರಿಲ್ಲಿ ಮತಧರ್ಮದ ಸ್ವಭಾವವನ್ನೆ ಮರೆಯುತ್ತಿದ್ದಾರೆ. ಸಜ್ಜನರೆಲ್ಲ, ಅವರು ಯಾವುದೇ ಮತದಲ್ಲಿರಲಿ, ಮುಕ್ತಿ ಪಡೆಯುತ್ತಾರೆ ಎಂದು ಒಂದು ಮತಧರ್ಮ ಹೇಳಿದರೆ, ತಾನು ಪ್ರತ್ಯೇಕವಾಗಿ ಒಂದು ಮತ ಧರ್ಮವಾಗಿರುವ ಅಗತ್ಯವಿಲ್ಲ ಎಂದು ಹೇಳಿ ತನ್ನ ಅಸ್ತಿತ್ವದ ಬುಡಕ್ಕೆ ಕೊಡಲಿ ಇಟ್ಟಂತೆ. ಯಾವ ಮತಕ್ಕೆ ಸೇರಿರಲಿ ಸಜ್ಜನರೆಲ್ಲ ಮುಕ್ತಿ ಪಡೆಯುತ್ತಾರೆ ಎಂದು ಸಾರುವವನು ನೀತಿಮಾರ್ಗದರ್ಶಕನಾಗುತ್ತಾನೆ. ಮತಧರ್ಮದ ಆಚಾರ್ಯ ಪುರುಷ ಆಗುವುದಿಲ್ಲ.

ಪ್ರೊ. ನಾಗರಾಜಪ್ಪನವರ ಅಭಿಪ್ರಾಯಗಳಲ್ಲಿ ಹಲವನ್ನು ನಾವು ಒಪ್ಪದಿರಬಹುದು. ಆದರೆ ಈ ಪುಸ್ತಕವನ್ನು ಓದುವುದು ಓದುಗನಿಗೆ ಲಾಭದಾಯಕ ಎಂಬುದರಲ್ಲಿ ಅನುಮಾನವಿಲ್ಲ.

(ಕೃಪೆ: ಪ್ರಜಾಮತ, 1 ನೇ ಡಿಸೆಂಬರ್ 1985)

ಭಾಗ-II PROF. NAGARAJAPPA'S CONTROVERSIAL BOOK

A controversial book has just appeared-Prof. K.G. Nagarajappa's Maruchintance (Reconsideration), was released at a function in the City last week. The book has a collection of six essays. The last one, entitled **Naamadhaari Lingaayatharu,** is also the longest, but it is exclusively sociological, and describes the customs of a particular sect. Extremely interesting as the piece is, I must confess that I do not know enough about this sect to be able to comment on the essay.

But the essay fits into the pattern of the book because Prof. Nagarajappa's approach to literature is that of a Sociologist. In every essay he is interested in what the literature of an era or a school tells us about the economic and social pressures of the period and the reactions of the sects involved. He is interested in the flow of history and the forces at work in determing it.

This, in effect, means that the book studies literature as a source of information-information which it yields directly or by inference. Literary critieria is not indicated. In other words, if the essay concentrates on a particular vachana or keerthane or poem

it is for its sociological importance and not its literary quality. Not that Prof. Nagarajappa is not aware that literature has its own criteria; he is; but, in these essays at any rate, his interest is primarily that of the student of the evolution of society.

This is not to deny the importance of the book but to define its area of interest and relevance. Broadly, Prof. Nagarajappa's interpretation may be summed up as follows.

Hindu society in Karnataka has been wedded to the caste hierarchy and has been static. Protest movements like Jainism and Veerashaivism have ended up duplicating the very system against which they had revloted. The notion of a hierarchy became confirmed in another garb. The notion of the elect persisted. Thus, for example, Prof. Nagarajappa points out, Veerashaivism did not affirm that all good people will find salvation. No, even a good Brahmin or a good Holeya, had first to all to become a Veerashaiva before he could be eligible for salvation. In the course of his exposition of this thesis of the incorrigible love of the status quo, the author offers interesting evidence and also makes perceptive remarks, often entirely at odds with accepted views. He is fruitfully provocative. He feels that the higher castes have deluded the shudras in various ways, but always have ensured that the shudra remained where he was. My only regret is that limitations of space prevent me from quoting the author more extensively. Here are just a few to reflect the sharpness and insights of his observations: 'Different cultures have found expression in Kannada; it is sad that no attempt has ever been made to feel the pulse of Kannada culture itself': It would not be wrong to describe Kanakadaasa and a Shudra-Brahmana.......from the point of view of his language Naranappa (Kumaravyasa) can be described as a brahmana-shudra: "Though Kanakadaasa used folk tunes he did not give expression to the sensibilities of the common folk".

In reading this challenging book I believe certain considerations would be relevant, first of all, as Dr. K.V, Narayana pointed out at the function at which the book was released, we have to remember that the facts about contemporary society in the

light of which we seek to examine Jaina or Veerashaiva or Vaidika Literature are themselves derived from these works of literature. What picture of the contemporary society would have emerged if a considerable body of independent evidence were available, we do not know. Secondly, Nagarajappa repeatedly speaks of a 'conspiracy. He speaks, for example, of a secret conspiracy of the Brahmins and the Veerashaivas against the Jains. I find it difficult to accept this picture of a deliberate and diabolical joining of forces. But what to me is the most important consideration is this. Prof. Nagarajappa says that the Protest Religions like Jainism and Veerashaivism insisted on conversion before a man could qualify for salvation, and that this prevented them from developing it into religions for all mankind. They, too, became narrow-minded and in-tolerant. But I am afriad he is blaming them for not doing what, by their very nature, they could not have done. Religion is not just ethics. The moment a religion declares that goodness alone is important it cuts at the very root of its independent existence. Every religion is a total response to existence, and not just a set of ethical doctrines. Its very nature and the very conditions of its existence as an independent entity impose certain directions of activity.

One could quarrel with the author on several counts, while benefiting vastly from his book. And, from what I see in this book, I should imagine that it would be both a profit and a pleasure to quarrel with this author.

(Courtesy: Deccan Evening Herald, 1st October 1985)

ಭಾಗ-III ಒಂದು ಪತ್ರ

ನನ್ನ ಮಿತ್ರರು ಪ್ರೊ। ಕೆ.ಜಿ. ನಾಗರಾಜಪ್ಪನವರಿಗೆ ಅಭಿನಂದನಾ ಗ್ರಂಥವನ್ನು ಸಮರ್ಪಿಸುವುದು ಸಂತೋಷದ ಸಂಗತಿ. ಸಾಹಿತ್ಯ ಕೃತಿಯನ್ನು ಸಾಹಿತ್ಯವೆಂದಷ್ಟೇ ನೋಡದೆ ಅದರಲ್ಲಿ ಅಂತರ್ಗತವಾದ ಸಾಮಾಜಿಕ ನಿಲುವುಗಳನ್ನು ಗಮನಿಸಿ ಅರ್ಥೈಸುವ ವಿಮರ್ಶಕರು ಅವರು. ಇಂತಹ ವಿಮರ್ಶೆಯಲ್ಲಿ ಒಂದು ಅಪಾಯ ಇದೆ. ವಿಮರ್ಶಕನು ಸಾಹಿತ್ಯದಿಂದಾಚೆ ಸ್ವೀಕರಿಸಿದ ನಿಲುವುಗಳು ಮತ್ತು ಮುಟ್ಟಿದ ನಿರ್ಣಯಗಳು ಇವುಗಳಿಗೆ ಅನುಗುಣವಾಗಿಯೇ ಕೃತಿಯನ್ನು ವ್ಯಾಖ್ಯಾನಿಸುವ ಅಪಾಯ. ಆದರೆ ಪ್ರೊ। ನಾಗರಾಜಪ್ಪನವರು

ಯಾವ ವಿಷಯವನ್ನೇ ಆಗಲಿ ಕೂಲಂಕುಶವಾಗಿ ವಿಚಾರ ಮಾಡುವವರು. ಬೆರಗುಗೊಳಿಸುವಷ್ಟು ಮಾಹಿತಿಯನ್ನು ಸಂಗ್ರಹಿಸುವವರು. ಅವರ ಮರುಚಿಂತನೆಯನ್ನು ಓದಿ ನಾನೇ ಅವರು ಸಿದ್ಧಗೊಳಿಸುವ ಮಾಹಿತಿಯ ಅಡಿಪಾಯವನ್ನು ಕುರಿತು ಅವರಿಗೆ ಮೆಚ್ಚಿಕೆಯನ್ನು ಹೇಳಿದೆ. ಅವರ ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿ ವಿಸ್ತಾರವಾದದ್ದು. ಉಚ್ಚವರ್ಗದವರ ಸಂಸ್ಕೃತಿಯು ಮಾತ್ರವೇ ಈ ನಾಡಿನ ಸಂಸ್ಕೃತಿಯಲ್ಲ ಎನ್ನುವ ನಿಲುವು. ಅಲಕ್ಷ್ಯಕ್ಕೆ ಒಳಗಾದ ಆದರೆ ತಮ್ಮದೇ ಸ್ವತಂತ್ರ ಬದುಕನ್ನುಳ್ಳ ಸಮಾಜದ ವರ್ಗ ಸಮುದಾಯಗಳಲ್ಲಿ ಆಸಕ್ತಿ. ಇವುಗಳಿಂದಾಗಿ ಅವರು ತಮ್ಮ ಬರವಣಿಗೆಗಳಿಂದ ನಮ್ಮ ನಿಲುವುಗಳನ್ನು ನಾವೇ ಮತ್ತೆ ಪರೀಕ್ಷಿಸಿಕೊಳ್ಳುವಂತೆ ಮಾಡಬಲ್ಲವರು. ಅವರ ವಿಮರ್ಶೆಯಲ್ಲಿ ಚಿಕಿತ್ಸಕ ಅಂಶವೊಂದು ಸೇರಿದೆ. ಸ್ವಾತಂತ್ರ, ಪ್ರೀತಿ, ಸೌಜನ್ಯ ಮೂರು ಪ್ರೊ॥ ನಾಗರಾಜಪ್ಪನವರ ವ್ಯಕ್ತಿತ್ವದಲ್ಲಿ ಸೇರಿವೆ. ವಿಮರ್ಶಕರಾಗಿ ನನ್ನ ಆಸಕ್ತಿಯನ್ನು ಗೆದ್ದಂತೆಯೇ ವ್ಯಕ್ತಿಯಾಗಿ ನನ್ನ ಸ್ನೇಹವನ್ನು ಗೆದ್ದವರು ಅವರು. ವಿದ್ಯಾರ್ಥಿಗಳಲ್ಲಿ ಅವರು ತೋರಿಸುವ ಕಳಕಳಿಯನ್ನು ನಾನು ಕಣ್ಣಾರೆ ಕಂಡಿದ್ದೇನೆ.

ಪ್ರೊ। ನಾಗರಾಜಪ್ಪನವರ ವಿಷಯದಲ್ಲಿ ನನ್ನದೊಂದು ಆಕ್ಷೇಪಣೆ ಇದೆ. ಅವರ ಸಾಮರ್ಥ್ಯವನ್ನು ಗಮನಿಸಿದರೆ ಅವರು ಬರೆದಿರುವುದು ಏನೇನೂ ಸಾಲದು. ಇದಕ್ಕೆ ವಿದ್ವಾಂಸರಿಗೆ ಸಹಜವಾದ, ಅಗತ್ಯವಾದ ಸಮಗ್ರನೋಟದ ಬಯಕೆ. ಎಚ್ಚರಗಳು ಕಾರಣವಾಗಿರಬಹುದು. ಈ ಅಭಿನಂದನಾ ಗ್ರಂಥವು ಕನ್ನಡಿಗರಿಗೆ ನಾಗರಾಜಪ್ಪನವರ ಸಾಹಿತ್ಯದ ಮೌಲ್ಯವನ್ನು ಪರಿಚಯ ಮಾಡಿಕೊಡುತ್ತದೆ. ಇದರೊಂದಿಗೆ ಅವರು ಇನ್ನಷ್ಟು ಬರೆಯುವಂತೆ ಈ ಪ್ರಕಟಣೆಯು ಅವರಿಗೆ ಪ್ರೇರಣೆಯನ್ನು ನೀಡಲಿ. ಬಹುಕಾಲ ಅವರು ಕನ್ನಡಿಗರಿಗೆ ತಮ್ಮ ಆಳವಾದ ತಿಳುವಳಿಕೆ ಮತ್ತು ಹರಿತವಾದ ಚಿಂತನ ಶಕ್ತಿಗಳ ಫಲವನ್ನು ನೀಡುವಂತಾಗಲಿ, ಅವರಿಗೆ ಎಲ್ಲಾ ಶುಭವಾಗಲಿ ಎಂದು ಹಾರೈಸುತ್ತೇನೆ.

ವಿಶ್ವಾಸದ

ಎಲ್.ಎಸ್. ಶೇಷಗಿರಿರಾವ್.

4. ಮರುಚಿಂತನೆ: ವಿಮರ್ಶೆ

ಡಾ|| ಸಿ.ಎನ್. ರಾಮಚಂದ್ರನ್

ಭಾಗ-I

ಪ್ರೊಫೆಸರ್ ಕೆ.ಜಿ. ನಾಗರಾಜಪ್ಪನವರ "ಮರುಚಿಂತನೆ" ಹಳಗನ್ನಡ-ನಡುಗನ್ನಡ ಕಾಲದ ಕರ್ನಾಟಕ ಸಾಹಿತ್ಯ, ಸಮಾಜ ಹಾಗೂ ಸಂಸ್ಕೃತಿ ಇವುಗಳನ್ನು ಕುರಿತಾದ ಆರು ವಿದ್ವತ್ಪೂರ್ಣ ಲೇಖನಗಳ ಸಂಕಲನ. ಇದಕ್ಕೆ ಅತ್ಯಂತ ಸ್ನೇಹಪೂರ್ಣ ಹಾಗೂ ವಿಮರ್ಶಾತ್ಮಕ ಮುನ್ನುಡಿಯನ್ನು ಡಾ. ಯು.ಆರ್. ಅನಂತಮೂರ್ತಿಯವರು ಬರೆದಿದ್ದಾರೆ.

"ಮರುಚಿಂತನೆ"ಯ ಆರೂ ಲೇಖನಗಳ ಆಳದಲ್ಲಿ ಕಂಡುಬರುವ ಸಾಮಾನ್ಯ ವಿಚಾರ ಧಾರೆಯೆಂದರೆ ಹೇಗೆ ಪಂಪನಿಂದ ಲಕ್ಷ್ಮೀಶನವರೆಗೂ ಎಲ್ಲಾ ಕವಿಗಳೂ ಮತ್ತು ಸಮಾಜ ಚಿಂತಕರೂ ಉಚ್ಚವರ್ಗದ ಧಾರ್ಮಿಕ ಸಾಂಸ್ಕೃತಿಕ ಮೌಲ್ಯಗಳನ್ನೇ ಒಪ್ಪಿಕೊಂಡು ಕೆಳವರ್ಗಗಳನ್ನೂ ಮತ್ತು ಕೆಳವರ್ಗಗಳ ಸಂಸ್ಕೃತಿಯನ್ನೂ ತಿರಸ್ಕರಿಸಿದ್ದಾರೆ ಎಂಬ ಲೇಖಕರ ವಾದ. ಮೊದಲನೆಯ ಲೇಖನ "ಕಾವ್ಯ-ಹೊಸದೃಷ್ಟಿ ಹಳಗನ್ನಡ ನಡುಗನ್ನಡ"ದಲ್ಲಿ ಈ ವಾದಕ್ಕೆ ಪೂರಕವಾಗಿ ಲೇಖಕರು ಜೈನ ಕಾವ್ಯ, ವೀರಶೈವ ಕಾವ್ಯ ಮತ್ತು ಬ್ರಾಹ್ಮಣ ಕಾವ್ಯಗಳ ಸ್ಥೂಲಾವಲೋಕನ ಮಾಡುತ್ತಾ ಎಲ್ಲಾ ಲೇಖಕರೂ-ವೈದಿಕ ಧರ್ಮಕ್ಕೆ ಪ್ರತಿಭಟನೆಯಾಗಿ ಬಂದ ಜೈನ-ವೀರಶೈವ ಕವಿಗಳೂ-ಕೊನೆಗೆ 'ವೈದಿಕ ಸಂಸ್ಕೃತಿ'ಯನ್ನೇ ವಿವಿಧ ರೂಪಗಳಲ್ಲಿ ಎತ್ತಿ ಹಿಡಿದು, ಒಂದಲ್ಲಾ ಒಂದು ರೀತಿಯಲ್ಲಿ ವರ್ಣವ್ಯವಸ್ಥೆಯನ್ನು ಬಿಗಿಗೊಳಿಸಿ, ಬಹುಜನ ಸಮಾಜದ ಸಂಸ್ಕೃತಿ-ಅನುಭವಗಳಿಂದ ದೂರವಾದರೆಂದು ವಾದಿಸುತ್ತಾರೆ. ಲೇಖಕರ ದೃಷ್ಟಿಯಲ್ಲಿ "ಶತಮಾನಗಳಿಂದ ಸಮಕಾಲೀನ ಕಾಲದವರೆಗೂ ಜಾತಿ, ಧರ್ಮ ಮತ್ತು ಸಮಯಸಾಧಕ ಸಿದ್ಧಾಂತಗಳೇ ಸಾಹಿತ್ಯ ಸೃಷ್ಟಿ ಮತ್ತು ಮಾಧ್ಯಮಗಳ ಹಿಡಿತದ ಹಿನ್ನೆಲೆಯ ಪ್ರೇರಣೆಯಾಗಿರುವುದು ಎಲ್ಲರಿಗೂ ಸುಸ್ಪಷ್ಟ" (ಪು. ೨೬). ಈ ಪ್ರಬಂಧದಲ್ಲಿಯೇ ಒಂದು ಕಡೆ ವೈದಿಕ ದೊರೆಗಳ ಆಶ್ರಯದಲ್ಲಿದ್ದ ಜೈನ ರನ್ನನ ಮಾನಸಿಕ ಸಂಘರ್ಷ ದುರ್ಯೋಧನನ ಪಾತ್ರದಲ್ಲಿ ಹೇಗೆ ಮೂಡಿ ಬಂದಿದೆಯೆಂಬುದನ್ನು ಅತ್ಯಂತ ಮಾರ್ಮಿಕವಾಗಿ ಚಿತ್ರಿಸುತ್ತಾರೆ. ಎರಡನೆಯ ಲೇಖನದಲ್ಲಿ ವಚನಕಾರರ ಯುಗಕಲ್ಪನೆಯನ್ನು ಸ್ಪಷ್ಟಪಡಿಸುತ್ತಾ ಅಲ್ಲಮನ ಸುಪ್ರಸಿದ್ಧ "ಕೃತಯುಗದಲ್ಲಿ ಶ್ರೀ ಗುರು......................." ವಚನಕ್ಕೆ ಇತರರಿಗಿಂತ ಭಿನ್ನವಾಗಿ "ಯುಗ ಕಿಂಚಿತ್ತಾಗುವ, ಶಿಷ್ಯ ಗುರುವಾಗುವ, ಮರೆವು ಅರಿವಾಗುವ, ಶಿಕ್ಷೆ ಅನುಗ್ರಹವಾಗುವ, ಅನಂತರ ಉಭಯ ನಷ್ಟವಾಗಿ ತಾನೇ ತಾನಾಗುವ ಸಾಧಕನ ಸಿದ್ಧಿ ಕಂಡು ಅಲ್ಲಮ ಬೆರಗಾಗುತ್ತಾನೆ" (ಪು. ೩೬) ಎಂದು ಸತಾರ್ಕಿಕವಾಗಿ ವ್ಯಾಖ್ಯಾನಿಸುತ್ತಾರೆ.

ಈ ಸಂಕಲನದ ಅತ್ಯಂತ ವಿವಾದಾಸ್ಪದ ಹಾಗೂ ಆಕ್ರಾಮಕ ಧಾಟಿಯ ಎರಡು ಲೇಖನಗಳೆಂದರೆ "ಶರಣರು-ಏಕಮುಖ ಚಿಂತಕರು" ಮತ್ತು "ವೀರಶೈವ ಧರ್ಮ ಮತ್ತು ಕನ್ನಡ ಸಾಹಿತ್ಯ". ಮೊದಲನೆಯದರಲ್ಲಿ "ಆತ್ಮದ ವಿಷಯದಲ್ಲಿ ಸಮಾನತೆಯನ್ನು ಸಾರಿತೇ ಹೊರತು ಸಾಮಾಜಿಕ ಸಮಾನತೆಗೆ ಎಂದೂ ಹೋರಾಡಲಿಲ್ಲ". (ಪು. ೪೨) ಎಂದು

ಶರಣ-ಚಳುವಳಿಯನ್ನು ಅರ್ಥೈಸಿದರೆ, ಮುಂದಿನ ಪ್ರಬಂಧದಲ್ಲಿ ವಚನ ಸಾಹಿತ್ಯದ ಮೇಲೆ ನಯಸೇನನೇ ಮುಂತಾದವರುಗಳಿಂದ ಆಗಿರಬಹುದಾದ ಪ್ರಭಾವ, ಮತಾಂತರ ಹೊಂದದ ಮತ್ತು ಮತಾಂತರಿಯಾಗಿಯೂ ಪೂರ್ವದೇವತೋಪಾಸನೆಯನ್ನು ಬಿಡದ ಜನರ ಬಗ್ಗೆ ವಚನಕಾರರಿಗಿರುವ ಆಕ್ರೋಶ, ವಚನ ಮತ್ತು ವಚನ ರಚನೆಗಳಿಗಿರುವ ವ್ಯತ್ಯಾಸ-ಇವೇ ಮುಂತಾದವುಗಳ ಚರ್ಚೆಯಿದೆ. ಈ ಪ್ರಬಂಧದಲ್ಲಿ ಲೇಖಕರು ಮುಖ್ಯವಾಗಿ ವಾದಿಸುವುದೇನೆಂದರೆ ಅನೇಕ ಕಾರಣಗಳಿಂದಾಗಿ (ಮುಖ್ಯವಾಗಿ 'ಬ್ರಾಹ್ಮಣೀಕರಣದಿಂದಾಗಿ') "ವೀರಶೈವ ಸಾಹಿತ್ಯದಲ್ಲಿ ಗಂಭೀರ ಸಮಸ್ಯೆಗಳ, ಜೀವನದ ಮೌಲ್ಯಗಳ, ದಾರ್ಶನಿಕ ಜೀವನದ ಅಭಿವ್ಯಕ್ತಿಯ ಅಭಾವ ಉಂಟಾಯಿತು" (ಪು. ೭೩) ಎಂದು. ಈ ಎರಡು ಲೇಖನಗಳಲ್ಲಿ ಚರ್ಚೆಗೆ ಯೋಗ್ಯವಾದ ಮತ್ತು ಚರ್ಚಿಸಲ್ಪಡಲೇಬೇಕಾದ ಅನೇಕ ಪ್ರಶ್ನೆಗಳನ್ನೆತ್ತಿದರೂ ಓದಿಯಾದ ಮೇಲೆ ನಮಗುಳಿಯುವುದು ಅಸಂತೃಪ್ತಿಯೇ. ಏಕೆಂದರೆ ಹೆಚ್ಚಾಗಿ ಈ ಎರಡು ಪ್ರಬಂಧಗಳಲ್ಲಿ (ಇತರ ಪ್ರಬಂಧಗಳಲ್ಲಿಯೂ ಸ್ವಲ್ಪ ಮಟ್ಟಿಗೆ) ಇತರರನ್ನು ಚರ್ಚೆಗೆ ಕಾಲು ಕೆರೆದು ಆಹ್ವಾನಿಸುವ 'ಕ್ರೂಸೇಡಿಂಗೆ ಸ್ಪಿರಿಟ್' ತುಂಬಿರುವ ಆಕ್ರಾಮಕ ಧಾಟಿಯಿದೆ. ಮತ್ತು ಇವರು ವೀರಶೈವ ಧರ್ಮದ ಬಗ್ಗೆ ಹೇಳುವ ಮಾತುಗಳು ಎಲ್ಲಾ ಧರ್ಮಗಳಿಗೂ ಅನ್ವಯಿಸುತ್ತವೆಂಬುದನ್ನು ಮರೆಯುತ್ತಾರೆ. ಒಂದು ವ್ಯವಸ್ಥೆ (System)ಯನ್ನು ವಿರೋಧಿಸಿ ಬರುವ ಎಲ್ಲಾ ಸಾಮಾಜಿಕ-ರಾಜಕೀಯ-ಧಾರ್ಮಿಕ ಕ್ರಾಂತಿಮಾರ್ಗಗಳೂ ಕೆಲ ಕಾಲಾನಂತರ ತಮ್ಮದೇ ಆದ ಇನ್ನೊಂದು ವ್ಯವಸ್ಥೆಯನ್ನು ಹುಟ್ಟುಹಾಕುತ್ತವೆ. ಈ ವಿಧದ anti-structure, ಕೊನೆಗೆ Counter-structure ಆಗಿ ನಿಲ್ಲುವುದು ಕೇವಲ ವೀರಶೈವ ಧರ್ಮದಲ್ಲಿಯೇ ಅಲ್ಲ. ಆ ಪ್ರವೃತ್ತಿಯನ್ನು ನಾವು ಪಾಶ್ಚಾತ್ಯ ಪ್ರಾಟೆಸ್ಟೆಂಟ್ ಚಳುವಳಿಗಳಲ್ಲಿ ಮತ್ತು ಇಸ್ಲಾಂ, ಸಿಖ್, ಬೌದ್ಧ, ಜೈನ ಪಂಥಗಳಲ್ಲಿಯೂ ಕಾಣುತ್ತೇವೆ. ಕೇವಲ ವೀರಶೈವ ಧರ್ಮಕ್ಕೇ ಇಷ್ಟು ಉಗ್ರ ಖಂಡನೆಯೇಕೆ?

'ಕನಕದಾಸನ ಕೀರ್ತನೆಗಳು' ಈ ಲೇಖನದಲ್ಲಿ ಶೂದ್ರ ಕನಕದಾಸರೂ ತಮ್ಮ ಭಾಷೆ ಹಾಗೂ ಸಂಸ್ಕೃತಿಗಳಿಂದ ದೂರವಾಗಿ, ಶೂದ್ರ ಸಂಸ್ಕೃತಿಯನ್ನು ಖಂಡಿಸಿ ವೈದಿಕ ಧರ್ಮವನ್ನು ಎತ್ತಿ ಹಿಡಿದರೆಂಬುದನ್ನು ಲೇಖಕರು ವಿವರಿಸುತ್ತಾರೆ. ಈ ಸಂಕಲನದ ಕೊನೆಯಲ್ಲಿ ಬರುವ "ನಾಮಧಾರಿ ಲಿಂಗಾಯಿತರು: ನೆಲೆ-ಹಿನ್ನೆಲೆ" ಅತ್ಯಂತ ದೀರ್ಘವಾದ, (೬೪ ಪುಟಗಳ) ಸಾಕಷ್ಟು ಕ್ಷೇತ್ರಕಾರ್ಯದ ಆಧಾರದ ಮೇಲೆ ಒಂದು ಕುತೂಹಲಕಾರಿ ಧಾರ್ಮಿಕ ಪಂಥದ ಮೇಲೆ ಬೆಳಕು ಚೆಲ್ಲುವ ಸಂಶೋಧನಾ ಪ್ರಬಂಧ. ನಾಮಧಾರಿ ಲಿಂಗಾಯಿತರೆಂದರೆ ವೈಷ್ಣವ ಮತ್ತು ಶೈವ ಪದ್ಧತಿಗಳು ಬೆರೆತಿರುವ, ವಿಷ್ಣುಪೂಜೆಯ ಶಿವಭಕ್ತರ ಒಂದು ಪಂಥವೆಂದು. ಇವರು ಕರ್ನಾಟಕದಾದ್ಯಂತ ಗಣನೀಯವಾಗಿದ್ದಾರೆಂದು, ಮತ್ತು ಇವರನ್ನು ಕುರಿತಾದ ಆಳ ಸಂಶೋಧನೆ ಆಗಿಂದಾಗ್ಗೆ ಕರ್ನಾಟಕದಲ್ಲಿ ಆದ ಸಾಮೂಹಿಕ ಮತ ಪರಿವರ್ತನೆಯ ಕಾಲದಲ್ಲಿ ಸಹಜವಾಗಿಯೇ ನಿರ್ಮಾಣವಾದ ಸಾಮಾಜಿಕ-ಕೌಟುಂಬಿಕ ಸಂಘರ್ಷಗಳು, ಗೊಂದಲಗಳು ಮತ್ತು ಒತ್ತಡಗಳು ಇವುಗಳ ಮೇಲೆ ಅಪೂರ್ವ ಬೆಳಕು ಚೆಲ್ಲಬಹುದೆಂದು ಲೇಖಕರು ವಿಶ್ವಾಸನೀಯವಾಗಿ ವಾದಿಸುತ್ತಾರೆ. ಈ ದೀರ್ಘ ಲೇಖನವು ಅನೇಕ ಕಡೆಗಳಲ್ಲಿ ಇತರ ಚಾರಿತ್ರಿಕ-ಸಾಂಸ್ಕೃತಿಕ ವಿಷಯಗಳನ್ನು

ಚರ್ಚಿಸುತ್ತಾ ಮುಖ್ಯ ವಿಷಯವನ್ನೇ ಮರೆಯುವುದರಿಂದ ಲೇಖನದ ಕೊನೆಯಲ್ಲಿಯೂ "ಗುಪ್ತ ಸಮಾಜ" ವನ್ನು ಕುರಿತಂತೆ ನಮ್ಮ ಅರಿವು ಅಪೂರ್ಣವಾಗಿಯೇ ಉಳಿಯುತ್ತದೆ. "ಗುಪ್ತ ಸಮಾಜ" ವೆಂದರೆ ತಾಂತ್ರಿಕ ಪಂಥಗಳೇ ಅಥವಾ ಮತಾಂತರದ ನಂತರವೂ ತಮ್ಮ ಮತಾಂತರ ಪೂರ್ವ ಆಚರಣೆಗಳನ್ನು ಉಳಿಸಿಕೊಂಡಿರುವ ಪಂಥಗಳೇ ತಿಳಿಯುವುದಿಲ್ಲ. ಆದ್ದರಿಂದ "ಸುಧಾರಿತ ಮತಗಳು ಬ್ರಾಹ್ಮಣೀಕರಣಕ್ಕೆ ತುತ್ತಾಗಿ ಕ್ರಮೇಣ ಸತ್ವ ಕಳೆದುಕೊಂಡರೆ, ಗುಪ್ತ ಸಮಾಜ ಮಾತ್ರ ಶೂದ್ರೀಕರಣವನ್ನೇ ಕೇಂದ್ರ ಬಿಂದುವನ್ನಾಗಿಸಿ ಇನ್ನೂ ಜೀವಂತವಾಗಿರುವುದು ಸೋಜಿಗವಾಗಿದೆ" (ಪು. ೧೪೭) ಎಂಬ ಲೇಖಕರ ವಾದವನ್ನು ಒಪ್ಪುವುದು ಕಷ್ಟವಾಗುತ್ತದೆ.

ಸಾಹಿತ್ಯವನ್ನು ಪ್ರಥಮತಃ ಸಾಂಸ್ಕೃತಿಕ ದಾಖಲೆಯೆಂದು ಪರಿಗಣಿಸುವ "ಸೋಶಿಯಲಾಜಿಕಲ್" ವಿಮರ್ಶಾ ಪದ್ಧತಿಗೆ ತನ್ನದೇ ಆದ ಅಸಾಧಾರಣ ಶಕ್ತಿ ಹಾಗೂ ತೀವ್ರ ಮಿತಿಗಳಿರುತ್ತವೆ. ಇಂತಹ ಸಾಧನ ಮತ್ತು ಮಿತಿಗಳೆರಡನ್ನೂ ನಾಗರಾಜಪ್ಪನವರ "ಮರುಚಿಂತನೆ" ಪ್ರತಿಫಲಿಸುತ್ತದೆ. ಮಾನವಿಕ-ಸಾಂಸ್ಕೃತಿಕ ವಿಮರ್ಶಾ ಪದ್ಧತಿಯ ಒಂದು ಸಾಧ್ಯತೆಯೆಂದರೆ ವಿಮರ್ಶಕನಿಗೆ ಅತ್ಯಂತ ಉಪಯುಕ್ತ 'ಸಾಮಾನ್ಯೀಕೃತ ವಿಚಾರಗಳನ್ನು' (Broad Generalisations) ಮಂಡಿಸಲು ಸಾಧ್ಯವಾಗುತ್ತದೆ. ಮತ್ತು ಇಂತಹ ವಿಚಾರಗಳು ಸಾಹಿತ್ಯ-ಸಮಾಜ-ಸಂಸ್ಕೃತಿ ಇವುಗಳ ಅನ್ಯೋನ್ಯ ಸಂಬಂಧಗಳನ್ನೊಳಗೊಂಡಿರುತ್ತವೆ. "ಮರುಚಿಂತನೆ" ಇಂತಹ ಅನೇಕ ಒಳನೋಟಗಳಿಂದ ಕೂಡಿದೆ ಮತ್ತು ಮಹತ್ವಪೂರ್ಣ ಪ್ರಶ್ನೆಗಳನ್ನೆತ್ತುತ್ತದೆ. ಉದಾಹರಣೆಗೆ ಜೈನಸಾಹಿತ್ಯವನ್ನು ಚರ್ಚಿಸುತ್ತಾ ರಾಮಾಯಣ, ಮಹಾಭಾರತ ಮತ್ತು ಭಾಗವತಗಳನ್ನು ಬಳಸಿಕೊಂಡ ಜೈನಕವಿಗಳು "ಶೈವ ಪುರಾಣ ಮತ್ತು ಶೈವ ಕಾವ್ಯಗಳನ್ನು ಅಪ್ಪಿತಪ್ಪಿಯೂ ಜೈನಧರ್ಮ ಪ್ರಸಾರಕ್ಕೆ ಬಳಸಿಕೊಳ್ಳದಿರುವುದು" ಕುತೂಹಲಕರವೆಂದು ಲೇಖಕರು ತೋರಿಸುತ್ತಾರೆ (ಪು. ೧೪). ಅಂತೆಯೇ ವೀರಶೈವ ಸಾಹಿತ್ಯದ ಮಿತಿಗಳನ್ನು ಗುರುತಿಸುತ್ತಾ ಹೀಗೆ ಹೇಳುತ್ತಾರೆ: "ವಚನಗಳಲ್ಲಿ ಶರಣರ ಸಾಧಕ ಜೀವನಕ್ಕೆ ಒತ್ತು ಬಿದ್ದರೆ, ವೀರಶೈವ ಕಾವ್ಯಗಳಲ್ಲಿ ಶರಣರ ಸಿದ್ಧಜೀವನಕ್ಕೆ ಒತ್ತು ಬಿದ್ದಿತು" ಮತ್ತು "ಶರಣರ ಸ್ವಯಾನುಭವದ ಕೊರತೆಯನ್ನು ಪವಾಡಗಳ ವರ್ಣನೆಯಿಂದ (ವೀರಶೈವ ಕವಿಗಳು) ತುಂಬಿಕೊಂಡರು" (ಪು. ೨೦-೨೧). ಆದ್ದರಿಂದ ವೀರಶೈವ ಸಾಹಿತ್ಯ ಸಮಗ್ರ ಬದುಕಿನ ಅನುಭವಕ್ಕೆ ಬೆನ್ನು ತಿರುಗಿಸಿಬೇಕಾಯಿತು. ಮತ್ತೆ ಅಖಿಲ ಭಾರತ ವ್ಯಾಪ್ತಿಯಲ್ಲಿ ಮಾತನಾಡುತ್ತಾ ಅತ್ಯಂತ ಕುತೂಹಲಜನಕ ಸಂಗತಿಯೊಂದನ್ನು ಹೀಗೆ ನಮ್ಮೆದುರಿಡುತ್ತಾರೆ: "ವಿಷ್ಣು ಪಂಥದ ಸಂಸ್ಕೃತಿ ಪ್ರಧಾನವಾಗಿ ರಾಷ್ಟ್ರೀಯ ಸಂಸ್ಕೃತಿಯ ಸ್ವರೂಪ ಪಡೆಯಿತು. ಶೈವ ಪಂಥದ ಸಂಸ್ಕೃತಿಯ ಸ್ವರೂಪ ಪ್ರಧಾನವಾಗಿ ರಾಷ್ಟ್ರೀಯ ವ್ಯಾಪ್ತಿ ಪಡೆದರೂ ಪ್ರಾಂತೀಯ ಸಂಸ್ಕೃತಿಯಾಗಿ ಮಿತವಾಯಿತು" (ಪು. ೧೫೫).

"ಮಾನವಿಕ-ಸಾಂಸ್ಕೃತಿಕ" ವಿಮರ್ಶಾ ಪದ್ಧತಿಯ ಮಿತಿಗಳೂ ಅಷ್ಟೇ ತೀವ್ರವಾಗಿರುತ್ತವೆ. ಆ ಪದ್ಧತಿಯ ಒಂದು ಮುಖ್ಯ ದೌರ್ಬಲ್ಯವೆಂದರೆ ಸಾಹಿತ್ಯ ಕೃತಿಗಳ

ಆಂತರಿಕ ವಿನ್ಯಾಸಗಳು ಸೃಷ್ಟಿಸುವ ಅಪೂರ್ವ ದರ್ಶನವನ್ನವಗಣಿಸಿ ಕೃತಿಯ ಸ್ಥೂಲ ಶಾಬ್ದಿಕ ಪಾತಳಿಯ ಅರ್ಥಕ್ಕೆ ಹೆಚ್ಚು ಮಹತ್ವ ಕೊಡುವುದು. ಮತ್ತು ಸಾಹಿತ್ಯಿಕ ವಿಮರ್ಶೆಯಲ್ಲಿ ಸಹಜವಾಗಿರುವ 'ಸ್ವರೂಪ ವ್ಯತ್ಯಾಸಗಳು' (generic differences), ಕೃತಿಕಾರನ ಉದ್ದೇಶಿತ ಅರ್ಥ ಮತ್ತು ಕೃತಿಯೇ ಒಟ್ಟಾರೆ ಸೃಷ್ಟಿಸುವ ಅರ್ಥ ಇವೆರಡರಲ್ಲಿರುವ ಅಗಾಧ ವ್ಯತ್ಯಾಸ ಮುಂತಾದವುಗಳಿಗೆ ಕುರುಡಾಗುವುದು. ಒಂದು ಉತ್ತಮ ಸಾಹಿತ್ಯ ಕೃತಿ 'ದಾಖಲೆ'ಯಲ್ಲಿ 'ಸೃಷ್ಟ್ಯಾತ್ಮಕ ಶೋಧ'. ತಮ್ಮ ಸಾಂಸ್ಕೃತಿಕ ವಾಗ್ವಾದಗಳ ಭರದಲ್ಲಿ ನಾಗರಾಜಪ್ಪನವರು ಕೆಲವು ಸಲ ಈ ಮುಖ್ಯ ವಿಚಾರಗಳನ್ನು ಮರೆಯುತ್ತಾರೆಂದೆನಿಸುತ್ತದೆ.

ಉದಾಹರಣೆ: "ಧರ್ಮವೇ ಕನ್ನಡ ಸಾಹಿತ್ಯ ರಚನೆಯ ಮೂಲ ಪ್ರೇರಕ ಶಕ್ತಿ" (ಪ್ರಸ್ತಾವನೆ)-ಈ ಹೇಳಿಕೆ ಅತ್ಯಂತ ಸರಳೀಕೃತವಾಗಿರುವುದೇ ಅಲ್ಲದೆ ಪ್ರಾಯಶಃ ವಿದ್ವಾಂಸರಾರೂ ಈ ಮಾತನ್ನೂ ಒಪ್ಪಲಾಗುವುದಿಲ್ಲ. ಸ್ವತಹ ಕವಿಯೇ ತನ್ನ ಕಾವ್ಯೋದ್ದೇಶ ಧರ್ಮ ಪ್ರಚಾರವೆಂದು ಸಾರಿ ಸಾರಿ ಹೇಳಿದರೂ ಅದು ಉತ್ತಮ ಕಾವ್ಯವಾಗಿದ್ದರೆ ಅದರ ಕಾಣ್ಕೆಯೇ ಬೇರೆ ಇರುತ್ತದೆ. ಆದ್ದರಿಂದ "ಸತ್ಯವೆಂಬುದೇ ಹರ ಎಂದು ಸಾರುವ ಹರಿಶ್ಚಂದ್ರ ಕಾವ್ಯ ಒಂದು ಶಿವ ಮತ ಸಾರುವ ಕಾವ್ಯವೇ ಸರಿ" (ಪು. ೮೭) ಎಂಬ ಹೇಳಿಕೆಯಾಗಲೀ ಅಥವಾ "ಜೈನ" ಕವಿಗಳು ಪುಣ್ಯ ಪ್ರಾಪ್ತಿಗೆ, ವೀರಶೈವ ಕವಿಗಳು ಶಿವಲೋಕ ಸಾಧನೆಗೆ, ವೈದಿಕ ಕಪಿಗಳು ಯಜ್ಞಫಲ ಪ್ರಾಪ್ತಿಗೆ ಕಾವ್ಯಗಳನ್ನು ರಚಿಸಿ ತಮ್ಮ ತಮ್ಮ ಪಂಥದ ಜನರನ್ನು ಬದುಕಿಸಿದರು" ಎನ್ನುವುದು ಅತ್ಯಂತ ದುಡುಕಿನ ಅಸಾಹಿತ್ಯಿಕ ಹೇಳಿಕೆಯಾಗುತ್ತದೆ. ಮತ್ತೆ ಲೇಖಕರು ಪುರಾಣಗಳು, ಮಹಾಕಾವ್ಯಗಳು, ವಚನಗಳು ಇವೆಲ್ಲವನ್ನೂ ಒಂದೇ ಸ್ತರದಲ್ಲಿ ಅರ್ಥೈಸುತ್ತಾರೆ. ಪರಿಣಾಮವಾಗಿ "...........ಧರ್ಮದ ವಸ್ತುವೇ ಸಾಹಿತ್ಯವಾಗಿ...........ರಕ್ತದ ಕೋಡಿ ಹರಿದಿದೆ" ಎಂಬುದಕ್ಕೆ ನಿದರ್ಶನವಾಗಿ "ಬಸವೇಶ್ವರ ಪುರಾಣ ಕಥಾಸಾಗರ" ದಿಂದ ಉದಹರಿಸುತ್ತಾರೆ (ಪು. ೧೫). ಪುರಾಣಗಳ ರೀತಿಯೇ ಅತಿಶಯೋಕ್ತಿ ಮತ್ತು ಪುರಾಣಗಳು ನಂಬಲರ್ಹ ಚಾರಿತ್ರಿಕ ದಾಖಲೆಗಳಲ್ಲವೆಂಬುದನ್ನು ಮರೆಯುತ್ತಾರೆ. ಅಲ್ಲದೆ ತಮ್ಮ 'ಕ್ರೂಸೇಡಿಂಗ್' ಆವೇಶದಿಂದಾಗಿ ಲೇಖಕರಿಗೆ ಎಲ್ಲಾ ಕಾಲದಲ್ಲೂ, ಎಲ್ಲಾ ಕವಿ-ವಿಚಾರವಂತರಲ್ಲೂ ಕೇವಲ "ಒಳಸಂಚೇ" ಕಾಣಬರುತ್ತದೆ.

ಒಟ್ಟಿನಲ್ಲಿ ಓದುಗರಿಗೆ ಅನೇಕ ಮಹತ್ವಪೂರ್ಣ ಸಾಹಿತ್ಯಿಕ-ಸಾಂಸ್ಕೃತಿಕ ಒಳನೋಟಗಳನ್ನು ಕೊಡುವ, ಪ್ರಮುಖ ಪ್ರಶ್ನೆಗಳನ್ನೆತ್ತುವ, ಮತ್ತು ಅನೇಕ ವಿಚಾರಗಳನ್ನು ಕುರಿತು ತೀವ್ರ ವಾದ-ವಿವಾದಗಳಿಗೆಡೆ ಕೊಡುವ ಕೃತಿ "ಮರುಚಿಂತನೆ". ♦

(ಕೃಪೆ: ಸಂಕ್ರಮಣ, ಸಂ.23.ಸಂ.7, ಜುಲೈ 1988.)

ಭಾಗ-II

ಸಿ.ಎನ್. ರಾಮಚಂದ್ರನ್‌ರವರ ಪತ್ರ

ಮಂಗಳೂರು ವಿಶ್ವವಿದ್ಯಾನಿಲಯ

ಆಂಗ್ಲಭಾಷಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ

17-5-88

ಪ್ರೊ|| ನಾಗರಾಜಪ್ಪ ಇವರಿಗೆ.

ನೀವು ಆದರದಿಂದ ಕಳುಹಿಸಿದ ನಿಮ್ಮ "ಮರು ಚಿಂತನೆ" ನನಗೆ ಈಗೊಂದು ವಾರಗಳ ಕೆಳಗೆ ತಲಪಿತು. ಅದಕ್ಕಾಗಿ ನಾನು ನಿಮಗೆ ಕೃತಜ್ಞನಾಗಿದ್ದೇನೆ. 'ಮರುಚಿಂತನೆ'ಯನ್ನು ಸಂಪೂರ್ಣವಾಗಿ ಓದಿ ಮುಗಿಸಿದ್ದೇನೆ. ಇಂತಹ ಧೀಮಂತ ಹಾಗೂ ವಿಚಾರ ಪ್ರಚೋದಕ ಲೇಖನಗಳನ್ನು ಕ್ವಚಿತ್ತಾಗಿ ನಾನು ಕನ್ನಡದಲ್ಲಿ ಓದಿದ್ದೇನೆ. ನಿಮ್ಮ ಪ್ರತಿಯೊಂದು ಲೇಖನವೂ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅಧ್ಯಯನದ ಮಾದರಿಯಂತಿದೆ. ವಿಶೇಷವಾಗಿ ನಿಮ್ಮ "ಕಾವ್ಯ ಹೊಸಸೃಷ್ಟಿ", "ವೀರಶೈವ ಧರ್ಮ ಮತ್ತು ಕನ್ನಡ ಸಾಹಿತ್ಯ" ಮತ್ತು "ನಾಮಧಾರಿ ಲಿಂಗಾಯಿತರು" ಲೇಖನಗಳು ಅತ್ಯಂತ ವಿದ್ವತ್ಪೂರ್ಣವಾಗಿವೆ. ಕನ್ನಡ ಕಾವ್ಯ ಸಮಾಜ ಹಾಗೂ ಭಾರತೀಯ ಸಂಸ್ಕೃತಿ ಇವುಗಳ ಬಗ್ಗೆ ನಾನು ಅನೇಕ ಹೊಸ ವಿಷಯಗಳನ್ನು ತಿಳಿದು ಕೊಂಡಿದ್ದೇನೆ. ಹೊಸ ಅರಿವನ್ನು ಪಡೆದಿದ್ದೇನೆ. ನೀವು ಬೇರೆ ಪುಸ್ತಕಗಳನ್ನು ಲೇಖನಗಳನ್ನು ಪ್ರಕಟಿಸಿದ್ದೀರಾ? ನೀವು ಬರೆದಿದ್ದೆಲ್ಲವನ್ನೂ ಓದಬೇಕು.

ನಾನು ಈಗೊಂದು ಮೂರು ತಿಂಗಳ ಕೆಳಗೆ ತುಮಕೂರಿಗೆ ಬಂದಿದ್ದೆ. ನಿಮ್ಮ ವಿಷಯ ಆಗ ಗೊತ್ತಿಲ್ಲದಿದ್ದುದರಿಂದ ಭೇಟಿ ಮಾಡಲಾಗಲಿಲ್ಲ. ಎಲ್ಲಾದರೂ ಸಿಕ್ಕೋಣ, ನೀವು ಯಾವಗಲಾದರೂ ಮಂಗಳೂರಿಗೆ ಬಂದರೆ ದಯವಿಟ್ಟು ನನಗೆ ತಿಳಿಸಿ,

ಪತ್ರ ತಲಪಿದ್ದಕ್ಕೂ ಇತರ ಎಲ್ಲಾ ವಿಷಯಗಳಿಗೂ ಬರೆಯಿರಿ.

ಇಂತಿ ವಂದನೆಗಳು

ನಿಮ್ಮವ

ರಾಮಚಂದ್ರನ್

(ಸಿ.ಎನ್. ರಾಮಚಂದ್ರನ್)

5. ಮರುಚಿಂತನೆ ಕುರಿತು

ಡಾ|| ಪೋಲಂಕಿ ರಾಮಮೂರ್ತಿ

ಭಾಗ-I

ಪ್ರೊ|| ಕೆ.ಜಿ. ನಾಗರಾಜಪ್ಪನವರ ಮರುಚಿಂತನೆ

ಮರುಚಿಂತನೆಗೆ ತಕ್ಕ ವಿಮರ್ಶೆ ಅದರ ಮುನ್ನುಡಿಯಲ್ಲಿದೆ. ಮರುಚಿಂತನೆ ಎಷ್ಟು ಯುಗ ಪರಿವರ್ತಕ ಮುನ್ನೋಟದ್ದು, ಎನ್ನುವುದರ ದಾಖಲೆ ಡಾ. ಯು.ಆರ್. ಅನಂತಮೂರ್ತಿಯವರ ಮುನ್ನುಡಿಯ ಈ ಮಾತುಗಳಲ್ಲಿದೆ: "ನಮ್ಮ ಕಾಲದ ಬಹು ಮುಖ್ಯ ಸಾಂಸ್ಕೃತಿಕ ವಾಗ್ವಾದಗಳಿಗೆ ಒಂದು ಸ್ಪಷ್ಟ ದಿಕ್ಕನ್ನೂ, ಅರ್ಥಪೂರ್ಣತೆಯನ್ನು ತರಬಲ್ಲ ಮಹತ್ವದ ಕೃತಿ", "ಸಾಂಸ್ಕೃತಿಕ ಇಂಪೀರಿಯಲಿಸಂ ಬಗ್ಗೆ ಕನ್ನಡದಲ್ಲಿ ಬಂದ ಮುಖ್ಯ ಲೇಖನ ಇದು", "ಕನ್ನಡದ ಧೀಮಂತ ವೈಚಾರಿಕ ಪರಂಪರೆಯನ್ನು ನಿರುದ್ವಿಗ್ನವಾಗಿ, ನಿರಪೇಕ್ಷವಾಗಿ ನಾಗರಾಜಪ್ಪನವರು ಬೆಳೆಸುವಂಥ ಸನ್ನಿವೇಶಕ್ಕೆ ಈ ಪುಸ್ತಕ ಒಂದು ಆಹ್ವಾನ."

ನಮ್ಮಲ್ಲಿ ಎಲಿಯಟ್, ಲೀವಿಸರಂತಹ ಪ್ರವಾದೀ ವಿಮರ್ಶಕರು ಮೆಟಫಿಸಿಕಲ್ಸ್ ರೋಮ್ಯಾಂಟಿಕ್ಸ್‌ಗಳಂತಹ ಪಂಥಗಳ, ಕಾಲಗಳ ಒಳನೋಟಗಳನ್ನು ನೀಡಿ ಸಾಹಿತ್ಯಕ ಮುನ್ನೋಟಗಳನ್ನು ನಮ್ಮ ಮುಂದಿಟ್ಟಿದ್ದರೆ, ಕೆ.ಜಿ. ನಾಗರಾಜಪ್ಪನವರು ಸಂಪೂರ್ಣ ಕನ್ನಡ ಸಾಹಿತ್ಯದ, ಜೈನ ಬ್ರಾಹ್ಮಣ ವೀರಶೈವ ದಾಸ ಯುಗಗಳನ್ನೊಳಗೊಂಡ, ಸಾವಿರ ವರ್ಷದ ಸನಾತನ ಪರಂಪರೆಯನ್ನೇ ಒಳನೋಡಿ ಇಂದಿನ ಕನ್ನಡ ಸಾಹಿತ್ಯಕ್ಕೇ ಒಂದು "ಸ್ಪಷ್ಟವಾದ ದಿಕ್ಕನ್ನು" ಭವಿಷ್ಯದ ಮುನ್ನೋಟವನ್ನು ನೀಡುವ ಯುಗಪರಿವರ್ತಕರಾಗಿದ್ದಾರೆ, ಹಾಗೂ ಹಾಗೆ ಯುಗಪರಿವರ್ತಕರಾಗಿರುವುದರಿಂದಲೇ "ಮಗೂ, ನೀನು ಬಿಚ್ಚು ಮನಸ್ಸಿನಿಂದ ಸತ್ಯವನ್ನು ಬರೆದರೆ ಸಮಾಜ ನಿನ್ನನ್ನು ಜೀವಸಹಿತ ಬದುಕಲು ಬಿಡುವುದೇ?" ಎನ್ನುವ ಎಚ್ಚರಿಕೆಯ ಮಾತಿಗೆ ಪಕ್ಕಾಗಿದ್ದಾರೆ.

ನಾಗರಾಜಪ್ಪನವರು ತಿಮಿಯ ಹಾಗೆ ಈಸಿರುವ ಈ ಸಾವಿರ ವರ್ಷದ ಸಾಗರಕ್ಕೆ ಅನಂತಮೂರ್ತಿಯವರು ಸಹಜವಾಗಿಯೇ ಬೆಚ್ಚಿದ್ದಾರೆ. ಅವರು "ಪ್ರೊ. ನಾಗರಾಜಪ್ಪನವರು ಚರ್ಚಿಸಿರುವ ಹಲವು ವಿಷಯಗಳಲ್ಲಿ ನನಗಿರುವ ಜ್ಞಾನ ಅಲ್ಪವಾದದ್ದು, ಪ್ರಾಚೀನ ಕನ್ನಡ ಸಾಹಿತ್ಯವನ್ನು ನಾನು ಶಿಸ್ತಿನಿಂದ ಅಭ್ಯಾಸ ಮಾಡಿದವನಲ್ಲ" ಎನ್ನುವ ಮಾತನ್ನು ತಮ್ಮ ವಿದ್ಯಾವಿನಯ ಸಂಪನ್ನತೆಯಿಂದ ಅಂದಿದ್ದರೂ, ಅವರು ಷೇಕ್ಸ್‌ಪಿಯರ್ ಹೇಗೆ ಅವಶ್ಯಕವಾದ ಚರಿತ್ರೆಯನ್ನು (essential history) ಹಾಲಿನ್‌ಷೆಡ್ಡಿನ ದಾಖಲೆಗಳಲ್ಲಿ ಪಡೆದನೋ ಹಾಗೆ ಕನ್ನಡ ಸಾಹಿತ್ಯದ ಅವಶ್ಯಕ ಅನುಭವಗಳನ್ನು "ಕೆ.ವಿ. ಸುಬ್ಬಣ್ಣ, ಜಿ.ಎಚ್. ನಾಯಕ್....ಕಿ.ರಂ. ನಾಗರಾಜರಂತಹ ಸ್ನೇಹಿತರ ಸಂಪರ್ಕದಿಂದ, ಅಲ್ಪ ಸ್ವಲ್ಪ ಸ್ವಾಧ್ಯಾಯನದಿಂದ" ಪಡೆದಿದ್ದಾರೆನ್ನುವ ದಾಖಲೆ ಅವರ ಈ ಸಾಕಷ್ಟು ದೀರ್ಘವಾದ

ಮುನ್ನುಡಿಯಲ್ಲೇ ಇದೆ. ನನಗಂತೂ ಆಗಾಗ್ಗೆ ವಚನಕಾರ, ದಾಸರ ಬಗ್ಗೆ ಆಡುತ್ತಿದ್ದ ವಿಮರ್ಶೆಯ ಒಳನೋಟದ ಮಾತುಗಳಿಂದ, ಅವರ ಜವಾಬ್ದಾರಿತನದ ಬಗ್ಗೆ, ಸಹೃದಯತೆಯ ಬಗ್ಗೆ ಹೆಮ್ಮೆ ಇದೆ. ಮೆಚ್ಚಿಕೆ ಇದೆ. ಆದ್ದರಿಂದಲೇ ಈ ಚಾರಿತ್ರಿಕ ಪುಸ್ತಕಕ್ಕೆ ಅವರ ಈ ಚಾರಿತ್ರಿಕ ಮುನ್ನುಡಿ ಅಷ್ಟೇ ಧೀಮಂತವೂ ದಿಟ್ಟವೂ ಪ್ರಾಮಾಣಿಕವೂ ಆಗಿದೆ.

ಎಷ್ಟೇ ಕ್ರಾಂತಿಕಾರಿಯಾಗಿದ್ದರೂ ಈ ಎಲ್ಲ ಜೈನ, ಬ್ರಾಹ್ಮಣ, ವೀರಶೈವ, ವಚನ, ದಾಸ ಪರಂಪರೆಗಳಿಗೆಲ್ಲಾ ಮೂಲಾಧಾರವಾಗಿರುವ ಈ ವೈದಿಕ ಅಥವಾ ಬ್ರಾಹ್ಮಣ ಇಂಪೀರಿಯಲಿಸಂ ಆ ಕ್ರಾಂತಿಗಳನ್ನೆಲ್ಲ ಒಳಗೊಳಗೆ ಹಿಸುಕಿ ಹಾಕಿದೆ, ನಿರ್ವೀರ್ಯ ಗೊಳಿಸಿದೆ ಎನ್ನುವ ಕಠೋರ ಸತ್ಯ ವೈದಿಕ ಅಥವಾ ಬ್ರಾಹ್ಮಣ ಪಕ್ಷಪಾತಿಗಳಿಗೆ ನುಂಗಲಾರದ ತುತ್ತು. ಆದರೆ ಅನಂತಮೂರ್ತಿ ಈ ಕಠೋರ ಸತ್ಯವನ್ನು ಒಪ್ಪಿಕೊಳ್ಳುವ ಪ್ರಾಮಾಣಿಕತೆ ಹಾಗೂ ಅದನ್ನು ಭರಿಸಬಲ್ಲ ದಿಟ್ಟತನವನ್ನು ತೋರಿದ್ದಾರೆ.

ಮರುಚಿಂತನೆ ತನ್ನ ಪ್ರತಿ ಪೇಜಿನಲ್ಲೂ ಈ ಕಠೋರ ಸತ್ಯವನ್ನು ಪಂಪನಿಂದ ವಚನಕಾರರ, ದಾಸರವರೆಗಿನ ಕಾವ್ಯಗಳ ಸಾಕ್ಷದಲ್ಲೇ ನಿಲ್ಲಿಸಿರುವುದರಿಂದ, ಯಾವ ಪ್ರಾಮಾಣಿಕ ಓದುಗನೂ, ಜವಾಬ್ದಾರೀ ಸಹೃದಯನೂ, ವಿಮರ್ಶಕನೂ ಇದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಆದರೆ ಈ ಕಹಿಯಾದ ಸತ್ಯ ಹೇಗೆ ಈ ರೋಗಗ್ರಸ್ಥ, ಸಾಂಸ್ಕೃತಿಕ ಪರಂಪರೆಗೆ ಆರೋಗ್ಯಕರವಾದದ್ದು, ಇದು ಹೇಗೆ ಕಂಗಾಣದ ನಮಗೆ ಹೊಸ "ದಿಕ್ಕು" ತೋರೀತು, ಈ ಘೋರವಾದ ಸನಾತನ "ಇಂಪೀರಿಯಲಿಸಮ್ಮಿ"ನಿಂದ ನಮ್ಮನ್ನು ಮುಕ್ತಗೊಳಿಸೀತು ಎನ್ನುವ ಭವಿಷ್ಯವನ್ನು ಕಂಡುಕೊಳ್ಳಬೇಕಾದರೆ ಆ ಓದುಗನಿಗೆ ಅನಂತಮೂರ್ತಿಯವರಂಥಾ ಒಳನೋಟ, ಪ್ರಾಮಾಣಿಕ ಸಹೃದಯತೆ, ವಿಮರ್ಶೆಯ ದಿಟ್ಟತನಗಳಿರಬೇಕಾಗುತ್ತದೆ.

ಆದರೆ ಅನಂತಮೂರ್ತಿಯವರ ಪರಿಶ್ರಮಗಳಾವೂ ಇರದಿದ್ದಾಗ ಮರುಚಿಂತನೆಯ ಬಗ್ಗೆ ಬರೆಯಲು ಹೊರಟ ಸಂಕ್ರಮಣದಲ್ಲಿನ ಸಿ.ಎನ್. ರಾಮಚಂದ್ರನ್ ರವರ ರಿವ್ಯೂವಿನಂಥಾ ಬರಹ "ಕಾಲುಕೆದರು"ವ ಕೋಳಿ ಕೆಲಸವಾಗುತ್ತದೆ. (ಸಂಕ್ರಮಣ ೧೯೧, ಜುಲೈ ೧೯೮೮)

ಪಂಪನಂಥಾ ಯೋಧನನ್ನೂ, ರನ್ನನಂಥಾ ಎಂಟೆದೆಯವನನ್ನೂ, ಕ್ರಾಂತಿಕಾರೀ ಬಸವಣ್ಣನನ್ನೂ ಸಾಂಸ್ಕೃತಿಕ ಇಂಪೀರಿಯಲಿಸಮ್ಮಿನ ಕುರುಕ್ಷೇತ್ರದಲ್ಲಿ ನಿಲ್ಲಿಸಿರುವ "ಜೀವಕ್ಕೆ" ಹೆದರದ ನಾಗರಾಜಪ್ಪನವರು "ಚರ್ಚೆಗೆ ಕಾಲುದಕೆದರು"ತ್ತಿದ್ದಾರೆ. ಅವರದು "ಆಕ್ರಾಮಕ ಧಾಟಿ" ಎನ್ನುವ ರಾಮಚಂದ್ರನ್‌ರ ಮಾತು ಅನಿವಾರ್ಯವಾಗಿ ಅವರ ಆ "ಕಾಲುಕೆದರುವ" ಮಾತಿನ ಮಟ್ಟಕ್ಕೇ ಇಳಿಯುತ್ತದೆ. ಯಾಕೆಂದರೆ ಅವರಿಗೆ ಆ ಮಾತನ್ನು ಸಾಬೀತು ಮಾಡಿ ತೋರಿಸಲು ಇಡಿಯ ಸಾವಿರ ವರ್ಷದ ಜೈನ-ಬ್ರಾಹ್ಮಣ-ವೀರಶೈವ-ವಚನ-ದಾಸ ಸಾಹಿತ್ಯ ಪರಂಪರೆಯಲ್ಲಿ ಒಂದೇ ಒಂದು ಉದಾಹರಣೆಯನ್ನು ಕೊಡಲು ಅವರ ೫ ಪುಟದ ರಿವ್ಯೂವಿನ ಉದ್ದಗಲದಲ್ಲೂ ಆಗದಿರುವುದು. ವಾಸ್ತವವಾಗಿ ಅನಂತಮೂರ್ತಿಯವರು ಮರುಚಿಂತನೆಯದ್ದು **ರುಜುವಾತು** ಗೆ ರಿವ್ಯೂ ಮಾಡಲು ನನ್ನನ್ನು ಕೇಳಿದಾಗ ನಾನು ಕನ್ನಡ

ಸಾಹಿತ್ಯದ ಅಮೂಲಾಗ್ರ ಪರಿಚಯ ಅನುಭವಗಳಿರುವ ಜಿ.ಎಚ್. ನಾಯಕರಿಗೆ ಅದನ್ನು ಕೊಡಲು ಹೇಳಿದ್ದೆ. ರಾಮಚಂದ್ರನ್‌ರು ಮರುಚಿಂತನೆಗೆ ಕೈ ಹಾಕಬಾರದಿತ್ತು; ಹಾಕಿದ ಮೇಲೆ ಅದನ್ನು ಮತ ಪ್ರಚೋದನೆಗಾಗಿ ಹೀಗೆ "ಕಾಲುಕೆದರ"ಬಾರದಿತ್ತು. ಇಲ್ಲಿ ನೋಡಿ; "ಇವರು ವೀರಶೈವ ಧರ್ಮದ ಬಗ್ಗೆ ಹೇಳುವ ಮಾತುಗಳು ಎಲ್ಲಾ ಧರ್ಮಗಳಿಗೂ ಅನ್ವಯಿಸುತ್ತದೆ ಎನ್ನುವುದನ್ನು ಮರೆಯುತ್ತಾರೆ....ಕೇವಲ ವೀರಶೈವರ ಧರ್ಮಕ್ಕೆ ಈ ಉಗ್ರ ಖಂಡನೆ ಏಕೆ?" (ಪು. ೪೬) ಎನ್ನುವಾಗ ಹೇಗೆ ಅವರಿಗೆ ಕೈಲಾಗದ ಸಾಹಿತ್ಯದಿಂದ ಹಾರಿ ಎಲ್ಲಾ ಮತಾಂಧರಿಗೆ ಸುಲಭವಾಗಿ ಕೈಸಿಗುವ ಧರ್ಮದ ಸಿಡಿಮದ್ದಿಗೆ ಕೈ ಹಾಕಿದ್ದಾರೆ ಎನ್ನುವುದು.

ನಾಗರಾಜಪ್ಪನವರದು ಉದ್ದಕ್ಕೂ ಕಾವ್ಯಸಾಕ್ಷದಲ್ಲೇ ನಡೆಸುತ್ತಿರುವ ಕಾವ್ಯವಿಮರ್ಶೆಯೇ, ಕೆಲವು ಕಡೆ ಪ್ರಾಕ್ಟಿಕಲ್ ಕ್ರಿಟಿಸಿಸಮ್ಮೇ ಆಗಿರುವಾಗ, ಅವರನ್ನು ಧರ್ಮಕ್ಕೆ ಎಳೆದಾಡಿರುವ ರಾಮಚಂದ್ರನ್‌ರ "ಕಾಲು ಕೆದರು"ವ ಕೆಲಸ ಯಾವ ಮಟ್ಟದ್ದು ಅನ್ನುವುದನ್ನು ಒತ್ತಿ ಹೇಳಬೇಕಾಗಿಲ್ಲ. ನಾಗರಾಜಪ್ಪನವರ ಮಿತ್ರರು ಅವರಿಗೆ "ಮಗೂ, ನಿನ್ನನ್ನ ಜೀವಸಹಿತ ಬದುಕಲು ಬಿಡುತ್ತಾರೆಯೇ" ಎಂದು ಆಡಿರುವ ಎಚ್ಚರಿಕಯ ಮಾತು ಸಿ.ಎನ್. ರಾಮಚಂದ್ರನ್‌ರವರಂಥವರ ಬಗ್ಗೆಯೇ ಎನ್ನುವುದಕ್ಕೆ ಯಾವ ಸಂದೇಹವೂ ಇಲ್ಲ ಎನ್ನುವುದಕ್ಕೆ ಅವರ ಈ ಮುಂದಿನ ಮಾತು ನೋಡಿ: "ಕೇವಲ ವೀರಶೈವ ಧರ್ಮಕ್ಕೇ ಈ ಉಗ್ರ ಖಂಡನೆ ಏಕೆ?"

ನಾವು ಕಂಡ ಹಾಗೆ ಹಿಂದೂ ಮುಸ್ಲಿಂ ಗಲಭೆಗಳಲ್ಲಿ ಒಂದು ಮತದವರೇ ಅವರ ಮತದವರ ಮೇಲೇನೇ ಕಲ್ಲು ತೂರಿ ಪ್ರಚೋದಿಸಿ ಹತ್ಯಾಕಾಂಡಕ್ಕೆ ಕಾರಣರಾದಂತೆ, ರಾಮಚಂದ್ರನ್‌ರು ನಾಗರಾಜಪ್ಪನವರು ಜೈನ ಬ್ರಾಹ್ಮಣ ಕಾವ್ಯಗಳ ಬಗ್ಗೆ ಇಷ್ಟೇ ನಿಷ್ಠುರವಾಗಿ, ಕೆಲವು ಕಡೆ ಇದಕ್ಕಿಂತಲೂ ನಿಷ್ಠುರವಾಗಿ ಬರೆದಿದ್ದರೂ-ನಿಜಕ್ಕೂ ಅತ್ಯುಗ್ರವಾದ ಖಂಡನೆ ಇರುವುದು "ಬ್ರಾಹ್ಮಣ್ಯ"ವನ್ನು ಕುರಿತೇ, ಅದನ್ನೇ ಅನಂತಮೂರ್ತಿಯವರು ಸಾಂಸ್ಕೃತಿಕ ಇಂಪೀರಿಯಲಿಸಂ ಎಂದಿರುವುದು-ಆ ಜೈನ ಬ್ರಾಹ್ಮಣ ಅಲ್ಪಸಂಖ್ಯಾತರನ್ನು ಕೆರಳಿಸುವ ಗೋಜಿಗೆ ಹೋಗದೆ, ಬಹುಸಂಖ್ಯಾತರೂ ಸಮರ್ಥರೂ ಆದ ವೀರಶೈವರನ್ನು ಹೇಗೆ ಕೆಣಕಿ ಕೆರಳಿಸಿ, ಅನಂತಮೂರ್ತಿಯವರು ಹೇಳಿರುವ ಸಾಂಸ್ಕೃತಿಕ ಇಂಪೀರಿಯಲಿಸಮ್ಮಿನ ವಕ್ತಾರರೇ ಆಗಿದ್ದಾರೆ ನೋಡಿ-"ಕೇವಲ ವೀರಶೈವ ಮತಕ್ಕೇ ಈ ಉಗ್ರ ಖಂಡನೆ ಏಕೆ?"

ವೀರಶೈವ ಧರ್ಮ ಮತ್ತು ಕನ್ನಡ ಸಾಹಿತ್ಯವೆನ್ನುವ ಅಧ್ಯಾಯದಲ್ಲಿ ವಚನಗಳು ಮತ್ತು ಅವುಗಳ ವಿಶ್ಲೇಷಣೆ ಸಮ-ಸಮನಾಗಿಯೇ ಇರುವಾಗ ಇಂಥಾ ಜವಾಬ್ದಾರೀ ಕಾವ್ಯ ವಿಮರ್ಶೆಯನ್ನು, ಅಂದರೆ ಅನಂತಮೂರ್ತಿಯವರ ಮಾತಿನಲ್ಲಿ ಹೇಳಬೇಕಾದರೆ, ಸಂಸ್ಕೃತಿಗೆ "ಸ್ಪಷ್ಟವಾದ ಹೊಸದಿಕ್ಕ"ನ್ನು ಕೊಡುವ ಅತ್ಯಂತ ಗಂಭೀರವಾದ ಮರುಚಿಂತನೆಯನ್ನು, "ಕಾಲು ಕೆದರಿ" ಮತಾಂಧತೆಯನ್ನು ಪ್ರಚೋದಿಸಿರುವ ಕೆಲಸಕ್ಕಿಳಿಸಿರುವ ರಾಮಚಂದ್ರನ್‌ರ ಈ ಕೆಲಸ ಅತ್ಯಂತ ಖಂಡನೀಯವೂ, ಸಾಹಿತ್ಯ ವಿಮರ್ಶಕರನ್ನೆಲ್ಲಾ ತಲೆ ತಗ್ಗಿಸುವಂತೆ ಮಾಡಿರವಂಥಾದ್ದೂ ಆಗಿದೆ.

ಆದರೆ ರಾಮಚಂದ್ರನ್‌ರವರು ಉದ್ಧರಿಸಿರುವ "ಬ್ರಾಹ್ಮಣೀಕರಣ"ವೆನ್ನುವ ನಾಗರಾಜಪ್ಪನವರ ಮಾತು ರಾಮಚಂದ್ರನ್‌ರಿಗೆ ನುಂಗಲಾರದ ತುತ್ತಾಗಿದ್ದರೂ ಅನಂತಮೂರ್ತಿಯವರು ಅದನ್ನು ಅಗೆದು ಜೀರ್ಣ ಮಾಡಿಕೊಂಡು ಈ ಜಾಡ್ಯವನ್ನು "ಸಾಂಸ್ಕೃತಿಕ ಇಂಪೀರಿಯಲಿಸಂ" ಎಂದು ಕಂಡಕೊಂಡು, ಈ ಜಾಡ್ಯ ಹೇಗೆ ರೆಡ್ ಇಂಡಿಯನ್ನಿನಂತಹ ಸಂಸ್ಕೃತಿಯನ್ನು ಹಾಳು ಮಾಡಿತು ಎನ್ನುವ ಸತ್ಯವನ್ನು ಕಂಡ ದಿಟ್ಟ ಧೀಮಂತ ವಿಮರ್ಶಕರಾಗಿದ್ದರೆ, ರಾಮಚಂದ್ರನ್ "ಕಾಲುಕೆದರು"ವ ಇಂಪೀರಿಯಲಿಸ್ಟ್ ಮತಾಂಧರಾಗಿದ್ದಾರೆ ಎನ್ನುವುದನ್ನು ನಾಸಿಲ್ಲೇಕೆ ಸಾಬೀತು ಪಡಿಸಲೇಬೇಕಾಗಿದೆಯೆಂದರೆ, ನಮ್ಮ ವೀರಶೈವ ಬಾಂಧವರು ಶಂಬಾ, ಚಂಪಾ, ಚಿದಾನಂದಮೂರ್ತಿ, ಲಂಕೇಶ, ಚೆನ್ನಣ್ಣ ವಾಲೀಕಾರ, ವಿಶ್ವನಾಥ ರೆಡ್ಡಿಯವರಂಥ ವಿಮರ್ಶಕರ ನಿಷ್ಠುರ ಸತ್ಯಗಳನ್ನು, ಸ್ವಲ್ಪ ಪ್ರತಿಭಟಿಸಿದರೂ ಚಿಂತೆಯಿಲ್ಲ, ಅವನ್ನು ಭರಿಸಬಲ್ಲ ಧೋರಣೆಯನ್ನು ಮೆಚ್ಯೂರಿಟಿಯನ್ನ ಈವರೆಗೂ ರುಜುವಾತುಪಡಿಸಿರುವುದರಿಂದ, ರಾಮಚಂದ್ರನ್‌ರ ಈ ಪ್ರಚೋದಕ ವಿಮರ್ಶೆಯನ್ನೂ ಅವರು ಭರಿಸಬಲ್ಲರೆಂದು ಭಾವಿಸಿ ಅವರಿಗೂ ಇನ್ನಿತರರಿಗೂ ಈ ಎಚ್ಚರದ ಮಾತನ್ನು ಹೇಳಿ, ಅವರ ಈವರೆಗಿನ ಧೋರಣೆ ತಾಳ್ಮೆಗಳಿಗೆ ಅವರನ್ನು ಅಭಿನಂದಿಸಿ ಈ ಮಾತನ್ನು ಮುಗಿಸುತ್ತೇನೆ. ♦

(ಕೃಪೆ: ಸಂಕ್ರಮಣ. ಸಂ.23.ಸಂ 8 ಆಗಸ್ಟ್ 1988)

ಭಾಗ-II

ಸ್ವೋಪಜ್ಞ ವಿಮರ್ಶೆ- ಮರುಚಿಂತನೆ.

ಡಿ.ಆರ್. ನಾಗರಾಜರ "ಅಮೃತ ಮತ್ತು ಗರುಡ" (1983), ಆರ್ಕೆಯವರ "ವಾಸ್ತವ" (1984), ಕೆ.ಜಿ. ನಾಗರಾಜಪ್ಪನವರ "ಮರುಚಿಂತನೆ (1985) ಈ ದಶಕದ ಪೂರ್ವಾರ್ಧದ ಅತ್ಯಂತ ಸ್ವೋಪಜ್ಞ ವಿಮರ್ಶೆಗಳೆಂದು ನಾನು ತಿಳಿದಿದ್ದೇನೆ. ಈ ಮೂವರು ವಿಮರ್ಶಕರಲ್ಲಿ ವಿದ್ವತ್ತಿನ ಪರಿಶ್ರಮ, ಸಂವೇದನೆಯ ಪ್ರಾಮಾಣಿಕತೆ, ಚಿಂತನೆಯ ಸ್ವಂತಿಕೆ-ಎಲ್ಲಕ್ಕಿಂತಲೂ ಹೆಚ್ಚಾಗಿ ಚಿಂತನೆಯ ಸ್ವಂತಿಕೆ-ಎದ್ದು ಕಾಣುವಷ್ಟು, ಪ್ರಖರವಾದುವಲ್ಲದೆ, ನಮ್ಮೀ ವಿಮರ್ಶೆಗೆ ಹೊಸ ಕ್ರಾಂತಿಕಾರೀ ತಿರುವನ್ನು ಕೊಟ್ಟವುಗಳು. ಹೀಗಿರುವಲ್ಲಿ ನಾವು ಈ ವಿಮರ್ಶಕರಿಂದ ಇನ್ನೂ ಇಂಥಾ ಸ್ವೋಪಜ್ಞ ಬರವಣಿಗೆಗಳನ್ನು ಅಪೇಕ್ಷಿಸುತ್ತಿರುವುದು ಸಹಜವಾಗಿದೆ. ಒಂದು ವಿಶೇಷ ರೀತಿಯಲ್ಲಿ ನಾಗರಾಜರ "ಶಕ್ತಿ ಶಾರದೆಯ ಮೇಳ" ನಾಗರಾಜಪ್ಪನವರ "ಮರುಚಿಂತನೆ"ಗೆ ಸಂಪೂರ್ಣ ವಿರುದ್ಧವಾದ, ಅಂದರೆ ಅವರದು ಎಷ್ಟು ಕ್ರಾಂತಿಕಾರೀ ಹೊಸದೋ ಇವರದು ಅಷ್ಟೇ ರಿಯಾಕ್ಷನರೀ ಹಳತಾದ ಪುಸ್ತಕವೆನ್ನಬೇಕಾಗುತ್ತದೆ.

ವಿಮರ್ಶಕನು ಯಾವಾಗಲೂ ಗೆದ್ದುಕೊಳ್ಳಬೇಕಾದ ಚಪಲ ವಿದ್ವತ್ತಿನದು. ಯಾಕೆಂದರೆ ವಿದ್ವತ್ತು, ಪಾಂಡಿತ್ಯ ಎನ್ನುವುದು ಯಾರೂ ಮೈ ಬಗ್ಗಿಸಿದರೆ ದಕ್ಕುವ ದುಡಿಮೆ ಅದು. ಆದರೆ ಆ ವಿದ್ವತ್ತಿನ ಸಂಚಯ ಚಿಂತನೆಗೆ, ಹೊಸ ಯೋಚನೆಯ ಸ್ವಂತಿಕೆಗೆ, ಸಾಮಾನ್ಯವಾಗಿ ಬಹಳ ಪೂರಕವಾದದ್ದು. ವಿದ್ವತ್ತಿನ ಜಾಯಮಾನವೆಂಥಾದ್ದೆಂದರೆ ಅದು ಅನೇಕ ವೇಳೆ

ಚಿಂತನೆಯ ವೇಷವನ್ನು ಧರಿಸುವ ಸ್ವೋಪಜ್ಞತೆಯ ಮುಸುಕನ್ನು ಹಾಕಿಕೊಳ್ಳುವ ತಾನು ಹೊಸತಿನ ಕಾಣ್ಕೆ ಎಂದುಕೊಂಡು ಮೆರೆಯುವ, ಖದೀಮತನದ್ದು. ಅದಕ್ಕೇ ಲೀವಿಸನು ರೀನೀವೆಲಕನಂಥಾ "ಪ್ರಾಖಾಂಡ ಪಂಡಿತ"ನು ವಿಮರ್ಶೆಗೆ ತತ್ವಶಾಸ್ತ್ರಗಳ, ವಿದ್ವತ್ತಿನ ಹಿನ್ನೆಲೆ, ಬೆಂಬಲ ಬೇಕು ಎಂದಾಗ ಸಾಹಿತ್ಯದ ಓದಿಗೆ ಓದಿನ ಪೂರ್ಣತೆಯೇ, ಓದಿನ ಮನಸ್ಸಾಕ್ಷಿಯೇ ಸಾಕು ಎನ್ನುತ್ತಾ an ideal reader is an ideal critic, ಅಂದರೆ ಆದರ್ಶ ಓದುಗನೇ ಆದರ್ಶ ವಿಮರ್ಶಕನೆನ್ನುವ ಸತ್ಯವನ್ನು ಸಾಬೀತು ಮಾಡಿದನು. ಇದೇ ಅರ್ಥದ ಮಾತನ್ನೇ ಅಂದರೆ ವಿದ್ವತ್ತು ಹೇಗೆ ಚಿಂತನೆಯನ್ನು, ಸಂವೇದನೆಯನ್ನು ದಾರಿತಪ್ಪಿಸುತ್ತದೆ, ಹೇಗೆ ಪರಂಪರೆಯ ವಿದ್ಯಾ ಸಂಸ್ಥೆಗಳಲ್ಲಿ ವಿದ್ವತ್ತನ್ನು ಸಂಪಾದಿಸಿದ ವಿದ್ವಾಂಸ, ಸಂವೇದನೆಯಲ್ಲಿ ಭಾವದ ಅನುಭವದಲ್ಲಿ ಥೇಟ್ ಗಮಾರನಾಗಿರುತ್ತಾನೆ. The more scholastically educated a man is generally, the more he is an emotional boor, ಎನ್ನುತ್ತಾನೆ, ಡಿ.ಎಚ್. ಲಾರೆನ್ಸ್.

ಈ ಪ್ರಸ್ತುತದಲ್ಲಿ ಕೆ.ಜಿ. ನಾಗರಾಜಪ್ಪನವರ "ಮರುಚಿಂತನೆ" ಬಹಳ ಸೂಕ್ತವಾಗಿ ಉದಹರಿಸಬೇಕಾದ ಪುಸ್ತಕ. "ಮರುಚಿಂತನೆ"ಯಂತೂ ನಮ್ಮೀ ವಿಮರ್ಶಾ ಸಂದರ್ಭದಲ್ಲಿ, ಲೀವಿಸಿನ "ರಿವಾಲ್ಯುಯೇಷನ್" (ಮರುಮಾಪನೆ), ಇಂಗ್ಲೆಂಡಿನ ಆ ವಿಮರ್ಶಾ ಸಂದರ್ಭದಲ್ಲಿ ಎಷ್ಟು ಪರಿಣಾಮಕಾರಿಯಾಗಿತ್ತೋ, ಅಷ್ಟೇ ಮಟ್ಟದ ಪರಿಣಾಮಕಾರಿ ಎಂದೆನಿಸುತ್ತದೆ. "ಮರುಚಿಂತನೆ" ಅನ್ವರ್ಥನಾಮದಂತೆ, ನಿಜಕ್ಕೂ ಮತ್ತೆ, ಹೊಸದಾಗಿ ಸ್ವಂತಿಕೆಯ ದಿಟ್ಟತನದಲ್ಲಿ ಮಾಡಿದ ಸ್ವೋಪಜ್ಞ ವಿಮರ್ಶೆ. ಇದರ ದಿಟ್ಟತನದ ಎಂಟೆರ್ದೆ ಎಂಥಾದ್ದೆಂದರೆ, ಇವರ ಆತ್ಮೀಯರು "ಪ್ರಸ್ತಾವನೆ"ಯಲ್ಲಿ ಹೇಳಿದ ಮಾತು ನಾವೂ ಹೇಳಬೇಕಾಗುತ್ತದೆ: "ಮಗು, ಬಿಚ್ಚುಮನಸ್ಸಿನಿಂದ ಸತ್ಯವನ್ನು ಬರೆದರೆ ಸಮಾಜ ನಿನ್ನನ್ನು ಜೀವಸಹಿತ ಬದುಕಲು ಬಿಡುವುದೆ?"

ಯು.ಆರ್. ಅನಂತಮೂರ್ತಿಯವರು ಮುನ್ನುಡಿಯಲ್ಲಿ ಹೇಳಿದಂತೆ "ಮರುಚಿಂತನೆ" ನಮ್ಮ ಕಾಲದ ಬಹು ಮುಖ್ಯ ಸಾಂಸ್ಕೃತಿಕ ವಾಗ್ವಾದಗಳಿಗೆ ಒಂದು ಸ್ಪಷ್ಟ ದಿಕ್ಕನ್ನೂ, ಅರ್ಥಪೂರ್ಣತೆಯನ್ನೂ ತರಬಲ್ಲ ಮಹತ್ವದ ಕೃತಿ" ಎನ್ನುವುದು ಯಾವ ಓದುಗನಿಗೂ ಅನಿಸುವಂಥಾದ್ದು. ಉದಾಹರಣೆಗೆ ಅವರ ಈ ಒಂದೆರಡು, ಅನಂತಮೂರ್ತಿಯವರು ಸೂಕ್ತವಾಗಿ ಮುನ್ನುಡಿಯಲ್ಲಿ ಉದ್ಧರಿಸುವ, ಮಾತಗಳು ಎಷ್ಟು ದಿಟ್ಟತನದ ಎಂಟೆರ್ದೆಯವು ನೋಡಿ: "ವೀರಶೈವ ಧರ್ಮ ಮಾನವರೆಲ್ಲರೂ ಸಮಾನರು ಎಂದು ಬೋಧಿಸಲಿಲ್ಲ-ಲಿಂಗದೀಕ್ಷಾಬದ್ಧರೆಲ್ಲರೂ ಸಮಾನರು ಮತ್ತು ಶಿವ ಸಹೋದರರು, ಎಂದು ಸಾರಿತು" (ಪು. ೭೪); "ಲಿಂಗದೀಕ್ಷೆಯ ಶಿವಶರಣರದ್ದು ಕಾಯಕವಾಗುತ್ತದೆಯೇ ಹೊರತು, ಭವಿಗಳ ಕೆಲಸ ಕಾಯಕವಾಗುವುದೇ?" ♦

ಪ್ರೊ|| ಪೋಲಂಕಿ ರಾಮಮೂರ್ತಿ

(ಕೃಪೆ : ಅನ್ವೇಷಣೆ: ಜುಲೈ -ಆಗಸ್ಟ್ 88)

ಭಾಗ-III
ಒಂದು ಪತ್ರ.

ಪ್ರಿಯ ನಾಗರಾಜಪ್ಪನವರೇ, 16-11-87

'ಮರುಚಿಂತನೆ' ಮೆಲುಕು ಹಾಕಿದ ಹಾಗೆಲ್ಲಾ ಒಳನೋಟಗಳನ್ನು ಇನ್ನೂ ಆಳಕ್ಕಿಳಿಸುವುದು ಸೋಜಿಗದ್ದು. ಅದನ್ನು ಅಲನಹಳ್ಳಿಯ ಜೊತೆ ಮಾತನಾಡುತ್ತಿದ್ದಾಗ, ಅವನೆಂದ ಮಾತು ಅದು ಅನಂತಮೂರ್ತಿಯದೂ ಸ್ವಲ್ಪ ಮಟ್ಟಿಗೆ ಮುನ್ನುಡಿಯಲ್ಲಿ ಆಗಿದೆ. ಈ ಅರ್ಥದ್ದು : ನಾಗರಾಜಪ್ಪನವರ ಈ ದೇಶೀ ಭಾಷೆಯ ಬರವಣಿಗೆ ಎಷ್ಟು ನಿಜವಾದ ಕಲೆಯಾಗಿದೆ, ಮಾರ್ಗ (ಶಿಷ್ಟ) ಭಾಷೆಯ ಪೇಲವ ಬರವಣಿಗೆಗಿಂತ ಎನ್ನುವುದನ್ನು ಎತ್ತಿ ತೋರಿಸಬೇಕಿತ್ತು ಎಂದು. ಆದರೆ ಈ ತಾತ್ವಿಕ ಒಳನೋಟದಲ್ಲಿ ಆ ಸಾಹಿತ್ಯಕ ಸತ್ಯ ಅಡಗಿದೆಯೆಂದೇ ನನ್ನ ಭಾವನೆ; ಹಾಗೂ ಅದರ ಮೌಲ್ಯೀಕರಣವು ನಡೆದಿದೆ ಕೂಡ.

ಶಿಷ್ಟ ಭಾಷೆಯ ಸಾಹಿತ್ಯ ಜಾನಪದ ಭಾಷೆಯ ಮೂಳೆ ಮಾಂಸ ಮಜ್ಜೆಗಳ ಜೀವಂತಿಕೆ, ಚೆಲುವುಗಳನ್ನು ಪಡೆದುಕೊಳ್ಳಲಾರದೆ ಕೇವಲ ಭೋದ ತತ್ವಜ್ಞಾನ ಅಥವಾ ಛಂದಸ್ಸಿನ ಸರ್ಕಸ್ಸು ಆಗಿದೆ; ಅದು ಶಿಷ್ಟ ಭಾಷೆಯ ಸಾಹಿತ್ಯಕ Performance ಆಗಿದೆ; ಅದು ಭಾಷೆಯ ಸಾಹಿತ್ಯಕ Happening ಆಗಿಲ್ಲ.

ಒಂದು ರೀತಿಯಲ್ಲಿ ನಿಮ್ಮ ನಿಲುವು ಪ್ರಶ್ನಿಸಲಾಗದ್ದು. ಎಷ್ಟೇ ಮುಕ್ತವಾಗಿ, ಜೀವಕ್ಕೆ ಹತ್ತಿಕೊಂಡು ಬರೆದರೂ ಈ ಆಡುಮಾತಿನ ಬರವಣಿಗೆ ಜಾತಿ ಧರ್ಮಗಳ ಶೂಲಕ್ಕೆ ಸಿಕ್ಕು ಗುಲಾಮ ಬರವಣಿಗೆಯೇ; ಸಂಕೋಲೆಗಳನ್ನೆ ಆಭರಣಗಳೆಂದು ಭ್ರಾಂತಿಗೊಂಡ ಬಡಪಾಯಿ ಬರವಣಿಗೆಯೇ.

ಇಲ್ಲಿ ಈ ಬಂಧಿಯ ಸಾಲನ್ನು ನೋಡಿ:

Time held me and dying
Though I sang in my chains like the sea.

ಡಿಲನ್ ಟಾಮಸನ್ನು (Dylan Thomes) ಹೇಳುವ ಈ ಬಂಧಿಯ ಹಾಡು, ಸಂಕೋಲೆಗಳಲ್ಲೆ ತಾಳ ಕುಟ್ಟುವ ಈ ಜೀವೋತ್ಕರ್ಷ ಮೆಚ್ಚ ಬೇಕಾದದ್ದೇ: " I sang in my chains like the sea; ಒಂದು ರೀತಿಯಲ್ಲಿ Sea ಕೂಡಾ ಈ Chain ನಿಂದ ಬಂಧಿತವಾದದ್ದೇ- ಅದು ಮೇರೆ ಮೀರದೆ ಸದಾ ನೀವುತ್ತಲೇ, ತನ್ನನ್ನು ತಾನೇ ನೀವುತ್ತಲೇ ಹಾಡುತ್ತಿರುವ ಅಮೋಘದ್ದು, ಅಲ್ಲಾ?

ಹೀಗೆ ಬಸವ, ಅಕ್ಕ, ಅಲ್ಲಮ, ಕನಕ, ಪುರಂದರ ದಾಸಾದಿಗಳು ಈ ಬಂಧಿಯಲ್ಲೇ, ಇಬ್ಬಂದಿಯಲ್ಲೇ ಹಾಡು ಹೊಮ್ಮಿಸಿದ ಹಾಡುಗಾರರು. ಸಾಹಿತ್ಯದ ವಿದ್ಯಾರ್ಥಿಗಳಾದ ನಾವು ಈ ಹಾಡಿನಲ್ಲೇ ಸಾಧಿತವಾಗಿರುವ ಮುಕ್ತಿಯ ಬಗ್ಗೆ, ಬಿಡುಗಡೆಯ ಬಗ್ಗೆ ಮಾತಾಡಬೇಕೇನೋ ಅನ್ನಿಸುತ್ತದೆ.

ಭಾಷೆ ಬಿಡುಗಡೆ ನೀಡಿತು, ನಿಜ; ಆದರೆ ನಾವೆಲ್ಲರೂ ಕುಮಾರವ್ಯಾಸನಂತೆ ಬ್ರಾಹ್ಮಣ ಶೂದ್ರರು, ಅಥವಾ ಶೂದ್ರ ಬ್ರಾಹ್ಮಣರೇ; ಆ ದ್ವಂದ್ವ ಮೀರಿದ ಜೀವಿಗಳಲ್ಲ, ಜೀವಂತರಲ್ಲ. ಇದಕ್ಕೆ ಕಾರಣ ಈ ಪರಂಪರೆಯ, ಈ ಸನಾತನದ ಸಮ್ಮೋಹನತೆ-ಮೆದುಳನ್ನೇ ತಿರುಚಿದ ಬುದ್ಧಿಭಂಗ.

ಈಗ ನೀವು ಸಂಸ್ಕೃತ ಹೇಗೆ ಕನ್ನಡವನ್ನು ತಳ್ಳಿ ತಾನೇ ಆ ಸ್ಥಾನಕ್ಕೆ ಬಂದು ಮತ್ತೆ ಸನಾತನವನ್ನು ಬಿತ್ತುತ್ತಿದೆ, ಹೇಗೆ ಮತ್ತೆ ಎಚ್ಚೆತ್ತ ಕನ್ನಡ ಮತ್ತು ಸನಾತನ ಮತ್ತಿಗೆ ತಿರುಗುತ್ತಿದೆ ಎನ್ನುವ ಮಹದೆಚ್ಚರದ ಮಾತು ಬಹಳ ಗಟ್ಟಿಯಾದದ್ದು; ಅದನ್ನು ಕುರಿತು ಚಿಂತಿಸುತ್ತಿದ್ದೇನೆ.

ಪ್ರತಿ ಪೇಜಿನಲ್ಲೂ ಯೋಚಿಸಲಿಕ್ಕೆ ಹಚ್ಚುವ ಒಂದೆರಡು ಮಾತುಗಳನ್ನು ನಾನು ಮಾರ್ಜಿನ್ನಿನಲ್ಲಿ ಮಾರ್ಕ್ ಮಾಡಿದ್ದೇನೆ: ಒಟ್ಟಿನಲ್ಲಿ ಒಂದು ಪುಟಕ್ಕೆ ಒಂದರಂತಾದರೂ ಈ ಗುರುತುಗಳಿವೆ. ಈ ಬಗ್ಗೆ ನನಗೆ ನಿಮ್ಮನ್ನು ಕುರಿತು, ಈ ಮುಕ್ತ ಚಿಂತನೆಯ ದಿಟ್ಟತನಕ್ಕೆ, ಧೀಮಂತ ಸೋಪಜ್ಞತೆಗೆ ಹೆಮ್ಮೆ ತುಂಬಿ ಬರುವಂತೆ ಮಾಡುತ್ತಿದೆ.

ನೀವು ನೊಂದವರು; ನೊಂದವ ನೋವಿನಲ್ಲಿ ಕರುಕಾಗಿ ಬಿಡುತ್ತಾನೆ, ಇದ್ದಲಾಗಿ ಬಿಡುತ್ತಾನೆ; ಆದರೆ ನೀವು ನೋವನ್ನುಂಡು ಕೆಂಡವಾಗಿಯೇ ಕಾಯುತ್ತಿದ್ದೀರಿ-ಈ 'ಕಾಯು'ವ ಎಲ್ಲಾ ಅರ್ಥಗಳಲ್ಲೂ; ಕಾವಾಗಿಯೂ, ಬೆಳಕಿಗೆ ಕಾಯುವವರಾಗಿಯೂ ನೀವು ಕನ್ನಡಕ್ಕಿರುವುದು ಈ ಕನ್ನಡ ಜನರ ಭಾಗ್ಯ. ನಿಮ್ಮನ್ನ ಈ ಜನ ಕಂಡು ಕೊಳ್ಳುವುದಿಲ್ಲ, ಕಂಡು ಕೊಳ್ಳುವ ಪ್ರಯತ್ನವನ್ನೂ ಮಾಡುವುದಿಲ್ಲ. ಯಾಕೆಂದರೆ ನೀವೀಜನದ, ಈ ಸನಾತನದ ಜಾತಿಯಲ್ಲ, ಧರ್ಮವಲ್ಲ. ಆದರೆ ನೀವು ನಿಮ್ಮ ಕಾಯುವ ಮನೋಧರ್ಮವನ್ನ ಬಿಡಲಾರಿರಿ: ಅದೇ ಆ ಕಾಯಕದ ಕೃತಕೃತ್ಯತೆ, ಅಲ್ಲಾ?

ನೀವು ಓಡಾಡುತ್ತಿದ್ದೀರಿ, ಒಳ್ಳೆಯ ಹದಿ ಹರೆಯದವರಂತೆ, ಅಷ್ಟು ಉತ್ಸಾಹ-ಸಾಮರ್ಥ್ಯಗಳಲ್ಲಿ. ಈ ಓಡಾಟ ಫಲಕಾರಿಯಾಗಲೆಂದಷ್ಟೇ ನಾನು ನಿಮ್ಮೊಂದಿಗೆ ಕೈಸೇರಿಸಿಯೋನಲ್ಲದೆ ಮತ್ತೇನು ಮಾಡಬಲ್ಲೆ.

ಬರೆಯಿರಿ - ಬರೆಯುತ್ತಿರಿ, ಅದೇ ನಮ್ಮ ಉಚ್ಛ್ವಾಸ ನಿಶ್ವಾಸ. ಅದಕ್ಕೆಂದೇ ಮರುಚಿಂತನೆ ನನ್ನ ಟೇಬಲ್ಲ ಮೇಲೇ ಇದೆ; ಇರುತ್ತದೆ. ಪ್ರೀತಿಯಿಂದ

ತಮ್ಮ ವಿಶ್ವಾಸಿ.
ಪೋಲಂಕಿ ರಾಮಮೂರ್ತಿ.

6. ಮರುಚಿಂತನೆ

ಡಾ॥ ಯು.ಆರ್.ಅನಂತಮೂರ್ತಿ

ಪ್ರೊ॥ ನಾಗರಾಜಪ್ಪನವರ 'ಮರುಚಿಂತನೆ' ನಮ್ಮ ಕಾಲದ ಬಹುಮುಖ್ಯ ಸಾಂಸ್ಕೃತಿಕ ವಾಗ್ವಾದಗಳಿಗೆ ಒಂದು ಸ್ಪಷ್ಟ ದಿಕ್ಕನ್ನೂ, ಅರ್ಥಪೂರ್ಣತೆಯನ್ನೂ ತರಬಲ್ಲ ಮಹತ್ವದ ಕೃತಿ ಎಂದು ನನ್ನ ಭಾವನೆ. ಈ ಮಾತನ್ನು ಆಡುವಾಗ ನನಗಿರುವ ಮಿತಿಯನ್ನೂ ಅರ್ಹತೆಯನ್ನೂ ಹೇಳಿಕೊಂಡು ಬಿಡುವುದು ಅಗತ್ಯ. ಪ್ರೊ॥ ನಾಗರಾಜಪ್ಪನವರು ಚರ್ಚಿಸಿರುವ ಹಲವು ವಿಷಯಗಳಲ್ಲಿ ನನಗಿರುವ ಜ್ಞಾನ ಅಲ್ಪವಾದದ್ದು. ಪ್ರಾಚೀನ ಕನ್ನಡ ಸಾಹಿತ್ಯವನ್ನು ನಾನು ಶಿಸ್ತಿನಿಂದ ಅಭ್ಯಾಸ ಮಾಡಿದವನಲ್ಲ. ಆದರೆ ನನ್ನ ಗೆಳೆಯರಾದ ಶ್ರೀ ಕೆ.ವಿ. ಸುಬ್ಬಣ್ಣ, ಶ್ರೀ ಜಿ.ಎಚ್. ನಾಯಕ್‌ರಂಥವರಿಂದ ನಾನು ಹಳೆಗನ್ನಡವನ್ನು ಅಲ್ಪ ಸ್ವಲ್ಪ ಕಲಿತುಕೊಂಡವನು. ಈಚೆಗೆ ನನ್ನ ಕಿರಿಯ ಗೆಳೆಯರಾದ ಕಿ.ರಂ. ನಾಗರಾಜರ ಹುಚ್ಚು ಹಿಡಿಸಬಲ್ಲ ಉತ್ಸಾಹದಲ್ಲಿ ಕುಮಾರವ್ಯಾಸ, ಪಂಪ ಮತ್ತು ವಚನಕಾರರನ್ನು ಅನುಭವಿಸಿರುವವನು. ಈಗ ಪ್ರೊ॥ ನಾಗರಾಜಪ್ಪನವರು ನನ್ನ ಈ ಕಲಿಯುತ್ತಿರುವ ಪ್ರಕ್ರಿಯೆಗೆ ಮಹತ್ತರವಾದ ವಿಚಾರಗಳನ್ನು ಸೇರಿಸುತ್ತಿದ್ದಾರೆ. ಇವರಿಗೆ ನನ್ನ ವೈಯಕ್ತಿಕ ಕೃತಜ್ಞತೆಗಳನ್ನು ಹೇಳುವುದೇ ನನ್ನ ಮುಂದಿನ ಮಾತುಗಳ ಮುಖ್ಯ ಉದ್ದೇಶ ಎನ್ನಬಹುದು.

ಈ ಪುಸ್ತಕದ ಬಗ್ಗೆ ಮಾತಾಡಲು ನನಗಿರುವ ಅರ್ಹತೆ ನಿರಂತರವಾಗಿ ನನ್ನ ಕಾಡಿದ, ನನ್ನ ಕೃತಿಗಳ ಮುಖ್ಯ ಪ್ರೇರಣೆಯಾದ ಕೆಲವು ವಿಷಯಗಳಿಗೆ ಸಂಬಂಧಿಸಿದ್ದು. ಸುಮಾರು ಎರಡು ದಶಕಗಳ ಹಿಂದೆ ನನ್ನ ಬರವಣಿಗೆಗೂ ನನ್ನ ವೈಯಕ್ತಿಕ ಜೀವನಕ್ಕೂ ಪ್ರೇರಕ ಶಕ್ತಿಯಾಗಿದ್ದ ಕೆಲವು ವಿಚಾರಗಳಿಗೆ ಅಭಿವ್ಯಕ್ತಿಯನ್ನು ಕೊಟ್ಟ ಲೇಖನವೊಂದನ್ನು ಬರೆದೆ. ('ಸಾಹಿತ್ಯದಲ್ಲಿ ಬ್ರಾಹ್ಮಣ ಮತ್ತು ಶೂದ್ರ'-ಪ್ರಜ್ಞೆ ಮತ್ತು ಪರಿಸರ). ಈ ಲೇಖನದ ನಂತರ ನಾನು ಜಾತಿ ವಿನಾಶದ ಬಗ್ಗೆಯೂ ಹಾವನೂರು ವರದಿಯ ಬಗ್ಗೆಯೂ ಬರೆದ ಲೇಖನಗಳು ನನ್ನ ವಿಚಾರಗಳನ್ನು ಹೆಚ್ಚು ಸ್ಪಷ್ಟತೆಯತ್ತ ಒಯ್ಯಲು ಪ್ರಯತ್ನಿಸಿವೆ. ಚಿಕ್ಕಂದಿನಲ್ಲಿ ವೈದಿಕ ಪರಿಸರದಲ್ಲಿ ಬೆಳೆದು, ಅದರಿಂದ ನಂತರ ಪ್ರಭಾವಿತನಾಗಿ, ಹೊಸ ವಿಚಾರಗಳಿಗೆ ಒಡ್ಡಿಕೊಂಡಿರುವ ನನ್ನ ಗೊಂದಲಗಳು ಸೃಜನಶೀಲವಾಗಿ ವ್ಯಕ್ತವಾಗುವಾಗ ಈ ನಮ್ಮ ಬದಲಾಗುತ್ತಿರುವ ಕಾಲದ ಕಾತರಗಳಿಗೂ ಆತಂಕಗಳಿಗೂ ಅಭಿವ್ಯಕ್ತಿಯನ್ನು ಕೊಟ್ಟಿವೆ ಎಂದು ನಾನು ತಿಳಿದಿದ್ದೇನೆ. ಸೃಜನಶೀಲ ಕೃತಿಯಲ್ಲಿ ಗೊಂದಲವೂ ಅರ್ಥಪೂರ್ಣವಾಗುತ್ತದೆ. ಆದರೆ ವೈಚಾರಿಕ ಬರವಣಿಗೆ ಇನ್ನೊಂದು ಬಗೆಯ ತರ್ಕಬದ್ಧ ಸ್ಪಷ್ಟತೆಯ ಅಭಿವ್ಯಕ್ತಿಯನ್ನು ಅಪೇಕ್ಷಿಸುತ್ತದೆ. ನನ್ನ ಕೃತಿಯಲ್ಲಿರುವ ಆತಂಕಗಳು, ಕೇವಲ ನನಗೆ ಸೀಮಿತವೋ ಅಥವಾ ನಮ್ಮ ಸಾಹಿತ್ಯ ಪರಂಪರೆಯಲ್ಲೇ ಅಂತರ್ಗತವಾದ ಬಹುಮುಖ್ಯ ಪ್ರಶ್ನೆಯೋ ಎಂಬ ನನ್ನ ಸಮಸ್ಯೆಗೆ ನಾಗರಾಜಪ್ಪನವರು ತಮ್ಮ ಈ ಕೃತಿಯಲ್ಲಿ ಪರೋಕ್ಷವಾಗಿ ಕೆಲವು ಉತ್ತರಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಇವರ **'ಮರುಚಿಂತನೆ'** ನನ್ನ ಸ್ವಂತ ಆಸಕ್ತಿಗಳ ಬಗ್ಗೆ

ಮರುಚಿಂತನೆಯೂ ಆಗಿ ಪರಿಣಮಿಸಿ ನನ್ನ ಉತ್ಸಾಹವನ್ನು ಇವರು ಹೆಚ್ಚಿಸಿದ್ದಾರೆ. ಈ ಕೆಲವು ವರ್ಷಗಳಲ್ಲಿ ನಾಗರಾಜಪ್ಪನವರಷ್ಟು ನನ್ನನ್ನು ಪ್ರಚೋದಿಸಿದ ವಿಮರ್ಶಕರು ಕನ್ನಡದಲ್ಲಿ ವಿರಳ ಎಂಬುದನ್ನು ಸ್ವಾನುಭವಕ್ಕೆ ಬದ್ಧವಾದ ಪ್ರಾಮಾಣಿಕತೆಯ ಮಿತಿಯಲ್ಲಿ ನಾನು ಹೇಳಲು ಬಯಸುತ್ತೇನೆ.

* * * * * * *

'ಮರುಚಿಂತನೆ' ಬಗ್ಗೆ ನನ್ನ ವಿಮರ್ಶೆಯನ್ನು ಒಂದು ಮನಸ್ಸಿನ ಲಹರಿಯೆಂದೇ ಕರೆದುಕೊಳ್ಳುವುದು ವಾಸಿ. ಏಕೆಂದರೆ ನಾಗರಾಜಪ್ಪನವರ ಜೊತೆ ಮಹತ್ವದ ವಾಗ್ವಾದಕ್ಕೆ ಇಳಿಯಬಲ್ಲ ಪಾಂಡಿತ್ಯವನ್ನು ಪಡೆದವರೆಂದರೆ ಡಾ॥ ಚಿದಾನಂದಮೂರ್ತಿ, ಡಾ॥ ಎಲ್. ಬಸವರಾಜು, ಡಾ॥ ಶಿವರುದ್ರಪ್ಪ, ಡಾ॥ ತಿಪ್ಪೇರುದ್ರಸ್ವಾಮಿ ಅಂಥವರು. ನನ್ನದು ಇವರು ಬರೆಯುವುದರ ಬಗ್ಗೆ ಮೊದಲೇ ತಿಳಿದವನ ಪ್ರತಿಕ್ರಿಯೆ ಅಲ್ಲ, ತಿಳಿಯುತ್ತಿರುವವನ ಉಲ್ಲಾಸದ ಮನಸ್ಸಿನ ಲಹರಿ.

ನಾಗರಾಜಪ್ಪನವರು ಶೂದ್ರ ಜನರ ಆಚರಣೆಯಲ್ಲಿರುವ ಸಂಸ್ಕೃತಿ ಹೇಗೆ ಜೈನರಿಂದ, ವೀರಶೈವರಿಂದ, ವೈದಿಕರಿಂದ ಜರಿಯಲ್ಪಟ್ಟಿತು ಎಂಬುದನ್ನು ನಮಗೆ ನಾಟುವಂತೆ ತಮ್ಮ ಪ್ರತಿಯೊಂದು ಲೇಖನದಲ್ಲೂ ಹೇಳಿದ್ದಾರೆ. ಜೈನರಲ್ಲೂ ವೀರಶೈವರಲ್ಲೂ ಮತಾಂತರರಾದ ವೈದಿಕರು ಇಡೀ ಕನ್ನಡ ಸಾಹಿತ್ಯದ ಪ್ರೇರಣೆಯ ಶಕ್ತಿಯಾಗಿ ನಿಂತು ಕೆಳವರ್ಗದವರ ಸಂಸ್ಕೃತಿಯನ್ನು ತೀವ್ರವಾಗಿ ಖಂಡಿಸಿರುವುದರಿಂದ ಕನ್ನಡ ಸಾಹಿತ್ಯದಲ್ಲಿ ಕಾವ್ಯ ಮತ್ತು ಸಾಮಾನ್ಯ ಜನರ ನಡುವೆ ಎಂದೆಂದೂ ತುಂಬಲಾರದ ಕಂದಕ ನಿರ್ಮಾಣವಾಗಿತ್ತು ಎಂಬುದನ್ನು 'ಕಾವ್ಯ-ಹೊಸ ದೃಷ್ಟಿ-ಹಳಗನ್ನಡ ನಡುಗನ್ನಡ' ಎಂಬ ಲೇಖನದಲ್ಲಿ ಇವರು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುವಾಗ ನಮ್ಮ ಸಾಹಿತ್ಯದ ನೈಜ ನೆಲೆಗಳನ್ನೂ-ಸಾಧನೆಗಳನ್ನೂ ಸೂಕ್ಷ್ಮವಾಗಿ ಗ್ರಹಿಸಬೇಕೆಂಬುದನ್ನು ನಾಗರಾಜಪ್ಪನವರು ಮರೆಯುವುದಿಲ್ಲ. ಇದೇ ಲೇಖನದಲ್ಲಿ " ವೈದಿಕ ಕೃತಿಗಳು ಸಾಮೂಹಿಕ ಜೀವನವನ್ನೇ ಕೇಂದ್ರ ಬಿಂದುವಾಗಿಸಿಕೊಂಡರೆ ಜೈನ ಧಾರ್ಮಿಕ ಕೃತಿಗಳು ವ್ಯಕ್ತಿಯನ್ನೇ ಕೇಂದ್ರವನ್ನಾಗಿಸಿಕೊಂಡಿವೆ." "ಜೈನರು ಮಾತ್ರ ಶೈವ ಪುರಾಣ ಮತ್ತು ಶೈವ ಕಾವ್ಯವನ್ನು ಅಪ್ಪಿತಪ್ಪಿಯೂ ಜೈನಧರ್ಮ ಪ್ರಸಾರಕ್ಕೆ ಬಳಸಿಕೊಳ್ಳದಿರುವುದು ಕುತೂಹಲ ಕೆರಳಿಸಬಹುದಾಗಿದ್ದು ಮತ್ತಷ್ಟು ಅಧ್ಯಯನಕ್ಕೆ ವಸ್ತುವೇ ಸರಿ" (ಪು-೧೪) ಎಂಬುದೂ ಕೂಡ ಮುಖ್ಯವಾದ ಒಳನೋಟ ಎನ್ನಿಸುತ್ತದೆ. ಇದೇ ಲೇಖನದಲ್ಲಿ ವಚನಕ್ಕೂ, ವಚನರಚನೆಗೂ ನಡುವೆ ಇರುವ ವ್ಯತ್ಯಾಸವನ್ನು, ಲೇಖಕರು ಎತ್ತಿ ತೋರಿಸುವ ಕ್ರಮ ಸಾಹಿತ್ಯ ವಿಮರ್ಶೆಗೂ ಸಂಸ್ಕೃತಿ ವಿಶ್ಲೇಷಣೆಗೂ ಏಕ ಕಾಲದಲ್ಲಿ ಮಹತ್ವದ್ದೆನ್ನಿಸುವ ವಿಚಾರಗಳನ್ನು ಪಡೆದಿದೆ. "ವಚನಗಳಲ್ಲಿ ಶರಣರ ಸಾಧಕ ಜೀವನಕ್ಕೆ ಒತ್ತು ಬಿದ್ದರೆ ವೀರಶೈವ ಕಾವ್ಯಗಳಲ್ಲಿ ಶರಣರ ಸಿದ್ಧ ಜೀವನಕ್ಕೆ ಒತ್ತು ಬಿದ್ದಿತು" (ಪು-೨೦) - ಎಂದು ಹೇಳುವಾಗ ಸಾಹಿತ್ಯ ವಿಮರ್ಶೆಯ ತಾರತಮ್ಯ ಜ್ಞಾನ ಲೇಖಕರ ಒಳನೋಟದಲ್ಲಿ ಕೆಲಸಮಾಡಿದೆ. ಇಂಥ ಒಳ ನೋಟಗಳು ನಾಗರಾಜಪ್ಪನವರನ್ನು ಕೆಲವು ದಿಟ್ಟ

ಗ್ರಹಿಕೆಗಳಿಗೆ ಕರೆದೊಯ್ಯುತ್ತವೆ. ಉದಾಹರಣೆಗೆ ನೋಡಿ :"ಜೈನ ಮತ್ತು ವೀರಶೈವರು ಬ್ರಾಹ್ಮಣರನ್ನು ಎಷ್ಟೇ ವಿರೋಧಿಸಿದರೂ ಬ್ರಾಹ್ಮಣತ್ವ ಸಾಧಿಸಿದ್ದನ್ನೇ ಗುರಿಯಾಗಿ ಹೊಂದಿದ್ದವು. ಈ ಎರಡೂ ಧರ್ಮಗಳೂ ಬ್ರಾಹ್ಮಣೀಕರಣದ ವ್ಯಾಖ್ಯಾನದಿಂದ ತಮ್ಮ ತಮ್ಮ ಧರ್ಮದ ಸತ್ವವನ್ನು ಕಳೆದುಕೊಂಡುವಲ್ಲದೆ, ಮುಂದಿನ ಬ್ರಾಹ್ಮಣ ಸಾಹಿತ್ಯದ ಕೃಷಿಗೆ ಕನ್ನಡ ಸಾಹಿತ್ಯದ ನೆಲವನ್ನು ಹದ ಗೊಳಿಸಿದವು". (ಪು-೨೨)

ವಿಪರ್ಯಾಸವೆಂದರೆ ಬ್ರಾಹ್ಮಣ ಲೇಖಕರು ಸೃಷ್ಟಿಸಿದ ಕೃತಿಗಳು, ಬ್ರಾಹ್ಮಣೀಕರಣದ ಪ್ರಕ್ರಿಯೆಯಲ್ಲಿ ಇನ್ನೊಂದು ಮುಂದಿನ ಹೆಜ್ಜೆಯನ್ನಿಡದೆ ಶೂದ್ರ ಸಂಸ್ಕೃತಿಗೆ ಕೆಲವು ವಿಷಯಗಳಲ್ಲಾದರೂ ಹತ್ತಿರವಾಗಲು ಪ್ರಯತ್ನಿಸಿದ್ದು, ನಮ್ಮ ಕಾಲದ ಮಹತ್ವದ ಕವಿಗಳಾದ ಕುವೆಂಪು, ಬೇಂದ್ರೆಯವರನ್ನು 'ಹೋಲಿಸಿದಾಗ ಬೇಂದ್ರೆ ಬಗ್ಗೆ ಹೇಳಬಹುದಾದ್ದನ್ನು ನಾಗರಾಜಪ್ಪನವರು " ಭಾಷೆಯ ದೃಷ್ಟಿಯಿಂದ ನಾರಣಪ್ಪನನ್ನು ಬ್ರಾಹ್ಮಣ ಶೂದ್ರನೆಂದರೆ ತಪ್ಪಾಗಲಾರದು" (ಪು-೨೪) ಎಂದು ಕುಮಾರವ್ಯಾಸನ ಬಗ್ಗೆ ಹೇಳುತ್ತಾರೆ.

ಇಂಥ ಮಹತ್ವದ ಪ್ರಶ್ನೆಗಳನ್ನು ಎತ್ತಿರುವ **'ಕಾವ್ಯ-ಹೊಸ ದೃಷ್ಟಿ-ಹಳಗನ್ನಡ ನಡುಗನ್ನಡ'** ಲೇಖನ ಕೊನೆಯಲ್ಲಿ ಕೆಲವು ಸರಳವಾದ ಸಾರಾಂಶ ರೂಪದ ವಿಚಾರದಲ್ಲಿ ಕೊನೆಯಾಗುತ್ತದೆ ಎಂದು ನನಗನ್ನಿಸುತ್ತದೆ.

'ಅಲ್ಲಮನ ವಚನದ ಒಂದು ಅರ್ಥ' - ಲೇಖನ ಡಾ|| ಚಿದಾನಂದಮೂರ್ತಿ ಅವರ ಲೇಖನವೊಂದಕ್ಕೆ ಬರೆದಿರುವ ಪ್ರತಿಕ್ರಿಯೆ. ನಾಗರಾಜಪ್ಪನವರು ವೀರಶೈವ ಧರ್ಮದ ಅನುಭಾವದಲ್ಲಿ ಗಾಢವಾದ ಜ್ಞಾನವನ್ನು ಪಡೆದವರೆಂಬುದು ಈ ಲೇಖನದಿಂದ ಸಾಬೀತಾಗುತ್ತದೆ. **'ಋಜುವಾತು'** ವಿನಲ್ಲಿ ನಡೆದ ಈ ಚರ್ಚೆಗೆ ಡಾ|| ಚಿದಾನಂದಮೂರ್ತಿಯವರು ಏನು ಉತ್ತರವಾಗಿ ಹೇಳುವುದು ಇದೆ ಎಂಬ ಬಗ್ಗೆ ಅದರ ಸಂಪಾದಕನಾದ ನನಗೆ ಇನ್ನೂ ಕುತೂಹಲ ಉಳಿದಿದೆ.

ನಾಗರಾಜಪ್ಪನವರ **'ಶರಣರು-ಏಕಮುಖ ಚಿಂತಕರು'** ಎಂಬ ಲೇಖನ ಭಾವೋದ್ವೇಗದ ವಾಗ್ವಾದಕ್ಕೆ ಎಡೆಮಾಡಿಕೊಡಬಲ್ಲಂಥದ್ದು. ನಮ್ಮ ಸಂಸ್ಕೃತಿ ಸಜೀವವೂ ಪ್ರಬುದ್ಧವೂ ಎಂದು ನಾನು ತಿಳಿದಿರುವುದರಿಂದ ಈ ಕೆಳಗಿನ ಮಾತುಗಳು ಗಾಢವಾದ ಚರ್ಚೆಗೆ ಆಹ್ವಾನವೆಂದು ನಾನು ತಿಳಿದಿದ್ದೇನೆ:

"ಹಚ್ಚಿದ ಸಿಡಿಮದ್ದನ್ನು ಮಡಿಳಲ್ಲಿ ಕಟ್ಟಿಕೊಂಡೇ ಮತ್ತೊಂದು ಗುದಾರಕ್ಕೆ ಸಿಡಿಮದ್ದು ಹಚ್ಚುವ ಸಾಹಸವೇ ಶರಣರ ಚಳುವಳಿ. ಶಿವಭಕ್ತರ ಕುಲ ಒಂದೇ ಎಂದು ಸಾರಿದ್ದರೂ ಸಮಾನತೆಯ ಮೇಲೆ ವೀರಶೈವ ಸಮಾಜ ರೂಪುಗೊಳ್ಳಲಿಲ್ಲ. ಆತ್ಮದ ವಿಷಯದಲ್ಲಿ ಸಮಾನತೆಯನ್ನು ಸಾರಿತೇ ಹೊರತು ಸಾಮಾಜಿಕ ಸಮಾನತೆಗೆ ಎಂದೂ ಹೋರಾಡಲಿಲ್ಲ. ಕೆಳವರ್ಗದವರ ಸಂಸ್ಕೃತಿಯನ್ನು ನಾಶಮಾಡುವುದಕ್ಕಾಗಿಯೇ ಅನ್ಯದೇವರನ್ನು ಹಾದರ, ಪರಿವಾರ ದೇವತೆ ಎಂದು ಕರೆದು ಏಕದೇವತೋಪಾಸನೆಯನ್ನು ಸಾಮಾನ್ಯರಿಗೆ

ಬೋಧಿಸಿತು. ಇದು ರಾಜಕೀಯವಾಗಿ ಒಬ್ಬ ಸರ್ವಾಧಿಕಾರಿಯನ್ನು ನಾಯಕನನ್ನಾಗಿ ಒಪ್ಪಿಕೊಳ್ಳುವಂತೆ ಒತ್ತಾಯಿಸುವ ತತ್ವಕ್ಕಿಂತ ಭಿನ್ನವಾದುದಲ್ಲ. ಜಾತ್ಯಾತೀತ ಸಂಘಟನೆಯ ಹೆಸರಿನಲ್ಲಿ ಜಾತಿ ಜಾತಿಗಳನ್ನು ಒಡೆದು ದುರ್ಬಲಗೊಳಿಸಿ ಮುಂದೆಂದೂ ಕೆಳವರ್ಗದವರು ತಲೆ ಎತ್ತದಂತೆ ಮಾಡಿ, ಪುರೋಹಿತ ರಹಿತ ಕೆಳವರ್ಗದ ಸಮಾಜವನ್ನು ಜಂಗಮ ಪುರೋಹಿತ ಸರ್ವಾಧಿಕಾರದ ಒಡೆತನಕ್ಕೆ ಒಳಗುಮಾಡಿತು". (ಪು-೪೨-೪೩)

ಇಲ್ಲಿ ಮಾರ್ಕ್ಸ್‌ವಾದಿಯೊಬ್ಬ ನಾಗರಾಜಪ್ಪನವರಂತೆ ಸಿಟ್ಟಿನಿಂದ ಮಾತಾಡಲಾರ ಎಂದು ನನಗನ್ನಿಸುತ್ತದೆ. ಮಾರ್ಕ್ಸ್‌ನ ಪ್ರಕಾರ ಪ್ರತಿಯೊಂದು ಕಾಲಘಟಕವೂ ಏನೇನನ್ನು ಸಾಧಿಸಬೇಕೆಂಬ ಹಠ ತೊಟ್ಟರೂ, ಕನಸು ಕಂಡರೂ ಆಯಾ ಕಾಲದ ಆರ್ಥಿಕ ಬೆಳವಣಿಗೆಯ ಮಿತಿಯಲ್ಲಿ ಸಾಧ್ಯವಾಗುವಷ್ಟನ್ನು ಮಾತ್ರ ಸಾಧಿಸಿರುತ್ತದೆ. ಹೀಗೆ ನೋಡುವವನಿಗೆ ಶರಣರ ಅಭೀಪ್ಸೆ ಮತ್ತು ಕನಸುಗಳ ಬಗ್ಗೆ ಗೌರವ ಇಟ್ಟುಕೊಂಡೇ ಅವರ ಸಾಧನೆಯ ಮಿತಿಯನ್ನೂ ತಿಳಿಯುವುದು ಸಾಧ್ಯವಾಗುತ್ತದೆ. ಒಂದು ದುರಂತ ಪ್ರಜ್ಞೆಯಿಂದ ನಮ್ಮ ಕಾಲವನ್ನು ಹೇಗೋ, ಹಾಗೆಯೇ ಪೂರ್ವ ಇತಿಹಾಸವನ್ನೂ ನೋಡುವುದು ಸಾಧ್ಯವಾಗುವ ದೃಷ್ಟಿ ಹೆಚ್ಚು ಪರಿಪಕ್ವವೆಂದು ನಾನು ನಿಧಾನವಾಗಿ ಅರಿಯತೊಡಗಿದ್ದೇನೆ. ಸಿನಿಕತನ, ಸಿಟ್ಟು ಅಥವಾ ಭ್ರಮೆ- ಈ ಯಾವ ಜಾರುವಿಕೆಗೂ ಎಡೆಯಿಲ್ಲದಂತೆ, ಆದರ್ಶಪ್ರಿಯತೆ ಮತ್ತು ವಾಸ್ತವ ಪ್ರಜ್ಞೆಯ ನಡುವಿನ ಘರ್ಷಣೆಯನ್ನು ಸಡಿಲ ಗೊಳಿಸದಂತೆ, ಜೀವನದ ಸಾತತ್ಯವನ್ನು ಅದರ ಸಫಲತೆ ವಿಫಲತೆಗಳೆರಡರಲ್ಲೂ ಒಟ್ಟಾಗಿ ಹಿಡಿಯಬಲ್ಲ ದೃಷ್ಟಿ ಇದು. ವಾಗ್ವಾದಕ್ಕಾಗಿ ಹವಣಿಸುವ ನಾಗರಾಜಪ್ಪನವರಲ್ಲಿ ಈ ದೃಷ್ಟಿ ಇಲ್ಲವೆಂಬ ಟೀಕೆ ಈ ಲೇಖನದ ಸಂದರ್ಭದಲ್ಲಿ ಪ್ರಸ್ತುತವಲ್ಲ. ಚನ್ನಬಸವಣ್ಣನ ತಂದೆ ಒಬ್ಬ ಅಂತ್ಯಜನಿರಬಹುದು ಎಂಬ ವಾದದಿಂದಲೇ ಕೋಪಗೊಳ್ಳುವ ವಿಮರ್ಶಕರು ನಾಗರಾಜಪ್ಪನವರಿಗಿಂತಲೂ ನಾನು ಬಯಸುವ ಪ್ರಬುದ್ಧದೃಷ್ಟಿಯಿಂದ ಹೆಚ್ಚು ದೂರದಲ್ಲಿ ಇದ್ದಾರೆ ಎಂದು ನನ್ನ ಭಾವನೆ. ಆದರೆ ಬಸವಣ್ಣನವರು

> **"ಚನ್ನಯ್ಯನ ಮನೆಯ ದಾಸಿಯ ಮಗನು**
> **ಕಕ್ಕಯ್ಯನ ಮನೆಯ ದಾಸಿಯ ಮಗಳು**
> **ಇವರಿಬ್ಬರು ಹೊಲದಲ್ಲಿ ಬೆರಣಿಗೆ ಹೋಗಿ ಸಂಗವ ಮಾಡಿದರು**
> **ಇವರಿಬ್ಬರಿಗೆ ಹುಟ್ಟಿದ ಮಗ ನಾನು ಕೂಡಲಸಂಗಮ ಸಾಕ್ಷಿಯಾಗಿ"**

ಎಂದು ಹೇಳುವಾಗ ಎಲ್ಲ ವಿಫಲತೆಯ ನಡುವೆಯೂ ಮನುಷ್ಯನ ಚರಿತ್ರೆ, ತನ್ನ ಅಭೀಪ್ಸೆಯಲ್ಲಾದರೂ ಭವ್ಯವಾದ್ದು ಎಂಬ ಭಾವನೆಯನ್ನು ನಮ್ಮಲ್ಲಿ ಹುಟ್ಟಿಸುತ್ತದೆ. ನಾವು ಬಯಸಿದಂತೆ ವಾಸ್ತವ ಬದಲಾಗದಿರಬಹುದು. ಆದರೆ ಮನುಷ್ಯ ತನ್ನ ಜೀವನದ ಕೆಲವು ಕ್ಷಣಗಳಲ್ಲಿ ಅಂತರ್ಯದ ಅನುಭವದಲ್ಲಿಯಾದರೂ ಕಾಲವನ್ನು ಮೀರಿ ನಿಲ್ಲುತ್ತಾನೆ. ಈ ಬಗೆಯ ಅವಸ್ಥಾಂತರದ ಕಸಿವಿಸಿಯನ್ನೂ ಪುಳಕವನ್ನೂ ಬಸವಣ್ಣನಂತವರು ನಮಗೆ ತರುತ್ತಾರೆ. ಮನುಷ್ಯ ಹೀಗೆ ವಾಸ್ತವಕ್ಕೆ ವಿರುದ್ಧವಾಗಿ ಜಗ್ಗದಿದ್ದ ಪಕ್ಷದಲ್ಲಿ ಜೀವನದಲ್ಲಿ ಸೃಜನಶೀಲತೆಯೇ ಇರುತ್ತಿರಲಿಲ್ಲ: ನಮ್ಮನ್ನು ನೋಯಿಸುವ ಚರಿತ್ರೆಯ ವಿಫಲತೆ ಇರುವುದಕ್ಕಿಂತಲೂ ಹೆಚ್ಚು ಭಯಾನಕವಾಗಿರುತ್ತಿತ್ತು. ಮನಸ್ಸು ಹಿಗ್ಗುವುದರಿಂದ ಹುಟ್ಟುವ

ಚೈತನ್ಯವೇ ಎಲ್ಲ ಚಲನೆಯ ಮೂಲವಲ್ಲವೇ?

'ವೀರಶೈವ ಧರ್ಮ ಮತ್ತು ಕನ್ನಡ ಸಾಹಿತ್ಯ' ಎಂಬ ಲೇಖನದಲ್ಲಿ ಬೆಡಗಿನ ವಚನಗಳನ್ನು ಹೆಚ್ಚಾಗಿ ಬಳಸಿದ ಕೆಳವರ್ಗದ ವಚನಕಾರರ ಬಗ್ಗೆ ನಮ್ಮ ಅರಿವನ್ನು ಲೇಖಕರು ಚುರುಕುಗೊಳಿಸುತ್ತಾರೆ. ನಯಸೇನನಿಂದ ವಚನಕಾರರು ಪಡೆದಿರಬಹುದಾದ ಪ್ರೇರಣೆಗಳು ನಮಗೆ ಸಾಹಿತ್ಯ ಪರಂಪರೆಯ ಬಗ್ಗೆಯೇ ಬಹುಮುಖ್ಯ ಒಳನೋಟಗಳನ್ನು ಕೊಡುವಂತಿವೆ. ನಾಗರಾಜಪ್ಪನವರ ಉದ್ದೇಶಕ್ಕೆ ಮುಖ್ಯವಲ್ಲದಿದ್ದರೂ ನನಗೆ ಮಹತ್ವವೆನಿಸಿದ್ದು ಇದು: ಜೈನರನ್ನು ವೀರಶೈವರು ವಿರೋಧಿಸಿರಬಹುದು. ಆದರೆ ಸಾಹಿತ್ಯ ತನ್ನ ಹಿಂದಿನದನ್ನು ಪ್ರತ್ಯಕ್ಷವಾಗಿ ನಿರಾಕರಿಸುವಾಗಲೂ ಪರೋಕ್ಷವಾಗಿ ಅದರಿಂದ ಪ್ರೇರಣೆ ಪಡೆದುಕೊಂಡಿರುತ್ತದೆ. ಅಲ್ಲದೆ ನಯಸೇನನಿಂದ ಪಡೆದುಕೊಂಡವರು ಅವನಿಗಿಂತಲೂ ಉತ್ತಮ ಕವಿಗಳು. ಸಾಹಿತ್ಯದಲ್ಲಿ ಪ್ರಭಾವದ ಬಗ್ಗೆ ಮರೆಯಬಾರದ ಮಾತಿದು. ನಾಗರಾಜಪ್ಪನವರು ಈ ಒಳನೋಟಗಳಿಂದ ಪಡೆದುಕೊಂಡ ಒಟ್ಟು ಗ್ರಹಿಕೆ ಕೂಡ ಮುಖ್ಯವಾದದ್ದೇ.

"ವೀರಶೈವ ಧರ್ಮವಾದರೋ ವೈದಿಕರ ಆತ್ಮ ಅವೈದಿಕ ನಾಸ್ತಿಕ ಮತಗಳ ದೇಹ ಮತ್ತು ತಾಂತ್ರಿಕ ಮತಗಳ ಬದುಕಿನ ಗುರಿಯನ್ನು ಅಂತರ್ಗತಗೊಳಿಸಿಕೊಂಡು ರೂಪುಗೊಂಡಿರುವುದು ಸ್ಪಷ್ಟವಾಗುತ್ತದೆ." (ಪು-೫೭)

ಈ ಲೇಖನದಲ್ಲಿ ವೀರಶೈವ ಸಾಹಿತ್ಯ ಯಾಕೆ ಅವನತಿ ಹೊಂದಿತು ಎಂದು ನಾಗರಾಜಪ್ಪನವರು ಚರ್ಚಿಸುತ್ತಾರೆ. ಸಮಗ್ರ ಜೀವನದ ಅನುಭವದ ದ್ರವ್ಯಕ್ಕೆ ವೀರಶೈವ ಸಾಹಿತ್ಯದಲ್ಲಿ ಅವಕಾಶವಿಲ್ಲ ಎಂಬುದು ನಾಗರಾಜಪ್ಪನವರ ವಾದ. ಆದರೆ ನನಗನ್ನಿಸುವುದು ಕೊಂಚ ಇದಕ್ಕಿಂತ ಭಿನ್ನವಾದ ಭಾವನೆ. ಸಾಹಿತ್ಯದಲ್ಲಿ ಉತ್ಕಟತೆ ಇದ್ದಲ್ಲಿ ಸಮಗ್ರತೆಯೂ ಕಾಣುವುದು ಬಹಳ ಅಪರೂಪ. ಶೇಕ್ಸ್‌ಪಿಯರ್, ಟಾಲ್‌ಸ್ಟಾಯ್ ಮತ್ತು ವ್ಯಾಸರಲ್ಲಿ ಇದು ಸಾಧ್ಯವಾಗಿರಬಹುದು. ಸಪ್ಪೆಯಾದ ಸಮಗ್ರತೆ, ಇಕ್ಕಟ್ಟಾದ ದೃಷ್ಟಿಯ ಉತ್ಕಟತೆ - ಇವುಗಳ ನಡುವೆ ನಾನಂತೂ ಆಯುವುದು ಎರಡನೆಯದನ್ನೇ.

ನಾಗರಾಜಪ್ಪನವರು ನನ್ನ ಈ ಆಯ್ಕೆಗೆ ವಿರೋಧಿಗಳಲ್ಲ. ಆದರೆ ಅವರು ವೀರಶೈವ ಧರ್ಮದ ಮಿತಿಗಳನ್ನು ಈ ಲೇಖನದಲ್ಲಿ ಹೇಳುತ್ತಿದ್ದಾರೆ. ಈ ಧರ್ಮದ ಅನುಯಾಯಿಗಳು ತಾವು ವಿಮರ್ಶಾತೀತರು ಎಂದು ಉಳಿದ ಧರ್ಮಗಳ ವೀರ ಮಡಿವಂತರಂತೆ ತಾವೂ ತಿಳಿಯುವುದರಿಂದ ನಾಗರಾಜಪ್ಪನವರ ಮಾತುಗಳು ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಅಗತ್ಯವಾಗಿವೆ. (ಕಮ್ಯುನಿಸ್ಟ್ ಪಕ್ಷಗಳು ತಮ್ಮ ಅನುಯಾಯಿಗಳಲ್ಲದ ಶ್ರಮಜೀವಿಗಳ ಬಗ್ಗೆ ಭಾವಿಸುವ ಕ್ರಮವನ್ನು ಹೋಲಿಸಿ ನೋಡಿ).

"ವೀರಶೈವ ಧರ್ಮ ಮಾನವರೆಲ್ಲರೂ ಸಮಾನರು ಎಂದು ಬೋಧಿಸಲಿಲ್ಲ - ಲಿಂಗ ದೀಕ್ಷಾಬದ್ಧರೆಲ್ಲರೂ ಸಮಾನರು ಮತ್ತು ಶಿವ ಸಹೋದರರು ಎಂದು ಸಾರಿತು." (ಪು-೭೪)

"ಕಾಯಕ ತತ್ವ ವೈದಿಕರ ಆರ್ಥಿಕ ತತ್ವಕ್ಕಿಂತಲೂ ಹೇಗೆ ಭಿನ್ನವಾಯಿತು ಎಂಬುದು ಮುಖ್ಯ. ಲಿಂಗದೀಕ್ಷೆಯ ಶಿವಶರಣರದ್ದು ಕಾಯಕವಾಗುತ್ತದೆಯೇ ಹೊರತು ಭವಿಗಳ ಕೆಲಸ ಕಾಯಕವಾಗುವುದೇ?" (ಪುಟ-೭೬)

" ವೀರಶೈವರಲ್ಲಿಯೂ ಸಿದ್ಧಿ ಕಾಯಕದ ಮೇಲೆ ನಿಂತಿಲ್ಲ. ಜಂಗಮ ಸಾಧನೆ ಅರಿವಿನ ಮೇಲೆ ನಿಂತಿರುವುದು." (ಪುಟ-೭೭)

"ಅರಿವು ಮತ್ತು ಹುಟ್ಟಿನ ತತ್ವದ ಮೇಲೆ ಜಂಗಮ ವರ್ಗ ನಿಂತಿತು. ಜಾತಿ ಮತ್ತು ವೃತ್ತಿಯ ಮೇಲೆ ಭಕ್ತವರ್ಗ ನಿಂತಿತು". (ಪು-೭೭)

ಹೀಗೆ ಈ ಲೇಖನದಲ್ಲಿ ಇನ್ನೂ ಹಲವು ಮುಖ್ಯ ಒಳನೋಟಗಳಿವೆ. ವೈದಿಕರಿಗೆ ಸರಿಸಮಾನರಾದ ಸ್ಪರ್ಧಿಗಳೆಂದರೆ ಜೈನರು. ವೀರಶೈವರು ಬ್ರಾಹ್ಮಣರನ್ನು ಎಷ್ಟೇ ದೂಷಿಸಿದರೂ ನಾಗರಾಜಪ್ಪನವರು ಹೇಳುತ್ತಾರೆ : "ವೀರಶೈವರು ಮತ್ತು ಬ್ರಾಹ್ಮಣರು ಒಟ್ಟಾಗಿ ಆಂತರ್ಯದಲ್ಲಿ ಒಂದು ಸಂಚು ಮಾಡಿದರು." (ಪುಟ-೮೧) ಸೊರಗುತ್ತಿದ್ದ ವೈದಿಕ ಧರ್ಮ ವೀರಶೈವರ ಆಂದೋಳನದಿಂದ ಮತ್ತೆ ತನ್ನ ಅಂತಃಶಕ್ತಿಯನ್ನು ಪಡೆದುಕೊಂಡಿತು ಎಂಬ ಸೂಚನೆ ನಾಗರಾಜಪ್ಪನವರಲ್ಲಿದೆ ಎಂದು ನನಗನ್ನಿಸುತ್ತದೆ. ಈ ಒಳನೋಟ ನಮ್ಮ ಕಾಲದ ಹಲವು ಬಂಡಾಯಗಳನ್ನು ಅರಿಯಲು ಸಹಾಯ ಮಾಡುತ್ತದೆ ಎಂಬುದು ನನ್ನ ಅನ್ನಿಸಿಕೆ.

'ಕನಕದಾಸನ ಕೀರ್ತನೆಗಳು' ಎಂಬ ಲೇಖನದಲ್ಲಿ ವೈದಿಕ ಧರ್ಮಕ್ಕೆ ಮನಸೋತ ಶೂದ್ರನ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಸೂಕ್ಷವಾದ ವಿಚಾರಗಳಿವೆ. ಕನಕದಾಸನಲ್ಲಿ ಒಟ್ಟಾಗಿ ಕಾಣುವ ಒಂದಕ್ಕೊಂದು ವಿರುದ್ಧವಾದ ಲೌಕಿಕ ಮಗ್ನತೆ ಮತ್ತು ದಾಸಭಾವದ ಬಗ್ಗೆ ನಾಗರಾಜಪ್ಪನವರು ಹೇಳುವ ಮಾತುಗಳು ಕುತೂಹಲಕಾರಿಯಾಗಿವೆ. ಶೂದ್ರ ಸಂಸ್ಕೃತಿಯನ್ನು ಅದರಲ್ಲಿ ಯಾವ ಗುಣವನ್ನೂ ಕಾಣದಂತೆ ಎಲ್ಲರೂ ಹೇಗೆ ನಿರಾಕರಿಸಿದರು ಎಂಬುದರ ಬಗ್ಗೆ ನಾಗರಾಜಪ್ಪನವರು ಇಲ್ಲಿಯೂ ಹೀಗೆ ಹೇಳುತ್ತಾರೆ:

"ಬತ್ತಲೆ ದೇವರಿಗೆ ಬತ್ತಲೆ ಬಂದು ಸೇವೆ ಸಲ್ಲಿಸುವುದು ಅನಾಗರೀಕವಾದರೆ, ಕೊಳದ ದಡದಲ್ಲಿ ಬತ್ತಲೆಯಾಗಿ ಗೋಪಿಯರು ಕೃಷ್ಣನ ಸುತ್ತ ಕುಣಿಯುವುದು ಸರ್ವ ಸಮರ್ಪಣದ ಸಂಕೇತಾತ್ಮಕ ಅರ್ಥದಲ್ಲಿ ಸಮರ್ಥನೆಗೊಂಡು ಶಿಷ್ಟವಾಯಿತು." (ಪು-೧೨೦)

ನಾಗರಾಜಪ್ಪನವರ **'ನಾಮಧಾರಿ ಲಿಂಗಾಯಿತರು : ನೆಲೆ-ಹಿನ್ನಲೆ'** ಎಂಬ ಕೊನೆಯ ಲೇಖನ ಈ ಪುಸ್ತಕದಲ್ಲಿ ಹಲವು ಕಡೆ ಎತ್ತಿದ ಪ್ರಶ್ನೆಗಳಿಗೆಲ್ಲ ಒಂದು ಸಂಘಟಿತ ರೂಪದ ಉತ್ತರವನ್ನು ಒಂದು ವಿಶಿಷ್ಟ ಜನಾಂಗದ ಅಧ್ಯಯನದ ಮೂಲಕ ಕೊಡುವ ಪ್ರಯತ್ನವಾಗಿದೆ. ಲೇಖಕರಿಗೆ ಗುಪ್ತ ಭಕ್ತರ ಬಗ್ಗೆ, ಗುಪ್ತ ಸಮಾಜದ ಬಗ್ಗೆ ಇರುವ ಜ್ಞಾನ ವಿಶೇಷವಾದ್ದು. ಜೈನರು, ವೈದಿಕರು, ವೀರಶೈವರು ಇತ್ಯಾದಿ ಧರ್ಮಗಳ ಹೊಡೆತಗಳ

ನಡುವೆಯೂ ಉಳಿದುಕೊಂಡು ಬಂದ ಆಚರಣೆಗಳಲ್ಲಿ ಮತ್ತು ಪಂಥಗಳಲ್ಲಿ ನಾಗರಾಜಪ್ಪನವರು ತಮ್ಮ ಮುಖ್ಯ ವಿಚಾರಗಳಿಗೆ ಸಮರ್ಥನೆಯನ್ನು ಹುಡುಕುತ್ತಾರೆ. ಕೆಳವರ್ಗದವರು ಇದ್ದ ಸ್ಥಿತಿಯಲ್ಲೇ ಸಿದ್ಧನಾಗಿ ಮುಕ್ತನಾಗುವುದು ಯಾವ ಶಿಷ್ಟ ಧರ್ಮದ ಪ್ರಕಾರವೂ ಸಾಧ್ಯವಿಲ್ಲ. ಆದರೆ ಲೇಖಕರ ಪ್ರಕಾರ ಗುಪ್ತ ಸಮಾಜಗಳಲ್ಲಿ ಮಾತ್ರ ಬ್ರಾಹ್ಮಣೀಕರಣದ ಬದಲಾಗಿ ಶೂದ್ರೀಕರಣವೇ ಮುಖ್ಯವಾಗುತ್ತದೆ, ಮುಕ್ತಿಸಾಧಕವಾಗುತ್ತದೆ. ಈ ಲೇಖನ ಸಂಕಲನದಲ್ಲೇ ಪ್ರಾಯಶಃ ಅತ್ಯಂತ ಮಹತ್ವದ್ದು. ಅದನ್ನು ನಾನು ಸಂಪೂರ್ಣ ಗ್ರಹಿಸಿದ್ದೇನೆಂದು ಹೇಳಿಕೊಳ್ಳಲಾರೆ. ಅಲ್ಲದೆ ಈ ಬಗ್ಗೆ ನಾನು ತಿಳಿಯಬೇಕಾದ್ದು ಇನ್ನೂ ಇದೆ. ಇಲ್ಲಿ ನಾಗರಾಜಪ್ಪನವರು ಎತ್ತುವ ಕೆಲವು ಮುಖ್ಯ ಸಮಸ್ಯೆಗಳನ್ನು ಮಾತ್ರ ನಾನು ಸೂಚಿಸಬಯಸುತ್ತೇನೆ.

"ವಿಷ್ಣು ಪಂಥದ ಸಂಸ್ಕೃತಿ ರಾಷ್ಟ್ರೀಯ ಸಂಸ್ಕೃತಿಯ ಸ್ವರೂಪ ಪಡೆಯಿತು. ಶೈವ ಪಂಥದ ಸಂಸ್ಕೃತಿಯ ಸ್ವರೂಪ ಪ್ರಧಾನವಾಗಿ ರಾಷ್ಟ್ರೀಯ ವ್ಯಾಪ್ತಿ ಪಡೆದರೂ ಪ್ರಾಂತೀಯ ಸಂಸ್ಕೃತಿಯಾಗಿ ಮಿತವಾಯಿತು" (ಪು-೧೫೫)

ಯಾಕೆ ಹೀಗಾಯಿತೆಂದು ನಾಗರಾಜಪ್ಪನವರು ವಿವೇಚಿಸಿದ್ದಾರೆ. ಅವರ ವಾದವನ್ನು ಒಪ್ಪದವರು ಬೇರೆ ಕಾರಣಗಳನ್ನು ಹುಡುಕಲೇ ಬೇಕಾಗಿ ಬರುವಂತೆ ಲೇಖಕರು ವಾಗ್ವಾದಕ್ಕೆ ಆಹ್ವಾನ ನೀಡಿದ್ದಾರೆ. ಗುಪ್ತಮಂಚಣ್ಣನ ಬಗ್ಗೆ ಹೆಚ್ಚು ಅಧ್ಯಯನ ಮಾಡುವಂತೆ ಈ ಲೇಖನದಲ್ಲಿ ಹಲವು ಕುತೂಹಲದ ಸಂಗತಿಗಳು ಬಂದಿವೆ. ಸಾಂಸ್ಕೃತಿಕ ಇಂಪೀರಿಯಲಿಸಂ ಬಗ್ಗೆ ಕನ್ನಡದಲ್ಲಿ ಬಂದ ಬಹು ಮುಖ್ಯ ಲೇಖನ ಇದು. ಹಲವು ವಿಷಯಗಳಲ್ಲಿ ಹೆಚ್ಚು ಸಂವೇದನಾಶೀಲವಾದ ರೆಡ್ ಇಂಡಿಯನ್ ಸಂಸ್ಕೃತಿಯನ್ನು ಐರೋಪ್ಯ ಸಂಸ್ಕೃತಿ ನಾಶಮಾಡುವುದು ಯಾಕೆ ಸಾಧ್ಯವಾಯಿತು ? ಭಾರತದಲ್ಲಿ ನಿಸರ್ಗಕ್ಕೆ ಹೆಚ್ಚು ಸ್ಪಂದನಾಶೀಲವಾದ ಶೂದ್ರ ಸಂಸ್ಕೃತಿ ಮೇಲೆ ವೈದಿಕ ಸಂಸ್ಕೃತಿ ಯಜಮಾನಿಕೆ ಮಾಡುವುದು ಮತ್ತು ಶೂದ್ರರ ಅದನ್ನು ಒಪ್ಪಿಕೊಳ್ಳುವುದು ಯಾಕೆ ಸಾಧ್ಯವಾಯಿತು? ಇತ್ಯಾದಿ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾ ನಾನು ಈ ಲೇಖನ ಓದಿದ್ದೇನೆ.

ಸಮಾಜ ಶಾಸ್ತ್ರದಲ್ಲಾಗಲಿ, ಮಾನವ ಶಾಸ್ತ್ರದಲ್ಲಾಗಲಿ ಕನ್ನಡದಲ್ಲಿ ಬರೆದ ಧೀಮಂತ ಲೇಖಕರು ಬಹಳ ಕಡಿಮೆ ಎಂದು ನನ್ನ ಭಾವನೆ. ಕನ್ನಡಿಗರಾದರೂ ಎಂ.ಎನ್. ಶ್ರೀನಿವಾಸ್ ಬರೆದಿರುವುದು ಇಂಗ್ಲೀಷ್‌ನಲ್ಲಿ. ಪ್ರಾಯಶಃ ಭಾರತದಲ್ಲಿ ಮಹಾರಾಷ್ಟ್ರ ಮತ್ತು ಬಂಗಾಲಗಳಲ್ಲಿ ಮಾತ್ರ ಇಂಥ ಮಾನವಿಕಶಾಸ್ತ್ರದ ಒಂದು ಧೀಮಂತ ಪರಂಪರೆ ಇದೆ. ಕನ್ನಡದಲ್ಲಿ ಶಂ.ಬಾ. ಜೋಶಿಯವರ ನಂತರ ಈ ದಿಕ್ಕಿನಲ್ಲಿ ಏನಾದರೂ ಚಿಂತನೆ ನಡೆದಿದ್ದರೆ ಅವೆಲ್ಲವೂ ಸೃಜನಶೀಲ ಸಾಹಿತಿಗಳಿಂದಲೇ. ಇವರೆಲ್ಲರೂ ಮಾನವಿಕಶಾಸ್ತ್ರದ ಶಿಸ್ತನ್ನು ದಕ್ಕಿಸಿಕೊಳ್ಳದವರು. ಆದರೆ ಮಹತ್ವದ ಒಳನೋಟವನ್ನು ಪಡೆದವರು. ಕರ್ನಾಟಕದ ರಾಜಕೀಯದಲ್ಲೂ ತಿಲಕರಾಗಲಿ, ಗೋಖಲೆಯವರಾಗಲಿ, ಅಂಬೇಡ್ಕರ್ ಆಗಲಿ ಇಲ್ಲ. ಇದೊಂದು ನಮ್ಮ ಭಾಷೆಯ ದೊಡ್ಡ ಕೊರತೆಯೇ ಸರಿ.

ನಾಗರಾಜಪ್ಪನವರ ಶಿಸ್ತು ಶಾಸ್ತ್ರೀಯವಾಗಿ ಎಷ್ಟು ಸಮರ್ಪಕವಾಗಿದೆ ಎಂದು ಹೇಳಬಲ್ಲ ಅರ್ಹತೆ ನನಗಿಲ್ಲ. ಸಾಹಿತ್ಯದ ಬಗೆಗಿನ ಇವರ ವಿಮರ್ಶಾಕ್ರಮದ ಬಗ್ಗೆ ನನಗೆ ಕೆಲವು ಅನುಮಾನಗಳಿವೆ. ಒಂದು ಸಾಹಿತ್ಯ ಕೃತಿ ಹೇಗೆ ಇರುವ ವಾಸ್ತವವನ್ನೂ, ಲೇಖಕನ ಹಂಬಲವನ್ನೂ ಒಟ್ಟಾಗಿ ಪಡೆದು ಭಾಷೆಯ ಮಾಂತ್ರಿಕತೆಯಲ್ಲಿ ನಮ್ಮಿಂದ 'ಅಹುದು ಅಹುದು' ಎನ್ನಿಸಿಕೊಳ್ಳುವಂತೆ ನಿರಂತರ ಸತ್ಯವಾಗಿರುತ್ತದೆ ಎಂಬುದೇ ಸಾಹಿತ್ಯದ ವಿದ್ಯಾರ್ಥಿಯಾಗಿ ನನಗೆ ಮುಖ್ಯ. ನಮ್ಮಂತೆಯೇ ಹಲವು ಗೊಂದಲಗಳಲ್ಲಿ ಬದುಕುತ್ತಿದ್ದು, ಹಲವು ಹಿಪೊಕ್ರೆಸಿಗಳ ನಡುವೆ ತೊಳಲುತ್ತಿದ್ದು ಕಾಲವಾದ ನನ್ನ ಪೂರ್ವಕರ ಅಂಕು ಡೊಂಕುಗಳು, ಅಪರಿಪೂರ್ಣತೆಗಳು ಅವರ ಸಾಹಿತ್ಯವನ್ನು ಕುಬ್ಜಗೊಳಿಸಲಾರವು. ಸತ್ಯ ಎಂದರೆ ಕಾಣುವಂತೆ ವ್ಯಕ್ತವಾದ್ದಷ್ಟು ಮಾತ್ರವಲ್ಲ: ಕೊನೆಗೂ ಕಲ್ಪನೆ ಕಂಡದ್ದೇ ದಿಟವಾದ್ದು. 'ಇಮಾಜಿನೇಶನ್' ಎಂಬ ಅರ್ಥದಲ್ಲಿ ಈ 'ಕಲ್ಪನೆ' ಪದವನ್ನು ನಾನು ಬಳಸಿದ್ದೇನೆ-ಕಲ್ಪನೆಯ ಶಕ್ತಿ ದರ್ಶನಾತ್ಮಕವಾದ್ದು. 'ಇದು ಆಕಾಶದಲ್ಲಿ ಹಾರುತ್ತಿರುವ ಹಕ್ಕಿ ಮಾತ್ರವಲ್ಲ, ಅದೊಂದು ಉಲ್ಲಾಸದ ಬುಗ್ಗೆ' ಎನ್ನುತ್ತಾನೆ ಬ್ಲೇಕ್‌ನಂಥ ಕವಿ. ಆದ್ದರಿಂದ ಇತಿಹಾಸದ ಕಾಲದಲ್ಲಿ ಯಾವುದು ಸಾಚ, ಯಾವುದು ಮೋಸ, ಯಾವುದು ಇವತ್ತಿಗೂ ಸತ್ಯ ಎಂಬುದನ್ನು ಅಂತರಂಗಕ್ಕೆ ಸಾಬೀತುಪಡಿಸುವುದು ಅದರ ತಾರ್ಕಿಕ ವಿಶ್ಲೇಷಣೆಯಲ್ಲ. ಸಾಹಿತ್ಯದ ರಸಜ್ಞ ಅನುಭವ. ವಚನಕಾರರ ಸಂಕಟಗಳು, ಸೋಲುಗಳು ನಮ್ಮವೂ ಕೂಡ ಎನ್ನಿಸುವಂತೆ ಓದುವುದನ್ನು ಸಾಹಿತ್ಯದ ವಿದ್ಯಾರ್ಥಿ ಕಲಿತಿರುತ್ತಾನೆ. ಈ ನನ್ನ ನಿಲುವನ್ನು ಬದಲಾಯಿಸಿಕೊಳ್ಳದೆಯೂ ನಾನು ನಾಗರಾಜಪ್ಪನವರ ಬರಹಗಳಿಂದ ಮಹತ್ವದ ಅನೇಕ ವಿಷಯಗಳನ್ನು ಅರಿತಿದ್ದೇನೆ. ಹಿಂದಿನವರನ್ನು ಇಂದಿನವರೆಂದು ನಾವೆಂದುಕೊಳ್ಳುವಂತೆ ಪ್ರಸ್ತುತಗೊಳಿಸುವ ಲೇಖಕರ ಸಿಡಿಮಿಡಿಯ ಧಾಟಿಯೂ ವಿಮರ್ಶೆಗೆ ಹರಿತವನ್ನು ತಂದಿದೆ. ಕನ್ನಡದ ಧೀಮಂತ ವೈಚಾರಿಕ ಪರಂಪರೆಯನ್ನು ನಿರುದ್ವಿಗ್ನವಾಗಿ, ನಿರಪೇಕ್ಷವಾಗಿ ನಾಗರಾಜಪ್ಪನವರು ಬೆಳೆಸುವಂಥ ಸನ್ನಿವೇಶಕ್ಕೆ ಈ ಪುಸ್ತಕ ಒಂದು ಆಹ್ವಾನ. ♦

(ಮರುಚಿಂತನೆಯ ಮುನ್ನುಡಿ:- ಮೊದಲನೆ ಮುದ್ರಣ 1985)

ಗುಳಿ ಬಿದ್ದ ಕಣ್ಣು ಜೋಲು ಮುಖ
ಬಂತೆ ತಲೆ ಬೆನ್ನ ಸೇರಿದ ಹೊಟ್ಟೆ
ದೈನ್ಯತೆಯ ದಾರಿ ಪಯಣಿಗ
ಸಮಾಜತೊಟ್ಟಿಲ ಅನಾಥಶಿಶು
ಅವನ ಬಾಯಿಗೆ ಬೆಸೆದಿದೆ
ಕರುಣೆ ಜಿನುಗುವ ಹಾಲಿನ ವಳಲೆ

-ಪ್ರೊ॥ ಕೆ.ಜಿ. ನಾಗರಾಜಪ್ಪ

7. ಮರುಚಿಂತನೆಯ ಮರುಚಿಂತನೆ

ಡಾ|| ಕೇಶವಶರ್ಮ ಕೆ.

ಕೆ.ಜಿ. ನಾಗರಾಜಪ್ಪನವರ 'ಮರುಚಿಂತನೆ'ಯು ಸಾಹಿತ್ಯ ವಿಮರ್ಶೆಯ ದೃಷ್ಟಿಯಿಂದ ಅನೇಕ ಒಳನೋಟಗಳನ್ನು ಒಳಗೊಂಡಿರುವ ಕೃತಿ. ಕೆ.ಜಿ. ನಾಗರಾಜಪ್ಪ ಅವರು ಬಹಳ ಬರೆದವರಲ್ಲ. ಆದರೆ ಅವರು 'ಮರುಚಿಂತನೆ' ಕೃತಿಯಲ್ಲಿ ಬರೆದ ಲೇಖನಗಳು ವಾಗ್ವಾದವನ್ನು ಸೃಷ್ಟಿಸುವುದಕ್ಕೆ ಅವಕಾಶವನ್ನು ಕಲ್ಪಿಸಿದವು. ಈ ದೃಷ್ಟಿಯಿಂದ ಕೆ.ಜಿ. ನಾ. ಅವರ 'ಮರುಚಿಂತನೆ' ಹೆಸರು ಸೂಚಿಸುವಂತೆ 'ಮರುಚಿಂತನೆ'ಯನ್ನು ಒಳಗೊಂಡಿರುವ ಕೃತಿ. ಈ ಕೃತಿಯ ಕುರಿತು ಮರುಚಿಂತನೆ ಅತ್ಯವಶ್ಯವಾಗಿದೆ.

'ಮರುಚಿಂತನೆ' ಕೃತಿಯಲ್ಲಿ ಒಟ್ಟು ಆರು ಲೇಖನಗಳಿದ್ದು, ಈ ಆರು ಲೇಖನಗಳಲ್ಲಿ ಒಂದು ಲೇಖನ ಸಾಂಸ್ಕೃತಿಕ ಚಿಂತನೆಯನ್ನು ಒಳಗೊಂಡಿದ್ದರೆ ಉಳಿದ ಲೇಖನಗಳು ಸಾಹಿತ್ಯ ಕೇಂದ್ರದ ಮೂಲಕ ಸಾಂಸ್ಕೃತಿಕ ಚಿಂತನೆಯ ಕಡೆಗೆ ಗಮನವನ್ನು ಹರಿಸಿವೆ. ಸಂಸ್ಕೃತಿಯ ಕುರಿತ ಚಿಂತನಾಕ್ರಮ ಈ ಗ್ರಂಥದ ಪ್ರಮುಖ ಜೀವಾಳವಾಗಿದೆ. ಸಂಸ್ಕೃತಿಯ ಕುರಿತು ಈ ಕೃತಿಯು ಚರ್ಚಿಸುವಾಗ ಕೆಲವು ಪ್ರಮುಖ ವಿಷಯಗಳನ್ನು ಅದು ಪ್ರಸ್ತಾಪಿಸುತ್ತದೆ. ಈ ಕೃತಿಯ ಒಟ್ಟು ಉದ್ದೇಶವನ್ನು ಕೆ.ಜಿ. ನಾಗರಾಜಪ್ಪನವರು ವಿವರಿಸುವ ಕ್ರಮ ಹೀಗೇ. "ಕನ್ನಡ ಭಾಷೆ ವಿವಿಧ ಸಂಸ್ಕೃತಿಗಳ ಅಭಿವ್ಯಕ್ತಿ ಮಾಧ್ಯಮವಾಗಿ ತನ್ನನ್ನು ಎರವಲುಕೊಟ್ಟುಕೊಂಡಿತೇ ಹೊರತು ತನ್ನ ನೆಲದ ಸಂಸ್ಕೃತಿಯ ಸಾರ ಸರ್ವಸ್ವದ ಸತ್ವ ಹೀರಿ ಪುಷ್ಟಿಯಾಗಿ ಬೆಳೆದು ಸಮಗ್ರ ಜನತೆಯ ಬರವಣಿಗೆಯ ನಾಲಗೆಯಾಗಲಿಲ್ಲ. ಅದು ಕೆಲವು ಜನಾಂಗದ ಸಂಸ್ಕೃತಿಗಳಿಗೆ ಮಾತ್ರ ಮೀಸಲಾಯಿತು. ಜೈನ, ಶೈವ ಮತ್ತು ವೈದಿಕಧರ್ಮಗಳು ಕೆಳವರ್ಗದ ಸಂಸ್ಕೃತಿಯಲ್ಲಿ ಕಸಿಗೊಳ್ಳದೆ, ಕೇವಲ ಕೆಳವರ್ಗದ ಭಾಷೆಯಲ್ಲಿ ಕಸಿಯಾದವು. ಉಚ್ಚವರ್ಗದವರು ಕೆಳವರ್ಗದವರ ಭಾಷೆಯನ್ನು ಸ್ವೀಕರಿಸಿ, ಅವರ ಸಂಸ್ಕೃತಿಯನ್ನು ತಿರಸ್ಕರಿಸಿದರು. ಕೆಳವರ್ಗದ ಸಂಸ್ಕೃತಿ ಅನ್ಯ ಸಂಸ್ಕೃತಿಗಳೊಂದಿಗೆ ಅಧಿಕೃತವಾಗಿ ಕಸಿಯಾಗಲು ಕನ್ನಡಭಾಷೆ ಮಾಧ್ಯಮವಾಗದೇ ಹೋದುದು ಕನ್ನಡ ಸಾಹಿತ್ಯದ ಇತಿಹಾಸದ ಒಂದು ದುರಂತವೇ ಸರಿ." (ಪು xvii) ಈ ಗ್ರಹಿಕೆಯು ಕೇವಲ ಒಂದು ಮೇಲು ನೋಟದ ಪ್ರತಿಕ್ರಿಯೆಯಲ್ಲ.

ಕೆ.ಜಿ. ನಾಗರಾಜಪ್ಪನವರು ಬಹುಮುಖ್ಯವಾದ ವಾಗ್ವಾದದ ಸೂಕ್ಷ್ಮ ಎಳೆಗಳನ್ನು ಈ ಕೃತಿಯಲ್ಲಿ ಕೈಗೆತ್ತಿಕೊಂಡಿದ್ದಾರೆ. ಹಾಗೆಯೇ ಸಾಂಸ್ಕೃತಿಕವಾಗಿ ಕೆಳವರ್ಗದ ಚಿಂತನಾಕ್ರಮದ ಬಗೆಗೆ ಅರಿವನ್ನೂ ಇಟ್ಟುಕೊಂಡಿದ್ದಾರೆ. ಉಚ್ಚವರ್ಗ ಮತ್ತು ಕೆಳವರ್ಗದ ಮುಖಾಮುಖಿ ಮತ್ತು ಸಂಘರ್ಷದ ಬಗೆಗೆ ಲೇಖಕರು ತಳೆಯುವ ಧೋರಣೆಯು ಈ ದೃಷ್ಟಿಯಿಂದ ಚಿಂತನಾರ್ಹವಾಗಿದೆ. "ಕೆಳವರ್ಗದ ಸಂಸ್ಕೃತಿ ಯಾವುದು? ಅದರ ಸ್ವರೂಪವೇನು?

ಅದು ಇನ್ನೂ ಜೀವಂತವಾಗಿದೆಯೆ? ಇದ್ದರೆ ಅದನ್ನು ಸ್ಥಾಯಿ ಅಥವಾ ಬದಲಾದ ಸ್ವರೂಪದಲ್ಲಿ ಪುನರ್‌ರಚಿಸಬಹುದೆ? ಮುಂತಾದ ಪ್ರಶ್ನೆಗಳು ತಲೆದೋರುತ್ತವೆ. ಕೆಳವರ್ಗದ ಸಂಸ್ಕೃತಿ ಹಲವು ಧಾರ್ಮಿಕ ಸುಧಾರಣೆಗಳು ಮತ್ತು ವೈಜ್ಞಾನಿಕ ಪ್ರಭಾವದ ಸತತ ಧಾಳಿಗೆ ತುತ್ತಾಗಿದೆ. ಆದರೂ ಇಂದಿಗೂ ಅವರ ಧಾರ್ಮಿಕ ವಿಧಿಗಳಲ್ಲಿ, ದೈನಂದಿನ ನಡವಳಿಕೆಗಳಲ್ಲಿ, ಆಚಾರ ವಿಚಾರಗಳಲ್ಲಿ ಸಂಸ್ಕೃತಿ ಜೀವಂತವಾಗಿ ಕ್ರಿಯಾತ್ಮಕವಾಗಿರುವುದನ್ನು ಕ್ಷೇತ್ರಕಾರ್ಯಗಳಿಂದ ಅರಿಯಬಹುದು. ಅದು ಉಚ್ಚವರ್ಗಕ್ಕಿಂತ ಭಿನ್ನವಾಗಿದ್ದು ಕೆಳವರ್ಗದವರ ಸಾಹಿತ್ಯ, ಸಂಗೀತ, ಶಿಲ್ಪ, ಚಿತ್ರ ಮುಂತಾದ ಕಲೆ ಮತ್ತು ವೃತ್ತಿಗಳಲ್ಲಿ ಅಭಿವ್ಯಕ್ತವಾಗುತ್ತಿದೆ. ಕೆಳವರ್ಗದ 'ಪಾಸಿಟೀವ್' ಮತ್ತು ಉಚ್ಚವರ್ಗದ ಬರವಣಿಗೆಯಲ್ಲಿ ಬರುವ 'ನೆಗೆಟೀವ್' ಗುಣಗಳಲ್ಲಿ ಕೆಳವರ್ಗದ ಸಂಸ್ಕೃತಿಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಕರ್ನಾಟಕದ ಮೂಲ ಸಂಸ್ಕೃತಿಯನ್ನು ಅರಿಯುವ ಸಾಧನೆಗಳಲ್ಲಿ ಅದು ಒಂದಾಗಿದೆ" (ಪು xvi). ಅಂದರೆ ಕೆ.ಜಿ. ನಾಗರಾಜಪ್ಪನವರ ಪ್ರಮುಖ ಆಸಕ್ತಿಯು ಸಂಸ್ಕೃತಿಯನ್ನು ಜೀವಾಳವನ್ನು ಹಿಡಿಯುವಲ್ಲಿದೆಯೇ ಹೊರತು ಅದು ಕೇವಲ ಪಠ್ಯಮುಖಿಯಲ್ಲ. ಪಠ್ಯಮುಖಿ ವಿಮರ್ಶಕರಿಗೆ ಪಠ್ಯವೇ ಕೇಂದ್ರವಾಗಿರುವುದರಿಂದ ಸಂಸ್ಕೃತಿಯ ಚರ್ಚೆಯು ಅಲ್ಲಿ ಪ್ರಧಾನವಲ್ಲ. ಪಠ್ಯದೊಳಗಿನ ಸಂಸ್ಕೃತಿಯು ಪಠ್ಯವನ್ನು ಬರೆದ ಬರಹಗಾರನ ಮನೋಧರ್ಮವನ್ನು, ಅವನು ನಿಂತಿರುವ ಸಂಸ್ಕೃತಿಯ ಗುಣವನ್ನು ಒಳಗೊಂಡಿರುತ್ತದೆಯೆಂಬುದನ್ನು ಮರೆಯಲಾಗದು. ಕೆ.ಜಿ.ನಾ. ಅವರ ಲೇಖನಗಳ ಪ್ರಮುಖ ಗುಣವಿದು.

ಈ ಕೃತಿಯ ಮೊದಲ ಲೇಖನ 'ಕಾವ್ಯ-ಹೊಸದೃಷ್ಟಿ-ಹಳಗನ್ನಡ ನಡುಗನ್ನಡ'. ಕಾವ್ಯಗಳ ಕುರಿತಂತೆ ಅಪಾರವಾದ ಒಳನೋಟಗಳನ್ನು ಒಳಗೊಂಡಿರುವ ಲೇಖನವಿದು. ಈ ಲೇಖನವು ಹಳಗನ್ನಡ ನಡುಗನ್ನಡ ಸಾಹಿತ್ಯದ ಬಗೆಗೆ ಹೊಸ ರೀತಿಯಲ್ಲಿ ಚಿಂತಿಸುವ ಕ್ರಮವನ್ನು ಕಲಿಸಿಕೊಡುತ್ತದೆ. 'ವೈದಿಕ ಕಾವ್ಯಗಳು ಲೋಕ ಕಲ್ಯಾಣವನ್ನು ಒತ್ತಿಹೇಳಿದರೆ ಜೈನ ಕಾವ್ಯಗಳು ಆತ್ಮಕಲ್ಯಾಣವನ್ನು ಎತ್ತಿ ಹಿಡಿಯುತ್ತವೆ. ವೈದಿಕ ಮತ್ತು ಜೈನರ ಕಾವ್ಯಗಳಿಗೆ ಕ್ಷತ್ರಿಯರೇ ಕಥಾನಾಯಕರು. ಜೈನ ಕ್ಷತ್ರಿಯ ಕಥಾನಾಯಕರು ಭವಾವಳಿಯಿಂದ, ಆತ್ಮ ಕಲ್ಯಾಣ ಸಾಧನೆಯಿಂದ ಅರ್ಹಂತರಾದರೆ, ವೈದಿಕ ಕ್ಷತ್ರಿಯ ಕಥಾನಾಯಕರು ಯುದ್ಧದಿಂದ ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ ಸೂತ್ರದಿಂದ ಲೋಕ ಕಲ್ಯಾಣ ಸಾಧಿಸಿ ಧರ್ಮ ರಕ್ಷಕರಾಗಿರುತ್ತಾರೆ. ಜೈನರಲ್ಲಿ ಕ್ಷತ್ರಿಯ ಜನ್ಮದಿಂದಲೇ ಮುಕ್ತಿ ಸಾಧಿಸಿ ಕೇವಲ ಜ್ಞಾನ ಪ್ರಾಪ್ತವಾಗಿ ಅರ್ಹಂತರಾಗುವುದು, ವೈದಿಕರ ಕ್ಷತ್ರಿಯರು ಧರ್ಮ ರಕ್ಷಣೆಯ ಭಾರ ಹೊತ್ತವರು. ಈ ಒಂದು ಅರ್ಥದಲ್ಲಿ ವೈದಿಕ ಧಾರ್ಮಿಕ ಕಾವ್ಯವಾದ ಮಹಾಭಾರತ ಜೈನರಿಗೆ ಲೌಕಿಕ ಕಾವ್ಯವಾಯಿತು' (ಪು ೯). ಹಳಗನ್ನಡ ಕಾವ್ಯದಲ್ಲಿ ಬಂದಿರುವ ಪ್ರಮುಖ ಸಂಗತಿಗಳನ್ನು ಆಧರಿಸಿಕೊಂಡು ತಳೆದಿರುವ ಈ ನಿಲುವು ಗಮನಾರ್ಹವಾದುದು. ಪಂಪ, ರನ್ನರಂಥ ಕವಿಗಳು ಮಹಾಭಾರತವನ್ನು ಲೌಕಿಕ ಕಾವ್ಯವಾಗಿಸಿದ್ದರ ಹಿನ್ನೆಲೆಯನ್ನು ಕೆ.ಜಿ. ನಾಗರಾಜಪ್ಪನವರು ಸರಿಯಾಗಿಯೇ ಗುರುತಿಸಿದ್ದಾರೆ. ಈ ಲೇಖನದಲ್ಲಿ ಕೆ.ಜಿ.ನಾ. ಮತ್ತೊಂದು ಪ್ರಮುಖ ವಿಷಯವನ್ನು ಪ್ರಸ್ತಾಪಿಸಿದ್ದಾರೆ. '........ಪಂಪ ಮಾರ್ಗ ಕಾವ್ಯದ

ಸೀಮಾಪುರುಷನಾದರೆ, ಕುಮಾರವ್ಯಾಸ ದೇಸೀಯ ಕಾವ್ಯದ ಸೀಮಾಪುರುಷನಾದನು. ಈ ಇಬ್ಬರ ನಡುವೆ ರನ್ನ, ಹರಿಹರ, ರಾಘವಾಂಕ, ಚಾಮರಸ ಮತ್ತು ರತ್ನಾಕರ ವರ್ಣಿ ಮುಂತಾದವರು ಮೈಲಿಗಲ್ಲುಗಳಾದರು. ಮಿಕ್ಕ ಕವಿಗಳಿಗೆ ಕಾವ್ಯ ಧಾರ್ಮಿಕ ಫಲಪ್ರಾಪ್ತಿಯ ಮುಕ್ತಿಗೆ ಸಾಧನವಾಯಿತು. ಜೈನಕವಿಗಳು ಪುಣ್ಯ ಪ್ರಾಪ್ತಿಗೆ., ವೀರಶೈವ ಕವಿಗಳು ಶಿವಲೋಕ ಸಾಧನೆಗೆ, ವೈದಿಕ ಕವಿಗಳು ಯಜ್ಞಫಲ ಪ್ರಾಪ್ತಿಗೆ ಕಾವ್ಯಗಳನ್ನು ರಚಿಸಿ ತಮ್ಮ ತಮ್ಮ ಪಂಥದ ಜನರನ್ನು ಬದುಕಿಸಿದರು (ಪು ೫). ಇಲ್ಲಿ ಮಾರ್ಗ ಮತ್ತು ದೇಸಿಯ ಪರಿಭಾಷೆಯಿದೆ. ಕಾವ್ಯ ರಚನೆಯ ಉದ್ದೇಶದ ಬಗೆಗಿನ ನಿಲುವಿದೆ. ಇದು ಮಾರ್ಗ ಮತ್ತು ದೇಸಿಯ ಪರಿಕರಗಳನ್ನು ಸರಳ ದ್ವಂದ್ವದ ನಿಲುವನ್ನು ಒಳಗೊಂಡಿದೆಯೆಂದು ಅನಿಸುತ್ತದೆಯಾದರೂ ಇದು ಪ್ರಮುಖ ಸಂಗತಿಯನ್ನು ಸೂಚಿಸಿದೆ ಎನ್ನುವುದನ್ನು ಮರೆಯಲಾಗದು. 'ಕಾವ್ಯ-ಹೊಸದೃಷ್ಟಿ' ಲೇಖನದಲ್ಲಿ ಹೊಸದೃಷ್ಟಿಯಿದೆ. ಕನ್ನಡದ ಕಾವ್ಯಗಳನ್ನು ಕೆ.ಜಿ.ನಾ. ಅವರು ಗ್ರಹಿಸುವ ಕ್ರಮವು ವಿಶಿಷ್ಟವಾದುದು. ಮೊದಲಿಗೆ ಜೈನ ಕಾವ್ಯಗಳ ಪ್ರಮುಖ ಸಮಸ್ಯೆಯನ್ನು ಎತ್ತಿಕೊಳ್ಳುವ ಕೆ.ಜಿ.ನಾಗರಾಜಪ್ಪನವರು ಜೈನ ಕವಿಗಳಿಗೆ ಇದ್ದ ತೊಡಕಿನ ಕುರಿತು ಬರೆದಿದ್ದಾರೆ. ಇದನ್ನು ಕೆ.ಜಿ.ನಾ. ಅವರು ಪಠ್ಯದ ಒಳಗೆ ಮತ್ತು ಹೊರಗಿನ ಎರಡೂ ಸಂಗತಿಗಳನ್ನು ಇಟ್ಟುಕೊಂಡು ಚರ್ಚಿಸಿದ್ದಾರೆಂಬುದು ಗಮನಾರ್ಹ. ರನ್ನನ ಗದಾಯುದ್ಧದಲ್ಲಿ ಬರುವ ಕೃಷ್ಣನ ಬಗೆಗಿನ ಮೂದಲಿಕೆಯ ಮಾತುಗಳನ್ನು ಎತ್ತಿಕೊಂಡು ಕೆ.ಜಿ.ನಾ ಅವರು ಹೀಗೆ ಹೇಳುತ್ತಾರೆ: 'ಜೈನ ಕಾವ್ಯಗಳಲ್ಲಿ ಅರ್ಹಂತರಾದವರನ್ನು ಇಂದ್ರಾದಿ ದೇವತೆಗಳೇ ಬಂದು ಪೂಜೆ ಸಲ್ಲಿಸುವಾಗ, ಕೃಷ್ಣ ದೇವರಾಗಿದ್ದೂ ಮಾನವನ ಸೇವಕನಾಗಿ ಸೇವೆ ಸಲ್ಲಿಸುವುದಂತೂ ಅವಮಾನಕರವೆಂದೇ ರನ್ನನ ಭಾವನೆ' (ಪು. ೧೩). ಇದರ ಮುಖಾಂತರ ಲೇಖಕರು ತಳೆಯುವ ನಿಲುವು ಹೀಗಿದೆ. 'ಭೋಗದ ನಂತರ ವೈರಾಗ್ಯವೇ ಹೊರತು, ವೈರಾಗ್ಯದ ಅನಂತರ ಭೋಗ ಜೈನ ಧರ್ಮದ ಕಲ್ಪನೆಗೆ ವಿರುದ್ಧವಾದುದು. ಅರ್ಹಂತನಾದ ಮೇಲೆ ಮರಳಿ ಮಾನವಜನ್ಮ ಪ್ರಾಪ್ತಿ ಜೈನಧರ್ಮದಲ್ಲಿ ಸಾಧ್ಯವಿಲ್ಲ. ಆದ್ದರಿಂದಲೇ ದುರ್ಯೋಧನನ ಶತ್ರುನಿಂದೆಯ ಸೇಡಿನ ಕಿಡಿನುಡಿಗಳಲ್ಲಿ ದೈವದ ನಿಂದೆಯ ಮಾತುಗಳು ಅಷ್ಟು ತೀವ್ರವಾಗಿ ಬಂದಿರುವುದು' (ಪು. ೧೩). ಒಂದು ಪರಿಕರವನ್ನು ಮಾತ್ರ ಕೆ.ಜಿ.ನಾ. ಅವರು ನಮಗೆ ಸೂಚಿಸಿದ್ದಾರೆ. ಆದರೆ ಈ ಒಂದು ಸಂಗತಿಯನ್ನು ಇಟ್ಟುಕೊಂಡು ನಾವು ಪ್ರಾಚೀನ ಕನ್ನಡ ಕಾವ್ಯಗಳನ್ನು ಬೇರೊಂದು ರೀತಿ ಓದುವುದು ಸಾಧ್ಯ.

'ಮರುಚಿಂತನೆ' ಕೃತಿಯಲ್ಲಿನ ಮೊದಲ ಪ್ರಬಂಧವಲ್ಲಿ ಧರ್ಮ ಮತ್ತು ಕಾವ್ಯದ ನಡುವಣ ಅಂತರ್ಸಂಬಂಧದ ಸಮರ್ಥ ವಿವೇಚನೆಯನ್ನು ನಾವು ಕಾಣಬಹುದು. ಈ ಸಂಕಲನದ ಎರಡನೆಯ ಪ್ರಬಂಧವು 'ಅಲ್ಲಮನ ವಚನದ ಒಂದು ಅರ್ಥ' ವಿವೇಚನೆಯನ್ನು ಒಳಗೊಂಡಿದೆ. ಈ ಲೇಖನವು ಎತ್ತುವ ಅಲ್ಲಮನ ಒಂದು ವಚನವು ಪ್ರಾಯೋಗಿಕ ವಿಮರ್ಶಕರ ಕೈಯಲ್ಲಿ ಸಿಕ್ಕಿದ್ದರೆ ಕೇವಲ ಪ್ರಾಯೋಗಿಕ ವಿಮರ್ಶೆಯಾಗಿ ಶುಷ್ಕಗೊಳ್ಳುವ ಎಲ್ಲಾ ಅಪಾಯವು ಇತ್ತು. ಆದರೆ ಕೆ.ಜಿ.ನಾಗರಾಜಪ್ಪನವರು ಅಲ್ಲಮನ ವಚನವನ್ನು ಚರ್ಚಿಸುವಾಗ ಅದು ಪ್ರಾಯೋಗಿಕ ವಿಮರ್ಶೆಯಾಗದ ಹಾಗೆ ಎಚ್ಚರವಹಿಸಿದ್ದಾರೆ.

'ಶರಣರು-ಏಕಮುಖ ಚಿಂತಕರು' ಶರಣ ಸಾಹಿತ್ಯ ಮತ್ತು ಶರಣರ ಬಗೆಗೆ ಕಣ್ತೆರಸುವ ಲೇಖನವಾಗಿದೆ. ಶುದ್ಧ ಜಾತಿವಾದಿ ಹಾಗೂ ಕೋಮುವಾದಿ ಮನೋಭಾವದವರಿಗೆ ಸ್ವಲ್ಪ ಕಿರಿಕಿರಿಯುಂಟು ಮಾಡಬಹುದಾದ ಲೇಖನವಿದು. ಪ್ರಗತಿ ಪರರಿಗೆ ಇಷ್ಟವಾಗಬಹುದಾದ ವಿಚಾರಧಾರೆಯನ್ನು ಈ ಲೇಖನವು ಒಳಗೊಂಡಿದೆ. 'ಹಚ್ಚಿದ ಸಿಡಿಮದ್ದನ್ನು ಮಡಿಲಲ್ಲಿ ಕಟ್ಟಿಕೊಂಡೇ ಮತ್ತೊಂದು ಗುಡಾರಕ್ಕೆ ಸಿಡಿಮದ್ದು ಹಚ್ಚುವ ಸಾಹಸವೇ ಶರಣರ ಚಳುವಳಿ. ಶಿವಭಕ್ತರ ಕುಲ ಒಂದೇ ಎಂದು ಸಾರಿದರೂ ಸಮಾನತೆಯ ಮೇಲೆ ವೀರಶೈವ ಸಮಾಜ ರೂಪುಗೊಳ್ಳಲಿಲ್ಲ. ಆತ್ಮದ ವಿಷಯದಲ್ಲಿ ಸಮಾನತೆಯನ್ನು ಸಾರಿತೇ ಹೊರತು ಸಾಮಾಜಿಕ ಸಮಾನತೆಗೆ ಎಂದೂ ಹೋರಾಡಲಿಲ್ಲ. ಕೆಳವರ್ಗದವರ ಸಂಸ್ಕೃತಿಯನ್ನು ನಾಶ ಮಾಡುವುದಕ್ಕಾಗಿಯೇ, ಅನ್ಯದೇವರನ್ನು ಹಾದರ, ಪರಿವಾರ ದೇವತೆ ಎಂದು ಕರೆದು ಏಕದೇವತೋಪಾಸನೆಯನ್ನು ಸಾಮಾನ್ಯರಿಗೆ ಬೋಧಿಸಿತು. ಇದು ರಾಜಕೀಯವಾಗಿ ಒಬ್ಬ ಸರ್ವಾಧಿಕಾರಿಯನ್ನು ನಾಯಕನನ್ನಾಗಿ ಒಪ್ಪಿಕೊಳ್ಳುವಂತೆ ಒತ್ತಾಯಿಸುವ ತತ್ವಕ್ಕಿಂತ ಭಿನ್ನವಾದುದಲ್ಲ. ಜಾತ್ಯಾತೀತ ಸಂಘಟನೆಯ ಹೆಸರಿನಲ್ಲಿ ಜಾತಿ ಜಾತಿಗಳನ್ನು ಒಡೆದು ದುರ್ಬಲಗೊಳಿಸಿ ಮುಂದೆಂದೂ ಕೆಳವರ್ಗದವರು ತಲೆ ಎತ್ತದಂತೆ ಮಾಡಿ, ಪುರೋಹಿತ ರಹಿತ ಕೆಳವರ್ಗದ ಸಮಾಜವನ್ನು ಜಂಗಮ ಪುರೋಹಿತ ಸರ್ವಾಧಿಕಾರದ ಒಡೆತನಕ್ಕೆ ಒಳಗು ಮಾಡಿತು' (ಪು. ೪೨-೪೩).

ಶರಣರ ಚಳುವಳಿಯನ್ನು ಕೆ.ಜಿ. ನಾಗರಜಪ್ಪನವರು ಧೈರ್ಯವಾಗಿ ಟೀಕಿಸುತ್ತಾರೆ. ಮತ್ತು ಬಹು ಮುಖ್ಯವಾಗಿ ಬಹು ಸಂಸ್ಕೃತಿಯ ಕುರಿತು ಇಲ್ಲಿ ಎತ್ತಿಹಿಡಿಯುತ್ತಾರೆ. ಬಹುಸಂಸ್ಕೃತಿಯ ಪರಿಕಲ್ಪನೆಯು ಮುಖ್ಯವಾದ ಚರ್ಚೆಯ ಕಡೆಗೆ ಮುಖ ಮಾಡಿ ನಿಲ್ಲುತ್ತದೆ. ಇದೇ ರೀತಿಯ ತಾತ್ವಿಕ ಭಿತ್ತಿಯನ್ನು 'ವೀರಶೈವ ಧರ್ಮ ಮತ್ತು ಕನ್ನಡ ಸಾಹಿತ್ಯ' ಪ್ರಬಂಧದಲ್ಲಿಯೂ ಕಾಣಬಹುದು.

'ಕನಕದಾಸನ ಕೀರ್ತನೆ'ಗಳ ಕುರಿತು ಬರೆಯುತ್ತಾ ಕೆ.ಜಿ. ನಾಗರಾಜಪ್ಪನವರು ಹೇಳುವ ವಿಷಯವು ಹೀಗಿದೆ. ವೈಷ್ಣವ ಪಂಥದ ಭಕ್ತ ಕನಕದಾಸನು ತನ್ನ ಇಷ್ಟದೇವತೆ ಕಾಗಿನೆಲೆಯಾದಿ ಕೇಶವನಾದುದರಿಂದ ವೈದಿಕ ಧರ್ಮ ವಿರೋಧಿಯಾಗಲಿಲ್ಲ. ಅವನು ತನ್ನ ವರ್ಗದ ಕ್ಷುದ್ರ ದೇವರನ್ನೇ ಇಷ್ಟದೇವರಾಗಿ ಸಾಧನೆ ಮಾಡಿದ್ದರೆ ಇಷ್ಟೊಂದು ವಿಶ್ವವ್ಯಾಪಕತೆ, ಜನಪ್ರಿಯತೆ ಆಧ್ಯಾತ್ಮಿಕ ಚಿಂತನೆಯಲ್ಲಾಗಲಿ, ಲೌಕಿಕದ ಸಾಮಾನ್ಯ ಬದುಕಿನಲ್ಲಾಗಲಿ ದೊರೆಯುತ್ತಿರಲಿಲ್ಲ. ಆದ್ದರಿಂದಲೇ ಅವನ ಭಾವನೆ, ಚಿಂತನೆ, ಆಚರಣೆ ಮತ್ತು ಬದುಕು ಬ್ರಾಹ್ಮಣೀಕರಣವೇ ವೈಷ್ಣವದ್ದಾಯಿತು. ಕನಕದಾಸನಲ್ಲಿ ಒಂದಿಷ್ಟು ಸುಧಾರಣೆಯ ಮನೋಭಾವ ಕಾಣುವುದೇ ಹೊರತು, ಕ್ರಾಂತಿಕಾರಿ ಸ್ವಭಾವ ಅವನದಲ್ಲ' (ಪು. ೧೧೬). ಇದರಲ್ಲಿಯೂ ಸಂಸ್ಕೃತೀಕರಣದ ಪ್ರಶ್ನೆಯೂ ಮುಖ್ಯವಾಗಿದೆ.

'ಮರುಚಿಂತನೆ' ಕೃತಿಯಲ್ಲಿನ 'ನಾಮಧಾರಿ ಲಿಂಗಾಯತರು' ಒಂದು ರೀತಿಯಿಂದ ಒಂದು ಸಂಸ್ಕೃತಿಯ ಅಧ್ಯಯನದ ಪರಿಕರಗಳನ್ನು ಒಳಗೊಂಡಿದೆ.

-2-

'ಮರುಚಿಂತನೆ' ಕೃತಿಯು ಹೀಗಾಗಿ ಸಾಹಿತ್ಯ ಮತ್ತು ಸಂಸ್ಕೃತಿಯ ಬಗೆಗೆ ಮರುಚಿಂತನೆಯನ್ನು ಮಾಡುವಂತೆ ಪ್ರೇರೇಪಿಸುತ್ತದೆ. ಈ ರೀತಿಯ ಪ್ರೇರಣೆಯು ವಾಗ್ವಾದಕ್ಕೆ ಅವಕಾಶ ಮಾಡಿಕೊಡುತ್ತದೆ. ಕೃತಿಯೊಂದರ ಯಶಸ್ಸು ಇರುವುದು ಕೂಡಾ ಈ ರೀತಿಯ ಅಂಶಗಳಲ್ಲಿ. ಒಂದು ಕೃತಿಯನ್ನು ಓದುವಾಗ ಅಥವಾ ಓದಿದ ಮೇಲೆ ನಾವು ಸಾಮಾನ್ಯವಾಗಿ ಮೂರು ರೀತಿಯ ನಿಲುವುಗಳನ್ನು ತಳೆಯುತ್ತೇವೆ. ಕೃತಿಯ ಅಭಿಪ್ರಾಯವನ್ನು ಪೂರ್ಣ ಒಪ್ಪಿಕೊಳ್ಳುವುದರ ಮೂಲಕ ಮನ್ನಣೆಯನ್ನು ನೀಡುವುದು ಒಂದಂಶವಾದರೆ, ಕೃತಿಯ ಕೆಲವು ಸಂಗತಿಗಳನ್ನು ಮಾತ್ರ ಅಂಗೀಕರಿಸುವುದು ಮತ್ತೊಂದು ರೀತಿಯ ನಿಲುವು ಆಗಿರುತ್ತದೆ. ಪೂರ್ಣ ತಿರಸ್ಕಾರವು ಕೂಡಾ ಕೃತಿಯ ಓದಿನ ಸಂದರ್ಭದಲ್ಲಿ ಸಾಧ್ಯ. ಈ ದೃಷ್ಟಿಯಿಂದ 'ಮರುಚಿಂತನೆ'ಯಂಥ ಕೃತಿಗಳ ಬಗೆಗೆ ಪೂರ್ಣ ಮೌನವು ಸಾಧ್ಯವಿಲ್ಲ. ಸಾರಾಸಗಟಾಗಿ ತಿರಸ್ಕರಿಸುವುದು ಅಸಾಧ್ಯ.

'ಮರುಚಿಂತನೆ' ಕೃತಿಯು ಒಳಗೆ ಪ್ರೇರಿತವಾದ ಪ್ರಮುಖ ತಾತ್ವಿಕತೆಯು 'ಸಂಸ್ಕೃತೀಕರಣ'ದ ಪ್ರಕ್ರಿಯೆಗೆ ಸಂಬಂಧಿಸಿದ ವಿಚಾರಧಾರೆಯನ್ನು ಒಳಗೊಂಡಿದೆ. ಈ ಲೇಖನದಲ್ಲಿ ಈಗಾಗಲೇ ಉಲ್ಲೇಖಿಸಿರುವ ಪ್ರಮುಖ ಭಾಗಗಳು ಈ ವಿಚಾರಗಳನ್ನು ಪ್ರಸ್ತುತಪಡಿಸುತ್ತವೆ. ಸಂಸ್ಕೃತೀಕರಣದ ವಾಗ್ವಾದವನ್ನು ಎತ್ತಿರುವುದು ಸಮಾಜಶಾಸ್ತ್ರಜ್ಞ ಎಂ.ಎಸ್. ಶ್ರೀನಿವಾಸ ಅವರು. ಕೆಳವರ್ಗದ ಸಂಸ್ಕೃತಿಯು ಪ್ರಧಾನವಾದ ಸಂಸ್ಕೃತಿಯನ್ನು ಅನುಸರಿಸಿ ಸಂಸ್ಕೃತೀಕರಣದ ಪ್ರಕ್ರಿಯೆಗೆ ಒಳಪಟ್ಟು ತನ್ನ ಸಾಂಸ್ಕೃತಿಕ ಅನನ್ಯತೆಯನ್ನು ಕಳೆದುಕೊಳ್ಳುತ್ತದೆಯೆನ್ನುವುದು ಚರ್ಚಾರ್ಹವಾಗಿದೆ. ಅದು ಸಾಂಸ್ಕೃತಿಕ ಅನನ್ಯತೆಯನ್ನು ಕಳೆದುಕೊಳ್ಳುವಾಗ ಯಾವುದನ್ನು ಕಳೆದುಕೊಳ್ಳುತ್ತದೆ? ಮತ್ತು ಯಾಕೆ? ಇವರೊಂದಿಗೆ ಪ್ರಧಾನ ಮತ್ತು ಅಧೀನ ಸಂಸ್ಕೃತಿಗಳ ಮುಖಾಮುಖಿ ಕೊಳುಕೊಡುವಿಕೆಯ ಭಾಗಗಳು ಕೂಡಾ ಮುಖ್ಯವಾಗಿರುತ್ತವೆ. ಕೆ.ಜಿ. ನಾಗರಾಜಪ್ಪನವರು ಪ್ರತಿಪಾದಿಸುವ "ಶರಣ ಚಳುವಳಿಯ ಏಕದೇವತೋಪಾಸನೆಯ ಅಂಶಗಳು" ಒಂದು ಚಾರಿತ್ರಿಕ ಒತ್ತಡದಿಂದ ರೂಪುಗೊಂಡಿರುವ ಪ್ರಕ್ರಿಯೆಯೂ ಹೌದು. ಶರಣ ಚಳುವಳಿಯ ಬಗೆಗೆ ಕೆ.ಜಿ.ನಾ. ಅವರ ಅಭಿಪ್ರಾಯವು ಏಕಮುಖವಾದ ನಿಲುವಿನಂತೆ ಭಾಸವಾಗುತ್ತದೆ. ಎರಡನೆಯದಾಗಿ, ಈ ರೀತಿಯ ಶರಣ ಚಳುವಳಿಯನ್ನು ಕೆಳವರ್ಗದ ಸಂಸ್ಕೃತಿಯು ಯಾವುದೇ ರೀತಿಯ ಸಾಂಸ್ಕೃತಿಕ ಅಂತರಂಗದ ಹಿನ್ನೆಲೆಯಲ್ಲಿ ಗ್ರಹಿಸಬೇಕು. ಈ ದೃಷ್ಟಿಯಿಂದ ಕೆ.ಜಿ.ನಾ. ಅವರ ಒಟ್ಟು ಅಭಿಪ್ರಾಯಗಳನ್ನು ಹಾಗೆಯೇ ಸ್ವೀಕರಿಸುವುದು ಕಷ್ಟ. ಈ ದೃಷ್ಟಿಯಿಂದ ಕೆ.ಜಿ. ನಾಗರಾಜಪ್ಪನವರ ಬರವಣಿಗೆಯ ಹಿಂದಿರುವ ನಿರ್ಧಾರಾತ್ಮಕವಾದ ನಿಲುವಿನ ಬಗೆಗೆ ಭಿನ್ನಾಭಿಪ್ರಾಯ ಸಾಧ್ಯ.

ಧರ್ಮ ಮತ್ತು ಸಾಹಿತ್ಯದ ನಡುವಣ ಅಂತರ್‌ಸಂಬಂಧವನ್ನು ಕುರಿತು ಕೆ.ಜಿ. ನಾಗರಾಜಪ್ಪನವರು ಪ್ರಮುಖ ಒಳನೋಟಗಳ ಮೂಲಕ ಚರ್ಚಿಸುತ್ತಾರೆಂಬುದು ನಿಜ. ಆದರೆ ಸಾಹಿತ್ಯ ಮತ್ತು ಧರ್ಮದ ನಡುವಣ ಸಂಬಂಧವೂ ದ್ವಂದ್ವಾತ್ಮಕವಾದುದು. ಅಷ್ಟೇ

ಅಲ್ಲ ಕನ್ನಡದಲ್ಲಿ ಧರ್ಮದ ಬಗೆಗಿನ ಚಿಂತನೆಗೂ ಹಿನ್ನೆಲೆಯಲ್ಲಿ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಮಾದರಿಗಳ ವಿಭಿನ್ನ ಒತ್ತಡಗಳಿವೆ. ದೇಸಿಯ ಒತ್ತಡವು ಕೂಡಾ ಈ ದೃಷ್ಟಿಯಿಂದ ಗಮನಾರ್ಹವಾದುದಾಗಿದೆ.

ಕೆ.ಜಿ.ನಾ ಅವರು ಕೆಳವರ್ಗದ ಸಂಸ್ಕೃತಿಯ ನಾಶಕ್ಕೆ ಶರಣ ಚಳುವಳಿಯು ಕಾರಣವಾಯಿತು ಎನ್ನುವಾಗ ಇರುವ ವಿಷಾದದ ಧೋರಣೆಯು ಅಗತ್ಯವಿದೆಯೆ? ಸಂಸ್ಕೃತಿಯು ಕೂಡಾ ಸ್ಥಿರವಲ್ಲ, ಅದು ಚರ. ಉತ್ಪಾದನೆಯ ವಿಧಿ ವಿಧಾನಗಳಿಗೆ ಅನುಸಾರವಾಗಿ ಸಾಂಸ್ಕೃತಿಕ ಚಲನಶೀಲತೆಯು ರೂಪುಗೊಳ್ಳುತ್ತದೆ. ಹೀಗಾಗಿ ಕೆ.ಜಿ.ನಾ ಅವರ ಮರಚಿಂತನೆ ಕೃತಿಯು ಮತ್ತೊಂದು 'ಮರುಚಿಂತನೆ'ಗೆ ಕಾರಣವಾಗುತ್ತದೆ.♦

ನೀ ಮುಡಿಸಿದಾಗ ಮುಡಿದು
ತೊಡಿಸಿದಾಗ ತೊಟ್ಟನೆ ತೊಟ್ಟು
ಬಿಚ್ಚಿದಾಗ ಬತ್ತಲೆ ನಿಂತು
ಹಾಕಿದಾಗ ಧೂಪದ ಹೊಗೆ ಕುಡಿದು
ನಿನ್ನ ದನಿಗೆ ಸಪ್ತ ಸ್ವರವ ಮಿಡಿದು
ಸ್ತೋತ್ರಾವಳಿಗೆ ಕಿವಿ ಅರಳಿಸಿ
ನಿನ್ನ ಇಚ್ಛಾ ನಿಚ್ಛೆಗೆ ತಕ್ಕಂತೆ
ಎಡಬಲದ ಕಡೆ ಹೂವ ಕೆಡವಿ ವರಕೊಟ್ಟು
ಮುಂದಿಟ್ಟ ಎಡೆಗೆ ನಾಲಿಗೆ ಚಾಚಿ ನೆಕ್ಕಿ
ಪ್ರಸಾದವಾಗಿ ಪರಿವರ್ತಿಸಿ ಹಿಂತಿರುಗಿಸಿ
ನೀನಾವಾವ ಪರಿ ಆಡಿಸಿದರೂ ನಾನಾಡಲು
ನಿನ್ನ ಬಯಕೆ ಯಂತ್ರದ ಕೀಲಿ ಗೊಂಬೆ ನಾನಲ್ಲವಯ್ಯ.

-ಪ್ರೊ॥ ಕೆ.ಜಿ. ನಾಗರಾಜಪ್ಪ

8. ನಾಗರಾಜಪ್ಪನವರ ವಿಮರ್ಶೆಯ ತಾತ್ವಿಕ ನೆಲೆಗಳು

ಪಿ. ಚಂದ್ರಿಕ

ವಿಮರ್ಶೆ ತನ್ನ ನೆಲೆಗಳನ್ನು ಕಂಡುಕೊಳ್ಳುವುದರ ಬಗ್ಗೆ ಅನೇಕ ರೀತಿಯ ಚರ್ಚೆಗಳು ನಮ್ಮ ಮಧ್ಯೆ ಇವೆ. ಈ ನೆಲೆಗಳ ಹುಡುಕಾಟದಲ್ಲಿ ಭಿನ್ನ ಬಗೆಯ ಚಿಂತನ ಕ್ರಮಗಳು ವಿಮರ್ಶಾ ವಲಯವನ್ನು ಪ್ರವೇಶಿಸುತ್ತಿರುವುದನ್ನು ಕಾಣಬಹುದು. ದೇಶೀವಾದ, ಸಮಾಜ ಕೇಂದ್ರಿತ ವಿಮರ್ಶೆ. ಓದು ಕೇಂದ್ರಿತ ವಿಮರ್ಶೆ, ವಸಾಹತು ಹೀಗೆ. ಈ ಎಲ್ಲ ವಾದಗಳ, ಚರ್ಚೆಗಳ ಮೂಲ ನೆಲೆ ಪಾಶ್ಚಾತ್ಯದ್ದು ಎನ್ನುವುದನ್ನು ಮರೆಯುವಂತಿಲ್ಲ. ಪಾಶ್ಚಾತ್ಯ ವಿಮರ್ಶೆಯ ಕೆಲವು ವಾದಗಳನ್ನು, ಕೆಲವು ಪರಿಭಾಷೆಗಳನ್ನು ನಮಗೆ ಹೇಗೆ ಬೇಕೋ ಹಾಗೆ ಅರ್ಥೈಸುತ್ತಿರುವುದೇ ಹೆಚ್ಚು. ವಿಮರ್ಶೆಯ ಮಾನದಂಡಗಳು ಇಲ್ಲಿಯವಂತೆ ಮೇಲು ನೋಟಕ್ಕೆ ಭಾಸವಾದರೂ ಅರ್ಥದ ಎಳೆಯೊಂದು ಇನ್ನೆಲ್ಲೋ ಸಿಕ್ಕಿಕೊಂಡು ಬಿಟ್ಟಿರುತ್ತದೆ. ಎಲ್ಲದರ ನಡುವೆಯೇ ಇಂಥ ವಿಮರ್ಶೆ ತಾನು ಕಂಡುಕೊಳ್ಳಬೇಕಿರುವ ತನ್ನವೇ ಆದ ಬೇರುಗಳು ಯಾವುವು? ನಮ್ಮ ಜೀವನವೇ 'ಭಾರತಿಯ' ಪರಿಕಲ್ಪನೆಗಿಂತ ಸಾಕಷ್ಟು ಭಿನ್ನವಾಗುತ್ತಿರುವಾಗ ಭಾರತೀಯ ನೆಲೆಗಳಲ್ಲಿ ಕಂಡುಕೊಳ್ಳುವ ವಿಮರ್ಶೆಯ ಸ್ವರೂಪ ಮತ್ತು ಅರ್ಥಗಳು ಯಾವುವು ಎಂಬುದು ಜಿಜ್ಞಾಸೆಗೆ ಒಳಗಾಗಿರುವ ವಿಷಯವಾಗಿದೆ.

ಪಾಶ್ಚಾತ್ಯ ವಿಮರ್ಶೆಯ ತತ್ವವನ್ನು ಹಾಗೇ ಸ್ವೀಕರಿಸುವುದನ್ನು ನಾವು ಆದರ್ಶದ ಸ್ಥಿತಿ ಎಂದು ನಾವು ಭಾವಿಸಿಲ್ಲ. ಬದಲಾಗಿ ನಮ್ಮ ಪರಿಸರಕ್ಕೆ ಅದನ್ನು ಮಾರ್ಪಾಡು ಮಾಡಿಕೊಳ್ಳುವುದನ್ನು ನಾವು ಬಯಸುತ್ತಿರುವುದು ಹಳೆಯ ಸಂಗತಿ. ಅವು ರೂಪಾಂತರಕ್ಕೆ ಒಳಪಟ್ಟೋ, ಒಳಪಡುವ ಹಾದಿಯಲ್ಲೋ ನಮ್ಮ ವಿಮರ್ಶಾ ವಲಯವನ್ನು ಸೇರಿಕೊಂಡು ಬಿಟ್ಟಿವೆ. ಇದು ಬೇಡ ಎನ್ನಲಿಕ್ಕಾಗದ, ನಮ್ಮನ್ನು ಅನಿವಾರ್ಯತೆಗೆ ಸಿಕ್ಕಿಸಿ ಬಿಡುವ ಅಂಶ. ನಮ್ಮ ಜೀವನಕ್ಕೂ ಇದು ಅನ್ವಯಿಸಿದೆ.

ಒಂದು ಕೃತಿಯನ್ನು ಓದುವ ಮತ್ತು ಗ್ರಹಿಸುವ ಕ್ರಮ ಎರಡು ಒಂದೇ ಸ್ತರಗಳಲ್ಲಿರುತ್ತದೆ ಎಂದು ಹೇಳಲಿಕ್ಕಾಗುವುದಿಲ್ಲ. ಓದುವಿಕೆಯ ಸಾಮಾನ್ಯತೆಯನ್ನು ಗ್ರಹಿಸುವಿಕೆಯ ಎತ್ತರಕ್ಕೆ ಹೊಂದಿಸಲಿಕ್ಕೆ ಸತತವಾದ ಪ್ರಯತ್ನ ಬೇಕು. ವಿಮರ್ಶೆಯ ಹಿಂದೆ ಈ ಬಗೆಯ ಮನಸ್ತತ್ವ ಕೆಲಸ ಮಾಡುತ್ತಿರುತ್ತದೆ. ಓದುವಿಕೆಗ ವಿವಿಧಾರ್ಥಗಳು ಇರುವುದು ಸಾಧ್ಯವಿಲ್ಲ. ಆದರೆ ಗ್ರಹಿಸುವಿಕೆಗೆ ಇದೇ ಪ್ರಧಾನವಾಗಿರುತ್ತದೆ. ಈ ಕಾರಣದಿಂದಲೇ ಸರಕುಗಳನ್ನು ಹುಡುಕಲು ಪ್ರಾರಂಭಿಸುತ್ತದೆ. ಗ್ರಹಿಕೆಯನ್ನೇ ಪ್ರಧಾನವಾಗಿಸಿ ಕೊಂಡ ಓದು ಈ ಹಿನ್ನೆಲೆಯಲ್ಲಿ ಮಹತ್ವದ್ದೆನಿಸಿದೆ. ಮಹತ್ವ ಎಂದು ಈಗ ಗುರುತಿಸುತ್ತಿರುವುದೂ ವಿದೇಶಿ ಮಾದರಿಗಳನ್ನೇ ಎನ್ನುವುದನ್ನು ಮರೆಯುವಂತಿಲ್ಲ. ಬೌದ್ಧಿಕತೆಯನ್ನು ಒಡೆದು (ಭಿನ್ನ ಮಾಡಿ) ತೋರಿಸುವ ಕ್ರಮವನ್ನು ಈ ಮಾದರಿ ಹೇಳುತ್ತದೆ. ನಮ್ಮ ಪುರಾತನ ಮಾದರಿಗಳೆಲ್ಲವೂ ಇಡಿಯಾಗಿ ಗುರುತಿಸುವುದನ್ನು ಇಲ್ಲಿ

ಬಿಡಿ ಬಿಡಿಯಾಗಿ ಬಿಡಿಸಿಡಲಾಗಿದೆ. ಓದುಗನಿಗೂ, ವ್ಯಾಖ್ಯಾನಿಸುವವನಿಗೂ ಒಂದು ನಿರ್ದಿಷ್ಟ ಅಂತರವಿರುತ್ತದೆ. ಓದುವವನಿಗಿಂತ ಅರ್ಥೈಸುವವನಿಗೆ ನಾವು ಹೆಚ್ಚಿನ ಜವಾಬ್ದಾರಿಯನ್ನು ವಹಿಸುತ್ತೇವೆ ಮತ್ತು ಆರೋಪಿಸುತ್ತೇವೆ. ಇನ್ನೂ ಸೂಕ್ಷ್ಮವಾಗಿ ಹೇಳುವುದಾದರೆ ವಿಮರ್ಶೆಯ ಜಗತ್ತು ನೇರ ಸಮಾಜದೊಂದಿಗೆ ಸಂಪರ್ಕವನ್ನು ಸಾಧಿಸುವುದಿಲ್ಲ. ಇಲ್ಲಿ ಕಾಣುವ ಜಗತ್ತು ಸಾಹಿತ್ಯದ 'ಕಲ್ಪಿತ ಜಗತ್ತಿನ' ಒಳ ಅಂಶಗಳೊಂದಿಗೆ ಸಂವಾದ ಬೆಳಸುತ್ತದೆ. ಇದು ಅಷ್ಟಕ್ಕೆ ನಿಲ್ಲದೆ ಸಂವಾದ ಬೆಳಸುತ್ತಲೇ ಸಾಹಿತ್ಯದ ಜಗತ್ತಿಗೆ ಸಂವಾದಿಯಾಗಿ ಮತ್ತೊಂದು ಜಗತ್ತಿನ ಸ್ವರೂಪವನ್ನು ಅದು ತೆರೆಯುತ್ತದೆ. ಸಾಹಿತ್ಯ ಸೃಷ್ಟಿಯ ಕಾಲದಲ್ಲಿನ ಸೃಜನಾತ್ಮಕ ಮನಸ್ಸು ವಿಮರ್ಶೆಯ ಹೊತ್ತಿನಲ್ಲೂ ಕೆಲಸ ಮಾಡುತ್ತದೆ. ಒಂದು ಕೃತಿಯಲ್ಲಿನ ಅಂಶವನ್ನೇ ವಿಮರ್ಶಕ ವಿಶ್ಲೇಷಿಸುವಾಗ ಆ ಕೃತಿಯ ವಿವರಗಳನ್ನು ಯಥಾವತ್ತಾಗಿ ಮುಂದಿಡುವುದಿಲ್ಲ. ಅದನ್ನು ತನ್ನ ಕಲ್ಪನೆಯ ಸಮಾಜದೊಂದಿಗೆ ಹೋಲಿಸಲು ತೊಡಗುತ್ತಾನೆ. ಇಲ್ಲಿ ಸೃಜನ ಶೀಲತೆಗೂ ವಿಮರ್ಶೆಗೂ ನಡುವೆ ಒಂದು ವಾಗ್ವಾದ ಸಿದ್ಧಿಸುತ್ತದೆ. ವಿಮರ್ಶೆ ತನ್ನ ಸ್ಥಾನವನ್ನೇ ಈ ಹೊತ್ತಿಗೂ ಉಳಿಸಿಕೊಂಡು ಬರುತ್ತಿರುವುದು ಈ ಮಹತ್ವದಿಂದಲೇ.

ಕೆ.ಜಿ. ನಾಗರಾಜಪ್ಪನವರ ಚಿಂತನೆಯ ನೆಲೆಗಳು ಆರಂಭಗೊಳ್ಳುವುದು ಇಲ್ಲಿಂದಲೇ. ಆದ್ದರಿಂದ ಆರಂಭದಿಂದಲೂ ಒಂದು ವಾಗ್ವಾದವನ್ನು ಸಿದ್ಧಗೊಳ್ಳುತ್ತಲೇ ಗಂಭೀರ ಓದುಗರನ್ನೂ ಸೆಳೆಯುತ್ತಾರೆ. ಅವರ ಗ್ರಹಿಕೆಯ ನೆಲೆಗಳು ಬಹುಕೃತವಾದದ್ದು. ಒಂದು ಕಡೆ ಶಂಕರ ಅದ್ವೈತ ಸಿದ್ಧಾಂತ, ಮತ್ತೊಂದು ಕಡೆಗೆ ಮಾರ್ಕ್ಸವಾದ, ಮಗದೊಂದು ಕಡೆಗೆ ಕನ್ನಡದ್ದೇ ಆದ ಸ್ವಂತದ ಆಲೋಚನಾ ಕ್ರಮ. ಹೀಗೆ ಅನೇಕ ಶಿಸ್ತುಗಳನ್ನು ಒಗ್ಗೂಡಿಸುತ್ತಾರೆ. ಅವರ ಆಲೋಚನೆ ಮತ್ತು ಕಾವ್ಯ ಮೀಮಾಂಸೆಯ ನೆಲೆಗಳಲ್ಲಿ ಇತಿಹಾಸ ಮತ್ತು ಸಾಹಿತ್ಯ ಏಕ ಕಾಲಕ್ಕೆ ಸರಳರೇಖೆಯಂತೆ ವರ್ತಿಸುತ್ತಾ ಹೋಗುತ್ತದೆ. ಇಲ್ಲಿ ಶ್ರೇಷ್ಠ, ಅಶ್ರೇಷ್ಠಗಳನ್ನು ಅಳೆವ ಮಾನದಂಡಕ್ಕಿಂತ ಸಾಂಸ್ಕೃತಿಕ ಬಿಕ್ಕಟ್ಟುಗಳ ಚರ್ಚೆ ಮುಖ್ಯವೆನಿಸುತ್ತದೆ. ಇರುವ ಸಾಂಸ್ಕೃತಿಕ ಪರಿಕಲ್ಪನೆಗಳನ್ನು ವಿರೋಧಿಸಿ ಬಂದ ಆಶಯಗಳು ಸಾಹಿತ್ಯದಲ್ಲಿರುತ್ತವೆ. ಹೀಗೆ ಇತಿಹಾಸ ಮತ್ತು ಸಾಹಿತ್ಯದ ನಡುವೆ ಒಂದು ಸುಳಿ ಏರ್ಪಾಡಾಗುತ್ತದೆ. ಕನ್ನಡ ಸಾಹಿತ್ಯ ವಿಮರ್ಶೆ ಈ ಬಗೆಯ ಲಯಗಾರಿಕೆಗೆ ತೆರೆದುಕೊಂಡಿದೆ.

ಅಕ್ಷರಗಳು ಮುಖ್ಯವಾಗದ ಶಬ್ದ ಪ್ರಧಾನವಾದ ಸಂಸ್ಕೃತಿಯೊಂದು ಕನ್ನಡದಲ್ಲಿತ್ತು. ಅದು ಜನಪದ ಅಭಿವ್ಯಕ್ತಿಯ ಮುಂದುವರಿದ ರೂಪ. ಅಂತಹ ಪರಂಪರೆ ವಚನ ಚಳುವಳಿ, ಯಾವುದೇ ಪ್ರಜ್ಞಾವಂತ ಚಿಂತಕನಿಗೆ ಇಂದಿಗೂ ಸವಾಲುಗಳನ್ನು ಹಾಕುತ್ತಲೇ ಇದೆ. ಏಕ ಮುಖ ಚಿಂತನ ಕ್ರಮವೊಂದು ಈಗಾಗಲೇ ಇದರ ಬಗ್ಗೆ ಸಿದ್ಧ ಹೇಳಿಕೆಗಳನ್ನು ನೀಡುತ್ತಲೇ ಇದೆ. ಆದರೆ ಅದನ್ನು ಸ್ವೀಕರಿಸುವ ಮತ್ತು ಸವಾಲುಗಳನ್ನು ಎದುರಿಸುವ ವಿಮರ್ಶೆಯನ್ನು ಸಾರಾಸಗಟಾಗಿ ತಿರಸ್ಕರಿಸಲಾಗುತ್ತದೆ ಕೂಡ. ಸಾಧ್ಯತೆಗಳ ದೃಷ್ಟಿಯಿಂದ ಈ ಬಗೆಯ ವಿಮರ್ಶೆಗಳು ಒಂದು ಬಗೆಯ ಸ್ಥಗಿತ ಸ್ಥಿತಿಯನ್ನು ಮುಟ್ಟಿರುತ್ತವೆ.

ಭಿನ್ನ ಬಗೆಯ ಅರಿವಿನ ನಿರ್ದಿಷ್ಟ ಅಭಿವ್ಯಕ್ತಿಯಾಗಿ ನಾಗರಾಜಪ್ಪನವರ ಮರುಚಿಂತನೆ

ಮತ್ತು ಕನ್ನಡ ವಿಮರ್ಶೆಯ ಇಕ್ಕಟ್ಟು - ಬಿಕ್ಕಟ್ಟು ಕೃತಿಗಳನ್ನು ಕಾಣಬಹುದು. ಆಲೋಚನೆಗಳ ಕ್ರಮಬದ್ಧ ಕಟ್ಟುಪಿಕೆ ಮತ್ತು ಸಾಧಿಸುವ ಅಂತರ ಸಂಬಂಧಗಳು ಚಿಂತನೆಯ ಅಲೆಯೊಂದಕ್ಕೆ ಕಾರಣವಾಗುತ್ತದೆ. ಕೃತಿಯೊಂದಕ್ಕೆ ಬದ್ಧವಾಗಿ ಅದು ನಿರ್ಮಾಣಗೊಳ್ಳುವ ಭಿತ್ತಿ ಅದರ ಚರ್ಯೆ ಮತ್ತು ಆ ಇಡೀ ಜಾಯಮಾನವನ್ನು ನಿರೂಪಿಸುವ ಜರೂರು ಮಾತ್ರ ವಿಮರ್ಶೆಗಿಲ್ಲ. ವಿಮರ್ಶೆಯೂ ಒಂದು ಸಾಂಸ್ಕೃತಿಕ ಬದ್ಧತೆ (Cultural Commitment). ಚರಿತ್ರೆಯ ಗುರುತು ಪರಂಪರೆಯ ಅರ್ಥ ಮತ್ತೆ ಮತ್ತೆ ನಮ್ಮನ್ನು ಕಾಡುತ್ತಲೇ ಇರುತ್ತದೆ. ಒಂದು ಸಾಮಾಜಿಕ ಸ್ಥಿತಿಯ ಆಯಾಮಕ್ಕೆ ವೈವಿಧ್ಯಮಯ ಮುಖಗಳಾಗಿ ಚರಿತ್ರೆ ಮತ್ತು ಪರಂಪರೆ ತನ್ನ ಚಲನಶೀಲತೆ ಮತ್ತು ಗತಿಶೀಲತೆಯ ನಡುವೆ ಏರ್ಪಾಡಾಗುವ ಸೂಕ್ಷ್ಮ ದ್ವಂದ್ವಗಳ ಮೂಲಕ ನಿರೂಪಿತವಾಗುತ್ತಾ ಹೋಗುತ್ತದೆ. ಇಂತಹ ಸಾಂದರ್ಭಿಕ ನೆಲೆಗಳಿಂದ ಪುನಃ ಪುನಃ ಜೀವ ತಾಳುವ ಶಕ್ತಿ ವರ್ತಮಾನಕ್ಕಿದೆ. ಇಲ್ಲಿ ವಿಮರ್ಶೆ ಕೇವಲ ಶಬ್ದ ಅಥವಾ ಅರ್ಥ ಸಂಧಾನವೆನ್ನಲು ಬರುವುದಿಲ್ಲ.

ಪಾಶ್ಚಾತ್ಯ ಸಂಸ್ಕೃತಿ ಮತ್ತು ಸಾಹಿತ್ಯವನ್ನು ಅತಿ ಮಹತ್ವದ ಅಂಗವೆಂದು ಪರಿಗಣಿಸುತ್ತಿರುವ ಈ ಹೊತ್ತಿನಲ್ಲಿ ಪಾಶ್ಚಾತ್ಯ ಮತ್ತು ದೇಶೀಯ ಅನುಸಂಧಾನದ ಸ್ಥಿತಿಯನ್ನು ಗಮನಿಸುವುದು ಕಷ್ಟವೆನ್ನಿಸುತ್ತದೆ. ಈ ಬಗೆಯ ಚರ್ಚೆಗಳು ಹೊಸ ಹೊಸ ಪರಿವೇಶದೊಂದಿಗೆ ಪ್ರಕಟಗೊಳ್ಳುತ್ತಲೇ ಇಂದಿಗೂ ಪ್ರಸ್ತುತವಾಗುವ, ಎಂದೆಂದಿಗೂ ಪ್ರಸ್ತುತವಿರುವ ಈ ಬಗೆಯ ಅತಿ ಸೂಕ್ಷ್ಮವಾಗಿ ಚರ್ಚೆಗಳನ್ನು ಗಮನಿಸಲೇ ಬೇಕಾಗುತ್ತದೆ. ನಮ್ಮದು ಎನ್ನುವ ಭಾವನಾತ್ಮಕ ಕಲ್ಪಿತ ಸಮಾಜದ ಸ್ಥಿತಿಯ ಗೋಡೆಗಳನ್ನು ಕಳಚಿ ನಿಂತಿದ್ದೇವೆ. ಬದುಕುವ ಸ್ಥಿತಿಗೂ, ನಮ್ಮ ಚರ್ಚೆಯ ಅಂಶಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಒಂದು ಸಮಾಜದ ಸ್ವರೂಪ ಅದಕ್ಕೆ ಪ್ರತಿಯಾಗಿ ಬಂದಿರುವ ಸಾಹಿತ್ಯ - ಎರಡೂ ನಮ್ಮ ಕಣ್ಣೆದುರಿಗಿದೆ. ವ್ಯಕ್ತಿಗತ ಮತ್ತು ಸಮೂಹದ ಅನೇಕ ಅಂಶಗಳು ಇಲ್ಲಿ ಬಿಂಬಿತವಾಗಿರುತ್ತವೆ. ಆಳದಲ್ಲಿ ಉಳಿದೇ ಇರುವ ಊಳಿಗ-ಮಾನ್ಯ ಪದ್ಧತಿ, ನಾವೇ ರೂಪಿಸಿಕೊಂಡ ಪ್ರಜಾಪ್ರಭುತ್ವ ಬದುಕಿಗೆ ಅನಿವಾರ್ಯವಾದ ವಸಾಹತು ಅಂಶಗಳು ಮತ್ತು ಮೂರನೇ ವಿಶ್ವದ ರಾಷ್ಟ್ರಗಳ ಮೇಲೆ ಕಣ್ಣು ಹಾಕಿರುವ ನವ ವಸಾಹತು ಶಾಹಿ ಹಾಗೂ ಮುಕ್ತ ಮಾರುಕಟ್ಟೆಯ ಜಗತ್ತು- ಇಷ್ಟೆಲ್ಲಾ ಸಂಕೀರ್ಣತೆಯ ಮಧ್ಯೆ ನಾವೇ ಆರೋಪಿಸಿಕೊಳ್ಳುತ್ತಿರುವ ಜಗತ್ತು ಶುದ್ಧ ಭಾರತೀಯತೆಯದ್ದು. ಇಂದಿನ ಜರೂರು ಇವೆಲ್ಲವನ್ನು ಗುರುತಿಸುವುದು ಮಾತ್ರವಷ್ಟೇ ಅಲ್ಲ, ಕಲ್ಪಿತ ಚರಿತ್ರೆಯ ಅಂಶಗಳನ್ನು ಪುನರ್ ಮೌಲ್ಯೀಕರಣಕ್ಕೆ ಒಳಗು ಮಾಡುವುದು. ಚರಿತ್ರೆ ಇದನ್ನು ಒಳಗೊಳ್ಳುತ್ತಾ ನಾಳೆಗಳನ್ನು ಕಲ್ಪಿಸುತ್ತಿರುತ್ತದೆ.

ವಿಮರ್ಶೆಗೆ ಸಾಹಿತ್ಯ ಮೂಲ ಮಾತ್ರಕೆಯಷ್ಟೆ. ಅದನ್ನಿರಿಸಿಕೊಂಡು ಚಿಂತನೆಯ ವಿಸ್ತೃತ ಹರಹನ್ನು ವಿಶ್ಲೇಷಿಸುತ್ತ ಸಾಗುತ್ತದೆ. ಸಾಹಿತ್ಯ ಸೃಷ್ಟಿ ಕಾರಣ, ತಂತ್ರ ಶೈಲಿಗಳ ಬಗ್ಗೆ ಮಾತನಾಡುತ್ತಿದ್ದ ವಿಮರ್ಶಕ ಇಂದು ಬಹುರಾಷ್ಟ್ರೀಯ ಸಂಸ್ಥೆಗಳ ಪ್ರಸ್ತುತತೆ ಮತ್ತು ಪರಿಣಾಮಗಳನ್ನು ಕುರಿತು ಚಿಂತಿಸುತ್ತಿದ್ದಾನೆ. ಮತ್ತು ನಮ್ಮ ನೆಲೆಗಳ ಮಹತ್ವತೆ ಮತ್ತು

ಸಾಮಾನ್ಯತೆಗಳನ್ನು ಎತ್ತಿ ಹಿಡಿಯುತ್ತಿದ್ದಾನೆ.

ವೈವಿಧ್ಯತೆ ಮತ್ತು ಬಹು ಮುಖೀ ಸಂಸ್ಕೃತಿಯೊಂದರ ಆವರಣದಲ್ಲಿ ಜೀವ ತಾಳುವ ಭಾರತೀಯತೆಯ ಸ್ಥಿತಿ ಇಂದು ಇಲ್ಲವಾಗುತ್ತಿದೆ ಎನ್ನುವುದಕ್ಕಿಂತ ಅದನ್ನು ನಾವು ಮರೆಮಾಚುತ್ತಿದ್ದೇವೆ. ಈ ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸುವ ಹೆಮ್ಮೆ ನಮ್ಮದು. ಈ ಕಾರಣಕ್ಕಾಗಿಯೇ ಭಾರತೀಯ ವೈವಿಧ್ಯ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಶಕ್ಯವಾಗುತ್ತಿಲ್ಲ. ನಮಗೆ ನಮ್ಮದೇ ಆದ ಬದುಕಿನ ಕ್ರಮವಿದೆ. ಆ ಕ್ರಮದಲ್ಲಿ ಸಮಾನತೆಯನ್ನು ಕಾಣಲು ಹೊರಡುವುದು ಅಸಾಧ್ಯದ ಮಾತು. ಭಿನ್ನ ಜೀವನ ಕ್ರಮ ಮತ್ತು ಬದುಕಿನ ಸಾರ್ಥಕ್ಯಕ್ಕೆ ಬೇರೆ ಬೇರೆ ಆಯಾಮಗಳನ್ನು ಕೊಡುವ ಅಪರೂಪದ ಸಂಗತಿಗಳು ನಮ್ಮ ಮಧ್ಯೆ ಇರುವುದರಿಂದ 'ಏಕತೆ' ಎನ್ನುವ ಪದವೇ ಸುಳ್ಳಾಗಿ ಬಿಡುತ್ತದೆ. ಅಲ್ಲದೆ 'ಏಕತೆ' ಎನ್ನುವುದು ಅತಿ ರಮ್ಯತೆಯ ಪದಗಳಲ್ಲಿ ಒಂದು ಕೊಡ. ಪ್ರಮೇಯಗಳನ್ನು ಮುಂದಿಡುವುದಷ್ಟೇ ಮಹತ್ವದ ಅಂಶದಲ್ಲಿ ಪ್ರಾಯೋಗಿಕವಾಗಿ ಈ ಪ್ರಮೇಯಗಳ ಪ್ರಾಮುಖ್ಯತೆ ಏನು ಎನ್ನುವುದನ್ನು ಚಿಂತಿಸುವುದು ಪ್ರಸ್ತುತ. ಬಹುಮುಖೀ ಸಂಸ್ಕೃತಿಯುಳ್ಳ ದೇಶವೊಂದರ ತಲ್ಲಣ ಏಕತ್ರಗೊಳ್ಳುವುದರ ಕಡೆಗೇ ಇರುತ್ತದೆ. ಇದು ರಾಜಕೀಯ ಫಲಾಪೇಕ್ಷಿಗಳು ಬಳಸುತ್ತಿರುವ ಪರಿಕಲ್ಪನೆಗಳಲ್ಲಿ ಒಂದಾಗಿರುವುದರಿಂದ ಹೆಚ್ಚು ಅನುಮಾನದಿಂದ ನೋಡಬೇಕಾಗುತ್ತದೆ. ಹೀಗಿರುವುದರ ನಡುವೆಯೇ ಒಂದು ರಾಜ್ಯದ ಪ್ರದೇಶದ ತಿನಿಸು ಈಗ ಎಲ್ಲ ಕಡೆ ಸಿಗುತ್ತಿದ್ದಾಗ್ಯೂ ತಿನಿಸಿನ ಹಿಂದೆ ನಮ್ಮದು ನಮ್ಮದೇ ಎನ್ನುವ ಹೆಮ್ಮೆ ಪ್ರಾದೇಶಿಕ ಸಂಗತಿಗಳೊಂದಿಗೆ ಮಿಳಿತವಾಗಿರುವಂತಹದ್ದು. ದೇಶ ಮತ್ತು ಪ್ರದೇಶಗಳ ನಡುವೆ ಇರುವ ಈ ಬಗೆಯ ಒಡೆದು ತೋರುವ ಭಿನ್ನ ಗುಣವನ್ನು ವಾಸ್ತವವಾಗಿ ನಾವು ಏಕೆ ಗಮನಿಸುತ್ತಿಲ್ಲ. ಒಂದೊಂದು ಪ್ರದೇಶದ, ಒಂದೊಂದು ಪಂಗಡಗಳ ಜೀವನ ಕ್ರಮ ಮತ್ತು ಆಯ್ಕೆಗಳು ಅಷ್ಟೇ ಭಿನ್ನವಿದ್ದಾಗ್ಯೂ ಅದರ ಆಳ ಅಗಲಗಳನ್ನು ನೋಡುವ ಬಗ್ಗೆ ನಮಗೆ ನಾವೇ ನಿಷೇಧವನ್ನು ಹೇರಿಕೊಳ್ಳುವುದು ಏಕೆ?

ಹೀಗೆ ಯೋಚಿಸುವುದರಿಂದ ನಮ್ಮ ಬರಹದ ಮಾದರಿಗಳು ಬೇರೆಯ ಸಾಧ್ಯತೆಗಳನ್ನು ಪಡೆದುಕೊಳ್ಳಲಿಕ್ಕೆ ಸಾಧ್ಯವಿರುವುದನ್ನು ಗುಣಾತ್ಮಕವಾಗಿಸುತ್ತದೆ. 'ಗುಪ್ತ ಸಮಾಜಗಳು' ಶೀರ್ಷಿಕೆಯಡಿಯ ನಾಗರಾಜಪ್ಪನವರ ಲೇಖನ ನಿಜಕ್ಕೂ ಬೆರಗುಗೊಳಿಸುವ ಮಾಹಿತಿಗಳನ್ನು ಜೀವನ ಕ್ರಮದ ವಿಶ್ಲೇಷಣೆಯನ್ನು ನೀಡುತ್ತದೆ. ಇದು ಅಷ್ಟಕ್ಕೇ ನಿಲ್ಲದೆ ಭಾರತೀಯ ಜೀವನದ ವಿಭಿನ್ನ ಆಯಾಮವೊಂದನ್ನು ತನ್ನೆಲ್ಲಾ ವಿವರಣೆಗಳೊಂದಿಗೆ ಸ್ಪರ್ಶಿಸುವ ಪ್ರಯತ್ನವನ್ನು ಮಾಡುತ್ತದೆ.

ತಾಂತ್ರಿಕ ಬದುಕನ್ನು ಸಾಧನೆಯನ್ನಾಗಿಸಿಕೊಂಡ ಸಮಾಜವೊಂದರ ಬಗ್ಗೆ ಸ್ಪಷ್ಟ ಮತ್ತು ನಿಖರವಾಗಿ ಹೇಳುವುದು ಅಷ್ಟು ಸುಲಭದ ಮಾತಲ್ಲ. ವೈಜ್ಞಾನಿಕವಾಗಿ ಈ ಬಗೆಯ ಚಿಂತನೆಗಳು ಸತ್ಯವೋ ಅಲ್ಲವೋ ಎನ್ನುವುದಕ್ಕಿಂತ ಅಂತಹ ಬದುಕಿನ ರೀತಿಯಿದೆಯೆಂಬುದನ್ನು ತಿರಸ್ಕರಿಸಲು ಬರುವುದಿಲ್ಲ. ಶಿಷ್ಟ ಸಮಾಜದ ರೀತಿ ನೀತಿಗಳನ್ನು, ರಿವಾಜುಗಳನ್ನು ಒಪ್ಪಿಕೊಳ್ಳುವ ನಮಗೆ ಉದ್ದೇಶ ಮತ್ತು ಸಾಧನೆಗಳಿಂದ ಭಿನ್ನವಾಗುವ ಮತ್ತೊಂದು

ಸಮಾಜವನ್ನು ನಾವು ಒಪ್ಪಿಕೊಳ್ಳುವುದಿಲ್ಲ. ನಮಗೆ ಮೌಲ್ಯಗಳು ಸ್ಥಿರಗೊಂಡವು. ಆಚರಣೆಯಲ್ಲಿ ಆ ಮೌಲ್ಯಗಳು ಇರದಿದ್ದರೂ ಅದೊಂದು ಆದರ್ಶ ಸ್ಥಿತಿ. ಹೀಗಾಗಿ ಗುಪ್ತ ಸಮಾಜಗಳನ್ನು ತುಂಬಾ ಹೇಯವಾದವು ಎಂದೇ ಭಾವಿಸುತ್ತೇವೆ. ಸಾಮಾಜಿಕ ಸ್ಥಾನಮಾನಗಳಿಂದ ಅವರನ್ನು ದೂರವಿರಿಸುತ್ತೇವೆ, ಇಲ್ಲವೇ ಅಂತಹವರ ಬಗ್ಗೆ ಭಯವನ್ನು ಬೆಳೆಸಿಕೊಳ್ಳುತ್ತೇವೆ. ಅಂತಹ ಸಮಾಜಗಳಿಗೂ ನಿರ್ದಿಷ್ಟವಾದ ತಾತ್ವಿಕ ಚಿಂತನೆಗಳು, ಸಿದ್ಧಾಂತಗಳು ಇವೆ. ಈ ಬಗೆಯ ಸಮಾಜದ ಹುಟ್ಟು ಮತ್ತು ಬೆಳವಣಿಗೆ, ಸಿದ್ಧಿ ಮತ್ತು ಸಾಧನೆಗಳು ಎಲ್ಲವೂ ನಮ್ಮ ನೋಟದ ಆಚೆಗೆ ಉಳಿದಿರುವಂತಹದ್ದು. ಅವರ ವಿಧಿ ಆಚರಣೆಯ ರೂಕ್ಷ ವಿಧಾನಗಳನ್ನು ನಾಗರೀಕ ಸಮಾಜ ತುಂಬಾ ತೆಳುಗೊಳಿಸಿ ಸಾಂಕೇತೀಕರಣಕ್ಕೆ ಒಳಗು ಮಾಡಿ ಹೇಗೆ ಬಳಸಿಕೊಂಡಿದೆ ಎನ್ನುವುದನ್ನು ನಾಗರಾಜಪ್ಪ ವಿವರಿಸುತ್ತಾರೆ. ಅಂದರೆ ಶಿಷ್ಟ ಮತ್ತು ಗುಪ್ತ ಸಮಾಜಗಳ ಮಧ್ಯೆ ಪರಸ್ಪರ ಕೊಡುಕೊಳ್ಳುವಿಕೆಗಳು ಇದ್ದೇ ಇವೆ. ಆದರೆ ಅದನ್ನು ಮುಚ್ಚಿಡುವ ಪ್ರಯತ್ನ ನಡೆದಿದ್ದು ಅಲಿಖಿತ ಚರಿತ್ರೆಯ ಒಂದು ಭಾಗ. ಈ ಬಗೆಯ ರಾಜಕೀಯವನ್ನು ನಾಗರಾಜಪ್ಪನವರು ತುಂಬ ಕುತೂಹಲದಿಂದ ಗಮನಿಸುತ್ತಾರೆ. ಮತ್ತು ಮಧ್ಯಕಾಲೀನ ಲಿಖಿತ ಚರಿತ್ರೆಯ ಒಳಗೂ ಈ ಅಂಶಗಳನ್ನು ಗುರುತಿಸುವ ಮತ್ತು ಅದರಲ್ಲಿನ ಉಪ ಪಂಗಡಗಳನ್ನು ವಿವರಿಸುವ ಪ್ರಯತ್ನ ಮಾಡುತ್ತಾರೆ. ಅವರ ಜೀವನ ಕ್ರಮ ಮತ್ತು ಸಹಜ ಸಾಧನೆಗಳು ಮಾನವ ಸಹಜವಾದ ವಿಕೃತಿಗಳನ್ನು ಮೀರುವ ಪ್ರಯತ್ನ ಬಹುಶಃ ಇದನ್ನು ಆಧಾರವಾಗಿರಿಸಿಕೊಂಡೇ ರಜನೀಶನಂತಹವರು ಹೊಸ ಬಗೆಯ ಪ್ರಯೋಗಕ್ಕೆ ಅನುವು ಮಾಡಿಕೊಂಡಿದ್ದು. ಇಲ್ಲಿ ಸರಿ ತಪ್ಪುಗಳ ವಿಶ್ಲೇಷಣೆ ಸಾಧ್ಯವೇ ಇಲ್ಲ. ಏಕೆಂದರೆ ಎರಡು ಆಲೋಚನಾ ಕ್ರಮಗಳು ಪರಸ್ಪರ ವಿರೋಧವಾದವುಗಳು.

ಕನ್ನಡ ಕಾವ್ಯ ಮೀಮಾಂಸೆ ಪ್ರಾಚೀನ ಮತ್ತು ಅರ್ವಾಚೀನದ ನಡುವೆ ಒಂದು ನಿರ್ದಿಷ್ಟವಾದ ಬೆಳವಣಿಗೆಯಿದೆ. ವಿಮರ್ಶೆಯ ಮೂಲ ಸ್ವರೂಪ ಮತ್ತು ಅರ್ಥ ಪಾಶ್ಚಾತ್ಯದ್ದಾದರೂ ಕನ್ನಡದ್ದೇ ಆದ ಒಂದು ನೆಲೆಯಿದೆ. ಈ ನೆಲಕ್ಕೆ ಹೊಂದಿಕೆಯಾಗುವ ಲಯ ಕನ್ನಡದಲ್ಲಿರುವುದು ಸತ್ಯ. ವಿಮರ್ಶೆಯ ಇಕ್ಕಟ್ಟು-ಬಿಕ್ಕಟ್ಟು ಎನ್ನುವ ಲೇಖನದಲ್ಲಿ ಈ ಬಗೆಯ ಚರ್ಚೆಯನ್ನು ನಾಗರಾಜಪ್ಪ ವಿಶ್ಲೇಷಿಸುತ್ತಾರೆ. ಆರಂಭದ ಕನ್ನಡದ ಬರವಣಿಗೆಯನ್ನು ಸಂಸ್ಕೃತವೇ ನಿಯಂತ್ರಿಸಿದ್ದು ಮತ್ತು ಏಕ ಮುಖಿ ಸಂಸ್ಕೃತಿಯ ಪರಂಪರೆಯು ರೂಪಿಸಿದ್ದು ಎಂದು ಹೇಳುವಾಗ ಕೂಡ ಕನ್ನಡದ ಅಸಲೀ ಗುಣಗಳು ಮಾಯವಾದದ್ದು ಏಕೆ ಎನ್ನುವ ಜಿಜ್ಞಾಸೆಯೊಂದು ಕಂಡು ಬರುತ್ತದೆ. ಯಾವ ಜೀವಿಯ ಭಾಷೆಯೂ ಮತ್ತೊಂದರಿಂದ ಸ್ಫೂರ್ತಿ, ಪ್ರೇರಣೆ ಪಡೆಯದೆ ಸಲೀಸಾಗಿ ಉಸಿರಾಡಲು ಸಾಧ್ಯವಿಲ್ಲ. ಇವೆಲ್ಲವೂ ಪರಸ್ಪರ. ಹಿಂದೆ ವಿಮರ್ಶೆಯು ಕಾವ್ಯದಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಾ, ಇಂದಿನ ನಿರ್ದಿಷ್ಟ ರೂಪವನ್ನು ಪಡೆದುಕೊಳ್ಳುವಾಗಿನ ಎಲ್ಲ ಅಂಶಗಳೂ ಕುತೂಹಲ. ಕೇವಲ ಮೇಲು ವರ್ಗ ನಿರ್ಮಿಸಿದ ಸಾಹಿತ್ಯದ ರೂಪರೇಶೆಗಳು ಅಕ್ಷರ ಸಂಸ್ಕೃತಿಗಳ ನೆಲೆಯಲ್ಲಿ ರೂಪಿತವಾಯಿತು. ಈ ನೆಲದ ಜೀವನವನ್ನು ಶೋಧನೆಗೆ ಒಳಗು ಮಾಡುವಾಗ ಬಹುಮುಖಿವಾಗಿ ಇಂದಿನವರೆಗೂ ನಡೆದುಕೊಂಡು ಬಂದಿರುವ ಸಾಮಾಜಿಕ ಪ್ರವೃತ್ತಿಗಳು ಮುಖ್ಯವಾಗುತ್ತವೆ. ಸಾಮಾಜಿಕ ಆರ್ಥಿಕ ಪ್ರಸಕ್ತಿಗಳು ಹೇಗೆ ಒಂದು

ಜಾತಿಯ, ವರ್ಗದ ಸಾಹಿತ್ಯವನ್ನು ಮತ್ತು ವಿಮರ್ಶೆಯನ್ನು ನಿಯಂತ್ರಿಸುತ್ತದೆ ಎಂಬುದನ್ನು ನಿಶ್ಚಿತ ಚೌಕಟ್ಟಿನಲ್ಲಿ ಇಟ್ಟು ನೋಡುವ ಪ್ರಯತ್ನವನ್ನು ಮಾಡುತ್ತಾರೆ. ವಿಮರ್ಶೆಯ ಈವರೆಗಿನ ಬೆಳವಣಿಗೆಯನ್ನಿಟ್ಟುಕೊಂಡು ಅದರ ಮಿತಿ ಮತ್ತು ಆ ಮಿತಿಗಳಿಗೆ ಕಾರಣಗಳನ್ನು ಹುಡುಕುವುದರೊಂದಿಗೆ ಮರು ಮೌಲ್ಯ ಮಾಪನಕ್ಕೆ ಒಳಗು ಮಾಡುತ್ತಾರೆ. ಕಾವ್ಯಾಭಿವ್ಯಕ್ತಿ ಹೇಗೆ ಅವಲಂಬನೆಗೆ ಒಳಗಾಯಿತೋ ಹಾಗೆಯೇ ವಿಮರ್ಶೆಯೂ ತನ್ನ ಅಭಿವ್ಯಕ್ತಿಯ ನೆಲೆಗಳಿಗೆ ಅವಲಂಬಿಸಿತು. ಈ ಅವಲಂಬನೆ ತತ್ವ, ವಾದ ಮತ್ತು ವ್ಯಕ್ತಿಗಳನ್ನು ಆಧರಿಸಿದ್ದು ಒಂದಕ್ಕೊಂದು ತಾಕುವ ಮತ್ತು ಭಿನ್ನವಾಗಿ ನಿಲ್ಲುವ ದ್ವಂದ್ವ ಇಲ್ಲಿ ಕಾಣಿಸುತ್ತದೆ. ವ್ಯಷ್ಠಿ ಮತ್ತು ಸಮಷ್ಠಿಯ ದೃಷ್ಟಿಯಿಂದ ಬದಲಾಗುತ್ತಿರುವ ಸಾಹಿತ್ಯ ಮತ್ತು ಸಂಸ್ಕೃತಿಗಳ ಬೇರು ಇವಾಗಿರಬೇಕು ಎಂದು ನಿರ್ದೇಶಿಸುತ್ತಿರುವ ಸಮೂಹ ಮಾಧ್ಯಮಗಳು ನಮ್ಮ ದುರಂತ.

ಹಸಿ ಚರ್ಚೆಗಳು, ಒಣ ವಾದಗಳು ತುಂಬಿಕೊಂಡಿರುವ ವಿಮರ್ಶಾಲೋಕ ಒಂದು ಪದಕ್ಕಾಗಿಯೋ, ಒಂದು ಪರಿಕಲ್ಪನೆಗಾಗಿಯೋ ಕಾಯುತ್ತಿದೆ ಎನ್ನುವುದೇ ಕನ್ನಡ ವಿಮರ್ಶೆಯ ಮಿತಿಯಾಗಿದೆ. ಕೆ.ಜಿ.ಎನ್. ಈ ಬಗೆಯ ಸೂಕ್ಷ್ಮ ಸ್ಥಿತಿಗಳನ್ನು ಕುರಿತು ಮಾತಾಡುತ್ತಾರೆ.

ಈವರೆಗಿನ ವಿಮರ್ಶೆಯ ಸೈದ್ಧಾಂತಿಕ ನಿಲುವುಗಳನ್ನು ನಾಗರಾಜಪ್ಪ ತೀರಾ ಭಿನ್ನವಾಗಿ ಇಡುತ್ತಾರೆ. ಅಂದರೆ ಈಗಾಗಲೇ ಸ್ಥಾಪಿತವಾಗಿರುವ ಸ್ಥಗಿತ ಸ್ಥಿತಿಯನ್ನು ಮುಟ್ಟಿರುವ ವಿಮರ್ಶಾ ಹೇಳಿಕೆಗಳು ಕೆಲವಿವೆ. ಅದನ್ನೇ ನಾವು ಅಂತಿಮ ಎಂದು ಭಾವಿಸಿದ್ದೇವೆ. ಆದರೆ ಇಂತಹ ಸ್ಥಿರ ಹೇಳಿಕೆಗಳ ಎದುರು ಹೆಚ್ಚು ಜ್ವಲಂತವಾಗ ಬಹುದಾದ ಬೇರೆಯದೇ ಆದ ವಿಮರ್ಶೆಯ ಆಯಾಮವೊಂದಕ್ಕೆ ಎಲ್ಲ ಲೇಖನಗಳೂ ಹಾದಿ ತೆರೆಯುತ್ತವೆ. ಇಲ್ಲಿ ಸರಿ ತಪ್ಪುಗಳ ನಿರ್ಣಾಯಕ ಹೇಳಿಕೆಗಳು ಮುಖ್ಯವಲ್ಲ. ನಾಗರಾಜಪ್ಪನವರು ಅಂತಹ ಹೇಳಿಕೆಗಳಿಗೆ ಎಲ್ಲೂ ಜೋತು ಬೀಳುವುದಿಲ್ಲ. ಮತ್ತು ಅವು ವಿಶ್ಲೇಷಣೆ ಮತ್ತು ವಿವರಣೆ ಮಾತ್ರವೇ ಆಗಿರುವುದಿಲ್ಲ. ಅವರ ಹೇಳಿಕೆಗಳು ವಿಚಾರಕ್ಕೆ ಒಳಗು ಮಾಡುತ್ತಾ ನಮ್ಮೊಳಗೆ ಒಂದು ದ್ವಂದ್ವವನ್ನು ಹುಟ್ಟು ಹಾಕಿ ಚಿಂತನೆಯ ನೆಲೆಯನ್ನು ಬೆಳೆಸುವಂಥದ್ದು. ಮತ್ತು ಅವರ ಬಹು ಪಾಲು ಹೇಳಿಕೆಗಳಿಗೆ ನಾವು ತಕ್ಷಣ ಪ್ರತಿಕ್ರಿಯಿಸಲು ಸಾಧ್ಯವಾಗುವುದಿಲ್ಲ. ಅದು ಸರಿ ಅಥವಾ ತಪ್ಪು ಎಂದು ನಿರ್ಣಯಿಸಲು ನಮ್ಮ ಓದಿನ ವ್ಯಾಪ್ತಿಯನ್ನು ಹಿಗ್ಗಲಿಸಿಕೊಳ್ಳಲೇ ಬೇಕು. ಈ ಕಾರಣಕ್ಕೆ ಓದುವಿಕೆ ಪೂರ್ಣಗೊಂಡರೂ ಗ್ರಹಿಸುವ ಕ್ರಿಯೆ ಬಹುಕಾಲದವರೆಗೂ ಮುಂದುವರೆಯುತ್ತಲೇ ಇರುತ್ತದೆ.

ಹಾಗೆ ನೋಡಿದರೆ ಕನ್ನಡ ಸಾಹಿತ್ಯಕ್ಕೆ ಅನೇಕ ಒಳನೋಟಗಳಿವೆ. ಇವು ಮೇಲು ನೋಟಕ್ಕೆ ಏಕರೂಪವಾಗಿ ಕಂಡುಬಂದರೂ ಅಂತರಾಳದ ಸ್ವರೂಪಗಳು ಬೇರೆಯದ್ದೇ ಆಗಿರುತ್ತದೆ. ಧಾರ್ಮಿಕ ಕಾವ್ಯವೆಂದು ನಿರ್ಣಯಿಸಿ ಓದುತ್ತಿರುವ ಕಾವ್ಯಗಳು ಧಾರ್ಮಿಕತೆಯನ್ನು ಒಳಗೊಂಡಂತೆ ಅನೇಕ ಪಲ್ಲಟಗಳನ್ನು ಹೇಳುತ್ತಿರುತ್ತದೆ. ನಾವು ತುಂಬಾ ಉದಾರವೆಂದು ಹೇಳುವ ವಚನಗಳು ವೈಚಾರಿಕ ಸ್ಥಗಿತತೆಯಿಂದ ವಿಸ್ತೃತವಾಗುವುದಿಲ್ಲ ಮತ್ತು ನಿರಪೇಕ್ಷಿತ

ಗುಣಗಳನ್ನು ತೋರುವುದಿಲ್ಲ. ಹೀಗೆ ಪಲ್ಲಟಗೊಂಡ ವೈಭವದ ಚಿಂತನೆಗಳನ್ನು ನಾಗರಾಜಪ್ಪ ತಿರಸ್ಕರಿಸುತ್ತಾರೆ. ಒಂದು ಸಂಸ್ಕೃತಿಯ ಭಿನ್ನ ಭಿನ್ನ ಚಲನೆಗಳಿಂದ ವಿಮರ್ಶೆಯ ನಿಲುವುಗಳನ್ನು ಹೆಚ್ಚು ಸ್ಪಷ್ಟಗೊಳಿಸುತ್ತಾರೆ.

ವಚನಗಳ ಪ್ರಧಾನ ಭೂಮಿಕೆಯನ್ನು ಎರಡಾಗಿ ಒಡೆದು, ಎರಡಕ್ಕೂ ಸಮಾನ ಮಹತ್ವವನ್ನು ನೀಡುತ್ತಾರೆ. ಒಂದು ಅನುಭಾವ, ಮತ್ತೊಂದು ಲೌಕಿಕ ಭೂಮಿಕೆ ನಮಗೆ ಅತಿ ಪ್ರಮುಖವಾಗುವ ಅಂಶವಾಗಿದ್ದು ವಚನಗಳ ಬಗ್ಗೆ ಚಿಂತಿಸುವಾಗ ಅವನ್ನು ದಿವ್ಯತ್ವದ ಹಂತದಲ್ಲಿ ಇರಿಸಿ ಬಿಡುತ್ತೇವೆ. ಸಾಂಸ್ಕೃತಿಕ ಮತ್ತು ವೈಯಕ್ತಿಕ ಬಿಕ್ಕಟ್ಟುಗಳಿಂದಾಗಿ ಬೇರೆ ಬೇರೆ ಕಾಲಘಟ್ಟದಲ್ಲಿ ಧಾರ್ಮಿಕ, ಸಾಮಾಜಿಕ ಸಂಬಂಧಗಳನ್ನು ತೆರೆದು ತೋರುತ್ತವೆ. ಹೀಗಾಗಿ ವಿಮರ್ಶೆ ಎಂದರೆ ಬರೀ ತಾತ್ವಿಕ ಗ್ರಹಿಕೆಯಲ್ಲ ಇಡೀ ಸಮಾಜವನ್ನು ಇಡಿಯಾಗಿ ಕಟ್ಟಿಕೊಡುವ ಕ್ರಮವೂ ಆಗಿರುತ್ತದೆ. 10 ನೇ ಶತಮಾನದಲ್ಲಿ ರಾಜಸತ್ತೆ 12 ನೇ ಶತಮಾನದ ಕಾಯಕ ಜೀವಿಗಳ ಚಳುವಳಿ ಯಾವುದೂ ಸರಳವಲ್ಲ. ಪಾಶ್ಚಿಮಾತ್ಯ ಕ್ರಮದಿಂದ ವಿಮರ್ಶೆಯನ್ನು ನೋಡಿದರೆ ಎಲ್ಲವೂ ಸರಳೀಕರಣಕ್ಕೆ ಒಳಗಾಗುತ್ತವೆ.

ಶರಣರು ಏಕ ಮುಖಿ ಚಿಂತಕರು ಎನ್ನುವ ಲೇಖನ ಈ ಹೊತ್ತಿಗೆ ವಿಮರ್ಶೆಯ ನಿಲುವನ್ನು ಪ್ರತಿನಿಧಿಸುವುದರಿಂದ ಬಹು ಮುಖ್ಯ ಎನಿಸುತ್ತದೆ. ಒಂದೇ ಬಗೆಯ ಆಲೋಚನಾ ಲಹರಿಯಿಂದ ಹೊರಬರಲಾರದೆ ಸತ್ಯವನ್ನು ತೆರೆದಿಡಲಾಗದೆ ಹಿಂಜರಿಯುವ ಸಂಶೋಧಕರು ನಮ್ಮ ಮಧ್ಯೆ ಇದ್ದಾರೆ. ಶರಣರು ಹೇಗೆ ಸಮಾಜದ ಸ್ತರಗಳನ್ನಾಧರಿಸಿ ತಮ್ಮದೇ ಆದ ಸ್ತರಗಳನ್ನು ರೂಪಿಸಿಕೊಂಡರು ಅಲ್ಲಿನ ತರತಮಭೇದ ಇಷ್ಟೇ ಅಲ್ಲದೆ ಶಂಕರರ ಪರಿಷ್ಕೃತ ಅದ್ವೈತಕ್ಕೂ ದಾಸಿಮಯ್ಯ ಹೇಳುವ ಅದ್ವೈತಕ್ಕೂ ಇರುವ ಅಂತರ, ಸಂಬಂಧಗಳನ್ನು ಅವರು ಹೇಳುತ್ತಾರೆ. ದಾಸಿಮಯ್ಯನಲ್ಲಿ ಕಾಣಸಿಗುವ ಭಕ್ತಿಯ ವೈಚಾರಿಕತೆಯನ್ನು ಎರಡಳಿದು ಒಂದಾಗುವ ಅದ್ವೈತ ಎಂದು, ಶಂಕರರಿಗಿಂತ ದಾಸಿಮಯ್ಯ ಹೇಗೆ ಭಿನ್ನವಾಗುತ್ತಾನೆ ಮತ್ತು ದಾಸಿಮಯ್ಯನ ಆಲೋಚನೆಗಳು ದೇಸಿಯ ನೆಲೆಯಿಂದ ಹೇಗೆ ಪ್ರಣೀತಗೊಂಡಿದೆ ಎನ್ನುವುದನ್ನು ವಿವರಿಸುತ್ತಾರೆ. ಭಕ್ತಿಯು ಹೇಳಿ ಕೊಡುವ ವಿನಯದ ಪರಿಭಾಷೆ ಊಳಿಗ ಮಾನ್ಯ ಪದ್ಧತಿಯದ್ದು, ದಾಸಿಮಯ್ಯ ಇದಕ್ಕೆ ಎದುರಾಗಿ ‘ನೀನೊಮ್ಮೆ ಒಡಲುಗೊಂಡು ನೋಡಾ’ ಎಂದು ದೇವರ ಮತ್ತು ದೊರೆಯ ಸರ್ವಾಧಿಕಾರಿ ವ್ಯವಸ್ಥೆಗೆ ಸವಾಲೆಸೆಯುತ್ತಾನೆ.

ಶ್ರೀರಾಮ ಪರೀಕ್ಷಣಂ, ಅನುಭಾವ ಸಾಹಿತ್ಯ, ಅಂಬೇಡ್ಕರ್, ದಲಿತ ಸಂಘರ್ಷ ಸಮಿತಿ, ಕನ್ನಡದ ಸ್ಥಿತಿ ಗತಿ ಹೀಗೆ ಆರಿಸಿಕೊಳ್ಳುವ ಪ್ರತಿಯೊಂದು ವಿಷಯಗಳನ್ನು ಸ್ಪಷ್ಟ ಹಾಗೂ ನಿರ್ದಿಷ್ಟ ಮಾತುಗಳಿಂದ ಬೆಳೆಸುತ್ತಾರೆ. ಯಾರ ಪರವಾಗಿಯೋ, ಯಾರನ್ನೋ ಓಲೈಸುವ ಉದ್ದೇಶದಿಂದಲೇ ಹೇಳುವುದಿಲ್ಲ.

ನಾಗರಾಜಪ್ಪನವರ ಎಲ್ಲ ವಿಮರ್ಶಾ ಲೇಖನಗಳೂ ನಿಯಮಿತ ಚೌಕಟ್ಟಿನ ಒಳಗೆ ಆವರ್ತನಗೊಳ್ಳುವುದಿಲ್ಲ. ತಂತ್ರ, ಶೈಲಿ, ರಚನೆ ಇಂತಹ ಕೃತಿಯು ವಿವರಿಸುವ ತಾಂತ್ರಿಕ ಅಂಶಗಳ ಬಗ್ಗೆ ಚರ್ಚೆಗಳನ್ನು ಬೆಳೆಸುವುದೇ ಇಲ್ಲ.

ನಾಗರಾಜಪ್ಪ ಅವರ ಕಾವ್ಯ ಮೀಮಾಂಸೆಯ ತಾತ್ವಿಕ ನಿಲುವು ಮತ್ತು ಪರಿಭಾಷೆಗಳನ್ನು ಗಮನಿಸಿದಾಗಲೂ ವಿಭಿನ್ನವಾದ ಅಂಶವೊಂದು ಕಾಣುತ್ತದೆ. ಇಲ್ಲಿ ಕಾವ್ಯ ಒಂದು ಪ್ರತ್ಯೇಕ ಘಟಕವಲ್ಲ. ಅಥವಾ In between the lines ಕೂಡ ಅಲ್ಲ. ಸಾಮಾಜಿಕ ಸಂಚಲನೆಯ ಮೂಲಕ ತನ್ನನ್ನು ತಾನು ಗುರುತಿಸಿಕೊಳ್ಳುತ್ತಾ ಬೇರೆ ಬೇರೆ ಅರ್ಥಗಳಿಗೆ ಪಕ್ಕಾಗುವಂತಹದ್ದು. ಕಾವ್ಯ ಒಂದು ಪ್ರತ್ಯೇಕ ಘಟಕವಲ್ಲ ಎನ್ನುವಾಗ ಅವರ ಕಾವ್ಯ ಮೀಮಾಂಸೆಯ ಪರಿಭಾಷೆಗಳೆಲ್ಲಾ ಸಹಜವಾಗಿಯೇ ಸಾಮಾಜಿಕ ಕೇಂದ್ರಿತವಾಗಿರುತ್ತದೆ. ಈ ಕಾರಣಕ್ಕಾಗಿಯೇ ನವೋದಯದ ರಮ್ಯ ಮತ್ತು ಉನ್ನತ ಆದರ್ಶಗಳನ್ನೇ ಕೇಂದ್ರವಾಗಿರಿಸಿಕೊಂಡ ನವ್ಯದವರಂತೆ ತಾಂತ್ರಿಕ ಶಿಸ್ತನ್ನಾಗಲಿ ಅಥವಾ ಪಾಶ್ಚಾತ್ಯ ಚಿಂತನ ಮಾದರಿಗಳನ್ನಾಗಲಿ ನಾಗರಾಜಪ್ಪ ಮುಂದಿರಿಸಿಕೊಳ್ಳುವುದಿಲ್ಲ. ಸಹಯೋಗದ ಚಿಂತನ ಕ್ರಮಗಳು ಇಲ್ಲಿ ಮುಖ್ಯವಾಗುತ್ತವೆ. ಅವರು ಬಳಸುವ ವಿಶೇಷ ತಾಂತ್ರಿಕ ಪದಗಳು ಆಯಾ ಕಾವ್ಯ ಮತ್ತು ಸಮಾಜದ ಸಂರಚನೆಯ ಆಳದಲ್ಲೇ ಹುದುಗಿರುವುದನ್ನು ಗಮನಿಸಬಹುದು. ವರ್ಗ ಪ್ರಜ್ಞೆ ಎನ್ನುವುದು ಮನುಷ್ಯನ ಜೀವನದ ಎಲ್ಲ ಹಂತಗಳಲ್ಲೂ ಮುಖ್ಯವಾಗುತ್ತದೆ. ಒಟ್ಟು ನಮ್ಮ ವ್ಯವಹಾರವನ್ನು ನಿಯಂತ್ರಿಸುತ್ತದೆ. ವ್ಯಕ್ತಿಗೂ ಅವನ ಆಯ್ಕೆಗೂ ಇಂತಹ ಸಂಬಂಧವಿರುತ್ತದೆ ಎಂದು ಹೇಳುವಾಗಲೂ ಅವು ಅಪ್ಪಟ ಮಾರ್ಕ್ಸ್‌ವಾದಿಗಳಂತೆ ಕಾಣುವುದಿಲ್ಲ. ಅದನ್ನು ಮೀರುವ ಹಂತದಲ್ಲಿ ತೊಡಗಿರುತ್ತಾರೆ.

ಮರುಚಿಂತನೆಯಲ್ಲಿ ದೇಸೀಯ ನೆಲೆಗಳಲ್ಲಿ ಮಾತ್ರ ಹುಡುಕಾಟ ಕಾಣಿಸಿಕೊಂಡರೆ 'ವಿಮರ್ಶೆಯ ಇಕ್ಕಟ್ಟು - ಬಿಕ್ಕಟ್ಟು' ವಿನಲ್ಲಿ ಪಾಶ್ಚಾತ್ಯ ವೈಚಾರಿಕ ಹಿನ್ನೆಲೆಯನ್ನು ಕಾಣಬಹುದು. ಈ ನಡಿಗೆ ಬಹಳ ಸ್ಪಷ್ಟವಾಗಿ ಒಡೆದು ತೋರುತ್ತದೆ. ಸ್ವಲ್ಪ ಮಟ್ಟಿಗೆ ಪಾಶ್ಚಾತ್ಯ ವಿಚಾರಧಾರೆಗಳನ್ನು ಕನ್ನಡಕ್ಕೆ ಅನ್ವಯಿಸುವ ಹಾದಿಯನ್ನು ಕ್ರಮಿಸುತ್ತಾರೆ. ಇಷ್ಟೆಲ್ಲದರ ಹಿಂದೆ ನಿಷ್ಕಾಮದ ಕುತೂಹಲವೊಂದಿದೆ. ಇದು ತಣಿಯುವ ಕುತೂಹಲವಲ್ಲ. ನಿರಂತರ ಶೋಧನೆಗೆ, ಅನ್ವೇಷಣೆಗೆ ಒಳಗು ಮಾಡುವ ಕುತೂಹಲ. ಗುಪ್ತ ಸಮಾಜಗಳ ಬಗ್ಗೆ ಬರೆಯುವಾಗಲೂ ಅಲ್ಲಿ ಲಘುವಾದ ಧಾಟಿಗಳಾಗಲಿ ಅತಿ ರಂಜನೆಯ ಅಂಶಗಳಾಗಲಿ ಕಾಣುವುದಿಲ್ಲ. ತನ್ನೆಲ್ಲಾ ಗಾಂಭೀರ್ಯತೆಗಳೊಂದಿಗೇ ಒಂದು ಅನೂಹ್ಯವಾದ ಜಗತ್ತು ನಮ್ಮ ಕಣ್ಣ ಮುಂದೆ ತೆರೆದು ನಿಲ್ಲುತ್ತದೆ. ಇದೇ ಫಿಕ್ಷನೈಸ್ಡ್ ಆದಾಗ ಬಹುಮಟ್ಟಿಗೆ ಆ ಕ್ಷಣದ ಕುತೂಹಲ ನೀಗಿಸಲಷ್ಟೇ, ಕೊನೆಯವರೆಗೆ ಕೃತಿ ಓದಿಸಿಕೊಂಡು ಹೋಗಬೇಕೆನ್ನುವ - ಲೇಖಕನ ಒತ್ತಾಸೆಗಷ್ಟೆ ಒಳಗಾದಂತೆ ಸಂಗತಿಗಳು ಜರಗುತ್ತವೆ.

ಒಟ್ಟಾರೆ ನಾಗರಾಜಪ್ಪನವರ ವಿಮರ್ಶೆಗೆ ಸೂತ್ರಬದ್ಧವಾದ ವಿಮರ್ಶ ಕ್ರಮವಿದೆ. ವಸ್ತು ಸ್ಥಿತಿಯನ್ನು ಗ್ರಹಿಸುವಾಗ ನಮ್ಮ ಅರಿವಿಗೆ ಬರುವ ಅನೇಕ ಸಂಗತಿಗಳಿಗೆ ನಾವು ಕಾರಣ ಹುಡುಕಲು ಹೋಗುವುದಿಲ್ಲ. ಆದರೆ ನಾಗರಾಜಪ್ಪನವರು ಕಾರಣ ಮತ್ತು ಪರಿಣಾಮಗಳನ್ನು ಹುಡುಕುತ್ತಾ ಕೃತಿಗೆ ಹೊಸದಾದ ಮತ್ತು ಭಿನ್ನವಾದ ಪ್ರವೇಶವನ್ನು ಒದಗಿಸುತ್ತಾರೆ. ♦

9. ಪ್ರೊ॥ ಕೆ.ಜಿ.ನಾಗರಾಜಪ್ಪನವರ ವಿಮರ್ಶಾ ಸಾಹಿತ್ಯದ ಹಿನ್ನೆಲೆಯ ಪ್ರಜ್ಞೆ-ಪ್ರಭಾವ ಮತ್ತು ಪ್ರಮೇಯಗಳು

ಪ್ರೊ॥ ಶ್ಯಾಮಸುಂದರ ಕೋಚಿ

ಅಧ್ಯಯನದ ಉದ್ದೇಶ-ವ್ಯಾಪ್ತಿ-ಮಿತಿ :

ಪ್ರೊ। ಕೆ.ಜಿ. ನಾಗರಾಜಪ್ಪನವರ ಸಂಶೋಧನ-ವೈಚಾರಿಕ-ಮತ್ತು ವಿಮರ್ಶಾ ಸಾಹಿತ್ಯದ ಹಿನ್ನೆಲೆಯಲ್ಲಿರುವ 'ಪ್ರಜ್ಞೆ-ಪ್ರಭಾವ-ಮತ್ತು ಪ್ರಮೇಯ' ಗಳ ಹುಡುಕಾಟದ; ಹಾಗೂ ಅವು ಇದುವರೆಗಿನ ಕನ್ನಡ ವಿಮರ್ಶಾ ಪ್ರಜ್ಞೆ-ಪ್ರಭಾವ-ಪ್ರಮೇಯಗಳಿಂದ ಯಾವ ರೀತಿ ಭಿನ್ನ ಮತ್ತು ಸ್ವೋಪಜ್ಞ ಎಂಬುದನ್ನು ಗುರುತಿಸುವ ಒಂದು ಪ್ರಾಮಾಣಿಕ ಪ್ರಯತ್ನವೇ ಈ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ.

ಪ್ರಾಮಾಣಿಕ ಮತ್ತು ವಿನಮ್ರ ಪ್ರಯತ್ನ ಎನ್ನುವಲ್ಲಿ ಈ ಅಧ್ಯಯನದ ಮಿತಿಯೂ ಅಡಕವಾಗಿದೆ. ಪ್ರಮಾಣಿಕ ಎಂಬುದು: ಪ್ರೊ: ಕೆ.ಜಿ.ನಾಗರಾಜಪ್ಪನವರ ಸಂಶೋಧನ ವೈಚಾರಿಕ-ಮತ್ತು ವಿಮರ್ಶಾ ಸಾಹಿತ್ಯವನ್ನು ಪರೀಕ್ಷೆಗೊಳಪಡಿಸಲು ಅತ್ಯಗತ್ಯವಾದ ಅನ್ಯಜ್ಞಾನ ಕ್ಷೇತ್ರಗಳ ಶಾಸ್ತ್ರೀಯ ಶಿಸ್ತಿನ ಪರಿಚಯದ ಕೊರತೆ ಈ ಅಧ್ಯಯನಕಾರನಿಗಿದೆ ಎಂಬುದರ ಸೂಚಕವಾದರೆ; ವಿನಮ್ರ ಪ್ರಯತ್ನ ಎಂಬುದು: ಅಪಾರವಾದ ವಿದ್ವತ್ತು-ವ್ಯುತ್ಪತ್ತಿಗಳಿಂದ ಕೂಡಿದ ಸುಮಾರು 600 ಪುಟಗಳಿಗೂ ಮಿಕ್ಕ ಅವರ ಬರಹಗಳ ಹರಹನ್ನು ಮೊದಲ ಓದಿನಲ್ಲಿಯೇ ಒಳಹೊಕ್ಕುವುದಿರಲಿ, ಅರಗಿಸಿಕೊಂಡಿದ್ದೇನೆನ್ನುವುದೂ ಕೂಡ ದಾರ್ಷ್ಟ್ಯದ ಮಾತಾಗುತ್ತದೆ ಎಂಬುದರ ಅರಿವು ಇರುವುದರ ದ್ಯೋತಕವಾಗಿದೆ.

ಕನ್ನಡ ವಿಮರ್ಶೆ:

ಕನ್ನಡ ಸಾಹಿತ್ಯಕ್ಕೆ ಒಂದು ಸಾವಿರ ವರ್ಷಗಳ ಇತಿಹಾಸವಿದ್ದರೆ, ವಿಮರ್ಶೆಗೆ ಹೆಚ್ಚೆಂದರೆ ನೂರು! ಈ ನೂರು ವರ್ಷಗಳ ಇತಿಹಾಸದಲ್ಲಿ ಅದು ಕಂಡಿರುವ ಕಾಲಘಟ್ಟಗಳು ಎರಡಾದರೆ ಬಿಕ್ಕಟ್ಟುಗಳು ನೂರು. ಸ್ವಾತಂತ್ರ್ಯ ಪೂರ್ವ ಕಾಲದ ನವೋದಯ ಸಾಹಿತ್ಯ ಸಂದರ್ಭದ 'ರಸ ವಿಮರ್ಶೆ' ಮೊದಲನೆಯ ಕಾಲಘಟ್ಟವಾದರೆ, ಸ್ವಾತಂತ್ರ್ಯೋತ್ತರ ಕಾಲದ ನವ್ಯಸಾಹಿತ್ಯ ಸಂದರ್ಭದ 'ರೂಪನಿಷ್ಠ ವಿಮರ್ಶೆ' ಎರಡನೆಯದು. ಎರಡಕ್ಕೂ ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯ ತತ್ವಗಳೇ ಮಾದರಿ. ಕೆಲವರು ವರ್ಡ್ಸ್‌ವರ್ತ್-ಕೋಲರಿಜ್‌ರಿಂದ ದೀಕ್ಷೆ ಪಡೆದರೆ ಮತ್ತೆ ಕೆಲವರು ಲೀವೀಸ್, ರಿಚರ್ಡ್ಸ್, ಇಲಿಯಟ್‌ರನ್ನು ಹೊತ್ತು ಮೆರೆದರು. ಒಟ್ಟಿನಲ್ಲಿ ಕನ್ನಡ ಸಾಹಿತ್ಯ ವಿಮರ್ಶೆಯ ಇತಿಹಾಸವೆಂದರೆ- ಒಂದರ್ಥದಲ್ಲಿ ಸಂಸ್ಕೃತ ಹಾಗೂ ಇಂಗ್ಲೀಷ್ ಸಾಹಿತ್ಯ ವಿಮರ್ಶೆಯ ಇತಿಹಾಸವೇ ಸರಿ! ಈ ಪರಕೀಯ ಪ್ರಭಾವದಿಂದಾದ ಅನಾಹುತ ಮಾತ್ರ ಅಸದಳ. ಅದನ್ನು ಮುಂದೆ ಪರಿಶೀಲಿಸಲಾಗುವುದು.

ಕೆ.ಜಿ.ನಾಗರಾಜಪ್ಪನವರ ವಿಮರ್ಶಾಸಾಹಿತ್ಯದ ಹಿನ್ನೆಲೆಯ ಪ್ರಜ್ಞೆ ಮತ್ತು ಪ್ರಭಾವ:

ಪ್ರೊ। ಕೆ.ಜಿ. ನಾಗರಾಜಪ್ಪನವರ ವಿಮರ್ಶಾ ಸಾಹಿತ್ಯದ ಹಿನ್ನೆಲೆಯಾಗಿರುವ ಪ್ರಜ್ಞೆ ಮತ್ತು ಪ್ರಭಾವಗಳನ್ನು ಗುರುತಿಸಲು ತುಂಬ ಶ್ರಮಪಡಬೇಕಾದ ಅಗತ್ಯವೇನೂ ಇಲ್ಲ. ಅದು ಅವರ ಪ್ರತಿಯೊಂದು ಬರಹದಲ್ಲೂ ಮೇಲ್ನೋಟಕ್ಕೆ ಎದ್ದು ಕಾಣುತ್ತದೆ. ಅಲ್ಲದೇ ಅವರು ಗುಬ್ಬಿ ತಾಲ್ಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಮಾತನಾಡಿದ ಕೆಲವು ಮಾತುಗಳು ಅವರ ಬದುಕು ಮತ್ತು ಬರಹದ ಹಿಂದಿನ ಪ್ರೇರಕ ಶಕ್ತಿ ಯಾವುದೆಂಬುದನ್ನು ತುಂಬ ಸ್ಪಷ್ಟವಾಗಿ ಚಿತ್ರಿಸುತ್ತವೆಯಾದ್ದರಿಂದ ಅವನ್ನಿಲ್ಲಿ ಉಲ್ಲೇಖಿಸುತ್ತಿದ್ದೇನೆ:

"......... ಯಾವ ಪೀಠಕ್ಕೂ ಅಂಟಿಕೊಳ್ಳದ ನನ್ನನ್ನು, ಇಂದು ಹಿಡಿದು ತಂದು ...... ಸಮ್ಮೇಳನದ ಗದ್ದುಗೆಯ ಮೇಲೆ ಕೂಡ್ರಿಸಿದ್ದೀರಿ. ಈ ಗದ್ದುಗೆ ಬಂಗಾರದ್ದೆಂದೂ, ಅಧ್ಯಕ್ಷಗಿರಿ ವಜ್ರದ ಕಿರೀಟವೆಂದೂ ನಾನು ತಿಳಿದಿಲ್ಲ. ನಾನು ನಿಮ್ಮೆಲ್ಲರಿಗಿಂತ ಎಂದೂ ಬೇರೆಯವನಲ್ಲ...... ಈ ನೆಲದ ಮೇಲೆಯೇ ಬದುಕು ಕಟ್ಟಿಕೊಂಡು ನಿಮ್ಮೊಂದಿಗೆ ಗುರುತಿಸಿಕೊಂಡವನು. ಹುಟ್ಟಿದ ವರ್ಗದಿಂದ ಬೇರು ಕತ್ತರಿಸಿಕೊಂಡು ಮತ್ತೊಂದು ವರ್ಗದ ಪ್ರಲೋಭನೆಗೆ ಸಿಕ್ಕಿ ಅಸಲಿತನ ಕಳೆದುಕೊಂಡವನಲ್ಲ. ಹಿರಿಯರು ತೋರಿದ, ಗುರುಗಳು ಕಲಿಸಿದ ಆದರ್ಶಗಳನ್ನು (ಅವರು ಆಚರಿಸಲಿ ಬಿಡಲಿ) ನನ್ನ ಬದುಕಿನಲ್ಲಿ ಆಚರಿಸುವ ಹಠತೊಟ್ಟು ಅದಕ್ಕೆ ಸಾಕಷ್ಟು ಬೆಲೆ ತೆತ್ತವನು.

ಕನ್ನಡ ಸಾಹಿತ್ಯದಲ್ಲಿ ಜನಸಾಮಾನ್ಯರ ಬಗ್ಗೆ ಅಸಡ್ಡೆ ಇದೆ, ಅನಾದರವಿದೆ ಮತ್ತು ನಿಂದೆ ಇದೆ. ಶ್ರೀ ಸಾಮಾನ್ಯ ವರ್ಗ ಅಜ್ಞಾನ, ಮೂಢನಂಬಿಕೆ, ಧರ್ಮನಿಷ್ಠೆ, ಸ್ವಾಮಿ ನಿಷ್ಠೆಗಳಿಂದ ದನಿಯಿಲ್ಲದವರಾಗಿ, ತಲೆತಗ್ಗಿಸಿ ದುಡಿಯುವ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಸ್ವಯಂಪ್ರೇರಿತರಾಗಿ ಸಹಿಸುವ ವರ್ಗವಾಯಿತು. ಶಾಸ್ತ್ರ ಮತ್ತು ಕಾವ್ಯಗಳಲ್ಲಿ ಚಿತ್ರಿಸಿರುವ ಕೆಳವರ್ಗದ ಪಾತ್ರಗಳು ಮೇಲುವರ್ಗ ಪ್ರತಿಷ್ಠಿತ ಬರಹಗಾರರ ಸೂತ್ರದ ಗೊಂಬೆಗಳು. ಬರಹಗಾರರು ಕಲಿಸುವ ಗಿಳಿಪಾಠವನ್ನು ಒಪ್ಪಿಸುವ ಗಿಳಿಗಳು! ಬರಹಗಾರರನ್ನು ಮೀರಿ ಅವು ಎಂದೂ ಬೆಳೆಯುವುದೇ ಇಲ್ಲ. ಕೆಳವರ್ಗದ ಪಾತ್ರಗಳು ಸದಾ ಪ್ರತಿಷ್ಠಿತ ವರ್ಗದ ಹಿತಕಾಯುವ ತಲೆದಂಡದಿಂದ ಸ್ವಾಮಿನಿಷ್ಠೆ ಮೆರೆವ ಪಡಿಯಚ್ಚುಗಳು. ಅವರದ್ದು ದೇಪಸಂಸ್ಕೃತಿ ! ಕ್ಷುದ್ರ, ಕ್ಷುಲ್ಲಕ ಮತ್ತು ಜಂಗ್ಲಿ ಸಂಸ್ಕೃತಿ. ಇಂಥ ವಿಚಾರಗಳನ್ನು ಓದಿದ ಮೇಲೆ ಕುತೂಹಲ ಹೆಚ್ಚಿತು. ಮನುಷ್ಯ ಮನುಷ್ಯರ, ಸಂಸ್ಕೃತಿ- ಸಂಸ್ಕೃತಿ ನಡುವೆ ತಾರತಮ್ಯ ಮಾಡುವುದು ಸರಿಯೇ ಎಂಬ ಪ್ರಶ್ನೆ ನನ್ನನ್ನು ಕಾಡತೊಡಗಿತು. ಶಾಸ್ತ್ರಗಳು ಸಂತರು ಮತ್ತು ವಿದ್ವಾಂಸರು 'ಕೈಯಿನ ಐದು ಬೆರಳುಗಳು ಸಮನಾಗಿವೆಯೇ?' ಎಂದು ಪ್ರಶ್ನಿಸಿ ಅಸಮಾನತೆ ಪ್ರಕೃತಿಯಲ್ಲಿಯೇ ಇರುವ ಸಹಜತತ್ವ ಎಂದು ಹೇಳಿ, ತಾರತಮ್ಯವನ್ನು ಸಮರ್ಥಿಸುವ ಸೂತ್ರದಲ್ಲಿಯೇ ನನಗೆ ಅನುಮಾನ ಮೂಡಿತು. ಹಾಗಾದರೆ ಕೈಯಿನ ಒಂದು ಬೆರಳಿನಲ್ಲಿ ಅಮೃತ, ಮತ್ತೊಂದರಲ್ಲಿ ಮಲಮೂತ್ರ, ಮಗದೊಂದರಲ್ಲಿ ರಕ್ತ, ಹೀಗೆ ಬೇರೆ ಬೇರೆ ಬೆರಳುಗಳಲ್ಲಿ ಬೇರೆ ಬೇರೆ ದ್ರವಗಳು ಹರಿಯುತ್ತವೆಯೆ ಎಂಬ ಪ್ರಶ್ನೆ

ನನ್ನ ತಲೆ ತಿನ್ನತೊಡಗಿತು. ಆಗ ಇಲ್ಲಾ ಎಲ್ಲಾ ಬೆರಳುಗಳಲ್ಲಿಯೂ ಸಮಾನವಾಗಿ ಹರಿಯುತ್ತಿರುವುದು ರಕ್ತವೇ! ಆದರೆ ಒಂದೊಂದು ಬೆರಳಿಗೂ ತನ್ನದೇ ಆದ ಕೆಲಸವಿದೆ. ಮತ್ತು ಅವು ಒಟ್ಟಿಗೆ ಕೂಡಿ ಮಾಡುವ ಕೆಲಸವೂ ಇದೆ. ಕೈಯ ಬೆರಳುಗಳು ವಿಶಿಷ್ಟ ಕ್ರಿಯೆಯ ಮತ್ತು ಸಮಾನ ತತ್ವ ಅನುಸರಿಸಿ ಬೆರಳುಗಳು ಕಾರ್ಯ ನಿರ್ವಹಿಸುತ್ತವೆ ಎಂಬ ಉತ್ತರ ಹೊಳೆಯಿತು. ಬೇಧ ಪ್ರಕೃತಿ ಸಹಜವಾದದ್ದಲ್ಲ, ಮಾನವ ಸ್ವಾರ್ಥಕ್ಕಾಗಿ ನಿರ್ಮಿಸಿಕೊಂಡದ್ದು ಎಂಬ ಸತ್ಯ ಕಂಡಿತು. ಅಂದಿನಿಂದ ಸಮಾನತೆ ಅಸಮಾನತೆಯ ಸತ್ಯದ ವಿವಿಧ ಸ್ತರಗಳ ಶೋಧನೆಗೆ ತೊಡಗಿದೆನು. ಶಿಷ್ಟ-ಜಾನಪದ, ಸಂಸ್ಕೃತಿ-ಅಧೀನ ಸಂಸ್ಕೃತಿ, ರಾಷ್ಟ್ರ-ಉಪರಾಷ್ಟ್ರ, ಮುಂತಾದ ಬೇಧ ಸೂತ್ರದ ಪರಿಕಲ್ಪನೆಗಳು ನನಗೆ ಸವಾಲಾದವು. ಆ ಸವಾಲನ್ನು ಒಪ್ಪಿ ನಡೆಸುತ್ತಿರುವ ಹುಡುಕಾಟವೇ ನನ್ನ ಬದುಕು ಮತ್ತು ಬರಹದ ಪ್ರೇರಕ ಶಕ್ತಿಯಾಗಿದೆ. ಗ್ರಾಮೀಣ ಸಾಮೂಹಿಕ ಪ್ರಜ್ಞೆಯ ಏಕಭಾಷೆಯ ಬಹುಸಂಸ್ಕೃತಿ ವರ್ಗಕ್ಕೆ ಸೇರಿದ ಅಚ್ಚ ಕನ್ನಡಿಗ ನಾನು.

ಸಾಹಿತ್ಯಕ್ಕಿಂತ ಬದುಕು ದೊಡ್ಡದು ಎಂದು ನನ್ನ ನಂಬಿಕೆ. ಅಂಥ ಬದುಕಿನಲ್ಲಿ ನುಡಿದಂತೆ ನಡೆಯುವ, ನಡೆದಂತೆ ನುಡಿಯುವ, ನಡೆ-ನುಡಿ ಸಿದ್ಧಾಂತದ ವಚನಕಾರರ ದಾರಿ ಹಿಡಿದವನು ನಾನು...... ಕೇಳಿದ್ದನ್ನು, ಕಂಡದ್ದನ್ನು, ನೋಡಿದ್ದನ್ನು, ಆಚರಿಸಿದ್ದನ್ನು ಮತ್ತು ಅನುಭವಿಸಿದ್ದನ್ನು ಇದ್ದದ್ದು ಇದ್ದಂತೆ ಅಸಲಿಗೆ ಮೋಸವಾಗದಂತೆ ಹೇಳಿ ಬಿಡುವ ಸ್ವಭಾವ ನನ್ನದು. ನನ್ನ ಅಭಿಪ್ರಾಯಗಳನ್ನು ಒಪ್ಪುವುದು ಬಿಡುವುದು ನಿಮಗೆ ಸೇರಿದ್ದು. ನಡೆತೆಯಲ್ಲಿಲ್ಲದ, ಕೇವಲ ನುಡಿಯ ವಿಕತೆ ಮತ್ತು ಭಾವೈಕ್ಯತೆ ಸಾರುವ ಮುಖವಾಡದ ಬದುಕೇ ಸಾವು. ಪ್ರಾಮಾಣಿಕವಾದ ಬಿಚ್ಚು ನುಡಿಯ ನುಡಿ-ನುಡಿ ಸಂಘರ್ಷದ ಕಿಡಿಯೇ ಬೆಳಕಿನ ಬೆಳವಣಿಗೆಗೆ ದಾರಿ ಮತ್ತು ಪರಸ್ಪರ ಅರಿವಿನ ಮೂಲ ಎಂದು ನಂಬಿರುವ ನೇರನುಡಿಯ ಮುಕ್ತ ಚಿಂತಕ ನಾನು."

ಪ್ರೊ।। ನಾಗರಾಜಪ್ಪನವರ ಬದುಕು ಮತ್ತು ಬರಹದ ಹಿಂದಿನ ಪ್ರಜ್ಞೆ ಮತ್ತು ಪ್ರೇರಣೆಗಳನ್ನು ಗುರುತಿಸಲು ಇವಿಷ್ಟು ಮಾತುಗಳು ಸಾಕೆಂದು ತೋರುತ್ತದೆ.

ಪ್ರೊ। ಕೆ.ಜಿ.ನಾಗರಾಜಪ್ಪನವರ ವಿಮರ್ಶಾ ಸಾಹಿತ್ಯದ ಹಿನ್ನೆಲೆಯ ಪ್ರಮೇಯಗಳು:
(ಅ) ಕನ್ನಡ ಸಾಹಿತ್ಯ ಮತ್ತು ಯಜಮಾನ ಸಂಸ್ಕೃತಿ

'ಮರುಚಿಂತನೆ' ಪ್ರೊ। ನಾಗರಾಜಪ್ಪನವರಿಗೆ ಹೆಸರು ತಂದುಕೊಟ್ಟ ಅವರ ಮಹತ್ವದ ವಿಮರ್ಶಾ ಸಂಕಲನ. ಅವರಿಂದು ಮರುಚಿಂತನೆಯ ನಾಗರಾಜಪ್ಪನವರೆಂದೇ ಪ್ರಸಿದ್ಧರು. ಅಂತೆಯೇ ವೈರಿಗಳಲ್ಲಿಯೂ ಕೂಡ! ಕೆಲವರು ಅದನ್ನು ಮರುನಿಂದನೆ ಎಂದು ಕರೆದರೆ ಮತ್ತೆ ಕೆಲವರು ಅಪೂರ್ವ ಒಳನೋಟಗಳನ್ನೊಳಗೊಂಡ ಮಹತ್ವದ ಕೃತಿಯೆಂದೂ ದಲಿತರ/ ಹಿಂದುಳಿದವರ ಬೈಬಲ್-ಭಗವದ್ಗೀತೆ ಎಂದೂ ಮುಂತಾಗಿ ವರ್ಣಿಸಿದರು. ಅದೇನೇ ಇದ್ದರೂ ಅದಿಂದು ಎಲ್ಲ ವಾದ-ವಿವಾದಗಳನ್ನು ಮೀರಿ ಕನ್ನಡ ವಿಮರ್ಶಾ ಸಾಹಿತ್ಯದಲ್ಲಿನ ಒಂದು ಮಹತ್ವಪೂರ್ಣವಾದ ಕೃತಿಯಾಗಿ ಸ್ಥಾಪಿತವಾಗಿದೆ.

ಮರುಚಿಂತನೆಯ ಆರು ಲೇಖನಗಳು ಮತ್ತು ಅನಂತರ ಪ್ರಕಟವಾದ 'ಭಕ್ತಿಸಾಹಿತ್ಯದಲ್ಲಿನ ಪ್ರತಿಭಟನೆಯ ವಿಧಾನಗಳು' ಮತ್ತು 'ಮಧ್ಯಕಾಲೀನ ಸಾಹಿತ್ಯ: ಹಿಂಸೆಯ ಅಭಿವ್ಯಕ್ತಿ ಸ್ವರೂಪ' ಎಂಬೆರಡು ಸುದೀರ್ಘ ಲೇಖನಗಳು ಪ್ರಾಚೀನ ಸಾಹಿತ್ಯವನ್ನು ಕುರಿತು ಅನೇಕ ಒಳನೋಟಗಳನ್ನು ನೀಡುವುದರೊಂದಿಗೆ ಸಾವಿರ ವರ್ಷದ ಕನ್ನಡ ಸಾಹಿತ್ಯದಲ್ಲಿ ಹೇಗೆ ಬಹುಜನ ಸಂಸ್ಕೃತಿಯನ್ನು ನಿರಾಕರಿಸಿ ಯಜಮಾನ ಸಂಸ್ಕೃತಿಯ ಪ್ರಾಬಲ್ಯವನ್ನು ಮೆರೆಸಲಾಗಿದೆ ಎಂಬುದನ್ನು ಸಾಕ್ಷ್ಯಾಧಾರ ಸಮೇತವಾಗಿ ನಿರೂಪಿಸುತ್ತವೆ. ಈ ಯಜಮಾನ ಸಂಸ್ಕೃತಿ ಎಂಬುದು ವೈದಿಕ ಸಂಸ್ಕೃತಿ ಮಾತ್ರವೇ ಅಲ್ಲ ಜೈನ ಮತ್ತು ವೀರಶೈವ ಸಂಸ್ಕೃತಿಗಳೂ ಯಜಮಾನ ಸಂಸ್ಕೃತಿಗಳಾಗೇ ಮೆರೆದುದನ್ನು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಸಮಾಜದ ಬಹುಜನ ಸಂಸ್ಕೃತಿ ಹೇಗೆ ಜೈನ, ವೀರಶೈವ, ವೈದಿಕರಿಂದ ಅಸಡ್ಡೆಗೊಳಗಾಗಿ ನಿರಾಕರಿಸಲ್ಪಟ್ಟಿತು ಎಂಬುದನ್ನು ಮನಮುಟ್ಟುವಂತೆ ಇಲ್ಲಿನ ಲೇಖನಗಳಲ್ಲಿ ಹೇಳಲಾಗಿದೆ. ಜೈನರಲ್ಲೂ ವೀರಶೈವರಲ್ಲೂ ಮತಾಂತರವಾದ ವೈದಿಕರು ಇಡೀ ಕನ್ನಡ ಸಾಹಿತ್ಯದ ಪ್ರೇರಣೆಯಾಗಿ ನಿಂತು ಬಹುಜನ ಸಂಸ್ಕೃತಿಯನ್ನು ಖಂಡಿಸಿರುವುದನ್ನು ಎತ್ತಿ ತೋರಲಾಗಿದೆ.

'ಕನ್ನಡದಲ್ಲಿ ಮೊದಲು ಕಾವ್ಯ ನಿರ್ಮಿಸಿದ ಜೈನರು ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕಾಣಿಕೆಯನ್ನು ಸಲ್ಲಿಸಿದ್ದರೂ ಲೌಕಿಕ ಕಾವ್ಯಗಳಲ್ಲಿ ವೈದಿಕ ಸಂಸ್ಕೃತಿಯನ್ನೂ, ಧಾರ್ಮಿಕ ಕಾವ್ಯಗಳಲ್ಲಿ ಜೈನಸಂಸ್ಕೃತಿಯನ್ನು ಕನ್ನಡ ಭಾಷೆಯಲ್ಲಿ ಅಭಿವ್ಯಕ್ತಿಸಿದರು. ಅದು ಹೆಚ್ಚಾಗಿ ರಾಜಕೀಯ ಮತ್ತು ಧಾರ್ಮಿಕ ಬದುಕನ್ನು ಕುರಿತುದಾಗಿದೆ. ಆದರೆ ಕನ್ನಡ ನಾಡಿನ ಸಂಸ್ಕೃತಿ, ಅದೂ ಸಾಮಾನ್ಯ ಜನರನ್ನೊಳಗೊಂಡ ಕೃತಿಗಳು ಮೂಡಿ ಬರಲಿಲ್ಲ"ಎಂಬ ಮಾತು ಒಪ್ಪುವಂತಹದೇ ಆಗಿದೆ.

"ಈ ಮಾತಿಗೆ ವೀರಶೈವ ಧರ್ಮವೇನೂ ಹೊರತಲ್ಲ. ವೀರಶೈವ ಕಾವ್ಯಗಳ ವಸ್ತುವಿನ ಗುರಿ ಶರಣರ ಬದುಕಿಗೇ ಮೀಸಲಾದುದರಿಂದ, ಸಮಗ್ರ ಜನರ ಜೀವನದ ಅನುಭವದ ದ್ರವ್ಯದ ಅಭಿವ್ಯಕ್ತಿಗೆ ಅವಕಾಶವಾಗದೆ ಸೃಜನಶೀಲಶಕ್ತಿಯನ್ನು ವೀರಶೈವ ಸಾಹಿತ್ಯ ಕಳೆದು ಕೊಂಡಿತು. ಕಾವ್ಯಕ್ಕೆ ಸಮಗ್ರ ಜನತೆಯ ಅನುಭವವನ್ನು ವಸ್ತುವನ್ನಾಗಿಸಿರಿ ಕೊಳ್ಳ ಬಹುದಾದ ಅವಕಾಶವನ್ನು ಅದು ಕಳೆದುಕೊಂಡು ಭಕ್ತ ಮತ್ತು ಭವಿ ಬೇಧದಿಂದ ಸಮಗ್ರ ಬದುಕಿನ ಅನುಭವಕ್ಕೆ ಬೆನ್ನು ತಿರುಗಿಸಿತು.

ಹೀಗಾಗಿ ವಚನಕಾರರ ಮುಕ್ತ ಚಿಂತನೆಯ ತತ್ವಗಳು ಧೀಮಂತ ಸಾಹಸ ಜೀವನದ ಸಾಹಸಗಳು, ಅನುಭಾವದ ವಿವಿಧ ಸ್ತರದ ಬದುಕು ವೀರಶೈವ ಕಾವ್ಯಗಳ ವಸ್ತುವಾಗಲಿಲ್ಲ. ವಚನಕಾರರ ಐತಿಹಾಸಿಕ ಬದುಕು ವೀರಶೈವ ಕಾವ್ಯಗಳಲ್ಲಿ ಪುರಾಣವಾಗಿ ಚಿತ್ರಿತವಾದುದೇ ಒಂದು ದೊಡ್ಡ ದುರಂತ. ಅಲ್ಲಮನ ಪ್ರಣಯ, ಚೆನ್ನಬಸವಣ್ಣನ ಹುಟ್ಟು, ಸಿದ್ಧರಾಮನ ದೀಕ್ಷೆ, ಅಕ್ಕಮಹಾದೇವಿಯ ವಿವಾಹ, ಬಸವಣ್ಣನ ಐಕ್ಯ ಇವುಗಳೇ ವೀರಶೈವ ಕಾವ್ಯದ ಮುಖ್ಯ ವಸ್ತುಗಳಾದವು. ಮುಂದಿನ ಶರಣ ಜನಾಂಗದ ಸ್ವಾನುಭವದ ಸಾಧನೆಯ

ಅಭ್ಯಾಸದ ಕೊರತೆಯನ್ನು ಶರಣರ ಜೀವನದಲ್ಲಿ ಪವಾಡಗಳ ವರ್ಣನೆಯಿಂದ ತೂಗಿಸಿಕೊಂಡರು. ಮತ್ತೆ ವೈದಿಕ ಮತ್ತು ಜೈನ ಪುರಾಣಗಳ ಅನುಕರಣೆಯ ಜಾಡಿನಲ್ಲಿಯೇ ವೀರಶೈವ ಪುರಾಣಗಳು ರಚನೆಯಾದವು. ಕಾವ್ಯದ ಗುರಿ ಭಕ್ತರಿಗೆ, ಅದೂ ಶಿವಭಕ್ತರಿಗೆ ಮಾತ್ರ ಸೀಮಿತವಾದುದರಿಂದ ಸಮಗ್ರ ಜೀವನದ ಅನುಭವ ದ್ರವ್ಯದ ಅಭಿವ್ಯಕ್ತಿಗೆ ಅವಕಾಶವಾಗದೆ ಸೃಜನ ಶೀಲ ಶಕ್ತಿಯನ್ನು ವೀರಶೈವ ಸಾಹಿತ್ಯ ಕಳೆದುಕೊಂಡು ಕೇವಲ ಅನುಕರಣ ಕೃತಿಗಳು ಸೃಷ್ಟಿಯಾದವು. ಕೇವಲ ಒಂದು ವರ್ಗದ ಸಂಸ್ಕೃತಿ ಕಾವ್ಯಗಳ ವಸ್ತುವಾಗಿ, ಎಲ್ಲಾ ವರ್ಗದ ವೈವಿಧ್ಯಮಯ ಬದುಕಿಗೆ ಬೆನ್ನು ತಿರುಗಿಸಿದುದರಿಂದ ಕಾವ್ಯಗಳಲ್ಲಿ ವೈವಿಧ್ಯ ವಿಸ್ತಾರ ಮತ್ತು ಮಾನವೀಯ ಮೌಲ್ಯಗಳು ಮಿಡಿಯದಾದವು. ವಚನಕಾರರ ವಿಚಾರ ಕ್ರಾಂತಿಯ ಮುಂದೆ ಎಂಥ ನೀರಸ ವಿಚಾರಧಾರೆ ಕಾವ್ಯದಿಂದ ಸೃಷ್ಟಿಯಾಯಿತು. ಒಟ್ಟಿನಲ್ಲಿ ವಚನಗಳಲ್ಲಿ ಶರಣರ ಸಾಧಕ ಜೀವನಕ್ಕೆ ಒತ್ತುಬಿದ್ದರೆ ವೀರಶೈವ ಕಾವ್ಯಗಳಲ್ಲಿ ಶರಣರ ಸಿದ್ಧ ಜೀವನಕ್ಕೆ ಒತ್ತು ಬಿದ್ದಿತು" ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಈ ವಿಷಯದಲ್ಲಿ ಕನಕದಾಸನಂತಹ ಶೂದ್ರನೂ ಯಜಮಾನ ಸಂಸ್ಕೃತಿಗೆ ಮರುಳಾಗಿ ಅಥವಾ ಮನಸೋತು ತನ್ನದೇ ಆದಂತಹ ಕೆಳವರ್ಗದ ಬಹುಜನ ಸಂಸ್ಕೃತಿಯನ್ನು ಹೇಗೆ ನಿರಾಕರಿಸುತ್ತಾನೆ ಎಂಬುದನ್ನು ಅವನ ಭಾಷೆಯ ಬಳಕೆಯ ಕುಸುರಿ ಕೆಲಸದಲ್ಲಿ ನೋಡಬಹುದಾಗಿದೆ. ಮಾತ್ರವಲ್ಲದೆ ಈ ಬಹುಜನ ಸಂಸ್ಕೃತಿಯ ದೇವರುಗಳನ್ನು ಶರಣರು ಜರೆದ ಹಾಗೆಯೇ ಚಿಲ್ಲರೆ ದೇವರು, ಪೊಳ್ಳುದೈವ, ಕಕ್ಕುದೈವ, ದೊಂಬಿದೈವ, ಹೀನದೈವ ಎಂದೆಲ್ಲಾ ಕರೆದು ಅಂಥ ಪಂಥಗಳು ಅನೀತಿಯುತವಾದುವೆಂದ ಜರೆಯುತ್ತಾನೆ. ಆದರೆ ಜ್ಞಾನಿಯಾದ ಕನಕದಾಸನು ವರ್ಣಿಸಿರುವ ಶಿಷ್ಟದೇವರ ಕೆಲ ಸಂದರ್ಭಗಳು ಯಾವ ರೀತಿಯಲ್ಲೂ ಬಹುಜನ ಸಮಾಜದ ಸಂಸ್ಕೃತಿಯ ದೇವರುಗಳಿಗಿಂತ ಭಿನ್ನವಲ್ಲ. ಬೆತ್ತಲೆ ದೇವರಿಗೆ ಬೆತ್ತಲೆ ಬಂದು ಸೇವೆಸಲ್ಲಿಸುವುದು ಅನಾಗರಿಕವಾದರೆ, ಕೊಳದ ದಡದಲ್ಲಿ ಬೆತ್ತಲೆಯಾಗಿ ಗೋಪಿಯರು ಕೃಷ್ಣನ ಸುತ್ತ ಕುಣಿಯುವುದು ಸರ್ವಸಮರ್ಪಣದ ಸಂಕೇತಾತ್ಮಕ ಅರ್ಥದಲ್ಲಿ ಸಮರ್ಥನೆಗೊಂಡು ಮಾನ್ಯವಾಯಿತು. ಸಂಸ್ಕೃತಿ ಸಂಸ್ಕೃತಿ ಮಧ್ಯೆ ತೋರುವ ಈ ತಾರತಮ್ಯ ಒಳಸಂಚಿನ ಕುತಂತ್ರವೆನ್ನದೇ ವಿಧಿಯಿಲ್ಲ.

ಈ ಬಗೆಯ ಸಾಂಸ್ಕೃತಿಕ ಶೋಷಣೆ ಆರ್ಥಿಕ ಮತ್ತು ರಾಜಕೀಯ ಶೋಷಣೆಗಿಂತ ಹೆಚ್ಚು ಅಪಾಯಕಾರಿ. This is a Cultural poison ಎನ್ನುವ ನಾಗರಾಜಪ್ಪನವರ ಮಾತು ನಮ್ಮ ಸಮಾಜದ ಬಹುಜನ ಸಂಸ್ಕೃತಿಯ ದುರಂತಕ್ಕೆ ಹಿಡಿದ ಕನ್ನಡಿಯಾಗಿದೆ.

ಇದೇ ಮಾತನ್ನೇ ನಮ್ಮ ಸಮಕಾಲಿನ ಕೆಳವರ್ಗದ ಬಹುಜನ ಸಂಸ್ಕೃತಿಯ ವಾರಸುದಾರರಾದ ಕನಕದಾಸನಂತಹ ಬರಹಗಾರರಿಗೂ ಹೇಳಬಹುದು. ತಮ್ಮ ಹುಟ್ಟಿದ ವರ್ಗದ ಬೇರು ಕತ್ತರಿಸಿಕೊಂಡು ಮತ್ತೊಂದು ವರ್ಗದ ಹೆಣ್ಣು-ಹೊನ್ನು-ಮಣ್ಣುಗಳ ಪ್ರಲೋಭನೆಗೆ ಒಳಗಾಗಿ ತಮ್ಮ ಅಸಲಿತನ ಕಳೆದುಕೊಂಡು ಸಂಸ್ಕೃತೀಕರಣಗೊಂಡವರಿವರು. ಕೊಡಲಿಯ ಕಾವೇ ಕುಲಕ್ಕೆ ಮೃತ್ಯು ಎಂಬಂತೆ.

ಹೀಗಾಗಿ ಕನ್ನಡ ಭಾಷೆ ವಿವಿಧ ಸಂಸ್ಕೃತಿಗಳ ಅಭಿವ್ಯಕ್ತಿ ಮಾಧ್ಯಮವಾಗಿ ತನ್ನನ್ನು

ಎರವಲು ಕೊಟ್ಟುಕೊಂಡಿತೇ (Like a Saragate women) ಹೊರತು, ತನ್ನ ನೆಲದ ಸಂಸ್ಕೃತಿಯ ಸಾರಸರ್ವಸ್ವದ ಸತ್ವಹೀರಿ ಪುಷ್ಟಿಯಾಗಿ ಬೆಳೆದು ಸಮಗ್ರ ಜನತೆಯ ಬರವಣಿಗೆಯ ನಾಲಿಗೆಯಾಗಲಿಲ್ಲ. ಅದು ಕೇವಲ ಉಚ್ಚವರ್ಗದ ಯಜಮಾನ ಸಂಸ್ಕೃತಿಗಳಿಗೇ ಮೀಸಲಾಯಿತು ಎಂಬುದನ್ನು ಒಪ್ಪದೇ ದಾರಿಯಿಲ್ಲ.

(ಆ) ಕನ್ನಡ ಸಾಹಿತ್ಯ ಮತ್ತು ವರ್ಣಾಶ್ರಮ ಮುಂದಾಳತ್ವ: (Hegemony)

ಕನ್ನಡ ಸಾಹಿತ್ಯದ ಇತಿಹಾಸದುದ್ದಕ್ಕೂ ಪ್ರಖರವಾದ ಪ್ರಜ್ಞೆ ಮತ್ತು ಪ್ರೇರಣೆಯಾಗಿ ನಮ್ಮ ಕವಿಗಳನ್ನು ಕಾಡಿದುದು ಧರ್ಮ. ಅವರ ಪ್ರಧಾನ ನಿಷ್ಠೆ ಅದಕ್ಕೇನೇ! ವರ್ಣವ್ಯವಸ್ಥೆ ವೈದಿಕ ಧರ್ಮದ ಕೊಡುಗೆ, ಜೀವವಿರೋಧಿಯಾದ ಪ್ರಗತಿಗೆ ಮಾರಕವಾದ ಈ ವರ್ಣವ್ಯವಸ್ಥೆಯನ್ನು ಸುಧಾರಿತ ಪಂಥಗಳಾದ ಬೌದ್ಧ- ಜೈನ-ವೀರಶೈವ ಮುಂತಾದವುಗಳು ವಿರೋಧಿಸಿದವು ಎಂಬುದು ನಮ್ಮ ಸಾಮಾನ್ಯ ಕಲ್ಪನೆ. ಆದರೆ ಪ್ರೊ: ನಾಗರಾಜಪ್ಪನವರು ಒದಗಿಸುವ ಆಧಾರಗಳು ನೀಡುವ ನಿರ್ಣಯಗಳೇ ಬೇರೆಯಾಗಿವೆ. ಅಷ್ಟುಮಾತ್ರವೇ ಅಲ್ಲ ಈ ಧರ್ಮಗಳ ಅಭಿಮಾನಿಗಳಿಗೆ ಆಘಾತಕಾರಿಯೂ ಆಗಿವೆ. ಈ ಸುಧಾರಿತ ಪಂಥಗಳು ವೈದಿಕ ಧರ್ಮಕೆ ಪ್ರತಿಭಟನೆಯಾಗಿ ಬಂದು ಕೊನೆ ಕೊನೆಗೆ ವೈದಿಕ ಸಂಸ್ಕೃತಿಯನ್ನೇ ವಿವಿಧ ರೂಪಗಳಲ್ಲಿ ಎತ್ತಿಹಿಡಿದ ದುರಂತ ಚಿತ್ರವನ್ನು ಎಳೆ ಎಳೆಯಾಗಿ ಬಿಡಿಸಿ ಇಟ್ಟಿದ್ದಾರೆ.

ಜೈನ ಮತ್ತು ವೀರಶೈವ ಧರ್ಮಗಳು ಬ್ರಾಹ್ಮಣರನ್ನು ತೀವ್ರವಾಗಿ ವಿರೋಧಿಸಿದರೂ ಬ್ರಾಹ್ಮಣತ್ವವನ್ನು ಸಾಧಿಸುವುದನ್ನೇ ಪರಮ ಗುರಿಯನ್ನಾಗಿರಿಸಿಕೊಂಡಿರುವುದಲ್ಲದೆ ವ್ರತ/ದೀಕ್ಷೆಯಿಂದ ಸರ್ವ ವರ್ಣದವರನ್ನೂ ಬ್ರಾಹ್ಮಣರಾಗಿಸಿದುದೂ ಅಲ್ಲದೆ ತಾವೇ ಬ್ರಾಹ್ಮಣರಿಗಿಂತ ಉತ್ತಮ ಬ್ರಾಹ್ಮಣರು ಎಂದು ಘೋಷಿಸಿಕೊಂಡರು. ಅಂದರೆ ಯಾವುದೇ ಸುಧಾರಣೆ ಅಥವಾ ಕ್ರಾಂತಿಯ ಮತ ಅಸ್ತಿತ್ವಕ್ಕೆ ಬಂದರೂ, ವರ್ಣಾಶ್ರಮ ವ್ಯವಸ್ಥೆಯ 'ಮಾಡೆಲನ್ನೇ' ಅನುಕರಣೆ ಮಾಡಿ ಹೊಸ ತತ್ವಗಳನ್ನು ಬೋಧಿಸಿದುದು ಒಂದು ದುರಂತವೇ ಸರಿ.

ಸುಧಾರಣೆಯ ಮತಗಳು ಬ್ರಾಹ್ಮಣರ ಮಾತೃಯೋನಿ ಮಹತ್ವದ ಬದಲಾಗಿ ದೀಕ್ಷಾಯೋನಿಯ ಮಹತ್ವ ಬೋಧಿಸಿದುದರಿಂದ ಹಿಂದಿನ ವ್ಯವಸ್ಥೆಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ವೀರಶೈವ ಧರ್ಮ ಕೆಳವರ್ಗದವರನ್ನು ನೇರವಾಗಿ ಸರಿಸಮಾನರೆಂದು ಭಾವಿಸಲಿಲ್ಲ. ಬದಲಾಗಿ ಲಿಂಗ ದೀಕ್ಷಾ ಬದ್ಧರೆಲ್ಲರೂ ಸರಿಸಮಾನರೆಂದು ಮತ್ತು ಶಿವ ಸಹೋದರರರೆಂದು ಸಾರಿತು. ಅಷ್ಟು ಮಾತ್ರವೇ ಅಲ್ಲದೇ ದೀಕ್ಷೆ ಕೂಡ ಎಲ್ಲರಿಗೂ ಸರಿಸಮಾನವಾಗಿ ದೊರೆಯದು. ದೀಕ್ಷೆ ಕೊಡುವಾಗಲೂ ವರ್ಣ ಜಾತಿಯು ಗಣನೆಗೆ ಬರುತ್ತದೆ. ವೀರಶೈವ ಧರ್ಮದ ಅಧಿಕೃತ ವಕ್ತಾರನಾದ ಚೆನ್ನಬಸವಣ್ಣನೇ 'ಬ್ರಾಹ್ಮಣನಿಗೆ ಮೂರು ವರ್ಷ, ಕ್ಷತ್ರಿಯನಿಗೆ ಆರುವರ್ಷ, ವೈಶ್ಯನಿಗೆ ಒಂಬತ್ತು ವರ್ಷ ಮತ್ತು ಶೂದ್ರನಿಗೆ ಹನ್ನೆರಡು ವರ್ಷ ನೋಡಿ ದೀಕ್ಷೆಯನ್ನು ಕೊಡಬೇಕು' ಎನ್ನುತ್ತಾನೆ.

" ಶ್ರೀ ಗುರುವಾದಾತನು ಸಕಲಾಗಮಂಗಳ
ಹೃದಯುವನರಿದು, ತನ್ನ ತಾನರಿದು ಸರ್ವಾಚಾರ
ತನ್ನಲ್ಲಿ ನೆಲೆಗೊಂಡು ಉಪದೇಶವ ಮಾಡುವ
ಕ್ರಮವೆಂತೆಂದೆಡೆ; ಬ್ರಾಹ್ಮಣನ ಮೂರು ವರ್ಷ
ನೋಡಬೇಕು; ಕ್ಷತ್ರಿಯನ ಆರು ವರುಷ
ನೋಡಬೇಕು; ವೈಶ್ಯನ ಒಂಬತ್ತು ವರುಷ
ನೋಡಬೇಕು; ಶೂದ್ರನ ಹನ್ನೆರಡು ವರುಷ
ನೋಡಬೇಕು: ನೋಡಿದಲ್ಲದೆ ದೀಕ್ಷೆಯ ಕೊಡಲಾಗದು."

-ಚೆನ್ನಬಸವಣ್ಣ.

ಇದರಿಂದ ನಾಗರಾಜಪ್ಪನವರು ಹೇಳುವ - "ಶರಣರು ಏಕಮುಖಿ ಚಿಂತಕರು, ಹಚ್ಚಿದ ಹಿಡಿಮುದ್ದನ್ನು ಮಡಿಲಲ್ಲಿ ಕಟ್ಟಿಕೊಂಡೇ ಮತ್ತೊಂದು ಗುದಾರಕ್ಕೆ ಹಿಡಿಮುದ್ದನ್ನು ಹಚ್ಚುವ ಸಾಹಸವೇ ಶರಣರ ಚಳುವಳಿ, ಶಿವಭಕ್ತರ ಕುಲ ಒಂದೇ ಎಂದು ಸಾರಿದ್ದರೂ ಸಮಾನತೆಯ ಮೇಲೆ ವೀರಶೈವ ಸಮಾಜ ರೂಪುಗೊಳ್ಳಲಿಲ್ಲ, ಅದು ಆತ್ಮದ ವಿಷಯದಲ್ಲಿ ಸಮಾನತೆಯನ್ನು ಸಾರಿತೇ ಹೊರತು ಸಾಮಾಜಿಕ ಸಮಾನತೆಗೆ ಎಂದೂ ಹೋರಾಡಲಿಲ್ಲ" ಎಂಬ ಮಾತು ತನ್ನಷ್ಟಕ್ಕೆ ತಾನೇ ಸಿದ್ಧಗೊಳ್ಳುತ್ತದೆ. ಅಷ್ಟು ಮಾತ್ರವೇ ಅಲ್ಲ ಹೀಗೆ ದೀಕ್ಷೆ ಪಡೆದು ಸಾಧನೆ ಮಾಡಿದರೂ ಆತ ನೇರವಾಗಿ ಕೈಲಾಸಕ್ಕೆ ಹೋಗಲಾರ. ಏಕೆಂದರೆ ಈ ಕೆಳವರ್ಗದವರು ಭಕ್ತ ಭೂಮಿಯ ಕರ್ಮದೇಹಿಗಳು. ಭಕ್ತರಾದರೂ ಅವು ನೇರವಾಗಿ ದೇಹಧಾರಿಗಳಾಗಿ ಶಿವನೊಂದಿಗೆ ಸೇರಲಾರವು. ಕೆಳವರ್ಗದ ಭಕ್ತರ ದೇಹಗಳು ಶುದ್ಧಿಯಾಗಬೇಕು. ಇಲ್ಲವೇ ಅನ್ಯ ದೇವಕಾಯದಲ್ಲಿ ಭಕ್ತರ ಆತ್ಮಗಳು ಸೇರಿ ಶಿವನೊಂದಿಗೆ ಕೂಟ ಸಾಧಿಸಬೇಕು. ಇದಕ್ಕೆ ಬೇಡರ ಕಣ್ಣಪ್ಪ ಮತ್ತು ಹೊಲೆಯನಾದ ತಿರುನಾಳ್ಗೋವರ ಕಥೆಗಳೇ ಸಾಕ್ಷಿ.

ಅಷ್ಟಕ್ಕೆ ತೃಪ್ತರಾಗದ ಮುಂದಿನ ಮತ್ತೆ ಕೆಲ ವೀರಶೈವ ಕವಿಗಳು ವೈದಿಕ ಧರ್ಮದ ವರ್ಣವ್ಯವಸ್ಥೆಯ ರೂಪಕವನ್ನೇ ಪುನಃ ಸೃಷ್ಟಿ ಮಾಡುತ್ತಾರೆ. ಶಿವತತ್ವ ಚಿಂತಾಮಣಿಯ ಈ ಪದ್ಯವನ್ನು ನೋಡಬೇಕು:

ಪೊಳೆವ ಮುಖದಿಂದಗ್ನಿ ಪದಿನಾಲ್ವರಿಂದ್ರರುಂ
ಎಲಸಿತ ಬ್ರಹ್ಮರ್ಷಿಗಳು ಜನಿಸಿದರು ಮಹಾ
ಗಳದೊಳು ವಿನಾಯಕಂ ಹೃದಯದೊಳು ಸ್ಕಂದ ಭುಜಂಗಳೊಳು ಕ್ಷತ್ರರ್ಗಳು!
ಸುಳಿನಾಭಿಯಿಂದಂತರಿಕ್ಷ ಗುಹ್ಯದೊಳುದಕ
ಲಲಿತೋರು ಸಪ್ರದೇಶದೊಳು ವೈಶ್ಯರು ಪಾದ
ತಳದಲ್ಲಿ ಭೂಮಿಯಂ ಶೂದ್ರರೆಂದವವರ ಚರಣಾಂಬುಜಕ್ಕೆ ಶರಣಂ॥

(೨-೩)

ಇದೇ ಸಂದರ್ಭದಲ್ಲಿ ಶೂದ್ರ ಕನಕದಾಸನಿಗೆ ಕೋನ ಮುಖೇನ ದೀಕ್ಷೆ ದೊರೆಯುವುದನ್ನು ಸ್ಮರಿಸಿಕೊಳ್ಳಬೇಕು.

ಇದೇ ಸ್ಥಿತಿಸ್ಥಾಪಕತ್ವವೇ ಸಮಕಾಲೀನ ಸಾಹಿತ್ಯದಲ್ಲಿಯೂ ಎಷ್ಟೊಂದು ಸೂಕ್ಷ್ಮವಾಗಿ ಕೆಲಸ ಮಾಡಿದೆ ಮತ್ತು ಮಾಡುತ್ತಿದೆ ಎಂಬುದನ್ನು ನಾಗರಾಜಪ್ಪನವರು ತಮ್ಮ 'ಡಿ.ವಿ.ಜಿ ಅವರ ಶ್ರೀ ರಾಮ ಪರೀಕ್ಷಣಂ- ಒಂದು ಚಿಂತನೆ' ಹಾಗೂ 'ಮಾಸ್ತಿಯವರ ಕಥಾಜಗತ್ತಿನಲ್ಲಿ ಧಾರ್ಮಿಕ ನೆಲೆ' ಎಂಬೆರಡು ಲೇಖನಗಳಲ್ಲಿ ಚರ್ಚಿಸಿದ್ದಾರೆ.

ರಾಮಾಯಣದಲ್ಲಿ ಅಭಿವ್ಯಕ್ತವಾಗಿರುವುದು ವೈದಿಕ, ವಾನರ ಮತ್ತು ರಾಕ್ಷಸ (ದ್ರಾವಿಡ) ಸಂಸ್ಕೃತಿಯ ಚಿತ್ರಣ. ಈ ಮೂರು ಸಂಸ್ಕೃತಿಗಳ ಸ್ವರೂಪ ಒಂದಕ್ಕೊಂದು ಭಿನ್ನ. ಇದನ್ನು ಅರಿತರೆ ರಾಮಾಯಣದ ಯಾವ ಪ್ರಸಂಗವೂ ತೊಡಕಾಗಿ ಪರಿಣಮಿಸದು ಎಂಬುದನ್ನು ಪ್ರೊ॥ ನಾಗರಾಜಪ್ಪನವರು ಅಹಲ್ಯೆಯ ಪ್ರಸಂಗ, ವಾಲಿಯ ವಧೆ ಮತ್ತು ರಾವಣನ ಹತ್ಯೆ ಪ್ರಸಂಗಗಳ ವಿಶ್ಲೇಷಣೆಯ ಮೂಲಕ ನಿರೂಪಿಸಿದ್ದಾರೆ. ಇಂದ್ರನಿಗೆ ನೀಡಿದ ಕ್ಷಮೆ ಮತ್ತು ರಾವಣನಿಗೆ ನೀಡಿದ ಮೃತ್ಯುದಂಡ ವರ್ಣಾಶ್ರಮಧರ್ಮದ ನ್ಯಾಯದಂಡಗಳೇ ಆಗಿವೆ. ಇಂದ್ರ ಅಹಲ್ಯೆಯನ್ನು ಮೋಹಿಸುವುದು ಅಂದರೆ ಉತ್ತಮ ವರ್ಗದ ಪುರುಷ ತನ್ನ ವರ್ಗದ ಅಥವಾ ತನಗಿಂತ ಕೆಳವರ್ಗದ ಹೆಣ್ಣನ್ನು ಮೋಹಿಸುವುದು ಅಪರಾಧವಲ್ಲ. ಆದರೆ ರಾವಣ ಸೀತೆಯನ್ನು ಮೋಹಿಸುವುದು ಅಂದರೆ ಕೆಳವರ್ಗದ ಪುರುಷ ತನಗಿಂತಲೂ ಮೇಲಿನ ವರ್ಗದ ಸ್ತ್ರೀಯನ್ನು ಮೋಹಿಸುವುದು ಅಪರಾಧವಾಗುತ್ತದೆ. ಇದು ಸ್ಮೃತಿಕಾರರ ಅನುಲೋಮ ಪ್ರತಿಲೋಮ ವರ್ಣಕಟ್ಟಳೆ. ಇಲ್ಲಿ ಅಪಹರಿಸಲ್ಪಟ್ಟ ಸೀತೆ ಕೇವಲ ಒಬ್ಬ ಹೆಣ್ಣಲ್ಲ ಅವಳು ಒಂದು ವರ್ಣಸಂಸ್ಕೃತಿಯ ಪ್ರತೀಕ. ವರ್ಣಾಶ್ರಮ ಧರ್ಮವನ್ನು ರಕ್ಷಿಸುವುದು ರಾಜನಾದ ರಾಮನ ಕೆಲಸ! ಅದರಿಂದಾಗಿಯೇ ಮನದ ಪಾತಕಿ ರಾವಣನಿಗೆ ಮೃತ್ಯುದಂಡ. ಯಾವ ಧರ್ಮ ಶ್ರೀರಾಮನಿಂದ ಶೂದ್ರ ತಪಸ್ವಿಯನ್ನು ವಧೆ ಮಾಡಿಸಿತೋ ಅದೇ ಧರ್ಮ ರಾವಣ ವಧೆಗೆ ಕಾರಣವಾಯಿತು. ಈ ಪ್ರಸಂಗಗಳಲ್ಲಿ ವರ್ಣಾಶ್ರಮ ಧರ್ಮದ ಸ್ಥಗಿತ ಮೌಲ್ಯಗಳು ಹೇಗೆ ಪ್ರಗತಿಯ ಮುಸುಕನ್ನು ಹಾಕಿಕೊಂಡು ನಮ್ಮ ಆಧುನಿಕ ಸಾಹಿತ್ಯದಲ್ಲಿ ಪ್ರತಿಪಾದಿತವಾಗಿವೆ ಎಂಬುದು ಗೊತ್ತಾಗುತ್ತದೆ.

ಇನ್ನು ವೈದಿಕ ಧರ್ಮದ ಸ್ಥಾಯಿಮೌಲ್ಯ ಪ್ರತಿಪಾದಕ ದೃಷ್ಟಿ ಮಾಸ್ತಿಯವರಲ್ಲಿ ಕಾಣಿಸಿಕೊಂಡ ಬಗೆಯ ಚಿತ್ರಣವನ್ನು ನೋಡಬಹುದು. ಇದು ಚಿಕವೀರ ರಾಜೇಂದ್ರ ಕಾದಂಬರಿಯಲ್ಲಿ ಬರುವ ಪಾದ್ರಿ-ಪೂಜಾರಿಗಳಿಬ್ಬರ ಮಧ್ಯೆ ನಡೆದ ಮಾತುಕತೆ:

"ವೇದ ಹೇಳಿದೆ ಅದನ್ನು ನಮ್ಮ ಜನ ಒಪ್ಪಿ ನಡೆದಿದ್ದಾರೆ"

"ನೀವು ತಲೆಯಿಂದ ಬಂದವರು, ಶೂದ್ರರು ದೇವರ ಕಾಲಿನಿಂದ ಬಂದವರು ಎಂದು ಹೇಳುತ್ತೀರಲ್ಲವೆ?"

"ವೇದದಲ್ಲಿ ಹಾಗೆಂದು ಹೇಳಿದೆ"
"ಆದ್ದರಿಂದಲೇ ನೀವು ಶ್ರೇಷ್ಠರು"
"ದೇವರನ್ನು ವಿರಾಟ್ ಸ್ವರೂಪ ಎಂದು ಹೇಳಿ ಅವನಿಗೆ ಅಂಗಾಂಗಗಳನ್ನು ಕಲ್ಪಿಸಿ ಬೇರೆ ಬೇರೆ ವೃತ್ತಿಗೆ ಬೇರೆ ಬೇರೆ ಅಂಗದಿಂದ ಜೀವರಾಶಿ ಹುಟ್ಟಿತು ಎಂಬುದಾಗಿ ವೇದ ಹೇಳಿದೆ. ವೃತ್ತಿ ಶ್ರೇಷ್ಠವಾದರೆ ಜಾತಿ ಶ್ರೇಷ್ಠ"

"ನಮ್ಮ ಮತದಲ್ಲಿ ಒಬ್ಬರಿಗಿಂತ ಒಬ್ಬರು ಶ್ರೇಷ್ಠ ಎಂದು ಹೇಳುವುದಿಲ್ಲ ಎಲ್ಲರೂ ದೇವರ ಮಕ್ಕಳು ಎಂದು, ಎಲ್ಲರೂ ಸಮಾನರು ಎಂದು ಹೇಳುತ್ತೇವೆ. ಇದೇ ನ್ಯಾಯ ಎಂದು ತೋರುವುದಿಲ್ಲವೆ?"

"ನೀವು ಬೇರೆಯ ದೇಶದ ಜನ. ನಿಮಗೆ ಆ ವ್ಯವಸ್ಥೆ ಸರಿ. ಈ ದೇಶ ಕರ್ಮಭೂಮಿ. ಇದರಲ್ಲಿ ಮನುಷ್ಯರು ಹೀಗೆ ಹೀಗೆ ನಡೆಯಬೇಕು. ಹೀಗೆ ಹೀಗೆ ಬಾಳಬೇಕು. ಅನೇಕ ಜನ್ಮ ಎತ್ತಿ ಜ್ಞಾನ ಭಕ್ತಿ ಕರ್ಮಗಳಿಂದ ಮೋಕ್ಷವನ್ನು ಸಾಧಿಸಬೇಕು ಎಂದು ವ್ಯವಸ್ಥೆಯಾಗಿದೆ. ನಮಗೆ ಈ ವ್ಯವಸ್ಥೆಯೇ ಸರಿ!"

(ಚಿಕ್ಕವೀರರಾಜೇಂದ್ರ ಪುಟ: 275)

ಇದರೊಂದಿಗೆ- ಸಾರಿಪುತ್ರನ ಕೊನೆಯ ದಿನಗಳು ಮತ್ತು ಶ್ರೀಕೃಷ್ಣನ ಅಂತಿಮ ದಿನಗಳು ಕಥೆಗಳಲ್ಲಿ ಬರುವ ವಿವರಗಳನ್ನು ನೋಡಬೇಕು: ಬುದ್ಧ ಪರಿನಿರ್ವಾಣ ಹೊಂದಿದ ತಕ್ಷಣವೇ ಸಾರಿಪುತ್ರ (ವೇದ ವಿದ್ವಾನ್ ನರಸಿಂಹಶರ್ಮ) "ಬೌದ್ಧಮತ ಬೇರೊಂದು ಮತವಲ್ಲವೆಂದೂ, ವೈದಿಕಧರ್ಮವನ್ನೇ ಎಲ್ಲರ ಮೋಕ್ಷಕ್ಕೆಂದು ಸುಲಭವಾಗಿ ಮಾಡಲು ಭಗವಂತನು ಬೌದ್ಧಾವತಾರವನ್ನು ಮಾಡಿದನೆಂದೂ ಅಲ್ಲಲ್ಲೇ ಸಾರಿ ಜನರಿಗೆ ಬೌದ್ಧಧರ್ಮದಲ್ಲಿ ಪ್ರೀತಿ ಉಂಟಾಗುವಂತೆ ಮಾಡಿದನು" ಎಂಬ ಮಾತು; ಹಾಗೂ ಶ್ರೀ ಕೃಷ್ಣನ ಅಂತಿಮ ದರ್ಶನ ಕತೆಯಲ್ಲಿ "ಶ್ರೀ ಕೃಷ್ಣನೇ ತಾನು ಅವತಾರಿ ಪುರುಷ ಎಂಬುದನ್ನು ನಿರಾಕರಿಸಿ ಸಾಮಾನ್ಯ ಮನುಷ್ಯ ಎಂದು ಅರ್ಜುನನನ್ನು ಒಪ್ಪುವಂತೆ ಮಾಡುತ್ತಾನೆ. ವಿಚಾರ ಪ್ರಧಾನ ಬೌದ್ಧಧರ್ಮದಲ್ಲಿ ಅವತಾರ ತತ್ವವನ್ನು ತುರುಕಿ, ಅವತಾರ ತತ್ವಪ್ರಧಾನವಾದ ವೈದಿಕ ಧರ್ಮದ ಮಹಾಭಾರತದ ಶ್ರೀ ಕೃಷ್ಣನ ಪಾತ್ರದಲ್ಲಿ ಮಾನವೀಯತೆಯ ವೈಚಾರಿಕ ತತ್ವವನ್ನು ತಂದು ಹಾಕುವುದು ಪ್ರೊ। ನಾಗರಾಜಪ್ಪನವರು ಹೇಳುವಂತೆ "ಕಲ್ಚರಲ್ ಫಾಯ್‌ಸನ್" ಎಂದು ಹೇಳಿದರೆ ಸಾಕೆಂದು ತೋರುತ್ತದೆ. ಇನ್ನಾವ ವಿವರಣೆಯೂ ಬೇಡ!

ಕನ್ನಡ ಸಾಹಿತ್ಯ ಮತ್ತು ವಿಮರ್ಶೆ:

ಕೇವಲ ನೂರು ವರ್ಷಗಳ ಕನ್ನಡ ವಿಮರ್ಶೆಯಲ್ಲಿ ಅಷ್ಟೇ ಸಂಖ್ಯೆಯ ಇಕ್ಕಟ್ಟು-ಬಿಕ್ಕಟ್ಟುಗಳು ಉಂಟಾಗಿವೆ ಎಂಬದನ್ನು ಈ ಹಿಂದೆಯೇ ಹೇಳಲಾಗಿದೆ. ಅದಕ್ಕೂ ಕೂಡ ಕಾರಣ ಕನ್ನಡ ಸಾಹಿತ್ಯದುದ್ದಕ್ಕೂ ಪ್ರಖರ ಪ್ರಜ್ಞೆಯಾಗಿ ಮೂಡಿಬಂದ ಯಾಜಮಾನ ಸಂಸ್ಕೃತಿಯ ನಯವಂಚನೆಯ ಸಂಚುಗಳೇ ಆಗಿವೆ ಎಂಬುದನ್ನು ಪ್ರೊ। ನಾಗರಾಜಪ್ಪನವರು

ತಮ್ಮ ವಿಮರ್ಶಾ ಲೇಖನಗಳಲ್ಲೆಲ್ಲ ಯಾವ ಅನುಮಾನಕ್ಕೂ ಎಡೆಯಿಲ್ಲದಂತೆ ತೆರೆದು ತೋರಿ ಝಾಡಿಸಿದ್ದಾರೆ. ಮೇಲ್ವರ್ಗದ ಹಿಕ್ಮತ್ತುಗಳನ್ನು ನಯವಂಚನೆಯ ಬಗೆಬಗೆಯ ಸೋಗುಗಳನ್ನು ಕಿತ್ತೆಸೆದು ಬಣ್ಣಬಯಲು ಮಾಡಿದ್ದಾರೆ. ಅಷ್ಟು ಮಾತ್ರವೇ ಅಲ್ಲ, ತಮ್ಮ ಇಬ್ಬಂದಿತನದ ನಕಲಿ ವ್ಯಕ್ತಿತ್ವದಿಂದಾಗಿ ಅಂಥ ಯಜಮಾನ ಸಂಸ್ಕೃತಿ ಮತ್ತೆ ಮತ್ತೆ ತಲೆಯೆತ್ತಿ ಮೆರೆಯುವುದಕ್ಕೆ ಕಾರಣೀಭೂತರಾದ ಬಹುಸಂಸ್ಕೃತಿಯ ಕೆಳವರ್ಗದವರನ್ನು ಕೂಡ ಯಾವ ಮುಲಾಜು ಇಲ್ಲದಂತೆ ತರಾಟೆಗೆ ತೆಗೆದುಕೊಂಡಿದ್ದಾರೆ. ಈ ದಿಶೆಯಲ್ಲಿ ಅವರ 'ಕನ್ನಡ ಸಾಹಿತ್ಯ ವಿಮರ್ಶೆಯ ಇಕ್ಕಟ್ಟು ಮತ್ತು ಬಿಕ್ಕಟ್ಟು' 'ಕನ್ನಡ ಸಾಹಿತ್ಯ ಮತ್ತು ಬಹುಸಂಸ್ಕೃತಿ ಸಮಾಜ' 'ದಲಿತೋದ್ಧಾರ ಒಂದು ಸಂಕ್ಷಿಪ್ತ ಸಮೀಕ್ಷೆ' ಹಾಗೂ ವಿವಿಧ ಕವನ ಸಂಕಲನ ಮತ್ತು ವಿಮರ್ಶಾ ಸಂಕಲನಗಳಿಗೆ ಬರೆದ ಮುನ್ನುಡಿಗಳು ಅತ್ಯಂತ ಮಹತ್ವದವುಗಳಾಗಿವೆ. ಈ ಮುನ್ನುಡಿಗಳಲ್ಲಿ ಅಪ್ಪಟ ಕನ್ನಡ ಸಂಸ್ಕೃತಿ ಮತ್ತು ಕಾವ್ಯ ತತ್ವ ಸ್ವರೂಪಗಳ ಹೊಳವು ಕಂಡಿವೆ. ಮುಂಬರುವ ವಿಮರ್ಶಾಮಾರ್ಗದ ಬಗೆಗೆ ಆತ್ಮವಿಶ್ವಾಸ ಮತ್ತು ಆಶಾವಾದ ಮೂಡಿ ನಿಂತಿದೆ.

'ಸಂಸ್ಕೃತದ ಸಂಸ್ಕೃತಿ" ಪ್ರಾದೇಶಿಕ ಸಾಹಿತ್ಯ ಬರವಣಿಗೆಯ ಒಂದು ಮಾದರಿಯನ್ನು ರೂಪಿಸಿ ನಿಯಂತ್ರಿಸಿತು. ಅಂಥ ಮಾದರಿಯೇ ಭಾರತೀಯ ಸಾಹಿತ್ಯ ಸಂಸ್ಕೃತಿಯ ಪರಂಪರೆಯಾಗಿ, ಏಕ ಸಂಸ್ಕೃತಿಯ ಮುಂದಾಳತ್ವದಿಂದ (Hegemony) ಐಕ್ಯತೆ ಸಾಧಿಸುವ ಯಜಮಾನ ಸಂಸ್ಕೃತಿಯಾಯಿತು. ಅಂಥ ಭಾರತೀಯ ಸಂಸ್ಕೃತಿಯೇ ಪ್ರಾದೇಶಿಕ ಭಾಷೆಗಳಲ್ಲಿ ಪುನರುಜ್ಜೀವನ ಹೊಂದಿತು. ಇದರಿಂದ ಪ್ರಾದೇಶಿಕ ಸಾಹಿತ್ಯ ಮತ್ತು ಸಂಸ್ಕೃತಿಗಳು ಸೊರಗಿದವು. ಇಂತಹ ದುರಂತ ಸ್ಥಿತಿಯನ್ನೇ ದ್ವಿಭಾಷೆಯ (ಕನ್ನಡ-ಇಂಗ್ಲೀಷ್) ಬುದ್ಧಿಜೀವಿಗಳು ಕನ್ನಡ ಪ್ರಾಂತೀಯವಾಗದೇ ಭಾರತೀಯವಾಯಿತು ಎಂದು ವ್ಯಾಖ್ಯಾನಿಸಿದರು' ಎಂದು ಹೇಳುತ್ತ ಮುಂದುವರೆದು 'ವಿವಿಧ ಸಾಹಿತ್ಯ ಪ್ರಕಾರಗಳಿಗೆ ಕಾವ್ಯ ಕೇಂದ್ರಿತ ವಿಮರ್ಶೆಯ ತತ್ವಗಳನ್ನೇ ಅನ್ವಯಿಸಿದ್ದರಿಂದ, ಕನ್ನಡ ಸಾಹಿತ್ಯ ವಿಮರ್ಶೆಯ ಏಕಸೂತ್ರದಿಂದ ವಿಮರ್ಶೆಯ ಬಹುಮುಖ ಬೆಳವಣಿಗೆ ನಿಂತಿತು. ಜೊತೆಗೆ ರೂಪನಿಷ್ಠ ತಂತ್ರದಿಂದ ರಚನೆಯಾದ ಕೃತಿಗಳು ಅಚಾರಿತ್ರಿಕವಾಗಿ, ಪರಂಪರೆಯನ್ನೇ ನಿರಾಕರಿಸಿ, ಕೃತಿಗಳೇ ಸ್ವಯಂಭೂ ಆಗಿ ವಿಜೃಂಭಿಸಿದವು. ಆದರೆ ಅವು ನಿರಾಕರಿಸಿದ್ದು ಕನ್ನಡ ಪರಂಪರೆಯನ್ನೇ ಹೊರತು ಭಾರತೀಯ ಸಂಸ್ಕೃತಿಯ ಪರಂಪರೆಯನ್ನಲ್ಲ'. ದೇಶಿ ಸಂಸ್ಕೃತಿಯ ಇಂಥ ನಿರಾಕರಣವೇ ಮುಂದೆ ಸಂಸ್ಕೃತೀಕರಣ-ತದನಂತರ ಬ್ರಾಹ್ಮಣೀಕರಣವಾಗಲು ಕಾರಣವಾದುದನ್ನು ಇದರಿಂದಾಗಿ ವಸ್ತು ಪ್ರಧಾನ ಮತ್ತು ಅನ್ಯಶಿಸ್ತಿನ ಪ್ರಭಾವದ ರಚನೆಯನ್ನು ಹತ್ತಿಕ್ಕುವ ನಿಯಂತ್ರಣ ತಂತ್ರವಾಗಿ ಕನ್ನಡ ಸಂಸ್ಕೃತಿಯ ನಿಷೇಧವಾದುದನ್ನು ಅತ್ಯಂತ ಖಚಿತವಾಗಿ ಗುರುತಿಸುತ್ತಾರೆ.

ಈ ಹೊತ್ತಿಗೆ 'ಒಕ್ಕೂಟ ಮತ್ತು ಬಂಡಾಯ' ಲಿಂಗಾಯತರು ಮತ್ತು ಒಕ್ಕಲಿಗರದ್ದಾಯಿತು. ದಲಿತ ಸಾಹಿತ್ಯ ದಲಿತರದ್ದಾಯಿತು. ಹೀಗಾಗಿ ಬ್ರಾಹ್ಮಣ, ಬಂಡಾಯ ಮತ್ತು ದಲಿತ ಯಾವ ಸಾಹಿತ್ಯವೂ ಪ್ರವೇಶಿಸದ, ಅಭಿವ್ಯಕ್ತಿಯಿಂದ

ವಂಚಿತರಾದ ಅನೇಕ ಹಿಂದುಳಿದ ಕೆಳಸ್ತರಗಳ ವಿಸ್ತಾರವಾದ ಅನುಭಾವದ ಕತ್ತಲವಲಯ ತಮ್ಮ ತಮ್ಮ ಬಿಡುಗಡೆಗಾಗಿ ಇನ್ನೂ ಕಾಯುತ್ತಿವೆ ಎನ್ನುವ ನಾಗರಾಜಪ್ಪನವರ ಕಟು ಹಾಗೂ ಖಾರವಾದ ಮಾತನ್ನು ನಮ್ಮ ಗುಂಪುಗಾರಿಕೆಯ ಪ್ರವೀಣರು- ಸ್ವಯಂಘೋಷಿತ ವಿಮರ್ಶಕ ಸಾಹಿತಿ ಸೋಗಲಾಡಿಗಳು ಅರಗಿಸಿಕೊಳ್ಳುವುದಿರಲಿ ಎದೆಮುಟ್ಟಿ ನೋಡಿಕೊಂಡರೆ ಸಾಕಾದೀತು ನಡೆದ ದುರಂತವನ್ನರಿಯಲು!

ನಮ್ಮ ಪ್ರತಿಷ್ಠಿತ ಬುದ್ಧಿಜೀವಿ ವರ್ಗ ಯುರೋಪಿನ ವಿದ್ವಾಂಸರೊಂದಿಗೆ, ಸಂಸ್ಕೃತಿಯೊಂದಿಗೆ ಸಂವಾದ ನಡೆಸುತ್ತಾರೆಯೇ ಹೊರತು, ಬಹು ಸಂಸ್ಕೃತಿಯ ಜನರೊಂದಿಗೆ ಸಂಬಂಧವನ್ನು ಇಚ್ಚಿಸುವುದಿಲ್ಲ. ಅವರಿಗೆ ಹೆಣ್ಣು ಮತ್ತು ಹೆಂಡದ ತತ್ವ ಸಾರುವ ಉಮರ್ ಖಯಾಂ ಮತ್ತು ರ್ಯೂನ್ ಮತ್ತಿತರರ ಅನುಭಾವ ಸಾಹಿತ್ಯ ಹತ್ತಿರವಾಗುತ್ತದೆ. ಆದರೆ ಭಂಗಿಸೊಪ್ಪು ಹೆಂಡದ ಬಹು ಸಂಸ್ಕೃತಿಯ ತತ್ವ ಪದದವರು ಕ್ಷುದ್ರವಾಗುತ್ತಾರೆ. ಶಿಶುನಾಳ ಶರೀಫ್ ಪ್ರಿಯವಾಗುವಂತೆ ಅದೇ ಸಂಪ್ರದಾಯದ ಬಹು ಸಂಸ್ಕೃತಿಯ ಸಂತರು ಹಿಡಿಸುವುದಿಲ್ಲ. ಆಗಂತುಕನೊಂದಿಗೆ ಆತ್ಮೀಯತೆ ಆತ್ಮೀಯರೊಂದಿಗೆ ಆಗಂತುಕರಾಗಿ ವರ್ತಿಸುವುದು ಪ್ರತಿಷ್ಠಿತ ಸಮಾಜದ ಲಕ್ಷಣ. ಅದು ಅವರ ಛಾಪೈಕ್ಯತೆಯ ಸೂತ್ರ. ವಿದೇಶೀಯರಿಗೆ ದಾಸರಾಗಿ ಸ್ವದೇಶಿಯರಿಗೆ ಒಡೆಯರಾಗುವ ಇಬ್ಬಂದಿತನವೇ ನಮ್ಮ ಬದುಕಿನ ದುರಂತವೆನ್ನುವ ಪ್ರೊ|| ನಾಗರಾಜಪ್ಪನವರ ವಸ್ತುನಿಷ್ಠ ಮಾತುಗಳನ್ನು ವಿರೋಧಿಸಲು ಸಾಧ್ಯವಾದೀತೆ? ಪ್ರತಿಷ್ಠಿತ ವರ್ಗದ ಬರಹಗಾರರು ಮುಸ್ಲಿಂ ಮತ್ತು ಸ್ತ್ರೀ ದನಿಗಳನ್ನು ಮಾನ್ಯ ಮಾಡಿ ಬಹುಸಂಸ್ಕೃತಿಯ ಕೆಳವರ್ಗದ ದನಿಗಳನ್ನು ಹತ್ತಿಕ್ಕಲು ಮತ್ತು ತುಳಿಯಲು ಪ್ರಯತ್ನಿಸುತ್ತಾರೆ. ಏಕೆಂದರೆ ಮುಸ್ಲಿಂ ಮತ್ತು ಸ್ತ್ರೀ ದನಿಗಳು ಪ್ರತಿಷ್ಠಿತವರ್ಗಕ್ಕೆ ಪ್ರತಿಕ್ರಿಯೆಯಾಗಿ ಬರುವುದಿಲ್ಲ. ಆದ್ದರಿಂದ ಅಪಾಯವಿಲ್ಲ. ಆದರೆ ಪ್ರತಿಷ್ಠಿತವರ್ಗಕ್ಕೆ ತೀವ್ರ ಪ್ರತಿಕ್ರಿಯಾತ್ಮಕವಾಗಿ ಬರುವ ಬಹುಸಂಸ್ಕೃತಿಯ ದನಿಗಳು ಹೆಚ್ಚು ಅಪಾಯಕಾರಿಯಾಗಿರುತ್ತವೆ. ಮತ್ತು ವ್ಯವಸ್ಥೆಯ ಬುಡವನ್ನೇ ಅಲುಗಿಸುವ ಸ್ಫೋಟಕಗಳಾಗಿರುತ್ತವೆ ಎಂಬ ನಾಗರಾಜಪ್ಪನವರ ಮಾತು ಸಮಕಾಲೀನ ಸಂದರ್ಭಕ್ಕೆ ಹಿಡಿದ ಕನ್ನಡಿಯಂತಿದೆ.

ಹೀಗೆ ಪ್ರತಿಷ್ಠಿತರನ್ನು ತರಾಟೆಗೆ ತೆಗೆದುಕೊಂಡ ಪ್ರೊ| ನಾಗರಾಜಪ್ಪನವರು ಬಹುಸಂಸ್ಕೃತಿಯ ಅಕ್ಷರಸ್ಥರ ಪರವಾಗೇನೂ ವಕಾಲತ್ತು ಮಾಡುವುದಿಲ್ಲ. ಅವರ ದೋಷಗಳನ್ನೂ ಮುಖಕ್ಕೆ ರಾಚುವಂತೆ ಎತ್ತಿ ಹೇಳುತ್ತಾರೆ. ಶಾಶ್ವತ ಸೌಲಭ್ಯಕ್ಕಾಗಿ ಬಹುಸಂಸ್ಕೃತಿ ಜನರ, ಏಕ ಪ್ರತಿಷ್ಠಿತರ ಮೇಲಿನ ದ್ವೇಷ ಎಷ್ಟು ಕೆಟ್ಟದ್ದೋ, ಶಾಶ್ವತ ಸ್ಥಾಯೀ ಮೌಲ್ಯ ಪ್ರತಿಷ್ಠಿತರ, ಬಹುಸಂಸ್ಕೃತಿಯ ನಾಶ ಅಷ್ಟೇ ಕೆಟ್ಟದ್ದು. ಇವು ಕನ್ನಡ ನಾಡನ್ನು ಕಟ್ಟುವುದಕ್ಕೆ ಕನ್ನಡ ಸಾಹಿತ್ಯವನ್ನು ಬೆಳೆಸುವುದಕ್ಕೆ ಪ್ರೇರಕ ಶಕ್ತಿಯಾಗಲಾರವು ಎಂದು ಎಚ್ಚರಿಸುತ್ತಾರೆ.

ದಲಿತರಿಗೆ ಸಾಮಾಜಿಕ ನ್ಯಾಯ ಖಂಡಿತವಾಗಿಯೂ ದೊರಕಬೇಕಿದೆ. ಅವರಿಗೆ ಮೇಲು ಜಾತಿಯ ಮೊಸಳೆ ಕಣ್ಣೀರಿನ ಅನುಕಂಪ ಅನಗತ್ಯ. ಅವರಿಗೆ ನ್ಯಾಯಬದ್ಧವಾಗಿ

ದೊರಕಬಹುದಾದ ಹಕ್ಕುಗಳು ದೊರೆತರೆ ಸಾಕಾಗಿದೆ. ಪ್ರಾಥಮಿಕ ಅಗತ್ಯಗಳ ಪೂರೈಕೆಯ ಹಂತದಲ್ಲಿಯೇ ಒದ್ದಾಡುತ್ತಿರುವ ಮುಗ್ಧ ದಲಿತರ ಅಸಂಘಟನೆ, ಆಕ್ರೋಶ, ದುರಾಸೆ-ಇವೆಲ್ಲವೂ ಸಹಜವೇ. ಆದರೆ ದಲಿತ ಅಧಿಕಾರಿಗಳು ಭ್ರಷ್ಟರಾಗುತ್ತಿಲ್ಲವೆ ಎಂಬ ಪ್ರಶ್ನೆಗೆ 'ಬ್ರಾಹ್ಮಣರು ಮತ್ತು ಸವರ್ಣೀಯ ಅಧಿಕಾರಿಗಳು ಭ್ರಷ್ಟರಲ್ಲವೆ' ಎಂದು ಮರು ಪ್ರಶ್ನೆಯಿಂದ ಉತ್ತರಿಸಿದರೆ, ಅದರಲ್ಲಿ ಅವರ ದುರಂತ ಮತ್ತು ದೇಶದ ದುರಂತ ಅಡಗಿದೆ. ಮತಾಂತರ, ಧರ್ಮ, ಪಕ್ಷ ,ಸಿದ್ಧಾಂತ-ಯಾವುದರಿಂದಲೂ ಉದ್ಧಾರ ಅಸಾಧ್ಯ ಎಂದು ಅರಿತ, ದಲಿತರ ಉದ್ಧಾರ ದಲಿತರಿಂದಲೇ ಎಂಬ ಸತ್ಯದ ಅರಿವಾದಮೇಲೆ ನೈತಿಕ ಶಕ್ತಿಯೇ ಅವರ ಕ್ರಾಂತಿಯ ಆಯುಧವಾದಾಗ ಅವರ ಸರ್ವತೋಮುಖ ಅಭಿವೃದ್ಧಿ ಸಾಧ್ಯ ಎಂಬ ಮಾತು ನಮ್ಮ ಸಮಕಾಲೀನ ರಾಜಕೀಯ, ಸಾಮಾಜಿಕ ಮತ್ತು ಸಾಹಿತ್ಯಿಕ ಸಂದರ್ಭಕ್ಕೆ ಬರೆದ ಮುನ್ನುಡಿಯಂತಿದೆ.

ಈ ಬಗೆಯ ವಿಮರ್ಶಾ ಕ್ಷೇತ್ರದ ಇಕ್ಕಟ್ಟು-ಬಿಕ್ಕಟ್ಟುಗಳ ಮಧ್ಯೆಯೂ ಪ್ರೊ॥ ನಾಗರಾಜಪ್ಪನವರು ಹೊಸ ಆಶಾಕಿರಣವನ್ನು ಕಾಣುವವರಾಗಿದ್ದಾರೆ. ಆತ್ಮವಿಶ್ವಾಸವನ್ನು ತಾಳಿದವರಾಗಿದ್ದಾರೆ. ಅದಕ್ಕೆ ಅವರೇ ಹೇಳುವ ಈ ಕೆಳಗಿನ ಮಾತುಗಳೇ ಸಾಕ್ಷಿಯಾಗಿವೆ: "ಈಗ ಸಾಹಿತ್ಯದಲ್ಲಿ ಬೀಳುಗಾಲ ಪ್ರಾರಂಭವಾಗಿದೆ. ಆದರೆ ಬರಡಾಗುತ್ತಿದ್ದಂತೇ ಹೊಸ ಮೊಳಕೆ ಒಡೆಯುತ್ತಿದೆ. ಹಿಂದೆ ಅಕ್ಷರಸ್ಥ ವರ್ಗದ ವಂಶಸ್ಥರೇ ಸಾಹಿತ್ಯ ನಿರ್ಮಾಪಕರಾದರೆ ಇಂದು ಅನಕ್ಷರಸ್ಥ ವರ್ಗದಿಂದ ಬಂದ ಬರಹಗಾರರ ಬೇರೆ ಬೇರೆ ಸ್ತರದ ಸಂವೇದನೆಗಳು ಸಾಹಿತ್ಯದ ಹೊಸಯುಗದ ಆರೋಗ್ಯಕರ ವಾತಾವರಣ ನಿರ್ಮಾಣ ಮಾಡುತ್ತಿವೆ. ಹಿಂದೆ ಕವಿಯಿಂದ ಯುಗ, ಯುಗದಿಂದ ಕವಿ ಸೃಷ್ಟಿಯಾದರೆ, ಇಂದು ಕವಿ ಮತ್ತು ಯುಗ ಎರಡನ್ನೂ ಜನ ಸಂವೇದನೆ ನಿಯಂತ್ರಿಸುವ ಕಾಲ ಬಂದಿದೆ. 'ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂಬ ಮಾತಿನ ಅರ್ಥ ಇಂದು ಹೆಚ್ಚು ಪ್ರಸ್ತುತವಾಗಿದೆ. ಇಂದು ಅಲಿಖಿತ ಸಾಹಿತ್ಯಕ್ಕೂ ಮಾನ್ಯತೆ ದೊರೆಯುತ್ತಿದೆ. ಇನ್ನೂ ಪ್ರಯೋಗದ ಹಂತದಲ್ಲಿರುವ ಸ್ಥಿತಿಗತಿ ಎಲ್ಲರ ಕಣ್ಣಿಗೂ ರಾಚದಿರಬಹುದು ಅಥವಾ ಕಣ್ಣಿಗೆ ಬಿದ್ದವರು ಕಂಡೂ ಕಾಣದಂತೆ ಕುರುಡು ಜಾಣ್ಮೆಯನ್ನು ತೋರಬಹುದು. ಪ್ರತಿಷ್ಠಿತ ಬರಹಗಾರನ ಶೋಷಿತ ಶೋಷಕನಾಗುವ ಸಾಹಿತ್ಯದ ಮಾದರಿಗೆ ಬೆಲೆ ಇಲ್ಲದಾಗಿ, ಶೋಷಿತ ಶೋಷಿತನೊಂದಿಗೆ ಗುರುತಿಸಿಕೊಳ್ಳುವ ಮತ್ತು ಶೋಷಿತ -ಶೋಷಿಕ ಸಂಬಂಧಗಳ ಸ್ಪಷ್ಟತೆಯ ಅಸಲಿ ಸಂಸ್ಕೃತಿ ಮಾದರಿಯ ಸಾಹಿತ್ಯ ಸೃಷ್ಟಿಗೆ ಬೆಲೆ ಬರುತ್ತದೆ. ಆಗ ಬರವಣಿಗೆ ಮತ್ತು ವಿಮರ್ಶೆಯ ಮೌಲ್ಯಗಳು ತೀವ್ರ ಬದಲಾವಣೆ ಹೊಂದುವ ಕಾಲ ಬಹಳ ದೂರ ಇಲ್ಲ. ♦

"ಇವನ ಎತ್ತರಕೆ ಏರುವವರೂ ಇಲ್ಲ
ಇವ ಬಿದ್ದ ಕಂದರವ
ಬಗ್ಗಿ ನೋಡುವ ಎದೆಗಾರನೂ ಇಲ್ಲ "

-ಪ್ರೊ॥ ಕೆ.ಜಿ.ನಾಗರಾಜಪ್ಪ.

10. ವಿಮರ್ಶಕ ಅಘೋರಿ

ಪ್ರೊ॥ ಶಿವರಾಮಯ್ಯ

ಅಘೋರಿ ಎಂದರೆ ತಂತ್ರ ಜ್ಞಾನ ಸಾಧಕ. ಆತ ಯಾವತ್ತೂ ಸಮಷ್ಟಿಯ ಒಳಿತಿಗಾಗಿ ವಿಶ್ವಶಕ್ತಿಗಳನ್ನು ಪೂಜೆ ಮಂತ್ರ ತಂತ್ರಗಳ ಮೂಲಕ ಒಲಿಸಿಕೊಂಡು ದುಡಿಸಿಕೊಳ್ಳುವ ಸಂಯಮಿ. ಬುದ್ಧಿ ಮತ್ತು ದೇಹ ದಂಡನೆ ಎರಡಕ್ಕೂ ಇವನಲ್ಲಿ ಸಮಸ್ಥಾನ. ಇವನು ಕೆಳವರ್ಗದ ವಿಜ್ಞಾನ ಹಾಗೂ ತಂತ್ರ ಜ್ಞಾನದ ಅನ್ವೇಷಣೆಯ ಪ್ರತೀಕ. ಅವನ ಭಯಂಕರ ಸಾಧನೆಯನ್ನು ಕಂಡು ಕರುಬಿದ ಶಿಷ್ಟ ಸಮಾಜ ಅವನಿಗೆ 'ಅಘೋರಿ' ಎಂದು ಸನ್ಮಾನಿಸಿದೆ ಹಾಗೆಯೇ ಅವಮಾನಿಸಿದೆ. ಪ್ರೊ. ಕೆ.ಜಿ. ನಾಗರಾಜಪ್ಪನವರ ಬದುಕು, ಬರಹಗಳನ್ನು ಗಮನಿಸಿದರೆ ಇಂಥ ಅಘೋರಿಯ ನೆನಪಾಗುತ್ತದೆ. ಕನ್ನಡ ಸಾಹಿತ್ಯ ವಿಮರ್ಶನ ಲೋಕದಲ್ಲಿ ಅವರೊಬ್ಬ ಏಕಾಂಗೀ 'ಮರುಚಿಂತಕ' ಅಘೋರಿ. ಅವರ ಮರುಚಿಂತನೆಯ ಬಗ್ಗೆ ಮಾತನಾಡಬೇಕಾದರೆ ಕಟ್ಟೆಚ್ಚರ ಅಗತ್ಯ. ತಕ್ಕ ತಯ್ಯಾರಿ ಇಲ್ಲದೆ ಅವರ ಸಾಹಿತ್ಯ ವಿಮರ್ಶೆಯ ಇಕ್ಕಟ್ಟು-ಬಿಕ್ಕಟ್ಟುಗಳನ್ನು ಅರ್ಥಮಾಡಿಕೊಳ್ಳುವುದು ನಮಗೆ ಕಷ್ಟ. ಆದರೂ ನನಗೆ ತಿಳಿದಮಟ್ಟಿಗೆ ಈ 'ವಿಮರ್ಶಕ ಅಘೋರಿ'ಯನ್ನು ಕುರಿತು ಪರಿಚಯಿಸುವ ಒಂದು ಪುಟ್ಟ ಪ್ರಯತ್ನವನ್ನು ಇಲ್ಲಿ ಮಾಡುತ್ತಿದ್ದೇನೆ.

ಕೆ.ಜಿ.ಎನ್. ಅವರ ಚಿಂತನೆಯ ಧಾರೆ ಯಾವತ್ತೂ ಬಹು ಸಂಸ್ಕೃತಿಗಳ ಪರವಾದದ್ದು ಎಂಬ ಮಾತನ್ನು ಅವರ ಈವರೆಗಿನ ಎಲ್ಲಾ ವಿಮರ್ಶನ ಲೇಖನಗಳೂ ಸಾದರಪಡಿಸುತ್ತವೆ. ಈ ಮಾತಿಗೆ ನಿದರ್ಶನವಾಗಿ 'ಮರುಚಿಂತನೆ'ಯಲ್ಲಿರುವ 'ಶರಣರು-ಏಕಮುಖಿ ಚಿಂತಕರು', 'ವೀರಶೈವ ಧರ್ಮ ಮತ್ತು ಕನ್ನಡ ಸಾಹಿತ್ಯ', 'ಕನಕದಾಸನ ಕೀರ್ತನೆಗಳು', 'ನಾಮಧಾರಿ ಲಿಂಗಾಯಿತರು: ನೆಲೆ-ಹಿನ್ನೆಲೆ' ಮುಂತಾದ ಲೇಖನಗಳನ್ನೂ ಈಗ ಪ್ರಕಟವಾಗುತ್ತಿರುವ 'ಕನ್ನಡ ವಿಮರ್ಶೆಯ ಇಕ್ಕಟ್ಟು-ಬಿಕ್ಕಟ್ಟು' ಹೆಸರಿನ ಕೃತಿಯಲ್ಲಿರುವ 'ಅನುಭಾವ ಸಾಹಿತ್ಯ', 'ಶರಣರು-ಕಲಿವೀರಧೀರರು', 'ದೇವರ ದಾಸಿಮಯ್ಯ-ಮರುಚಿಂತನೆ', 'ಮಾಸ್ತಿ ಕಥಾ ಜಗತ್ತಿನಲ್ಲಿ ಧಾರ್ಮಿಕ ನೆಲೆಗಳು', 'ಸಾಹಿತ್ಯ ಮತ್ತು ಸಮಾಜಿಕ ನಿಲುವುಗಳು', 'ಗುಪ್ತ ಸಮಾಜಗಳು' ಮುಂತಾದ ಲೇಖನಗಳನ್ನು ನೋಡಬಹುದು.

'ಶರಣರು-ಏಕಮುಖಿಚಿಂತಕರು' ಎನ್ನುವ ಕೆ.ಜಿ.ಎನ್. ಶರಣರ ಬಗ್ಗೆ ಬರೆಯುತ್ತ "ಅವರು ಹಚ್ಚಿದ ಸಿಡಿಮದ್ದನ್ನು ಮಡಿಲಲ್ಲಿ ಕಟ್ಟಿಕೊಂಡೇ ಮತ್ತೊಂದು ಗುಡಾರಕ್ಕೆ ಸಿಡಿಮದ್ದು ಹಚ್ಚುವ ಸಾಹಸಕ್ಕೆ ಹೊರಟರು" ಎಂದು ರೂಪಕದಲ್ಲಿ ಹೇಳುವರು. ಏಕೆಂದರೆ ಅಂತರ ರಾಷ್ಟ್ರೀಯ ಸಮುದಾಯಗಳ ನಡುವೆಯೂ 'ವೀರಶೈವ' ಧರ್ಮ ಅತ್ಯಂತ 'ಸೆಕ್ಯೂಲರ್' ಎಂದು ವೈಭವೀಕರಿಸಿಕೊಳ್ಳುವ ಈ ಮತವು ಮಾಡಿದ್ದೇನು? "ಭಕ್ತ - ಭವಿ' ಎಂದು ವಿಂಗಡನೆ ಮಾಡಿದ ಶರಣ ಚಳುವಳಿ ಲಿಂಗಾಯತನಲ್ಲದ ಮನುಷ್ಯ

ವ್ಯಕ್ತಿಯನ್ನು ಕಡೆಗಣಿಸಲಿಲ್ಲವೆ? ಲಿಂಗದೀಕ್ಷೆ ಪಡೆದ ಶರಣರು ಮಾಡಿದ್ದೂ ಮಾತ್ರ 'ಕಾಯಕ'ವಾದರೆ ಉಳಿದಂತೆ ನಿತ್ಯ ಜೀವನಕ್ಕೆ ಹೋರಾಡುವ 'ಭವಿ'ಯ ದುಡಿಮೆಗೆ ಮಾನ್ಯತೆ ಎಲ್ಲಿ? ಹಾಗಾದರೆ 'ವೀರಶೈವ'ವು 'ಸೆಕ್ಯೂಲರ್' ಹೇಗಾಯಿತು? ಪ್ರಶ್ನೆಗಳನ್ನು ನಮ್ಮಮುಂದಿಡುತ್ತಾರೆ. 'ಕನಕದಾಸರ ಕೀರ್ತನೆಗಳು' ಎಂಬುದರಲ್ಲಿ ಶೂದ್ರ ಸಂಸ್ಕೃತಿಯಲ್ಲಿ ಯಾವ ಗುಣವೂ ಇಲ್ಲ ಎಂದು ನಿರಾಕರಿಸಿದ ಬಗ್ಗೆ ಮರುಚಿಂತನೆಗೆ ತೊಡಗುತ್ತಾರೆ. ಬತ್ತಲೆ ಸೇವೆ ಅನಾಗರೀಕವಾದರೆ, ವೈಷ್ಣವಪಂಥದ ರಾಸಲೀಲೆ ಹೇಗೆ ನಾಗರೀಕವಾಗುತ್ತದೆ ಎಂದು ಛೇಡಿಸುತ್ತಾರೆ. 'ದೇವರ ದಾಸಿಮಯ್ಯ-, ಮರುಚಿಂತನೆ' ಎಂಬ ಲೇಖನವನ್ನೂ ಇಲ್ಲಿಯೆ ಪರಿಶೀಲಿಸಬಹುದು. ದಾಸಿಮಯ್ಯನ ಸುತ್ತ ಹುತ್ತ ಕಟ್ಟಿದ ಪುರಾಣಗಳನ್ನು ಕೆದಕಿ ನೋಡಲು ಅವನ ವಚನಗಳೇ ಸಾಕ್ಷಿ ಇವೆ. ಅವುಗಳಲ್ಲಿ ಅವನ ಮನದ ಮಾತುಗಳು ವೃತ್ತಿಯ ಪರಿಭಾಷೆಯೊಂದಿಗೆ ಬೆರೆತು ಸೂಳ್ನುಡಿಗಳಾಗಿವೆ. ದೇವರದಾಸಿಮಯ್ಯನ ಕುರಿತ ಪುರಾಣಗಳಿಗೂ ಅವನ ವಚನಗಳಿಗೂ ಅರ್ಥಾತ್ ಸಂಬಂಧವಿಲ್ಲ "ಚರಿತ್ರೆಯನ್ನು ಪುರಾಣಮಾಡುವ ಪುರಾಣವನ್ನು ಚರಿತ್ರೆ ಮಾಡುವ (ಬಾಬರಿ ಮಸೀದಿಯ ಪ್ರಸಂಗದಂತೆ - ಲೇಖಕ) ನಮ್ಮ ವಿದ್ವಾಂಸರ ತಂತ್ರದಿಂದ ದಾಸಿಮಯ್ಯನ ಬಗ್ಗೆ ಗೊಂದಲವಿದೆಯೇ ಹೊರತು, ಅವನ ಬದುಕಿನಿಂದ ಬಂದ ಅನುಭಾವೀ ವಚನಗಳಲ್ಲಿ ಯಾವ ಗೊಂದಲವೂ ಇಲ್ಲ" ಎಂದು ಕೆ.ಜಿ.ಎನ್ ಅವರು ಮರುಚಿಂತನೆ ಮಾಡುವುದು ಸಹಜವಾಗಿದೆ. ಹಾಗಾಗಿ ಬಹುಸಂಸ್ಕೃತಿಯ ನಡುವೆ ಮೂಡಿ ಬಂದ ಕನಕದಾಸ, ದಾಸಿಮಯ್ಯಾ ಇವರಿಗೆ ಇಷ್ಟವಾಗುತ್ತಾರೆ.

"ನಾಮಧಾರಿ ಲಿಂಗಾಯಿತರು : ನೆಲೆ ಹಿನ್ನೆಲೆ" ಎಂಬ ಲೇಖನದಲ್ಲಿ ಗುಪ್ತ ಭಕ್ತರು ಮತ್ತು ಗುಪ್ತ ಸಮಾಜಗಳ ಬಗ್ಗೆ ವಿಶೇಷ ಆಸಕ್ತಿ ತಾಳುತ್ತಾರೆ. ಜೈನರು, ವೈದಿಕರು, ವೀರ ಶೈವರು ಮುಂತಾದ ಧರ್ಮಗಳ ನಡುವೆ ಉಳಿದು ಕೊಂಡು ಬಂದ, ಗುಪ್ತ ಸಮಾಜಗಳ ಸಮರ್ಥನೆಗೆ ತೊಡಗುತ್ತಾರೆ. ಕೆ.ಜಿ.ಎನ್ ಅವರು ಈಗ ಬರೆದಿರುವ 'ಗುಪ್ತ ಸಮಾಜಗಳು' ಎಂಬ ಲೇಖನಕ್ಕೆ ಇಲ್ಲಿಂದಲೇ ಪೂರ್ವಭಾವಿ ಸುಳುಹು ಸಿದ್ಧತೆಗಳು ಕಾಣಸಿಗುತ್ತವೆ. ಗುಪ್ತಸಮಾಜಗಳಲ್ಲಿ ಬ್ರಾಹ್ಮಣೀಕರಣಕ್ಕಿಂತ ಶೂದ್ರೀಕರಣವೇ ಮುಖ್ಯವಾಗುತ್ತದೆ ಎಂಬ ನಿಲುವು ಅವರದು. ಉರಿವ ಕೆಂಡಗಳನ್ನು ಮೈಮೇಲೆ ಸುರಿದು ಕೊಳ್ಳುವ ಗುಪ್ತ ಸಾಧಕನ ಹಾಗೆ ಕೆ.ಜಿ.ಎನ್ ಅವರು ಸಂಸ್ಕೃತಿಗಳ ವಿರಾಟ್ ಸ್ವರೂಪದ ಬಗ್ಗೆ ಮರುಚಿಂತನೆಗೆ ತೊಡಗುತ್ತಾರೆ.

"ಕನ್ನಡ ಸಾಹಿತ್ಯ ವಿಮರ್ಶೆಯ ಇಕ್ಕಟ್ಟು-ಬಿಕ್ಕಟ್ಟು" ಸಂಕಲನದಲ್ಲಿರುವ 'ಶರಣರು -ಕಲಿವೀರಧೀರರು' ಎಂಬ ಲೇಖನದಲ್ಲಿ 'ದಯವೇ ಧರ್ಮದ ಮೂಲವಯ್ಯ' ಎಂದ ವೀರಶೈವ ಧರ್ಮ ವಚನಕಾರರ ಕಾಲವನ್ನು ದಾಟಿ ಕಾವ್ಯಗಳ ಕಾಲದಲ್ಲಿ ಮತೀಯ ಮೂಲಭೂತವಾದವನ್ನು ಎತ್ತಿಹಿಡಿದ ಬಗ್ಗೆ ಕೆ.ಜಿ.ಎನ್ ಪರಿಶೀಲಿಸುವರು. ವೀರಶೈವದಲ್ಲಿ ವೀರಭದ್ರ ಸಂಪ್ರದಾಯ ಹಿಂಸಾ ರಭಸ ಮಾರ್ಗವನ್ನು ಎತ್ತಿ ಹಿಡಿದರೆ, ಅಲ್ಲಮ ಸಂಪ್ರದಾಯ ಅಹಿಂಸಾಮಾರ್ಗವನ್ನು ಪ್ರತಿಪಾದಿಸಿತು. ವಚನ ಹಾಗೂ ಕಾವ್ಯಗಳ ಆಧಾರದಿಂದ ಈ ಅಂಶವನ್ನು ಸ್ಪಷ್ಟ ಪಡಿಸುತ್ತಾರೆ. ಆದಯ್ಯ ಮತ್ತು ಏಕಾಂತ ರಾಮಯ್ಯ

ಇವರು ವೀರಭದ್ರ ಸಂಪ್ರದಾಯದ ಗಣಾಚಾರದವರು : ಆದರೆ ಅಲ್ಲಮ ಸಂಪ್ರದಾಯ ಬೌದ್ಧ ದರ್ಮದಿಂದ ಪ್ರಭಾವಿತ ಅಹಿಂಸಾ ಮಾರ್ಗದ್ದು. ಆದರೂ ಈಗ 'ದಯವೇ ಧರ್ಮದ ಮೂಲ' ಎಂಬ ಅಹಿಂಸಾತತ್ತ್ವವನ್ನು ಗುತ್ತಿಗೆ ಪಡೆದವರಂತೆ ವರ್ತಿಸುವ ಗಣಾಚಾರ ಪದ್ಧತಿಯ ವೀರಶೈವ ಧರ್ಮದ ದುಷ್ಟನೀತಿಯನ್ನು ಖಡಾಖಂಡಿತವಾಗಿ ಕೆ.ಜಿ.ಎನ್ ವಿರೋಧಿಸುವರು. ಇದರಿಂದಾಗಿ ವೀರಶೈವ ಮೂಲಭೂತವಾದಿಗಳ ಕೆಂಗಣ್ಣಿಗೆ ಪಾತ್ರರಾದರು.

ಡಾ।। ಅಂಬೇಡ್ಕರ್, ಬದುಕು ಮತ್ತು ಬರಹಗಳು " ಎಂಬ ಲೇಖನದಲ್ಲಿ ಸದಾ ಸಂಘರ್ಷಣೆಯಲ್ಲಿಯೇ ಕ್ರಾಂತಿಯಲ್ಲಿಯೇ ಅರ್ಥ ಕಂಡುಕೊಂಡ ಅಂಬೇಡ್ಕರ್ ಅವರ ಬದುಕು ಮತ್ತು ತತ್ವಗಳು ಕೆ.ಜಿ.ಎನ್ ಅವರ ಗಮನ ಸೆಳೆದದ್ದು ಸ್ವಾಭಾವಿಕವೇ. ಅಂಬೇಡ್ಕರ್ ಇಂದಿನ ಪರಿಸ್ಥಿತಿಗೆ ಎಷ್ಟರಮಟ್ಟಿಗೆ ಪ್ರಸ್ತುತ ಎಂಬುದನ್ನು ಪ್ರಸ್ತಾಪಿಸುತ್ತಾರೆ. ಅಂಬೇಡ್ಕರ್ ಮನುಸ್ಮೃತಿ ಸುಡುವುದರಿಂದ ಮೊದಲುಗೊಂಡು, ಕಡೆಗೆ ಅವರು ಬೌದ್ಧ ಧರ್ಮವನ್ನು ಸ್ವೀಕರಿಸಿದ ಪ್ರಸಂಗದವರೆಗೂ ಯಾವ ಪ್ರಸಂಗಗಳೂ ಅವರನ್ನು ದಲಿತ ಪ್ರಜ್ಞೆಯಿಂದ ವಿಚಲಿತರನ್ನಾಗಿಸಲಿಲ್ಲ ಎಂಬ ಅಂಶವನ್ನು ಮನಗಂಡರೆ ಅಂಬೇಡ್ಕರ್ ಅವರ ದ್ವಂದ್ವ ಮತ್ತು ಗೊಂದಲಗಳು ಬಗೆಹರಿಯುತ್ತವೆ ಎಂಬುದಾಗಿ ಲೇಖಕರು ಸರಿಯಾಗಿಯೇ ಗ್ರಹಿಸುತ್ತಾರೆ. ಗಾಂಧಿ ಹಾಗೂ ಅಂಬೇಡ್ಕರ್ ಅವರ ವಿಭಿನ್ನ ವ್ಯಕ್ತಿತ್ವವನ್ನು ತುಲನೆ ಮಾಡುತ್ತ ಗಾಂಧೀಜಿ ರಾಜಕೀಯ ಸ್ವಾತಂತ್ರ್ಯಕ್ಕೆ ಧರ್ಮವನ್ನು ಬಳಸಿದರೆ ಅಂಬೇಡ್ಕರ್ ಸಾಮಾಜಿಕ ಬದಲಾವಣೆಗೆ ರಾಜಕೀಯ ಬೆರಸಿದ್ದು ಸಾಂದರ್ಭಿಕ ಅಗತ್ಯವಾಗಿತ್ತು ಎಂದು ಕೆ.ಜಿ.ಎನ್ ಅವರು ಬರುವ ತೀರ್ಮಾನ ಗ್ರಾಹ್ಯವಾಗಿ ಕಾಣುತ್ತದೆ. ಮತ್ತು ಅಂಬೇಡ್ಕರ್ ಪ್ರಸ್ತುತತೆ ಎಂದರೆ ಅವರ ಇಬ್ಬಾಯ ಖಡ್ಗ ನೀತಿ. ಇತ್ತ ಮೇಲ್ ಜಾತಿಗಳ ತಾರತಮ್ಯ ಭಾವನೆಗಳನ್ನು ಬುಡಮಟ್ಟ ಸಮಾಧಿ ಹಾಕುತ್ತಾರೆ, ಅತ್ತ ಶೂದ್ರ ವರ್ಗ ಭ್ರಷ್ಟವಾಗದಂತೆ ಎಚ್ಚರಿಕೆಯನ್ನು ನೀಡುತ್ತಾರೆ. ಪರಿಶಿಷ್ಟವರ್ಗ/ಜಾತಿಗಳು ನೀತಿ ನಿರಂತರರಾಗಿ, ಪ್ರಾಮಾಣಿಕರಾಗದಿದ್ದರೆ ಅವರ ಉದ್ಧಾರ ಸಾಧ್ಯವಿಲ್ಲ ಎಂದು ನಿಷ್ಠುರವಾಗಿ ಹೇಳುವುದು ಕೆ.ಜಿ.ಎನ್ ಅವರ ಮೆಚ್ಚಿಗೆಗೆ ಪಾತ್ರವಾಗುವುದು. ಇದೇ ಅಭಿಪ್ರಾಯ 'ದಲಿತೋದ್ಧಾರ-ಒಂದು ಸಂಕ್ಷಿಪ್ತ ಸಮೀಕ್ಷೆ' ಎಂಬ ಲೇಖನದಲ್ಲೂ ವ್ಯಕ್ತವಾಗುತ್ತದೆ. ದಲಿತರ ಉದ್ಧಾರ ದಲಿತರಿಂದಲೇ ಸಾಧ್ಯ 'ಅನ್ಯಥಾ ಶರಣಂ ನಾಸ್ತಿ' ಎಂಬ ಸೂತ್ರವನ್ನು ಅವರು ಈ ಲೇಖನದಲ್ಲಿ ಎತ್ತಿ ಹಿಡಿಯುವುದು ಅತ್ಯಂತ ಸಕಾಲಿಕವಾಗಿದೆ. "ಡಿ.ವಿ.ಜಿ : ಶ್ರೀರಾಮ ಪರೀಕ್ಷಣಂ - ಒಂದು ಚಿಂತನೆ" ಎಂಬ ಲೇಖನ ಕೃತಿಯ ಪರಿಚಯಾತ್ಮಕವಾಗಿದೆಯಾದರೂ ಲವಕುಶರ ಸಂದರ್ಶದ ನಂತರ ರಾಮನು ಸೀತೆಯನ್ನು ಮತ್ತೆ ಅಯೋಧ್ಯಗೆ ಆಹ್ವಾನಿಸುವುದು, ಅದಕ್ಕೆ ಆಕೆ ಸಮ್ಮತಿಸದೆ ಪ್ರತಿಭಟನಾತ್ಮಕವಾಗಿ ಭೂದೇವಿಯಲ್ಲಿ ಐಕ್ಯವಾಗಿ ಹೋಗುವುದು - ಇದು ಆರ್ಯ ಸಂಸ್ಕೃತಿಯ ವಿರುದ್ಧ ಸ್ತ್ರೀಯ ಪ್ರತಿಭಟನೆ ಎಂಬುದಾಗಿ ಕೆ. ಜಿ. ಎನ್ ಅವರು ಗುರ್ತಿಸುವುದು ಅವರ ಮರುಚಿಂತನೆಗೆ ಸಾಕ್ಷಿಯಾಗಿದೆ.

" ಮಾಸ್ತಿ ಕಥಾ ಜಗತ್ತಿನಲ್ಲಿ ಧಾರ್ಮಿಕ ನೆಲೆಗಳು " - ಇದು ಅನೇಕ ಒಳನೋಟಗಳಿಂದ ಕೂಡಿದ ಲೇಖನ. ಮಾಸ್ತಿ ಸಾಹಿತ್ಯದ ನೆಲೆ - ಬೆಲೆಯನ್ನು ಕುರಿತು

ಇಷ್ಟು ಗಟ್ಟಿ ಧ್ವನಿಯಿಂದ ಮಾತನಾಡಿದ ಕನ್ನಡ ವಿಮರ್ಶಕನಿಲ್ಲ. ಮಾಸ್ತಿಯವರು ಮಹಾ ಮಾನವತಾವಾದಿ ಎಂದು ಹೇಳುವುದೇನೋ ಸರಿ. ಆದರೆ ಅವರ ಕಥೆಗಳಲ್ಲಿ ಸನಾತನ ಧರ್ಮದ ವಿರುದ್ಧ ಪ್ರತಿಭಟಿಸಿ ನಿಂತ ಮತ್ತೊಂದು ಧರ್ಮದ ವ್ಯಕ್ತಿ ಎಲ್ಲಿಯೂ ಕಂಡು ಬರುವುದಿಲ್ಲ. ಅದರಲ್ಲೂ 'ವೀರಶೈವ ಧರ್ಮ ಕಳಂಕಿತವಾದುದು' ಎಂಬ ನಿಲುವು ಮಾಸ್ತಿಯರದು ಎಂಬುದಕ್ಕೆ ಅನೇಕ ಪುರಾವೆಗಳಿವೆ. 'ಪಂಡಿತನ ಮರಣ ಶಾಸನ' ಎಂಬಕಥೆ, ಚಿಕವೀರರಾಜೇಂದ್ರ ಹಾಗೂ ಚೆನ್ನಬಸವನಾಯಕ ಕಾದಂಬರಿಗಳು ಮೇಲಿನ ಮಾತನ್ನು ಸಮರ್ಥಿಸುತ್ತವೆ. 'ವೀರಶೈವಧರ್ಮದ ದೊರೆಗಳ, ರಾಣಿಯರ ನೀತಿಗೆಟ್ಟ ನಡತೆಯಿಂದ ಕೊಡಗು ಹಾಗೂ ಬಿದನೂರು ಸಂಸ್ಥಾನಗಳು ಪತನ ಹೊಂದಿದವು ಎಂಬುದಾಗಿ ಮಾಸ್ತಿ ಕಲ್ಪಿಸಿ ಕಥೆ ಹೇಳುವುದು ಎಷ್ಟರ ಮಟ್ಟಿಗೆ ಉಚಿತ ಎಂದು ಪ್ರಶ್ನಿಸಬಹುದಾಗಿದೆ. ಇದೇ ಸಂಸ್ಥಾನಗಳನ್ನು ಸನಾತನ ಧರ್ಮಾನುಯಾಯಿಗಳು ಆಳುತ್ತಿದ್ದ ಪಕ್ಷಕ್ಕೆ ವಸಾಹತು ಶಾಹಿ ಆಂಗ್ಲರ ವಿರುದ್ಧ ಪ್ರತಿಭಟಿಸಿ ನಿಲ್ಲುತ್ತಿದ್ದವೆ ಎಂಬುದು ವಾಸ್ತವಿಕ ಪ್ರಶ್ನೆ. ಮಾಸ್ತಿಯವರ ತಿಳುವಳಿಕೆ ಎಂದರೆ, ಬ್ರಾಹ್ಮಣ ಸಂಸ್ಕೃತಿ ಎಂದರೆ ಅಣ್ಣ ಸಂಸ್ಕೃತಿ, ಅಂಥ ಸಂಸ್ಕೃತಿಯ ಮುಖವಾಣಿಗಳು ಮಾಸ್ತಿಯವರ ಕಥೆಗಳು ಎಂಬುದು ಕೆ.ಜಿ.ಎನ್ ತೀರ್ಮಾನ. "ಸನಾತನ ಧರ್ಮದ ಮೌಲ್ಯಗಳಿಗೆ ಮಾಸ್ತಿಯವರ ಕಥೆಗಳು ಬದ್ಧವಾಗಿವೆ. ಭಾರತಕ್ಕೆ ಏಕೆ ಇಡಿ ಜಗತ್ತಿಗೇ ಆಧ್ಯಾತ್ಮಿಕ ಸಂಪತ್ತಿನಲ್ಲಿ ವೈದಿಕದ ಸನಾತನ ಧರ್ಮ ಅತ್ಯಂತ ಶ್ರೇಷ್ಠ ಎಂಬುದೇ ಮಾಸ್ತಿಯವರ ಕಥೆಗಳ ಮೂಲ ಶ್ರುತಿ" ಎಂದು ಮಾಸ್ತಿಯರ ಕಥೆಗಳ ಇತಿಮಿತಿಯನ್ನು ಮನ ಗಾಣಿಸುತ್ತಾರೆ.

"ಕನ್ನಡ ಸಾಹಿತ್ಯ ಮತ್ತು ಬಹು ಸಂಸ್ಕೃತಿ ಸಮಾಜ" ಎಂಬ ಈ ಲೇಖನದಲ್ಲಿ ಕೆ.ಜಿ.ಎನ್ ಅವರು ಗ್ರಾಮೀಣ ಬರಹಗಾರರ ಕೃತಿಗಳನ್ನು ಕುರಿತು ಲಘುವಾಗಿ ಮಾತನಾಡುವ ನಗರ ವಿಮರ್ಶರ ಮೇಲೆ ಕಿಡಿಕಾರುತ್ತಾರೆ. ಇದು ಅನುದಾರಿತ ವಿಮರ್ಶೆ ಎಂದ ಲೇಖಕರು ನಗರ ಹಾಗೂ ಗ್ರಾಮೀಣ ಸಂದರ್ಭದ ಬರಹಗಾರರ 'ಟೊಳ್ಳು ಗಟ್ಟಿ' ತನಗಳನ್ನು ವಿಶ್ಲೇಷಿಸಿ ಬಟ್ಟ ಬಯಲು ಮಾಡುತ್ತಾರೆ. ಬಹು ಸಂಸ್ಕೃತಿಯನ್ನು ಗರ್ಭೀಕರಿಸಿಕೊಂಡಿರುವ ಗ್ರಾಮೀಣ ಬರಹಗಾರರ ಸಂಚಾರಿ ಸಿಟ್ಟು, ರೋಷ, ಆವೇಶಗಳನ್ನು ನಗರ ಕೇಂದ್ರಿತ ವಿಮರ್ಶಕರು ಸ್ಥಾಯಿ ಎಂದು ಪರಿಗ್ರಹಿಸಿ ವಿಮರ್ಶಿಸುವುದು ಸೂಕ್ತವಲ್ಲ ಎಂದು ಗಟ್ಟಿ ಮಾತಿನಲ್ಲಿ ಗುಡುಗಿದ್ದಾರೆ. ಈ ಕಾದಂಬರಿ ಯುಗದಲ್ಲೂ ಕುಳಿತು ಮಹಾಕಾವ್ಯಗಳನ್ನು ಬರೆವ ಪುರಾಣಕವಿಗಳು ಸಾಧಿಸಿದ್ದೇನು ಎಂದು ಪ್ರಶ್ನಿಸುತ್ತಾರೆ. ಕ್ಷೇತ್ರ ಕಾರ್ಯಮಾಡಿ ಗದ್ಯ ಕೃತಿಗಳನ್ನು ಏಕೆ ಬರೆಯಬಾರದು? ನಗರ ಕೇಂದ್ರಿತ ಹುಸಿ ಸಂಸ್ಕೃತಿಯನ್ನು ಹೊಗಳುತ್ತ ಕಾಲಯಾಪನೆ ಗೈವ ಕನ್ನಡ ವಿಮರ್ಶಕರು ಅಂಥ ಕೃತಿಗಳನ್ನು ಸದರ್ಥದಲ್ಲಿ ಗ್ರಹಿಸಬೇಕು ಎಂದು ಕೆ.ಜಿ.ಎನ್ ಸೂಚಿಸುವುದು ಸಮಂಜಸವೇ ಸರಿ. ಪ್ರತಿಷ್ಠಿತ ವರ್ಗದ ವಕ್ತಾರರಾದ ವಿಮರ್ಶಕರು ಸ್ತ್ರೀ ಸಂವೇದನೆ ಹಾಗೂ ಮುಸ್ಲಿಂ ಸಂವೇದನೆಯಿಂದ ಬರುವ ಕೃತಿಗಳನ್ನು ಸ್ವಾಗತಿಸುತ್ತಾರಾದರೂ, ಬಹು ಸಂಸ್ಕೃತಿಯ ದನಿಯಾಗಿ ಮೂಡಿಬರುತ್ತಿರುವ ದಲಿತ-ಬಂಡಾಯ ಸಂವೇದನೆಯನ್ನು ಏಕೆ ಗುರ್ತಿಸುವುದಿಲ್ಲ ಎಂದು ಪ್ರಶ್ನಿಸುತ್ತಾರೆ. ಒಟ್ಟಾರೆಯಾಗಿ ಪ್ರಸ್ತುತ ದಲಿತ-ಬಂಡಾಯ ಎಂದು

ವರ್ಗೀಕರಿಸಲ್ಪಟ್ಟಿರುವ ಬಹುಮುಖೀ ಸಂಸ್ಕೃತಿಯಿಂದ ಮೂಡಿ ಬರುತ್ತಿರುವ ಸಾಹಿತ್ಯವನ್ನು ಆರೋಗ್ಯಕರ ದೃಷ್ಟಿಯಿಂದ ವಿಮರ್ಶಿಸಬೇಕಲ್ಲವೆ ಎಂಬುದು ಕೆ.ಜಿ.ಎನ್ ಅವರ ಕಳಕಳಿಯ ಪ್ರಶ್ನೆ.

" ಅನುಭವ ಸಾಹಿತ್ಯ " ದ ಬಗ್ಗೆ ಕೆ.ಜಿ.ನಾಗರಾಜಪ್ಪನವರಿಗೆ ವಿಶೇಷ ಆಸಕ್ತಿ. ಅನುಭಾವಿಗಳು, ಸಂತರು, ಗುಪ್ತಸಾಧಕರು, ತಾಂತ್ರಿಕರು ಇವರ ಬಗ್ಗೆ ಲೇಖಕರಿಗೆ ಅಪಾರ ಕಾಳಜಿ, ಕುತೂಹಲ, ವಿಸ್ಮಯ. ಜಗತ್ ಸಾಹಿತ್ಯದಲ್ಲಿ ಅನುಭವ ಸಾಹಿತ್ಯ ಪ್ರತ್ಯೇಕವಾಗಿ ಬೆಳೆಯುವಷ್ಟು ಶಕ್ತಿ ಸಾಮಗ್ರಿ ಹೊಂದಿದೆ ಎಂಬುದು ಇವರ ಅನ್ನಿಸಿಕೆ. ಬೈಬಲ್ ,ಕುರಾನ್ , ವೇದಗಳಿಗೆ ಬರೆದ ಶಿಷ್ಟ ವ್ಯಾಖ್ಯಾನಗಳು ಸುಲಿಗೆಯ ಸಾಧನಗಳಾಗಿವೆ. ಪ್ರತಿಭಟನೆಯ ಸ್ವರೂಪದ ವ್ಯಾಖ್ಯಾನಗಳು ಬಂದಾಗ ಅವು ಕಸಿವಿಸಿಗೊಂಡಿವೆ. ಪ್ರತಿಭಟನೆಯ ಸ್ವರೂಪದ ವ್ಯಾಖ್ಯಾನಗಳಲ್ಲಿ ಬಗೆಬಗೆಯ ಒಳಪಂಗಡಗಳು ಇವೆ. ಪ್ರತಿಭಟನೆಯ 'ಪ್ರಾಟೆಸ್ಟೆಂಟರು' ಪ್ರತಿಯೊಂದು ಧರ್ಮದಲ್ಲೂ ಇದ್ದಾರೆ. ಇಂಥ ಪಂಥಗಳಿಗೆ ಅರಮನೆ ಗುರುಮನೆಗಳ ಆಶ್ರಯವಿಲ್ಲದೆ ಜನಾಶ್ರಯದಲ್ಲಿಯೆ ಬೆಳೆದು ಬಂದವು. ವಿವಿಧ ವೃತ್ತಿಯ ಈ ಸಾಧಕರಿಗೆ ಅವರವರ ವೃತ್ತಿಗಳೇ ಆರಾಧನೆಯ ಸಾಧನಗಳಾಗಿ ಪರಿಣಮಿಸಿದವು. ಇವರದೇ ನಿಜವಾದ ಅನುಭಾವಿ ಪಂಥ, ಅದರಿಂದ ರಚಿತವಾದ ಸಾಹಿತ್ಯವೇ ನಿಜವಾದ ಅನುಭಾವ ಸಾಹಿತ್ಯ ಎಂದಾಯಿತು.

ಅಧ್ಯಯನದ ಅನುಕೂಲಕ್ಕಾಗಿ ಕೆ.ಜಿ.ಎನ್ ಅವರು ಜಗತ್ತಿನ ಅನುಭಾವಿ ಸಾಹಿತ್ಯವನ್ನೆಲ್ಲ ಮೂರು ಮುಖ್ಯ ಭಾಗಗಳನ್ನಾಗಿ ವಿಂಗಡಿಸಿ, ಮೂಲ ಧಾರ್ಮಿಕ ಗ್ರಂಥಗಳಲ್ಲಿ ಬರುವ ಅನುಭಾವ; ಅವುಗಳ ವ್ಯಾಖ್ಯಾನದಲ್ಲಿ ತೋರಿಬರುವ ಅನುಭಾವ ಮತ್ತು ಮೂಲ ಹಾಗೂ ವ್ಯಾಖ್ಯಾನ ಗ್ರಂಥಗಳನ್ನು ತಿರಸ್ಕರಿಸಿ ಹುಟ್ಟಿಕೊಂಡಿರುವ ಅಲಿಖಿತ ಅನುಭಾವ ಎಂದು ಕರೆಯುತ್ತಾರೆ. ' ಸದಾ ಭಗವಂತನ ಹುಚ್ಚು ಹಿಡಿಸಿಕೊಂಡವನೇ ಅನುಭಾವಿ'. ಶರಣರ ಸೂಳ್‌ನುಡಿಗಳಲ್ಲಿ ಅವನ ಸ್ವರೂಪ ವ್ಯಕ್ತವಾಗುತ್ತದೆ. ಅನುಭಾವಿಗಳು ವ್ಯವಸ್ಥೆಯ ವಿರುದ್ಧ ದಂಗೆ ಎದ್ದ ಕ್ರಾಂತಿಕಾರಿಗಳು. ಆ ಕಾರಣದಿಂದಾಗಿಯೇ ಅವರು ಶಿಷ್ಟ ಸಮಾಜದ ಚಿತ್ರ ಹಿಂಸೆಗೆ ಗುರಿಯಾಗಿದ್ದಾರೆ. ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ಇಂಥ ಅನುಭಾವಿಗಳನ್ನು ನಿಯಂತ್ರಿಸಲು ಬಹುವಾಗಿ ಪ್ರಯತ್ನಿಸಿವೆ. ಹಿಂದೂ ಮುಸ್ಲಿಂ ಸಂಘರ್ಷ ಇಂಡಿಯಾದಲ್ಲಿ ಅಧಿಕವಾಗಿದ್ದುದರಿಂದಲೇ ಎರಡರ ಸಾಮರಸ್ಯವನ್ನು ಬೋಧಿಸುವ ಪಂಥಗಳು ಇಲ್ಲಿ ಅನಿವಾರ್ಯವಾದವು ಎಂಬುದನ್ನು ಸರಿಯಾಗಿಯೆ ಗ್ರಹಿಸುತ್ತಾರೆ. ಹಿಂದೂ ಕ್ರೈಸ್ತಧರ್ಮಗಳ ನಡುವೆ ಸಂಘರ್ಷ ಇಲ್ಲವಾದ ಕಾರಣ ಧಾರ್ಮಿಕ ಸಂಕರ ಪರಿಭಾಷೆ ಇಲ್ಲಿ ಕಸಿಗೊಳ್ಳಲಿಲ್ಲ. ಹೀಗೆ ಹತ್ತಾರು ಪುಟದ ಈ ಲೇಖನದಲ್ಲಿ ಅನುಭಾವ ಸಾಹಿತ್ಯದ ಬಗ್ಗೆ ವಿಶ್ಲೇಷಣೆಯನ್ನು ಬೆಳಸುತ್ತಾರೆ. ಅನುಭಾವ ಅಂತರ್ಮುಖಿಯಾದದ್ದು, ಅನುಭಾವಿ ಅಂತರ್ಮುಖಿ, ಅದನ್ನು ಭಾಷೆಯಲ್ಲಿ ಹಿಡಿದಿಡುವ ಪ್ರಯತ್ನವಾಗಿ ಹುಟ್ಟಿಕೊಂಡ ಸಾಹಿತ್ಯವೇ ಅನುಭಾವ ಸಾಹಿತ್ಯ. ಜಗತ್ತಿನ ಅನೇಕಾನೇಕ ಅನುಭಾವಿ ಸಾಧಕರ ಸಾಹಿತ್ಯವನ್ನು ಉಲ್ಲೇಖಿಸುವ ಮೂಲಕ ಕೆ.ಜಿ.ಎನ್ ಅವರು ಅನುಭಾವ ಸಾಹಿತ್ಯದ ಪರಿಚಯವನ್ನು

ಮಾಡಿಕೊಡುತ್ತಾರೆ. ಸು.1987ರಲ್ಲಿ ಬರೆದ ಅವರ 'ಅನುಭಾವ ಸಾಹಿತ್ಯ ' ಎಂಬ ಲೇಖನವು ಅವರ ಪ್ರಸ್ತುತ 'ಗುಪ್ತ ಸಮಾಜಗಳು' ಎಂಬ ಲೇಖನಕ್ಕೆ ಪೂರ್ವ ಸಿದ್ದತೆಯೇ ಎಂಬಂತೆ ಕಾಣುತ್ತದೆ. ಕೆ.ಜಿ.ಎನ್ ಅವರ ಚಿಂತನೆಯ ದಿಕ್ಕು ಎತ್ತ ಸಾಗುತ್ತಿದೆ ಎಂಬುದಕ್ಕೆ ಅವರ ಈ ಲೇಖನ ಸಾಕಷ್ಟು ಸುಳುಹು ನೀಡುತ್ತದೆ.

'ಗುಪ್ತ ಸಮಾಜಗಳು' ಎಂಬ ಲೇಖನದ ಪ್ರವೇಶ ಮಾಡುವ ಮುನ್ನ ಖಾಸಗಿಯಾಗಿ ಎರಡುಮಾತು ಹೇಳಬೇಕಿದೆ. ಎಂಬತ್ತರ ದಶಕದಲ್ಲಿ ನಾನು ಬೆಂಗಳೂರಿನಿಂದ ತುಮಕೂರಿಗೆ ರೈಲಿನಲ್ಲಿ ಹೋಗಿಬರುತ್ತಿದ್ದೆ. ಕೆ.ಜಿ. ನಾಗರಾಜಪ್ಪನವರು ಅತ್ತಕಡೆಯಿಂದ ಬೆಂಗಳೂರಿಗೆ ಬಂದು ಹೋಗುತ್ತಿದ್ದರು. ಮಧ್ಯೆ ಸಂಧಿಸಿದಾಗ ಒಂದು ದಿನ 'ನೀವೇಕೆ ರೈಲ್ವೆ ಪಾಸ್ ಮಾಡಿಸಿ ಕೊಂಡು ಬೆಂಗಳೂರಿಗೆ ಸುತ್ತುತ್ತೀರಿ' ಎಂದರೆ 'ಮಿಥಿಕ್ ಸೊಸೈಟಿಯ ಲೈಬ್ರರಿಗೆ ಹೋಗಿಬರ್ತೀನಿ' ಎನ್ನುತ್ತಿದ್ದರು. ನಾನು ಇವರಿಗೆಲ್ಲೊ ತಿಕ್ಕಲು, ಅಲ್ಲಿಂದ ಬೆಂಗಳೂರಿಗೆ ಯಾರಾದರೂ ಲೈಬ್ರರಿಗೆ ಬರುತ್ತಾರೆಯೆ, ಅದೂ ಈ ವಯಸ್ಸಿನಲ್ಲಿ, ಇಂಥ ಕಾಲದಲ್ಲಿ ಎಂದು ಅರ್ಧ ತಮಾಷೆ, ಅರ್ಧ ಕುತೂಹಲದಿಂದ ನನಗೆ ನಾನೇ ಕೇಳಿಕೊಳ್ಳುತ್ತಿದ್ದೆ. ಒಮ್ಮೊಮ್ಮೆ ಅವರು ನಿಂತಲ್ಲೇ ಏನಾದರೂ ಹೇಳುತ್ತಿದ್ದರೆ ಬಿಡುಗಣ್ಣಾಗಿ ಆಲಿಸುತ್ತಿದ್ದೆನಾದರೂ ಒಳಗಣ್ಣಿನಿಂದ ಈ ತಂತ್ರ ಸಾಧಕನನ್ನು ಕಂಡು ವಿಸ್ಮಯ ತಾಳುತ್ತಿದ್ದೆ. ಹೀಗೆ ಕೆ.ಜಿ. ನಾಗರಾಜಪ್ಪನವರ ಓದು ವಿದ್ವತ್ತಿನ ಬಗ್ಗೆ ನನಗೆ ಮೊದಲಿಂದಲೂ ಅಪಾರ ವಿಶ್ವಾಸ ಹೆಮ್ಮೆ ಎನಿಸಿತ್ತಾದರೂ ಅವರ 'ಗುಪ್ತ ಸಮಾಜಗಳು' ಎಂಬ ಲೇಖನವನ್ನು ಓದಿದ ಮೇಲೆ, ಅವರ ಬಗ್ಗೆ ಮತ್ತಷ್ಟು ಗೌರವ ಭಾವನೆ ಮೂಡುತ್ತಿದೆ. ವಡ್ಡರು ಗ್ರಾನೈಟ್ ಗಣೆಯಿಂದ ಕಲ್ಲು ಬಂಡೆಗಳನ್ನು ಒಡೆದು ಸೀಳಿ ಹೊರ ತೆಗೆವಂತೆ ಗುಪ್ತ ಸಮಾಜಗಳ ಸಾಧನೆ ಏನೆಂಬುದನ್ನು ಅಪಾರ ಪರಿಶ್ರಮ ವಹಿಸಿ ಅವರು ನಮಗೆ ತೆರದು ತೋರಿಸುತ್ತಾರೆ. ನಾಗರಾಜಪ್ಪನವರ ವಿದ್ವತ್ತನ್ನು ಇಣುಕಿ ನೋಡಬೇಕೆಂದರೆ ಅವರನ್ನು ಕುರಿತು ಗುಪ್ತ ಸಮಾಜಗಳ ಬಗ್ಗೆ ಕೇಳ ಬೇಕು, ಆಗ ಉತ್ಸಾಹ ಉಕ್ಕುತ್ತದೆ, ಕಣ್ಣು ಹೊಳೆಯುತ್ತದೆ. ಅವರ ಮಾತಿನಲ್ಲಿಯೇ ಹೇಳುವುದಾದರೆ ಗುಪ್ತಸಮಾಜಗಳ ಸಮಗ್ರ ಅಧ್ಯಯನ ಅಸಾಧ್ಯವೇ ಸರಿ. ಅವುಗಳ ಒಳ ಪ್ರವೇಶ ಎಲ್ಲರಿಗೂ ಸಾಧ್ಯವಿಲ್ಲ. ಅವರ ಲೇಖನದ ಬಗ್ಗೆ ಕೂಡ ಇದೇ ಮಾತನ್ನು ನಾನು ಪ್ರಾಂಜಲವಾಗಿ ಒಪ್ಪಿಕೊಂಡಿದ್ದೇನೆ. ಇಲ್ಲಿ ಕೇವಲ ಪರಿಚಯಾತ್ಮಕವಾಗಿ ಎರಡು ಮಾತುಗಳನ್ನು ಹೇಳಬಹುದೇ ಹೊರತು ವಿಮರ್ಶಾತ್ಮಕವಾಗಿ ಅಲ್ಲ.

ಗುಪ್ತ ಸಮಾಜಗಳ ನಿಗೂಢ ದೀಕ್ಷೆ, ಸಾಧನೆ, ಶಕ್ತಿ, ಮುಕ್ತಿ ಮುಂತಾದ ವಿಷಯಗಳ ಬಗ್ಗೆ ಇಲ್ಲಿ ಮಾಹಿತಿ ಇದೆ. ತಂತ್ರ ಸಾಧಕರ ಮಾಯಮಾಟ, ಮಂತ್ರ, ವೈದ್ಯ ಚಿಕಿತ್ಸೆ, ಕೃಷಿ ವಿಜ್ಞಾನ, ರಕ್ಷಣಾ ವಿಧಾನ, ಶುತ್ರು ನಾಶ, ಫಲವಂತಿಕೆ ಮುಂತಾದ ದಿನಬಳಕೆಯ ಸಾಧನೆಗಳನ್ನು ಫ್ಯೂಡಲ್ ವ್ಯವಸ್ಥೆ ಬಳಸಿಕೊಂಡಿತು. ಗುಪ್ತ ಸಮಾಜಗಳ ಬದುಕಿನ ವಿಧಾನ ಅವರು ಸಾಧಿಸಿದ ಕೂಟ ತತ್ತ್ವದಲ್ಲಿದೆ. ಕೂಟ ತತ್ವದ ವಿಕಾಸವೇ ಈ ಬ್ರಹ್ಮಾಂಡ. ಬೀಜ, ಹುಟ್ಟು, ಬದುಕು, ಸಾವು ಇವುಗಳ ಅನ್ವೇಷಣೆಯೇ ಕೂಟತತ್ತ್ವದ ಸಾರ. ತಂತ್ರ ಸಾಧಕನಿಗೆ ದೇಹವೇ ದೇವಾಲಯ. ಸಮಷ್ಟಿಯ ಒಳಿತಿಗಾಗಿ ಒಬ್ಬನನ್ನು ಬಲಿಕೊಟ್ಟರೂ ಅದಕ್ಕೆ ಒಪ್ಪಿಗೆ. ಕೊನೆಗೆ ನರಬಲಿ ಆತ್ಮಬಲಿಯಾಗಿ ಸ್ವಹಿಂಸೆ

ಸಾಧಾರಣವಾಯಿತು. ಆದರೆ ಈ ಹಿಂಸೆ ಏಕೆ? ಅದು ಕೆಳವರ್ಗದವರ ಪ್ರತಿಭಟನೆಯ ಸ್ವರೂಪದ ಒಂದು ಮುಖ. ಶಿಷ್ಟ ಸಮಾಜದಲ್ಲಿ ಇಂಥ ಸ್ವಹಿಂಸೆಗೆ ಸ್ಥಾನವಿಲ್ಲ. ಅದು ಹಠಯೋಗಿಗಳಲ್ಲಿ ಮಾತ್ರ ಕಾಣುತ್ತದೆ. ತಂತ್ರದಲ್ಲಿ ಸ್ವಾರ್ಥಕ್ಕೆ ಸ್ಥಾನವಿಲ್ಲ. ಅದು ಸಮಷ್ಟಿಯ ಹಿತ ಸಾಧನೆಗೆ ಮೀಸಲು. ತಂತ್ರದೊಳಕ್ಕೆ ನುಗ್ಗಿದ ಭ್ರಷ್ಟ ಬ್ರಾಹ್ಮಣ ಶಾಹಿಗಳು ಅದನ್ನು ಸ್ವಾರ್ಥಕ್ಕೆ ಬಳಸಿ ಅಪಖ್ಯಾತಿಗೆ ಗುರಿಮಾಡಿದರು.

ಪ್ರಾಚೀನ ಗುಪ್ತ ಸಮಾಜಗಳು ಫಲವಂತಿಕೆಯ ಸಂಕೇತವಾಗಿ ಯೋನಿ ಮತ್ತು ಶಿಶ್ನಗಳ ಆರಾಧನೆಯಲ್ಲಿ ತೊಡಗಿದವು. ಯಜ್ಞ ಕ್ರಿಯೆಯೂ ಕೂಟದ ಸಾಂಕೇತಿಕ ಅರ್ಥವನ್ನೆ ಪಡೆಯಿತು. ಕೂಟವೇ ಸೃಷ್ಟಿ ಸ್ಥಿತಿ ಲಯಗಳ ಅನುಭಾವಕ್ಕೆ ಸಂಕೇತವಾಯಿತು. ಶಿಷ್ಟ ಸಮಾಜಗಳು ಸೃಜನಶೀಲವಾಗುವುದು ಗುಪ್ತಸಮಾಜಗಳ ಸಂಸ್ಕೃತಿಯ ಸಂಪರ್ಕದಿಂದ. ಶಿಷ್ಟ ಹಾಗೂ ಗುಪ್ತ ಸಮಾಜಗಳ ಸಂಬಂಧ ಪ್ರೀತಿ- ದ್ವೇಷಗಳ ಸಂಬಂಧ. ಜಗತ್ತಿನ ಗುಪ್ತ ಸಮಾಜಗಳ ಸಮೀಕ್ಷೆ ಈ ಲೇಖನದ ವ್ಯಾಪ್ತಿಗೆ ಮೀರಿದ್ದು ಎಂದು ಹೇಳುವ ಲೇಖಕರು ಭಾರತದಲ್ಲಿನ ಗುಪ್ತ ಸಮಾಜಗಳ ಸ್ವರೂಪ ಮತ್ತು ಕಾರ್ಯಗಳ ಬಗ್ಗೆ ಸಂಕ್ಷಿಪ್ತ ಸಮೀಕ್ಷೆಯನ್ನು ಮಾಡುತ್ತಾರೆ.

ಗುಪ್ತ ಸಮಾಜಗಳು ಆರ್ಯೇತರ, ವೇದಪೂರ್ವ, ಪ್ರಾಚೀನ ಹಾಗೂ ನಿಗೂಢ. ಇಲ್ಲಿ ಮಾತೃ ಸಂಸ್ಕೃತಿ ಪ್ರಧಾನ. ಇವು ಕೆಳವರ್ಗದಲ್ಲಿ ಕಂಡು ಬರುತ್ತವೆ. ಗುಪ್ತ ಸಮಾಜ ಮುಕ್ತವಾದುದು, ಜಾತ್ಯಾತೀತವಾದುದು. ತಂತ್ರ ಸಾಧಕರಿಗೆ ಅರಮನೆಯಲ್ಲಿ ಸ್ಥಾನ ದೊರೆತ ಮೇಲೆ ಬುಡಕಟ್ಟಿನ ದೇವತೆಗಳು ಅರಮನೆಗೆ ನುಗ್ಗಿ ಶಿಷ್ಟ ಮುಖವಾಡ ಧರಿಸಿದವು. ಆದರೆ ಗುಪ್ತವಿಧಿಗಳು ಹಾಗೇ ರಹಸ್ಯವಾಗಿ ಉಳಿದವು. ತಂತ್ರ ಸಾಧನೆಯಲ್ಲಿ ಲೈಂಗಿಕ, ಯೋಗ, ವಶೀಕರಣ, ಶತ್ರುನಾಶ, ವೈದ್ಯ, ಜೋತಿಷ್ಯ ಎಲ್ಲವೂ ಸೇರುತ್ತವೆ. ಆದ್ದರಿಂದ ಊಳಿಗಮಾನ್ಯ ದೊರೆಗಳು ತಂತ್ರಸಾಧಕರನ್ನು ಅರಮನೆಗೆ ಬಿಟ್ಟುಕೊಂಡರು. ತಂತ್ರ ಸಾಧನೆ ಎಂದರೆ ವೀರ್ಯಪತನವಲ್ಲ; ವೀರ್ಯಧಾರಣೆ. ಸಾಧನೆಯಲ್ಲಿ ಸಂಯಮ ಮುಖ್ಯ. (ರಾಮಕೃಷ್ಣ ಪರಮಹಂಸರಂಥ ಯೋಗಿಗಳಿಂದ ಮಾತ್ರ ಬ್ರಹ್ಮಚರ್ಯಸಾಧ್ಯ.) ಅದ್ವೈತಾದಿ ತ್ರಿಮತಸ್ಥ ಪಂಥಗಳು ಅನಿವಾರ್ಯವಾಗಿ, ತಮ್ಮ ಉಳಿವಿಗಾಗಿ ಶಾಕ್ತ ತಂತ್ರಗಳನ್ನು ಅಳವಡಿಸಿಕೊಂಡವು. ಕೆ.ಜಿ. ಎನ್. ಅವರ ಅಭಿಪ್ರಾಯದಂತೆ ಗುಪ್ತಸಮಾಜಗಳ ವಿಕಾಸದ ಹಂತಗಳೇ ಭಾರತದ ಧಾರ್ಮಿಕ ಇತಿಹಾಸದ ಮೈಲಿಗಲ್ಲುಗಳು. ಈ ಮಾತನ್ನು ಗ್ರಂಥಗಳಿಂದ, ಕ್ಷೇತ್ರ ಕಾರ್ಯಗಳಿಂದ ಹಾಗೂ ಗುಪ್ತ ಸಮಾಜಗಳ ಸಂಪರ್ಕದ ಆಧಾರದಿಂದ ತಮ್ಮ ಅಭಿಪ್ರಾಯಗಳನ್ನು ಗಟ್ಟಿಗೊಳಿಸಿ ಮಂಡಿಸುತ್ತಾರೆ. ಕೋಲಾರಮ್ಮ, ಅಸ್ಸಾಂಮಿನ ಕಾಮಾಖ್ಯ ಪೀಠ, ಕೊಲ್ಲೂರು, ಗದ್ದವಳ್ಳಿ ಲಕ್ಷ್ಮೀ ದೇವಾಲಯ ಮುಂತಾದ ಕಡೆ ಕ್ಷೇತ್ರ ಕಾರ್ಯಮಾಡಿ, ಶಾಸನಗಳನ್ನು ಪರಿಶೀಲಿಸಿ ಅಲ್ಲಿರುವ ಆಚಾರ ವಿಚಾರ ಪದ್ಧತಿಗಳನ್ನು ಪರಿಶೋಧಿಸಿ ಇತಿಹಾಸವನ್ನು ಪುನರ್ ನಿರ್ಮಿಸುತ್ತಾರೆ ಕೆ.ಜಿ.ಎನ್.

ಶಾಕ್ತ, ಶೈವ, ವೈಷ್ಣವ, ಜೈನ, ಬೌದ್ಧ ಧರ್ಮಗಳ ಮೇಲೆ ಗುಪ್ತ ಸಮಾಜಗಳ ಪ್ರಭಾವ ಏನಿದೆ, ಎಷ್ಟಿದೆ, ಕೊಡು ಕೊಳಿಗೆ ಏನು ಮುಂತಾದ ವಿಚಾರಗಳನ್ನು ಅವರು

ಕೂಲಂಕುಶವಾಗಿ ಪತ್ತೆಹಚ್ಚಿ ನೋಡುತ್ತಾರೆ. ಅಲ್ಲಮ ಪ್ರಭು ಅತ್ಯುನ್ನತ ಸಾಧಕ ಎಂಬುದನ್ನು ವಿಶದ ಪಡಿಸುತ್ತಾರೆ. ರಾಮಕೃಷ್ಣ ಪರಮಹಂಸರು ಆಧುನಿಕ ತಂತ್ರಸಾಧಕರಲ್ಲಿ ಮಹೋನ್ನತ ಪದವಿ ಗೇರಿದವರು ಎಂದು ಸೂಚಿಸುತ್ತಾರೆ. ಈ ವಿಚಾರವನ್ನು ಇನ್ನು ಸ್ವಲ್ಪ ವಿವರವಾಗಿ ಹೇಳ ಬಹುದಿತ್ತು ಎನ್ನಿಸುತ್ತದೆ. ಸ್ತ್ರೀ ಮತ್ತು ಶೂದ್ರ ವರ್ಗಕ್ಕೆ ತಾಂತ್ರಿಕ ಧರ್ಮ ನೀಡಿದ ಸಮಾನತೆಯ ಬಗ್ಗೆ ಮೆಚ್ಚಿಗೆ ಇದೆ.

ತಂತ್ರಗಳ ಭಾಷಾಧ್ಯಯನ ಬಹುಮುಖ್ಯ ಎಂದು ಹೇಳುವ ಲೇಖಕರು ತಂತ್ರದ ಭಾಷೆ ಸಾಹಿತ್ಯಿಕವಲ್ಲ ವ್ಯವಹಾರದ ಸಂಕೇತಮಯ ಭಾಷೆ ಎನ್ನುತ್ತಾರೆ. ಪ್ರಾಚೀನ ಕಾಲದಿಂದಲೂ ಸಂತ ಸಂಪ್ರದಾಯದ ಸಾಹಿತ್ಯ ರಚನೆಯಾಗಿದೆ. ಆ ಸಾಹಿತ್ಯದಲ್ಲಿ ರತಿ ಶೃಂಗಾರ ಪ್ರತಿಮೆಗಳಿವೆ. ಶಿಶುನಾಳ ಶರೀಫ್ ಮುಂತಾದವರ ತತ್ವಪದಗಳು ಈ ನಿಟ್ಟಿನಲ್ಲಿ ಅಧ್ಯಯನ ಯೋಗ್ಯ.

ತಂತ್ರ ಸಾಧನೆಯ ವಿಧಿ ಆಚರಣೆಗಳು ವಿಚಿತ್ರ ಹಾಗೂ ಕಠಿಣತರ. ಇಲ್ಲಿ ಕ್ಷೇತ್ರಕಾರ್ಯ ತುಂಬಾ ಕಷ್ಟ . ಇದಕ್ಕೆ ನಿದರ್ಶನವಾಗಿ ಬಂಗಾಳದ ಸಂತಾಲ ಬುಡಕಟ್ಟಿನ ಕಾಳಿ ಪೂಜೆಯ ವಿಧಿ ವಿಧಾನಗಳನ್ನು ಉದಾಹರಿಸಲಾಗಿದೆ. ಕರ್ನಾಟಕದ ಗ್ರಾಮದೇವತೆಗಳು, ಅಸ್ಸಾಮಿನ ಕುಮಾರಿ ಪೂಜೆ ಇವುಗಳ ಬಗೆಗಿನ ಪೂಜಾ ಪದ್ಧತಿಗಳನ್ನು ಕಲೆಹಾಕಿ, ತಾಳೆನೋಡಿ, ತೀರ್ಮಾನಕ್ಕೆ ಬರುತ್ತಾರೆ. ಇಷ್ಟಾಗಿಯೂ ಇಂದ್ರಿಯ ಲೋಲುಪತೆಯಿಂದ ಕೂಡಿದ ತಂತ್ರರ ಭ್ರಷ್ಟತನವನ್ನು ಬಿಡದೆ ಖಂಡಿಸುತ್ತಾರೆ. ಆ ಭ್ರಷ್ಟರು ಗುಪ್ತ ಸಮಾಜಕ್ಕೆ ಬಂದ ಆಗಂತುಕರು. ಅಂಥವರಿಂದ ಗುಪ್ತ ಸಮಾಜ ಅವಮಾನಿಸಲ್ಪಟ್ಟಿದೆ ಎಂಬುದನ್ನು ವಿಚಾರಮಾಡುತ್ತಾರೆ. ಒಟ್ಟಿನಲ್ಲಿ ಗುಪ್ತ ಸಮಾಜಗಳ ಗುರಿ ಬ್ರಹ್ಮಾನಂದ : ಅದರತ್ತ ವಿಕಾಸ ಗೊಳ್ಳುತ್ತಿವೆ ಎಂದು ಇತ್ಯರ್ಥ ಪಡಿಸುತ್ತಾರೆ.

ಗುಪ್ತ ಸಮಾಜಗಳ ಅಪೂರ್ವ ಸಾಧನೆಯನ್ನು ಶಿಷ್ಟ ಸಮಾಜ ಲಪಟಾಯಿಸಿ ಅನಂತರ ಅದನ್ನು ಅವಮಾನ ಗೊಳಿಸುವುದನ್ನು ಕಂಡು ನಾಗಾಜಪ್ಪನವರು ನೊಂದು ಸಿಟ್ಟಿಗೇಳುತ್ತಾರೆ. ಇಂಥ ಸಾಮಾಜಿಕ ಅನ್ಯಾಯವನ್ನು ಕಂಡು ಯಾರಿಗೆ ಕೋಪ ಬರುವುದಿಲ್ಲ ಹೇಳಿ ಎಂದು ಮರುಪ್ರಶ್ನೆ ಹಾಕುತ್ತಾರೆ. ಬಹುಸಂಖ್ಯಾತ ಕೆಳವರ್ಗದವರನ್ನು ದೈನ್ಯ ಸ್ಥಿತಿಗೆ ತಳ್ಳಿದ ಅಲ್ಪಸಂಖ್ಯಾತ ಸನಾತನ ವಾದಿಗಳ ಬಗ್ಗೆ ಅವರಿಗೆ ಆಕ್ರೋಶವಿದೆ ; ಅವರೊಂದಿಗೆ ರಾಜಿ ಸಾಧ್ಯವೇ ಇಲ್ಲ ಎನ್ನುತ್ತಾರೆ. ಅತ್ತ ಗೌರ್ನ್‌ಮೆಂಟ್ ಬ್ರಾಹ್ಮಣನಾಗದೆ ಇತ್ತ ಬ್ರಾಹ್ಮಣನೂ ಆಗದೆ, ಲಿಂಗಾಯತ ಹಾಗೂ ಒಕ್ಕಲಿಗ ಎಂಬ ಪ್ರಭಾವಿ ಕೋಮುಗಳಿಗೂ ಸೇರದೆ ಹಿಂದುಳಿದವರ್ಗದಲ್ಲಿ ಹುಟ್ಟಿ ಚಡಪಡಿಸುತ್ತಿರುವ ಅನೇಕ ಜನ ಬರಹಗಾರರಿಗೆ ಪ್ರೊ।। ನಾಗರಾಜಪ್ಪನವರು ಪ್ರಾತಿನಿಧಿಕವೆಂಬಂತಿದ್ದಾರೆ. 'ಸತ್ಯಕಾಮ'ರಂತೆ ಮೇಲು ಜಾತಿಯಲ್ಲಿ ಹುಟ್ಟಿ ವಾಮಾಚಾರ ಪಂಡಿತರಾಗಿದ್ದರೆ ಇದುವರೆಗೆ ಬೆನ್ನು ಬಾಗುವಷ್ಟು ಶಾಲುಗಳನ್ನು ಹೊದೆಯಬಹುದಿತ್ತು. ಅಥವಾ ದಲಿತನಾಗಿದ್ದ ಪಕ್ಷಕ್ಕೆ ವಿಧಾನ ಸೌಧದ ಮೆಟ್ಟಿಲುಹತ್ತಿ ಇಷ್ಟೊತ್ತಿಗೆ ಸಾಕಷ್ಟು ಸವಲತ್ತು ಗಳನ್ನು ಗಿಟ್ಟಿಸಬಹುದಿತ್ತು. ಇವರಂತೆಯೇ ಕೋಲಾರದ 'ನವಿಲು ಕಿನ್ನರಿ" ಯ ಕವಿ ಲಕ್ಷ್ಮೀಪತಿ ಕೋಲಾರ ಎಂಬ ಸೃಜನ ಶೀಲ

ಕವಿಯೂ ಮೂಲೆ ಗುಂಪಾಗಿರುವುದು ಕರ್ನಾಟಕದ ಅನೇಕ ಜನ ವಿಮರ್ಶಕ ಮಹನೀಯರಿಗೆ ತಿಳಿದಿರಲಾರದು.
ಅಂತೂ ಇಲ್ಲಿರುವುದು ಎರಡೇ ಸತ್ಯ, ಒಂದು ಬದುಕಿದ್ದಾಗ ಜಾತಿ; ಎರಡು ಸತ್ತ ಮೇಲೆ ಹುಗಿವ ನೆಲ, ಅಷ್ಟೆ.

'ಕನ್ನಡ ವಿಮರ್ಶೆಯ ಇಕ್ಕಟ್ಟು ಬಿಕ್ಕಟ್ಟು' ಎಂಬ ಲೇಖನದ ಕೊನೆಯಲ್ಲಿ ಕೆ.ಜಿ.ಎನ್ ಹೇಳುವ ಈ ಮಾತು ಗಮನಾರ್ಹ. 'ವ್ಯಥೆಯನ್ನು ಕಥೆಯಾಗಿಸುವುದು, ಪಾಡನ್ನು ಹಾಡಾಗಿಸುವುದು' ಭಾರತೀಯ ಕಾವ್ಯ ತತ್ತ್ವ ಸಂಪ್ರದಾಯ. 'ಇದು ಹಾಡಲ್ಲ ಒಡಲುರಿ, ಕಾಡಿದಷ್ಟೂ ಪಾಡು' ಎನ್ನುವುದು ಕನ್ನಡ ಕಾವ್ಯ ಪರಂಪರೆ. ಬಹು ಸಂಸ್ಕೃತಿಗಳ ಸಮಾಜದ ಬಗ್ಗೆ ಅವರ ಕಾಳಜಿ ಅಪಾರ. ಅದಕ್ಕೆ ಒಂದು ನಿದರ್ಶನ ನೋಡಿ : "ಹಳ್ಳಿ ಹಳ್ಳಿ ಸುತ್ತಿದರೆ ಕಣ್ಣಿಗೆ ಕಳ್ಳಿ, ಕಡ್ಡಿ ಕೈಕಾಲುಗಳು, ಬತ್ತಿದ ಮುಖ, ಗುಳಿಬಿದ್ದ ಕಣ್ಣುಗಳು, ಬೀಡಿ ಬೆಂಕಿಕಡ್ಡಿಗೊ, ಕಾಸಿಗೊ, ಗೋಗರೆಯುವ ಬಾಯಿಗಳು, ನಿರ್ಭಾವದ ನಡೆದಾಡುವ ಜಡ-ಚೇತನಗಳು ಪ್ರಾಥಮಿಕ ಅಗತ್ಯಗಳನ್ನು ಕೊಳ್ಳುವ ಶಕ್ತಿಯೂ ಅವರಿಗಿಲ್ಲ" (ಕನ್ನಡ ಸಾಹಿತ್ಯ ಮತ್ತು ಬಹು ಸಂಸ್ಕೃತಿ ಸಮಾಜ). ಇಷ್ಟು ಒಲವಿಟ್ಟು ಬಹುಸಂಸ್ಕೃತಿ ಸಮಾಜವನ್ನು ಚಿತ್ರಿಸುವ ಸಹೃದಯ ವಿಮರ್ಶಕನನ್ನು ಯಾರಾದರು ಕಂಡಿದ್ದಾರೆಯೆ? 'ನಾಗರಾಜಪ್ಪ ಒರಟ, ಸಿನಿಕ, ಅನುದಾರ ವಿಮರ್ಶಕ' ಎಂದು ಟೀಕಿಸುವ ಮಂದಿ ಅವರ ಎಲ್ಲ ವಿಮರ್ಶನ ಸಾಹಿತ್ಯವನ್ನು ಒಮ್ಮೆಯಾದರೂ ಓದಿ ನೋಡಲಿ ಈ ವಿಮರ್ಶಕ ಅಘೋರಿಯ ಕೋಮಲ ಹೃದಯ, ವಜ್ರತಮ ದೃಷ್ಟಿ ಯಾರ ಪರವಾಗಿದೆ ಎಂಬುದು ಅರಿವಿಗೆ ಬರುತ್ತದೆ. ♦

" ಮಿಥ್ ಮತ್ತು ರಿಚುಯಲ್- ಎರಡೂ ಪರಸ್ಪರ ಒಂದನ್ನು ಮತ್ತೊಂದು ಒಳಗೊಂಡಿವೆ. ಮಿಥ್ ಮಾತಿನ ಮೂಲಕ ಅಭಿವ್ಯಕ್ತವಾಗುವ ಸಂಕೇತ. ರಿಚುಯಲ್ ವ್ಯವಸ್ಥಿತ ವಸ್ತು ಮತ್ತು ಸಾಂಕೇತಿಕತೆ ಕ್ರಿಯೆಯಾಗುವ ವಿಧಾನ. ಮಿಥ್ ಮತ್ತು ರಿಚುಯಲ್‌ಗಳು ಕಾಲ, ದೇಶ ಮತ್ತು ಪರಿಸರ ಅನುಸರಿಸಿ ಜನರ ಅಗತ್ಯಗಳ ಪೂರೈಕೆಗೆ ತಕ್ಕಂತೆ ನಿರಂತರವಾಗಿ ರೂಪುಗೊಳ್ಳುತ್ತಿರುತ್ತವೆ ಮತ್ತು ರೂಪಾಂತರ ಹೊಂದುತ್ತಿರುತ್ತವೆ."

-ಪ್ರೊ// ಕೆ.ಜಿ.ನಾಗರಾಜಪ್ಪ.

11. ವಿಮರ್ಶೆಯಲ್ಲಿ ವೈಚಾರಿಕ ಪ್ರಜ್ಞೆ

ಎನ್. ನಾಗಪ್ಪ

ತುಮಕೂರು ಜಿಲ್ಲೆಯಲ್ಲಿ ಪ್ರೊಫೆಸರ್ ಎಂದಾಕ್ಷಣ ಕೇಳಿ ಬರುವ ಹೆಸರುಗಳು ಪ್ರೊ॥ ಹೆಚ್.ಜಿ. ಸಣ್ಣಗುಡ್ಡಯ್ಯ ಮತ್ತು ಪ್ರೊ॥ ಕೆ.ಜಿ. ನಾಗರಾಜಪ್ಪನವರದು. ಕನ್ನಡ ಸಾಹಿತ್ಯದಲ್ಲಿ ಇವರಿಬ್ಬರ ಮೆಚ್ಚಿಕೆಯ ಕ್ಷೇತ್ರ ವಿಮರ್ಶೆ. ಹಳಗನ್ನಡ ಕವಿಗಳಿಂದ ಹಿಡಿದು ಇತ್ತೀಚಿನ ಕವಿಗಳವರೆಗೆ ಗಂಟೆಗಟ್ಟಲೆ ನಿರರ್ಗಳವಾಗಿ ಮಾತನಾಡಬಲ್ಲ ಮತ್ತು ಪುಟಗಟ್ಟಲೆ ವಿಮರ್ಶೆಯನ್ನು ಸಮರ್ಪಕವಾಗಿ ಬರೆಯಬಲ್ಲ ಸಾಮರ್ಥ್ಯ ಹೊಂದಿದವರು.

ಪ್ರೊ॥ ಕೆ.ಜಿ.ಎನ್. ಎಂದೇ ವಿಮರ್ಶಾ ಕ್ಷೇತ್ರದಲ್ಲಿ ಹೆಸರು ಗಳಿಸಿರುವ ಪ್ರೊ॥ಕೆ.ಜಿ.ನಾಗರಾಜಪ್ಪನವರು ಬೆರಳೆಣಿಕೆಯಷ್ಟು ಕೃತಿಗಳನ್ನು ಬರೆದಿದ್ದರೂ ಗಂಭೀರವಾಗಿ ಗಮನಿಸಬೇಕಾದ ಕೃತಿಗಳನ್ನು ಬರೆದಿದ್ದಾರೆ. ಪ್ರೊ॥ ಕೆ.ಜಿ.ಎನ್. ಅವರಲ್ಲಿ ಅಗಾಧವಾದ ವೈಚಾರಿಕ ಪ್ರಜ್ಞೆ, ಪ್ರಾಮಾಣಿಕತೆ, ಮಾನವೀಯ ಮೌಲ್ಯಗಳಿಗೆ ಬೆಲೆ ಕೊಡುವ ಮಾನವ ಸ್ವಭಾವದ ಸಹಜ ಆದರ್ಶಗುಣ ಮತ್ತು ವಾಸ್ತವವಾದಿ ನೆಲೆಯ ಚಿಂತನೆ ಈ ಎಲ್ಲಾ ಗುಣಗಳು ಅವರ ಜೀವನದಲ್ಲಿ ಎದ್ದು ಕಾಣುವಂತೆ ಅವರ ಕೃತಿಗಳಲ್ಲಿ ಹಾಗೂ ಲೇಖನಗಳಲ್ಲಿ ಕಂಡು ಬರುತ್ತವೆ.

ಪ್ರೊ॥ ಕೆ.ಜಿ.ಎನ್. ಅವರು ವಿಮರ್ಶೆ ಬರೆಯ ಹೊರಟರೆ ವಿಮರ್ಶೆಯ ಶೀರ್ಷಿಕೆಗೆ ಅನುಗುಣವಾಗಿ ಅಷ್ಟನ್ನು ಮಾತ್ರ ಬರೆದು ತೃಪ್ತರಾಗದೆ, ವಿಷಯದ ಆಳಕ್ಕೆ ಇಳಿದು ವಿಷಯಗಳನ್ನು ಕೆದಕಿ-ಕೆದಕಿ ಜರಡಿಯಲ್ಲಿ ಜಾಲಾಡಿ ಒಂದು ವಿಮರ್ಶೆಯ ಲೇಖನಕ್ಕೆ ಒಂದು ಸಂಶೋಧನ ಪ್ರಬಂಧದಷ್ಟು ಸಾಮಗ್ರಿಯನ್ನು ಒದಗಿಸುವ ಪ್ರಭುತ್ವ ಇವರದು. ಇದಕ್ಕೆ ಅಪವಾದವೆಂಬಂತೆ ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಪ್ರಕಟಿಸಿರುವ 'ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ'- ಎಂಬೀ ಪುಸ್ತಕದಲ್ಲಿ 'ಮಧ್ಯಕಾಲೀನ ಸಾಹಿತ್ಯದಲ್ಲಿ ಹಿಂಸೆಯ ಅಭಿವ್ಯಕ್ತಿ ಸ್ವರೂಪ'- ಎಂಬುದು ಪ್ರೊ॥ ಕೆ.ಜಿ.ಎನ್. ಅವರ ಎಂಭತ್ತು ಪುಟದ ಪ್ರಬುದ್ಧ ವಿಮರ್ಶಾ ಲೇಖನ.

'ಮಧ್ಯಕಾಲೀನ ಸಾಹಿತ್ಯದಲ್ಲಿ ಹಿಂಸೆಯ ಅಭಿವ್ಯಕ್ತಿ ಸ್ವರೂಪ'-ಎಂಬೀ ವಿಮರ್ಶೆ ಲೇಖನಕ್ಕೆ ಪ್ರತಿ ವಿಮರ್ಶೆ ಬರೆಯುವ ಉದ್ದೇಶ ನನ್ನದಲ್ಲ. ಆದರೆ ವಿಮರ್ಶಕರು ಚರ್ಚೆಗೆ ತೆಗೆದುಕೊಂಡಿರುವ ಕೆಲವು ಮಹತ್ವದ ವಿಷಯಗಳ ಬಗ್ಗೆ ನಾನು ನನ್ನದೆಯಾದ ಕೆಲವು ಅನಿಸಿಕೆಗಳನ್ನು ಅಭಿವ್ಯಕ್ತಪಡಿಸಿರುತ್ತೇನೆ.

ಪ್ರೊ॥ ಕೆ.ಜಿ.ಎನ್. ಅವರು ತಮ್ಮ ಅನುಭವಕ್ಕೆ ನಿಲುಕದ ಯಾವೊಂದು ಮಾತನ್ನು ಆಡರು , ಚರ್ಚಿಸರು. ತಮಗೆ ಸರಿಯಾಗಿ ಕಂಡ ಮಾತನ್ನು ನಿರ್ಭಯರಾಗಿ

ವಿಮರ್ಶಿಸುತ್ತಾರೆ. ಅವರ ಎಲ್ಲಾ ವಿಮರ್ಶೆಗಳು ಬಹಿರಂಗದ ಮತ್ತು ಅಂತರಂಗದ ಅನುಭವದ ನಿಕಷಕ್ಕೆ ಹಚ್ಚಿದ ಸಂಗತಿಗಳು. ಈ ಹಿನ್ನೆಲೆಯಲ್ಲಿ ಅವರ ವಿಮರ್ಶೆಗಳನ್ನು ಅರ್ಥಮಾಡಿಕೊಂಡಾಗ ವಿಮರ್ಶೆ ಲೇಖನದ ಒಳತಿರುಳು ಮತ್ತು ವಿಮರ್ಶಕನ ಆಂತರಿಕ ಮನಸ್ಥಿತಿ ಅರ್ಥ ಮಾಡಿಕೊಳ್ಳಬಹುದು.

"ಶೂದ್ರ ವೃತ್ತಿ ಬ್ರಾಹ್ಮಣರಿಗೆ ನಿಷಿದ್ಧವಲ್ಲದಿದ್ದರೂ, ಶೂದ್ರರು ಬ್ರಾಹ್ಮಣ ವೃತ್ತಿ ಹಿಡಿಯುವುದು ಶಾಸ್ತ್ರವಿರುದ್ಧವಾದದ್ದು ಎಂದೂ ಅದು ಶಿಕ್ಷಾರ್ಹವಾದುದು. ಅದರಿಂದಲೇ ರಾಮಾಯಣದಲ್ಲಿ ಶಂಭೂಕ ತಪಸ್ಸಿಗೆ ತೊಡಗಿ ರಾಮನಿಂದ ಹತನಾದನು. ಏಕಲವ್ಯ ಬೆರಳು ಕಳೆದುಕೊಂಡನು. ವಾಲಿ ಮೋಸದಿಂದ ವಧೆಯಾದನು" (ಮ.ಸಾ.ಹಿಂ.ಅ.ಸ್ವರೂಪ, ಲೇಖನ ಪುಟಸಂಖ್ಯೆ ೬೯).

ವಿಮರ್ಶಕರು ಚರ್ಚೆಗೆ ಗ್ರಾಸವಾಗಿ ತೆಗೆದುಕೊಂಡ ವಿಷಯಗಳು ಕೇವಲ ವಿಷಯಗಳಾಗಿ ಬರದೆ ಚಾರಿತ್ರಿಕ ಮತ್ತು ಪೌರಾಣಿಕ ಸತ್ಯಸಂಗತಿಯಾಗಿ ದಾಖಲಿಸುವುದರ ಜೊತೆಗೆ ಇಂಡಿಯಾದೇಶದ ಇತಿಹಾಸವನ್ನೆ ತೆರೆದಿಡುತ್ತಾರೆ. ಇಂಡಿಯಾದೇಶದಲ್ಲಿ ಪ್ರಾರಂಭದೆಸೆಯಲ್ಲಿ ವೃತ್ತಿಗನುಗುಣವಾಗಿ ಪ್ರಾರಂಭವಾದ ಜನಜೀವನ ಕಾಲಕ್ರಮೇಣ ಆ ವೃತ್ತಿಗಳೇ ಜಾತಿಗಳಾಗಿ ಪರಿವರ್ತಿತವಾದದ್ದು ಅನಾರೋಗ್ಯಕರ ಬೆಳವಣಿಗೆ. ಕಾಲಮಾನದ ಸತ್ಯವೆಂದರೆ ಕೈ ಕೆಸರಾಗುವ, ಕೈ-ಮೈ-ಬೆವರಿಸಿ-ನೋಯಿಸಿಕೊಳ್ಳುವ ತಾಕತ್ತಿನ ಅಂದರೆ ಶೂದ್ರರು ಮಾಡುವ ಕೆಲಸಗಳಿಂದ ಮೇಲ್‌ಜಾತಿ ಜನ ದೂರವಿದ್ದು ಶಾಸ್ತ್ರ-ಮಂತ್ರ-ತಂತ್ರ-ಪೂಜೆ-ಪುರಸ್ಕಾರಗಳಂತಹ ಸುಲಭ ವೃತ್ತಿಯನ್ನ ಅವಲಂಭಿಸಿದ್ದು. ವೇದಗಳ ಕಾಲದಲ್ಲಿ ಯಾರು ಯಾವ ಕೆಲಸವನ್ನಾದರು ಮಾಡಬಹುದಾಗಿತ್ತು. ಆದರೆ ಕಾಲಕ್ರಮೇಣ ಕೆಲವು ವೃತ್ತಿಗಳು ಕೆಲವರಿಗೆ ಮಾತ್ರ ಮೀಸಲಾದವು. ಆ ಕಾಲದಲ್ಲಿ ಕೆಲವು ವೃತ್ತಿಗಳು ಒಬ್ಬರಿಂದ ಮತ್ತೊಬ್ಬರಿಗೆ ಹಸ್ತಾಂತರವಾಗಿರಲು ಸಾಧ್ಯ. ಕಾರಣ ಅವರವರ ಅಭಿರುಚಿಗೆ ತಕ್ಕಂತೆ. ಆದರೆ ಪೌರೋಹಿತ್ಯದ ವೃತ್ತಿ ಮಾತ್ರ ಅವರ ಬಿಗಿ ಮುಷ್ಟಿಯಿಂದ ಅವರ ಹಿಡಿತದಲ್ಲಿಯೆ ಇರುವಂತೆ ಅವರು ಎಚ್ಚರವಹಿಸಿದರು.

ಈ ವಿಷಯವನ್ನ ಸೂಕ್ಷ್ಮವಾಗಿ ಗ್ರಹಿಸಿದ ವಿಮರ್ಶಕರು, ರಾಮಾಯಣದಲ್ಲಿನ ಶಂಭೂಕ ಮಹಾಭಾರದಲ್ಲಿನ ಏಕಲವ್ಯ ಮತ್ತು ವಾಲಿ ಇವರುಗಳ ವಧೆಯ ಹಿಂದೆ ಅಂದಿನ ವ್ಯವಸ್ಥೆ ಹೇಗೆ ವ್ಯವಸ್ಥಿತವಾಗಿ ಶೂದ್ರರ ಪ್ರತಿಭೆಗಳನ್ನು, ಪ್ರತಿಭೆಗಳನ್ನಾಗಿ ಗುರುತಿಸುವ ಮನಸ್ಸು ಮಾಡದೆ ಅಂತಹ ಪ್ರತಿಭಾವಂತರುಗಳನ್ನು ಮುಗಿಸುವ ಪ್ರಯತ್ನದ ಹಿಂದೆ ಸಾವಿರಾರು ವರ್ಷಗಳಿಂದಲೂ ರೂಢಿಯಲ್ಲಿರುವ ಸ್ಥಾಪಿತ ಮೌಲ್ಯಗಳಾದ ವೈದಿಕ ನೆಲೆಯನ್ನೆ ಪುನರ್‌ಸ್ಥಾಪಿಸ ಹೊರಟಿರುವ ಪುರೋಹಿತ ಶಾಹಿಯ ಮನಸ್ಸನ್ನು ಅರ್ಥೈಸಿಕೊಂಡ ವಿಮರ್ಶಕರು ತುಂಬಾ ಸಮರ್ಥವಾಗಿ ಚರ್ಚಿಸಿದ್ದಾರೆ. ಪ್ರೊ॥ ಕೆ.ಜಿ.ಎನ್. ಅವರು ಕಷ್ಟ ಸಹಿಷ್ಣು, ಅನುಭವ ಮತ್ತು ಸಂಶೋಧಕ ಪ್ರವೃತ್ತಿ ಅದ್ಭುತವಾದ್ದು, ಸದಾ ವಿಚಾರಪರವಾದದ್ದು.

"ಕ್ಷತ್ರಿಯರು ಮತ್ತು ಪುರೋಹಿತ ವರ್ಗ ಎಂದೂ ಬಲಿಯಾಗುವವರಲ್ಲ...............ಬಲಿಗೆ ಸಿದ್ಧವಾಗಬೇಕಾದವರು ಶ್ರೀ ಸಾಮಾನ್ಯವರ್ಗ. ಇಂಥ ಆದರ್ಶ ದೊಡ್ಡ ಮೀನು ಚಿಕ್ಕ ಮೀನನ್ನು ನುಂಗುವ, ಬಲಿಷ್ಠ ಬಣ ದುರ್ಬಲ ಬಣವನ್ನು ಶೋಷಿಸುವ ಅಥವಾ ನಾಶಮಾಡುವ ಮೃಗೀಯ ನಡತೆ ರಕ್ತದಾಹವನ್ನು ಮಾನವನಲ್ಲಿ ಅಧಿಕಗೊಳಿಸಿತು. ನರ-ನರಹತ್ಯೆಗಾಗಿ ನಡೆಸುವ ಬೇಟೆಗೆ ಕೊನೆಯೇ ಇಲ್ಲವಾಯಿತು." (ಮ.ಕಾ.ಸಾ.ಹಿ.ಅ.ಸ್ವರೂಪ ಲೇಖನ ಪುಟ ೭೧.)

ಈ ನೆಲದ ಹುಟ್ಟುಗುಣವನ್ನ ವಿಮರ್ಶಕರು ಚರ್ಚಿಸುತ್ತಾ ಹುಟ್ಟುಗುಣ ಸುಟ್ಟರು ಹೋಗದೆಂಬಂತೆ..................ಹೊಸ ನೀರು ಬಂದು ಹಳೆ ನೀರನ್ನು ಕೊಚ್ಚಿಕೊಂಡು ಹೋಯಿತು ಎಂದು ಹೇಳುವಂತೆ ಕ್ಷತ್ರಿಯರಿಗೆ ಅರಮನೆ-ಅಧಿಕಾರ ಮುಖ್ಯವಾದಂತೆ ಪುರೋಹಿತರಿಗೆ ಪೂಜೆ-ಪುರಸ್ಕಾರಗಳು ಮುಖ್ಯವಾದವು. ಈ ಹಿನ್ನೆಲೆಯಲ್ಲಿ ಶ್ರೀ ಸಾಮಾನ್ಯವರ್ಗದ ನೆಲೆಯನ್ನು ಹೇಳಹೆಸರಿಲ್ಲದಂತೆ ಮಾಡ ಹೊರಟಿದ್ದು ಐತಿಹಾಸಿಕ ಸತ್ಯ. ಈ ನೆಲದ ಮೂಲ ಜನರಾದ ದ್ರಾವಿಡರ ನಂತರ ಮಧ್ಯ ಏಷ್ಯಾದಿಂದ ಬಂದ ಆರ್ಯರು ತಮ್ಮ ಆಧಿಪತ್ಯ ಸ್ಥಾಪಿಸಲು ಹೊರಟದ್ದು. ಇದಾದ ಮೇಲೆ ನಿರಂತರವಾಗಿ ಶ್ರೀಸಾಮಾನ್ಯವರ್ಗವನ್ನು ಶೋಷಿಸುತ್ತಾ ಬಂದ ವಿಷಯವನ್ನು ವಿಮರ್ಶಕರು ಸ್ವತಂತ್ರ ವಿಚಾರದಿಂದ ತಾಳುವ ದಿಟ್ಟ ನಿಲುವುಗಳು ತುಂಬಾ ಸ್ವಾಗತಾರ್ಹವಾದವುಗಳು.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ ಆಳಲು ಸಿದ್ಧವಾಗಿ ನಿಂತಿರುವ ಶಕ್ತಿ ಶಾಲಿಯಾದ ವರ್ಗ ದುರ್ಬಲ ವರ್ಗವೊಂದರ ಮೇಲೆ ಸಾರುವ ಸಾಂಸ್ಕೃತಿಕ ಸಮರ, ಇಂಡಿಯಾದಲ್ಲಿ ಆಳುವ ಮತ್ತು ಆಳಿಸಿಕೊಳ್ಳುವ ವರ್ಗ ಮೊದಲಿನಿಂದಲೂ ಇವೆ. ಅಂದಹಾಗೆ ಯುದ್ಧದ ಸಂದರ್ಭದಲ್ಲಿ ಅಕಸ್ಮಾತ್ ಸತ್ತರೆ ಒಬ್ಬ ರಾಜ ಸಾಯಬಹುದು. ಆದರೆ ಹೆಚ್ಚು ಸಾವು-ನೋವುಗಳಾಗುವುದು ಎರಡೂ ಕಡೆಯ ಶ್ರೀಸಾಮಾನ್ಯ ವರ್ಗದವರಿಗೆ. ಈ ಸಂದರ್ಭದಲ್ಲಿ ಪುರೋಹಿತವರ್ಗ ಅರಮನೆಬಿಟ್ಟು ಹೊರಬರದವರಾದುದರಿಂದ ಅವರ ಜೀವಕ್ಕೆ ಅಪಾಯವೆ ಸಂಭವಿಸಲಿಲ್ಲ. ಎಲ್ಲಾ ಕ್ಷೇತ್ರದಲ್ಲಿ ದುಡಿಯುವ ಶ್ರಮಿಕ ವರ್ಗವೆ ಸದಾ ಬಲಿಗೆ ಸಿದ್ಧವಾಯಿತು. ಯಾರು ಸತ್ತರೇನಂತೆ ನಾವು ಚೆನ್ನಾಗಿದ್ದರೆ ಸಾಕು ಎಂಬ ಸ್ವಾರ್ಥಪರ ನೀತಿಗೆ ಬದ್ಧರಾಗಿ ಬದುಕ ಸಾಗಿಸಿದವರು ಪರರನ್ನು ಆಳುಬಾವಿಗೆ ತಳ್ಳಿ-ಆಮೇಲೆ ಬಾವಿಯ ಆಳನೋಡಲು ಹೋದವರ ಬಗ್ಗೆ ಆಧಾರ ಸಮೇತ ಸಮಂಜಸವಾಗಿ ವಿಮರ್ಶಿಸಿರುವುದು ಗಮನಾರ್ಹ ಅಂಶ.

ಧರ್ಮದ ವಿಚಾರ-ನೀತಿಯ ವಿಚಾರ ಇವೆರಡೂ ಹಾವು-ಮುಂಗಸಿಯಿದ್ದಂತೆ. ಮೂಢನಂಬಿಕೆ ಕುರುಡು ಸಂಪ್ರದಾಯಗಳ ಆಧಾರದ ಮೇಲೆ ಧಾರ್ಮಿಕ ಮೌಲ್ಯಗಳು ನಿಂತಿವೆ. ವೈಜ್ಞಾನಿಕ-ವೈಚಾರಿಕ ತಳಹದಿಯ ಮೇಲೆ ನಿಲ್ಲುವ ಪ್ರಗತಿಪರವಾದ, ಮಾನಪೇಯವಾದ ನೈತಿಕ ವಿಚಾರಗಳಿಂದ "ಈ ಶೂದ್ರ ವರ್ಗಕ್ಕೆ ಶ್ರಮ ಮತ್ತು ಮೌಢ್ಯ

ಬಿಟ್ಟರೆ ಬೇರೇನೂ ಉಳಿಯಲಿಲ್ಲ". (ಮ.ಸಾ.ಹಿಂ.ಅ.ಸ್ವರೂಪ ಲೇಖನ ಪುಟ ೭೮.) ಎಂದೂ ವಾಸ್ತವಾದಿ ನೆಲೆಯಲ್ಲಿ ಚರ್ಚಿಸುತ್ತಾರೆ.

ಇಂಡಿಯಾ ದೇಶದಲ್ಲಿನ ಶ್ರಮಿಕ ವರ್ಗದ ಜನ ಎಂದೂ ಮೋಸ ಮಾಡದ ಜನ. ಮೈಗಳ್ಳ ಸಂಸ್ಕೃತಿಯವರಂತೆ ತಮ್ಮ ಮೈಗಳನ್ನ ಬೆಳೆಸಿಕೊಳ್ಳದೆ ತಮ್ಮ ಪಾಲಿಗೆ ಬಂದುದು ಪಂಚಾಮೃತವೆಂಬಂತೆ ಅಂದಿನಿಂದ ಇಂದಿನವರೆಗೂ ದುಡಿಯುತ್ತಾ ಬಂದಿದ್ದಾರೆ. ಶ್ರಮಿಕ ವರ್ಗದ ಈ ಶೂದ್ರ ಜನ ಅಕ್ಷರ ಜ್ಞಾನದಿಂದ ವಂಚಿತರಾದುದರಿಂದ ಮೇಲ್ವರ್ಗದ-ಮೇಲ್ಜಾತಿಯ ಜನ ಹೇಳಿದುದ್ದನ್ನೆ ಮಹಾ ವೇದವಾಕ್ಯವೆಂಬಂತೆ ನಂಬಿ ಜೀವಿಸತೊಡಗಿದರು.

ಪುರೋಹಿತ ವರ್ಗದವರು ಬಿತ್ತಿ ಬೆಳೆಸಿದ ಮೌಢ್ಯವನ್ನು ಅಪ್ರಜ್ಞಾಪೂರ್ವಕವಾಗಿ ಶೂದ್ರರು ನಂಬಿ ಮುನ್ನಡೆದರು. ಅವರ ಈ ನಂಬಿಕೆ ಬೇರೆಯವರಿಗೆ ಲಾಭದಾಯಕವಾಯಿತು. ಶೂದ್ರರ ಈ ಮನಸ್ಥಿತಿಯಿಂದ ಅಪಾರ ಲಾಭವಾದದ್ದು ಮೈಗಳ್ಳ ಸಂಸ್ಕೃತಿಯವರಿಗೆ. ಶೂದ್ರವರ್ಗದ ಶ್ರಮದ ಫಲದಿಂದ ದೇಶದ ಭವಿಷ್ಯ ನಿಂತಿತ್ತು. ಅಲ್ಲದೇ ಅದೇ ಶೂದ್ರ ವರ್ಗದ ಮೌಢ್ಯದಿಂದ ಪುರೋಹಿತ ಶಾಹಿ ವರ್ಗಕ್ಕೆ ಆದಿಕಾಲದಿಂದ ಹಿಡಿದು ಆಧುನಿಕ ಕಾಲದವರೆಗೂ ಲಾಭ ಮುಂದುವರೆದುಕೊಂಡು ಬಂದಿರುವುದು ಸಾರ್ವಕಾಲೀಕ ಸತ್ಯ. ಪ್ರೊ|| ಕೆ.ಜಿ.ಎನ್. ಅವರ ವಿಮರ್ಶೆ ಕೆಲವು ಸಲ ಬೇರೆಯವರಿಗೆ ಒರಟಾಗಿ ಕಾಣುತ್ತದೆ. ಆದರೆ ಪ್ರಾಮಾಣಿಕತೆ ಆದರ್ಶಗಳ ಮೌಲೀಕ ವಿಷಯಗಳನ್ನು ತಮ್ಮ ಜೀವನದಲ್ಲಿ ಸೂತ್ರವನ್ನಾಗಿ ಅಳವಡಿಸಿಕೊಂಡ ಇವರು ಅಪ್ರಿಯವೆಂದು ಕಾಣುವ ವಿಷಯಗಳನ್ನು ಖಂಡತುಂಡವಾಗಿ ವಿಮರ್ಶಿಸಬಲ್ಲರೆಂಬುದಕ್ಕೆ ಈ ಕೆಳಗಿನ ಸಾಲುಗಳು ಸಾಕ್ಷಿ.

"ಈ ನಾಸ್ತಿಕ ಪರಂಪರೆ ನಾಶವಾಗದೆ ಧರ್ಮಕ್ಕೆ ಮತ್ತು ದೇಶಕ್ಕೆ ಉಳಿಗಾಲವಿಲ್ಲ".-(ಮ.ಸಾ.ಹಿಂಸೆಯ ಅಭಿವ್ಯಕ್ತಿ ಸ್ವರೂಪ-ಲೇಖನ ಪುಟ ೪೪.) ಇಂಡಿಯಾ ದೇಶದಲ್ಲಿ ವೈಚಾರಿಕ ವಿಷಯದಲ್ಲಿ ಚಾರ್ವಾಕರ ಸಿದ್ಧಾಂತ ಮತ್ತು ಪೆರಿಯಾರರ ಮಹತ್ವದ ವಿಚಾರಗಳನ್ನು ಗಮನಿಸಿದಾಗ ನಾಸ್ತಿಕರ ಮತ್ತು ಆಸ್ತಿಕರ ಮನೋವೇದನೆ ಸುಸ್ಪಷ್ಟ. ಮನುಷ್ಯ-ಮನುಷ್ಯನಾಗಿ ವೈಜ್ಞಾನಿಕ ನೆಲೆಯಲ್ಲಿ ಆಲೋಚನೆಗೆ ತೊಡಗಿದರೆ ಅನೇಕ ನೈತಿಕ ಅಂಶಗಳನ್ನು ದಾಖಲಿಸುತ್ತಾರೆ. ನಾಸ್ತಿಕವಾದ ಮತ್ತು ಆಸ್ತಿಕ ವಾದಗಳೆರಡನ್ನು ಮಂಡಿಸುವವರು ಮನುಷ್ಯರೆ ಆದರೂ ಅವರವರ ಸಾಂಸ್ಕೃತಿಕ ಪರಿಸರದ ನೆಲೆಯಲ್ಲಿಯೆ ತಮ್ಮ ವಾದಕ್ಕೆ ಸರಕನ್ನ ಉದಾಹರಣೆಯಾಗಿ ಪಡೆಯುವವರಾಗಿರುತ್ತಾರೆ.

ನಾಸ್ತಿಕರು ಮತ್ತು ಆಸ್ತಿಕರನ್ನು ಗಮನಿಸಿ ಹೇಳುವುದಾದರೆ ಆಸ್ತಿಕರ ಬಗ್ಗೆ ಇರುವಷ್ಟು ನಂಬಿಕೆ, ಗೌರವ ನಾಸ್ತಿಕರ ಬಗ್ಗೆ ಇಲ್ಲ. ನಾಸ್ತಿಕರೆಂದಾಕ್ಷಣ ಬೊಟ್ಟು ಮಾಡಿ ಮೂಗು ಮುರಿದು ಮಾತನಾಡಿಸುವುದೆ ಹೆಚ್ಚು. ಸತ್ಯ ಗೆಲ್ಲಬೇಕಾದ ಕಡೆ ಅಸತ್ಯ ಗೆಲ್ಲುತ್ತದೆಯೆಂಬಂತೆ. ನಾಸ್ತಿಕರಿಗೆ ಸೋಲಾಗಿ ಆಸ್ತಿಕರಿಗೆ ಗೆಲುವಾಗುವಂತೆ ವ್ಯವಸ್ಥೆ ರೂಪಗೊಂಡಿದೆ.

ಜಾತಿ-ದೇವರು ಮತ್ತು ಧರ್ಮದ ಬಗ್ಗೆ ಯಾವುದೇ ಕಾಲ ಮಾನದಲ್ಲಿ ಮಾತನಾಡುವುದು ಅಷ್ಟು ಸುಲಭದ ಕೆಲಸವಲ್ಲ. ಏಕೆಂದರೆ ಇವುಗಳು ಪುರೋಹಿತ ಶಾಹಿಯ ಸ್ವಾರ್ಥಕ್ಕಾಗಿ ಹುಟ್ಟಿಕೊಂಡವು. ತಮ್ಮ ಸ್ವಲಾಭಕ್ಕೆ ಸೃಷ್ಟಿಗೊಂಡದ್ದು. ಪ್ರಜ್ಞಾಪೂರ್ವಕವಾದ ನೆಲೆಯಿಂದ ಈ ವಿಚಾರ ಹೊರಬಂದರೆ ಅಪ್ರಜ್ಞಾಪೂರ್ವಕ ನೆಲೆಯಿಂದ ಶೂದ್ರರು ಇದನ್ನು ನಂಬುವಂತಹದ್ದಾಗಿದೆ. ಇದಕ್ಕೆ ಸಾವಿರಾರು ವರ್ಷದ ಕಾಲಮಾನದ ಸತ್ಯಗಳನ್ನು ಪ್ರೊ|| ಕೆ.ಜಿ.ಎನ್. ಅವರು ಕೆದಕಿ ಹೊರ ತೆಗೆದಿರುವ ಅಂಶ ಅಚ್ಚರಿಯ ಸಂಗತಿಯೆ ಸರಿ.

ಇಂಡಿಯಾ ದೇಶದಲ್ಲಿನ ಹಿಂದೂ ಸಮಾಜದಲ್ಲಿ ಜಾತೀಯತೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಕಾರಣ ಹಿಂದೂ ಧರ್ಮ ನಿಂತಿರುವುದೇ ಅಸಮಾನತೆಯ ತಳಹದಿಯ ಮೇಲೆ. ನಮ್ಮ ಸಮಾಜದಲ್ಲಿ ಜಾತಿ ಪದ್ಧತಿ ಒಂದು ನಿಜ ಸ್ಥಿತಿ. ಸಾವಿರಾರು ವರ್ಷಗಳಿಂದ ಕೆಳಜಾತಿಗಳಿಗೆ ಶಿಕ್ಷಣದಿಂದ ವಂಚನೆಯಾಗಿದ್ದು ಜಾತಿ ಆಧಾರದ ಮೇಲೆಯೇ. ಜಾತಿ ವ್ಯವಸ್ಥೆಯಿಂದಾಗಿರುವ ಅಸಮಾನತೆಯನ್ನು ಅಳಿಸಿಹಾಕಲು ಜಾತಿಯನ್ನು ಗಣನೆಗೆ ತೆಗೆದುಕೊಳ್ಳಲೇಬೇಕಾಗಿದೆ. ಜಾತಿ ಇರುವಲ್ಲಿ ಸಮಾನತೆ ಇರಲು ಸಾಧ್ಯವಿಲ್ಲ. ಸಮಾನತೆಯ ಆಧಾರದ ಮೇಲೆ ಹಿಂದೂ ಧರ್ಮವನ್ನು ಸುಧಾರಿಸಬೇಕು. ಇಲ್ಲದಿದ್ದರೆ ಜಾತಿಯ ಜೊತೆ-ಜೊತೆಯಲ್ಲಿಯೇ ಅಸಮಾನತೆಯನ್ನು ಹೊರದೂಡಿದಾಗ ಮನುಷ್ಯರಾಗಿ ಬದುಕಲು ಸಾಧ್ಯ ಎಂಬ ವೈಚಾರಿಕವಾಗುತ್ತಾ, ವಾಸ್ತವವಾಗುತ್ತಾ, ಸಾರ್ವಕಾಲಿಕ ಸತ್ಯವಾಗಿ ಬಿಡುವ ವಿಷಯವನ್ನು ಚರ್ಚೆಗೆ ತೆಗೆದುಕೊಂಡಿದ್ದಾರೆ.

"ದುರ್ಗುಣಗಳೆಲ್ಲಾ ಮೂರ್ತಿವೆತ್ತ ವರ್ಗವೇ ಶೂದ್ರವರ್ಗ. ಅದು ವರ್ಣಧರ್ಮದ ಮೂರು ವರ್ಗದ ಸೇವೆಯಿಂದಲೇ ಜನ್ಮಸಾರ್ಥಕವಾಗಬೇಕು." (ಮ.ಸಾ.ಹಿಂ.ಅ.ಸ್ವರೂಪ ಪುಟ. ೮೫.) ಎಂಬುದಾಗಿ ಪ್ರೊ|| ಕೆ.ಜಿ.ಎನ್. ಅವರು ತುಂಬಾ ನೋವಿನಿಂದ ಈ ಮಾತನ್ನು ಹೇಳುತ್ತಾ ವಿಮರ್ಶಿಸುತ್ತಾರೆ. ಸೇವೆ ಮಾಡುವ ಮನಸ್ಸು ಮತ್ತು ಸೇವೆ ಮಾಡಿಸಿಕೊಳ್ಳುವ ಮನಸ್ಸು ವಿಭಿನ್ನ ನೆಲೆಯದಾಗಿದೆ. ಸೇವೆ ಮಾಡಿಸಿಕೊಳ್ಳುವ ಮನಸ್ಸು ಅನಾರೋಗ್ಯಕರ ಮನಸ್ಸಿನದಾದರೆ ಸೇವೆ ಮಾಡುವ ಮನಸ್ಸು ಆರೋಗ್ಯಕರ ಮನಸ್ಸಿನದಾಗಿದೆ. ಹಿಂದೂ ಧರ್ಮದವರಲ್ಲಿ ಜನ್ಮಾಂತರಗಳ ಬಗ್ಗೆ ನಂಬಿಕೆಯಿದೆ. ಅದೇ ರೀತಿ ಸ್ವರ್ಗ-ನರಕದ ಬಗೆಗಿನ ನಂಬಿಕೆಯೂ ಕೂಡ ಈ ತೆರನಾದದ್ದೆ. ಸಾವಿರಾರು ವರ್ಷದ ಈ ದೇಶದ ಇತಿಹಾಸದಲ್ಲಿ ಶೂದ್ರವರ್ಗದವರೆಂದರೆ ಸಾಕು ಅವರು ಪಾಪ ಮಾಡಿ ಹುಟ್ಟಿದವರೆಂದೇ ಹೇಳಿ, ಅವರ ಹುಟ್ಟು ಅರ್ಥಾತ್ ಜನ್ಮ ಸಾರ್ಥಕವಾಗಬೇಕಾದರೆ ಈ ಜನ ಉಳಿದ ಜನರ ಸೇವೆಯನ್ನು ಮಾಡಿದರೆ ಮಾತ್ರ ಸಾಧ್ಯ ಎಂದೂ ಹೇಳಿದ ಜನ ಎಲ್ಲಾ ರೀತಿಯ ಸೇವೆಯನ್ನು ಮಾಡಿಸಿಕೊಂಡದ್ದನ್ನು ನಾವು ಮರೆಯುವಂತಿಲ್ಲ.

ಸೇವೆ ಎಂದಾಕ್ಷಣ ಒಂದು ವರ್ಗದ ಜನ ಮತ್ತೊಂದು ವರ್ಗದ ಜನರನ್ನ ನೀವು ಸೇವೆ ಮಾಡುವುದಕ್ಕೋಸ್ಕರ ಇರುವುದು ನಾವು ಸೇವೆ ಮಾಡಿಸಿಕೊಳ್ಳುವುದಕ್ಕೋಸ್ಕರ

ಇರುವುದು ಎಂಬೀ ಮನಸ್ಸೇ ಮನುಷ್ಯ-ಮನುಷ್ಯನ ನಡುವೆ ಎಂತಹ ಅಮಾನವೀಯ ಸಂಬಂಧದ ಮನಸ್ಸಿದೆ ಎಂಬುದು ಗೊತ್ತಾಗುತ್ತದೆ. ಬೀದಿಯ ಕಸಗುಡಿಸುವುದು, ಚಪ್ಪಲಿ ಹೊಲೆಯುವುದು, ಕ್ಷೌರ ಮಾಡುವುದು, ಮಲಹೊರುವುದು ಇತ್ಯಾದಿ ಅವಮಾನದ ಕೆಲಸಗಳನ್ನು ಮಾಡುವ ಜನರನ್ನು ಇವರು ಮನುಷ್ಯರೆ ಅಲ್ಲದ ರೀತಿಯಲ್ಲಿ ನೋಡಿಕೊಂಡಿರುವ ದಾರುಣ ಸಂಗತಿಯನ್ನು ಈ ಇಂಡಿಯಾ ದೇಶದಲ್ಲಿ ಮರೆಯುವಂತಿಲ್ಲ. ಆದರೆ ಇಂತಹ ಅವಮಾನದ ಕೆಲಸಗಳನ್ನು ಸ್ವಲ್ಪವೂ ಸಹ ಬೇಸರ ಮತ್ತು ಅಸಹ್ಯಪಟ್ಟುಕೊಳ್ಳದೆ ಮಾಡುವ ಈ ಜನರಿಗೆ ಎಷ್ಟು ಹೊಗಳಿದರು ಸಾಲದು. ಈ ದೇಶದಲ್ಲಿ ಅವಮಾನದ ಕೆಲಸ ಮಾಡುವವನಿಗೆ ಅಪಮಾನ ಕಟ್ಟಿಟ್ಟ ಬುತ್ತಿ. ಆದರೆ ಎಲ್ಲಾ ರೀತಿಯ ಸೇವೆ ಮಾಡಿಸಿಕೊಳ್ಳುವವರಿಗೆ ಮಾನ-ಸನ್ಮಾನಗಳೇ ಜಾಸ್ತಿ. ಇದಲ್ಲದೆ 'ಕರ್ಮ ಮತ್ತು ಪುನರ್ಜನ್ಮಗಳು ಭಯ ಹುಟ್ಟಿಸಲು ವರ್ಣಧರ್ಮ ಬಳಸಿರುವ ಹಿಂಸೆಯ ಸಾಧನೆಗಳೇ ಸರಿ.'-ಎಂದೂ ವಿಮರ್ಶಕರು ವಿಮರ್ಶಿಸುವಲ್ಲಿ ಸೇವೆಯೆಂಬುದು ಕೇವಲ ಭಾವ ನಾತ್ಮಕವಾಗಿ ಬಾಯಿಮಾತಿನಲ್ಲಿ ಹೇಳಿ ಸಾಧಿಸಲಿಕ್ಕಾಗದ ಪ್ರಸಂಗ.

ಪ್ರೊ|| ಕೆ.ಜಿ.ಎನ್. ಅವರು ಅತ್ಯಂತ ವಿವೇಚನಾ ಪರವಾಗಿ ವಿಮರ್ಶಿಸ ಹೊರಟ ಈ ವಿಮರ್ಶಾ ಲೇಖನದಲ್ಲಿ ಹಿಂಸೆಯ ಬೀಜ ಪುರೋಗಾಮಿ ವ್ಯವಸ್ಥೆಯಲ್ಲಿ ಹೇಗೆ ವ್ಯವಸ್ಥಿತವಾಗಿ ಕೆಲಸಮಾಡಿದೆ ಎಂಬುದಕ್ಕೆ ಕೆಳಗಿನ ಸಾಲುಗಳು ಉದಾಹರಣೆ. "ಜನರ ನಂಬಿಕೆಯ ಬಂಡವಾಳದಿಂದ ಪುರೋಹಿತರು ಅನಭಿಷಿಕ್ತ ದೊರೆಗಳಾಗಿ ಆಳಿದರು. ದೇವಾಲಯಗಳು ದೇವರ ಹೆಸರಿನಲ್ಲಿ ಜನರ ಸುಲಿಗೆಯ ಕೇಂದ್ರಗಳಾದವು". (ಮ.ಸಾ.ಹಿಂ.ಅ.ಸ್ವರೂಪ ಲೇಖನ ಪುಟ.೯೮.) ಎಂಬೀ ವಿಮರ್ಶಕರ ಮಾತುಗಳು ಕೇವಲ ಒಂದು ವರ್ಗ ಅಥವಾ ಒಂದು ಜಾತಿನಿಷ್ಠ ಮಾತುಗಳಾಗಿ ಬರದೆ ಸಾಮುದಾಯಿಕ ಪರಂಪರೆಯನ್ನು ಗಮನದಲ್ಲಿಟ್ಟುಕೊಂಡು ಚರ್ಚಿಸಿದ್ದಾರೆ. ದೇವರ ಬಗೆಗಿನ ಭಕ್ತಿ ತೀರ ವೈಯಕ್ತಿಕವಾದದ್ದು. ಭಕ್ತಿ ಯಾವ ಕಾರಣಕ್ಕೂ ಯಾವ ಕಾಲಕ್ಕೂ ಸಾರ್ವತ್ರಿಕವಾಗಬಾರದು, ದೇವರ ಬಗೆಗಿನ ಭಕ್ತಿ ಮುಗ್ಧವಾಗಿರಬೇಕು. ಈ ಭಕ್ತಿ ಬೇರೆಯವರಿಗೆ ಬಂಡವಾಳವಾಗಬಾರದೆಂದು ವಿಮರ್ಶಕರ ಅಂತರಂಗದ ಮನಸ್ಸು ಹೇಳುತ್ತದೆ.

ಎಲ್ಲಿ ಜಾತಿ-ದೇವರು ಮತ್ತು ಧರ್ಮಗಳನ್ನು ಬಂಡವಾಳ ಮಾಡಿಕೊಂಡು ಸುಲಿಗೆಯ ಕೇಂದ್ರಗಳನ್ನಾಗಿ ಮಾಡಿಕೊಳ್ಳುತ್ತಾರೋ ಅಲ್ಲಿ ಮನುಷ್ಯ ಸಂಬಂಧಗಳನ್ನು ಮರೆತು ಹಣದ ಆಸೆಗೆ ಜನರನ್ನ ಮೋಸಮಾಡುತ್ತಾರೆ. ಇದು ಎಂದಿಗಿಂತಾ ಇಂದೂ ಜಾಸ್ತಿಯಾಗುತ್ತಿದೆ ಎಂಬುದು ಮುಖ್ಯವಾದ ವಿಷಯವಾಗಿ ಈ ವಿಮರ್ಶಕರು ಈ ವಿಷಯವನ್ನ ವಾಸ್ತವಿಕ ನೆಲೆಯಲ್ಲಿ ವಿಮರ್ಶಿಸ ಹೊರಟಿರುವುದು ಗಮನಾರ್ಹವಾದ ವಿಷಯ.

ಇತ್ತೀಚಿನ ದಿನಗಳಲ್ಲಿ ದೇವರ ಬಗ್ಗೆ ನಂಬಿಕೆ ಜಾಸ್ತಿಯಾಗುತ್ತಿದೆ. ಒಂದು ಕಾಲಮಾನದಲ್ಲಿ ಮನುಷ್ಯ ಲಂಚ ಸ್ವೀಕರಿಸುವುದು ಮಹಾ ಅಪರಾಧದ ಮತ್ತು ಅವಮಾನದ

ಸಂಗತಿ. ಆದರೆ ಇಂದು ಲಂಚ ಮಾಮೂಲಿ ಎಂಬ ಪದಕ್ಕೆ ಹೊಂದಿಕೊಂಡು ಬಿಟ್ಟಿದೆ-ಅಂದಹಾಗೆ ಲಂಚಕೋರರ ಸಂಖ್ಯೆ, ಹಾದರ ಮಾಡುವವರ ಸಂಖ್ಯೆ, ಮೋಸ ಮಾಡುವವರ ಸಂಖ್ಯೆ, ಮತ್ತೆ ಕೊಲೆ-ಸುಲಿಗೆ ಮಾಡುವವರ ಸಂಖ್ಯೆ ದಿನೇ-ದಿನೇ ಜಾಸ್ತಿಯಾದಂತೆ-ದೇವರ ಮೇಲಿನ ಭಕ್ತಿಯೂ ಕೂಡ ಜಾಸ್ತಿಯಾಗುತ್ತಿದೆ. ವಿಜ್ಞಾನ ಬೆಳೆದಂತೆ ವಿಚಾರ ಮತ್ತು ವೈಜ್ಞಾನಿಕ ಮನೋಭಾವ ಬೆಳೆಯಬೇಕು ಆದರೆ ವಿಜ್ಞಾನದೆತ್ತರಕ್ಕೆ ದೇಶದ ತುಂಬಾ ಮೌಢ್ಯ ಬೆಳೆದು ನಿಂತಿದೆ. ವಿಚಾರವಂತರ ಸಂಖ್ಯೆ ತೀರಾ ಕಡಿಮೆ. ಇಂತಹ ವಿಚಾರಗಳಿಂದಲೇ ನಮಗೆ ಗೊತ್ತಾಗುತ್ತದೆ. ಪ್ರೊ॥ ಕೆ.ಜಿ.ಎನ್. ಅವರು ಎಂತಹ ಗಟ್ಟಿತನದ ವಿಚಾರವಂತರೆಂದು.

ಮನುಷ್ಯನ ಹುಟ್ಟಿನ ವಿಷಯ ರಾಮಾಯಣ ಮತ್ತು ಮಹಾಭಾರತ ಕಾಲಮಾನದಿಂದಲೂ ಅವೈಜ್ಞಾನಿಕವಾಗಿ ಆಲೋಚಿಸುತ್ತಾ ಬರಲಾಗಿದೆ. "ಶೂದ್ರರು ಪಾದದಲ್ಲಿ ಜನಿಸುವ ಹಣೆಬರಹವಂತೂ ಬದಲಾಗಲೇ ಇಲ್ಲ". (ಮ.ಸಾ.ಹಿಂ.ಅ.ಸ್ವರೂಪ ಲೇಖನ ಪುಟ.೧೦೦.) ಎಂಬುದಾಗಿ ವಿಮರ್ಶಕರು ಹೇಳುತ್ತಾ ಚನ್ನಬಸವಣ್ಣನವರು 'ಶಿವತತ್ತ್ವ ಚಿಂತಾಮಣಿ' ಕೃತಿಯಲ್ಲಿ ೨,೭ ರ ಪದ್ಯದಲ್ಲಿ ಚನ್ನಬಸವಣ್ಣನೂ ದೀಕ್ಷೆ ಕೊಡುವಾಗ ಹುಟ್ಟಿನ ಸಿದ್ಧಾಂತದ ವರ್ಣಾಶ್ರಮವನ್ನೆ ಪರಿಗಣಿಸುವಂತೆ ಸೂಚಿಸುತ್ತಾನೆ. ಇದನ್ನು ಗಮನಿಸಿ ಪ್ರೊ॥ ಕೆ.ಜಿ.ಎನ್. ಅವರು ಗುಣಸಿದ್ಧಾಂತ ಸಮಯೋಚಿತ ಮೋಸಗೊಳಿಸುವುದಕ್ಕೆ ಹುಟ್ಟಿದ ಸಿದ್ಧಾಂತ ಎಂದೂ ಅಭಿಪ್ರಾಯಪಡುವುದು ಔಚಿತ್ಯಪೂರ್ಣವಾಗಿದೆ.

ಸಮಯೋಚಿತ ಮೋಸ ಅನ್ನುವ ಪದವನ್ನು ಬಳಸಿರುವ ವಿಮರ್ಶಕರು ಇಂಡಿಯಾ ದೇಶದಲ್ಲಿನ ಶೂದ್ರನ ಮನಸ್ಥಿತಿಯನ್ನ ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆ. ಎಲ್ಲಾ ಸವಲತ್ತುಗಳಿಂದ ವಂಚಿರಾದ ಶೂದ್ರಜನಕ್ಕೆ ಮೋಸ ಎಂಬ ಪದವೇ ಗೊತ್ತಿಲ್ಲದಿದ್ದಾಗ ಎಲ್ಲಾ ವಿಷಯಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಮೋಸ ಮಾಡಿದವರೆಂದರೆ ಆಳುವ ವರ್ಗ ಮತ್ತು ಪುರೋಹಿತಶಾಹಿವರ್ಗವೆಂಬುದು ಸಾರ್ವಕಾಲಿಕ ಸತ್ಯ.

ಮನುಷ್ಯನ ಹುಟ್ಟು ಪ್ರಕೃತಿ ಸಹಜವಾದುದು ಎಂದು ಹೇಳದೆ ಅದು ದೈವ ಸೃಷ್ಟಿ ಎಂದು ಹೇಳಿ ಮನುಷ್ಯನನ್ನ ಮನುಷ್ಯನನ್ನಾಗಿ ನೋಡದೆ ಆದರಲ್ಲಿಯೂ ಶೂದ್ರನ ಹುಟ್ಟನ್ನು ಅವೈಜ್ಞಾನಿಕವಾಗಿ ನೋಡುವ ಮನಸ್ಸು ಎಂತಹ ನಿಕೃಷ್ಟದೆಂಬುದು ನಮಗೆ ಸ್ಪಷ್ಟವಾಗಿ ಅರಿವಾಗುವಂತೆ ಎಚ್ಚರಿಸುತ್ತಾರೆ ಮಾನವೀಯ ಮೌಲ್ಯಗಳನ್ನೊಳಗೊಂಡ ನೆಲೆಯಲ್ಲಿ.

ಇಲ್ಲಿ ಪಂಪನ "ಮನುಕುಲಂ ತಾನೊಂದೆ ವಲಂ" ಅನ್ನುವ ಮಾತು ಮನುಷ್ಯ ಜಾತಿನೆ ಸರ್ವ ಶ್ರೇಷ್ಠವಾದ ಜಾತಿ. ಗಂಡು-ಹೆಣ್ಣು ಎಂಬ ಮನುಷ್ಯ ಜಾತಿಯ ಮುಂದೆ ಮತ್ತೊಂದು ಜಾತಿ ಇರಲು ಸಾಧ್ಯವೆ. ಜಾತಿ ಎಂಬುದು ಹಸಿ-ಹಸಿ ಸುಳ್ಳು. ಶೂದ್ರನ ಹುಟ್ಟಿನ ಬಗ್ಗೆ ಒಬ್ಬ ಜಾತಿವಾದಿ ಕವಿ ತನ್ನ ಜಾತಿವಾದಿ ನೆಲೆಯಲ್ಲಿಯೆ ನಿಂತು

ಮಾತನಾಡುವ ಮನಸ್ಸೆಂದು ಹೇಳುವಂತೆ, ವಿಮರ್ಶಕರು ತಕ್ಷಣ ಮನುಧರ್ಮಶಾಸ್ತ್ರವನ್ನೆ ನೆನಪಿಸುವಂತೆ ಮಾಡಿ ಎಲ್ಲಾ ಮನುಷ್ಯರ ಹುಟ್ಟು ಪ್ರಕೃತಿ ಸಹಜವಾದದ್ದೆಂದು ಈ ವಿಮರ್ಶಕರ ವಾದ. ಈ ವಾದ ವೈಚಾರಿಕವಾದದ್ದು ಮತ್ತು ವೈಜ್ಞಾನಿಕವಾದ್ದು, ಮಿಗಿಲಾಗಿ ಆರೋಗ್ಯಕರವಾದ ಆಲೋಚನೆ.

ಖಂಡಿತವಾದಿ ಲೋಕವಿರೋಧಿ ಎಂಬ ಮಾತಿಗೆ ಅನುಗುಣವಾಗಿ ಕುಮಾರವ್ಯಾಸ ಭಾರತದಲ್ಲಿ ಕೃಷ್ಣಾರ್ಜುನ ಸಂವಾದವನ್ನು ವಾಸ್ತವಿಕ ನೆಲೆಯಲ್ಲಿ ಪರಮಾಶ್ಚರ್ಯಕರವಾಗಿ ಚರ್ಚಿಸಿದ್ದಾರೆ. ಕೃಷ್ಣ ಬ್ರಾಹ್ಮಣರ: ಅರ್ಜುನ ಶೂದ್ರರ ಪರ ನಿಂತು ವಾದ ಮಾಡುತ್ತಾರೆಂದು ಅರ್ಥೈಸುವುದು, ಅಲ್ಲದೆ ಆತ್ಮ ಬ್ರಾಹ್ಮಣ-ದೇಹ ಶೂದ್ರ-ಎಂದು ಹೇಳುವುದರ ಜೊತೆಗೆ ಶ್ರೀ ಕೃಷ್ಣನ ವಾದಕ್ಕೆ ಶ್ರುತಿ, ಸ್ಮೃತಿ ಮತ್ತು ಪುರಾಣ ಗ್ರಂಥಗಳೇ ಆಧಾರ ಮತ್ತು 'ಜಾತಿಧರ್ಮ'ವನ್ನ ಎತ್ತಿ ಹಿಡಿಯುವುದೇ ಕೃಷ್ಣನ ಕೆಲಸವಾಗಿದೆ ಎಂದು ಕಡ್ಡಿ ಎರಡು ತುಂಡಾಗುವಂತೆ ವಿಶಿಷ್ಟವಾದ ರೀತಿಯಲ್ಲಿ ಚರ್ಚಿಸಿರುವುದು ವಿಮರ್ಶಕರಲ್ಲಿ ವೈಚಾರಿಕ ಪ್ರಜ್ಞೆ ಎಂತಹುದ್ದೆಂಬುದು ಗೊತ್ತಾಗುತ್ತದೆ.

ಈ ವಿಮರ್ಶೆಯ ಸಂದರ್ಭದಲ್ಲಿ ಸೋಜಿಗದ ಸಂಗತಿಯೊಂದನ್ನು ಮನಗಾಣಬಹುದು. ಅದೆಂದರೆ ಶೂದ್ರ ಸಾಂಸ್ಕೃತಿಕ ನೆಲೆಯಿಂದ ಬಂದ ಕೃಷ್ಣ ಬ್ರಾಹ್ಮಣಿಕೆಯನ್ನು ಮೈಗೂಡಿಸಿಕೊಂಡು ವೈದಿಕ ಧರ್ಮದ ಉಳಿವಿನ ನೆಲೆಯಲ್ಲಿ ಮುಂದುವರೆದರೆ, ಅರ್ಜುನ ಮೇಲ್ವರ್ಗದ ಮನಸ್ಸಿನವನಾದರೂ ಏಕಲವ್ಯನ ಪ್ರತಿಭೆಯನ್ನ ಗಮನಿಸಿ ಅಸೂಯೆ ಪಟ್ಟವನಾದರೂ ಯುದ್ಧದಲ್ಲಿ ಈಗಾಗಲೇ ಸಾಕಷ್ಟು ಸೈನಿಕರನ್ನ ಸಾವಿಗೀಡು ಮಾಡಿದ್ದರೂ ಒಳಗಡೆ ಪಾಪ ಪ್ರಜ್ಞೆ ಕಾಡುವುದರ ಹಿನ್ನೆಲೆಯಲ್ಲಿ ಕೃಷ್ಣನಿಗಿಂತಾ ಭಿನ್ನ ನೆಲೆಯಲ್ಲಿ ನಿಂತು ಅರ್ಜುನ ಕುಮಾರವ್ಯಾಸ ಮಹಾಭಾರತ ಕೃತಿಯಲ್ಲಿ ಮಾತನಾಡುತ್ತಾನೆ.

ಅರ್ಜುನ ಮತ್ತು ಕೃಷ್ಣರ ನಡುವೆ ನಡೆಯುವ ಸಂಭಾಷಣೆಯನ್ನು ಕುಮಾರವ್ಯಾಸ ಕವಿ ಅತ್ಯಂತ ಅಪರೂಪದ ಸನ್ನಿವೇಶವಾಗಿ ಚಿತ್ರಿಸಿದ್ದಾರೆ. ಇಲ್ಲಿ ಆತ್ಮ-ಪರಮಾತ್ಮ ದೇಹ-ತ್ಯಾಗ ಇತ್ಯಾದಿ ವಿಷಯಗಳನ್ನು ಅರ್ಜುನನ ಮುಂದಿಟ್ಟು ಆತ ನಂಬುವ ಹಾಗೆ ಮಾಡುತ್ತಾನೆ. ಅಲ್ಲದೆ ಇಡೀ 'ಮಹಾ ಭಾರತ' ಕೃತಿಯನ್ನ ಸೂಕ್ಷ್ಮವಾಗಿ ಓದಿದರೆ ಗೊತ್ತಾಗುತ್ತದೆ. ಆ ಕೃತಿ ಯಾರ ಪರವಾಗಿ, ಯಾವ ಜಾತಿ ಜನರ ಪರವಾಗಿ, ಯಾವ ಜಾತಿ ಧರ್ಮದ ಪರವಾಗಿ, ಯಾವ ವರ್ಗ ಮತ್ತು ವರ್ಣದ ಪರವಾಗಿ ಇದೆ ಎಂಬುದನ್ನು ಸಹ ಪ್ರೊ॥ ಕೆ.ಜಿ.ಎಸ್. ಅವರ ವಿಮರ್ಶೆಯಿಂದ ಅರ್ಥಮಾಡಿಕೊಳ್ಳಲು ಸಾಧ್ಯ.

ಮನುಷ್ಯನಾಗಿ ಹುಟ್ಟಿದವ ಮನುಷ್ಯನಾಗಿ ಬೆಳೆದು ಮನುಷ್ಯನಾಗಿ ಸಾಯಬೇಕೆ ಹೊರತು ಜಾತಿ ಮನುಷ್ಯನಾಗಿ ಬೆಳೆದು-ಜಾತಿ ಮನುಷ್ಯನಾಗಿ ಸಾಯಬಾರದು. ವಿಚಿತ್ರವೆಂದರೆ ಯಾವುದೇ ಧರ್ಮದ ಸಂಸ್ಥಾಪಕನಿಗೆ ತನ್ನ ಜಾತಿಯ ನೆಲೆಯಲ್ಲಿ ಧರ್ಮವನ್ನ ಹುಟ್ಟುಹಾಕಿದರೆ ಆತ ಮನುಷ್ಯನಾಗದೆ ಅದು ಧರ್ಮವಾಗದೆ ಅದು ಮನುಷ್ಯ

ವಿರೋಧಿ ನೆಲೆಯ ಧರ್ಮವಾಗುತ್ತದೆ. ಸಾಮಾನ್ಯವಾಗಿ ಒಂದು ಧರ್ಮ ಅದು ಮನುಷ್ಯನ ಪರವಾಗಿ ಇರುವುದಾದರೆ ವಿಶಾಲ ಮನೋಭಾವನೆಯಿಂದ ಹುಟ್ಟಿರುತ್ತದೆ. ಆದರೆ ಅದನ್ನು ಬೆಳೆಸುವ ಹಂತದಲ್ಲಿ ಜಾತಿ ಜನ ಅದನ್ನು ಭದ್ರವಾಗಿ ಹಿಡಿದು ಜಾತಿ ಧರ್ಮದ ಲೇಪನ ಮಾಡಿ ವಿಶಾಲವಾಗಿ ಬೆಳೆಯಬೇಕಾದ ಧರ್ಮವನ್ನು ಒಂದು ಜಾತಿ ಕೋಣೆಯಲ್ಲಿ ಕೂಡಿಹಾಕಿ ಅದು ಬೇರೆ ಜಾತಿ ಜನರ ಜೊತೆ ಬೆರೆಯದಂತಾಗಿ ಸಂಕುಚಿತವಾಗಿ ಜಾತಿಯ ಜೀವಾಳವನ್ನ ತುಂಬಿಕೊಂಡು ಜಾತಿಯ ಧರ್ಮವಾಗಿ ಹೆಮ್ಮರವಾಗಿ ಬೆಳೆದು ನಿಂತುಬಿಡುತ್ತದೆ. ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿದ ಪ್ರೊ॥ ಕೆ.ಜಿ.ಎನ್. ಅವರು "ಅನಕ್ಷರ ವರ್ಗ ಯಾವ ಕಾಲದಲ್ಲಿಯೂ ಸಂಘಟಿತ ಪ್ರತಿಷ್ಠಿತ ವರ್ಗದ ಹಿಂಸೆಗೆ ತುತ್ತಾಯಿತು. ಜನಸಾಮಾನ್ಯರಿಗೂ ಒಂದು ಧರ್ಮವಿದೆ ಅವರೂ ಮನುಷ್ಯರೇ ಎಂಬ ಸೂತ್ರವನ್ನು ಯಾವ ಧರ್ಮವೂ ಸ್ವೀಕರಿಸಲಿಲ್ಲ."-(ಮಧ್ಯಕಾಲೀನ ಸಾಹಿತ್ಯದಲ್ಲಿ ಹಿಂಸೆಯ ಅಭಿವ್ಯಕ್ತಿ ಸ್ವರೂಪ ಲೇಖನ, ಪುಟ-೧೩೦.)

ವಿಮರ್ಶಕರ ಈ ಮಾತುಗಳನ್ನು ಗಮನಿಸಿದಾಕ್ಷಣ ನನಗೆ ನೆನಪಾಗುವುದು ರಾಷ್ಟ್ರಕವಿ ಕುವೆಂಪು ಅವರ "ವಿಶ್ವಮಾನವ ಸಂದೇಶ". ಇದೊಂದು ಅಪರೂಪದ ಅನನ್ಯವಾದ ಸಂದೇಶ ಎಂದು ಹೇಳುವುದರ ಜೊತೆಗೆ ಪ್ರೊ॥ ಕೆ.ಜಿ.ಎನ್. ಅವರ "ಮಧ್ಯಕಾಲೀನ ಸಾಹಿತ್ಯದಲ್ಲಿ ಹಿಂಸೆಯ ಅಭಿವ್ಯಕ್ತಿ ಸ್ವರೂಪ"-ಎಂಬೀ ಲೇಖನವೂ ಸಹ ಅತ್ಯಂತ ಮಹತ್ವದ ಲೇಖನ. ಈ ಲೇಖನದಲ್ಲಿ ಇನ್ನೂ ಅನೇಕ ಪ್ರಗತಿಪರ ವಿಷಯಗಳನ್ನ ಚರ್ಚಿಸಿದ್ದಾರೆ. ಅದನ್ನೆಲ್ಲ ಗಮನಿಸಿ ಪ್ರೊ॥ ಕೆ.ಜಿ. ನಾಗರಾಜಪ್ಪನವರ ಬಗ್ಗೆ ಒಂದು ಮಾತು ಹೇಳುವುದಾದರೆ ಈ ವಿಮರ್ಶಕರು ಮಹಾನ್ ಮಾನವತಾವಾದಿ ವಿಮರ್ಶಕರು ಎಂಬುದರಲ್ಲಿ ಎರಡು ಮಾತಿಲ್ಲ. ♦

" ಸುತ್ತ ಭೀಕರವಾಗಿದೆ ಅಣ್ಣ ಕುರುಕ್ಷೇತ್ರ
ಪಾಂಡವರ ವಂಶವ ಬುಡ ಸಹಿತ ಕಿತ್ತು
ದುರ್ಯೋಧನನಿಗೆ ಪಟ್ಟಕಟ್ಟುವ ಸನ್ನಾಹ
ಪಾರ್ಥನ ರಥ ಸತ್ಯ ಸ್ಥಾಪನೆಯ
ಗೀತಾ ಸ್ಥಂಭಕ್ಕೆ ಡಿಕ್ಕಿ ಹೊಡೆದಿದೆ
ಉದ್ದ ಕೊಕ್ಕಿನ ಕೆಂಪು ಕತ್ತಿನ ರಣಹದ್ದುಗಳು
ರೆಕ್ಕೆ ಬಡಿದು ಬಾರಾಡುತ್ತಿವೆ ಸುತ್ತಮುತ್ತ "

-ಪ್ರೊ॥ ಕೆ.ಜಿ.ನಾಗರಾಜಪ್ಪ.

12. ಲೇಖನಗಳ ಆಂತರಂಗಿಕ ನಿಲುವುಗಳು

ತಿಮ್ಮನಹಳ್ಳಿ ವೇಣುಗೋಪಾಲ್

ಪ್ರಸ್ತುತ ನಮ್ಮ ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ಪ್ರೊ॥ ಕೆ.ಜಿ.ಎನ್.ರ ಹೆಸರು ಗುಣಮಾನ್ಯವಾದುದು. ಇರುವುದನ್ನು ಇದ್ದಂತೆ ಹೇಳುವ, ದೊಡ್ಡ ಬಾಯಿಯ ನಿಷ್ಠೂರಿ ಅಧ್ಯಾಪಕನ ಸಾಧಕ ವ್ಯಕ್ತಿತ್ವ ಅವರದು. ಇಂದು ಪೊಲಸು ಹುಲುಸಾಗಿರುವ ಸಂದರ್ಭದಲ್ಲಿ ಇದು ಒಬ್ಬ ಬರಹಗಾರನಿಗಿರಬೇಕಾದ ವಿಶೇಷತೆ ಎಂಬುದನ್ನು ಹೇಳಲು ನನಗೆ ಕನಿಷ್ಠ ಮುಜುಗರವೂ ಆಗುವುದಿಲ್ಲ. ಇಂತಹ ಕೆಲ ಕಾರಣಕ್ಕಾದರೂ ಕೆ.ಜಿ.ಎನ್. ನಮ್ಮಂತಹವರ ಗಮನ ಸೆಳೆಯುತ್ತಾರೆ.

•

ಇಲ್ಲಿ ಕೆ.ಜಿ.ಎನ್.ರ 'ದಲಿತೋದ್ಧಾರ-ಒಂದು ಸಂಕ್ಷಿಪ್ತ ಸಮೀಕ್ಷೆ, ಡಾ॥ ಅಂಬೇಡ್ಕರ್ ಬದುಕು ಮತ್ತು ತತ್ವಗಳು ಹಾಗೂ ಕನ್ನಡ ಸಾಹಿತ್ಯ ಮತ್ತು ಬಹುಸಂಸ್ಕೃತಿ ಸಮಾಜ' ಎಂಬ ಬಿಡಿ ಬಿಡಿಯಾದ ಮೂರು ಲೇಖನಗಳನ್ನು ಕುರಿತು ಕೆಲ ಅನಿಸಿಕೆಗಳನ್ನು ಹೇಳುವ ಸೌಜನ್ಯಾತ್ಮಕ ಪ್ರಯತ್ನವೇ ಹೊರತು ಅವುಗಳ ಮೇಲೆ ಶಿಸ್ತುಬದ್ಧ ವಿಮರ್ಶೆಯನ್ನೊ, ಭಾಷ್ಯವನ್ನೊ, ಸ್ತುತಿಯನ್ನೊ ಮಾಡಲು ಹೊರಟಿಲ್ಲ. ಹಾಗಾಗಿ ಈ ಉದ್ದೇಶದ ಮಿತಿಯನ್ನು ಹೇಳುವ ಅನಿವಾರ್ಯತೆ ನಮ್ಮ ಸಾಂಸ್ಕೃತಿಕ ಸು-ಸಂದರ್ಭದಲ್ಲಿ ಇದೆ. ಹೊಗಳಿಕೆಗೆ ಕಿವಿಯಗಲಿಸಿ, ರೋಮ ನಿಗುರಿಸಿ ಪರಮಾನಂದ ಅನುಭವಿಸುವ ಭಟ್ಟಂಗಿಗಳ ಜಾವದಿಯಾಗಿ ಬಲ್ಲಿದವರ ಲೇವಡಿಯಾಗಿ 'ಬಹು ಪರಾಕಿನ ಪಾಳಯ'ವಾಗುತ್ತಿರುವ ಇಂದಿನ ವಿಮರ್ಶಾಲೋಕವು ತಲುಪುತ್ತಿರುವ ಕರುಣಾಜನಕ ಸ್ಥಿತಿಯಲ್ಲೂ ವಿಚಿತತೆಯಲ್ಲಿ ಸಣ್ಣ ಬಿರುಕುಗಳು ಇದ್ದರೂ ಅದನ್ನು ಮರೆಗಟ್ಟುವಂತೆ ಬರೆಯಬಲ್ಲ ವಸ್ತುನಿಷ್ಠತೆ ನಾಗರಾಜಪ್ಪನವರ ಇನ್ನೊಂದು ಗುಣವೂ ಹೌದು.

ತಮ್ಮ ಲೇಖನಗಳ ವಸ್ತು ಸಮಾಜ ಮುಖಿಯಾಗಿರಬೇಕೆಂಬ ಅವರ ಕಾಳಜಿಯ ಫಲವೆ ದಲಿತ ಬದುಕಿನ ವಿವಿಧ ಮಗ್ಗುಲುಗಳನ್ನು ಮಮತೆಯಿಂದ ನೋಡುವುದಾಗಿದೆ. ಇಂದು ನಮಗೆ ತಿಳಿದಿರುವಂತೆ ದಲಿತ ಪದ ಚ್ಯೂಯಿಂಗ್ ಗಮ್ ಆಗಿ, ಹಿಗ್ಗಾ-ಮುಗ್ಗಾ ಎಳೆದಾಡಬಲ್ಲ ತಮ್ಮ ಹಿತಾಸಕ್ತಿಗಳ ಗುರಾಣಿಯಾಗಿ, ಬೆದರು ಬೊಂಬೆಯಾಗಿ ವಿವಿಧ ರೀತಿಯಲ್ಲಿ ಕೆಲವರಿಗೆ ಕಂಡಿದ್ದರೆ, ಮನುಷ್ಯನಾಗಿ, ಸಹಜೀವಿಯಾಗಿ ನೋಡುವ ನಿಚ್ಚಳ ಮನಸ್ಸು ಹೊಂದಿರುವವರ ನಡುವೆ ಅರ್ಥವಂತಿಕೆಯನ್ನು ಪಡೆದಿದೆ. ನಮ್ಮ ಪುರೋಹಿತ-ರಾಜಶಾಹಿಯ ಅಪವಿತ್ರ ಮೈತ್ರಿಕೂಟದ ಅವಕೃಪೆಗೆ ಸಿಕ್ಕಿ ಜರ್ಜರಿತವಾಗಿ ಹೋಗಿರುವ ದಲಿತ ಸಮೂಹವನ್ನು ಪ್ರಜಾಪ್ರಭುತ್ವದ ಸಂದರ್ಭದಲ್ಲಿ ಸಾಮಾಜಿಕ ಆರ್ಥಿಕ ಸಮಾನತೆಯ ಪರಿಕಲ್ಪನೆಗೆ ಅರ್ಥ ತುಂಬಲು ಅಗತ್ಯವಾಗಿ ಪರಿಗಣಿಸಲೇ ಬೇಕಾಗಿದೆ. ಹಾಗಾಗಿ ಹಿಂದೆಂದಿಗಿಂತಲೂ ಇಂದು ಈ ಪದದ ಜನ ಸಮೂಹ ವಿಶೇಷ ಗಮನ ಸೆಳೆದಿದೆ. ಹಲವು ಶತಮಾನಗಳ ಘೋರ ಇತಿಹಾಸವಿರುವ ಈ ವರ್ಗದ ಸ್ಥಿತಿ

ಕಣ್ಣಿಗೆ ರಾಚುವಂತೆ ಕರುಣಾಜನಕವಾಗಿರುವಾಗ ಅದನ್ನು ಕುರಿತು ಬುದ್ಧಿ ಜೀವಿ ವರ್ಗ ಅಂಬೋ ಬುದ್ಧಿಜೀವಿ ವರ್ಗ ತಮ್ಮ ಬೌದ್ಧಿಕ ಕಸರತ್ತಿಗೆ ಬಳಸಿಕೊಳ್ಳುತ್ತಿರುವ ನಾಚಿಕೆಗೇಡಿನ ಪ್ರಸಂಗವನ್ನು ಪ್ರಜಾಪ್ರಭುತ್ವದ ಸಂದರ್ಭದಲ್ಲೇ ಕಾಣುತ್ತಿರುವುದು ಎಂತಹ ಕ್ರೂರ ವ್ಯಂಗ್ಯ. ಪ್ರಜಾಪ್ರಭುತ್ವದ ರಜಸ್ಸು ಗುಣಗಳಲ್ಲಿ ಸಂವಾದ, ವಿಮರ್ಶೆ ಸರಿಯಾದುದಾದರೂ ದಲಿತರ ವಿಚಾರದಲ್ಲಿ ರಿಯಾಯಿತಿಗೆ ಅವಕಾಶವನ್ನು ನೀಡುವುದೇ ದಲಿತಪರ, ಅದನ್ನು ಪ್ರಶ್ನಿಸುವುದು ದಲಿತ ವಿರೋಧಿ ಎಂಬ ಪ್ರತಿಷ್ಠೆ ಸಂಗತಿಗಳೇ ದಲಿತ ಪ್ರಶ್ನೆಯ ಹಿಂದಿರುವ ಅಂತಃಕರಣವನ್ನು ಮಸುಕುಗೊಳಿಸುವ ಅಪಾಯವೂ ಇದೆ. ಅಬ್ರಹಾಂ ಲಿಂಕನ್ನರಿಗೆ ಪ್ರಜಾಪ್ರಭುತ್ವಕ್ಕೆ ವ್ಯಾಖ್ಯಾನವನ್ನು ನೀಡುವ ನೈತಿಕತೆ ದಕ್ಕಿದ್ದು ಅವರು ನಿಗ್ರೋ ಸಮೂಹದ ಜೊತೆ ಪ್ರಾಮಾಣಿಕ ಸಂವಾದಕ್ಕೆ ತಮ್ಮನ್ನು ಬದ್ಧಗೊಳಿಸಿಕೊಂಡಿದ್ದ ಕಾರಣಕ್ಕಾಗಿ ಎಂಬ ಸರಳ ತಿಳುವಳಿಕೆಯನ್ನು ಮರೆಯಬಾರದು.

ಪ್ರಜಾಪ್ರಭುತ್ವ ಸಂದರ್ಭದ ಅಸ್ಪೃಶ್ಯತೆಯ ಸ್ವರೂಪ ಮತ್ತು ಅದರ ಗತಿ ತಾರ್ಕಿಕತೆಯನ್ನು ಗುರುತಿಸುವಾಗ 'ಬ್ರಾಹ್ಮಣ ಅಸ್ಪೃಶ್ಯತೆ' ಎಂಬುದೊಂದು ಹುಟ್ಟಿಕೊಳ್ಳುವ ಸ್ಥಿತಿಯನ್ನು ಕನಿಕರದಿಂದ ನೋಡುವ ಈಚೀಚಿನ ಪ್ರವೃತ್ತಿ ಪ್ರಜಾಪ್ರಭುತ್ವದ ತಾತ್ವಿಕ ನೆಲೆಗಟ್ಟಿಗೆ ಉಂಟುಮಾಡುವ ನಯವಂತಿಕೆಯ ಧಕ್ಕೆಯನ್ನು ಕೆ.ಜಿ.ಎನ್ ಅವರು ಸದ್ದಿಲ್ಲದೆ ಗುರುತಿಸುತ್ತಾರೆ. ಅಸ್ಪೃಶ್ಯತೆಯನ್ನು 'ಎನ್‌ಕ್ಯಾಷ್' ಮಾಡಿಕೊಳ್ಳುತ್ತಾ ಅದನ್ನು ಒಂದು ಗುಣ ಅಂತಲೋ, ವರ ಅಂತಲೋ ಪರಿಭ್ರಮಣೆ ಹುಟ್ಟಿ ಹಾಕುವ ಮೂಲಕ ಅಸ್ಪೃಶ್ಯತೆಯನ್ನು ಸ್ಥಿರೀಕರಿಸುವ ಹುನ್ನಾರವೂ ನಡೆಯುತ್ತಿದೆ ಎಂದು ಎಚ್ಚರಿಸುತ್ತಾರೆ.

ಸಾಮಾಜಿಕ-ಧಾರ್ಮಿಕ ಸ್ಥಾನಮಾನ ತೀರ್ಮಾನದಲ್ಲಿ ಬದಲಾಗುವ ಕಾಲಮಾನಕ್ಕನುಗುಣವಾಗಿ ಹುಟ್ಟು-ಗುಣ ಸಿದ್ಧಾಂತದ ಉಡುಗೆಯ ಮೂಲಕ ಸಂದರ್ಭೋಚಿತವಾಗಿ ವೇಷ ಹಾಕುವ ಗೋಸುಂಬೆ ಗುಣದ ಪುರೋಹಿತ ಶಾಹಿಯ ಹುಟ್ಟುಗುಣವನ್ನು ಗುರುತಿಸುವಲ್ಲಿ ಕೆ.ಜಿ.ಎನ್ ಅವರಿಗೆ ಯಾವುದೇ ಮುಜುಗರ ಎದುರಿಸುವ ಸಂದರ್ಭ ಇಲ್ಲ. ಅತಿ ಭೌತಿಕತೆ ಅಭೌತಿಕತೆಯ ಗುಪ್ತಾಂಗಗಳಿಗೆ ಸ್ಖಲಿಸುವವರು ಸತ್ಯ ಹೇಳಲು ಹೆದರಿಕೆಯಿದೆ. ಮೈನೋಯದ ಸವಲತ್ತು, ಒಣಪ್ರತಿಷ್ಠೆ ಗೌರವಗಳಿಗಾಗಿ ಜೊಲ್ಲು ಸುರಿಸುವವನಿಗೆ ನಾಲಿಗೆ ಹಿಡಿಯುತ್ತದೆ. ನ್ಯಾಯನಿಷ್ಠೂರಿ ದಾಕ್ಷಿಣ್ಯಪರ ನಾನಲ್ಲ ಅಂದ ಬಸವಣ್ಣ ನಮಗೆ ಎಂದೆಂದೂ ಪ್ರಿಯವಾಗುವುದು ಇಂತಹ ಗುಣಗಳಿಗಾಗಿಯಲ್ಲವೆ?

ಈ ಲೇಖನದಲ್ಲಿ ಪ್ರೊ॥ ಕೆ.ಜಿ.ಎನ್ ರವರ ತಪ್ಪುಗ್ರಹಿಕೆಯೊಂದು ಇಣುಕುವುದಾದರೂ ಚರ್ಚೆಗೆ ಪಕ್ಕಾಗುವ ಸಂಗತಿಯೊಂದನ್ನು ಗುರುತಿಸುವಲ್ಲಿ ಉತ್ಸಾಹ ತೋರುತ್ತಾರೆ. ಬಂಡಾಯ ಮತ್ತು ದಲಿತ ಸಾಹಿತ್ಯ ತಮ್ಮ ಸಂಸ್ಕೃತಿಯ ವಾಚ್ಯಗೊಂಡ ದುಷ್ಟತನಕ್ಕೆ ಸಮ ಎನ್ನುವುದನ್ನು ಸೂಚ್ಯವಾಗಿ ಹೇಳುವ ಮನಸ್ಸು ಅವರಿಗೆ ಇರುವುದು ಪ್ರಶ್ನಾರ್ಹವಾದುದು.

'ದಲಿತ ಅಧಿಕಾರಿಗಳು ಭ್ರಷ್ಟರಾಗುತ್ತಿಲ್ಲವೆ' 'ಬ್ರಾಹ್ಮಣರು ಮತ್ತು ಸವರ್ಣೀಯರು ಭ್ರಷ್ಟರಲ್ಲವೆ' ಎಂದು ನಾಗರಾಜಪ್ಪನವರು ಎತ್ತುವ ಪ್ರಶ್ನೆ-ಮರುಪ್ರಶ್ನೆಯೇ ಅಸಂಗತವಾದುದು.

ಭ್ರಷ್ಟಾಚಾರ ಜಾತಿ, ಮತ, ಲಿಂಗಗಳನ್ನು ಮೀರಿದ್ದು. ಅದಕ್ಕೆ ಯಾವ ಕಟ್ಟುಪಾಡುಗಳೂ ಇಲ್ಲ. ಆದರೆ ಭಾರತ ತನ್ನ ಅಸಂಖ್ಯಾತ ಜಾತಿಗಳಿಗೆ ಭ್ರಷ್ಟಾಚಾರಿಗಳು ಎಂಬ ಮಹಾಜಾತಿ ಸೇರ್ಪಡೆಯಾದುದನ್ನು ಸಲೀಸಾಗಿ ಅರಗಿಸಿಕೊಂಡಿದೆ. ಪ್ರಪಂಚದ ಯಾವ ವ್ಯವಸ್ಥೆಗೂ ಇಲ್ಲದ ಇಂತಹ ವಿಶೇಷ ಗುಣವೊಂದು ನಮಗೆ ದಕ್ಕಿರುವುದು ಪುಣ್ಯವಲ್ಲವೆ!

ದಲಿತ ಪ್ರಶ್ನೆಯನ್ನು ತನ್ನ ಜೀವಮಾನದ ಪ್ರಶ್ನೆಯನ್ನಾಗಿಸಿಕೊಂಡ ಅಂಬೇಡ್ಕರರನ್ನು ಹೊರಗಿಟ್ಟು ನೋಡುವುದೇ ಕ್ರೂರ ಮಾತ್ರವಲ್ಲ ಅಸಂಗತವೂ ಹೌದು. ಕಗ್ಗತ್ತಲೊಳಗೆ ಕಪ್ಪು ಜನಾಂಗ ಇಪ್ಪತ್ತನೆ ಶತಮಾನದಲ್ಲಿ ಕಂಡು ಕೊಂಡ ಬೆಳ್ಳಿ ಕಿರಣ ಅಂಬೇಡ್ಕರ್ ಅನ್ನುವುದು ಕ್ಲೀಷೆಯಾದರೂ ಸತ್ಯ. ಮನುಷ್ಯ ವಿರೋಧಿ, ರಾಜಕೀಯ ಗುಲಾಮಗಿರಿ, ಹಿಂದೂಗಳ ಧಾರ್ಮಿಕ-ಸಾಮಾಜಿಕ ಗುಲಾಮಗಿರಿ ನಡುವೆ ಅಪ್ಪಟ ಭಾರತೀಯ ಜನಾಂಗವೊಂದರ ಪ್ರಶ್ನೆಗೆ ಮಹತ್ವ ತಂದಿದ್ದು; ಅದಕ್ಕೆ ಇಡೀ ಭಾರತವೇ ಸಕಾರಾತ್ಮಕವಾಗಿಯೊ, ನಕಾರಾತ್ಮಕವಾಗಿಯೊ ಪ್ರತಿಕ್ರಿಯಿಸಲು ಪ್ರಯತ್ನಿಸಿದ್ದೇ ಆಗಿತ್ತು. ಚಳುವಳಿಯೊಳಗೆ ಚಳುವಳಿ ರೂಪಿಸಿದ್ದು, ಭೂರಿ ಉಂಡ ಭಾರತದ ವಿರುದ್ಧ ಹಸಿದ ಭಾರತವನ್ನು ಸಂಘಟಿಸಿದ್ದು ವಿಶೇಷ. ಅಂಬೇಡ್ಕರ್‌ರು ಇಬ್ಬಾಯಿಯ ಕತ್ತಿಯನ್ನು ಎದುರಿಸಿದ ರೀತಿ ಕುತೂಹಲ ಹುಟ್ಟಿಸುವಂತದ್ದು. ಹಿಂದೂ ಧರ್ಮದೊಳಗೆ ಯುದ್ಧ ಸಾರುವ ಮೂಲಕ ಗಾಂಧೀಜಿಯ ನೇತೃತ್ವದ ಕಾಂಗ್ರೆಸ್ ಭಾರತದ ಸ್ವಾತಂತ್ರ್ಯ ಪ್ರಶ್ನೆಯಷ್ಟೆ ದಲಿತ ಪ್ರಶ್ನೆಯನ್ನೂ ಮುಂಚೂಣಗೆ ತಂದಿದ್ದು ಅಂಬೇಡ್ಕರ್ ಅವರು ಹಿಂದೂ ಸುಧಾರಕ ಸಂತ ಗಾಂಧಿ ಮತ್ತು ಅವರ ಅನುಯಾಯಿಗಳಲ್ಲಿ ಹುಟ್ಟಿಸಿದ ನಡುಕದಿಂದಾಗಿಯಲ್ಲವೆ.? ಈ ಸಂದರ್ಭದಲ್ಲಿ ಬ್ರಿಟಿಷರು ಬೆಂಕಿ ಬಿದ್ದ ಮನೆಯಲ್ಲಿ ಗಳ ಇರಿಯುವ ಕೃತ್ಯ ಮಾಡಿದ್ದನ್ನು ಪ್ರೊ॥ ಕೆ.ಜಿ.ಎನ್ ಗಮನಿಸುತ್ತಾರೆ. 'ಶತ್ರುವಿನ ಶತ್ರು ಮಿತ್ರ' ಎಂಬಂತೆ ಬ್ರಿಟಿಷರ ಸಖ್ಯ ಅಂಬೇಡ್ಕರ್‌ಗೆ ಧಾರ್ಮಿಕ-ಸಾಮಾಜಿಕ ವಿಮೋಚನೆಗೆ ಮಾತ್ರ ಸೀಮಿತ. ರಾಜಕೀಯ ವಿಮೋಚನೆಗೆ ಹೋರಾಡುವ ಛಾತಿ ಭಾರತೀಯರಿಗೆ ಆಗ ಮಾತ್ರ ದಕ್ಕೀತು ಎಂಬುದು ಅವರ ಸರಿಯಾದ ನಿಲುಮೆಯಾಗಿತ್ತು. ಬ್ರಿಟಿಷರಂತೆಯೇ ಸವರ್ಣೀಯ ಹಿಂದೂಗಳು ನಂಬಿಸಿ ತಲೆ ಹೊಯ್ಯುವುದರ ಬಗೆಗೆ ಅಂಬೇಡ್ಕರ್‌ಗೆ ಇದ್ದ ಆತಂಕ ಸಹಜವಾದುದು. ವಸಾಹತು ಶಾಹಿಯಿಂದ ಪಡೆಯುವ ಭಾರತ ವಿಮೋಚನೆ ದಲಿತ ವಿಮೋಚನೆ ಯಾಗಲಾರದು ಎಂದು ಗ್ರಹಿಸಿದ್ದ ಅಂಬೇಡ್ಕರ್ ಒಬ್ಬ ದೇಶದ್ರೋಹಿ ಎಂಬ ಹಣೆಪಟ್ಟಿ ಹಚ್ಚಿದ್ದನ್ನು ಮತ್ತೊಮ್ಮೆ ತಮ್ಮ ಲೇಖನದಲ್ಲಿ ಪ್ರೊಫೆಸರ್ ಅವರು ಮರುಕದಿಂದ ನೆನೆಯುತ್ತಾರೆ. 'ಜಗತ್ತಿನಾದ್ಯಂತ ತುಂಬಿರುವ ದುಃಖಿತ ಮನುಕುಲದ ನಾಯಕತ್ವವನ್ನು ವಹಿಸಿಕೊಳ್ಳುವುದನ್ನು ನಾನು ಬಯಸಲಾರೆ, ಅಸ್ಪೃಶ್ಯರ ಸಮಸ್ಯೆಯೊಂದನ್ನೆ ನಿರ್ವಹಿಸುವುದೂ ನನ್ನ ಸಾಮರ್ಥ್ಯಕ್ಕೆ ಮೀರಿದ್ದಾಗಿದೆ' ಅನ್ನುವ ಅಂಬೇಡ್ಕರರನ್ನು ಒಬ್ಬ ವ್ಯಕ್ತಿ ಜೀವಿತದ ಅವಧಿಯಲ್ಲಿ ಸಾಧಿಸಬಹುದಾದುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ಅಸಲಿತನವನ್ನು ಅವರ ಪುಟ್ಟ ಲೇಖನ ಒಳಗೊಳ್ಳಲು ಸಾಧ್ಯವಾಗಿದೆ.

ಮೂರನೆ ಲೇಖನದಲ್ಲಿ ಲೇಖಕರು ಕನ್ನಡ ಸಾಹಿತ್ಯ ಬಹುಮುಖಿ ಸಂಸ್ಕೃತಿಗೆ

ತೋರಿದ ಪ್ರತಿಕ್ರಿಯೆಯನ್ನು ವಿಶ್ಲೇಷಿಸುವಲ್ಲಿ ಆಸಕ್ತಿ ತೋರುತ್ತಾರೆ. ಈ ನೆಲದ ಜನರನ್ನು ಗೌರವಿಸುವುದೆಂದರೆ ಬಹುಸಂಸ್ಕೃತಿಯ ಸಮಾಜವನ್ನು ಗೌರವಿಸುವುದೆಂದೇ ಅರ್ಥ. ಅದನ್ನು ಒಳಗೊಂಡೇ ಬೆಳೆಯಲು ನಾನು ಬದ್ಧ ಎನ್ನುವ ಮತ್ತು ಸುತರಾಂ ವಲ್ಲೆ ಎನ್ನುವ ಕನ್ನಡ ಸಾಹಿತ್ಯದ ಮುಖಗಳನ್ನು ಬಿಚ್ಚಿಡುತ್ತಾರೆ. ಇದು ಅವರು ಸಾಂಸ್ಕೃತಿಕ ಸಂದರ್ಭದಲ್ಲಿ ನಾನು ಎತ್ತಕಡೆ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತದೆ. ನಗರ ಮತ್ತು ಗ್ರಾಮೀಣ ಬರಹಗಾರರ ನಡುವಿನ ಸಾಂಸ್ಕೃತಿಕ ಸಂಘರ್ಷ ಕನ್ನಡ ಸಾಹಿತ್ಯದ ಉಳಿವಿನ ಒಂದು ಅನಿವಾರ್ಯ ಸಂಗತಿ. ಸಾಹಿತ್ಯದ ಸಿದ್ಧ ಸೂತ್ರಗಳಿಗೆ ಜೋತು ಬೀಳುವ, ಬದುಕನ್ನೇ ಸಾಹಿತ್ಯದ ಕಳ್ಳುಬಳ್ಳಿಯೆಂದೆ ದೃಢವಾಗಿ ಬಗೆದ ನಗರ ಮತ್ತು ಗ್ರಾಮೀಣರ ಮುಖಾ ಮುಖಿಗೆ ಬಹಳಷ್ಟು ಪೂರಕ ಪರಿಕರಗಳನ್ನು ದಟ್ಟವಾಗಿ ಒದಗಿಸುವಲ್ಲಿ ಪ್ರೊ॥ ಕೆ.ಜಿ.ಎನ್ ಸಫಲರಾಗಿದ್ದಾರೆ. ಕಮರು ಡೇಗಿನ ಜನಕ್ಕೆ ಒಣ ಬಾಯಿಯಿಂದ ಉಗುಳಿಂಡಿ ನುಂಗಿದಾಗ ಏಳುವ ಗುಳ್ಳೆಯ ಗೋಳು ಹೇಗೆ ಗೊತ್ತಾಗಬೇಕು. ಹಳ್ಳಿಯ ಬದುಕನ್ನು ಹಿಂಡುತ್ತಿರುವ, ಆ ಹಿಂಡುವ ಮೂಲಕ ಪರಮಾನಂದ ಕಾಣುತ್ತಿರುವ ಕ್ರೂರ ಶಕ್ತಿಗಳ ಬಗೆಗೆ ಅಸಹನೆ, ಆಕ್ರೋಶ ತೀವ್ರವಾಗಿದೆ. ಸಾಹಿತ್ಯ ಮತ್ತು ಬದುಕಿನ ಅನನ್ಯತೆಯನ್ನು ಹೇಳದೆ ಮುಚ್ಚುಮರೆ ಮಾಡುವ ಸ್ಥಾವರ ಸರದಾರರನ್ನು ತರಾಟೆಗೆ ತೆಗೆದುಕೊಂಡಿರುವ ಇವರ ಕಾಳಜಿಯನ್ನು ಗಮನಿಸದಿರಲು ಸಾಧ್ಯವಿಲ್ಲ. ♦

" ಏದುವ ಮುದಿ ಎತ್ತನು ತುಂಬಿರುವ ಕೆಟ್ಟ ಲಾರಿಗೆ ತುಂಬಿ
ದಿಣ್ಣೆಯ ದಾರಿಯಲಿ ಬಾರ ಚಾಟಿಯಿಂದ ಬಿಗಿವ
ನಿರ್ದಯ ಕ್ರೂರಿಯ ಪಾಷಾಣ ಹೃದಯದ ದೌಲತ್ತು ನಡೆದಿದೆ
ಮೂಳೆ ಹಂದರದ ಮೇಲೆ ಮಾಂಸ ಅಜ್ಜಿ ಬಜ್ಜಿ
ಮುಲುಕಿ ಮುಲುಕಿ ಎಳೆವಾಗ ನರನಾಡಿಯ ಮಸೆತ
ತೊಟ್ಟಿಕ್ಕುವ ರಕ್ತ ಮೂಕ ಪ್ರಾಣಿಯ ಯಂತ್ರ ಚಕ್ರಕೆ ಗ್ರೀಸು
ಮಾಂಸದಾಸಗೆ ಕಾಗೆ ಮೂಳೆಕುಕ್ಕುವ ಕುಟಿಕ "

-ಪ್ರೊ॥ ಕೆ.ಜಿ.ನಾಗರಾಜಪ್ಪ.

13. ಇಕ್ಕಟ್ಟು-ಬಿಕ್ಕಟ್ಟು - ಒಂದು ಟಿಪ್ಪಣಿ

ಪ್ರೊ॥ ಕ.ವೆಂ ರಾಜಗೋಪಾಲ

ಪ್ರೊ॥ ಕೆ.ಜಿ ನಾಗರಾಜಪ್ಪ ನನ್ನ ಹಳೆಯ ಆಪ್ತರಲ್ಲಿ ಒಬ್ಬರು. ಅವರ ಮರುಚಿಂತನೆ ಬಂದಾಗಿನಿಂದ ನನ್ನ ಮತ್ತು ಅವರ ಪರಿಚಯವು ಹೆಚ್ಚು ನಿಕಟವಾಯಿತು ಎನ್ನಬಹುದು. ಹಲವಾರು ಬಾರಿ ನಾವು ಕುಳಿತು ಅನ್ಯೋನ್ಯವಾಗಿ ಬಿಚ್ಚು ಮನಸ್ಸಿನಿಂದ ಅಭಿಪ್ರಾಯಗಳನ್ನು ಹಂಚಿಕೊಂಡಿರುತ್ತೇವೆ. ಇದರ ಫಲವೆನ್ನುವಂತೆ ಈಗ ನನಗೆ ಅವರ ಒಂದು ಬಹು ಮುಖ್ಯ ಕೃತಿಯನ್ನು ಕುರಿತು ಬರೆಯಬೇಕಾದ ಸಹಜ ಮುಲಾಜು ತಾನಾಗಿಯೇ ಒದಗಿ ಬಂದಿದೆ. ಇದಕ್ಕೆ ಇಬ್ಬರಲ್ಲಿಯೂ ಎರಡು ಮಾತಿರಲಾರದು.

ಈ ಕೃತಿಯ ಹೆಸರಿನ್ನು ಸ್ಪಷ್ಟವಾಗಿಲ್ಲ. ಆದರೂ ಸೂಚ್ಯವಾಗಿ ಇಕ್ಕಟ್ಟು-ಬಿಕ್ಕಟ್ಟು ಅಥವಾ ಕನ್ನಡ ಸಾಹಿತ್ಯದ ಇಕ್ಕಟ್ಟು-ಬಿಕ್ಕಟ್ಟು- ಎಂದೋ ಆಗಬಹುದಾಗಿದೆ. ಈ ಹೆಸರೇ ಈ ಕೃತಿಯ ಮಹತ್ವವನ್ನೂ ಇದರ ಪರಿಣಾಮಗಳನ್ನೂ ಸೂಚಿಸುತ್ತದೆ. ಏಕೆಂದರೆ ಕನ್ನಡ ಸಾಹಿತ್ಯದಲ್ಲಿ ರಮ್ಯ, ಪ್ರಗತಿ ಶೀಲ, ನವ್ಯ ಮತ್ತು ಬಂಡಾಯದ ಆಕೃತಿಗಳು ಕ್ರಮವಾಗಿ ಎಂಬಂತೆ ಮೂಡುತ್ತ ಬಂದು ಸಧ್ಯಕ್ಕೆ ಬಂಡಾಯವೂ ಸಂದಿಗ್ಧ ಸ್ಥಿತಿಯಲ್ಲಿ ಸಿಕ್ಕಿಬಿದ್ದಂತೆ ತೋರುತ್ತದೆ. ಹೀಗಾಗುವುದಕ್ಕೆ ಹಲವು ಕಾರಣಗಳನ್ನು ಕಾಣಬಹುದು:

1. ಸ್ವಾತಂತ್ರ್ಯ ಬಂದ ಮೇಲೆ ನಮ್ಮ ಸಾಮಾಜಿಕ ಸ್ಥಿತಿ ಗತಿಗಳು ಸುಧಾರಣೆಯ ಹಾದಿಯನ್ನು ಹಿಡಿದದ್ದು.

2. ಬಳಕೆಯ ಭಾಷೆಯು ಕನ್ನಡವೊಂದೇ ಆಗಿರದಂತೆ ರಾಜಕೀಯ ಅಡ್ಡಿಗಳೂ ಒಡಮೂಡಿದುದು.

3. ವಿದ್ಯಾಭ್ಯಾಸದ ಸದವಕಾಶವನ್ನು ಪಡೆದುಕೊಂಡಿದ್ದ ಒಂದು **ಹೋಮೋಜಿನಿಯಿಟ** ಜೀರದ ವರ್ಗವೊಂದು ತನ್ನ ಅಂತರ ವೈರುಧ್ಯಗಳ ನಡುವೆಯೇ ರಾಜಕೀಯ ಮತ್ತು ಧಾರ್ಮಿಕ ಅವಕಾಶಗಳನ್ನು ತನ್ನದನ್ನಾಗಿ ಮಾಡಿಕೊಳ್ಳುವ ಯತ್ನದಲ್ಲಿ ಇಂಗ್ಲೀಷನ್ನು ಬಳಸತೊಡಗಿದ್ದು.

4. ಪಾಶ್ಚಾತ್ಯ ಸಾಹಿತ್ಯಗಳ ಪ್ರಭಾವದಿಂದ ಮುಖ್ಯವಾಗಿ ಇಂಗ್ಲೀಷ್ ಮೂಲಕ ಹೊಸ ಹಾದಿಗಳನ್ನು ಸಾಹಿತ್ಯ ಮಾರ್ಗದಲ್ಲಿ ಗುರುತಿಸ ತೊಡಗಿದ್ದು.

ಇತ್ಯಾದಿ ಇತರ ಕಾರಣಗಳು ಸೇರಿದಂತೆ ಒಂದು ಗೋಜಲು ಗೋಜಲಾದ ಪರಿಸ್ಥಿತಿ ಒದಗಿ ಸರಿಯಾದ ದಾರಿ ಕಾಣದಂತಾಗಿರುವುದರಿಂದ ಮತ್ತು ವಿಚಾರವಂತರು ಒಟ್ಟು ಸೇರುವುದು ಸಾಧ್ಯವಾಗದೆ ರಾಜಕೀಯದಲ್ಲಿ ಕೂಡ ಸಂಧಿಗ್ಧತೆಯುಂಟಾಗಿ ಅಸ್ಥಿರತೆಯ ಹಂತದಲ್ಲಿರುವುದರಿಂದ ಇಂಥದನ್ನು ಸಂಧಿಕಾಲವೆಂದು ಗುರುತಿಸಬೇಕಾಗುತ್ತದೆ. ನಮ್ಮ ರಾಜಕೀಯದ ಸ್ಥಿತಿ ಗತಿಯೂ ಸ್ಥಿರ ರೂಪವನ್ನು ತಾಳುವವರೆಗಂತೂ ಸಾಮಾಜಿಕ ಸ್ಥಿತಿ

ಗತಿಯ ಮುಂದಿನ ಹೆಜ್ಜೆಯು ಪ್ರಶ್ನೆಯಾಗಿಯೇ ಉಳಿದಿರುತ್ತದೆ. ಮೇಲೆ ಹೇಳಿದ ವಿಚಾರಗಳೆಲ್ಲವನ್ನೂ (ಬಹು ಪಾಲನ್ನಾದರೂ) ಒಳಗೊಂಡಂತೆ ಇಕ್ಕಟ್ಟು-ಬಿಕ್ಕಟ್ಟು ಧ್ವನಿಸುವ ಕೃತಿಯಾಗಿದೆಯಷ್ಟೆ. ಇದರ ಮಹತ್ವವಿರುವುದು ಪ್ರೊ॥ ನಾಗರಾಜಪ್ಪನವರು ಇವೆಲ್ಲದರ ವಿಚಾರ ವಿಸ್ತರಣೆಯಲ್ಲಿಯೂ ತಾವಾಗಿಯೇ ಒಳಗಾದವರಾಗಿ ನಮ್ಮೆಲ್ಲರ ನಡುವೆ ಮೌನಿಯಾಗಿಯೂ (ಏಕೆಂದರೆ ಸುಮ್ಮನೆ ವಾದ ವಿವಾದಕ್ಕೆ ಅವರು ಕಾಲು ಕೆರೆದುಕೊಂಡು ಬರುವವರಲ್ಲ.) ನಿರಾತಂಕವಾಗಿ ಕುಳಿತವರಲ್ಲ ಎಂಬುದಕ್ಕೆ ಈ ಕೃತಿಯು ಆಧಾರವಾಗುತ್ತದೆ.

ನಮ್ಮ ಇಂದಿನ ಸಾಹಿತ್ಯ ಪರಿಸ್ಥಿಯಲ್ಲಿ ಮುಂದೇನು: ? ಎಂಬ ಪ್ರಶ್ನೆಯು ಸಹಜವಾಗಿದೆ. ಮೊದಲು ನಾವೆಲ್ಲರೂ ಹೊಣೆಗಾರರಾಗಿ ಬೆಳೆದಿರುವ ಸಾಹಿತ್ಯವನ್ನು ಮರುಚಿಂತನೆಗೆ ಒಳಪಡಿಸಿ ನೋಡಬೇಕು. ಸಣ್ಣ ಪುಟ್ಟ ಗೊಂದಲಗಳನ್ನು, ರಾಜಕೀಯದ ಆತಂಕಗಳನ್ನು ಸೇರಿಸಿದಂತೆ, ಪರಿಶೀಲಿಸಬೇಕು. ಏಕೆಂದರೆ ಈಗಿನ ಸ್ಥಿತಿ ಗತಿಯು ಕೇವಲ ಭಾಷೆಯ ಸಮಸ್ಯೆಯಾಗಿರುವುದಿಲ್ಲ. ಕನ್ನಡ ಸಾಹಿತ್ಯದ ಅಮೂಲ್ಯ ಆಸ್ತಿಯಂತಿರುವ ಹಳೆಗನ್ನಡವನ್ನು ಕಡೆಗಣಿಸುತ್ತಿರುವ ಪರಿಸ್ಥಿತಿಯು ವಿಶ್ವ ವಿದ್ಯಾಲಯಗಳಲ್ಲಿ ಅಧ್ಯಯನದಲ್ಲಿ ತೊಡಗುತ್ತಿರುವ ವಿದ್ಯಾರ್ಥಿಗಳ ಮುಂದಿದೆ. ಅದನ್ನು ಅಧ್ಯಯನ ಮಾಡುವ ವಿಧಿ-ವಿಧಾನಗಳಲ್ಲಿ ನಮ್ಮ ಹಿಂದಿನ ಎರಡು ಮೂರು ತಲೆಮಾರುಗಳು ಎಷ್ಟೊಂದು ಆಸಕ್ತಿಯಿಂದ ಅಧ್ಯಯನ ಮಾರ್ಗವನ್ನು ಖಚಿತಪಡಿಸಿದ್ದಾರೆಯೋ ಅದೆಲ್ಲವೂ ಕಾಲ ಪ್ರವಾಹದಲ್ಲಿ ಕೊಚ್ಚಿ ಹೋಗ ಬಹುದಾಗಿದೆ. ಈಗ ಎಲ್ಲಾ ವರ್ಗಗಳ ಜಾತಿಗಳ ಅಂದರೆ ಬದುಕಿಗೆ ಇಂಥ ಆಳವಾದ ಅಧ್ಯಯನದ ಅವಶ್ಯಕತೆಯಿಲ್ಲದಿರುವವರೇ ಅಧಿಕವಾಗಿ ತರಗತಿಗಳಿಗೆ, ಕೇವಲ ಆರ್ಥಿಕವಾಗಿ ಉಪಯುಕ್ತವಾಗುವ ಬೋಧನವರ್ಗಕ್ಕೆ ಸೇರಲು ಅವಕಾಶವಿರುವವರು, ಬರುತ್ತಿದ್ದಾರೆಯಷ್ಟೆ. ಅಂಥವರಿಂದ, ನಮ್ಮ ಹಳಗನ್ನಡದ ಆಸ್ತಿಪಾಸ್ತಿಯು ಹಲವಾರು ಕಾರಣಗಳಿಂದ ಉಳಿಯಬೇಕೆಂಬ ಜವಾಬುದಾರಿಯುತವಾದ ಆಸಕ್ತಿಯು ಉಳಿಯುವ ಭರವಸೆಯು, ಇಂದಿನ ರಾಜಕೀಯ-ಸಾಮಾಜಿಕ ಸ್ಥಿತಿಯಲ್ಲಿ, ಇರಲಾರದೆಂದು ಅನ್ನಿಸುತ್ತಿದೆ. ಇದು ಮುಖ್ಯವಾಗಿ ರಾಜಕೀಯ ಪ್ರಗತಿಯಿಂದಲೇ ಇಂದಿನ ಸಾಮಾಜಿಕ ಪರಿಸ್ಥಿತಿಯು ಆರ್ಥಿಕವಾಗಿ ಅಭಿವೃದ್ಧಿಯಾಗ ಬೇಕಾಗಿರುವುದರಿಂದಾಗಿದೆ. ನಮ್ಮ ಗುರು ಪರಂಪರೆಗೆ ಇಂಥ ಪರಿಸ್ಥಿತಿಯು ಒದಗಿ ಬಂದಿರಲಿಲ್ಲ ಎಂಬುದನ್ನು ಮರೆಯದೆ ಪರಿಶೀಲಿಸಬೇಕಾಗಿದೆ. ಸಾಹಿತ್ಯ ಪ್ರಗತಿ ಕೂಡ ರಮ್ಯದಿಂದ ಮೊದಲಾಗಿ ಬಂಡಾಯದ ಅಸ್ತಿತ್ವದಿಂದ ಕೂಡಿದ್ದರೂ ಅನಿವಾರ್ಯ ಸ್ಥಿತ್ಯಂತರಗಳಿಂದಾಗಿ ಅಪ್ರಯೋಜಕವಾಗುತ್ತಿದೆಯೆಂಬುದನ್ನು ಇಂದಿನ ರಾಜಕೀಯವು ಸಮರ್ಥಿಸುತ್ತಿದೆ. ಮುಖ್ಯವಾಗಿ ನಮ್ಮ ಸಾಹಿತ್ಯ ಪ್ರಗತಿಯು, ವಿಮರ್ಶೆಯ ಅಳತೆಗೋಲಿನಿಂದ ಸರಿಯಾಗಿ ಭಾರತೀಯ ಇತರ ಭಾಷಾ ವಲಯಗಳದ್ದಕ್ಕಿಂತಲೂ ಉತ್ತಮವಾಗಿರುವಂತೆ ಕಂಡು ಬಂದರೂ ಸಮಾಜಿಕವಾದ ಉಪಯುಕ್ತತೆಯಲ್ಲಿ ಹಿಂದಿ ಮತ್ತು ಅದರ ಸಂಬಂಧಿಕವಾದ ಭಾಷಾ ವಲಯಗಳಿಗಿಂತ ಹಿಂದೆ ಬಿದ್ದಿರುವಂತಿದೆ. ಇಂತಹ ಆಕ್ರಮಣದ ಸ್ಥಿತಿಯು ನಮ್ಮ ಭಾರತೀಯ ರಾಜಕೀಯ ಪರಿಸ್ಥಿತಿಯ ಫಲವಾಗಿಯೇ ಒದಗಿ ಬಂದಂತಿದೆ. ಇಂದಿಗಂತೂ ದಕ್ಷಿಣದ ಪ್ರಾದೇಶಿಕತೆಗಳಿಗೆ ಉತ್ತರದವರು ಹೊರಳಿ

ಕೂಡ ನೋಡಲಾರರು ಎನ್ನಿಸಿದೆ. ಅವರಿಗೆ ಬೆಂಬಲವಾಗಿರುವ ಸಂಸ್ಕೃತವು ನಮಗೆ ಅಷ್ಟೊಂದು ಇರುವುದಿಲ್ಲ ಅಂದರೆ ಆಶ್ಚರ್ಯವಾಗಬೇಕಾಗಿಲ್ಲ. ಇಲ್ಲಿಯ ಮತೀಯ ವೈವಿಧ್ಯಗಳ ಆತಂಕಗಳು ಉತ್ತರದಲ್ಲಿ ಬೇರೆಯೇ ಆಗಿರುವುದಲ್ಲದೆ ದೇಶದಲ್ಲಿ ರಾಜಕೀಯವನ್ನು ರೂಪಿಸಿಕೊಳ್ಳುವ ಅವಕಾಶವೇ (ಅವರಿಗೆ) ಅನುಕೂಲವಾಗಿರುತ್ತಾ ದಕ್ಷಿಣದ ಸಂಸ್ಕೃತಿಯನ್ನು ಮೂಲತಹ ಅಲುಗಿಸುವ ಅವಸ್ಥೆಯನ್ನು ಮುಟ್ಟಿದಂತಿದೆ. (ಕಾದು ನೋಡ ಬೇಕೆಂಬುದಕ್ಕೆ ಒಂದು ದಕ್ಷಿಣದವರೂ ಶಾಮಿಲಾಗ ಬೇಕಾದೀತು) ಏಕೆಂದರೆ ನಮ್ಮಲ್ಲಿ ಮೈನಾರಿಟಿ ಮೆಜಾರಿಟಿ ಕಮ್ಯೂನಿಟಿಗಳೆಂಬ ಅಂಶವೂ ಸಾತತ್ಯವನ್ನು ಕಾಣುವಂತಿರುವುದಿಲ್ಲ. ಇಂದಿನ ವಿದ್ಯಾವಂತನು ಕೇವಲ ಆರ್ಥಿಕವಾಗಿ ಗಟ್ಟಿಗನಾಗಬೇಕೆಂಬ ಹಂಬಲವನ್ನು ಸಾರ್ವತ್ರಿಕವಾಗಿ ಸಾರಿ ಹೇಳುವಂತಾಗಿದೆಯಷ್ಟೆ. ಇದು ಪ್ರತಿಯೊಂದು ಜಾತಿಯಲ್ಲಿಯೂ ಕಂಡು ಬರುತ್ತಿರುವ ವಿಷಯವಾಗಿರುತ್ತದೆ. ಆದುದರಿಂದ ಮುಂದಿನ ವಿದ್ಯಾವಂತರು ತಮ್ಮ ತಮ್ಮ ಪ್ರದೇಶಿಕತೆಗೆ ಒಂದೊಂದು ಭಾಷೆಯಿರುವುದು ಕ್ಷೇಮಕರವೆಂಬ ತತ್ವಕ್ಕೆ ಛಲವಂತರಾಗಿ ಬದುಕುವಲ್ಲಿ ತಮ್ಮ ತಮ್ಮ (ಕನ್ನಡಿಗರು ಕನ್ನಡ ಭಾಷೆಯ ಬಗ್ಗೆ) ಭಾಷೆಯನ್ನು ಪ್ರಾದೇಶಿಕತೆಯ ಮಿತಿಗಳಲ್ಲಿಯಾದರೂ ಕಾಪಾಡುವ ಹೊಣೆಗಾರಿಕೆಯಿಂದ ಬಾಳಿಯಾರೆಂಬ ಭರವಸೆಯೂ ಅಸ್ಪಷ್ಟವಾಗಿಯೇ ಉಳಿದಿದೆ. ನಮ್ಮ ರಾಜಕೀಯದಲ್ಲಿ ಭಾಷೆಯ ಕಳಕಳಿಯು ಸ್ಥಿರವಾಗದಿದ್ದಲ್ಲಿ ಈವರೆಗಿನ ಸಾಹಿತ್ಯ ಕೃಷಿಯು 18 ನೇ ಶತಮಾನಕ್ಕೆ ಹಿಂದೆ ಇದ್ದ ಸ್ಥಿತಿಗೇ ಮುಟ್ಟ ಬಹುದಾಗಿದೆ. ಅಂದರೆ ನಮ್ಮ ಭಾಷೆಯ ಅಸ್ತಿರೂಪವೆಲ್ಲಾ ಲೈಬ್ರರಿಯಲ್ಲಿಯಷ್ಟೇ ಉಳಿಯ ಬಹುದಾಗಿದೆ. ಇಂತಹ ಆತಂಕಗಳ ಕಾಲದಲ್ಲಿ ಗೆಳೆಯ ನಾಗರಾಜಪ್ಪ ಅವರ ಇಕ್ಕಟ್ಟು-ಬಿಕ್ಕಟ್ಟು ಕೃತಿಯು ಬೆಳಕಿಗೆ ಬರುತ್ತಿದೆ. ಇಂತಹ ಎಚ್ಚರದ ಕೃತಿಯನ್ನು ಕುರಿತು ಬರೆಯಲು ನನಗೆ ಆಕಸ್ಮಿಕವಾಗಿ ಅವಕಾಶ ಒದಗಿ ಬಂದಿದೆಯಲ್ಲದೆ ನಾನೊಬ್ಬನೇ ಕನ್ನಡ ಸಾಹಿತ್ಯದ ಪ್ರೇಮಿಯಲ್ಲ.

ಗೆಳೆಯರಾದ ನಾಗರಾಜಪ್ಪನವರ ಇಕ್ಕಟ್ಟು-ಬಿಕ್ಕಟ್ಟು ಎಂಬ ಕೃತಿಯ ಆಶಯವೇ 'ಮರುಚಿಂತನೆ' ಯಾಗಿದೆ. ಇದು ಅವರ ಮೊದಲ ಸಂಗ್ರಹದ ಮುಂದಿನ ಭಾಗದಂತೆ ಕಂಡು ಬಂದರೂ ಅಚ್ಚರಿಯಿಲ್ಲ. ಸಕಾಲದಲ್ಲಿ ಅಂದರೆ ಕನ್ನಡ ಸಾಹಿತ್ಯದ ಹಲವು ಸಮಸ್ಯೆಗಳು ಉತ್ತರವಿಲ್ಲದೆ ಉಳಿದಿರುವಾಗ ಇಂಥ ಕೃತಿಯು ನೆರವಾಗಬಹುದಾಗಿದೆ. ನಮ್ಮ ಪರಿಶೀಲಕರು ಬಹಳ ಹೆಸರು ಗಳಿಸಿದ್ದರೂ ಕೂಡ ವಚನಗಳ ಅಧ್ಯಯನವು ಒಂದು ನಿಲುಗಡೆಗೆ ಮುಟ್ಟಿದಂತಿಲ್ಲ. ಅವುಗಳ ಹಲವು ಅಧಿಕೃತವೆನ್ನಿಸಿಕೊಳ್ಳುತ್ತಿರುವ ಎಡಿಶನುಗಳು ಬಂದಿವೆಯಾದರೂ ಯಾವುದೂ ಸಮರ್ಪಕವಾದಂತಿಲ್ಲ. ಒಂದೊಂದೂ ಬೇರೆ ಬೇರೆ ಹೊಸ ಹೊಸ ಸಮಸ್ಯೆಗಳನ್ನೇ ಬೆಳಕಿಗೊಡ್ಡುತ್ತಿವೆ. ಏಕೆಂದರೆ 'ವಚನದ ಅಧ್ಯಯನಕ್ಕೆ' ಅವಶ್ಯವಾದ ಸಾಮಾಜಿಕ - ಐತಿಹಾಸಿಕ-ಧಾರ್ಮಿಕ ನೆಲೆಗಳ ಸಂಕೀರ್ಣತೆಯನ್ನು ನಮ್ಮ ವಿದ್ವಾಂಸರು ಬಗೆಹರಿಸಲು ಸಾಧ್ಯವಾಗಿಲ್ಲ. ಆದುದರಿಂದ ಈ ಕೃತಿಯು ಅಂಥ ಒಂದು ಜಟಿಲವಾದ ಸಮಸ್ಯೆಗೆ ಉತ್ತರದ ಹಾದಿಯನ್ನು ತೋರಬಲ್ಲುದಾಗಿದೆ. ಇಲ್ಲಿಯ ಲೇಖನಗಳಲ್ಲಿ 'ಗುಪ್ತಸಮಾಜಗಳು' ಎಂಬುದು ತುಂಬ ಮಹತ್ವದ ಲೇಖನವಾಗಿದೆ. ಇಂಥ ಸಮಾಜಗಳನ್ನು ಕುರಿತ ವಿವಿಧ ಗ್ರಂಥಗಳಿಂದ ಅಧ್ಯಯನ ಪೂರ್ವಕವಾಗಿ ಪಡೆದ

ವಿವರಗಳನ್ನು ಸಮರ್ಪಕವಾಗಿ ಇದರಲ್ಲಿ ಸೇರಿಸಲಾಗಿದೆ. ಇಂಥ ನೆರವೊಂದು ಅಧ್ಯಯನಕ್ಕೆ ದೊರಕಿರುವುದು ಇದೇ ಮೊದಲು ಎಂಬುದನ್ನೂ ಮರೆಯುವಂತಿಲ್ಲ. ಇದರ ಸಂಗಡ 'ದೇವರ ದಾಸಿಮಯ್ಯ-ಮರುಚಿಂತನೆ' ಎಂಬ ಲೇಖನವೂ ಸೇರಿದೆ. ಇದರಲ್ಲಿ ಮರುಚಿಂತನೆಗೆ ಒಂದು Methodology ಯನ್ನು ತೋರಿಸಿಕೊಟ್ಟಂತೆಯೂ ಆಗಿದೆ.

ಮುಂದೆ 'ಕನ್ನಡದ ಸ್ಥಿತಿಗತಿ-ಅಂದು ಇಂದು' ಮತ್ತು 'ಕನ್ನಡ ವಿಮರ್ಶೆಯ ಇಕ್ಕಟ್ಟು-ಬಿಕ್ಕಟ್ಟು' ಎಂಬ ಲೇಖನಗಳೂ ಇವೆಯಷ್ಟೆ. ಹೀಗೆ ಈ ಗ್ರಂಥದ ಮುಖ್ಯ ಉದ್ದಿಶ್ಯವನ್ನು ಖಚಿತ ಪಡಿಸುವಲ್ಲಿ ಕೂಡ ನಾಗರಾಜಪ್ಪ ಮೊದಲಿಗರಾದಂತೆ ಕಂಡು ಬರುತ್ತಾರೆ. ಇಂಥ ಲೇಖನಗಳು ಹಿಂದೆ ಬಂದಿಲ್ಲವೆಂತಲ್ಲ. ಆದರೆ ಅವುಗಳೆಲ್ಲದರ ಮರು ಚಿಂತನೆಯನ್ನು ಮಾಡುವಲ್ಲಿ ಮೊದಲ ಹೆಜ್ಜೆಗಳನ್ನು ಮೂಡಿಸಿದಂತೆ ಆಗಿದೆ.

ಈ ಕೃತಿಯಲ್ಲಿ ಸೇರಿರುವ ಮತ್ತೊಂದು ಬಗೆಯ ಲೇಖನವೆಂದರೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ 'ದಲಿತರ ಸ್ಥಿತಿಗತಿ' ಯಾಗಿದೆ. ಸ್ವಾತಂತ್ರ್ಯ ಬಂದ ಮೇಲೆ ಸಮಾನತೆಯ ಹಕ್ಕು ಬಾಧ್ಯತೆಗಳು ಅವರಿಗೆ ಸಹಜವಾಗಿಯೇ ದೊರಕಬೇಕಾದುದು ಇಂದಿಗೂ ಅರೆಕೊರೆಯಾದಂತೆ ಮೇಲು ವರ್ಗಗಳವರು ತಮ್ಮ ಅಧಿಕಾರವನ್ನು ಎಂದಿನಂತೆಯೇ ಉಳಿಸಿಕೊಳ್ಳಲು ಇಚ್ಚಿಸುವಂತೆ ಊಳಿಗಮಾನ್ಯ ಸಮಾಜದ ರೀತಿ ನೀತಿಗಳೇ ಈಗಲೂ ಅಡ್ಡಿಯಾಗಿರುತ್ತವೆಯಲ್ಲದೆ ಹೊಸ ಹೊಸ ಸಮಸ್ಯೆಗಳನ್ನು ಇಡೀ ದೇಶೀಯ ಬದುಕಿನಲ್ಲಿ ಹುಟ್ಟು ಹಾಕಿದಂತಾಗಿದೆ. ಒಂದೆಡೆ ಹರಿಜನರು ಮತ್ತು ಇತರ ದಲಿತರ ವರ್ಗಕ್ಕೆ ಸೇರಿದವರು ತಮ್ಮ ತಮ್ಮ ವ್ಯಕ್ತಿತ್ವವೆನ್ನ ಬಹುದಾದ ನಿಲುವುಗಳನ್ನು ಒಳಗೊಂಡ ಪರಿಸ್ಥಿತಿಯು ಪರಿಹಾರಕ್ಕಾಗಿ ಕಾಯ್ದಿದ್ದರೆ ಉಳಿದವರಿಂದ ಅಡ್ಡಿಗಳೇ ಬರುತ್ತಿವೆಯಷ್ಟೆ. ನಮ್ಮ ಪುರಾತನ ಸಾಮಾಜಿಕ ಗತಿ ಸ್ಥಿತಿಗಳಲ್ಲಿ ಬದಲಾವಣೆಗೆ ದಲಿತರು ಬಯಸಿದರೂ ಜಾತಿವಾದಿಗಳ ಬಿಗಿಯಾದ ಕಟ್ಟು ನಿಟ್ಟುಗಳು ಸಡಿಲವಾಗುವ ಲಕ್ಷಣಗಳೂ ಕಂಡು ಬರುತ್ತಿಲ್ಲ. ದಲಿತರ ಊಳಿಗದಿಂದ ಇಂದಿಗೂ ಒಂದು ಆರ್ಥಿಕವಾಗಿ ಉತ್ತಮವಾಗುತ್ತಾ ಇರುವ ವರ್ಗವು ಅದರ ಸಮರ್ಥನೆಯನ್ನು ಆರ್ಥಿಕ ಸೆಳೆತಗಳಿಂದಲೇ (Economical means) ತಮ್ಮ ಹಿಡಿತಗಳನ್ನು ಸಡಿಲಿಸಲು ಅಂಥವರ ಕೈಗಳಲ್ಲಿ ಇಂದಿನ ರಾಜಕೀಯ ಮುತ್ಸದ್ದಿತನವೂ ಇರುವುದರಿಂದ ಸ್ವಾತಂತ್ರ್ಯದ ಸೌಲತ್ತುಗಳೆಲ್ಲವೂ ಇಂಥ ಧನಿಕ ವರ್ಗಕ್ಕೆ ಮಾತ್ರ ಮೀಸಲಾದಂತೆ ಆಗಿದ್ದು ಕೇವಲ ಮಾತಿನಲ್ಲಿ ಆದರ್ಶಗಳನ್ನು ತಮ್ಮ ಗೌರವಕ್ಕಾಗಿ ಬಳಸಿಕೊಳ್ಳುತ್ತಾ ದಲಿತರನ್ನು ಅವರ ಹಳೆಯ ಬಡತನದ ಸ್ಥಿತಿ ಗತಿಯಲ್ಲೇ ಉಳಿಸುವ ಪ್ರಯತ್ನವಾಗಿದೆ, ಮತ್ತು ಇಂಥದರಿಂದ ನ್ಯಾಯವಾದ ಪ್ರಯೋಜನವಾಗುವಂತಿಲ್ಲ. ಇಂಥ ವಿಷಯಗಳನ್ನು ವಿಶದೀಕರಿಸುವ ಲೇಖನಗಳು ಇದರಲ್ಲಿ ಸೇರಿವೆ.

ಒಟ್ಟಾರೆ ಈ ಕೃತಿಯು ಮರುಚಿಂತನೆಯ ಒಂದು ಆಟದ ಪಟ್ಟುಗಳನ್ನು ಬೆಳಕಿಗೊಡ್ಡುವ ವಿದ್ಯಾವಂತರನ್ನು ಕೂಡ ಎಚ್ಚರಿಸುವುದಾಗಿದೆ. ಇನ್ನು ಅಧ್ಯಯನಕ್ಕೆ ಈ ಕೃತಿಯ ಉಪಯೋಗಗಳನ್ನು ಬಿಡಿಸಿ ಹೇಳಬೇಕಾಗಿಲ್ಲವೆನ್ನಿಸಿದೆ. ಇದಕ್ಕಾಗಿ ನನ್ನ ವಂದನೆಗಳು ಸಲ್ಲುತ್ತಿವೆ.♦

14. ಚಾರಿತ್ರಿಕ ಪ್ರತಿಕ್ರಿಯೆಯಾಗಿ ದೊಡ್ಡ ಸಂಕಣ್ಣನಾಯಕ

ಪಿ.ಚಂದ್ರಿಕ

ಚರಿತ್ರೆಯೆಂಬುದು ಒಂದು ಕಾಲದ ವರ್ತನೆಯ ವಿವರವಾಗಿ ನಮ್ಮ ಸಂದರ್ಭವನ್ನು ಪ್ರವೇಶಿಸುವಾಗ ಅದು ಎದುರಿಸುವ ಅಥವಾ ಎದುರಿಸದೆಯೂ ಇರಬಹುದಾದ ಮುಖ್ಯ ಪ್ರಶ್ನೆ ನಿಖರತೆಯ ಕುರಿತಾದ್ದು. ಹಲವು ಮೂಲಾಧಾರಗಳಿಂದ ಮೈಪಡೆವ, ಊಹೆಗಳ ಸಂಯೋಜನೆಯಲ್ಲಿ ಸಿದ್ಧಗೊಳ್ಳುವ ಈ ವಿವರಗಳು ಅಷ್ಟೇ ಭಿನ್ನ ಭಿನ್ನ ಸಾಮಾಜಿಕ, ಧಾರ್ಮಿಕ ಹಿತಾಸಕ್ತಿ ಹಾಗೂ ತತ್ಕಾಲೀನ ಪ್ರವರ್ತನೆಯನ್ನು ಅಚ್ಚುಗೊಳಿಸುವ ಪ್ರಧಾನ ಧಾರೆಯ ಎರಕದಲ್ಲಿ ಹಾದು ಬಂಧವಾಗಿರುವುದರಿಂದ ಚರಿತ್ರೆಗೆ ಸತ್ಯದ ಚೌಕಟ್ಟು ದಕ್ಕಿದೆಯೆಂದು ಹೇಳಲಿಕ್ಕೇನೂ ಆಗದು. ಚರಿತ್ರೆಯ ಬಿಡಿ ಬಿಡಿ ಆವೃತ್ತಿಗಳನ್ನೇ ಎದುರಿಗಿಟ್ಟುಕೊಂಡು ಪರಿಶೀಲಿಸಿದಾಗಲೂ ಇಂತಹ ಗೊಂದಲಗಳು ಕಾಣಿಸಿಕೊಳ್ಳದೇ ಇರುವುದಿಲ್ಲ. ಮೇಲು ನೋಟಕ್ಕೆ ಅಥವಾ ಪ್ರಭಾವ ಛಾಪಿಸಬಲ್ಲ. ಶಕ್ತತೆಯಿಂದಾಗಿಯೂ ನಿಖರವಾಗಿ ಕಾಣಬಹುದಾದ ಐತಿಹಾಸಿಕ ವಿವರಗಳು ತೀರಾ, ಅವುಗಳ ಸ್ಥಳದಲ್ಲಿ ಹಾಗಲ್ಲದೆಯೂ ಇರಬಹುದು; ಸದ್ಯಕ್ಕೆ ಪ್ರಮಾಣೀಭೂತವಲ್ಲದೆಯೂ ಇರಬಹುದು. ಮತ್ತೆ, ನಮ್ಮ ಮಧ್ಯದ ಸಂಗತಿಗಳೇ ಅಪ್ರಮಾಣಿಕ ಪೋಷಾಕು ಅಥವಾ ಪೋಕಿಯ ವ್ಯಂಗ್ಯದಲ್ಲಿ ಪ್ರಕಟವಾಗುವುದನ್ನು ನೋಡಿಕೊಂಡರೆ, ಕೈಬಿಟ್ಟ ಕಾಲಗತಿಯೊಂದರ ಬಗೆಗಿನ ವಿವರಗಳೆಲ್ಲಾ ಸತ್ಯ ಶುದ್ಧವೇ ಆಗಿರಬೇಕೆಂದು ಅಪೇಕ್ಷಿಸುವುದು ಸಾಧುವಾಗಲಿಕ್ಕಿಲ್ಲವೆನ್ನಿಸಿದರೂ, ಈಗಾಗಲೇ ದಕ್ಕಿದ, ಮತ್ತೂ ಬೇರೆಯೇ ಆಗಿ ದಕ್ಕುವ ಸಾಧ್ಯತೆಗಳೊಳಗೊಳ್ಳುವ ಚರಿತ್ರೆಯ ಬಗೆಗಿನ ಅನುಮಾನದ ಮತ್ತು ಸತ್ಯ ಶೋಧನ ತೀಕ್ಷ್ಣತೆಯ ದೃಷ್ಟಿ ಅಸಾಧುವಂತೂ ಅಲ್ಲ. ಚರಿತ್ರೆ ಸ್ವೀಕೃತವಾಗುವುದೇನಿದ್ದರೂ ಸದ್ಯದ ಮನೋವೃತ್ತಿಯ ನೆಲೆಯನ್ನು ಅವಲಂಬಿಸಿರುತ್ತದೆ. ಅಂಥ ಮನೋವೃತ್ತಿ ಕ್ರಿಯಾಶೀಲವಾಗಿದ್ದಲ್ಲಿ ಚರಿತ್ರೆಯ ಪ್ರಾಮಾಣಿಕತೆ ಪ್ರಶ್ನಿಸಲ್ಪಡುತ್ತದೆ. ಹೊಸ ದೃಷ್ಟಿಯ ವ್ಯಾಖ್ಯಾನಗಳ ಸಿಟ್ಟಿನ ನಡೆ ಮೂರ್ತವಾಗುತ್ತದೆ.

ಇಲ್ಲಿ, ಚರಿತ್ರೆಯ ಪುನರ್‌ರಚನೆಯ ಸಾಧ್ಯತೆಗಳು ಫಲಗೊಳ್ಳುವ ಎರಡು ನೆಲೆಗಳನ್ನು ಗುರುತಿಸಬಹುದು. ಒಂದು ಶೋಧನೆಯ ಸೈದ್ಧಾಂತಿಕ ಮತ್ತು ತಾರ್ಕಿಕ ಕ್ರಮಬದ್ಧತೆಯಿಂದ ಕಟ್ಟಬಹುದಾದ ನಿರೂಪಣೆ. ಇದು ಅಪ್ಪಟ ಚಾರಿತ್ರಿಕ ಮೈಕಟ್ಟಿನದೇ ಆಗಿದ್ದು, ಪ್ರಾಮಾಣಿಕದ ದೃಷ್ಟಿಯಿಂದ ವಿಸ್ತೃತವಾದದ್ದು ಮತ್ತು ಸ್ಪಷ್ಟವಾದದ್ದಾಗಿರುತ್ತದೆ. ಇನ್ನೊಂದು, ಸಾಹಿತಿಕ ಇಲ್ಲವೆ ಕಲೆಯ ನೆಲೆ. ಇಲ್ಲಿನ ಅರ್ಥ ಚಾರಿತ್ರಿಕ ಪ್ರಾಮಾಣಿಕತೆಯನ್ನು ಸಾಧ್ಯವಾದಷ್ಟೂ ಉಳಿಸಿಕೊಂಡು, ಆದರೆ ಅದನ್ನು ಮೀರಿ ಸಮಷ್ಟಿ ಸಂದರ್ಭವೊಂದರ ಸಾಂಸ್ಕೃತಿಕ ಅಧಿಕೃತತೆಯ ಕಥನವಾಗಿ ಬೆಳೆಸುವ ಕಡೆಗಿನದು. ಚರಿತ್ರೆಯು ಹೀಗೆ ಕಥನವಾಗುವ ಮೂಲಕ ಸಮಕಾಲೀನತೆಗೆ ಹತ್ತಿರ ಸಾಗುವ ಸಮಕಾಲೀನತೆಯ ಅರ್ಥಗಳನ್ನು ಪ್ರವೇಶಿಸುವ ನಿಲುವಿನಲ್ಲಿಯ ಶಿಲ್ಪವಾಗಿ ಇಂತಹ ನಿರ್ವಚನೆ ಚಾರಿತ್ರಿಕತೆಯನ್ನು ದಾಟಿ ಸಾಂಸ್ಕೃತಿಕ ಕ್ಯಾನ್‌ವಾಸಿನಲ್ಲಿ ಪಕ್ಕಾಗುತ್ತದೆ.

ಕಲಾವಿದ/ಬರಹಗಾರನ ಕೃತಿಯೊಂದು ಚರಿತ್ರೆ ಕೇಂದ್ರಿತವಾಗುವುದೆಂದರೆ ಒಂದೇ ಆ ಚಾರಿತ್ರಿಕ ಕಾಲಘಟ್ಟವನ್ನೂ, ಇವತ್ತಿನ ಸಂದರ್ಭದಲ್ಲಿ ಅನುಮೋದಿಸುತ್ತ ಅದರ ಫಲಿತವನ್ನು ಆಶಯವಾಗಿ ಧರಿಸುವುದು; ಇಲ್ಲಾ, ಆ ಚಾರಿತ್ರಿಕ ವ್ಯಕ್ತಿಯ ಜೀವನ ಸಂದರ್ಭವನ್ನು ಚರಿತ್ರೆಯ ಚೌಕಟ್ಟಿನೊಳಗೆ ಇಟ್ಟು ಅದಷ್ಟೇ ಚಾರಿತ್ರಿಕ ಕಾಲಘಟ್ಟವನ್ನೂ, ಇವತ್ತಿನ ಸಂದರ್ಭದಲ್ಲಿ ಅನುಮೋದಿಸುತ್ತ ಅದರ ಫಲಿತವನ್ನು ಆಶಯವಾಗಿ ಧರಿಸುವುದು; ಇಲ್ಲಾ, ಆ ಚಾರಿತ್ರಿಕ ವ್ಯಕ್ತಿಯ ಜೀವನ ಸಂದರ್ಭದವನ್ನು ಚರಿತ್ರೆಯ ಚೌಕಟ್ಟಿನೊಳಗೇ ಇಟ್ಟು ಅದಷ್ಟೇ ಆಗದ ಹಾಗೆ ಕಡೆಯುವುದು. ಬಹುಶಃ ಈ ಚಿತ್ರಿಸುವ ಕ್ರಮ ಒಪ್ಪಿಸುವ ಕ್ರಮಕ್ಕಿಂತ ಭಿನ್ನವಾದುದಾಗಿ, ತನ್ನಷ್ಟಕ್ಕೆ ತಾನೇ ಉದ್ದೇಶಪೂರ್ವಕವಾಗಿ ಬಿಡುವುದರಿಂದ ಇಲ್ಲಿ ಎದ್ದುಕೊಳ್ಳೊ ಪ್ರಶ್ನೆ ವಸ್ತುನಿಷ್ಠತೆಗೆ ಸಂಬಂಧಿಸಿದ್ದಾಗುತ್ತದೆ. ನಿರ್ಲಿಪ್ತತೆ ಇಲ್ಲಿ ಇಲ್ಲವೇ ಆಗಿಬಿಡುವಂತಹ ಸಂಭಾವ್ಯತೆಯೂ ಎದುರಾಗುತ್ತದೆ. ಕೃತಿಯ ಇತಿಹಾಸದ ಭಿತ್ತಿ ಚರಿತ್ರೆ ಮತ್ತು ಪುರಾಣಗಳಲ್ಲಿ, ಜತೆ ಜತೆಗೇ ಸದ್ಯದ ಪ್ರಭಾವ ಮತ್ತು ಒತ್ತಡಗಳಲ್ಲಿಯೂ ಓಲಾಡುವ ಡೋಲಾಯಮಾನ ಸ್ಥಿತಿಯನ್ನು ಪ್ರತಿನಿಧಿಸುವುದು ಇದಕ್ಕೆ ಕಾರಣ.

ಯಾವುದೇ ಐತಿಹಾಸಿಕ ಕಾದಂಬರಿ ಇಂಥ ಸಮಸ್ಯೆಗಳಿಂದ ಹೊರಗುಳಿಯುವುದು ಸಾಧ್ಯವಿಲ್ಲ. ವಿಸ್ತೃತವಾದ ಹರಹಿನಲ್ಲಿ ಚರಿತ್ರೆಯನ್ನು ಕಥನಿಸುವಾಗ ಚರಿತ್ರೆಯನ್ನು ಪುನರ್‌ರಚಿಸುವ ಪ್ರಯತ್ನವೇ ಅದರ ಮುಖವಾಗಿ, ವ್ಯಕ್ತಿತ್ವ, ಘಟನೆ, ಸನ್ನಿವೇಶಗಳು ಅದಕ್ಕನುಗುಣವಾಗಿ ರೂಪ ಪಡೆಯುತ್ತವೆ. ಇದೊಂದರ್ಥದಲ್ಲಿ ಮರಳಿ ಗಳಿಸಲಾಗದ ಕಾಲಕ್ಕೆ ಮರಳಿ ಹೋಗುವ ಸಂವೇದನೆಯ ರೂಪುಗೊಳ್ಳುವಿಕೆ. ಚರಿತ್ರೆಯ ಹಲವು ಅಂಶಗಳ ವೈಭವೀಕರಣ, ಚರಿತ್ರೆಯ ಎಲ್ಲಾ ಅರ್ಥವಂತಿಕೆಗಳು ಈ ನೆಲೆಗಳಲ್ಲಿ ಮಾತ್ರ ತೆರೆದುಕೊಳ್ಳುತ್ತಾ ಹೋಗುವುದು, ಮತ್ತಿವನ್ನೂ ಪ್ರಾಮಾಣೀಕರಿಸುವ ಯತ್ನ-ಇವೆಲ್ಲವೂ ಇಲ್ಲಿ ಜಾಗ ಪಡೆಯುತ್ತವೆ. ಹೀಗೆ ಮೂಲಕ್ಕೆ ಮರಳುವ, ತನ್ನ ಸಂಸ್ಕೃತಿಯ ಬೇರುಗಳನ್ನು ಹುಡುಕುವ ಯತ್ನ ಮತ್ತು ಅಂತಹ ಇರಾದೆಯ ಮೂಲಕವೇ ಚಾರಿತ್ರಿಕ ನಿರೂಪಣೆಯು ತೆರೆದು ಕೊಳ್ಳುವುದು. ಇದು ಸರಿಸುಮಾರು ಎಲ್ಲಾ ಚಾರಿತ್ರಿಕ ಕಾದಂಬರಿಗಳ ಸಂಹಿತೆ. ಯಾವುದೇ ಐತಿಹಾಸಿಕ ಕಾದಬಂರಿಯ ಈ ತೆರನ ಇತಿಮಿತಿಗಳ ಕುರಿತ ಎಚ್ಚರಿಕೆಯ ತಿರುವುಗಳಲ್ಲಿ ನಿಂತು ಅದರ ಕಥನಗತಿಯನ್ನು ನೋಡಿಕೊಳ್ಳುವುದು ಇತಿಹಾಸದ ಸತ್ಯತೆಗಿಂತ, ಇತಿಹಾಸವು ಧರಿಸಬಹುದಾದ ಸತ್ಯವೆಂತಹದು ಮತ್ತು ಅಂತಹ ಧರಿಸುವಿಕೆಯ ವೇಳೆ ಪ್ರವೃತ್ತವಾದ ಅಂಶಗಳೇನೆಂಬುದರ ವಿವೇಚನೆಗೆ ದಾರಿ ಮಾಡಿಕೊಡಬಲ್ಲದು.

ಕೆ.ಜಿ. ನಾಗರಾಜಪ್ಪ ಅವರು ಬರೆದ 'ದೊಡ್ಡ ಸಂಕಣ್ಣ ನಾಯಕ' ಐತಿಹಾಸಿಕ ಕಾದಂಬರಿ ಆಧ್ಯಾತ್ಮದೆಡೆಗಿನ ತುಡಿತ ಮತ್ತು ರಣಧೀರತೆಯು ಸಂಗಮಿತವಾದ ವ್ಯಕ್ತಿತ್ವವೊಂದರ ಕಥೆಯನ್ನು ಒಂದು ನಿನಾದಮಯ ಆದರ್ಶಸ್ಥಿತಿಯ ನೆಲೆಯಲ್ಲಿ ಹೇಳಿಕೊಂಡು ಹೋಗುತ್ತದೆ. ಕೆಳದಿಯ ವೀರ ಸದಾಶಿವನಾಯಕನ ಹಿರಿಯ ಮಗ ದೊಡ್ಡ ಸಂಕಣ್ಣ ನಾಯಕನ ಖಡ್ಗಧರ್ಮ ಮತ್ತು ಭಗವಂತನಲ್ಲಿ ಮನಸ್ಸು ನಿಲ್ಲಿಸುವ ಹಂಬಲದ ಆಧ್ಯಾತ್ಮಧರ್ಮವನ್ನು ಸಮ ಸಮವಾಗಿ, ಸಮರ್ಥವಾಗಿ ಪರಿಪಾಲಿಸಿದ ಕಥನ ಇಲ್ಲಿ ತೆರೆದುಕೊಳ್ಳುತ್ತದೆ.

ದೊಡ್ಡ ಸಂಕಣ್ಣನಾಯಕನ ಚಾರಿತ್ರ್ಯವಿಲ್ಲಿ, ಪ್ರಭುನಿಷ್ಠೆ ಮತ್ತು ಧರ್ಮನಿಷ್ಠೆಯ

ಪಾತ್ರಗಳಲ್ಲಿ ತೂಕ ತಪ್ಪದ ಹಾಗೆ ಒಡಮೂಡಿದೆ. ಕೆಳದಿಯರಸರ ಮನೆತನದ ಗುಣ ಪ್ರತಿನಿಧಿಯಾಗಿ ಆತನ ಕಥೆ ಸಾಕಾರಗೊಳ್ಳುತ್ತದೆ. ವಿಜಯನಗರದ ಸಾಮಂತರಾಗಿ ಕೆಳದಿಯನ್ನಾಳಿದ ರಾಜವಂಶ ಸಚ್ಚಾರಿತ್ರ್ಯದ ಪರಂಪರೆಯನ್ನುಳ್ಳದ್ದು. ದೊಡ್ಡ ಸಂಕಣ್ಣನಾಯಕನ ಚಾರಿತ್ರಕ್ಕೆ ನಿಚ್ಚಳ ತಳಹದಿ ನೀಡುವ ಸಂಗತಿಗಳಾಗಿ ಬರುವ ವಿವರಗಳು ಈ ಕಾದಂಬರಿಯಲ್ಲಿ ಅವನು ತಾಯ ಬಸಿರಲ್ಲಿದ್ದಾಗಿನ ಸಮಯದಿಂದ ಕೊಡಲ್ಪಟ್ಟಿವೆ. ದೊಡ್ಡಸಂಕಣ್ಣನಾಯಕನ ವೀರಗುಣ, ಧರ್ಮಗುಣ ಅವನಿಗೆ ಆತನ ತಂದೆ ಸದಾಶಿವ ನಾಯಕನ ರಕ್ತದ ಬಳುವಳಿ.

ಸದಾಶಿವ ನಾಯಕನ ಮಡದಿ ಭದ್ರವ್ವೆ ಬಸಿರಿಯಾಗಿದ್ದಾಳೆ. ಕಲ್ಬುರ್ಗಿಯ ನವಾಬನ ವಿರುದ್ಧ ದಂಡೆತ್ತಿ ಹೋಗುವಂತೆ ಸದಾಶಿವ ನಾಯಕನಿಗೆ, ಕೃಷ್ಣದೇವರಾಯನಿಂದ ಆಣತಿ ಬಂದಿದೆ. ರಾಣಿಯಿಂದ ಬೀಳ್ಕೊಳ್ಳುತ್ತಿರುವ ಸಂದರ್ಭದಲ್ಲಿ "…. ಪ್ರಭುಗಳ ಆಣತಿಯನ್ನು ಮೀರುವಂತಿಲ್ಲ" ಎಂದು ಅವನ ಬಾಯಿಂದ ಬಂದ ಮಾತಿಗೆ ಭದ್ರವ್ವೆಯ ಪ್ರತಿಕ್ರಿಯೆಯನ್ನು ಗಮನಿಸಬೇಕು. "ಮಾತು ಮೀರುವ ಮಾತೇಕೆ ದೊರೆ. ಎಂದೆಂದೂ ಕೆಳದಿ ತನ್ನ ಜೀವದ ಹಂಗುದೊರೆದು ವಿಜಯನಗರಕ್ಕಾಗಿ, ಹೋರಾಡಿದೆ. ಹೋದೆಡೆಯಲ್ಲೆಲ್ಲಾ ತನ್ನ ಗೆಲವು ಗಂಬಗಳನ್ನು ನಿಲ್ಲಿಸಿ ಬಂದಿದೆ…….". ಒಂದು ಪರಂಪರೆಯನ್ನೂ, ಅದರ ಘನತೆಯನ್ನೂ ಸೂಚಿಸುವ ಮಾತು ಇದು. ದೊಡ್ಡ ಸಂಕಣ್ಣ ನಾಯಕನ ಸತ್ವದ ದೃಢತೆಗಿರುವ ನೆಲದ ಬೆಳಕನ್ನು ಕಾಣಿಸುವ ಚಿತ್ರಣ ಕಾದಂಬರಿಯಲ್ಲಿ ಈ ಮೂಲಕ ತೆರೆದಿದೆ.

ಈಗಾಗಲೇ ಹೇಳಿದಂತೆ, ಇಡೀ ಕಾದಂಬರಿಯ ವಿನ್ಯಾಸವಿರುವುದು ಪ್ರಭುನಿಷ್ಠೆ ಮತ್ತು ಧರ್ಮನಿಷ್ಠೆಯ ಪಾತಳಿಗಳ ಅನ್ವಯದಲ್ಲಿ, ಅನುನಯದಲ್ಲಿ, ಇವೆರಡರ ನಡುವಿನ ದೊಡ್ಡ ಸಂಕಣ್ಣ ನಾಯಕನ ಆಧ್ಯಾತ್ಮಿಕ ತುಡಿತ ಅದಮ್ಯವಾದುದಾಗಿದೆ. ಆಧ್ಯಾತ್ಮದ ಹಾದಿಯಲ್ಲಿ ಸಾಧನೆಗೈದ ರುದ್ರಾರಾಧ್ಯರು ಇಲ್ಲಿ ಅವನ ಆದರ್ಶವಾಗುತ್ತಾರೆ. ತಾನೂ ರುದ್ರಾರಾಧ್ಯರ ಹಾದಿ ಹಿಡಿಯಬೇಕೆಂದು ಕೊಂಡ ದೊಡ್ಡ ಸಂಕಣ್ಣ ನಾಯಕ ತನ್ನ ಆಧ್ಯಾತ್ಮಿಕ ದಾರಿಗೆ ಸಂಸಾರವೊಂದು ಅಡ್ಡಿಯಾದಿತೆಂದೇ ಭಾವಿಸಿ, ಅದನ್ನೊಪ್ಪದೆ ನಿಂತಿದ್ದವನು. ಆದರೆ ರುದ್ರಾರಾಧ್ಯರೆದುರು ಅವನ ಹಠ ನಿಲ್ಲಲಿಲ್ಲ. ದೊಡ್ಡ ಸಂಕಣ್ಣನಾಯಕ ಸಂಸಾರಿಯೂ ಆದ, ಅರಸನೂ ಆದ. ಅವನ ಕತ್ತಿಗೆ ಹಗೆಗಳು ಮಣಿದವು. ಇಷ್ಟೆಲ್ಲದರ ನಡುವೆಯೂ ಅವನ ಮನಸ್ಸು ಪರಮಾರ್ಥದ ಹಂಬಲದಿಂದ ದೂರಸರಿದಿರಲಿಲ್ಲ. ಜೀವನದ ನಶ್ವರತೆಯ ಬಗ್ಗೆ ಅರಸುತನದ ಅಶಾಶ್ವತೆಯ ಬಗ್ಗೆ ಅವನ ಮನಸ್ಸಿನಲ್ಲಿ ಸದಾ ಯೋಚನೆಗಳೇಳುತ್ತಿದ್ದವು. ಅರಸು ಧರ್ಮ ಮತ್ತು ಆಧ್ಯಾತ್ಮಿಕ ವಿಷಯದ ನಡುವಿನ ಹೊಯ್ದಾಟ ಅವನೊಳಗೆ ಸದಾ ನಡೆದೇ ಇತ್ತು.

ಇಂಥ ದೊಡ್ಡ ಸಂಕಣ್ಣ ನಾಯಕನ ಶೌರ್ಯ, ಸಚ್ಚಾರಿತ್ರ್ಯದ ಬದುಕು ಕಡೆಗೂ ಮುಖಮಾಡುವುದು ಧ್ಯಾನ ಮಾರ್ಗದ ಕಡೆಗೇ, ಆ ಹಂತದವರೆಗೂ ಕಾದಂಬರಿಯ ಹರಹು ಚಾಚಿದೆ. ಒಂದು ಅರ್ಥದಲ್ಲಿ ಪರಿಪೂರ್ಣ ವ್ಯಕ್ತಿತ್ವವೊಂದರ ಚಿತ್ರವಾಗಿ ದೊಡ್ಡ ಸಂಕಣ್ಣ ನಾಯಕ ಇಲ್ಲಿ ಮೂಡಿಸಲ್ಪಟ್ಟಿದ್ದಾನೆ.

ಇಡೀ ಕಾದಂಬರಿಯ ಪ್ರಧಾನ ಆಶಯ ಭಾಗವಾಗಿ ಇರುವುದು ತೀರ್ಥಯಾತ್ರೆಯ ಸಂದರ್ಭದಲ್ಲಿ. ಕಾವಿಧಾರಿಯಾಗಿದ್ದ ದೊಡ್ಡ ಸಂಕಣ್ಣ ನಾಯಕ ದಿಲ್ಲಿಯಲ್ಲಿ ಮೊಗಲರ ಅಂಕುಶ ಖಾನನ ಅಹಂಕಾರದೆದರು ಕತ್ತಿ ಹಿರಿದದ್ದು, ಇಲ್ಲಿನ ಒಟ್ಟು ಸನ್ನಿವೇಶದ ಚಿತ್ರಣ ನೀಡುವಲ್ಲಿ ಲೇಖಕರು ತೋರಿರುವ ಸಂಯಮ ಮತ್ತು ಎಚ್ಚರ ಗಮನೀಯವೆನಿಸುತ್ತದೆ. ಅಹಂಕಾರದ ಎದುರು ತನ್ನ ವೀರತನವನ್ನು ನಿಲ್ಲಿಸುವ ದೊಡ್ಡ ಸಂಕಣ್ಣ ನಾಯಕ, ಅದೇ ಸಂದರ್ಭದಲ್ಲಿ ತಾನು ತೊಟ್ಟ ಕಾವಿಗೂ ಬದ್ಧನಾಗಿಯೇ ಇರುವ ಪರಿ ಚಾರಿತ್ರ್ಯದ ವ್ಯಕ್ತಗೊಳಿಸುವಂಥದ್ದು.

ಅಂಕುಶ ಖಾನನ್ನು ಎದುರಿಸಲು ವಿದ್ಯುಕ್ತನಾದ ಕಾವಿಯುಡಿಗೆಯಲ್ಲಿದ್ದ ದೊಡ್ಡ ಸಂಕಣ್ಣ ನಾಯಕನನ್ನು ಮೊಗಲರ ಸೇನಾನಾಯಕ ಮಾನಸಿಂಹ 'ಇದನ್ನು ಕೈಬಿಡಲು ಸಾಧ್ಯವಿಲ್ಲವೇ'? ಎಂದು ಕೇಳಿದಾಗ ದೊಡ್ಡಸಂಕಣ್ಣನಾಯಕನ ಉತ್ತರ: 'ಅಹಂಕಾರದಿಂದ ಮೆರೆಯುತ್ತಿರುವ ಗೂಳಿಗೆ ಗುಟುಕು ನೀರು ಕುಡಿಸಬೇಕು ಮಾನಸಿಂಹರೆ'! ಮತ್ತೂ ಮುಂದುವರಿದು ದೊಡ್ಡ ಸಂಕಣ್ಣನಾಯಕ ಹೇಳುವ ಮಾತುಗಳು: 'ಪ್ರಪಂಚ ಶಿವನದು, ಅವನ ಮುಂದೆ ಅಹಂಕಾರ ಸಲ್ಲದು. ಅಲ್ಲದೆ ಶಿವ ಅನ್ಯಾಯವನ್ನೆಂದೂ ಸಹಿಸನು. ಸತ್ಯ, ನ್ಯಾಯ ಜೀವಿಗಳೆಲ್ಲರ ಹಕ್ಕು. ಎಲ್ಲರಿಗೂ ಸಮನಾಗಿ ಗಾಳಿ, ನೀರು, ಬೆಳಕಿನಂತೆ ಅವೂ ದೊರಕಲೇಬೇಕು. ಬಾಗಿಲಿಗೆ ಬಂದ ತಕ್ಷಣ ಬಿರುದಾವಳಿ ಕತ್ತಿ ಕಂಡು ಎಂಥ ಅಹಂಕಾರ ಪ್ರದರ್ಶನ ಅನ್ನಿಸಿತು. ನಾನು ಮಣಿಯಲಿಚ್ಛಿಸಿದರೂ ನ್ನನ್ನಲ್ಲಿನ ಶಿವಾಂಶ ಮಣಿಯಲಿಚ್ಛಿಸಲಿಲ್ಲ. ಅಂಕುಶ ಖಾನನೊಡನೆ ಹೋರಾಡಲು ನಾನೆಷ್ಟರವನು? ಆದರೆ ನನ್ನಲ್ಲಿರುವ ಶಿವ ಶಕ್ತಿ ಹೋರಾಡುತ್ತದೆ. ಸತ್ಯಕ್ಕೆ ಜಯ ಲಭಿಸುತ್ತದೆ. ವೀರ, ಶೌರ್ಯಗಳಿರುವುದು ದುರ್ಬಲರ ರಕ್ಷಣೆಗೆ, ಅಹಂಕಾರ ಪ್ರದರ್ಶನಕ್ಕಲ್ಲ". ಇಲ್ಲಿ ಪ್ರಕಟಗೊಳ್ಳುವ ದೊಡ್ಡ ಸಂಕಣ್ಣನಾಯಕನ ವ್ಯಕ್ತಿತ್ವ ಕತ್ತಿ ಮತ್ತು ಕಾವಿಯ ಸಮನ್ವಯತೆಯದ್ದು. ಮತ್ತೆ ದೊಡ್ಡ ಸಂಕಣ್ಣ ನಾಯಕನ ವ್ಯಕ್ತಿತ್ವದ ಸಾರ್ಥಕ್ಯ ಕಾಣುವುದೇ ಈ ಅರಸು ಧರ್ಮ ಮತ್ತು ಪರಮಾರ್ಥ ಧರ್ಮವೆರಡು ಸಾಂಗತ್ಯಗೊಂಡ ನಡೆಯಲ್ಲಿ.

ಚರಿತ್ರೆಯ ಗತಿ ಶೀಲತೆಗೆ ವ್ಯಕ್ತಿಯೊಬ್ಬ ಕಾರಣನೆಂದು ನಿರೂಪಿಸುವಾಗಲೂ ಅದು ಅರ್ಧ ಸತ್ಯ ಮಾತ್ರ ಅನ್ನುವುದನ್ನು ಮರೆಯಲಿಕ್ಕಾಗುವುದಿಲ್ಲ. ರಾಜ್ಯದ ಚರಿತ್ರೆ ಕೇವಲ ರಾಜನ ಚರಿತ್ರೆಯಲ್ಲ. ಅದು ಒಂದು ಸಮಷ್ಟಿಯ ಚರಿತ್ರೆಯಾಗಿಯೂ, ಅದರ ವಿವಿಧ ಪ್ರವೃತ್ತಿಗಳ ಚರಿತ್ರೆಯಾಗಿಯೂ ಅದೇ ಸಂದರ್ಭದಲ್ಲಿ ಸಲ್ಲುತ್ತದೆ. ಹೀಗಾಗಿ ಚರಿತ್ರೆಯ ವಿಷಯವೊಂದು ಕೇಂದ್ರದಲ್ಲಿರುವ ಕೃತಿಯೂ ತತ್ಸಂದರ್ಭದ ಜನಾಂಗಿಕ ಮನೋವೃತ್ತಿಗಳನ್ನೂ ದಾಖಲಿಸಲೇ ಬೇಕಾಗುತ್ತದೆ. ಅದಾವನ್ನೂ ದಾಖಲಿಸದೇ ವ್ಯಕ್ತಿಯೊಬ್ಬನನ್ನೇ ವಿಸ್ತರಿಸ ಹೊರಟಾಗ ಅದು ಒಂದು ವಿವರವಾಗಿ ಮಾತ್ರ ದಕ್ಕಬಹುದೇ ಹೊರತು ಜೀವಂತಿಕೆಯುಳ್ಳ ಚಿತ್ರವಾಗಿ ವ್ಯಕ್ತವಾಗಲಾರದು.

ದೊಡ್ಡ ಸಂಕಣ್ಣ ನಾಯಕನಂಥ ವ್ಯಕ್ತಿಯ ಧೀರೋದಾತ್ತತೆಯನ್ನು ಅವನ ಬಗೆಗಿನ ವಿವರಗಳ ಮೂಲಕ ಕೊಡುವುದಕ್ಕಿಂತ, ಅವನ ಸಂದರ್ಭದ ವಿರಗಳ ಮೂಲಕ

ಕೊಡುತ್ತಿರುವ ಲೇಖಕರ ಕ್ರಮ ಈ ಹಿನ್ನೆಲೆಯಿಂದಲೇ ಹೆಚ್ಚು ಅರ್ಥಪೂರ್ಣವಾಗಿ ಕಾಣಿಸುತ್ತದೆ. ಆಧ್ಯಾತ್ಮ ಮಾರ್ಗಿ ರುದ್ರಾರಾಧ್ಯರು ಕಡೆಯುಸಿರೆಳೆಯುವ ಮುಂಚೆ ದೊಡ್ಡಸಂಕಣ್ಣನಾಯಕನಿಗೆ ಬೀಳುವ ಕನಸು, ರುದ್ರಾರಾಧ್ಯರು ರಾತ್ರಿಯ ಹೊತ್ತಿನಲ್ಲಿ ದೊಡ್ಡ ಸಂಕಣ್ಣ ನಾಯಕನನ್ನು ಕರೆಸಿಕೊಂಡು, ಅವನ ಕೈಯಿಂದ ಹಾಲು ಕುಡಿದು, ಅವನ ತೊಡೆಯ ಮೇಲೆ ತಲೆಯಿಟ್ಟು ಅಸು ನೀಗುವುದು. ಈ ವಿವರಗಳೆಲ್ಲಾ ಕೇಂದ್ರ ವ್ಯಕ್ತಿತ್ವದ ಚಿತ್ರವನ್ನೇ ದೃಢವಾಗಿ ಕಟ್ಟಿಕೊಡುವ ವಿವರಗಳಾಗಿ ಬರುತ್ತವೆ.

ದೊಡ್ಡ ಸಂಕಣ್ಣ ನಾಯಕ ಮತ್ತು ಅಂಕುಶ ಖಾನನ ನಡುವೆ ಕಾಳಗಕ್ಕೆ ವ್ಯವಸ್ಥೆಯಾದಾಗ ನೆರೆದ ಹಿಂದೂ-ಮುಸ್ಲಿಂ ಪ್ರಜೆಗಳ ಆ ಕ್ಷಣದ ಪ್ರತಿಕ್ರಿಯೆಯನ್ನೂ, ದೊಡ್ಡ ಸಂಕಣ್ಣನಾಯಕನ ಕತ್ತಿಗೆ ಅಂಕುಶ ಖಾನ ಬಲಿಯಾದಾಗ ಹಿಂದೂಗಳ ಹೃದಯ ಹಿಗ್ಗಿತೆಂಬುದನ್ನೂ, ಹಿಂದೂಗಳ ಹರ್ಷಧ್ವನಿಯನ್ನು ಸಹಿಸದ ಮುಸ್ಲಿಮರು ಹಿಂದೂಗಳ ಮೇಲೆ ಏಕಾಏಕಿ ಹಲ್ಲೆ ನಡೆಸಿದ್ದನ್ನು ದಾಖಲಿಸುವಾಗ ಚರಿತ್ರೆಯ ಸತ್ಯಗಳನ್ನು ಸಮಕಾಲೀನತೆಗೆ ಹತ್ತಿರವಾಗಿ ನೋಡುವ ಅಂಶವಾಗಿ ಅದು ಹೆಚ್ಚು ಕ್ರಿಯಾತ್ಮಕ ಸ್ವರೂಪವನ್ನು ಪಡೆಯುತ್ತದೆ. ಇಲ್ಲೇ ದೊಡ್ಡಸಂಕಣ್ಣನಾಯಕ ಮತ್ತು ರುದ್ರಾರಾಧ್ಯರನ್ನೇ ಮುಖ್ಯವಾಗಿ ಗಮನಕ್ಕೆ ತೆಗೆದುಕೊಂಡು ಇನ್ನೊಂದು ಅಂಶವನ್ನು ಪ್ರಸ್ತಾಪಿಸಬೇಕು. ದೊಡ್ಡ ಸಂಕಣ್ಣನಾಯಕನಾಗಲಿ, ರುದ್ರಾರಾಧ್ಯರಾಗಲಿ ಹಿಂದೂ ಧರ್ಮೀಯರಾಗಿ ಹಿಂದೂ ಧರ್ಮಕ್ಕೆ ಮಾತ್ರ ನಿಷ್ಠರು. ಇದು ಕೇವಲ ಹಿಂದೂ-ಮುಸ್ಲಿಂರ ವೈಷಮ್ಯ ಮಾತ್ರವಲ್ಲ, ಒಂದು ಸಂಸ್ಕೃತಿಯೊಳಗೆ ಮತ್ತೊಂದು ಅನ್ಯ ಸಂಸ್ಕೃತಿ ಪ್ರವೇಶಿಸುವಾಗಿನ ತಲ್ಲಣವೂ ಕೂಡ ಆಗಿದೆ. ಇಂತಹ ಸ್ವಧರ್ಮ ನಿಷ್ಠೆ ನೈತಿಕವಾದದ್ದು ಎಂದೇ ಭಾವಿಸಲಾಗುತ್ತಿದೆ. ತತ್ಕಾಲೀನ ಜರೂರಿನಿಂದಾಗಿಯೇ ಇದೀ ಚಾರಿತ್ರಿಕ ಘಟ್ಟದಲ್ಲಿ ಅದು ಪ್ರಮುಖವಾಗುತ್ತದೆ. ಹೀಗೆ ಚರಿತ್ರೆಯ ವಿಷಯಗಳು ನೈತಿಕ ಮತ್ತು ವಿಷಮತೆಗಳ ವಿನ್ಯಾಸಗಳೇ ಆಗಿರುತ್ತವೆ.

ಕೆಳದಿ ಅರಸರ ವಂಶದ ದೊಡ್ಡ ಸಂಕಣ್ಣನಾಯಕನ ಚರಿತ್ರೆಯನ್ನು ಕಾದಂಬರಿಯ ಚೌಕಟ್ಟಿನಲ್ಲಿ ಮೂಡಿಸುವ ಲೇಖಕರ ಆಶಯ ಸ್ಪಷ್ಟವಾಗಿ ಒಂದು ಆದರ್ಶದ ನೆನಪನ್ನು ಹೊಸ ಪೀಳಿಗೆಗಾಗಿ ಕಾಪಿಡುವುದೇ ಆಗಿದೆ. ದೊಡ್ಡ ಸಂಕಣ್ಣನಾಯಕನ ವ್ಯಕ್ತಿತ್ವವನ್ನು ಚಿತ್ರಿಸುವಾಗಲೇ ಭಾರತೀಯ ಸಂಸ್ಕೃತಿ ಪ್ರಧಾನ ಆಯಾಮವೊಂದನ್ನು ಹೊಳೆಯಿಸುತ್ತದೆ. ಧರ್ಮದ ಪರಿಭಾಷೆಯಲ್ಲಿ ಕತ್ತಿ ಮತ್ತು ಕಾವಿಗಳೆರಡೂ ಅಂತಿಮವಾಗಿ ಒಂದೇ ಧ್ಯೇಯದ ಸಾಫಲ್ಯಕ್ಕೆ ನಿಂತವುಗಳು: ಅದೇ ಅನ್ಯಾಯದ ದಮನ, ಸತ್ಯದ ಪ್ರತಿಷ್ಠಾಪನೆ. ಕತ್ತಿಯ ಧರ್ಮಕ್ಕೆ ಕಾವಿಯ ಮನೋಧರ್ಮ ಬೇಕು. ಕಾವಿಯ ಧರ್ಮಕ್ಕೆ ಕತ್ತಿಯ ವೀರ ಧರ್ಮವೂ ಬೇಕು. ದೊಡ್ಡ ಸಂಕಣ್ಣನಾಯಕನನ್ನು ಈ ಕಾದಂಬರಿ ವೈಭವೀಕರಿಸಿದೆಯೇ ? ದಾಖಲಿಸುವುದಕ್ಕೆ ಎಲ್ಲೂ ಏನೂ ಇರದಷ್ಟು ಅವನು ನಿರ್ದೋಷಿಯಾಗಿದ್ದನೆ ಎನ್ನುವ ಪ್ರಶ್ನೆಗಳು ಈ ಕಾದಂಬರಿಯ ಓದಿನ ಸಮಯದಲ್ಲಿ ಎದ್ದರೆ ಅದು ಸಹಜವೆ. ಆದರೆ ಚರಿತ್ರೆಯ ಹಲವು ನೆಲೆಗಳಲ್ಲಿ ಕಂಡು ಬರುವ ಮನೋಧರ್ಮಗಳ ಪ್ರತಿನಿಧಿಯಾಗಿ ದೊಡ್ಡ ಸಂಕಣ್ಣ ನಾಯಕ ಕಾಣಿಸುವಾಗ ಹಾಗೆ ನೋಡಲೇಬೇಕಾದ ಸೂಕ್ಷ್ಮದಲ್ಲಿ ಅಂತಹ ಪ್ರಶ್ನೆಗಳು ಅಪ್ರಸ್ತುತವೂ ಆಗಿ ಬಿಡಬಹುದು.◆

15. ಪ್ರೊ|| ಕೆ.ಜಿ.ಎನ್ - ಸಾಹಿತ್ಯ ಮೀಮಾಂಸೆ

ಪಿ ಭೋಗರಾಜು

ನಮ್ಮ ಭಾರತೀಯರಲ್ಲಿ ಮೊದಲು ಕಾವ್ಯ ಮೀಮಾಂಸೆ ಕಾಣಿಸಿಕೊಂಡಿದ್ದು ನಾಟ್ಯ ಶಾಸ್ತ್ರದಿಂದಲೇ ಎನ್ನಬಹುದು. " ಸಾಹಿತ್ಯವನ್ನು ಕುರಿತ ಚರ್ಚೆಗೆ Poetics ಎಂದು ಕರೆಯುವುದರ ಜೊತೆಗೆ Literary Criticism ಎಂಬ ಮಾತು ಬಳಕೆಯಲ್ಲಿದೆ. ಇದಕ್ಕೆ ಸಂವಾದಿಯಾಗಿ ನಮ್ಮಲ್ಲಿ ಸಾಹಿತ್ಯ ವಿಮರ್ಶೆ ಎಂಬುದನ್ನು ಬಳಸಿಕೊಳ್ಳಲಾಗಿದೆ. ಸಾಮಾನ್ಯವಾಗಿ ಮೀಮಾಂಸೆ. ಚರ್ಚೆ ವಿಮರ್ಶೆ. ಈ ಎಲ್ಲವೂ ಬಹುಮಟ್ಟಿಗೆ ಸಮಾನಾರ್ಥಕಗಳೆಂದು ಭಾವಿಸಬಹುದಾದರೂ 'ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ ಈ ಎರಡು ಭಾರತೀಯ ಸಂದರ್ಭದಲ್ಲಿ ಸ್ಪಷ್ಟವಾಗಿ ಗುರ್ತಿಸಬಲ್ಲ ಅರ್ಥವ್ಯತ್ಯಾಸವನ್ನು ಪಡೆದು ಕೊಂಡಿದೆ. (ಡಾ|| ಜಿ.ಎಸ್. ಶಿವರುದ್ರಪ್ಪ ಕಾವ್ಯಾರ್ಥ ಚಿಂತನ,1988 ಪು 238) ಇದಕ್ಕೆ ಪೂರಕವಾಗಿ ಪ್ರೊ|| ಕೆ.ಜಿ.ಎನ್. ರವರು "ಕನ್ನಡ ಸಾಹಿತ್ಯ ವಿಮರ್ಶೆಯ ಇತಿಹಾಸ ಎಂದರೆ ಸಂಸ್ಕೃತ ಮತ್ತು ಇಂಗ್ಲೀಷ್ ಸಾಹಿತ್ಯದ ವಿಮರ್ಶೆಯ ಇತಿಹಾಸವೇ ಸರಿ. ನಿಜವಾದ ಕನ್ನಡ ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಯ ಇತಿಹಾಸ ಅಸ್ಪಷ್ಟ ಗೊಂದಲ ಮತ್ತು ಸಂಶೋಧಿಸಬೇಕಾದುದು ಎನ್ನುತ್ತಾರೆ. (ವಿಮರ್ಶೆಯ ಇಕಟ್ಟು-ಬಿಕ್ಕಟ್ಟು ಪ್ರೊ|| ಕೆ.ಜಿ.ನಾಗರಾಜಪ್ಪ ಪುಟ 58) ಹೀಗೆ ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ ಈ ಎರಡರ ಅರ್ಥವ್ಯತ್ಯಾಸವನ್ನು ಕುರಿತು ಜಿ.ಎಸ್. ಶಿವರುದ್ರಪ್ಪನವರು ಹೀಗೆ ಹೇಳುತ್ತಾರೆ. "ಕಾವ್ಯಮೀಮಾಂಸೆ ಮುಖ್ಯವಾಗಿ ಕವಿಯ ಮನಸ್ಸಿನಲ್ಲಿ ಕೃತಿಯೊಂದು ರೂಪುಗೊಳ್ಳುವ ಕ್ರಿಯೆಯನ್ನು ಕಾವ್ಯದ ಲಕ್ಷಣ, ಉದ್ದೇಶ, ಪರಿಣಾಮಗಳನ್ನು ಕುರಿತ ಚರ್ಚೆಯಾದರೆ ಸಾಹಿತ್ಯ ವಿಮರ್ಶೆ ಆಗಲೇ ನಿರ್ಮಿತವಾದ ಕವಿ ಕೃತಿಗಳನ್ನು ಕುರಿತ ವಿವೇಚನೆ ವಿಶ್ಲೇಷಣೆ ಹಾಗೂ ಮೌಲ್ಯಮಾಪನ ಎನ್ನಬಹುದು. (ಅದೇ. ಪು.239) ಈ ಎರಡು ಸಾಹಿತ್ಯ (ಕಾವ್ಯ) ಚರ್ಚೆ ಮುಖ್ಯವಾಗಿ ಸಾಹಿತ್ಯ ವಿಮರ್ಶೆಯಾಗಿ ಆಧುನಿಕರಲ್ಲಿ ಬೆರಗುಗೊಳಿಸುವ ಮತ್ತು ಬೆಸೆಯುವ ವಿಸ್ತಾರ ವೈವಿಧ್ಯತೆಗೆ ಎಡೆಮಾಡಿದವು. ಡಾ|| ಜಿ.ಎಸ್.ಎಸ್. ಹೇಳಿದಂತೆ 'ಕಾವ್ಯ ತತ್ವಗಳಿಂದ ಸಾಹಿತ್ಯ ವಿಮರ್ಶೆ ಹುಟ್ಟಿಕೊಂಡಿದ್ದು. ಇದು ಪಾಶ್ಚಾತ್ಯ ಕಾವ್ಯ ಮೀಮಾಂಸೆಯಲ್ಲಿ ಸಾಧ್ಯವಾಯಿತು. ಆದರೆ ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಹಾಗಾಗಲಿಲ್ಲ. ಇದಕ್ಕೆ ಏನು ಕಾರಣ ಎಂಬುದಕ್ಕೆ ಅವರು ಎರಡು ಕಾರಣಗಳನ್ನು ನೀಡುತ್ತಾರೆ. 1. ಸಾಹಿತ್ಯಕವಾದವುಗಳು 2. ಸಾಂಸ್ಕೃತಿಕವಾದವುಗಳು ಎನ್ನುವುದು ಅರ್ಥಪೂರ್ಣವಾಗಿದೆ. (ಅದೇ. ಪು242) ಅದ್ದರಿಂದ ಪ್ರೊ|| ಕೆ.ಜಿ.ಎನ್. ರವರ ಸಾಹಿತ್ಯಕ ಸಾಂಸ್ಕೃತಿಕ ಚಿಂತನೆಯನ್ನು ಸಾಧ್ಯವಿದ್ದ ವಿಚಕ್ಷಣೆಯಿಂದ ವಿಷಯವನ್ನು ಸ್ಪಷ್ಟಪಡಿಸಲು ಪ್ರಯತ್ನಿಸುತ್ತೇನೆ.

ಪ್ರೊ|| ಕೆ.ಜಿ.ಎನ್.ರವರು ಸಾಹಿತ್ಯದ ತುಂಬು ಸಮೃದ್ಧತೆಯಿಂದ ಬಹಳಷ್ಟನ್ನು ಪಡೆದು ಮನದುಂಬಿಸಿಕೊಂಡು ತಮ್ಮ ವಿಮರ್ಶಾದಾರಿ ಹುಡುಕುತ್ತಾ ಕಂಡಿದ್ದನ್ನ

ತಲಸ್ಪರ್ಶಿಯಾಗಿ ಶೋಧಿಸುತ್ತಾ ಹೊರಟ ಪಂಥಕರು. ಪ್ರೊ॥ ಕೆ.ಜಿ.ಎನ್.ರವರ ಸಾಹಿತ್ಯಕ್ಕೆ ಹೊಸ ಚೈತನ್ಯ ಸಾಂಧ್ರತೆ ಇರುವುದಕ್ಕೆ ಮುಖ್ಯ ಕಾರಣ ಬಹು ಸಂಖ್ಯಾತ ಜನಸ್ತೋಮದ ವೈವಿಧ್ಯಮಯ ಮತ್ತು ಅನುಭವ ಲೋಕ ಹಾಗೂ ಬಹುಮುಖಿ ಸಂಸ್ಕೃತಿಗಳಿಗೆ ಒಳಗಿನವರಾಗಿ ಅಭಿವ್ಯಕ್ತಿಕೊಡಲು ಯತ್ನಿಸುವುದು ಅಂದರೆ ಸಮಾಜೋ-ಸಾಂಸ್ಕೃತಿಕ ಗುಣ ಕೆ.ಜಿ.ಎನ್. ಸಾಹಿತ್ಯಕ ಮೀಮಾಂಸೆಯ ದೊಡ್ಡ ಆಕರ. ಪ್ರೊ॥ ಕೆ.ಜಿ.ಎನ್. ರವರು ಕವಿಯು ಹೌದು. ವಿಮರ್ಶಕರೂ ಹೌದು ಆದ್ದರಿಂದ ಎಲ್ಲೋ ಓದಿದ ಮಾತು ನೆನಪಾಗುತ್ತದೆ. "ಕವಿಯ ವೀಣೆ ಕವಿಗೆ, ಕತೆಗಾರನ ಸೀತಾರು ಕತೆಗಾರನಿಗೆ, ಪ್ರಬಂಧಕಾರನ ತಮಟೆ ಪ್ರಬಂಧಕಾರನಿಗೆ ಇವೆಲ್ಲವುಗಳ ಮೋಹದ ಮಾಯೆಯನ್ನು ಕಿತ್ತೊಗೆದು ನಿಷ್ಪಕ್ಷಪಾತಿಯಾಗಿ ಸಮಾತವಾದವನ್ನು ಸಾರುವ ಕೃಷ್ಣನ ಪಾಂಚಜನ್ಯವೂ ಕೆ.ಜಿ.ಎನ್ ರವರ ವಿಮರ್ಶೆಗೆ ಸಲುತ್ತದೆ. ಆದ್ದರಿಂದ ಮೇಲಿನ ಎಲ್ಲಾ ಅಂಶಗಳ ಆಧಾರದ ಮೇಲೆ ಮತ್ತು ಅವರ ಕೃತಿಗಳು ಹಿಡಿದಿಡುವ 'ಐಡಿಯಾಲಾಜಿ ಅಥವಾ ತಾತ್ವಿಕ ನಿಲುವುಗಳನ್ನು ಈ ಕೆಳಕಂಡಂತೆ ಗ್ರಹಿಸಬಹುದು.

1) ಭಾರತೀಯ ಕಾವ್ಯ ಮೀಮಾಂಸೆ ಕನ್ನಡ ಕಾವ್ಯ ಮೀಮಾಂಸೆ ಅಲ್ಲ. ಯಾಕೆಂದರೆ ಭಾರತೀಯ ಕಾವ್ಯ ಮೀಮಾಂಸೆ ಎಂದರೆ ಸಂಸ್ಕೃತ ಕಾವ್ಯ ಮೀಮಾಂಸೆ ಎಂದೆ ಅರ್ಥ (ಕಾಣೆ ಡೇ ಕೃಷ್ಣ ಚೈತನ್ಯ) ಇದು ದ್ವೈತ. ವಿಶಿಷ್ಟಾದ್ವೈತದ ಸೈದ್ಧಾಂತಿಕ ನೆಲೆಗಳಿವೆ. ಆದರೆ ಇವುಗಳಲ್ಲಿ ಸಾಮಾಜಿಕ ಚಿಂತನೆ ಇಲ್ಲ ಎನ್ನುವುದು ಪ್ರೊ॥ ಕೆ.ಜಿ.ಎನ್. ರವರ ಸೈದ್ಧಾಂತಿಕ ನಿಲುವು (ಉದಾ॥ ಕೆ.ಜಿ.ಎನ್.ರವರ 'ಮಧ್ಯಕಾಲೀನ ಸಾಹಿತ್ಯದಲ್ಲಿ ಹಿಂಸೆಯ ಅಭಿವ್ಯಕ್ತಿ ಸ್ವರೂಪ ಎಂಬ ಲೇಖನವನ್ನು ಗಮನಿಸಬಹುದು)

2) ಕನ್ನಡ ಸಾಹಿತ್ಯ ಮೀಮಾಂಸೆಯ ಸಾಲಿನಲ್ಲಿ ಕೆಲವು ಕನ್ನಡ ತತ್ವಗಳಿವೆ. ಅವುಗಳೆಂದರೆ ದೇಶಿ ಮತ್ತು ಮಾರ್ಗ. ಇದು ಪ್ರಾಂತೀಯ ನೆಲೆಗಳಲ್ಲಿ ಭಿನ್ನ ಚಿಂತನಗಳಾಗಿವೆ. ಈ ದೇಶಿಗೆ ಪ್ರಾದೇಶಿಕ ಅಥವಾ ದೇಶ ಸಂಬಂಧ ಎಂಬರ್ಥವೂ ಇದೆ. ಆದರೆ ಇದು ಸಂಸ್ಕೃತ ಲಕ್ಷಣ ಮುಕ್ತವಾದ ರಚನೆ ಮತ್ತು ಮಾರ್ಗ ಎಂದರೆ ದೇಸೀಯ ಲಕ್ಷಣಯುಕ್ತವಾದ ರಚನೆ ಎಂದು ಡಾ॥ ಎಂ.ಎಂ. ಕಲ್ಬುರ್ಗಿಯವರ ಅಭಿಪ್ರಾಯವಾಗಿದೆ.

"ಈ ದೇಶಿ-ಮಾರ್ಗ ಎಂದು ಕರೆಯುವುದು ಯಾಕೆಂದರೆ ನಿಸರ್ಗದಿಂದ ನಗರದತ್ತ ನಡೆದು ಬಂದ ವ್ಯಕ್ತಿಗಳಲ್ಲಿ ನೈಸರ್ಗಿಕ ಅಂಶಗಳು ಕಡಿಮೆಯಾಗುತ್ತ ಹೋಗಿ ನಾಗರಿಕ ಅಂಶಗಳು ಬೆಳೆಯುತ್ತ ಬರುತ್ತವೆ. ವ್ಯಕ್ತಿಗತವಾಗಿ ಆರಂಭ ಗೊಂಡ ಸಮಾಗತವಾಗಿ ಮುನ್ನಡೆಯುವ ಈ ಕ್ರಿಯೆಯಿಂದಾಗಿ ಸಮಾಜದಲ್ಲಿ ನೈಸರ್ಗಿಕ ಮತ್ತು ನಾಗರಿಕ ಸ್ತರಗಳು ನಿರ್ಮಾಣವಾಗುತ್ತವೆ ಅವುಗಳ ಮೈಮನಗಳಲ್ಲಿ ಕ್ರಮವಾಗಿ ಒಂದು ವಿಧದ ಪ್ರಾಕೃತ ಮತ್ತು ಪರಿಷ್ಕೃತ ಬದುಕುಗಳು ಏರ್ಪಡುತ್ತವೆ. ಇವುಗಳನ್ನೆ ದೇಶಿ ಮತ್ತು ಮಾರ್ಗ ಎಂದು ಕರೆಯುವುದು ಎಂದೇಳುತ್ತಾ ದೇಶಿ ಎನ್ನುವುದು Little tradition ಮಾರ್ಗ ಎನ್ನುವುದು Great tradition ಎಂದು ಕರೆಯುತ್ತಾರೆ. ಒಂದು ಉಪಪ್ರಾಂತಿಯವಾದರೆ ಮತ್ತೊಂದು ಪ್ರಾಂತೀಯವಾಗುತ್ತದೆ ಎನ್ನುತ್ತಾರೆ. (ಮಾರ್ಗ : ಪು 8 ಎಂ.ಎಂ.ಕಲ್ಬುರ್ಗಿ 1995) ಈ

ನಿಟ್ಟಿನಲ್ಲಿ ಪ್ರೊ॥ ಕೆ.ಜಿ.ಎನ್. ರವರ ಸಾಹಿತ್ಯ ಚಿಂತನೆ ದೇಶಿಗೆ ಒತ್ತುನೀಡಿ ದೇಶಿ ಮತ್ತು ಮಾರ್ಗದ ಸಮನ್ವಯತೆಯನ್ನು ಕಾಪಾಡಿಕೊಂಡಿದೆ.

3)ಈ ಮೇಲಿನ ಚಿಂತನೆಗಳಿಂದಲೇ ಗ್ರಾಮೀಣ ಮತ್ತು ನಗರ ಚಿಂತನೆಗಳು ಅಳವಡುತ್ತವೆ ಇದರಲ್ಲಿ ಏಕಮುಖಿ ಚಿಂತನೆ ಮತ್ತು ಬಹುಮುಖಿ ಚಿಂತನೆಯ ನೆಲೆಗಳು ಮೈದಾಳುತ್ತವೆ ಎನ್ನುವುದು ಕೆ.ಜಿ.ಎನ್ ರವರ ತಾತ್ವಿಕ ನಿಲುವು.

"ಗ್ರಾಮೀಣ ಬರಹಗಾರರ ಕವನಗಳ ಗ್ರಾಮೀಣ ಬದುಕು, ಭಾಷೆ ಮತ್ತು ಬಳಸಿರುವ ಪ್ರತಿಮೆಗಳು ಅಸಲಿ ರೂಪದಲ್ಲಿ ನಗರ ಬರಹಗಾರರಿಗೆ ತಲೆನೋವಾಗಬಹುದಾದರೂ ಕವನಗಳ ವಸ್ತುಧ್ವನಿಯನ್ನಾದರೂ ಅವರು ಗ್ರಹಿಸುವಲ್ಲಿ ಹಿಂದೆ ಬೀಳಬಾರದು" ಎನ್ನುವುದು ಅವರ ಸಾಹಿತ್ಯ ತತ್ವದ ಚಿಂತನೆ (ಅದೇ ಕನ್ನಡ ಸಾಹಿತ್ಯ ಮತ್ತು ಬಹುಮುಖಿ ಸಂಸ್ಕೃತಿ ಸಮಾಜ ಪ್ರೊ॥ ಕೆ.ಜಿ. ನಾಗರಾಜಪ್ಪ ಪು 190) ಜೊತೆಗೆ ಭಾವನೆಯ ಗುಂಗಿ ಮತ್ತು ಕನಸಿನ ಅವಾಸ್ತವ ಚಿಂತನೆಗಳನ್ನು ಸಾಹಿತ್ಯ ಇಂದು ನಮಗೆ ಕಟ್ಟಿಕೊಡಬೇಕಿದೆ (ಅದೇ ಪು 192)

4) ಪ್ರೊ॥ ಕೆ.ಜಿ.ಎನ್. ರವರ ಸಾಹಿತ್ಯ ವಿಮರ್ಶೆಯಲ್ಲಿ ಮೇಲಿನ ಅಂಶಗಳಿಗೆ ಪೂರಕವಾಗಿ ಸಾಂಸ್ಕೃತಿಕತೆ, ಸಮಾನತೆ, ಸಾಮಾಜಿಕ ಕಳಕಳಿ ಇದೆ. ಈ ಎಲ್ಲಾ ಒಟ್ಟಾರೆ ಚಿಂತೆನೆಗಳನ್ನು ಮುಂದೆ ವಿವರಿಸಲಾಗುತ್ತದೆ. ಪ್ರೊ॥ ಕೆ.ಜಿ.ಎನ್ ರವರ ಸಾಹಿತ್ಯ ಚಿಂತನದಲ್ಲಿ ವಸ್ತುನಿಷ್ಟತೆ ವ್ಯಕ್ತಿ ನಿಷ್ಟತೆ ಮತ್ತು ವಿಶ್ಲೇಷಣಾತ್ಮಕವಾದ ಹಾಗೂ ಸಮಾಜವಾದದ ನಿಲುವುಗಳು ಪ್ರಖರಗೊಂಡಿರುತ್ತವೆ. ಆದ್ಧರಿಂದ ಅವರ ಸಾಹಿತ್ಯ ಮೀಮಾಂಸೆಯ ನಿಲುವುಗಳ ಬಗ್ಗೆ ಅವರ ಒಲವುಗಳೇನು? ಎಂಬುದರ ಬಗ್ಗೆ ನೋಡಿದರೆ ಸ್ವಲ್ಪಮಟ್ಟಿನ ಅವರ ದರ್ಶನ ವಿಶದವಾಗುತ್ತದೆ. ಪ್ರೊ॥ ಕೆ.ಜಿ.ಎನ್. ರವರ ಕಾಳಜಿ ಸಮಾಜಮುಖಿಯಾದುದು. ಈ ಹಿನ್ನೆಲೆಯಲ್ಲಿ ಸಂಸ್ಕೃತಿ ಕರಣ, ಸುಧಾರಣವಾದ, ಸಮನ್ವಯವಾದ, ದೇಶಿ ಮೀಮಾಂಸೆ, ಸಾಂಸ್ಕೃತಿಕ ಇಕ್ಕಟ್ಟು-ಬಿಕ್ಕಟ್ಟುಗಳ ಒಳನೋಟದ ಜೊತೆ ಜೊತೆಯಲ್ಲೆ ಚಾರಿತ್ರಿಕ ನೋಟ, ಜನಾಂಗೀಯ ನೋಟ, ಭಾಷೆ ಸಾಧ್ಯತೆಯ ವೈವಿಧ್ಯತೆ ಸಮಾಜ ಸಂಸ್ಕೃತಿಗಳ ಮುಖಾಮುಖಿ ಸಂಘರ್ಷ ಇವು ಕೆ.ಜಿ.ಎನ್ ರವರ ತಾತ್ವಿಕ ನಿಲುವುಗಳು, ಇವುಗಳ ಜೊತೆಗೆ ಕೃತಿ, ಓದುಗರ ನಡುವಿನ ಸಾಮರಸ್ಯವನ್ನು ಕೂಡ ಸಾದರ ಪಡಿಸುವುದು.

ನಮ್ಮ ಸಾಹಿತ್ಯ ಮೀಮಾಂಸೆಯಲ್ಲಿ ಓದುಗ-ಅಥವಾ (ಸಹೃದಯ) ಕೃತಿಗಳ ನಡುವಿನ ಸಂಬಂಧ ಕೂತುಹಲಕರವಾದ ವಿಷಯ ಹೀಗೆ ಸಹೃದಯನು ಗ್ರಹಿಸುವ ಅರ್ಥವೆಲ್ಲ ಕೃತಿಯಲ್ಲಿ ನಿಕ್ಷಿಪ್ತವಾಗಿರುತ್ತದೆ. ಹೀಗೆ ನಿಕ್ಷಿಪ್ತವಾಗಿರುವ ಅರ್ಥವನ್ನು ಸರಿಯಾಗಿ ಗ್ರಹಿಸಿಕೊಳ್ಳುವುದು ಸಹೃದಯನ ಕಾರ್ಯ ಮತ್ತೆ ಅದನ್ನು ಜನತೆಗೆ ಸಾದರಪಡಿಸುವುದು ವಿಮರ್ಶಕನ ಕರ್ತವ್ಯ. ಈ ವಿಚಾರದಲ್ಲಿ 'ಕಾರಯಿತ್ರಿ ಪ್ರತಿಭೆ, ಮತ್ತು 'ಭಾವಯಿತ್ರಿ ಪ್ರತಿಭೆ, ಮಿಳಿತವಾಗುವುದು ಇಂತಹ ಸೃಜನಾತ್ಮಕ ಶಕ್ತಿ ಏಕಕಾಲದಲ್ಲಿ ಪ್ರೊ॥ ಕೆ.ಜಿ.ಎನ್. ರವರಿಗೆ ಸಿದ್ಧಿಸಿದೆ. ಇದನ್ನೆ ಆನಂದವರ್ಧನನು 'ಧ್ವನ್ಯಾಲೋಕದಲ್ಲಿ 'ಪ್ರತಿಯಾ ಮಾನಂ

ಪುನರನ್ಯದೇವ, ವಸ್ಪಸ್ತಿ ವಾಣೀಷು ಮಹಾಕವೀನಾಂ ! ಎನ್ನುವುದು ಈ ಅರ್ಥದಲ್ಲಿ ನಿಕ್ಷಿಪ್ತವಾಗಿರುವುದನ್ನು ಶೋಧನೆಗೆ ಒಳಪಡಿಸುವುದು, ಮೌನಕ್ಕೆ ಮಾತು ಕೊಡುವುದು ಅವರ ಕೃತಿಗಳ ಹಿಂದಿರುವ ತಾತ್ವಿಕತೆ. ಹೀಗೆ ಅರ್ಥ ಪ್ರತೀತಿಗಳ ನಡುವೆ ಒಂದು ತುಡಿತವನ್ನು ರೂಪಿಸಿ ಸಾಹಿತ್ಯ ಸಂವಹನವನ್ನು ಒಂದು ಚಲನಶೀಲ ಚಟುವಟಿಕೆಯನ್ನಾಗಿ ರೂಪಿಸುತ್ತಾರೆ. ಪ್ರೊ।। ಕೆ.ಜಿ.ಎನ್. ರವರ ಚಿಂತನೆ ಸಂಸ್ಕೃತಿಯನ್ನು ಪ್ರತಿನಿಧಿಸುವ ಸಂಯೋಜಕ ಶಕ್ತಿಯಲ್ಲಿರುತ್ತದೆ. ಮತ್ತು ಇವರ ಸಾಹಿತ್ಯದಲ್ಲಿ ಉದಾರವಾದಿ ಮಾನವತವಾದ ಹೆಚ್ಚು ಕೆಲಸ ಮಾಡುತ್ತದೆ. ಹಾಗೂ ಅರ್ಥ ಹುಡುಕುವಿಕೆ ಮುಖ್ಯವಾಗುತ್ತದೆ. ಈ ಹುಡುಕಾಟದಿಂದಲೇ ಅನೇಕ ದರ್ಶನಗಳು ದೈತಾಳುವುದು ಈ ಹಿನ್ನಲೆಯಲ್ಲಿ ಸಂಸ್ಕೃತೀಕರಣ ಮತ್ತು ಸಾಂಸ್ಕೃತಿಕ ಇಕ್ಕಟ್ಟು ಬಿಕ್ಕಟ್ಟುಗಳ ಒಳನೋಟಗಳಿರುತ್ತವೆ. ಪ್ರೊ।। ಕೆ.ಜಿ.ಎನ್. ರವರು ಮಾನವೀಯತೆಯ ಬಗ್ಗೆ ಅಗಾಧವಾದ ಕಾಳಜಿ ಮಾನವೀಯ ಭಾವನೆಗಳನ್ನು ಹೊರತು ಪಡಿಸಿ ಹಿಂದೆಂದೂ ನಡೆದಿಲ್ಲ, ನಡೆಯುವುದು ಸಾಧ್ಯವೂ ಇಲ್ಲ. ಆದರೆ ಚರ್ಚೆ ಮಾಡುತ್ತಾರೆ. ಮಾಡಿದ್ದನ್ನು ಅನುಭವಿಸುತ್ತಾರೆ. ವಿಚಾರಗಳೊಂದಿಗೆ ಗುದ್ದಾಡುತ್ತಾರೆ. ಕೆಲವು ನಂಬಿಕೆಗಳನ್ನು ಬೆಳಸಿಕೊಳ್ಳುತ್ತಾರೆ. ಕೆಲವು ವಿಚಾರಗಳನ್ನು ಸಮರ್ಥಿಸುತ್ತಾರೆ. ಕೆಲವು ವಿಚಾರಗಳನ್ನು ಖಂಡಿಸುತ್ತಾರೆ. ಸಮಾಜೋ ಸಾಂಸ್ಕೃತಿಕ ವಿಚಾರಗಳನ್ನು ಸಾದರಪಡಿಸುತ್ತಾರೆ. ಹಿಗೆ ಜನರೊಂದಿಗೆ ಬೆರೆಯುತ್ತಲೆ ತನ್ನೊಳಗೆ ಸಂವಾದಿಸುವ, ಮಂಥನ ಮಾಡುವ ಸಾಮಾಜಿಕ ಶೈಲಿ ಪ್ರೊ।। ಕೆ.ಜಿ.ಎನ್. ರವರದ್ದು. ಇದನ್ನೆ ಬರಗೂರವರು 'ಜನ ಪರಂಪರೆ ' ಎಂದು ಕರೆಯುವುದು.

ಪ್ರೊ।। ಕೆ.ಜಿ.ಎನ್. ರವರಿಗೆ ಇಹ-ಪರ ಲೌಕಿಕ-ಅಲೌಕಿಕ ಮುಖ್ಯವಲ್ಲ ಇವೆರಡರ ಮಿಳಿತ ಮುಖ್ಯವಾಗುತ್ತದೆ. ಹಾಗೆಂದು ಪ್ರತಿವಾದಿಸುವುದಿಲ್ಲ, ಅನ್ವೇಷಿಸುತ್ತಾರೆ. ಪ್ರೊ।।ಕೆ.ಜಿ.ಎನ್. ರವರ ಸಾಹಿತ್ಯದ ಅನುಭವವನ್ನು ಓದುಗರಿಗೆ ವರ್ಗಾಯಿಸುವುದಿಲ್ಲ. ಉತ್ಪನ್ನವಾಗುವಂತೆ ಮಾಡುವುದು ಕೆ.ಜಿ.ಎನ್.ರವರ ಸಾಹಿತ್ಯ ದರ್ಶನ. ಇವರ ಸಾಹಿತ್ಯದಲ್ಲಿ ಸಮಕಾಲೀನ ಪ್ರಜ್ಞೆ ಕಂಡು ಬರುತ್ತದೆ. ಇದು ಹಿನ್ನೋಟ ಮುನ್ನೋಟಗಳನ್ನು ಒಳಗೊಂಡಿರುತ್ತದೆ. ಪ್ರೊ।। ಕೆ.ಜಿ.ಎನ್ ರವರು ಈ ಮಣ್ಣಿನೊಂದಿಗೆ ಸಜೀವವಾದ ಮತ್ತು ಸಾವಯವ ಸಂಪರ್ಕವನ್ನು ಉಳಿಸಿಕೊಂಡಿರುವುದರ ಫಲವಾಗಿ ಜನಪರ ನಿಲುವುಗಳು ಮತ್ತು ಸಂವಹನದ ಸೌಲಭ್ಯಕ್ಕಾಗಿ ನಡೆಸುವ ಪ್ರಜ್ಞಾಪೂರ್ವಕ ಪ್ರಯತ್ನ, ಸಾಮಾಜಿಕ ಅಸಮಾನತೆಯನ್ನು ವಿರೋಧಿಸಿಯೂ ಸಂಬಂಧಪಟ್ಟ ವ್ಯಕ್ತಿಗಳ ಬಗ್ಗೆ ದ್ವೇಷತಳೆಯದ ಗುಣಗ್ರಾಹಿ ಧೋರಣೆ ಮತ್ತು ಅಂತರಂಗದ ಏಕಾಂತತೆ ದೈನಂದಿನ ಜನ ಜೀವನದ ತುಮುಲದ ನಡುವೆಯು ಸಮತೂಕವನ್ನು ಕಾಯ್ದುಕೊಳ್ಳುವ ಭಾಷೆ ಮತ್ತು ಲೋಕೋತ್ತರವಾದುದಕ್ಕೆ ನಡೆಸುವ ಹುಡುಕಾಟಗಳ ಸಾಹಿತ್ಯ ವ್ಯಕ್ತಿಯನ್ನು ಪ್ರಸ್ತುತ ಪ್ರೊ।। ಕೆ.ಜಿ.ಎನ್. ರವರ ಸಾಹಿತ್ಯ ಚಿಂತನದಲ್ಲಿ ಕಾಣಬಹುದು.

ಪ್ರೊ।। ಕೆ.ಜಿ.ಎನ್. ರವರ ಕೃತಿಗಳು ಬಹಳ ಮಿತವಾದರೂ ಹಾಲಿ ಇರುವ ಕೃತಿಗಳು, ಚಿರಂತನವೂ ಹೌದು. ಅಂದರೆ ಗುರ್ತಿಸಬಹುದಾದ ಬೆಳವಣಿಗೆಯ ಕ್ರಿಯೆಯೊಂದರ ಮೂಲಕ ಹಾದು ಹೋಗುವಂತದ್ದು ಇವರ ಸಾಹಿತ್ಯ ಸ್ವರೂಪ

ಯಾವಾಗಲೂ ಚಿಂತನವನ್ನು ಆಕರ್ಷಿಸುತ್ತದೆ. ಮತ್ತು ಸಂಶ್ಲೇಷಣೆ (ಪ್ರತಿಭೆ) ಹಾಗೂ ವಿಶ್ಲೇಷಣೆಗಳಲ್ಲಿ ಅವರ ಸಾಹಿತ್ಯದಲ್ಲಿ ಮುಪ್ಪುರಿಗೊಂಡು ಮೇಳೈಸುತ್ತದೆ. ಆದರೆ ಇವರದ್ದು ಕೃತಿ ಕೇಂದ್ರಿತ ವಿಮರ್ಶೆಯಾದರೂ ಕೃತಿಕಾರನ ಪೂರ್ವ ಹಿನ್ನೆಲೆ ಕೆಲವು ಸಲ ಮುಖ್ಯವಾಗುತ್ತದೆ. ಯಾಕೆಂದರೆ ಕೃತಿಯನ್ನು ಚಾರಿತ್ರಿಕ ಹಿನ್ನಲೆಯಲ್ಲಿ ಗ್ರಹಿಸಿದಾಗ ಈ ನೋಟವಿರುತ್ತದೆ. ಪ್ರೊ|| ಎಚ್.ಜಿ. ಸಣ್ಣಗುಡ್ಡಯ್ಯನವರು ಗುರ್ತಿಸಿದಂತೆ "ಪ್ರೊ|| ಕಿ.ಜಿ.ಎನ್. ರವರು 'ಕ್ರಿಯಾಶೀಲ ಕ್ರಾಂತಿ ಕಾರಿ ಹೋರಾಟಗಾರ' ಎಂದು ಕರೆದಿರುವುದು ಉತ್ಪ್ರೇಕ್ಷೆಯಲ್ಲ. ಔಚಿತ್ಯ ಪೂರ್ಣವಾದುದು. ಈ ಹಿನ್ನಲೆಯಲ್ಲಿ ಪ್ರೊ|| ಕೆ.ಜಿ.ಎನ್ ರವರ ಸಾಹಿತ್ಯ ಮತ್ತು ಬದುಕು ಒಂದು ಗಂಭೀರ ಅಧ್ಯಯನ ಆಕಾರವಾಗುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಪ್ರೊ|| ಕೆ.ಜಿ.ಎನ್. ರವರ ಸಾಹಿತ್ಯ 'ಜೀವನದ ಪ್ರಜ್ಞೆಯಾದರೆ ಅವರ ವಿಮರ್ಶೆ ಸಾಹಿತ್ಯ ಪ್ರಜ್ಞೆಯಾದರೆ ' ಅವರ ವಿಮರ್ಶೆ ಸಾಹಿತ್ಯ ಪ್ರಜ್ಞೆ ಮತ್ತು ಆ ಪ್ರಜ್ಞೆ ಫೀನಿಕ್ಸ್ ಪಕ್ಷಿಯಷ್ಟೆ ಅಪರೂಪದ್ದು. ಇವರ ಭಾಷೆ ಸಮಕಾಲೀನತೆ ಮತ್ತು ಐತಿಹಾಸಿಕತೆಗಳಿರುತ್ತವೆ. ಹೀಗೆ ಮರುಚಿಂತನೆಯ ಹರಿಕಾರರಾದ ಪ್ರೊ|| ಕೆ.ಜಿ.ಎನ್. ರವರು ಸಾಹಿತ್ಯ ಸೃಷ್ಟಿ ಮತ್ತು ವಿಮರ್ಶಾ ಸೃಷ್ಟಿಗಳಲ್ಲಿ ಪಳಗಿದ ಕೈ ಇವರ ಚಿಂತನೆ ಮತ್ತೆ ಮತ್ತೆ ಕೇಳಿ ಬರುವ ಅನುಕರಣನದಂತೆ ಹಾಗೆಂದು ಪುನರುಕ್ತಿಯಲ್ಲ. ಸ್ಫೂರ್ತಿಯ ಸೆಲೆ.

ಪ್ರೊ|| ಕೆ.ಜಿ.ನಾ ರವರ ಸಾಹಿತ್ಯದಲ್ಲಿ ಭಾರತೀಯ ಕಾವ್ಯ ಮೀಮಾಂಸೆಯ ಮಾನದಂಡಗಳಿಗೆ ಹುಡುಕಾಟ ಮಾಡುವುದಕ್ಕಿಂತ ಅವರ ಸಾಹಿತ್ಯ ದರ್ಶನ ಮತ್ತು ಚಿಂತನೆಗೆ ಗಮನ ಹರಿಸಿರುವುದು ಅಪ್ರಸ್ತುತ ವೆನಿಸಲಾರದು. ಆಧುನಿಕ ಸಾಹಿತ್ಯಕ ವಿಮರ್ಶೆಯಲ್ಲಿ ಕ್ಲಾಸಿಕಲ್ ಮಾದರಿಯ ಮೀಮಾಂಸೆಯ ಪರಿಕಲ್ಪನೆಗಳನ್ನು ಮತ್ತೆ ಮತ್ತೆ ಪುನರುಚ್ಚರಿಸುವುದು ಅಷ್ಟು ರುಚಿಸಲಾರದ ಸಂಗತಿ. ಅದಕ್ಕೆ ಬದಲಾಗಿ ಜೀವನ ದರ್ಶನ ಚಿಂತನ ಕ್ರಮ ಪ್ರತಿಮೆ, ವಸ್ತು ನಿಷ್ಠತೆ ಮತ್ತು ಅವರ ಸಾಹಿತ್ಯದ ಒಲವು- ನಿಲುವುಗಳೇನು? ಎಂಬುದರ ಕಡೆಗೆ ಹೆಚ್ಚು ಒತ್ತು ಕೊಟ್ಟಿರುವುದು ಹೆಚ್ಚು ಪ್ರಸ್ತುತ ಎಂದು ಭಾವಿಸುತ್ತೇನೆ. ಒಟ್ಟಿನಲ್ಲಿ ಪ್ರೊ|| ಕೆ.ಜಿ.ನಾರವರ ಒಟ್ಟು ಸಾಹಿತ್ಯದ ಚಿಂತನ ಕ್ರಮವನ್ನು ನನ್ನಳವಿನ ತಳಿವಿನಲ್ಲಿ ಗ್ರಹಿಸಿದ್ದೇನೆ.

ಇನ್ನು ಕೊನೆಯದಾಗಿ ಪ್ರೊ|| ಕೆ.ಜಿ.ಎನ್ ರವರ ಬಗ್ಗೆ ಒಂದು ಮಾತೆಂದರೆ ಪ್ರೊ|| ಕೆ.ಜಿ.ನಾ ರವರು ಸ್ನೇಹಮಯಿಗಳು, ವಿಚಾರವಾದಿಗಳು ಯಾವುದೇ ಚರ್ಚೆ, ಸಂವಾದವನ್ನು ತಲಸ್ಪರ್ಶಿಯಾಗಿ ನೋಡುವ ಆನ್ವಯಿಕ ವಿಮರ್ಶಕರು. ಇವರು ಹೊರನೋಟಕ್ಕೆ ಸ್ಥಿತ ಪ್ರಜ್ಞರಂತೆ ಕಂಡರು ಅವರ ವಿಚಾರ ಧಾರೆಗಳು ತುಂಬಾ ರ್ಯಾಡಿಕಲ್ ಆಗಿವೆ. ಹಾಗೆಂದು ಯಾವುದೇ ಮತವನ್ನು ತಿರಸ್ಕರಿಸುವುದಿಲ್ಲ, ಪುರಸ್ಕರಿಸುತ್ತಾ ಆರೋಗ್ಯ ಪೂರ್ಣ ಬೆಳವಣಿಗೆಯತ್ತ ಕರೆದು ಕೊಂಡು ಹೋಗುತ್ತಾರೆ. ಹೀಗಾಗಿ ಮರುಚಿಂತನೆಯ ನಾಗರಾಜಪ್ಪನವರೆಂದು ನಾಡಿನ ವಿದ್ವಜ್ಜನರಲ್ಲಿ ಖ್ಯಾತಿ ಹೊಂದಿದ್ದು ಅವರ ವಿಚಾರಧಾರೆಗಳಿಗೆ ಒಂದು ಶಕ್ತಿ ಇದೆ. ಯಾವುದೇ ವಿಚಾರ ವಿಮರ್ಶೆಯನ್ನು ಯಾರ ಮೂಲಾಜಿಲ್ಲದೆ ನಿಷ್ಪಕ್ಷಪಾತಿಯಾಗಿ ತರ್ಕಿಸುವ ಮಹಾ ಚೇತನ. ♦

16. ಸಂಪಾದನಾ ಕೃತಿಗಳತ್ತ ಒಂದು ನೋಟ

ಆರ್. ಉಮೇಶ್

ತಮ್ಮ ಬದುಕು-ಬರಹದ ಪ್ರತಿ ಹೆಜ್ಜೆಯಲ್ಲೂ, ಎಲ್ಲಾ ಪ್ರಾಕಾರದಲ್ಲೂ ಅಚ್ಚು ಕಟ್ಟುತನವನ್ನು ಉಳಿಸಿಕೊಳ್ಳುವ ಅತಿವಿರಳ ಲೇಖಕರಲ್ಲಿ ಪ್ರೊ। ಕೆ.ಜಿ. ನಾಗರಾಜಪ್ಪನವರು ಒಬ್ಬರೆಂದೇ ಹೇಳಬೇಕು. ಎಷ್ಟೇ ಕಷ್ಟವಾದರೂ ಹಿಂಜರಿಯದೆ ಒಪ್ಪಿಕೊಂಡ ಕೆಲಸವನ್ನು ಸಕಾಲಕ್ಕೆ ಮುಗಿಸಿಕೊಡುವ ನಿಷ್ಠುರ ವ್ಯಕ್ತಿಯೂ ಹೌದು. ಅದರಲ್ಲೂ ಯಾವುದೇ ಕೃತಿಯನ್ನು ಸಂಪಾದನೆ ಮಾಡುವಲ್ಲಿ ಇರುವ ಜವಾಬ್ದಾರಿ, ತೊಂದರೆ, ಲೇಖಕರನ್ನು ಹಿಡಿದು ಸರಿಹೊಂದುವ ಲೇಖನ ಬರೆಸುವಲ್ಲಿ ಇರುವ ಹೆಣಗಾಟಕ್ಕೆ ಹೆದರಿ ಹಿಡಿದ ಕೆಲಸವನ್ನು ಅರ್ಧಕ್ಕೆ ಬಿಡುವ ಸಂದರ್ಭಗಳೇ ಜಾಸ್ತಿ. ಇಂತಹದರಲ್ಲೂ ತ್ರಿವಿಕ್ರಮನಾಗಿ ಹಿಡಿದ ಕೆಲಸವನ್ನು ಛಲಬಿಡದೆ ಮುನ್ನಡೆಸಿ ಅದಕ್ಕೆ ಸಾಕಾರ ರೂಪ ನೀಡುವ ಅಪರೂಪದ ಬರಹಗಾರರಲ್ಲಿ ಸಂಪಾದಕರಲ್ಲಿ ಪ್ರೊ। ಕೆ.ಜಿ. ನಾಗರಾಜಪ್ಪನವರು ಗಟ್ಟಿಗರೆಂದರೆ ಅತಿಶಯೋಕ್ತಿ ಏನಲ್ಲ.

ಸ್ವಂತ ಕೆಲಸ ಕಾರ್ಯಗಳ ಒತ್ತಡ, ಸಮಯದ ಅಭಾವ ಮತ್ತು ಸೃಜನಶೀಲ ಮತ್ತು ವೈಚಾರಿಕ ಬರಹಗಾರರ ಅಭಾವದಿಂದಾಗಿ ಸಂಪಾದಕನಾಗಿ ಕೆಲಸಮಾಡುವುದು ಕಷ್ಟಕರವಾದುದ್ದು. ಈ ಕಷ್ಟಗಳ ನಡುವೆಯೂ ಪ್ರೊ। ಕೆ.ಜಿ. ನಾಗರಾಜಪ್ಪನವರು ವಿಚಾರಸಂಕಿರಣ, ಅಭಿನಂದನಾ ಸಮಾರಂಭ, ವಾರ್ಷಿಕೋತ್ಸವ ಅಥವಾ ಇನ್ನಿತರ ಘಟನೆಗಳ ಸವಿನೆನಪಿಗಾಗಿ ಅನೇಕ ಸ್ಮರಣ ಸಂಚಿಕೆಗಳ, ಸಂಪಾದನಾ ಗ್ರಂಥಗಳ ಸಂಪಾದಕರಾಗಿ ಕೆಲಸಮಾಡಿದ್ದಾರೆ. ಲೆಕ್ಕವಿಲ್ಲದಷ್ಟು ಇಂತಹ ಸಂಪಾದನಾ ಗ್ರಂಥಗಳು ಇವೆ. ಆದರೆ ನನಗೆ ದೊರೆತಿರುವ ಐದು ಸಂಪಾದನ ಗ್ರಂಥಗಳು ಮತ್ತು ನೆನಪಿನ ಸಂಚಿಕೆಗಳನ್ನು ಗಮನಿಸಿದಾಗ ನಾಗರಾಜಪ್ಪನವರ ಪರಿಶ್ರಮ, ಸೃಜನಶೀಲತೆ, ಸಾರ್ಥಕತೆ ಎದ್ದು ಕಾಣುತ್ತದೆ. ಶಿವಕುಮಾರವಾಣಿ, ಶ್ರೀ ಚೌಡೇಶ್ವರಿ ಪ್ರತಿಷ್ಠಾಪನ ಮಹೋತ್ಸವ ಸಂಚಿಕೆ, ಕಾಜಾಣ, ಅಭಿಮಾನ ಮತ್ತು ಶಂಕರಿ ಎಂಬ ಕೃತಿಗಳು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿವೆ.

ತುಮಕೂರಿನ ಸಿದ್ಧಗಂಗಾ ಮಠ ಮತ್ತು ಡಾ। ಶಿವಕುಮಾರ ಸ್ವಾಮಿಗಳ ಕೂಡ ಅವಿನಾಭಾವ ಸಂಬಂಧ, ಗಾಢ ಒಡನಾಟ, ಅಂತರಂಗದ ಆತ್ಮೀಯತೆ ಹೊಂದಿದ್ದ ನಾಗರಾಜಪ್ಪನವರು 1966 ರಲ್ಲಿ 'ಶಿವಕುಮಾರ ವಾಣಿ' ಎಂಬ ಕೃತಿಯನ್ನು ಸಂಪಾದಿಸಿ, ತಾವೇ ಪ್ರಕಟಿಸಿದ್ದಾರೆ. ಬೇರೆ ಬೇರೆ ಸಭೆ, ಸಮಾರಂಭ, ಸನ್ನಿವೇಶಗಳಲ್ಲಿ ಮಠಾಧೀಶರಾದ ಡಾ। ಶಿವಕುಮಾರ ಸ್ವಾಮಿಗಳು ನೀಡಿದ ಆಶೀರ್ವಚನದಿಂದ ಆಯ್ದು ಜೀವನಾನುಭವದ ನುಡಿಮುತ್ತುಗಳ ಸಂಗ್ರಹವೇ ಶಿವಕುಮಾರವಾಣಿ. ಅವರೇ ತಮ್ಮ ಸಂಪಾದಕೀಯದಲ್ಲಿ ಹೇಳಿಕೊಂಡಿರುವಂತೆ " ಶಿವಕುಮಾರವಾಣಿ ಕೇವಲ ಎರಡು ಮೂರು ತಿಂಗಳ ನನ್ನ ಪ್ರಯತ್ನದ ಫಲ. ಈ ಬಿಡಿಮುತ್ತುಗಳು ಒಂದೇ ಕಾಲದಲ್ಲಿ ಒಂದೇ ಜಾಗದಲ್ಲಿ, ಒಂದೇ

ಮನೋಭಾವದಿಂದ ಹೊರಹೊಮ್ಮಿದವುಗಳಲ್ಲ. ಬೇರೆ ಬೇರೆ ಕಾಲದಲ್ಲಿ, ಬೇರೆ ಬೇರೆ ಜಾಗದಲ್ಲಿ, ಬೇರೆ ಬೇರೆ ಮನೋಭಾವದಲ್ಲಿದ್ದಾಗ ವ್ಯಕ್ತಗೊಂಡ ಮುಕ್ತಕಗಳು". ಈ ಪುಸ್ತಕದಲ್ಲಿ ವ್ಯಕ್ತವಾಗಿರುವ ವಿಚಾರಗಳು ಬರೀ ಆಶೀರ್ವಚನದಂತಿರದೆ ಇತಿಹಾಸದಿಂದಾಯ್ದ ಕಥೆಗಳ ರೂಪದಂತೆ, ಹಿತವಚನದಂತೆ ಇರುವ ಆಧ್ಯಾತ್ಮಿಕ ವಾಣಿಯಾಗಿದೆ. ಈ ಎಲ್ಲಾ ನುಡಿಮುತ್ತುಗಳನ್ನು ಸರ್ವರಿಗೂ ಅರ್ಥವಾಗಬಹುದಾದ ಸರಳ ಮಾದರಿಯಲ್ಲಿ ಅಕ್ಷರದಲ್ಲಿ ಸೆರೆ ಹಿಡಿದಿರುವುದು ಅವರ ಸಂಪಾದಕೀಯ ಪ್ರಜ್ಞೆಗೆ ಹಿಡಿದ ಭೂತಕನ್ನಡಿಯಾಗಿದೆ.

ಬಹುತೇಕ ದೇವಾಂಗ ಜನಾಂಗದವರೇ ಪ್ರಧಾನವಾಗಿ ಆರಾಧಿಸುವ ದೈವ ಎಂದರೆ ಶ್ರೀ ಚೌಡೇಶ್ವರಿ ಮಾತೆ. ತಿಪಟೂರು ತಾಲ್ಲುಕು ಹಳೇಪಾಳ್ಯ ಗ್ರಾಮದಲ್ಲಿ 1983 ರಲ್ಲಿ ನಿರ್ಮಾಣವಾದ ಶ್ರೀ ಚೌಡೇಶ್ವರಿ ದೇವಾಲಯದ ಪ್ರತಿಷ್ಠಾಪನೆಯ ಸುಸಂದರ್ಭದಲ್ಲಿ ತುಮಕೂರು ಜಿಲ್ಲಾ ದೇವಾಂಗ ಸಂಘ ಹೊರತಂದ 'ಶ್ರೀ ಚೌಡೇಶ್ವರಿ ಪ್ರತಿಷ್ಠಾಪನ ಮಹೋತ್ಸವ ಸಂಚಿಕೆ' ಯ ಸಂಪಾದಕರಾಗಿ ಪ್ರೊ॥ ನಾಗರಾಜಪ್ಪನವರು ಕೆಲಸ ಮಾಡಿದ್ದಾರೆ. ವಿಚಾರ ಪೂರ್ಣವಾಗಿ ಸಂಚಿಕೆಯನ್ನು ಸಂಪಾದಿಸುವುದರ ಜೊತೆಗೆ 'ದೇವಾಂಗ ಸಂಸ್ಕೃತಿ -ಒಂದು ಅಧ್ಯಯನ' , 'ಜಿಲ್ಲೆಯ ದೇವಾಲಯಗಳು ಮತ್ತು ಸಂಘ ಸಂಸ್ಥೆಗಳು', 'ಸಾಸಲು ಬನಶಂಕರಿ ಜಾತ್ರೆ -ಒಂದು ವಿಶ್ಲೇಷಣೆ' ಮತ್ತು 'ಹಳೇಪಾಳ್ಯ -ಒಂದು ಪರಿಚಯ' ಎಂಬ ನಾಲ್ಕು ಸಂಶೋಧನಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಈ ಮೂಲಕ ದೇವಾಂಗದವರಿಗೇ ಗೊತ್ತಿಲ್ಲದ ತಮ್ಮ ಜನಾಂಗದ ಧರ್ಮ ಮತ್ತು ಸಂಸ್ಕೃತಿಯನ್ನು ಪರಿಚಯಿಸಿದ್ದಾರೆ. ಹಾಗೂ ಜನಾಂಗೀಯ ಸಾಮಾಜಿಕ ಅಧ್ಯಯನಕ್ಕೆ ಒಂದು ಹೊಸ ದಿಕ್ಕನ್ನು ತೋರಿಸಿದ್ದಾರೆ.

ಕುವೆಂಪು ಮತ್ತು ಕುವೆಂಪು ಸಾಹಿತ್ಯವೆಂದರೆ ಪ್ರೊ। ನಾಗರಾಜಪ್ಪನವರಿಗೆ ಅತ್ಯಂತ ಪ್ರೀತಿ. ಶೂದ್ರನಿಗೊಂದು ಕಿಟಕಿ ತೆರೆದು ಓದುಗರ ಕಿವಿ ಸೂಕ್ಷ್ಮಗೊಳಿಸಿದ ಮಹಾನ್ ಚೇತನ ಶ್ರೀ ಕುವೆಂಪು ಅವರಿಗೆ ಎಂಬತ್ತು ವರ್ಷಗಳು ತುಂಬಿದಾಗ 'ಶ್ರೀ ಕುವೆಂಪು-೮೦, ವಿಚಾರಸಂಕಿರಣ-1984' ಎಂಬ ಕಾರ್ಯಕ್ರಮವನ್ನು ತುಮಕೂರಿನ ವಿದ್ಯೋದಯ ಕಾನೂನು ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಆ ಸಂದರ್ಭದ ಸವಿನೆನಪಿಗಾಗಿ 'ಕಾಜಾಣ' ಎಂಬ ಸಾಹಿತ್ಯ ಸಂಚಿಕೆಯನ್ನು ಸಿದ್ಧಪಡಿಸಲಾಯಿತು. ಈ ಕಾಜಾಣದ ಪ್ರಧಾನ ಸಂಪಾದಕರಾಗಿ ಕುವೆಂಪುಗೆ ಇಷ್ಟವಾದ ಕಾಜಾಣ ಪಕ್ಷಿಗಳ ಮುಖಪುಟವುಳ್ಳ ಪುಸ್ತಕವನ್ನು ಹೊರತಂದು ಪ್ರೊ। ನಾಗರಾಜಪ್ಪನವರು ಕುವೆಂಪು ಅಭಿಮಾನಿಗಳ, ಸಾಹಿತಿ ಬಂಧುಗಳ, ಸಹೃದಯರ ಮನಸೂರೆಗೊಂಡರು. ಕುವೆಂಪುವನ್ನು ಮತ್ತು ತುಮಕೂರು ನಗರದೊಂದಿಗಿನ ಕುವೆಂಪು ಸಂಬಂಧವನ್ನು ಕಣ್ಣಿಗೆ ಕಟ್ಟುವಂತೆ ಹಿಡಿದಿಟ್ಟಿರುವ ಈ ಕೃತಿಯ ಸಂಪಾದಕೀಯದಲ್ಲಿ ಕುವೆಂಪು ವ್ಯಕ್ತಿತ್ವದ ಬಗ್ಗೆ ಬರೆದಿರುವ ಮಾತುಗಳು ಮರೆಯಲಾಗದಂತಹವು. ಅವು ಅನುರಣನಗೊಳ್ಳುತ್ತಲೇ ಇರುವಂತವು. ನಿಷ್ಪಕ್ಷಪಾತವಾಗಿ ಯಾವುದೇ ಮೂಲಾಜಿಗೂ ಒಳಗಾಗದ ಮಾತುಗಳೂ ಹೌದು. ಅವುಗಳಲ್ಲಿ ಕೆಲವು ವಾಕ್ಯಗಳು ಉಲ್ಲೇಖನೀಯವಾಗಿವೆ.

"ಆಧ್ಯಾತ್ಮಿಕ ತಳಹದಿಯ ಮೇಲೆ ಸೌಂದರ್ಯೋಪಾಸಕರಾಗಿ ಬದುಕನ್ನು

ರೂಪಿಸಿಕೊಂಡವರು ಕುವೆಂಪು. ಅವರಿಗೆ ಬದುಕಿನ ಆಧ್ಯಾತ್ಮಿಕ ವ್ಯಾಖ್ಯಾನವೇ ಬರವಣಿಗೆಯ ಮೂಲ ಪ್ರೇರಣೆಯ ಶಕ್ತಿ".

"ಕುವೆಂಪು ಅವರನ್ನು ಬದುಕಿನುದ್ದಕ್ಕೂ ಶೂದ್ರ-ಬ್ರಾಹ್ಮಣ ಸುಳಿಯಲ್ಲಿ ಸಿಕ್ಕಿಸಿ ಕೃತಿಗಳನ್ನು ಪರಿಶೀಲಿಸುತ್ತಿರುವುದೇ ಸಂದಿಗ್ಧತೆಗೆ ಮೂಲ ಕಾರಣ. ಇಂಥ ದೃಷ್ಟಿದೋಷದ ಪರ ವಿರೋಧಿಗಳ, ಕುವೆಂಪು ಕೃತಿಗಳ ವ್ಯಾಖ್ಯಾನದ ಸ್ತುತಿನಿಂದೆಯಿಂದ ವಿಪುಲ ಸಾಹಿತ್ಯ ಸೃಷ್ಟಿಯಾಗಿ ವಸ್ತುನಿಷ್ಠ ಅಧ್ಯಯನಕ್ಕೆ ಒತ್ತುಬೀಳದೆ ಮೂಲೆಗುಂಪಾಗಿದೆ."

ಒಟ್ಟಿನಲ್ಲಿ ಕುವೆಂಪುರವರನ್ನು ವಿವಿಧ ಮಗ್ಗಲುಗಳಿಂದ ನೋಡುವ ಪ್ರಯತ್ನವನ್ನು ಈ ಕೃತಿ ಮಾಡಿದೆ ಎಂಬ ವಿಶ್ವಾಸವನ್ನಿಡಬಹುದು. ಯಾವುದೇ ವ್ಯಕ್ತಿಯ ಕುರಿತ ವಿಚಾರ ಸಂಕಿರಣ, ಸಭೆ ಸಮಾರಂಭಗಳು ಅವಶ್ಯಕವೆ? ಎಂಬ ಪ್ರಶ್ನೆಗೆ ಪ್ರೊ। ನಾಗರಾಜಪ್ಪನವರು ಒಂದು ಮಾತನ್ನು ಸಂಪಾದಕೀಯದಲ್ಲಿ ಹೇಳಿದ್ದಾರೆ. ಅದು ಕುವೆಂಪುಗೆ ಮಾತ್ರವಲ್ಲ. ಎಲ್ಲಾ ಲೇಖಕರಿಗೂ ಅನ್ವಯವಾಗುವಂತಹದ್ದು.

"ಕುವೆಂಪು ವಿಚಾರಸಂಕಿರಣಗಳು ಮತ್ತೆ ಮತ್ತೆ ನಡೆದು, ವಿವಿಧ ವಿಮರ್ಶಕರ ಬಿಚ್ಚು ನುಡಿಯ ಮುಕ್ತ ಚರ್ಚೆಗೆ ಅವಕಾಶವಾದಾಗ ಮಾತ್ರ ಪ್ರಸ್ತುತ ಕಾಲಕ್ಕೆ ಕುವೆಂಪು ಅವರು ಹೆಚ್ಚು ಹೆಚ್ಚು ಅರ್ಥವುಳ್ಳ ವ್ಯಕ್ತಿಯಾಗುತ್ತಾರೆ. ಇಂಥ ವಿಚಾರಸಂಕಿರಣಗಳಿಂದ ಕುವೆಂಪು ಅವರಿಗೆ ಕೋಡು ಮೂಡುವುದಿಲ್ಲ. ಅವರ ಸಾಹಿತ್ಯವನ್ನು ಅರಿಯುವ ಲಾಭ ಸಹೃದಯರಿಗೆ ಮಾತ್ರ. ಈಗಾಗಲೇ ಸಾಹಿತ್ಯ ಶಿಖರದ ಉತ್ತುಂಗದಲ್ಲಿ ವಿಹರಿಸುತ್ತಿರುವ ಕುವೆಂಪು ಅವರಿಗೆ ವಿಚಾರಸಂಕಿರಣಗಳು ಲೌಕಿಕ ಸಾಧನೆಗೆ ಏಣಿಗಳಲ್ಲ; ಆದರೆ ಆಸಕ್ತ ಸಹೃದಯರ ರಸಯಾತ್ರೆಗೆ ಮಾತ್ರ ಕುವೆಂಪು ವಿಚಾರ ಸಂಕಿರಣಗಳು ಏಣಿಗಳಾಗಿ ಸಾಹಿತ್ಯಾಭಿರುಚಿಯ ವಿಕಾಸಕ್ಕೆ ಸಾಧನವಾಗುವುದರಲ್ಲಿ ಸಂಶಯವಿಲ್ಲ".

ತುಮಕೂರಿನ "ಶ್ರೀ ಕುವೆಂಪು-80 , ವಿಚಾರಸಂಕಿರಣ" ಮತ್ತು ಅದರ ಅಂಗವಾಗಿ ಪ್ರೊ। ನಾಗರಾಜಪ್ಪನವರ ಪ್ರಧಾನ ಸಂಪಾದಕತ್ವದಲ್ಲಿ ಹೊರಬಂದ 'ಕಾಜಾಣ' ಸಂಚಿಕೆ ಕುವೆಂಪು ಅವರ ವಸ್ತುನಿಷ್ಠ ಅಧ್ಯಯನಕ್ಕೆ ನಾಂದಿಯಾದದ್ದಂತೂ ಖಂಡಿತ. ಬಾ.ಹ. ರಮಾಕುಮಾರಿಯವರು ಕುವೆಂಪು ಗುರು ಮೋಸೆಸ್‌ರವರನ್ನು ಸಂದರ್ಶಿದ್ದು, ಜನತೆಯನ್ನು ಅಂಧಕಾರದಲ್ಲಿಟ್ಟ ಪುರೋಹಿತಶಾಹಿ ಪ್ರಭುತ್ವವನ್ನು ಕುರಿತಂತೆ ಕೆ.ಆರ್. ಕಮಲೇಶ್ ಅವರು ಕುವೆಂಪು ಅವರನ್ನು ಸಂದರ್ಶನ ಮಾಡಿದ್ದು, ಬಿ. ವೀರಭದ್ರಯ್ಯನವರು ಮಾಡಿದ 'ತುಮಕೂರಿನಲ್ಲಿ ಶ್ರೀ ಕುವೆಂಪು' ಸಂಗ್ರಹ, ಹಾಗೂ ಜಿ.ಎಸ್. ಶಿವರುದ್ರಪ್ಪ, ಅಂಬಿಕಾತನಯದತ್ತರು ಕುವೆಂಪುವನ್ನು ವಸ್ತುವಾಗಿಟ್ಟುಕೊಂಡು ರಚಿಸಿದ ಕವಿತೆ, ಹೀಗೆ ಇವೆಲ್ಲವೂ ಒಂದೆಡೆ ಸೇರಿದ್ದರಿಂದ ಕಾಜಾಣ ಕುವೆಂಪು ಬದುಕು-ಬರಹದ ಒಂದು ಸಮಗ್ರವಾದ ಇಣುಕು ನೋಟವಾಗಿದೆ. ಶೂದ್ರರ ಮಹಾಸಂವೇದನೆ ಕುವೆಂಪುರವರ ಬಗ್ಗೆ ಪ್ರೊ। ನಾಗರಾಜಪ್ಪನವರು ಸಂಪಾದಕೀಯದಲ್ಲಿ

ಹೇಳಿರುವ ಕಟುವಾಸ್ತವ ನೆಲೆಯ ವಾಕ್ಯಗಳು ಹತ್ತು ಕಾಲವೂ ಉತ್ತಮ ವಾಕ್ಯಗಳಾಗೇ ಉಳಿದು ಕುವೆಂಪು ದಂತಗೋಪುರದ ಅಭಿಮಾನಿಗಳನ್ನು ನಿಯಂತ್ರಣಕ್ಕೆ ತಂದು ಅವರ ಕೃತಿಗಳಿಗೆ ಸಲ್ಲಬಹುದಾದ ನ್ಯಾಯವನ್ನು ಸಲ್ಲಿಸಲು ನೆರವಾಗುತ್ತವೆ.

ತುಮಕೂರಿನ ಖ್ಯಾತ ನ್ಯಾಯವಾದಿ, ಪ್ರಾಧ್ಯಾಪಕ ಪ್ರೊ। ಹೆಚ್. ಎಸ್.ಶೇಷಾದ್ರಿ ಅಭಿನಂದನ ಸಮಿತಿ, 1992 ರಲ್ಲಿ ಹೊರತಂದ ನೆನಪಿನ ಸಂಚಿಕೆಯೇ 'ಅಭಿಮಾನ'. ಇದರ ಸಂಪಾದಕರಾಗಿ ಪ್ರೊ। ಕೆ.ಜಿ. ನಾಗರಾಜಪ್ಪನವರು ಹತ್ತು ದಿವಸಗಳ ತುರ್ತು ಅವಧಿಯ ಒತ್ತಡದಲ್ಲಿ ಪ್ರೊ। ಹೆಚ್. ಎಸ್. ಶೇಷಾದ್ರಿಯವರ ವಸ್ತು ನಿಷ್ಠ ಬದುಕನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಸಮೃದ್ಧ, ಸಂಪದ್ಭರಿತ, ನಿಗೂಢ ವ್ಯಕ್ತಿಯ ಬದುಕನ್ನು ಸಮರ್ಥವಾಗಿ ಅಭಿಮಾನದಲ್ಲಿ ಕಡೆದು ಅನಾವರಣ ಮಾಡಿದ್ದಾರೆ.

'ಅಭಿಮಾನ'ದ ಸಂಪಾದಕೀಯ 'ಕಿಂಡಿಯಿಂದ ಕಂಡದ್ದು' ಎಂಬ ಶೀರ್ಷಿಕೆಯಡಿಯಲ್ಲಿ ನಾಗರಾಜಪ್ಪನವರು ಹೇಳಿರುವ ಮಾತುಗಳು ಮನನೀಯವಾಗಿವೆ. ಹಾಗೆಯೇ ಅಭಿನಂದನ ಸಮಾರಂಭ ಮತ್ತು ನೆನಪಿನ ಸಂಚಿಕೆಗಳನ್ನು ಕುರಿತು ಸಮರ್ಥ ವಕಾಲತ್ತು ಮಂಡಿಸುತ್ತವೆ. " ಇಂಥ ಒತ್ತಡದ ಜವಾಬ್ದಾರಿ ಹೊತ್ತಾಗ ಮಾತ್ರ ವಿವಿಧ ವ್ಯಕ್ತಿಗಳ, ಸಮುದಾಯಗಳ ಮತ್ತು ಜನಾಂಗಗಳ ಕ್ರಿಯೆ-ಪ್ರತಿಕ್ರಿಯೆಗಳ ಒಳನೋಟಗಳಿಂದ ನಮ್ಮ ಅನುಭವದ ಪರಿಧಿ ವಿಸ್ತಾರವಾಗುತ್ತದೆ. ಇಂತಹ ಅನುಭವಗಳಿಂದ ಮತ್ತಷ್ಟು ನೋವು, ಸಂಕಟ, ತಲ್ಲಣಕ್ಕೆ ದಾರಿಯಾಗುತ್ತದೆ. ಆತ್ಮೀಯರು ಮತ್ತು ಪರಸ್ಪರ ವಿರುದ್ಧ ದಿಕ್ಕಿನವರು ಇಂಥ ಸಂದರ್ಭದಲ್ಲಿ ಒಗ್ಗೂಡಿ, ಮಾನವ ಜನಾಂಗಕ್ಕೆ, ದೇಶದ ಅಭಿವೃದ್ಧಿಗೆ ಭದ್ರ ಅಡಿಗಲ್ಲಾಗಬಹುದು ಎಂದು ಅನ್ನಿಸುವಷ್ಟರಲ್ಲಿಯೇ ಸಮಾರಂಭದ ಅನಂತರ ಸಧ್ಯದ ಬೆಸೆದ ಕೊಂಡಿಗಳು ಕಿತ್ತು, ಮತ್ತೆ ಮಾನವೀಯ ಸಂಬಂಧಗಳು ಪರಸ್ಪರ ಗುಮಾನಿಗೆ ಒಳಗಾಗುವುದರಿಂದ ಯಾರನ್ನಾದರೂ ಚಿಂತೆಗೆ ಹಚ್ಚುತ್ತವೆ. ಅಂಥ ಇಕ್ಕಟ್ಟಿನ ಸಂದರ್ಭದಲ್ಲಿ ಅಭಿನಂದನ ಸಮಾರಂಭದ ಸಂಚಿಕೆಗಳು ಸ್ಮೃತಿಯ ಸಂಕೇತವಾಗಿ, ಕಾಲದ ಅಣಕವಾಗಿ ಕೆಣಕುತ್ತ ಯಾರ ಕಣ್ಣನ್ನಾದರೂ ಕುಕ್ಕಬಹುದು ಅಥವಾ ಎಚ್ಚರಿಕೆಯ ಕರೆಗಂಟೆಯಾದರೂ ಆಗಬಹುದು."

ಇತ್ತೀಚೆಗೆ 1996 ರಲ್ಲಿ ಪ್ರೊ। ಕೆ.ಜಿ. ನಾಗರಜಪ್ಪನವರ ಸಂಪಾದಕತ್ವದಲ್ಲಿ ಪ್ರಕಟವಾದ 'ಶಂಕರಿ' ಸ್ಮರಣ ಸಂಚಿಕೆ ಅವರ ವ್ಯಕ್ತಿತ್ವ ಮತ್ತು ಏಕವ್ಯಕ್ತಿ ಸಾಹಸಕ್ಕೊಂದು ಉದಾಹರಣೆಯಾಗಿದೆ. ಬೆಂಗಳೂರು ವೈಯಾಲಿಕಾವಲ್‌ನಲ್ಲಿರುವ 'ಶ್ರೀ ಶಂಕರಿ ಬಳಗ' ಎಂಬ ಮಹಿಳಾ ಸಂಘದ ಪ್ರಥಮ ವಾರ್ಷಿಕೋತ್ಸವ ಸವಿನೆನಪಾಗಿ 'ಶಂಕರಿ' ಯನ್ನು ಹೊರತರಲಾಗಿದೆ. ಸೃಜನಶೀಲ, ವೈಚಾರಿಕ ಬರಹಗಾರರೆನ್ನುವವರು ಇಂಥ ಸಂಚಿಕೆಗಳಿಗೆಲ್ಲಾ ಬರೆಯುವ ಮನಸ್ಸು ಮಾಡುವುದಿಲ್ಲ. ಒಂದು ಜನಾಂಗದಲ್ಲಿ ಹುಟ್ಟಿದ ಇಂಥ ಬರಹಗಾರರು ತಮ್ಮದೇ ಜನಾಂಗದವರು ತರುವ ಇಂಥ ಪತ್ರಿಕೆಗಳಿಗೆ ಬರೆದು ಎಲ್ಲಿ ತಾವು ಜಾತಿವಾದಿಗಳಾಗಿ ಬಿಡುತ್ತೇವೆಯೋ, ಎಲ್ಲಿ ತಮ್ಮ ಜಾತ್ಯಾತೀತ ಭಾವನೆಗೆ ಕಳಂಕ

ಬರುತ್ತದೋ ಎಂಬ ಭಯದಿಂದ ಬರೆಯಲೇ ಇಚ್ಛಿಸುವುದಿಲ್ಲ. ಇಂಥ ಕಷ್ಟಕರ ವೇಳೆಯಲ್ಲಿ ಇವ್ಯಾವುದಕ್ಕೂ ಅಂಜದೆ ಅಳುಕದೆ ಜನಾಂಗದ ಅಧ್ಯಯನ ದೃಷ್ಟಿಯಿಂದ, ಮಾರ್ಗದರ್ಶನ ಮಾಡುವ ಉದ್ದೇಶದಿಂದ ನಾಗರಾಜಪ್ಪನವರು 'ಶಂಕರಿ'ಯ ಸಂಪಾದಕರಾಗಿ ಕೆಲಸ ಮಾಡಿ ಸಮರ್ಥವಾದ ಸುಂದರವಾದ ಸಂಚಿಕೆಯನ್ನು ಸಿದ್ಧಪಡಿಸಿದ್ದಾರೆ.

"ಸೃಜನಶೀಲ ಮತ್ತು ವೈಚಾರಿಕ ಬರಹಗಾರರ ಅಭಾವದಿಂದ ಈ ಸಂಚಿಕೆಯಲ್ಲಿ ಮಹಿಳೆಯರ ಸಮಗ್ರ ವ್ಯಕ್ತಿತ್ವವನ್ನು ಅಧ್ಯಯನ ಮಾಡಿದ ಅಭಿವ್ಯಕ್ತಿ ಸಾಧ್ಯವಾಗಲಿಲ್ಲ. ಮಹಿಳೆಯರ ಮತ್ತೊಂದು ಮುಖ ಪುರುಷರ ಅಭಿಪ್ರಾಯಗಳಿಂದ ನೇಕಾರ ಜನಾಂಗದ ಅಧ್ಯಯನ ಸಾಧ್ಯವಾಯಿತು. ನೇಕಾರ ಜನಾಂಗದ ಸಮಸ್ಯೆಗಳಿಗೆ ಮತ್ತು ಅಭಿಪ್ರಾಯಗಳಿಗೆ ಈ ಸಂಚಿಕೆಯಲ್ಲಿ ನಾಲಿಗೆ ದೊರೆತಿದೆ. ಈ ಸಂಚಿಕೆಗೆ ನಾನೇ ಹೆಚ್ಚು ಬರೆಯಲೇ ಬೇಕಾದ ಅನಿವಾರ್ಯ ಪರಿಸ್ಥಿತಿ ಒದಗಿ ಅದು ಏಕಕಾಲದಲ್ಲಿ ಗುಣವೂ ಮತ್ತು ದೋಷವೂ ಆಗಬಹುದು. ನಾನು ನಿರೀಕ್ಷಿಸಿದ ಗುಣಮಟ್ಟವನ್ನು ಈ ಸಂಚಿಕೆಯಲ್ಲಿ ಕಾಯ್ದುಕೊಳ್ಳಲು ಸಾಧ್ಯವಾಗಲಿಲ್ಲ" ಎಂಬುದಾಗಿ ಪ್ರೊ। ನಾಗರಾಜಪ್ಪನವರು ಸಂಪಾದಕೀಯದಲ್ಲಿ ಹೇಳಿಕೊಂಡಿದ್ದಾರೆ. ದೇವಾಂಗ ಜನಾಂಗದ ಅದರಲ್ಲೂ ಮಹಿಳೆಯರ ಕುರಿತಾದ ಸಮಸ್ಯೆಗಳನ್ನು ಪಟ್ಟಿ ಮಾಡಿ ಅದಕ್ಕೆ ಸೂಕ್ತ ಪರಿಹಾರವನ್ನೂ ಸೂಚಿಸಿದ್ದಾರೆ. ಅವರ ಅಭಿವ್ಯಕ್ತಿಗೆ ಒಂದು ವೇದಿಕೆ ಒದಗಿಸಿಕೊಟ್ಟಿದ್ದಾರೆ. ಈ ಮೂಲಕ ಇಡೀ ನೇಕಾರ ಜನಾಂಗದ ಸಂಸ್ಕೃತಿ ವೈವಿಧ್ಯತೆಯನ್ನು ತೆರೆದಿಟ್ಟಿದ್ದಾರೆ.

ಪ್ರೊ। ನಾಗರಾಜಪ್ಪನವರು 'ಶಂಕರಿ' ಸಂಚಿಕೆಯ ಮೂಲಕ ತಮ್ಮ ಮೇಲಿನ ಮಿಥ್ಯಾರೋಪಕ್ಕೆ ಉತ್ತರವನ್ನು ಕೊಟ್ಟು ಹಲವು ಎದುರಾಳಿಗಳಿಗೆ ಸಮಾಧಾನ ತಂದಿದ್ದರೆ ತಮ್ಮದೇ ಜನಾಂಗದ ಅರಿಯದ ಜನರಿಂದ ಹೊಸ ಆರೋಪಕ್ಕೆ, ವಿರೋಧಕ್ಕೆ ಒಳಗಾಗಿದ್ದಾರೆ. ಸಾಮಾನ್ಯವಾಗಿ ನಾಗರಾಜಪ್ಪನವರ ವಿಚಾರಗಳು ಹಿಂದುಳಿದವರಿಗೆ, ದಲಿತರಿಗೆ, ಮಹಿಳೆಯರಿಗೆ ಬೈಬಲ್ ಆಗಿದ್ದರೆ ಅದೇ ವೇಳೆ ಮೇಲ್ವರ್ಗದವರ ವಿರೋಧಕ್ಕೆ ಕಾರಣವಾಗಿವೆ. 'ಅನಾವಶ್ಯಕವಾಗಿ ನಮ್ಮನ್ನು ಟೀಕಿಸುತ್ತಾರೆ, ನಾಗರಾಜಪ್ಪ ನಮ್ಮ ವಿರೋಧಿ' ಎಂದು ಕೆಲವರು ತಿಳಿದಿದ್ದರು. ಶಂಕರಿಯಲ್ಲಿ ತಮ್ಮದೇ ಆದ ದೇವಾಂಗ ಜನಾಂಗದ ಧರ್ಮಗುರು ಹಂಪಿಯ ಹೇಮಕೂಟದ ಶ್ರೀ ಶ್ರೀ ಶ್ರೀ ದಯಾನಂದಪುರಿ ಸ್ವಾಮೀಜಿಯವರನ್ನು ಸಂದರ್ಶಿಸಿರುವ ರೀತಿ, ಕೇಳಿರುವ ಪ್ರಶ್ನೆಗಳು "ನಾಗರಾಜಪ್ಪ ಯಾರನ್ನು ಬಿಡುವುದಿಲ್ಲ. ಬಲು ಖಂಡಿತವಾದಿ, ಅವರದು ನಿಷ್ಠೂರ ವ್ಯಕ್ತಿತ್ವ" ಎಂದು ಟೀಕಾಕಾರರು ತೀರ್ಮಾನಕ್ಕೆ ಬರುವಂತೆ ಮಾಡಿವೆ. ಅದೇ ವೇಳೆಗೆ ಅಕ್ಷರಸ್ಥರಾಗಿದ್ದೂ ವಿಚಾರವಂತರಲ್ಲದ ದೇವಾಂಗ ಜನಾಂಗದವರ ಕೆಂಗಣ್ಣಿಗೆ, ಟೀಕೆಗೆ ಹೊಸದಾಗಿ ಈಡಾಗುವಂತಾದದ್ದು ಒಂದು ವಿಪರ್ಯಾಸ.

ಸಂಪಾದಕೀಯ, ಶ್ರೀ ದಯಾನಂದ ಸ್ವಾಮಿಗಳೊಂದಿಗಿನ ಸಂದರ್ಶನದ ಜೊತೆಗೆ ನಾಗರಾಜಪ್ಪನವರ ದೇವರ ದಾಸಿಮಯ್ಯ- ಮರುಚಿಂತನೆ, ದೇವಾಂಗ ಜನಾಂಗ ಚಿಂತನ ಮಂಥನ ಮತ್ತು ಕಲ್ಲೂರಿನ ಸಂತಕವಿ ರುದ್ರಮುನಿಸ್ವಾಮಿ ಎಂಬ ಮೂರು ದೀರ್ಘ

ಲೇಖನಗಳು 'ಶಂಕರಿ' ಯಲ್ಲಿದ್ದು ಲೇಖಕರ ಕೊರತೆ ಕಂಡು ಬಂದು ಏಕಪಾತ್ರಾಭಿನಯದಂತಿದ್ದರೂ Informative ಆಗಿ ಓದುಗರನ್ನು ಸೆಳೆದು Sensitive ಅಂಶಗಳನ್ನು ತಿಳಿಸುವ ಪ್ರಾಮಾಣಿಕ ಪ್ರಯತ್ನವಾಗಿ ದಾಖಲಾಗಿದೆ. ಹೆಚ್ಚು ಸಂಘಟನೆಯ ಕಡೆಗೆ ಕೆಲವು ಲೇಖನಗಳು ವಾಲಿದರೂ ಅದನ್ನು ಜನಾಂಗದ ಸಾಂಸ್ಕೃತಿಕ ಅಧ್ಯಯನಕ್ಕೆ ಸಂಬಂಧಿಸಿದ ಲೇಖನಗಳು ಸಮದೂಗಿಸಿವೆ.

ಸುಮಾರು ಎಂಟು ಶಾಲಾಕಾಲೇಜುಗಳ ಸಂಚಿಕೆಗಳ ಸಂಪಾದಕರಾಗಿ, ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಯ ಪ್ರೋತ್ಸಾಹಕರಾಗಿ, ಅವರ ಸುಪ್ತ ಪ್ರತಿಭೆಯ ವಿಕಾಸಕ್ಕೆ ಪರಿಸರ ಸೃಷ್ಟಿಸಿರುವ ಹೆಗ್ಗಳಿಕೆ ಕೆ.ಜಿ.ಎನ್. ಅವರದ್ದು. 1966 ರಲ್ಲಿ ಸಂಪಾದಿಸಿದ ಅಂಥ ಒಂದು ವಿದ್ಯಾರ್ಥಿಗಳ ಸಂಚಿಕೆ 'ಜ್ಞಾನ ಗಂಗಾ'ದ ಸಂಪಾದಕೀಯದ ಮಾತು ಇಂದಿಗೂ ಪ್ರಸ್ತುತವಾಗಿದೆ: "ವಿದ್ಯಾರ್ಥಿಗಳಲ್ಲಿ ಮೂಲತಃ ದುಷ್ಟತನವಿಲ್ಲ. ದುಷ್ಟತನವೇನಿದ್ದರೂ ಪರಿಸರದ, ಸಹವಾಸದ, ಬಿಸಿ ನೆತ್ತರಿನ ತಾರುಣ್ಯದ ಪ್ರವಾಹ ಅಷ್ಟೆ. ಈ ತಾರುಣ್ಯ ಮಹಾಸಾಗರವನ್ನು ದುಷ್ಟ-ಶಿಷ್ಟ ಶಕ್ತಿಗಳೆರಡೂ ಪೈಪೋಟಿಯಿಂದ ಕಡೆಯುತ್ತಿರುವಾಗ ಉದ್ಭವವಾಗುವ ಹಾಲಾಹಲವನ್ನು ಸಮಾಜ ಹಿತಕ್ಕಾಗಿ ಆಚಾರ ಸಂಪನ್ನರಾದ ಆದರ್ಶದ ಅಧ್ಯಾಪಕರು ನುಂಗಿ ವಿಷಕಂಠ ಮನೋಭಾವವನ್ನು ವ್ಯಕ್ತ ಪಡಿಸಿದರೆ, ವಿದ್ಯಾರ್ಥಿಗಳ ಬದುಕಿನಿಂದ ಅಮೃತ ಉದ್ಭವವಾಗಿ ಯೋಗ್ಯರಾದ ರಾಷ್ಟ್ರ ನಿರ್ಮಾಪಕ ತಂಡ ಸೃಷ್ಟಿಯಾಗುವುದರಲ್ಲಿ ಸಂಶಯವಿಲ್ಲ. ಅಧ್ಯಾಪಕರು ನುಂಗುವ ವಿಷವನ್ನು ಗಂಟಲಲ್ಲೇ ತಡೆದು ಅವರನ್ನು ಬದುಕಿಸಿಕೊಳ್ಳಲು ಸರ್ಕಾರ, ಸಮಾಜ ಮುಂದೆ ಬಂದಾಗಲೇ ಇಂದಿನ ವಿದ್ಯಾಭ್ಯಾಸ ಪ್ರಕೃತಿ, ಮಾನವ, ದೈವದತ್ತವಾದ ಸರ್ವಶಕ್ತಿಯನ್ನೂ ನಾಡಿನ ಸಾಧನೆಯ ರಚನಾತ್ಮಕ ಕಾರ್ಯಗಳಿಗೆ ಸಂಘಟಿಸಿ ಅವರನ್ನು ರಾಷ್ಟ್ರೀಯ ಜೀವನದ ಹಿನ್ನೆಲೆಯಲ್ಲಿ ಅತ್ಯಾಧುನಿಕವಾಗಿ ರೂಪಿಸಿದಾಗ ಮಾತ್ರ, ಸ್ವಯಂ ಸಹಾಯದ ಸ್ವಾವಲಂಭನೆಯ ತತ್ತ್ವದ ತಳಹದಿಯ ಮೇಲೆ ದೇಶವನ್ನು ಕಟ್ಟಿ, ನಮ್ಮ ಸಂಸ್ಕೃತಿಯನ್ನು ರಕ್ಷಿಸಲು ಸಾಧ್ಯ".

ಶಿವಕುಮಾರವಾಣಿ, ಶ್ರೀ ಚೌಡೇಶ್ವರಿ ಪ್ರತಿಷ್ಠಾಪನ ಮಹೋತ್ಸವ ಸಂಚಿಕೆ, ಕಾಜಾಣ, ಅಭಿಮಾನ, ಶಂಕರಿ-ಈ ಐದು ಸಂಚಿಕೆಗಳ ಸಂಪಾದಕೀಯಗಳು, ಸ್ವಂತ ಲೇಖನಗಳು, ಆಯಾ ವಸ್ತು - ವಿಷಯಕ್ಕೆ ಸ್ಪಂದಿಸಿ, ತೆಗೆದುಕೊಂಡ ನಿಲುವುಗಳು ವ್ಯಕ್ತ ಪಡಿಸಿದ ಅಭಿಪ್ರಾಯಗಳು ಅನನ್ಯವಾಗಿವೆ, ಮಾದರಿಯಾಗಿವೆ. ಅರ್ಥಪೂರ್ಣ ಮತ್ತು ಅಭ್ಯಾಸಯೋಗ್ಯವಾಗಿವೆ. ಈ ಎಲ್ಲಾ ಸಂಪಾದನಾ ಕೃತಿಗಳನ್ನು ಅಧ್ಯಯನ ಮಾಡಿದಾಗ ನಾಗರಾಜಪ್ಪನವರ ವ್ಯಕ್ತಿತ್ವ ಢಾಳಾಗಿ ಕಾಣಿಸುತ್ತದೆ. ಅವರನ್ನು ಸಮರ್ಥ ಸಂಪಾದಕರನ್ನಾಗಿ ಪ್ರತಿಷ್ಠಾಪಿಸುತ್ತವೆ. ♦

ಭಾಗ - III

ಇತರೆ

141 Blank

1. ಸಂದರ್ಶನ -ಒಂದು

(ಅಭಿನಂದನೆ ಸಂದರ್ಭದಲ್ಲಿ ಎಂ.ಎಚ್. ನಾಗರಾಜು ಅವರು ಪ್ರೊ॥ ಕೆ.ಜಿ.ಎನ್. ಅವರೊಂದಿಗೆ ನಡೆಸಿದ ಸಂದರ್ಶನ. ದಿನಾಂಕ 1-9-98)

1. ಇಂದಿನ ಕನ್ನಡ ಸಾಹಿತ್ಯದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಬರಹಗಾರರು ಮತ್ತು ಕೃತಿಗಳ ಸಂಖ್ಯೆ ಹೆಚ್ಚುತ್ತಿದೆ. ಎಲ್ಲಾ ಸ್ತರದ ದನಿಗಳೂ ಮೌಖಿಕ ಮುಕ್ತಿಯಿಂದ ಅಭಿವ್ಯಕ್ತಿಗಾಗಿ ಚಡಪಡಿಸುತ್ತಿವೆ. ಇದು ಸಾಹಿತ್ಯ ಬಹುಮುಖಿಯಾಗುತ್ತಿರುವುದಕ್ಕೆ ಸಾಕ್ಷಿ. ಇಂದು ಕನ್ನಡ ಸಾಹಿತ್ಯ ಕೃತಿಗಳ ಕಲಿಕೆ ಮತ್ತು ಗ್ರಹಿಕೆ ತೀವ್ರ ಬದಲಾವಣೆಯಾಗುತ್ತಿದೆ. ಅಂದರೆ ಸಾಹಿತ್ಯ ಸಂವೇದನೆಗಳು ಏಕ ಸಂಸ್ಕೃತಿಯಿಂದ ಪ್ರಾಂತೀಯ ಬಹುಸಂಸ್ಕೃತಿಯತ್ತ ಹೊರಳಿ ಸಾಮಾಜೀಕರಣಗೊಳ್ಳುತ್ತಿದೆ. ಅಂದರೆ ಬರಹಗಾರರಲ್ಲಿ ತಮ್ಮತಮ್ಮ ಸಂಸ್ಕೃತಿಗಳಲ್ಲಿ ತಮ್ಮನ್ನು ಕಂಡುಕೊಳ್ಳುವ ಎಚ್ಚರಿಕೆಯ ಪ್ರಜ್ಞೆ ಮೂಡುತ್ತಿದೆ. ಅಂದು ಜಾತಿಯನ್ನೇ ಸೃಜನಶೀಲ ಎಂದವರೇ ಇಂದು ಜಾತಿ ಸೃಜನಶೀಲ ಕ್ರಿಯೆಗೆ ಅಡ್ಡಿ ಎನ್ನುವ ದ್ವಂದ್ವದ ಮಾತಿನಲ್ಲಿಯೇ ಕನ್ನಡ ಸಾಹಿತ್ಯದ ಸ್ಥಿತ್ಯಂತರದ ಪ್ರಗತಿಯನ್ನು ಗುರುತಿಸಬಹುದು. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ವ್ಯಾಪಾರೀಕರಣಗೊಳಿಸಿ, ಹುಸಿ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಕ್ಕೆ, ಸಮೂಹ ಮಾಧ್ಯಮಗಳು ಕುಮ್ಮಕ್ಕು ಕೊಡುತ್ತಿವೆ. ಮಾಧ್ಯಮಗಳ ದುರುಪಯೋಗದ ವಿರುದ್ಧ ಪ್ರತಿಭಟಿಸಲು ಅಸಲಿ ಸಂಸ್ಕೃತಿಯ ಬರಹಗಾರರು ಎದೆಗಾರಿಕೆ ಮತ್ತು ಸಾಮರ್ಥ್ಯವನ್ನು ಗಳಿಸಿಕೊಂಡು, ಸಾಹಿತ್ಯ ಸೃಷ್ಟಿಗೆ ಆರೋಗ್ಯಕರ ಪರಿಸರವನ್ನು ಸೃಷ್ಟಿಸಲು ಶ್ರಮಿಸಬೇಕಿದೆ. ಇಂಥ ಒಂದು ಸಂದಿಗ್ಧ ಮತ್ತು ಸಂಧಿಕಾಲ ಅಸಲಿ ಮತ್ತು ಹುಸಿ ಸಂಸ್ಕೃತಿಯ ಬರಹಗಾರರಿಗೆ ಏಕ ಕಾಲದಲ್ಲಿ ಒಂದು ಸವಾಲೇ ಸರಿ.

2. ನೀವು ಬರಹಗಾರರಾಗಿ ಏಕಾಂಗಿ ಎಂಬ ಅಭಿಪ್ರಾಯವಿದೆ. ಅದನ್ನು ಒಪ್ಪುವಿರಾ?

ನನ್ನ ಬರವಣಿಗೆಗೆ ನನಗೆ ಮಿತ್ರರಿಗಿಂತ, ಶತ್ರುಗಳೇ ಅಧಿಕ ಎನ್ನುವ ಅರ್ಥದಲ್ಲಿ ಈ ಪ್ರಶ್ನೆಯನ್ನು ಕೇಳಿದ್ದೀರಿ. ಖಂಡಿತ ನಾನು ಒಂಟಿಯಲ್ಲ. ಎಂದೂ ನಾನು ಒಂಟಿಯಲ್ಲ. ಭಾರತದ ಮೂಲೆ ಮೂಲೆಯಲ್ಲಿ, ತಮ್ಮ ಅಸಲಿ ವ್ಯಕ್ತಿತ್ವ ಕಂಡು ಕೊಳ್ಳಲು ಪ್ರಯತ್ನಿಸುತ್ತಿರುವ ಹೊಸ ಪೀಳಿಗೆಯ ಬರಹಗಾರರಲ್ಲಿ ನಾನೂ ಒಬ್ಬ. ಕನ್ನಡ ಸಾಹಿತ್ಯದಲ್ಲಿ ನನ್ನ ಬದುಕು ಮತ್ತು ಬರಹ ಇತರರಿಗಿಂತ ಭಿನ್ನವಾಗಿರಬಹುದು. ಕೆಳವರ್ಗ ಮತ್ತು ಗ್ರಾಮೀಣ ಬಹು ಸಂಸ್ಕೃತಿಯ ಸಾಮೂಹಿಕ ಪ್ರಜ್ಞೆಯೇ ನನ್ನ ಬರವಣಿಗೆಯ ಕ್ರಿಯಾ ಶಕ್ತಿ. ಅನಕ್ಷರಸ್ಥರು ಮತ್ತು ಅಸಂಘಟಿತರ ನಡುವೆ ನನ್ನನ್ನು ಕಂಡು ಕೊಂಡ ನನ್ನದು ಏಕಾಂಗಿ ಬದುಕು ಎಂದು ನಿಮಗೆ ತೋರಬಹುದು. ಮೇಲು ವರ್ಗ ಮತ್ತು ಕೆಳವರ್ಗದ ಬುದ್ಧಿಜೀವಿಗಳು ನನ್ನ ಬರವಣಿಗೆಯತ್ತ ಕಣ್ಣು ಹಾಯಿಸಲಿಲ್ಲ ಎಂಬ ಅರ್ಥದಲ್ಲಿ ಒಂದಿಷ್ಟು ಸತ್ಯವಿರಬಹುದು. ಆದರೆ ಸಾಮಾಜಿಕ ನ್ಯಾಯಕ್ಕಾಗಿ ಕಟ್ಟು ಬಿದ್ದ ನಾನು ಎಂದೂ ಒಂಟಿಯಲ್ಲ.

3. ಸಾಹಿತ್ಯ ಸಂಸ್ಕೃತಿ ಮತ್ತು ಚರಿತ್ರೆಗಳೇ ನಿಮ್ಮ ಬರವಣಿಗೆಯ ಸ್ಥಾಯಿ ಪ್ರೇರಣೆಯಲ್ಲವೆ?

ಹೌದು. ಸಾಹಿತ್ಯ, ಸಂಸ್ಕೃತಿ ಮತ್ತು ಚರಿತ್ರೆಯಲ್ಲಿ ಒಂದು ವರ್ಗದ ಹುಸಿ ಸುಳ್ಳುಗಳೇ ಏಕಮುಖವಾಗಿ ಹಬ್ಬಿವೆ. ಅವುಗಳನ್ನೇ ವಿದ್ವಾಂಸರು ಮತ್ತು ಸಾಮಾನ್ಯ ಜನರು ನಂಬಿದ್ದಾರೆ. ಇಂಥ ಹುಸಿ ಸಾಹಿತ್ಯ ಮತ್ತು ಸಂಸ್ಕೃತಿಯು ಹರಡುತ್ತಿರುವ ವಿಷ ಆರ್ಥಿಕ ಸಮಸ್ಯೆಗಿಂತ ಭೀಕರವಾದದು. ನಮ್ಮ ದೇಶದಲ್ಲಿ ಆರ್ಥಿಕ ಸಮಸ್ಯೆಗಿಂತ ಸಾಂಸ್ಕೃತಿಕ ಸಮಸ್ಯೆಯೇ ಪ್ರಧಾನವಾದುದು. ಆರ್ಥಿಕ ದುರಂತಕ್ಕೆ ಸಾಂಸ್ಕೃತಿಕ ವ್ಯವಸ್ಥೆಯೇ ಮೂಲ. ಅವುಗಳ ಮುಖವಾಡದ ಆಚೆ ಇರುವ ಸತ್ಯಮುಖದ ಅನ್ವೇಷಣೆಯೇ ನನ್ನ ಸಂಕಲ್ಪ. ನನ್ನ ಸತ್ಯಶೋಧನೆ ಆಧಾರ ರಹಿತವಲ್ಲ, ಕ್ಲೀಷೆಯಲ್ಲ, ಯಾಂತ್ರಿಕವಲ್ಲ.

4. ನಿಮ್ಮದು ಪ್ರಯೋಗ ಶೀಲ ಬದುಕು ಎನ್ನುತ್ತಾರೆ. ಅದು ನಿಮ್ಮ ಬರವಣಿಗೆಗೆ ಎಷ್ಟು ಸಹಾಯವಾಗಿದೆ?

ನಾನು ಹುಟ್ಟಿದ್ದು ಅನಕ್ಷರತೆ, ಅಜ್ಞಾನ, ಮೌಢ್ಯ ಮತ್ತು ಕಿತ್ತು ತಿನ್ನುವ ಬಡತನವಿದ್ದರೂ ಪರೋಪಕಾರಿಯಾದ ಸದಾ ಶೋಷಣೆಗೆ ಒಳಗಾದ ಕುಟುಂಬದಲ್ಲಿ. ನಾನು ಹುಟ್ಟುತ್ತಲೇ ನಮ್ಮ ಕುಟುಂಬ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅಜ್ಜಿ ಮತ್ತು ತಾಯಿ, ತಾವು ಹೊಟ್ಟೆ ಬಟ್ಟೆ ಕಟ್ಟಿಯೂ, ನನ್ನನ್ನು ಮಾತ್ರ ಸದಾ ಸುಖವಾಗಿಯೇ ಸಾಕಿದರು, ಅವರು ಅನಕ್ಷರಸ್ಥರಾದರೂ ನನ್ನನ್ನು ವಿದ್ಯಾವಂತನ್ನಾಗಿಸಲು ತಮ್ಮ ಬದುಕನ್ನೇ ತೇದರು. ಗಳಿಕೆ ಮತ್ತು ಕಲಿಕೆ ನನ್ನ ಸ್ವಭಾವಕ್ಕೆ ಒಗ್ಗದೆ, ಕಲಿಕೆಯೇ ನನ್ನ ಗುರಿಯಾಯಿತು. ಎಂದೂ ನಾನು ನನ್ನ ಕುಲ ಕಸುಬನ್ನು ಕಲಿಯದೆ, ನನ್ನ ಗೆಳೆಯರಿಂದ ನಾನು ಭಿನ್ನನಾದೆ. ಸದಾ ಕೆಲವು ಮೂಲಭೂತ ಪ್ರಶ್ನೆಗಳು ಚಿಕ್ಕಂದಿನಿಂದಲೇ ಸದಾ ಕಾಡತೊಡಗಿದವು. ದೇವರು, ದೆವ್ವ ಮತ್ತು ಅವನ್ನು ನಂಬಿ ಬದುಕುತ್ತಿರುವ ಜನರ ಆಚಾರ ವಿಚಾರಗಳು, ಸುತ್ತ ಮುತ್ತಲ ಬೆಟ್ಟಗುಡ್ಡಗಳು, ಕೆರೆ ಕಟ್ಟೆಗಳು, ಪ್ರಾಣಿ ಪಕ್ಷಿಗಳು, ಹೊಲ ಗದ್ದೆಗಳು ನನ್ನ ಕುತೂಹಲ ಕೆರಳಿಸಿದ್ದೇ ಅಲ್ಲದೆ, ಆಗಾಗ್ಗೆ ನಮ್ಮ ಊರಿಗೆ ಬಂದು ಹೋಗುತ್ತಿದ್ದ ಸಾಧು ಸಂತರು ನನ್ನ ಆಸಕ್ತಿಯನ್ನು ಕೆರಳಿಸುತ್ತಿದ್ದರು. ಎಲ್ಲವನ್ನೂ ಪರಿಕ್ಷೀಸಿ ಒರೆಹಚ್ಚುವ ದೃಢ ಸಂಕಲ್ಪ ನನ್ನದು. ದೇವರ ಮುಂದೆ ಕುಳಿತು, ಗಂಟೆಗಟ್ಟಲೆ ಧ್ಯಾನಿಸಿ, ಪ್ರತ್ಯಕ್ಷವಾಗದಿದ್ದಾಗ, ದೇವರ ವಿಗ್ರಹದ ಮೇಲೆ ಕಾಲಿಟ್ಟು ಮೂತ್ರ ವಿಸರ್ಜನೆ ಮಾಡಿದ್ದೇನೆ. ದೆವ್ವಗಳಿಗಾಗಿ ಅಮವಾಸ್ಯೆ ಮತ್ತು ಪೌರ್ಣಮಿಯಲ್ಲಿ ಸ್ಮಶಾನಕ್ಕೆ ಹೋಗಿ ಕಾದುಕುಳಿತಾಗ, ಕೆಲವು ವಿಚಿತ್ರ ಅನುಭವಗಳಾದುವೇ ಹೊರತು ದೆವ್ವಗಳು ಮಾತ್ರ ಕಾಣಸಿಕೊಳ್ಳಲಿಲ್ಲ. ಕೇವಲ ರಾಕ್ಷಸ ಗಣದವರಿಗೆ ಮಾತ್ರ ದೆವ್ವಗಳು ಕಾಣಸುತ್ತವೆ ಎಂದ ಹಿರಿಯರ ಮಾತು ಹುಸಿಯಾಯಿತು. ನಾನು ರಾಕ್ಷಸ ಗಣಕ್ಕೂ ಸೇರದ, ದೇವಗಣದವನೂ ಆಗದೆ ಅಂದಿನಿಂದಲೇ ನಾನು ಮಾನವ ಗಣದವನೆಂದು ನಿಶ್ಚಿತವಾಗಿ, ನನ್ನ ಪಾಲಿಗೆ ದೇವರೂ ಇಲ್ಲ ಮತ್ತು ದೆವ್ವವೂ ಇಲ್ಲದಂತಾಯಿತು. ಒಂಟಿಯಾಗಿ ಬೆಟ್ಟಗುಡ್ಡ, ಕಾಡು ಮೇಡು ಅಲೆದು ಮಾಟಗಾರರು, ಮಂತ್ರವಾದಿಗಳು ಮತ್ತು ವಿಚಿತ್ರ ಸಾಧು ಸಂತರು, ಸಿದ್ಧರನ್ನು ಕೆಣಕಿ ಸಾವಿನೊಂದಿಗೆ ಸರಸವಾಡಿದ್ದೇನೆ. ದೇವರು, ದೆವ್ವ ಮತ್ತು ಪ್ರಕೃತಿಗಿಂತ ವಿಚಿತ್ರವಾದುದು ಮನುಷ್ಯನ ಮನಸ್ಸು ಮತ್ತು ಸ್ವಭಾವ ಎಂದು ನನ್ನ ಅನುಭವಕ್ಕೆ ಬಂದಿದೆ. ಭ್ರಷ್ಟರ ನಡುವೆ, ನಾನು ಒಪ್ಪಿ ಆಚರಿಸುವ ಮೌಲ್ಯ ರಕ್ಷಣೆಗೆ ಹೋರಾಡುತ್ತ ಕಹಿಯನ್ನು ಅನುಭವಿಸುತ್ತಲೇ ಇದ್ದೇನೆ. ಇಷ್ಟಾದರೂ ಸತ್ಯಾನ್ವೇಷಣೆಯ ಸಾಹಸದ ಬದುಕಿನಿಂದ ನನಗೆ

ಶಾಂತಿ, ನೆಮ್ಮದಿ ದೊರಕಿದೆ. ಇಂಥ ಬದುಕಿನ ಅನುಭವ, ಶಾಸ್ತ್ರಾಧ್ಯಯನಕ್ಕಿಂತ ಹೆಚ್ಚು ನನ್ನ ಬರವಣಿಗೆಗೆ ಅಥೆಂಟಿಸಿಟಿ (ಅಧಿಕೃತತೆ)ಯನ್ನು ತಂದುಕೊಟ್ಟಿದೆ.

5. ನೀವು ತಡವಾಗಿ ಬರವಣಿಗೆಗೆ ತೊಡಗಿದಿರಿ. ಈಗಲೂ ನಿಮ್ಮ ಬರವಣಿಗೆ ನಿಧಾನ ಎಂಬ ದೂರಿದೆಯಲ್ಲ?

ಹೌದು, ನನಗೆ ಬರವಣಿಗೆಗಿಂತ ಬದುಕು ದೊಡ್ಡದು. ಅಂಥ ಬದುಕಿನ ವಿವಿಧ ಸ್ತರಗಳನ್ನು ಕಂಡುಕೊಳ್ಳುವುದರಲ್ಲಿಯೇ ನನಗೆ ತೃಪ್ತಿ ಸಿಕ್ಕುತ್ತದೆ. ನನಗೆ ಬರವಣಿಗಿಂತ ಅಧ್ಯಯನ ಮತ್ತು ಕಲಿಸುವುದು ಹೆಚ್ಚು ಪ್ರಿಯವಾದುದು, ನನಗೆ ಬದುಕು ಸೃಜನ ಶೀಲವಾದಷ್ಟು, ಬರವಣಿಗೆ ಸೃಜನ ಶೀಲವಾಗಿ ಕಾಣಲಿಲ್ಲ. ದೊಡ್ಡಸಂಕಣ್ಣನಾಯಕ ಕಾದಂಬರಿ ಇಡೀ ಕರ್ನಾಟಕದ ಪ್ರೌಢಶಾಲೆಯ ಒಂಬತ್ತನೆಯ ತರಗತಿಗಳಿಗೆ ಪಠ್ಯಪುಸ್ತಕವಾಗಿ, ಪ್ರಕಾಶಕ ನ್ಯಾಯ ಬದ್ಧವಾಗಿ ಹಣ ಕೊಡದೆ ಮೋಸ ಮಾಡಿದ ಮೇಲಂತೂ ಬರವಣಿಗೆಯ ಮೇಲಿನ ಮೋಹ ಕಡಿಮೆಯಾಯಿತು. ಅದೂ ಅಲ್ಲದೆ ಬರಹಗಾರರಲ್ಲಿ ತುಂಬಿರುವ ಗುಂಪುಗಾರಿಕೆ, ಜಾತಿ, ರಾಜಕೀಯ ನನ್ನನ್ನು ಅಧೀರನನ್ನಾಗಿಸಿತು. ವಿರುದ್ಧ ಪರಿಸರದಲ್ಲಿ ನನ್ನ ಅಧ್ಯಾಪಕ ವೃತ್ತಿಯ ಪಾವಿತ್ರ ರಕ್ಷಣೆ ಮತ್ತು ಒಪ್ಪಿರುವ ಜೀವನ ಮೌಲ್ಯ ರಕ್ಷಣೆಗಾಗಿ ಸತತ ಹೋರಾಟ ಅನಿವಾರ್ಯವಾಗಿ ನನ್ನ ಸಾಮರ್ಥ್ಯ ವ್ಯರ್ಥವಾಯಿತು. ಇಷ್ಟಾಗಿಯೂ ನಾನು ಬರೆದ ದೊಡ್ಡ ಸಂಕಣ್ಣನಾಯಕ ಕಾದಂಬರಿಗೆ ರಾಜ್ಯ ಪ್ರಶಸ್ತಿ, ಮರುಚಿಂತನೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರಕಿ ಬೆಂಬಲ ಸಿಕ್ಕಿದೆ. ಇಷ್ಟಾಗಿಯೂ ನಾನು ಕೃತಿಗಳಿಂದ ಬರಹಗಾರನಾಗಲಿಲ್ಲ, ಬದುಕಿನಿಂದ ಬರಹಗಾರನಾದೆ.

6. ಸಾಹಿತ್ಯ ಅಧ್ಯಯನದಲ್ಲಿ ನಿಮ್ಮ ದೃಷ್ಟಿಯಾವುದು?

ನಾನು ಸಾಹಿತ್ಯವನ್ನು ಸಾಂಸ್ಕೃತಿಕ ದೃಷ್ಟಿಯಿಂದ ಅಧ್ಯಯನ ಮಾಡುತ್ತೇನೆ. ಅದರಲ್ಲಿಯೂ ಧಾರ್ಮಿಕ ಮತ್ತು ಸಾಮಾಜಿಕ ಅಂಶಗಳು ನನ್ನ ಆಸಕ್ತಿಯನ್ನು ಕೆದಕಿವೆ. ಈ ಅಂಶಗಳು ಸಾಹಿತ್ಯದಲ್ಲಿ ಕಾಲಕಾಲಕ್ಕೆ ಹೇಗೆ ತಲೆದೋರಿವೆ ಎಂಬುದನ್ನು ಪ್ರಾಮಾಣಿಕವಾಗಿ ಗುರುತಿಸಿ ದಾಖಲಿಸುವುದರಲ್ಲಿ ನನಗೆ ಒಲವಿದೆ. ಇಂದಿನ ಸಾಂಸ್ಕೃತಿಕ ಮತ್ತು ಸಾಮಾಜಿಕ ಸವಾಲುಗಳು ಅನಿರೀಕ್ಷಿತವಾಗಿ ಕಾಣಿಸಿ ಕೊಂಡವೊ ಅಥವಾ ಇದಕ್ಕೆ ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕ ಕಾರಣವೊ ಅಥವಾ ನಮ್ಮ ಪರಂಪರೆಯ ಬದುಕಿನಲ್ಲಿಯೇ ಇದಕ್ಕೆ ಬೇರಿದೆಯೊ ಎಂಬ ಸಮಸ್ಯೆ ನನ್ನನ್ನು ಕಾಡುತ್ತಲೇ ಇದೆ. ಆದರೆ ಲಿಖಿತ ಸಾಹಿತ್ಯ ಬಹು ಸಂಸ್ಕೃತಿ ಮತ್ತು ಬಹು ಸಮಾಜವನ್ನು ಅಸಡ್ಡೆಯಿಂದ ಕಾಣುತ್ತಿರುವುದಂತೂ ಐತಿಹಾಸಿಕ ಸತ್ಯ. ಲಿಖಿತ ಸಾಹಿತ್ಯದ ಏಕ ಸಂಸ್ಕೃತಿಗೆ ಬಹು ಸಂಸ್ಕೃತಿಯ ನಾಶ ಮುಖ್ಯವಾಯಿತು. ಅಂದರೆ ಏಕ ಸಂಸ್ಕೃತಿಯದು ದೊಣ್ಣೆ ಸಂಸ್ಕೃತಿಯಾಯಿತು, ಬಹು ಸಂಸ್ಕೃತಿಯದು ಮಡಿಕೆ ಸಂಸ್ಕೃತಿಯಾಯಿತು. ಏಕ ಸಂಸ್ಕೃತಿಯ "ಫ್ಯೂಡಲ್' ಸ್ವಭಾವ ಮತ್ತು ಬಹುಸಂಸ್ಕೃತಿಯ 'ಪಾಸಿಟೀವ್' ಅಂಶಗಳನ್ನು ಗುರುತಿಸಿ, ಏಕ ಸಂಸ್ಕೃತಿ ಬಹು ಸಂಸ್ಕೃತಿಯಲ್ಲಿ ವೈಭವೀಕರಿಸಿದ 'ನೆಗೆಟೀವ್' ಅಂಶಗಳನ್ನು ವಿರೋಧಿಸುವುದು ನನಗೆ ಮುಖ್ಯವಾಯಿತು. ಸಾಹಿತ್ಯದಲ್ಲಿ ತಾಂತ್ರಿಕ ಅಂಶಗಳು ಅಗತ್ಯವಾದರೂ, ಅವೇ ಮುಖ್ಯವಲ್ಲ. ದೇಸೀಯ ಬಹುಸಂಸ್ಕೃತಿ ಮತ್ತು

ಬಹು ಸಮಾಜಗಳಿಂದ ಬಂದ ಬರಹಗಾರರೂ ಆಮಿಷಗಳಿಂದಲೊ ಕೀಳರಿಮೆಯಿಂದಲೊ ತಮ್ಮ ಸಂಸ್ಕೃತಿಯನ್ನು ಅಧೀನ ಸಂಸ್ಕೃತಿ, ಉಪ ಸಂಸ್ಕೃತಿ, ಪರ್ಯಾಯ ಸಂಸ್ಕೃತಿ ಎಂದೆಲ್ಲಾ ಹೆಸರಿಸುವ ಪ್ರತಿಷ್ಠಿತರ ಮಾತಿಗೆ ಒಪ್ಪುವುದು ಒಂದು ವಿಪರ್ಯಾಸ. ಸಂಸ್ಕೃತಿ ಸಂಸ್ಕೃತಿಯೇ. ಅದರಲ್ಲಿ ಮೇಲು-ಕೀಳು ಎಂಬುದಿಲ್ಲ. ಆದರೆ ಇಬ್ಬಂದಿ ಸಂಸ್ಕೃತಿ ಎಂಬುದ ಒಂದು ಅಸ್ತಿತ್ವದಲ್ಲಿ ಇದೆ ಅಷ್ಟೆ.

7. ತಂತ್ರ, ಶೈಲಿ, ರಚನೆ ಇಂತಹ ಕೃತಿಯು ವಿವರಿಸುವ ತಾಂತ್ರಿಕ ಅಂಶಗಳ ಬಗ್ಗೆ ಚರ್ಚೆಯನ್ನು ನೀವು ಬೆಳೆಸುವುದೇ ಇಲ್ಲ ಏಕೆ?

ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಪರಿಕಲ್ಪನೆಗಳು ವಿಮರ್ಶಿಸಲು ಅಸಮರ್ಥವಾಗಿವೆ. ಭಾರತೀಯ ತತ್ತ್ವ ಶಾಸ್ತ್ರವನ್ನು ಭಾರತೀಯ ಕಾವ್ಯ ಮೀಮಾಂಸೆಯೂ, ಬಲ ಮತ್ತು ಎಡ ಪಂಥೀಯ ತತ್ತ್ವಗಳನ್ನು ಪಾಶ್ಚಾತ್ಯ ಕಾವ್ಯ ಮೀಮಾಂಸೆ ಒಳಗೊಂಡು ಈ ಎರಡಕ್ಕಿಂತ ವಿಭಿನ್ನ ನೆಲೆಯುಳ್ಳ ಕನ್ನಡ ಸಾಹಿತ್ಯಕ್ಕೆ ಅನ್ವಯಿಸುವುದು ಎಷ್ಟು ಔಚಿತ್ಯ ಮತ್ತು ಸೂಕ್ತ ಎಂಬುದರ ಬಗ್ಗೆ ಚರ್ಚೆ ನಡೆಯ ಬೇಕಿದೆ ಅನ್ಯ ಭಾಷೆಗಳಿಂದ ಎರವಲು ತಂದ ವಸ್ತು ಕನ್ನಡದ ಬಂಡವಾಳ ವನ್ನಾಗಿಸಿಕೊಳ್ಳಲಿಲ್ಲ ಎಂಬ ವಿದ್ವಾಂಸರ ಅಭಿಪ್ರಾಯ ವಿಚಾರ ಯೋಗ್ಯವಾದುದು, ಕೇವಲ ಕಸುಬುಗಾರಿಕೆ ಕಲೆಗಾರಿಕೆ, ತಂತ್ರ-ಮುಂತಾದ ಗೌಣ, ಅಂಶಗಳನ್ನೇ ಪ್ರಧಾನ ಮಾಡಿ ಅನ್ವಯಿಸುವುದು, ಅನ್ಯಾಯವಾಗುತ್ತದೆ. ದೇಹ ಮತ್ತು ಆತ್ಮ ಸಂಬಂಧದಂತೆ ಸಂಸ್ಕೃತಿ ಮತ್ತು ಸಾಹಿತ್ಯ ತಂತ್ರಗಳ ಸಾಮರಸ್ಯ ಕ್ಕನುಗುಣವಾಗಿ ಪ್ರಾಂತೀಯ ಸಾಹಿತ್ಯಕ್ಕೆ ತನ್ನದೇ ಆದ ವಿಶಿಷ್ಟ ಗುಣಗಳಿವೆ. ಅವುಗಳನ್ನು ಗ್ರಹಿಸಿ, ಗುರುತಿಸಿ ಬಳಸಿದಾಗಲೇ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಅರ್ಥವತ್ತಾಗುವುದು, ತಮ್ಮ ಅಭಿರುಚಿಯ ಪಾಶ್ಚಾತ್ಯ ಮೀಮಾಂಸೆಯ ಯಾವುದೋ ಸಿದ್ಧಾಂತಗಳ ಪರಿಕಲ್ಪನೆಯನ್ನೆಲ್ಲಾ ತಂದು ತುರುಕಿ ವಿಮರ್ಶಿಸುವ ಪಾಶ್ಚಾತ್ಯ ವಿಮರ್ಶಾ ಪಾಳೆಯಗಾರಿಕೆಗೆ ನಾವೇಕೆ ತಲೆಕೆಡಿಸಿಕೊಳ್ಳಬೇಕು?

8. ಧರ್ಮಕ್ಕೆ ವಿಮುಖ ನೆಲೆಯಲ್ಲಿ ಹುಟ್ಟಿಕೊಂಡ ದಲಿತ- ಬಂಡಾಯ ಸಾಹಿತ್ಯ ಕನ್ನಡ ಸೃಜನ ಶೀಲ ಬರಹಗಾರರ ಮೇಲೆ ಬೀರಿರುವ ಪರಿಣಾಮಗಳಾವುವು?

ನಮ್ಮ ಸಾಹಿತ್ಯದಲ್ಲಿ ಸೃಜನ ಶೀಲತೆ ಹುಟ್ಟು, ಜಾತಿ, ಪ್ರತಿಭೆ, ಸಂಸ್ಕಾರಗಳಿಗೆ ತಳಕು ಹಾಕಿಕೊಂಡಿದೆ. ಆದ್ದರಿಂದ ಸಾಹಿತ್ಯದಲ್ಲಿ ಜಾತಿ, ರಾಜಕೀಯ ಮತ್ತು ಗುಂಪುಗಾರಿಕೆಗೆ ಅವಕಾಶವಾಯಿತು. ಆದ್ದರಿಂದಲೇ ಸೃಜನಶೀಲತೆಯ ಗುತ್ತಿಗೆದಾರರು ಹುಟ್ಟಿಕೊಂಡರು. ಅದು ಹುಟ್ಟು ಮತ್ತು ಗುಣದ ಕಲಬೆರಿಕೆಯಾಯಿತು. ಹುಸಿ ಸಂಸ್ಕೃತಿಯ ಸೃಜನ ಶೀಲ ಕೃತಿಗಳಿಗಿಂತ ಅಧಿಕ ಸಂಖ್ಯೆಯಲ್ಲಿ ದಲಿತ ಬಂಡಾಯ ಸಾಹಿತ್ಯ ಪ್ರಭಾವದಿಂದ ವೈಚಾರಿಕ ಸಾಹಿತ್ಯ ಕೃತಿಗಳು ಹುಟ್ಟುತ್ತಿವೆ. ಅವು ಬಹು ಸಮಾಜ ಮತ್ತು ಬಹು ಸಂಸ್ಕೃತಿಯ ಸತ್ವವನ್ನು ವಾಸ್ತವಿಕ ನೆಲೆಯಲ್ಲಿ ಗ್ರಹಿಸುತ್ತಿವೆ. ಇದು ವರೆವಿಗೂ ಸಾಹಿತ್ಯದಲ್ಲಿ ಬೆಳಕು ಕಾಣದ ಅನೇಕ ಸ್ತರದ ದನಿಗಳು ಕಾಣಿಸುಕೊಳ್ಳುತ್ತಿವೆ. ಇಂಥ ಸೃಜನಶೀಲ ಮತ್ತು ವೈಚಾರಿಕ ಸಾಹಿತ್ಯ ಕೃತಿಗಳನ್ನು ಬರಮಾಡಿಕೊಳ್ಳುವ ಔದಾರ್ಯ ಏಕ ಸಂಸ್ಕೃತಿಯ ಬರಹಗಾರರಿಗಿಲ್ಲ. ಅದೂ

ಅಲ್ಲದೆ ಬಹು ಸಂಸ್ಕೃತಿಯ ಬರಹಗಾರರು ತಮ್ಮ ವಿಶ್ವಾಸವನ್ನು ಏಕ ಸಂಸ್ಕೃತಿಯ ಬರಹಗಾರರಲ್ಲಿ ಗಿರವಿ ಇಟ್ಟರು. ದಲಿತ-ಬಂಡಾಯ ಬರಹಗಾರರು ಎಡ ಪಂಥೀಯ ಪಾಶ್ಚಾತ್ಯ ಧೋರಣೆಗಳಿಗೆ ಬಲಿಬಿದ್ದು ಕೆಳವರ್ಗದ ಬಹು ಸಂಸ್ಕೃತಿಗಳ ಬೇರನ್ನು ಗುರುತಿಸದಾದರು. ಕೆಳವರ್ಗದ ಗ್ರಾಮೀಣ ವಲಯದಿಂದ ಬಂದ ಸಾಹಿತ್ಯಿಕ ಸಂವೇದನೆಗಳು ಬೆಂಬಲಿಗರಿಲದೆ ಅನಾಥವಾಗಿವೆ. ನಿಯತವಾಗಿ ಬರುತ್ತಿದ್ದ ಸಾಹಿತ್ಯ ಸಮೀಕ್ಷೆಯ ವಾರ್ಷಿಕಗಳು ನಿಂತು ಹೋಗಲು ಕಾರಣವೇನು? ಮುತ್ತೈದೆ ಬರಹಗಾರರು ಅಥವಾ ಅವರ ವಂಶಾವಳಿಗಳೇ ವಯಾಗ್ರ ಸೇವಿಸಿದವರಂತೆ ಸರ್ಕಾರಿ ಮತ್ತು ಖಾಸಗಿ ಮಾಧ್ಯಮಗಳಲ್ಲಿ ಮಿಂಚುತ್ತಿರುವ ಗುಟ್ಟೇನು? ಬಹು ಸಂಸ್ಕೃತಿಯ ಚಲನೆ ಶೀಲತೆಯನ್ನೇ ಕನ್ನಡ ಸಾಹಿತ್ಯ ಸ್ಥಗಿತ ಎಂದು ಬೊಬ್ಬೆ ಇಡುವ ಹುಸಿ ಏಕ ಸಂಸ್ಕೃತಿಯ ವಕ್ತಾರರ ಮಾತುಗಳನ್ನು ಒಪ್ಪುವುದಾದರೂ ಹೇಗೆ? ಮೇಲ್ವರ್ಗ ಆಗಾಗ್ಗೆ ಸೃಷ್ಟಿಸುವ ಏಕ ಪಾತ್ರಾಭಿನಯದ ಸಾಹಿತ್ಯಿಕ ವಾಗ್ವಾದಗಳು ತಮ್ಮ ಸ್ಥಗಿತತೆಗೆ, ಅಸಹಾಯಕತೆಗೆ ತೊಡುವ ಮುಖವಾಡಗಳು. ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಗೆ ಮೀಸಲಾದ ಮೊತ್ತ ಸಹಾಯ ಅಥವಾ ಬಹುಮಾನ ರೂಪದಲ್ಲಿಯಾವ ವರ್ಗಕ್ಕೆ ದಕ್ಕುತ್ತಿದೆ? ಕೃತಿಗಳ ನಿಷೇದ ಅಥವಾ ಪ್ರೋತ್ಸಾಹದ ಹಿಂದೆ ಯಾವ ವರ್ಗದ ಕೈವಾಡವಿದೆ? ಇವುಗಳನ್ನೆಲ್ಲಾ ಪರೀಕ್ಷಿಸಿ ವಿಶ್ಲೇಷಿಸಿದರೆ ಕೆಳವರ್ಗದ ಬರಹಗಾರರ ಕೃತಿಗಳು ಕಾಡ ಬೆಳದಿಂಗಳು.

9. ದಲಿತ-ಬಂಡಾಯ ಸಾಹಿತ್ಯಿಕ ಚಳುವಳಿಗಳು ವಿಫಲಗೊಳ್ಳಲು ಕಾರಣವೇನು?

ದಲಿತ-ಬಂಡಾಯಚಳುವಳಿಗಳು ವ್ಯಕ್ತಿಗಳ ಅಥವಾ ಒಂದು ಗುಂಪಿನ ಅಥವಾ ಅತೃಪ್ತ ಮೇಲ್ವರ್ಗದ ಕೈಗೂಸುಗಳಾಗಿ ವಿಫಲಗೊಂಡಿವೆ. ಡೋನೇಷನ್ ಪಡೆಯುವ ಶಾಲಾ ಕಾಲೇಜುಗಳೇ ಸಂಸ್ಥೆಗಳೇ ಡೊನೇಷನ್ ಪಡೆದು ಪ್ರವೇಶ ಮುಗಿದ ಮೇಲೆ ತಾವೇ ತಮಗೆ ಬೇಕಾದ ವಿದ್ಯಾರ್ಥಿಗಳಿಗೆ ಹಣಕೊಟ್ಟು ರಸ್ತೆ, ಗೋಡೆಯ ಮೇಲೆಲ್ಲಾ ಡೊನೇಷನ್ ವಿರುದ್ಧ ಬರೆಸುತ್ತಾರೆ, ತೀವ್ರವಾದಿಗಳನ್ನು ಹದಗೊಳಿಸಿ ಸೌಮ್ಯ ವಾದಿಗಳನ್ನಾಗಿಸುವ ಇಂಥ ವಿಧಾನವೂ ಚಳುವಳಿಯ ಒಂದು ರೂಪವಾದಾಗ ವಿಫಲವಾಗುತ್ತಿವೆ. ಚಳುವಳಿಗೆ ಸಾರ್ವತ್ರಿಕವಾದ, ತಾತ್ವಿಕವಾದ ಸ್ವರೂಪ ಇದ್ದಲ್ಲಿ ಯಶಸ್ವಿಯಾಗಿವೆ. ಬಹುಪಾಲು ಚಳುವಳಿಗಾರರು ಶತಮಾನಗಳಿಂದ ಅದುಮಿದ್ದ ಆಮಿಷಗಳು, ಬಯಕೆಗಳು ಸ್ಫೋಟಗೊಂಡು ಅವಕಾಶವಾದಿಗಳಾದರು. ಚಳುವಳಿಗಾರರು ನಾಯಕತ್ವಕ್ಕೆ ನಡೆಸುವ ಆಂತರಿಕ ಜಗಳ ಮತ್ತು ಸ್ವಾರ್ಥವೂ ಕಾರಣ ದಲಿತ ಬಂಡಾಯ ಚಳುವಳಿಯ ಸಾಮಾಜಿಕ ಬದ್ಧತೆ, ತಾತ್ವಿಕ ಸ್ವರೂಪ ಮಾತಿನಲ್ಲಿಯೇ ಉಳಿದು ಚಳುವಳಿಗಾರರು ಮತ್ತು ಚಳುವಳಿ ನಾಯಕರು ವೈಯಕ್ತಿಕವಾಗಿ ಬಂಡವಾಳಗಾರರೂ, ರಾಜಕೀಯ ವ್ಯಕ್ತಿಗಳ ಕೈಗೊಂಬೆಗಳೂ, ಆಗಿ ನಿಷ್ಠಾವಂತ ವ್ಯಕ್ತಿಗಳು ಚಳುವಳಿಗಳಿಂದ ದೂರ ಸರಿದರು. ಅಪ್ರಾಮಾಣಿಕರಿಗೆ ಇಬ್ಬಂದಿ ನಾಯಕರ ಸಾಮಾಜಿಕ ಬದ್ಧತೆ ಶೋಷಕರ ಭ್ರಷ್ಟತೆಗಿಂತ ಭಿನ್ನವಾಗಿ ಕಾಣಲಿಲ್ಲ. ಅದೂ ಅಲ್ಲದೆ ದಲಿತ ಬಂಡಾಯ ಚಳುವಳಿ ನಾಯಕತ್ವ ಪ್ರಮುಖ ಜಾತಿಗಳ ಗುತ್ತಿಗೆಯಾಗಿ, ಅನೇಕ ಕೆಳವರ್ಗದ ಜಾತಿಗಳ ಸಾಹಿತ್ಯಿಕ ಸಂವೇದನೆಗಳು ಉಸಿರು ಕಟ್ಟಿದವು. ಮೇಲ್ವರ್ಗಕ್ಕಿಂತ ಕೆಳವರ್ಗದ ಬರಹಗಾರರೇ ಕೆಳವರ್ಗದ ಬರಹಗಾರರಿಗೆ ಶತ್ರುಗಳಾದರು. ಮೇಲು ನೋಟಕ್ಕೆ ದಲಿತ-ಬಂಡಾಯ

ಚಳುವಳಿಗಳು ವಿಫಲವಾದಂತೆ ತೋರಿದರೂ, ಮೂಲ ಚಳುವಳಿಗಳ ಐಡಿಯಾಲಜಿ ಬಹು ಸಂಸ್ಕೃತಿಯ ಬರಹಗಾರರಿಗೆ ಇಂದಿಗೂ ಸ್ಫೂರ್ತಿ ಮತ್ತು ಮಾರ್ಗದರ್ಶಿಯಾಗಿದೆ, ಚಳುವಳಿ ನಾಯಕರ ಮಹತ್ವಾಕಾಂಕ್ಷೆಗಳಿಂದಲೂ ಚಳುವಳಿಗಳು ಕಳೆಗುಂದಿದಂತೆ ತೋರುತ್ತದೆ ಅಷ್ಟೆ.

10. ಧರ್ಮ ಮತ್ತು ಸಂಪ್ರದಾಯಗಳನ್ನು ಕಟುವಾಗಿ ಟೀಕಿಸುವ ನಿಮ್ಮ ಬರಹಗಳ ಹಿನ್ನೆಲೆಯೇನು?

ಎಂದೂ ಧರ್ಮ ಮತ್ತು ಸಂಪ್ರದಾಯ ಮಾನವ ಮಾನವರ ನಡುವೆ ಸಂಬಂಧವನ್ನು ಬೆಸೆಯುವುದೇ ಹೊರತು, ಅಡ್ಡಗೋಡೆಗಳನ್ನು ಕಟ್ಟುವುದಿಲ್ಲ. ಎಲ್ಲಿ ಧರ್ಮಶೋಷಣೆಗೆ, ಹಿಂಸೆಗೆ, ಸಮಾಜ ಛಿದ್ರಕ್ಕೆ ಕೆಲಸ ಮಾಡುತ್ತದೊ ಅಂಥ ಸಂದರ್ಭದಲ್ಲಿ ನನ್ನ ಬರವಣಿಗೆ ಹರಿತವಾಗುತ್ತದೆ. ಧರ್ಮಾಧಿಕಾರಿಗಳು, ರಾಜಕಾರಣಿಗಳು ಮತ್ತು ಕ್ರಿಮಿನಲ್ಲುಗಳನ್ನು ಸಮಾನವಾಗಿ ಪರಿಗಣಿಸಿ ಜನರು ಮಾತನಾಡಿಕೊಳ್ಳುವಾಗ ನನಗೆ ನೋವಾಗುತ್ತದೆ. ಧರ್ಮ ಆಧ್ಯಾತ್ಮದ ತಳಹದಿಯ ಮೇಲೆ ನಿಲ್ಲದೆ ಹಣ, ಅಧಿಕಾರ ಮತ್ತು ಅನಾಚಾರದ ಮೇಲೆ ನಿಂತಾಗ ಧರ್ಮದಾರಿ ಬಿಟ್ಟಂತೆಯೇ ಸರಿ. ಜನರಲ್ಲಿ ವೈಚಾರಿಕತೆ ಬೆಳೆಯುತ್ತಿದೆ. ಸ್ವಾರ್ಥಸಾಧನೆಗೆ, ಲಾಭಕ್ಕೆ ಮಾತ್ರ ಧರ್ಮದ ಆಶ್ರಯಕ್ಕೆ ಬರುತ್ತಾರೆ. ಅಲ್ಲದೆ ಧರ್ಮಾಧಿಕಾರಿಗಳ ಸುತ್ತ ಕೋಟೆ ಕಟ್ಟಿರುವ ಭ್ರಷ್ಟರು ಎಂದೂ ಧರ್ಮ ತತ್ತ್ವ ಪ್ರಚಾರಕ್ಕೆ ಸಹಾಯಕರಾಗಲಾರರು. ಧರ್ಮಾಧಿಕಾರಿಗಳು ಇಂದಿನ ಮಾರ್ಕೆಟ್ಟಿನಲ್ಲಿ ರೂಪಾಯಿ ಇದ್ದಂತೆ ರೂಪಾಯಿಯ ಮುಖ ಬೆಲೆ ಮತ್ತು ಆಂತರಿಕ ಬೆಲೆ ಭಿನ್ನ ಭಿನ್ನವಾಗಿರುತ್ತವೆ. ಬಹಿರಂಗದಲ್ಲಿ ಆಂತರಿಕ ವ್ಯವಹಾರದ ಅನುಕೂಲಕ್ಕೆ ರೂಪಾಯಿಯ ಮುಖ ಬೆಲೆ ನೂರಕ್ಕೆನೂರು ಪೈಸೆ ಇರುತ್ತದೆ, ಆದರೆ ಅದೇ ಬೆಲೆ ರೂಪಾಯಿಯ ಅಂತರರಾಷ್ಟ್ರೀಯ ಮಾರ್ಕೆಟ್ಟಿನ ಬೆಲೆ ಕೇವಲ 5 ಪೈಸೆ ಇರುತ್ತದೆ, ಧರ್ಮಾಧಿಕಾರಿಗಳ ಬೆಲೆ ರೂಪಾಯಿಯ ಆಂತರಿಕ ಮತ್ತು ಮುಖ ಬೆಲೆಗಿಂತ ಭಿನ್ನವಲ್ಲ. ನನಗೂ ಧರ್ಮಾಧಿಕಾರಿಗಳ ಸಂಬಂಧ ಬಹಳ ಹಿಂದಿನಿಂದ ಇದೆ. ಧರ್ಮವನ್ನು ಮೂಲತತ್ತ್ವದಿಂದ ಸಾಮಾಜೀಕರಣಕ್ಕೆ ಒಗ್ಗಿಸಿಕೊಳ್ಳುತ್ತಿರುವುದೂ ಒಂದು ಫ್ಯಾಷನ್ ಆಗಿದೆ. ಕೆಲವರಿಗೆ ಸಮಾಜ ಸೇವೆ ಆಚಾರವಂತ ತಂದೆಗ ಅನಾಚಾರದ ಕೂಸಾಗಿ ಬಿಡುತ್ತದೆ. ಪಾಪ ಪ್ರಜ್ಞೆ ಕಾಡುವವರಿಗೆ ಧರ್ಮ ಮತ್ತು ಸಂಪ್ರದಾಯ ಯಮ ಸ್ವರೂಪಿ, ಪಾಪಭೀತಿ ರಹಿತರಿಗೆ ಧರ್ಮ ಸಹಜಕ್ರಿಯೆ. ಬಹುಪಾಲು ಧರ್ಮಾಧಿಕಾರಿಗಳಿಗೆ ತಮ್ಮ ತಮ್ಮ ದೀಕ್ಷಾ ಅನುಶ್ರೇಣಿ ಸಂಪತ್ತನ್ನು ತೊರೆದರೆ, ಅವರಿಗೆ ತಮ್ಮ ವಲಯ ಮೀರಿ ಅಸ್ತಿತ್ವವೇ ಇರುವುದಿಲ್ಲ. ಧರ್ಮ, ಕಾಲ ಮತ್ತು ದೇಶಕ್ಕೆ ತಕ್ಕಂತೆ ಬದಲಿಸಬೇಕು, ಆದರೆ ಧರ್ಮಾಧಿಕಾರಿಗಳು ಪ್ರಾಚೀನ ಧರ್ಮದ ಸ್ಥಗಿತ ಮೌಲ್ಯಗಳನ್ನೇ ಬೋಧಿಸುತ್ತ, ತಾವು ಮಾತ್ರ ಎಲ್ಲಾ ಪಾಶ್ಚಾತ್ಯ ಸೌಲಭ್ಯಗಳನ್ನೂ ಅನುಭವಿಸಲು ತವಕಿಸುವುದರಲ್ಲಿ ಯಾವ ಪುರುಷಾರ್ಥವಿದೆ?

11. ಒಂದು ಕಡೆ ವಚನ ಚಳುವಳಿ ಏಕ ದೇವತೋಪಾಸನೆಯನ್ನು ಎತ್ತಿ ಹಿಡಿದು ಕೆಳವರ್ಗದ ಬಹುದೇವತೋಪಾಸನೆಯನ್ನು ಹತ್ತಿಕ್ಕಿತು ಎನ್ನುತ್ತೀರಿ. ಮತ್ತೊಂದು ಕಡೆ ನಾಲಿಗೆ ಇಲ್ಲದ ಕೆಳ ವರ್ಗಕ್ಕೆ ನಾಲಿಗೆ ಕೊಟ್ಟಿತು ಎಂಬ ಅಭಿಪ್ರಾಯಕ್ಕೆ ಬರುವುದು ವೈರುಧ್ಯವಲ್ಲವೆ?

ವಚನಕಾರರ ಸಮಗ್ರ ಅಧ್ಯಯನದಿಂದ ಮಾತ್ರ ಈ ಪ್ರಶ್ನೆಗೆ ಉತ್ತರ ದೊರೆಯುತ್ತದೆ. ಈ ವೈರುಧ್ಯ ವಚನಕಾರರ ಚಿಂತನೆಯಲ್ಲಿಯೇ ಇದೆ. ವಚನಕಾರರು ಏಕ ಪಂಥೀಯರಲ್ಲ, ಬಹು ಪಂಥೀಯರು. ಕೆಲವರು ಸಂಸ್ಕೃತ ಮತ್ತು ಬ್ರಾಹ್ಮಣ ವಿರೋಧಿಗಳಾದರೆ, ಮತ್ತೆ ಕೆಲವರು ಸಂಸ್ಕೃತೀಕರಣ ಮತ್ತು ಬ್ರಾಹ್ಮಣೀಕರಣಕ್ಕೆ ಒಳಗಾಗಿದ್ದಾರೆ. ಏಕ ದೇವೋಪಾಸನೆಯ ತತ್ವವೇ ಸಮಾನತೆ ಮತ್ತು ಸಂಘಟನೆಯ ತತ್ವದ ಮೇಲೆ ನಿಂತಿದೆ. ಭಾರದತ ಧಾರ್ಮಿಕ ಇತಿಹಾಸ ಪರಿಶೀಲನೆಯಿಂದ ಏಕದೇವೋಪಾಸಕರ ತತ್ವ ಕ್ರಿಯಾ ರೂಪಕ್ಕೆ ಬಂದಿತೆ? ಅದ್ವೈತವೂ ಭಾವಾದ್ವೈತವಾಯಿತೇ ಹೊರತು ಕ್ರಿಯಾದ್ವೈತವಾಗಲಿಲ್ಲ. ಇಂಥ ವೈರುಧ್ಯ ಶೋಷಿತ ಶೋಷಕನಾಗುವುದಕ್ಕೆ ಸಹಕಾರಿ. ಕೆಳವರ್ಗ ಇಂಥ ತತ್ವ ಬೋಧನೆಗೆ ಮರುಳಾಗಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡು ಎಡ ಬಿಡಂಗಿಗಳಾದವು. ಯುದ್ಧಗಳಲ್ಲಿ ಪ್ರಾಣಕೊಡುವುದು, ಉತ್ಪಾದನೆಗೆ ಶ್ರಮಿಸುವುದು, ಧಾರ್ಮಿಕ ವಿಧಿಗಳಲ್ಲಿ ಬಲಿಯಾಗುವುದು ಕೆಳವರ್ಗದ ಕರ್ತವ್ಯವಾಯಿತು. ಕೆಳವರ್ಗದ ವಚನಕಾರರ ಅಧ್ಯಯನದಿಂದ ಇದು ಸ್ಪಷ್ಟವಾಗುತ್ತದೆ. ದೊರೆ, ದೊರೆಯ ದೊರೆ (ದೇವರು) ಮತ್ತು ಗುರು ಕಲ್ಪನೆ ಸರ್ವಾಧಿಕಾರಿ ಪರಿಕಲ್ಪನೆಗಿಂತ ಭಿನ್ನವಾಗಲಿಲ್ಲ. ಅವರನ್ನು ಯಾರೂ ಪ್ರಶ್ನಿಸುವಂತಿಲ್ಲ. ಈ ಮೂರು ಭೋಗ ವಿರೋಧಿಸುತ್ತ ಭೋಗದ ವೈಭವಕ್ಕೆ ಸಿಕ್ಕಿದವು. ಏಕ ದೇವತೋಪಾಸನೆ ಪಿತೃ ಸಂಸ್ಕೃತಿಯದಕ್ಕಿಂತ ಭಿನ್ನವಲ್ಲ. ಪಿತೃ ಸಂಸ್ಕೃತಿಯಲ್ಲಿ ಪುರುಷ ಪ್ರಧಾನ, ಹೆಣ್ಣು ಗೌಣ. ಶಕ್ತಿ ಶಿವನಲ್ಲಿ ಐಕ್ಯವಾಗಬೇಕೇ ಹೊರತು ಶಕ್ತಿಯಲ್ಲಿ ಶಿವ ಎಂದೂ ಐಕ್ಯವಾಗಲಾರ. ಆದರೆ ತಂತ್ರ ಸಂಸ್ಕೃತಿಯಲ್ಲಿ ಮಾತ್ರ ಶಕ್ತಿ ಶಿವನ ಎದೆಯ ಮೇಲೆ ನರ್ತಿಸುತ್ತಾಳೆ. ಅದು ಮಾತೃ ಸಂಸ್ಕೃತಿ ಶಕ್ತಿ - ಶಿವ ತತ್ವದಲ್ಲಿ ಶಕ್ತಿ ಅಧೋಮುಖಿಯಾದರೆ ಮಾಯೆ, ಊರ್ಧ್ವಮುಖಿಯಾದರೆ ಮಹಾಮಾಯೆಯಾಗಿ ಶಿವನಲ್ಲಿ ಐಕ್ಯಸಾಧಿಸಬೇಕು. ಅಂದರೆ ಶಿವಸಿದ್ಧ, ಶಕ್ತಿಸಾಧಕಳು, ಶಿವಸ್ಥಗಿತ, ಶಕ್ತಿಚಲನ ಶೀಲಳು. ಈಗ ವೈರುಧ್ಯ ಎಲ್ಲಿದೆ ಎಂಬುದನ್ನು ಗುರುತಿಸಬಹುದು.

12. ಗುಪ್ತ ಸಮಾಜ ಮತ್ತು ತಂತ್ರ ಸಂಸ್ಕೃತಿಯನ್ನು ಕುರಿತು ಅಧ್ಯಯನ ನಡೆಸುತ್ತಿದ್ದೀರೆಂದು ತಿಳಿದಿದೆ. ಅದಕ್ಕೂ ಸಾಹಿತ್ಯಕ್ಕೂ ಏನಾದರೂ ಸಂಬಂಧವಿದೆಯೆ?

ಬಾಲ್ಯದಿಂದಲೂ ರಹಸ್ಯಲೋಕ ನನ್ನನ್ನು ವಿಸ್ಮಯಗೊಳಿಸುತ್ತಿದೆ. ಅಂದಿನಿಂದ ನಾನು ಕುತೂಹಲದಿಂದ ಕೆಲವು ಪ್ರಯೋಗಗಳನ್ನು ನಡೆಸುತ್ತ ಬಂದಿದ್ದೇನೆ. ಈಗ ಅದಕ್ಕೆ ಒಂದು ಅಧ್ಯಯನದ ಶಿಸ್ತು ದೊರೆಯುತ್ತಿದೆ ಅಷ್ಟೆ. ಶಿಷ್ಟ ಸಮಾಜ ತಂತ್ರ ಸಂಸ್ಕೃತಿಯನ್ನು ಲೈಂಗಿಕತೆಗೆ ಗಂಟು ಹಾಕಿ ಅದನ್ನು ಅಶ್ಲೀಲವೆಂದು ಅಪಪ್ರಚಾರ ಮಾಡುತ್ತ ಬಂದಿದೆ. ಅದರಿಂದ ತಾಂತ್ರಿಕರ ಜೀವನಕ್ಕೆ ಅಪಾಯ ಒದಗಿತು, ಅವರು ಮತ್ತಷ್ಟು ಗುಪ್ತರಾದರು. ತಂತ್ರ ಸಂಸ್ಕೃತಿಯೇ ಭಾರತದ ಧಾರ್ಮಿಕ ಇತಿಹಾಸ. ಅದೇ ಭಾರತದ ಮುಖ್ಯವಾಹಿನಿ, ಶ್ರೀ ಸಾಮಾನ್ಯರ ಸಂಸ್ಕೃತಿ ಆಚಾರ್ಯತ್ರಯರ ಮೇಲೆ ಪ್ರಭಾವ ಬೀರಿತು. ಅದೂ ಅಲ್ಲದೆ ತಂತ್ರ ಪಂಥವೂ ಸ್ವತಂತ್ರವಾಗಿ ಇತಿಹಾಸ ಘಟ್ಟಗಳಲ್ಲಿ ಸ್ಥಿತ್ಯಂತರ ಹೊಂದಿ ವಿಕಾಸ ಹೊಂದುತ್ತ ಬಂದಿತು. ತಾಂತ್ರಿಕ ಪ್ರಸಿದ್ಧ ಪೀಠಗಳಲ್ಲಿ ವೇದಾಧ್ಯಯನಕ್ಕೂ ಅವಕಾಶ ದೊರೆಯಿತು. ತಾಂತ್ರಿಕ ಪಂಥ ಶೈವ, ವೈಷ್ಣವ, ಬೌದ್ಧ ಮತ್ತು ಜೈನ ಪಂಥಗಳಲ್ಲಿಯೂ ನುಸುಳಿ ಪ್ರಭಾವ ಬೀರಿದೆ, ಅದೂ ಅಲ್ಲದೆ ಭಕ್ತಿ ಪಂಥವಾಗಿ ಕ್ರಮೇಣ ತಾಂತ್ರಿಕ ಪಂಥ ವಿಕಾಸ ಹೊಂದಿದೆ.

ಭಕ್ತಿ ಪಂಥದ ಮೇಲೆ ತಂತ್ರ ಪ್ರಭಾವ ನಿಚ್ಚಳವಾಗಿದೆ. ಕನ್ನಡ ಸಾಹಿತ್ಯದ ಮೇಲೆ ತಾಂತ್ರಿಕ ಪಂಥದ ಪ್ರಭಾವ ಎಂಬ ವಿಚಾರಕುರಿತು ತೀವ್ರವಾಗಿ ಚಿಂತಿಸುತ್ತಿದ್ದೇನೆ. ತಂತ್ರದಲ್ಲಿ ಎಲ್ಲಾ ಪಂಥೀಯರೂ ತಮ್ಮ ತಮ್ಮ ಸಿದ್ಧಾಂತದ ವ್ಯಾಖ್ಯಾನ ಮಾಡಿದ್ದಾರೆ. ಅಂದರೆ ಆಚಾರ್ಯತ್ರಯರ ಸಿದ್ಧಾಂತಗಳಲ್ಲಿ ತಂತ್ರ ಪ್ರವೇಶಿಸಿದ್ದೇ ಅಲ್ಲದೆ, ಕ್ರಮೇಣ ತಂತ್ರಗಳೂ ವಿವಿಧ ಪಂಥೀಯರ ಸಿದ್ಧಾಂತಗಳಿಂದ ವ್ಯಾಖ್ಯಾನ ಗೊಂಡವು ಎಂದ ಮೇಲೆ ಭಾರತ ಧಾರ್ಮಿಕ ಮುಖ್ಯ ವಾಹಿನಿಯಾವುದು? ತಂತ್ರ ಸಂಸ್ಕೃತಿಯೊ? ವೈದಿಕ ಸಂಸ್ಕೃತಿಯೊ? ಅಥರ್ವಣಕ್ಕಿಂತ ಭಿನ್ನವಾದ ತಾಂತ್ರಿಕ ಸಂಸ್ಕೃತಿಯಲ್ಲಿ ಯೋಗ ಸಾಧನೇ ಅನಿವಾರ್ಯ. ವೇದಗಳು ಕರ್ಮಕಾಂಡ, ಉನಿಷತ್ತುಗಳು ಜ್ಞಾನ ಕಾಂಡಗಳಾದರು, ತಂತ್ರಗಳು ಸಾಧನ ಕಾಂಡಗಳು ಅನುಭಾವಕ್ಕೆ ಸಾಧನೆಯೇ ಮೂಲ. ಸಾಹಿತ್ಯಕ್ಕೂ ಮತ್ತು ತಂತ್ರಕ್ಕೂ ನಿಕಟ ಸಂಬಂಧವಿದೆ. ಭಾರತದ ಮೂಲ ಸಂಸ್ಕೃತಿ, ಅದೂ ಜನ ಸಾಮಾನ್ಯರ ಸಂಸ್ಕೃತಿ ತಂತ್ರ. ಮುಖ್ಯವಾದ ಮೂಲ ಸಂಸ್ಕೃತಿಯನ್ನೇ ಅಸಡ್ಡೆ ಮಾಡಿರುವುದು ವಿಷಾಧನೀಯವಾದುದು. ಯಜ್ಞ ಸ್ಥಾನದಲ್ಲಿ ಶ್ರೀ ಚಕ್ರಪೂಜೆ ವೈಭವೀಕರಿಸಲ್ಪಡುತ್ತಿರುವುದಂತೂ ತಂತ್ರ ಸಂಸ್ಕೃತಿಗೆ ಸಂದ ಗೌರವವೇ ಆಗಿದೆ. ಪೂರ್ವಗ್ರಹದ ವಿದ್ವಾಂಸರಿಂದ ನಮ್ಮ ಮೂಲ ಸಂಸ್ಕೃತಿಯ ಅಧ್ಯಯನಕ್ಕೆ ತೀವ್ರಧಕ್ಕೆ ಒದಗಿದೆ. ತಂತ್ರ ಸಂಸ್ಕೃತಿಯ ಅಧ್ಯಯನ ಭಾರತೀಯರ ಬದುಕಿಗೆ ಹೊಸ ಬೆಳಕನ್ನು ಚೆಲ್ಲುವುದರಲ್ಲಿ ಸಂಶಯವಿಲ್ಲ.

13. ಡಾ॥ ಪಿ.ವಿ. ನಾರಾಯಣರ ಧರ್ಮಕಾರಣ ಕಾದಂಬರಿಯಲ್ಲಿ ಪ್ರಸ್ತಾಪವಾಗಿರುವ ಚನ್ನಬಸವಣ್ಣನ ಬಗ್ಗೆ ನೀವು ನಿಮ್ಮ ಮರುಚಿಂತನೆಯಲ್ಲಿ ವಿಸ್ತಾರವಾಗಿ ಬಹಳ ಹಿಂದೆಯೇ ಚರ್ಚಿಸಿದ್ದೀರಿ. ಅದು ಅಂದು ಸಮಸ್ಯೆಯಾಗದೆ, ಇಂದು ಕಾದಂಬರಿ ಪ್ರಕಾರವಾಗಿ ಹೊರ ಬದ್ದ ಮೇಲೆ ವಿವಾದ ತೀವ್ರಗೊಳ್ಳಲು ಕಾರಣವೇನು? ಅದಕ್ಕೆ ನಿಮ್ಮ ಪ್ರತಿಕ್ರಿಯೆಯೇನು?

ಈ ಪ್ರಶ್ನೆಗೆ ನನ್ನ ಮರುಚಿಂತನೆಯ ಕೃತಿಯಲ್ಲಿಯೇ ಸಾಕಷ್ಟು ಉತ್ತರವಿದೆ. 1985 ರಲ್ಲಿಯೇ ಮರುಚಿಂತನೆ ಕುರಿತು ಸಾಕಷ್ಟು ಗದ್ದಲ ಎಬ್ಬಿಸಿದರು. ವೀರಶೈವರ ಸಂಸ್ಥೆಯಲ್ಲಿ ಕೆಲಸ ಮಾಡಿಕೊಂಡಿದ್ದು, ವೀರಶೈವರ ಅನ್ನತಿಂದು (ಅನುದಾನ ಪಡೆಯುವ ಸಂಸ್ಥೆಯಾಗಿ, ಪ್ರಾಮಾಣಿಕವಾಗಿ ಕತ್ತೆ ದುಡಿತ ದುಡಿದರೂ) ವೀರಶೈವರ ವಿರುದ್ಧ ಬರೆದುದಕ್ಕೆ ಸಾರ್ವಜನಿಕ ಸಭೆಯಲ್ಲಿ ಕ್ಷಮೆಯಾಚಿಸಬೇಕು, ಇಲ್ಲವೆ ನ್ಯಾಯಾಲಯದಲ್ಲಿ ಮೊಕದ್ದಮೆ ಎದುರಿಸಬೇಕು ಎಂದು ನನ್ನ ಮೇಲೆ ಒತ್ತಡತಂದು, ಕರಪತ್ರ ಹೊರಡಿಸಿ, ಪ್ರಸಿದ್ಧ ಪತ್ರಿಕೆಗೆ ಕೆಲವರು ಹೇಳಿಕೆ ಕೊಟ್ಟರು. ನನ್ನ ಸುತ್ತ ಮುತ್ತಿನ ಆತ್ಮೀಯರಂತೆ ವರ್ತಿಸುತ್ತಿದ್ದವರೇ ನನ್ನ ವಿರುದ್ಧ ಬೇರೆ ಬೇರೆಯವರ ಹೆಸರಿನಲ್ಲಿ ಬರೆಸಿ 'ಅಂಚೆಕಾರ್ಡು' ಚಳುವಳಿ ನಡೆಸಿದರು. ನಾನು ವೀರಶೈವ ವಿರೋಧಿ ಎಂದು ಅಪಪ್ರಚಾರಕ್ಕೆ ತೊಡಗಿ ನನಗೂ ಮತ್ತು ನನ್ನ ಕುಟುಂಬಕ್ಕೂ ಬೆದರಿಕೆ ಹಾಕಿ ಭಯದ ವಾತಾವರಣ ಮೂಡಿಸಿದರು. ನನ್ನ ಅಧ್ಯಾಪಕ ವೃತ್ತಿ ಜೀವನಕ್ಕೆ ಧಕ್ಕೆ ಒದಗಿಸಲು ವಿದ್ಯಾರ್ಥಿಗಳನ್ನು ಎತ್ತಿ ಕಟ್ಟಿ ಬೈಸಿದರು. ಅನುದಾನ ಸಂಸ್ಥೆಯಾಗಿದ್ದರೂ ನ್ಯಾಯ ಬದ್ಧವಾಗಿ ದೊರಕ ಬಹುದಾದ ಸವಲತುಗಳಿಗೆ ಅಡ್ಡಿ ಮಾಡಿದರು. ಹೀಗೆ ಭೌತಿಕ ಮತ್ತು ಮಾನಸಿಕ

ಹಿಂಸೆಗೆ ಗುರಿಯಾಗ ಬೇಕಾಯಿತು. ಪೋಲೀಸರು ರಕ್ಷಣೆ ಕೊಡ ಬಯಸಿದರೂ ನಿರಕಾರಿಸಿದೆ. ವಚನಕಾರರ ಪ್ರೇರಣೆ ಪಡೆದು ನುಡಿದಂತೆ ನಡೆವ ಸಿದ್ಧಾಂತಕ್ಕೆ ಕಟ್ಟು ಬಿದ್ದು ಒಂಟಿಯಾಗಿಯೇ ಅಪಮಾನ ಮತ್ತು ಸವಾಲುಗಳನ್ನು ಎದುರಿಸಿದೆ. ಬರವಣಿಗೆ ನನಗೆ ಜೀವನೋಪಾಯದ ವೃತ್ತಿಯಲ್ಲ. ಅದು ನನಗೆ ಜೀವನ ರೀತಿಯ ಸಾಧನೆಯ ಮಾರ್ಗ. ನನ್ನ ಅಭಿವ್ಯಕ್ತಿ ಸ್ವಾತಂತ್ರ್ಯ ರಕ್ಷಣೆಗೆ ವೈಯಕ್ತಿಕವಾಗಿ ನುಂಗಿದ ನೋವು, ತೆತ್ತ ಬೆಲೆ ಅಪಾರ. ಅದನ್ನು ನಾನು ಸಾರ್ವತ್ರಿಕ ಗೊಳಿಸಿ ಬಂಡವಾಳವನ್ನಾಗಿ ಬಳಸಿಕೊಳ್ಳಲಿಲ್ಲ. ನಾನು ಎಂದೂ ಸತ್ಯಾನ್ವೇಷಣೆಯ ಮಾರ್ಗದಿಂದ ವಿಚಲಿತನಾಗಲಿಲ್ಲ. ನಾನು ಏನನ್ನೇ ಬರೆದರೂ ಅರಗಿಸಿಕೊಳ್ಳುವಷ್ಟು ಸಿದ್ಧತೆ ಮಾಡಿಯೇ ಬರೆಯುತ್ತೇನೆ. ಸದ್ದು ಗದ್ದಲ ವಿಲ್ಲದೆ ನನ್ನದೇ ರೀತಿಯಲ್ಲಿ ಧರ್ಮಕಾರಣ ಕಾದಂಬರಿಗೆ ಕ್ರಿಯೋನ್ಮುಖವಾಗಿ, ಯಾವ ಪ್ರಚಾರವನ್ನು ಬಯಸದೆ ಪ್ರತಿಕ್ರಿಯಿಸುವುದಕ್ಕೆ ಶ್ರೀಗೊ.ರು. ಚನ್ನಸಪ್ಪ (ಅಧ್ಯಕ್ಷರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಜಯನಗರ, ಬೆಂಗಳೂರು -82) ಅವರಿಗೆ ದಿನಾಂಕ 25-3-97 ರಂದು ಬರೆದ ಪತ್ರವೇ ಸಾಕ್ಷಿ.

" ನಿಮ್ಮ ನೆನಪಿನ ಪತ್ರ (ಕ್ರಮಾಂಕ: 545-97-98) ತಲುಪಿದೆ. ಇತ್ತೀಚೆಗೆ ಲೇಖಕನ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ವೀರಶೈವ ಸಮಾಜದ ಕೆಲವು ಸ್ವಯಂ ಘೋಷಿತ ಮುಖಂಡರಿಂದ ತ್ರೀವ್ರ ಪ್ರತಿಭಟನೆ ವ್ಯಕ್ತ ವಾಗುತ್ತಿರುವುದನ್ನು ಗಮನಿಸುತ್ತಿರುವ ಹಿನ್ನಲೆಯಲ್ಲಿ ನೀವು ನನಗೆ ಒಪ್ಪಿಸಿರುವ 'ದೇವರ ದಾಸಿಮಯ್ಯ' ಕೃತಿಯನ್ನು ಅಖಿಲ ಭಾರತ ಶರಣ ಪರಿಷತ್ತಿನ ಮೂಲಕ ಪ್ರಕಟಿಸಲು ನನಗೆ ಸಮ್ಮಿತಿ ಇಲ್ಲ.

ವಚನಕಾರರ ಮುಕ್ತ ಚಿಂತನೆಗೆ ಭಂಗ ತರುವ ಭಾವೋದ್ರೇಕದ ಪರಿಸರ ಸೃಷ್ಟಿಸಿ ತಮ್ಮ ವರ್ಗಹಿತದ ಏಕ ಮುಖ ಚಿಂತನೆಯ ಒತ್ತಡದ ಮಾದರಿಯ ಬರವಣಿಗೆಗೆ ಬರಹಗಾರರನ್ನು ಒಗ್ಗಿಸಿಕೊಳ್ಳಲು ಬೆದರಿಕೆ ಒಡ್ಡಿ, ಉಂಟು ಮಾಡುತ್ತಿರುವ ಉಸಿರು ಕಟ್ಟಿಸುವ ವಾತಾವರಣದಲ್ಲಿ ಯಾವ ಬರಹಗಾರನಿಗೂ ಸಾಮಾಜಿಕ ನ್ಯಾಯ ದೊರಕಲಾರದು ಮತ್ತು ಸಮಗ್ರ ದೃಷ್ಟಿಯ ಅಧ್ಯಯನದಿಂದ ಸತ್ಯಾನ್ವೇಷಣೆಯಿಂದ ದೂರ ಸರಿದು ವೀರಶೈವೇತರನಾದ ನಾನು ಬರೆದು ನಿಮ್ಮ ಶರಣ ಪರಿಷತ್ತಿನ ಪ್ರಕಟಣೆಗೆ ಕೊಟ್ಟು ನನ್ನ ಮುಕ್ತ ಚಿಂತನೆಗೆ ಧಕ್ಕೆ ತಂದು ಕೊಳ್ಳಲಾರೆ. ನನ್ನ ಕೃತಿಯ ಪ್ರಕಟಣೆಗೆ ಅನ್ಯವ್ಯವಸ್ಥೆ ಮಾಡಿಕೊಳ್ಳುತ್ತೇನೆ".

ಇದು ನಾನು ಅಂದು ಧರ್ಮಕಾರಣ ಕಾದಂಬರಿಯ ಪ್ರತಿಭಟನೆಗೆ ತೋರಿದ ಪ್ರತಿಕ್ರಿಯೆ. ಇಂಥ ಪ್ರಸಂಗಗಳಿಂದ ವೀರ ಶೈವ ಸಾಹಿತ್ಯ ಅಧ್ಯಯನ ಇನ್ನೂ ಅದು ಮುಟ್ಟ ಬಹುದಾದ 'ಸಾಹಿತ್ಯ ಪಕ್ವತೆ' (Literary Maturity) ಮುಟ್ಟಿಲ್ಲ ಎಂದೇ ಅನ್ನಿಸುತ್ತದೆ. ಇಂದಿನವರಿಗಿಂತ ಹನ್ನೆರಡನೆಯ ಶತಮಾನದ ವಚನಕಾರರು ಎಂಥ ಮುಕ್ತಚಿಂತಕರು ಎನ್ನಿಸುತ್ತದೆ. ಅವರು ಪಕ್ವತೆಯನ್ನು ಹನ್ನೆರಡನೆಯ ಶತಮಾನದಲ್ಲಿಯೇ ಮುಟ್ಟಿದ್ದರು.

14. ನೀವು ಬರವಣಿಗೆಗಿಂತ ಅಧ್ಯಾಪಕ ವೃತ್ತಿಯನ್ನು ಪ್ರೀತಿಸಿದವರು. ಇಂದಿನ ಶಿಕ್ಷಣದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಹಿಂದೆ ಒಂದು ವರ್ಗ ತಮ್ಮ ಹಿತಕ್ಕೆ ಶಿಕ್ಷಣ ಪದ್ಧತಿ ರೂಪಿಸಿ, ಮಿಕ್ಕವರ್ಗಗಳ ಮಿದುಳುಕಿತ್ತು ಅನಕ್ಷರಸ್ಥರ ಸಂಖ್ಯೆಯನ್ನು ಅಧಿಕಗೊಳಿಸಿತು. ಇಂದು ಶಿಕ್ಷಣ ಎಲ್ಲಾ ವರ್ಗಗಳಿಗೂ ದೊರಕುತ್ತಿದೆ. ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿ ಕಲಿಯುವವರಿಗೆ ಅನುಕೂಲಗಳು ಹೆಚ್ಚಿವೆ. ಆದರೆ ಶಿಕ್ಷಣ ಕ್ಷೇತ್ರ ವ್ಯಾಪಾರೀಕರಣ ಮತ್ತು ಜಾತೀಕರಣದಿಂದ ಅಧೋಗತಿಗೆ ಇಳಿದಿದೆ. ಜೊತೆಗೆ ಭ್ರಷ್ಟಾಚಾರ, ಜ್ಯಾತ್ಯಾತೀತವಾಗಿ ಶಿಕ್ಷಣ ಕ್ಷೇತ್ರದ ಎಲ್ಲಾ ಹಂತಗಳಲ್ಲಿಯೂ ಹಬ್ಬಿ, ವಿದ್ಯೆ ವ್ಯಾಪಾರದ ಸರಕಾಗಿದೆ (ವಸ್ತು). ಶಿಕ್ಷಣದ ಸ್ಥಿತಿ ಕೊನೆಯುಸಿರೆಳೆಯುತ್ತಿರುವ, ವಾಸಿಯಾಗದ, ಭರವಸೆ ಬಿಟ್ಟ ರೋಗಿಯಂತಾಗಿದೆ. ಅದೂ ಮುಂದಾಲೋಚನೆಯಿಲ್ಲದೆ ಕ್ವಾಕರಿಗಳು ನಡೆಸುತ್ತಿರುವ ಹೊಸ ಹೊಸ ಪ್ರಯೋಗಗಳು ಶಿಕ್ಷಣವನ್ನು ಮತ್ತಷ್ಟು ಹದಗೆಡಿಸುತ್ತಿದೆ. ಕಡ್ಡಾಯದ ಬಿಟ್ಟಿ ಶಿಕ್ಷಣದ ಶಾಲೆಗಳು ಕುರಿರೊಪ್ಪಗಳಾಗಿವೆ. ದುಬಾರಿಯಾದ ಖಾಸಗಿ ಶಿಕ್ಷಣದ ಬಾಗಿಲು ಬಡವರಿಗೆ ಮುಚ್ಚಿವೆ. ಉನ್ನತ ಶಿಕ್ಷಣದ ಸ್ಥಿತಿಗತಿಯನ್ನಂತೂ ಹೇಳುವಂತಿಲ್ಲ-ಅವು ಎಲ್ಲಾ ಅವ್ಯವಹಾರಗಳ ಆಗರವಾಗಿವೆ. ಅಲ್ಲಿ ಅರಣ್ಯ ನ್ಯಾಯ ಆಳುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ರಾಷ್ಟ್ರೀಕರಣ ಮತ್ತು ಖಾಸಗೀಕರಣ -ಎರಡೂ ವಿಫಲವಾಗಿ ಇಂದು ಅವು ಸಮಾಜ ದ್ರೋಹಿಗಳ ಉತ್ಪಾದನೆಯ ಕಾರ್ಖಾನೆಗಳಾಗಿವೆ. ಹತ್ತು ವರ್ಷ ಶಾಲಾ ಕಾಲೇಜುಗಳನ್ನು ಮುಚ್ಚಿ ದೇಶಕ್ಕೆ ಅಗತ್ಯವಾದ ವಸ್ತುಗಳ ಉತ್ಪಾದನೆಗೆ ಯುವ ಜನಾಂಗವನ್ನು ಬಳಸಿಕೊಂಡರೆ ದೇಶದ ಸಂಪತ್ತು ಅಭಿವೃದ್ಧಿಯಾದೀತು. ♦

2. ಕೆ.ಜಿ.ಎನ್. ಅವರೊಂದಿಗೆ ಸಂದರ್ಶನ

ಸಂದರ್ಶನ-ಎರಡು

(ಗುಬ್ಬಿ ತಾಲ್ಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದಾಗ ಪತ್ರಿಕೆಗಳಿಗಾಗಿ ಶ್ರೀ ಎ.ಕೆ. ಹಂಪಣ್ಣ ಮತ್ತು ಶ್ರೀ ಎಸ್.ಜಿ. ಸಿದ್ಧರಾಮಯ್ಯನವರು ಸಂದರ್ಶಿಸಿದ್ದು)

ಸೃಜನ ಶೀಲ ಸಾಹಿತ್ಯ ರಚನೆಯನ್ನು ನಿಮಗೆ ನಲವತ್ತು ತುಂಬಿದ ಅನಂತರ ಬದುಕಿನ ಉಸಿರೆಂಬಂತೆ ತೆಗೆದುಕೊಂಡಿದ್ದೀರಿ ಯಾಕೆ?

ಆಗ ಬರವಣಿಗೆ 'ಸಂಸ್ಕೃತ ಓರಿಯೆಂಟೆಡ್' ಮಾದರಿಯಾಗಿತ್ತು. ಅದರಲ್ಲಿ ಬರಹಕ್ಕಿಂತ, ಅಧ್ಯಯನಕ್ಕೇ ಹೆಚ್ಚು ಒತ್ತು. ನನಗೂ ಬರವಣಿಗೆಗಿಂತ ಓದೇ ಹೆಚ್ಚು ಪ್ರಿಯವಾಗಿತ್ತು. ಬಹುಸಂಸ್ಕೃತಿಯ (ಕೆಳವರ್ಗದ) ನಿರಾಕರಣೆ ಮತ್ತು ಏಕ-ಸಂಸ್ಕೃತಿಯ (ಪ್ರತಿಷ್ಠಿತವರ್ಗ) ಸ್ವೀಕರಣೆ, ಕಲಿಕೆ, ಬರಹ ಮತ್ತು ಬದುಕಿನ ಅಂಗವಾಗಿತ್ತು. ನನಗೆ ನನ್ನ ಸ್ವಂತಿಕೆ ಬಲಿ ಕೊಡದ ಹಠ ಮೊದಲಿನಿಂದಲೂ ಇತ್ತು. ಆದರೆ ಸೃಜನಶೀಲ ಎಂದು ಕರೆಯುವ ಸಾಹಿತ್ಯವಾದರೋ ಸಂಸ್ಕಾರಕ್ಕೆ, ಜಾತಿಗೆ, ಸಿದ್ಧಾಂತಕ್ಕೆ ಮತ್ತು ಪಕ್ಷಕ್ಕೆ ಗಂಟು ಬಿದ್ದಿತ್ತು. ಆದರೆ ನಾನು ಸೃಜನಶೀಲತೆಯನ್ನು ಬದುಕಿಗೆ ಬದ್ಧಗೊಳಿಸಿಕೊಂಡೆ. ಹೀಗೆ ಸೃಜನಶೀಲತೆ ನನ್ನ ಬದುಕಿಗೆ ಬಸಿರಾಯಿತು ಮತ್ತು ಉಸಿರಾಯಿತು. ಸೃಜನಶೀಲತೆ ಎಂದರೆ ನನಗೆ ಸ್ವಂತಿಕೆ ಎಂದೇ ಅರ್ಥ.

ವಿಮರ್ಶೆ ಸೃಜನಶೀಲವಾಗಿದ್ದರೂ ಕೂಡ ಹೆಚ್ಚು ಪ್ರತಿಕ್ರಿಯಾತ್ಮಕವಾದದ್ದು ಎಂಬುದು ನಮ್ಮ ಅಭಿಪ್ರಾಯ? ಅದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

ವಿಮರ್ಶೆಯಾಗಲಿ, ಸೃಜನಶೀಲವಾಗಲಿ ಶೂನ್ಯದಲ್ಲಿ ನಡೆಯುವ ಕ್ರಿಯೆಗಳಲ್ಲ. ಅವೂ ಕಾಲ ಮತ್ತು ದೇಶ ಬದ್ಧವಾದವು. ಸೂತ್ರವಿಲ್ಲದೆ ಗಾಳಿಪಟ ಆಡಿಸಲು ಸಾಧ್ಯವಿಲ್ಲ. ಸೃಜನಶೀಲತೆ ವಿಮರ್ಶೆಯ ಒಂದು ಅಂಶ. ಕ್ರಿಯೆ ಮತ್ತು ಪ್ರತಿಕ್ರಿಯೆಗಳು ವಿಮರ್ಶೆಗೆ ಚಾಲನೆ ಕೊಡುತ್ತವೆ. ನಮ್ಮಲ್ಲಿ ವಿಮರ್ಶಕರೇ ಬರಹಗಾರರೂ ಕೂಡ. ಸೃಜನಶೀಲ ಬರಹಗಾರರೇ ಸೃಜನಶೀಲ ವಿಮರ್ಶಕರೆಂದು ಘೋಷಿಸಿಕೊಂಡು ಪರಸ್ಪರ ಪ್ರಚಾರ ಪಡೆದರು. ನಮ್ಮಲ್ಲಿ ಇಂದಿಗೂ ಶುದ್ಧ ಸಾಹಿತ್ಯ ಮತ್ತು ಶುದ್ಧ ವಿಮರ್ಶೆ ಇಲ್ಲ. ಇರುವುದು ಜಾತಿ ಸಾಹಿತ್ಯ ಮತ್ತು ಜಾತಿ ವಿಮರ್ಶೆ. ಕೃತಿ ಪರವಾದದ್ದು ಸೃಜನಶೀಲ ವಿಮರ್ಶೆ, ಕೃತಿ ವಿರುದ್ಧವಾದದ್ದು ಪ್ರತಿಕ್ರಿಯಾತ್ಮಕವಾದದ್ದು.

ನಿಮ್ಮ ವಿಮರ್ಶೆಯ ಹಿಂದೆ ಯಾವ ವಿಮರ್ಶಕರ ಪ್ರಭಾವವಿದೆ?

ವಿಮರ್ಶೆ ಎಂದರೇನು? ನಿಷ್ಪಕ್ಷವಾಗಿ ಮತ್ತು ನಿಖರವಾಗಿ ಬೆಲೆಗಟ್ಟುವುದು. ಸದಾ ಬದುಕನ್ನು ಬೆಲೆಗಟ್ಟುತ್ತ ಬಂದ ನನಗೆ ಕೃತಿಗಳನ್ನು ಬೆಲೆಗಟ್ಟುವುದು ಕಷ್ಟವಾಗಲಿಲ್ಲ. ನನ್ನ ವಿಮರ್ಶನಾ ಶಕ್ತಿಗೆ ಕನ್ನಡ ಕೃತಿಗಳ ಅಧ್ಯಯನವೇ ಮೂಲ. ನಮ್ಮವರ ಡೋಲ್ ಬಜಾವ್

ವಿಮರ್ಶೆ ಹಿಡಿಸಲಿಲ್ಲ. ಅದು ಸದಾ ಅಧಿಕಾರ, ಹಣ, ಜಾತಿ, ಗದ್ದುಗೆ ಮತ್ತು ಮಠಗಳ ಸುತ್ತ ಪ್ರದಕ್ಷಿಣೆ ಹಾಕುತ್ತಿರುತ್ತದೆ. ಪಾಶ್ಚಾತ್ಯ ವಿಮರ್ಶಕರ ವಿವಿಧ ಸಿದ್ಧಾಂತಗಳು, ಅವರ ಆಳವಾದ ಅಧ್ಯಯನ, ನಿಷ್ಪಕ್ಷಪಾತ ದಿಟ್ಟ ಧೋರಣೆ, ಮಿಗಿಲಾಗಿ ಅವರ ಪ್ರಾಮಾಣಿಕತೆಯ ವಿಮರ್ಶೆಯ ದೃಷ್ಟಿ ನನಗೆ ಹಿಡಿಸಿದೆ. ಅದಕ್ಕಿಂತ ಮಿಗಿಲಾಗಿ ವಚನಕಾರರು ಪ್ರಶ್ನಿಸಿ, ಉತ್ತರ ಕಂಡುಕೊಳ್ಳುವ ಧಾಟಿ ನನ್ನ ಮೇಲೆ ಪ್ರಭಾವ ಬೀರಿದೆ.

ನಿಮ್ಮ ಬದುಕು ಮತ್ತು ವಿದ್ಯಾಭ್ಯಾಸ ಹೆಚ್ಚು ಹೆಚ್ಚು ಮಠ ಮತ್ತು ಮತೀಯ ಮನಸ್ಸುಗಳ ವಲಯದಲ್ಲಿ ಹೆಚ್ಚಾಗಿ ಇದ್ದುದ್ದರಿಂದ ಬರಹಕ್ಕೆ ಏನಾದರೂ ಶಕ್ತಿಗಳಿಸಿದೆಯಾ?

ಪ್ರೌಢಶಾಲೆಯ ಹಂತದಲ್ಲಿಯೇ, ನಮ್ಮೂರಿನ ಗ್ರಾಮದೇವತೆಯ ಹಬ್ಬದಲ್ಲಿ, ಕೋಣವನ್ನು ಕಡಿಯುವವನ ಕೈಯಿಂದ ಮಚ್ಚು ಕಿತ್ತುಕೊಂಡು ಕೋಣ(ಬಲಿ)ನ ಜೀವ ಉಳಿಸಿದ ಘಟನೆ, ದೆವ್ವ, ದೇವರು ಮತ್ತು ಮೂಢನಂಬಿಕೆ ಕುರಿತ ಧಾರ್ಮಿಕ ಕ್ಷೇತ್ರದಲ್ಲಿ ಪ್ರಯೋಗಗಳಿಗೆ ಪ್ರೇರಣೆಯಾಯಿತು. ಅನಂತರವೇ ನಾನು ಮಠ ಮತ್ತು ಮತೀಯ ವಲಯಗಳ ಸಂಪರ್ಕಕ್ಕೆ ಬಂದದ್ದು. ಅವುಗಳ ಅಂತರಂಗ ಮತ್ತು ಬಹಿರಂಗವನ್ನು ಹತ್ತಿರ ಕಂಡ ನನ್ನ ಅನುಭವ ಮತ್ತಷ್ಟು ತೀವ್ರವಾಯಿತು. ಅನುಭವವೇ ಬರಹಕ್ಕೆ ಮೂಲದ್ರವ್ಯ ಮತ್ತು ಶಕ್ತಿ ಅಲ್ಲವೆ?

ನಿಮ್ಮ ಸಾಹಿತ್ಯ ಸೃಷ್ಟಿ ಸಂದರ್ಭದಲ್ಲಿ ಅನುಭವ ಮತ್ತು ಅಭಿವ್ಯಕ್ತಿಗೆ ಹೆಚ್ಚು ಆಪ್ತವಾದ ಸ್ನೇಹವಲಯ ಯಾವುದು?

ವಿವಿಧ ವೃತ್ತಿಯ, ಜಾತಿಯ, ವರ್ಗದ, ಮನೋಭಾವದ, ನಗರ, ಗ್ರಾಮೀಣ ಮತ್ತು ಕೊಳಚೆ ಪ್ರದೇಶಗಳ ಬದುಕು ನನ್ನನ್ನು ಸದಾ ಸೂಜಿಗಲ್ಲಿನಂತೆ ಸೆಳೆದು ಕುತೂಹಲವನ್ನು ಕೆರಳಿಸುತ್ತವೆ. ನದಿ, ಕಾಡು, ಬೆಟ್ಟಗುಡ್ಡಗಳೂ ನನ್ನನ್ನು ಕಾಡಿವೆ. ಅವುಗಳಿಂದ ಕುತೂಹಲ, ಕುತೂಹಲಗಳಿಂದ ಸವಾಲುಗಳು, ಸವಾಲುಗಳಿಗೆ ತಕ್ಕ ಎದೆಗಾರಿಕೆ, ಎದೆಗಾರಿಕೆಗೆ ತಕ್ಕ ನೋವು, ಸಂಕಟ, ಅಪಾಯ ಸಹಿಸುವ ಸಾಹಸ ಜೀವನದ ಅನುಭವ ನನ್ನದು. ಆದ್ದರಿಂದ ನೋವೇ ಸ್ಥಾಯಿ, ಸಂತೋಷವೇ ಸಂಚಾರಿ. ನನ್ನ ವಿರುದ್ಧವ ಶಕ್ತಿಗಳೇ ನನ್ನ ಆಪ್ತವಲಯ. ಅವರಿಂದ ಬರುವ ಸವಾಲುಗಳೇ ನನ್ನ ಬರವಣಿಗೆಯ ಸೃಷ್ಟಿಯ ಹಿನ್ನೆಲೆ.

ಸಂಪ್ರದಾಯನಿಷ್ಠ ಸಾಹಿತ್ಯ ಕೃಷಿಕರಿಗೆ ನಿಮ್ಮ 'ಮರುಚಿಂತನೆ' ಚಿಂತೆಗೀಡು ಮಾಡಿದೆ. ಇದರಿಂದ ಅಪವಾದಗಳನ್ನು ಎದುರಿಸಬೇಕಾಗಿದ್ದು, ನಿಮ್ಮ ಬರವಣಿಗೆಗೆ ಎಷ್ಟರಮಟ್ಟಿಗೆ ಸಹಾಯವಾಗಿದೆ?

ಮರುಚಿಂತನೆ ಯಾರ ವಿರುದ್ಧವೂ ಅಲ್ಲ, ಅಲ್ಲಿ ನಡೆದಿರುವುದು ಸತ್ಯಶೋಧನೆಯ ಪ್ರತಿಪಾದನೆ. ಕೆಲವು ಜಾತಿ ಧಾಂಬಿಕರು ಮತ್ತು ಹುಸಿ-ಜಾತಿ ಸಾಹಿತಿಗಳು ನನ್ನ ಮೇಲೆ ಜಾತಿವಿರೋಧಿಯ ಆರೋಪದ ಅಪವಾದ ಹೊರಿಸಿ, ಸಾರ್ವಜನಿಕವಾಗಿ ಅವಮಾನ ಮಾಡಿ ಮಾನಸಿಕ ಹಿಂಸೆ ಮಾಡ ಬಯಸಿದರು. ಕ್ರಮೇಣ ಅವರಿಗೆ ಅರಿವಾಯಿತು, ಆಪಾದಿಸಿದವರೇ ಬಂದು ಆತ್ಮೀಯರಾದರು. ಕಟ್ಟಾ ಮಾಧ್ವರ ಮನೆಯಲ್ಲಿ ಸಹಪಂಕ್ತಿಯಲ್ಲಿ

ಊಟ ಮಾಡಿದ್ದೇನೆ, ಸ್ಮಾರ್ತರ ಅಡಿಗೆ ಮನೆಯಲ್ಲಿ ಕೈತುತ್ತು ಹಾಕಿಸಿಕೊಂಡು ತಿಂದಿದ್ದೇನೆ, ವೈಷ್ಣವರ ಮನೆಯಲ್ಲಿ ತಂಗಿದ್ದೇನೆ, ಲಿಂಗಾಯಿತರ ಮನೆ ಮತ್ತು ಮಠಗಳಲ್ಲಿ ಪ್ರಸಾದ ಸಿಕ್ಕಿದೆ. ಮುಸ್ಲಿಮರು ಮತ್ತು ದಲಿತರಿಗೆ ನನ್ನ ಮನೆಯಲ್ಲಿ ಯಾವ ಮಡಿ-ಮೈಲಿಗೆಯೂ ಇಲ್ಲ. ಮುಕ್ತ ಮನಸ್ಸು ಮತ್ತು ಮುಕ್ತ ಬದುಕು ನನ್ನದು. ಹಣ,ಕೀರ್ತಿ ಮತ್ತು ಅಧಿಕಾರದಿಂದ ಬತ್ತಲೆಯಾದವನ ಮೇಲೆ ಮತ್ತಾವ ಅಪವಾದ ಹೊರಿಸಿಯಾರು? ಮರುಚಿಂತನೆಯನ್ನು ಓದದೇ ದೂರುತ್ತಾರೆ. ಓದಿ ಅರಿತು ಸುಮ್ಮನಾಗುತ್ತಾರೆ. ಮರುಚಿಂತನೆ ಸಾಹಿತ್ಯ ಕ್ಷೇತ್ರದ ಚಿಂತನೆಯ ಮೇಲೆ ಪ್ರಭಾವ ಬೀರಿದೆ. ನನ್ನನ್ನು ಮರುಚಿಂತನೆ ನಾಗರಾಜಪ್ಪ ಎಂದೇ ಕರೆಯುತ್ತಾರೆ. ಮುಕ್ತ ಚಿಂತನೆಯ ಸವಾಲುಗಳಿಗೆ ನನ್ನ ಬರವಣಿಗೆಯಲ್ಲಿ ಸ್ವಾಗತವಿದೆ.

ನಿಮ್ಮ ಮರುಚಿಂತನೆಯಲ್ಲಿ ಉಪಸಂಸ್ಕೃತಿಯ ಮೇಲೆ ನಡೆದ ದೌರ್ಜನ್ಯ ಪ್ರತಿಭಟಿಸಲೋಸುಗವೇ ನಿಮ್ಮ ದೃಷ್ಟಿ ಹರಿಹಾಯ್ದಂತಿದೆಯಲ್ಲ?

ಸಂಸ್ಕೃತಿ ಮತ್ತು ಉಪಸಂಸ್ಕೃತಿಯ ಅರ್ಥ ಮೊದಲು ಸ್ಪಷ್ಟವಾಗಬೇಕಿದೆ. ಅದನ್ನು ಇಂಗ್ಲಿಷಿನ culture and sub-culture ಎಂಬ ಅರ್ಥದಲ್ಲಿ ಬುದ್ಧಿಜೀವಿಗಳು ಕನ್ನಡದಲ್ಲಿ ಪ್ರಯೋಗಿಸಿದ್ದಾರೆ. ಅದರಂತೆ ಸಂಸ್ಕೃತಿ ಪ್ರತಿಷ್ಠಿತ ವರ್ಗದ್ದು, ಉಪಸಂಸ್ಕೃತಿ ಕೆಳವರ್ಗದ್ದು. ಆದರೆ ಭಾರತೀಯರ ಪುರಾಣ ಮತ್ತು ಕಾವ್ಯದಲ್ಲಿ ಬಳಕೆಯಾಗಿರುವ ಅರ್ಥವೇ ಬೇರೆ. ಶೈವ ಸಂಸ್ಕೃತಿಗೆ, ವೈಷ್ಣವರದ್ದು ಉಪಸಂಸ್ಕೃತಿ, ವೈಷ್ಣವ ಸಂಸ್ಕೃತಿಗೆ, ಶೈವರದ್ದು ಉಪ ಸಂಸ್ಕೃತಿ, ಶೈವ ಮತ್ತು ವೈಷ್ಣವ ಸಂಸ್ಕೃತಿಗೆ ತಾಂತ್ರಿಕರದ್ದು ಉಪಸಂಸ್ಕೃತಿ, ತಾಂತ್ರಿಕ ಸಂಸ್ಕೃತಿಗೆ ಶೈವ ಮತ್ತು ವೈಷ್ಣವರದ್ದು ಉಪಸಂಸ್ಕೃತಿ, ಭಾರತೀಯ ಸಂಸ್ಕೃತಿಗೆ ಇಸ್ಲಾಂ ಮತ್ತು ಕ್ರಿಸ್ತರದ್ದು ಉಪಸಂಸ್ಕೃತಿ, ಇಸ್ಲಾಂ ಮತ್ತು ಕ್ರಿಸ್ತ ಸಂಸ್ಕೃತಿಗೆ ಭಾರತೀಯರದ್ದು ಉಪಸಂಸ್ಕೃತಿ. ಹೀಗಿರುವಾಗ ಪಾವು-ಚಟಾಕಿನ, ಪಾತ್ರಜೋಡಣೆಯ ಪರಿಕಲ್ಪನೆಯ ಬುದ್ಧಿಜೀವಿಗಳ ರಾಷ್ಟ್ರ-ಉಪರಾಷ್ಟ್ರ ಕಲ್ಪನೆಯಲ್ಲಿ ಔಚಿತ್ಯವಿದೆಯೆ? ಸಂಸ್ಕೃತಿ-ಸಂಸ್ಕೃತಿಗಳ ನಡುವೆ, ತಾರತಮ್ಯ ಮತ್ತು ಭೇದ ಅಮಾನವೀಯವಾದದ್ದು ಮತ್ತು ಕುಟಿಲ ತಂತ್ರದ್ದು. ಕೆಳವರ್ಗದವರ civilization ಅನ್ನೇ ನಮ್ಮ ಪ್ರತಿಷ್ಠಿತ ವರ್ಗದ ಬುದ್ಧಿಜೀವಿಗಳು Sub-culture (ಉಪಸಂಸ್ಕೃತಿ) ಎಂದರೆ ಯಾರು ತಾನೆ ಸುಮ್ಮನಿದ್ದಾರು. ಇಂಥ ಭೇದದ ಪರಿಕಲ್ಪನೆಗಳೇ ಕೆಳವರ್ಗದವರ ಆತ್ಮಗೌರವ ಕಳೆದು, ಅವರಲ್ಲಿ ಕೀಳರಿಮೆ ತುಂಬಿದ್ದು ಅವರಿಗೆ ತಾನು ಭೃತ್ಯರಿಗೆ ಭೃತ್ಯ ಎಂಬ ಗಿಳಿ ಪಾಠ ಕಲಿಸಿದ್ದು,-ಶೂದ್ರರ ಮತ್ತು ಸ್ತ್ರೀಯರ ಭಕ್ತಿ ಪಂಥವನ್ನು ಅವರ ನಾಶಕ್ಕೇ ಬಳಸಿದ್ದು.

ಸಾಹಿತ್ಯ ಕ್ಷೇತ್ರದ ನಿಮ್ಮ ಮುಂದಿನ ಯೋಜನೆಗಳು ಯಾವುವು?

ನಾನು ನಲವತ್ತು ವರ್ಷಗಳಿಂದ ಸತತವಾಗಿ ಅಧ್ಯಯನ ನಡೆಸಿದ್ದೇನೆ. ಸಾಹಿತ್ಯವನ್ನು ಧಾರ್ಮಿಕ-ಸಾಮಾಜಿಕ ದೃಷ್ಟಿಯಿಂದ ಅಧ್ಯಯನ ಮಾಡಿದ್ದೇನೆ. ಮೂರು-ನಾಲ್ಕು ಕೃತಿಗಳಿಗಾಗುವಷ್ಟು ಲೇಖನಗಳು ಈಗಾಗಲೇ ಪ್ರಕಟವಾಗಿವೆ. ಅವುಗಳನ್ನು ಪರಿಷ್ಕರಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಬೇಕಿದೆ. ಕೆಳವರ್ಗದ ಸಂಸ್ಕೃತಿಗಳನ್ನು ಕುರಿತು ಸಾಕಷ್ಟು ವಿಷಯ ಸಂಗ್ರಹಿಸಿದ್ದೇನೆ. ಅವುಗಳ ಮೇಲೆ ಎರಡು ಪುಸ್ತಕ ಬರೆಯುವ ಯೋಜನೆ ಇದೆ.

ಬಹಳ ಹಿಂದೆ 'ದೊಡ್ಡ ಸಂಕಣ್ಣ ನಾಯಕ' ಎಂಬ ಐತಿಹಾಸಿಕ ಕಾದಂಬರಿ ಬರೆದ ನೀವು ಮುಂದೆ ಅಂಥ ಕಾದಂಬರಿ ಕ್ಷೇತ್ರದ ಕಡೆಗೆ ವಾಲಿದಂತಿಲ್ಲ . ಕಾರಣವೇನಾದರೂ ಇದೆಯೇ?

ನಾನು ಮೊದಲು ಬರೆದದ್ದು ಕವನಗಳು. ಅವು ಅಲ್ಲಿ ಇಲ್ಲಿ ಪ್ರಕಟವಾಗಿವೆ. ಪ್ರೇಮ ಕವನ ಬರೆಯುವ ವಯಸ್ಸಿನಲ್ಲಿ ಸಾಮಾಜಿಕ ವಿಡಂಬನೆಯ ಕವನಗಳನ್ನು ಬರೆದದ್ದೇ ಅವುಗಳ ವೈಶಿಷ್ಟ್ಯ. ಹದಗೊಳಿಸು, ಬೂಟಲಿಕ್ಕರಿಗೆ, ಥರ್ಮಾಮೀಟರು, ಗ್ರಾಮಸಿಂಹ, ಭಕ್ತಿಯ ಬೋರ್ಡು-ಮುಂತಾದ ಹೆಸರುಗಳೇ ಸೂಚಿಸುತ್ತವೆ. ಕಾಗೆಗೆ ಕೈ ಮುಗಿದೆ ಎಂಬ ಕತೆಯನ್ನು ಪ್ರಬುದ್ಧ ಕರ್ಣಾಟಕಕ್ಕೆ ಬರೆದೆ. ಯಾವುದೊ ಆದರ್ಶದ ಗುಂಗಿನಲ್ಲಿ ದೊಡ್ಡ ಸಂಕಣ್ಣ ನಾಯಕನನ್ನೂ ಬರೆದೆ. ಬರೆದ ಒಂದು ವಾರದಲ್ಲಿ ಅಚ್ಚಾಯಿತು. ಅಚ್ಚಾದ ಒಂದು ತಿಂಗಳಲ್ಲಿ ರಾಜ್ಯ ಪ್ರಶಸ್ತಿ ದೊರಕಿತು, ತಕ್ಷಣವೇ ಪಠ್ಯಪುಸ್ತಕವೂ ಆಯಿತು. ಲಕ್ಷಾಂತರ ಪ್ರತಿಗಳು ಅಚ್ಚಾದವು. ಪ್ರಕಾಶಕ ಬದುಕಿದ, ನನ್ನನ್ನು ಹಣ ಕೊಡದೆ ಸತಾಯಿಸಿದ. ಅದರಿಂದ ಕಾದಂಬರಿ ಬರೆಯುವ ಮನಸ್ಸೇ ಬರಲಿಲ್ಲ. ಮೂವತ್ತು ವರ್ಷಗಳಿಂದ ಕಾದಂಬರಿಯ ಒಂದು ವಸ್ತು ನನ್ನ ತಲೆಯಲ್ಲಿದೆ. ಅದನ್ನು ಇಷ್ಟರಲ್ಲಿಯೇ ಬರೆಯಬೇಕೆಂದಿದ್ದೇನೆ. ಸಾಮಾಜಿಕ ಅನ್ಯಾಯದ ವಿರುದ್ಧದ ಚಿಂತನೆ ಮತ್ತು ವೈಚಾರಿಕತೆ ನನ್ನನ್ನು ಗದ್ಯದತ್ತ ತಿರುಗಿಸಿತು.

ಅಧ್ಯಾಪಕರಾಗಿ ಒಂದು ಸಾಹಿತ್ಯ ಕೃತಿ ಪಾಠ ಹೇಳಿದ್ದಕ್ಕೂ, ವಿಮರ್ಶಕರಾಗಿ ಆ ಕೃತಿ ಗಮನಿಸಿದ್ದಕ್ಕೂ ವ್ಯತ್ಯಾಸಗಳು, ಸಾಧಕ ಬಾಧಕಗಳೇನು?

ಗೋಸುಂಬೆ ಬಣ್ಣದ ವ್ಯಕ್ತಿತ್ವ ನನ್ನದಲ್ಲ. ಪಾಠ ಮಾಡುವುದು ಎಂದರೆ ಹೊಗಳುವುದು, ವಿಮರ್ಶೆ ಎಂದರೆ ತೆಗಳುವುದು ಎಂದು ನಿಮ್ಮ ಪ್ರಶ್ನೆಯ ಅರ್ಥವೆ. ಅವು ಎರಡೂ ನನಗೆ ಬೇರೆ ಬೇರೆ ಕ್ರಿಯೆಗಳಲ್ಲ. ಪೂರ್ವಸಿದ್ಧತೆ ಇಲ್ಲದೆ ಪಾಠ ಹೇಳುವುದಾಗಲಿ ಮತ್ತು ವಿಮರ್ಶೆಯನ್ನಾಗಲಿ ಮಾಡುವುದಿಲ್ಲ. ವಿದ್ಯಾರ್ಥಿಗಳಿಗೆ ಕೃತಿಗಳನ್ನು ಮೊದಲು ಅರ್ಥವಾಗುವಂತೆ ಪಾಠ ಹೇಳಬೇಕು. ಅನಂತರ ವಿಮರ್ಶೆಯ ಮೂಲ ತತ್ವಗಳಿಂದ ಕೃತಿಯನ್ನು ಪ್ರಾಯೋಗಿಕ ವಿಮರ್ಶೆಗೆ ಗುರಿ ಮಾಡುವುದು. ಯಾವುದೇ ಕೃತಿಯನ್ನು ಮುಲಾಜಿಲ್ಲದೆ ವಿಮರ್ಶಿಸುತ್ತ ಪಾಠ ಹೇಳುತ್ತಿದ್ದೆ. ವಿದ್ಯಾರ್ಥಿಗಳಿಗೆ ಮುಕ್ತವಾಗಿ ಪ್ರಶ್ನೆ ಕೇಳುವ ಅವಕಾಶವಿತ್ತು. ಯಾವ ವ್ಯತ್ಯಾಸವೂ ಇರಲಿಲ್ಲ. ಯಾರಿಂದಲೂ ಸಮಸ್ಯೆಗಳು ಎದುರಾಗಲೇ ಇಲ್ಲ.

ದಲಿತ-ಬಂಡಾಯ ಸಾಹಿತ್ಯದ ಬಗೆಗೆ ನಿಮ್ಮ ಅಭಿಪ್ರಾಯವೇನು?

ದಲಿತ-ಬಂಡಾಯ ಸಾಹಿತ್ಯ ಬಹು ಸಂಸ್ಕೃತಿಯ ಏಕ ಭಾಷೆಯ ಅಚ್ಚ ಕನ್ನಡ ದನಿಗಳು. ಅದು ಸಾಮಾಜಿಕ ಪ್ರಜ್ಞೆಯ ಕೇಂದ್ರ ಬಿಂದು ಹೊಂದಿರುವುದು. ರಸಪ್ರಜ್ಞೆಯ ಅಸಲಿತನವನ್ನೇ ದಲಿತ-ಬಂಡಾಯ ಸಾಹಿತ್ಯ ಪ್ರಶ್ನಿಸಿತು. ಪ್ರತಿಷ್ಠಿತ ವರ್ಗದಿಂದ ಬಹು ಸಂಸ್ಕೃತಿಯ ಸಂವೇದನೆಗಳಿಗೆ ಸ್ವಾಗತ ಮತ್ತು ಗೌರವ ದೊರಕಬೇಕಿತ್ತು. ಆದರೆ ಅವನ್ನು ತುಳಿಯುವ ಕಾರ್ಯ ನಡೆದಿದೆ. ದಲಿತ ಮತ್ತು ಬಂಡಾಯ ಸಾಹಿತ್ಯದ ಮೇಲೆ ದ್ವೇಷವನ್ನು ಬಿತ್ತುತ್ತದೆ ಮತ್ತು ಸೃಜನಶೀಲ ಕೃತಿ ಹುಟ್ಟಲಿಲ್ಲ ಎಂದು ದೂರುತ್ತಾರೆ. ಪ್ರತಿಷ್ಠಿತ ವರ್ಗದಲ್ಲಿ

ಸೃಜನಶೀಲ ಕೃತಿಗಳಿವೆ. ಆದರೆ ಸೃಜನಶೀಲ ಬದುಕಿಲ್ಲ. ದಲಿತ ಬಂಡಾಯ ವರ್ಗದಲ್ಲಿ ಸೃಜನಶೀಲ ಕೃತಿಗಳಿಲ್ಲ. ಆದರೆ ಸೃಜನಶೀಲ ಬದುಕಿದೆ-ಪ್ರತಿಷ್ಠಿತರಿಗೆ ಸಾಮಾಜಿಕ ಹೊಣೆಗಾರಿಕೆಯಿಲ್ಲ, ದಲಿತ-ಬಂಡಾಯಗಾರರಿಗೆ ಸಾಮಾಜಿಕ ಹೊಣೆಗಾರಿಕೆ ಇದೆ. ದಲಿತ ಮತ್ತು ಬಂಡಾಯ ಕೃತಿಗಳಲ್ಲಿ ಆಕ್ರೋಶ ಮತ್ತು ನೆಗೆಟೀವ್ ಅಂಶಗಳೇ ಅಧಿಕವಾಗಿ ಅಭಿವ್ಯಕ್ತವಾದವು. ಅವುಗಳಲ್ಲಿರುವ ರಿಚುಯಲ್ಸ್ ಮತ್ತು ಪಾಸಿಟೀವ್ ಅಂಶದತ್ತ ಕೆಳವರ್ಗದ ಬರಹಗಾರರ ಗಮನ ಹರಿದಿದ್ದರೆ, ದಲಿತ-ಬಂಡಾಯ ತರುಣ ನಾಯಕರಲ್ಲಿ ಮುಂದಾಳತ್ವಕ್ಕೆ ಕಿತ್ತಾಟವೂ ನಡೆಯುತ್ತಿರಲಿಲ್ಲ. ಸಂಘಟನೆ ಒಡೆಯುತ್ತಿರಲಿಲ್ಲ ಮತ್ತು ಆಪಾದನೆಯೂ ಬರುತ್ತಿರಲಿಲ್ಲ-ಸಾಮಾಜಿಕ ಅನ್ಯಾಯ ನಿಲ್ಲದ ತನಕ ಸಾಮಾಜಿಕ ಪ್ರತಿಭಟನೆ ತಪ್ಪುವುದಿಲ್ಲ. ತುಳಿದಷ್ಟೂ ಮತ್ತಷ್ಟು ಶಕ್ತಿ ಪಡೆಯುತ್ತದೆ. ಒಡೆದಷ್ಟೂ ಒಂದುಗೂಡುತ್ತದೆ-ರಷ್ಯ ಒಡೆದು ಹತ್ತಾರು ಅಣುಬಾಂಬುಗಳ ದೇಶ ಹುಟ್ಟಿದವು. ಅಮೆರಿಕಕ್ಕೆ ಒಂದು ರಷ್ಯ ಎದುರಿಸುವ ಬದಲು ಹತ್ತು ರಷ್ಯಗಳನ್ನು ಎದುರಿಸುವಂತಾಯಿತು. ಸೃಜನಶೀಲ ಕೃತಿಗಳು ಬಂಡಾಯ-ದಲಿತರಲ್ಲಿ ಇಲ್ಲದಿರುವುದು ಕೊರತೆಯಲ್ಲ-ಸೃಜನಶೀಲ ಕೃತಿಗಳಿಗಿಂತ ಸೃಜನಶೀಲ ಜನರಿರುವುದು ದೊಡ್ಡದು.

ಚಳುವಳಿಗಳಿಂದ ಹುಟ್ಟಿಕೊಂಡ ಸಾಹಿತ್ಯ ಚಳುವಳಿಗೆ ಮಾತ್ರ ಮೀಸಲಾಗಿರುತ್ತದೆಯೊ?

ಖಂಡಿತ ಇಲ್ಲ. ಚಳುವಳಿಯ ಸಾಹಿತ್ಯ-ಸಾಹಿತ್ಯವಾಗಿಯೂ ಮತ್ತು ಅನೇಕ ಸಾಹಿತ್ಯ ಕೃತಿ ರಚನೆಗೆ ಪ್ರೇರಣೆಯೂ ಆಗುತ್ತದೆ. ಚಳುವಳಿಯ ಕೆಲಸ ಎರಡು: ಆಗಿರುವ ಅನ್ಯಾಯವನ್ನು ಪ್ರತಿಭಟಿಸುವುದು ಮತ್ತು ನ್ಯಾಯವಾಗಿ ಆಗಲೇಬೇಕಾದ ಕಾರ್ಯಗಳಿಗೆ ಹೋರಾಡುವುದು. ಚಳುವಳಿ ಸಾಮಾಜಿಕವೂ ಮತ್ತು ಮೌಲಿಕವೂ ಆದಷ್ಟೂ ಅದರಿಂದ ಹುಟ್ಟುವ ಚಳುವಳಿ ಸಾಹಿತ್ಯದ ಗುಣಮಟ್ಟ ಅಧಿಕವಾಗುತ್ತದೆ. ಸೃಜನಶೀಲ ಸಾಹಿತ್ಯ ಸೃಷ್ಟಿಗೆ ಚಳುವಳಿ ಸಾಹಿತ್ಯ ಪೂರಕ ಮತ್ತು ಪ್ರೇರಕ.

ಇತ್ತೀಚೆಗೆ ಧರ್ಮ ಮತ್ತು ಸಾಹಿತ್ಯದಲ್ಲಿ ಮಾನವೀಯತೆ ಬಗ್ಗೆ ಅತಿಯಾಗಿ ಪ್ರಸ್ತಾಪವಾಗುತ್ತಿದೆ. ನಿಮ್ಮ ಅಭಿಪ್ರಾಯವೇನು?

ಅಮಾನವೀಯ ಕೃತ್ಯಗಳು ಹೆಚ್ಚಿದಷ್ಟೂ ಮಾನವೀಯತೆಯ ಚರ್ಚೆ ಅಧಿಕವಾಗುತ್ತದೆ. ಮತ, ಜಾತಿ, ಪಂಥ ಮತ್ತು ಪಂಗಡಗಳು ಕಾಲ ಕಾಲದಲ್ಲಿ ಮಾನವ ಜನಾಂಗಕ್ಕೆ ಬಗೆಯುತ್ತಿರುವ ದ್ರೋಹವನ್ನು ಮುಚ್ಚಿ ಮೋಸಗೊಳಿಸಲು ಧರಿಸುವ ತಂಪು ಕನ್ನಡಕವೇ (ಪೊಲೊರೈಸ್ಡ್ ಗ್ಲಾಸ್) ಮಾನವೀಯತೆ. ಅದು ಯುರೋಪಿಯನ್ನರು ಬಳಸಿ ಬಳಸಿ ಕ್ಲೀಶೆಯ ಆಮದಾದ ಪದ. ಜಲ, ನೆಲ, ಭಾಷೆ, ಧರ್ಮವನ್ನೆ ಜನರ ನೆಮ್ಮದಿ ಕಳೆಯಲು ನಿತ್ಯ ಬಳಸುತ್ತಿರುವ ಜನರಿಂದ ಮಾನವೀಯತೆ ಎಂದಾದರೂ ಸಾಧ್ಯವೇ? ಇರುವುದು ಮುಸ್ಲಿಂ ಮಾನವೀಯತೆ, ಕ್ರಿಶ್ಚಿಯನ್ ಮಾನವೀಯತೆ ಮತ್ತು ಹಿಂದೂ ಮಾನವೀಯತೆಯೇ ಹೊರತು-ನಿಜವಾದ ಮಾನವೀಯತೆ ಇಲ್ಲ. ♦

3. ಅಧ್ಯಕ್ಷ ಭಾಷಣ

ಪ್ರೊ|| ಕೆ.ಜಿ. ನಾಗರಾಜಪ್ಪ.

[ಗುಬ್ಬಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಗುಬ್ಬಿಯಲ್ಲಿ 1993 ನೇ ನವೆಂಬರ್ 26 ಮತ್ತು 27 ರಂದು ಏರ್ಪಡಿಸಿದ್ದ ಪ್ರಥಮ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಕೀರ್ತಿ ತಾಲ್ಲೂಕಿನವರೇ ಆದ ಪ್ರೊ|| ಕೆ.ಜಿ. ನಾಗರಾಜಪ್ಪನವರಿಗೆ ಸಲ್ಲುತ್ತದೆ. ಆ ಸಂದರ್ಭದಲ್ಲಿ ಅವರು ಪ್ರಸ್ತುತ ಪಡಿಸಿದ ಅಧ್ಯಕ್ಷ ಭಾಷಣ ಇದಾಗಿದೆ. ಪ್ರೊ|| ಕೆ.ಜಿ.ಎನ್. ಅವರ ಆಸೆ-ಆಶಯ-ಚಿಂತನೆಗಳನ್ನು ತಿಳಿಯಲು ಸಹಾಯಕವಾಗುತ್ತಿದೆ ಎಂಬ ಸದುದ್ದೇಶದಿಂದ ಈ ಅಧ್ಯಕ್ಷ ಭಾಷಣವನ್ನು ಇಲ್ಲಿ ದಾಖಲಿಸಲಾಗಿದೆ.-ಸಂಪಾದಕ]

ಆತ್ಮೀಯ ಕನ್ನಡ ಬಂಧುಗಳೇ,

ನನ್ನನ್ನು ಗುಬ್ಬಿ ತಾಲ್ಲೂಕಿನವನೆಂದು, ಕನ್ನಡ ಕಲಿತು ಬರೆದಿದ್ದಾನೆಂದು, ಏನೋ ಸಾಧಿಸಿದ್ದಾನೆಂದು ಕೇಳಿ ತಿಳಿದ ನೀವು, ಯಾವ ಪೀಠಕ್ಕೂ ಅಂಟಿಕೊಳ್ಳದ ನನ್ನನ್ನು, ಇಂದು ಹಿಡಿದು ತಂದು ಗುಬ್ಬಿ ತಾಲ್ಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗದ್ದುಗೆಯ ಮೇಲೆ ಕೂರಿಸಿದ್ದೀರಿ. ಈ ಗದ್ದುಗೆ ಬಂಗಾರದ್ದು ಎಂದೂ, ಅಧ್ಯಕ್ಷಗಿರಿ ವಜ್ರದ ಕಿರೀಟವೆಂದು ನಾನು ತಿಳಿದಿಲ್ಲ. ನಾನು ನಿಮ್ಮೆಲ್ಲರಿಗಿಂತ ಎಂದೂ ಬೇರೆಯವನಲ್ಲ. ನಿಮ್ಮಂತೆಯೇ ಜೀವನದಲ್ಲಿ ತೊದಲಿದವನು, ಎಡವಿದವನು ಮತ್ತು ಸುಖ ದುಃಖ ಅನುಭವಿಸುತ್ತಿರುವವನು. ಈ ನೆಲದ ಮೇಲೆಯೇ ಬದುಕು ಕಟ್ಟಿಕೊಂಡು ನಿಮ್ಮೊಂದಿಗೆ ಗುರುತಿಸಿಕೊಂಡವನು. ಹುಟ್ಟಿದ ವರ್ಗದಿಂದ ಬೇರು ಕತ್ತರಿಸಿಕೊಂಡು ಮತ್ತೊಂದು ವರ್ಗದ ಪ್ರಲೋಭನೆಗೆ ಸಿಕ್ಕಿ ಅಸಲಿತನ ಕಳೆದುಕೊಂಡವನಲ್ಲ. ಹಿರಿಯರು ತೋರಿದ, ಗುರುಗಳು ಕಲಿಸಿದ ಆದರ್ಶಗಳನ್ನು (ಅವರು ಆಚರಿಸಲಿ ಬಿಡಲಿ) ನನ್ನ ಬದುಕಿನಲ್ಲಿ ಆಚರಿಸುವ ಹಠ ತೊಟ್ಟು ಅದಕ್ಕೆ ಸಾಕಷ್ಟು ಬೆಲೆ ತೆತ್ತವನು.

ಕನ್ನಡ ಸಾಹಿತ್ಯದಲ್ಲಿ ಜನಸಾಮಾನ್ಯರ ಬಗ್ಗೆ ಅಸಡ್ಡೆ ಇದೆ, ಅನಾದರವಿದೆ ಮತ್ತು ನಿಂದೆ ಇದೆ. ಶ್ರೀಸಾಮಾನ್ಯ ವರ್ಗ ಅಜ್ಞಾನ, ಮೂಢ ನಂಬಿಕೆ, ಧರ್ಮನಿಷ್ಠೆ, ಸ್ವಾಮಿನಿಷ್ಠೆಗಳಿಂದ ದನಿಯಿಲ್ಲದವರಾಗಿ, ತಲೆ ತಗ್ಗಿಸಿ ದುಡಿಯುವ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಸ್ವಯಂಪ್ರೇರಿತರಾಗಿ ಸಹಿಸುವ ವರ್ಗವಾಯಿತು. ಶಾಸ್ತ್ರ ಮತ್ತು ಕಾವ್ಯಗಳಲ್ಲಿ ಚಿತ್ರಿಸಿರುವ ಕೆಳವರ್ಗದ ಪಾತ್ರಗಳು ಮೇಲು ವರ್ಗ ಪ್ರತಿಷ್ಠಿತ ಬರಹಗಾರರ ಸೂತ್ರದ ಗೊಂಬೆಗಳು. ಬರಹಗಾರರು ಕಲಿಸುವ ಗಿಳಿ ಪಾಠವನ್ನು ಒಪ್ಪಿಸುವ ಗಿಳಿಗಳು! ಬರಹಗಾರರನ್ನು ಮೀರಿ ಅವು ಎಂದೂ ಬೆಳೆಯುವುದೇ ಇಲ್ಲ. ಕೆಳವರ್ಗದ ಪಾತ್ರಗಳು ಸದಾ ಪ್ರತಿಷ್ಠಿತ ವರ್ಗದ ಹಿತ ಕಾಯುವ, ತಲೆ ದಂಡದಿಂದ ಸ್ವಾಮಿನಿಷ್ಠೆ ಮೆರೆವ ಪಡಿಯಚ್ಚುಗಳು. ಅವರದ್ದು ದೇಹ ಸಂಸ್ಕೃತಿ! ಕ್ಷುದ್ರ, ಕ್ಷುಲ್ಲಕ ಮತ್ತು ಜಂಗ್ಲಿ ಸಂಸ್ಕೃತಿ! ಇಂಥ ವಿಚಾರಗಳನ್ನು ಓದಿದ ಮೇಲೆ ಕುತೂಹಲ ಹೆಚ್ಚಿತು. ಮನುಷ್ಯ-ಮನುಷ್ಯರ, ಸಂಸ್ಕೃತಿ-ಸಂಸ್ಕೃತಿ ನಡುವೆ ತಾರತಮ್ಯ ಮಾಡುವುದು ಸರಿಯೇ ಎಂಬ ಪ್ರಶ್ನೆ ನನ್ನನ್ನು ಕಾಡತೊಡಗಿತು. ಶಾಸ್ತ್ರಗಳು, ಸಂತರು ಮತ್ತು

ವಿದ್ವಾಂಸರು 'ಕೈಯಿನ ಐದು ಬೆರಳುಗಳು ಸಮನಾಗಿವೆಯೇ?' ಎಂದು ಪ್ರಶ್ನಿಸಿ ಅಸಮಾನತೆ ಪ್ರಕೃತಿಯಲ್ಲಿಯೇ ಇರುವ ಸಹಜ ತತ್ವ ಎಂದು ಹೇಳಿ, ತಾರತಮ್ಯವನ್ನು ಸಮರ್ಥಿಸುವ ಸೂತ್ರದಲ್ಲಿಯೇ ನನಗೆ ಅನುಮಾನ ಮೂಡಿತು. ಹಾಗಾದರೆ ಕೈಯಿನ ಒಂದು ಬೆರಳಿನಲ್ಲಿ ಅಮೃತ, ಮತ್ತೊಂದರಲ್ಲಿ ಮಲಮೂತ್ರ, ಮಗದೊಂದರಲ್ಲಿ ರಕ್ತ, ಹೀಗೆ ಬೇರೆ ಬೇರೆ ಬೆರಳುಗಳಲ್ಲಿ ಬೇರೆ ಬೇರೆ ದ್ರವಗಳು ಹರಿಯುತ್ತಿವೆಯೆ ಎಂಬ ಪ್ರಶ್ನೆ ನನ್ನ ತಲೆ ತಿನ್ನತೊಡಗಿತು. ಆಗ ಇಲ್ಲಾ, ಎಲ್ಲಾ ಬೆರಳುಗಳಲ್ಲಿಯೂ ಸಮಾನವಾಗಿ ಹರಿಯುತ್ತಿರುವುದು ರಕ್ತವೇ! ಆದರೆ ಒಂದೊಂದು ಬೆರಳಿಗೂ ತನ್ನದೇ ಆದ ಕೆಲಸವಿದೆ ಮತ್ತು ಅವು ಒಟ್ಟಿಗೆ ಕೂಡಿ ಮಾಡುವ ಕೆಲಸವೂ ಇದೆ. ಕೈಯ ಬೆರಳುಗಳು ವಿಶಿಷ್ಟ ಕ್ರಿಯೆಯ ಮತ್ತು ಸಮಾನ ತತ್ವ ಅನುಸರಿಸಿ ಬೆರಳುಗಳು ಕಾರ್ಯ ನಿರ್ವಹಿಸುತ್ತಿವೆ ಎಂಬ ಉತ್ತರ ಹೊಳೆಯಿತು. ಬೇಧ ಪ್ರಕೃತಿ ಸಹಜವಾದದ್ದಲ್ಲ, ಮಾನವ ಸ್ವಾರ್ಥಕ್ಕಾಗಿ ನಿರ್ಮಿಸಿಕೊಂಡದ್ದು ಎಂಬ ಸತ್ಯ ಕಂಡಿತು. ಅಂದಿನಿಂದ ಸಮಾನತೆ-ಅಸಮಾನತೆಯ ಸತ್ಯದ ವಿವಿಧ ಸ್ತರಗಳ ಶೋಧನೆಗೆ ತೊಡಗಿದೆನು. ಶಿಷ್ಟ-ಜಾನಪದ, ಸಂಸ್ಕೃತಿ-ಅಧೀನ ಸಂಸ್ಕೃತಿ, ರಾಷ್ಟ್ರ-ಉಪರಾಷ್ಟ್ರ ಮುಂತಾದ ಬೇಧ ಸೂತ್ರದ ಪರಿಕಲ್ಪನೆಗಳು ನನಗೆ ಸವಾಲಾದವು. ಆ ಸವಾಲನ್ನು ಒಪ್ಪಿ ನಡೆಸುತ್ತಿರುವ ಹುಡುಕಾಟವೇ ನನ್ನ ಬದುಕು ಮತ್ತು ಬರಹದ ಪ್ರೇರಕ ಶಕ್ತಿಯಾಗಿದೆ. ಗ್ರಾಮೀಣ ಸಾಮೂಹಿಕ ಪ್ರಜ್ಞೆಯ ಏಕ ಭಾಷೆಯ, ಬಹು ಸಂಸ್ಕೃತಿ ವರ್ಗಕ್ಕೆ ಸೇರಿದ ಅಚ್ಚ ಕನ್ನಡಿಗ ನಾನು.

ಈ ಅಧ್ಯಕ್ಷ ಗದ್ದುಗೆ ನನ್ನನ್ನು ಮುಳ್ಳಾಗಿ ಚುಚ್ಚುತ್ತಿದೆ ಮತ್ತು ಅಣಕವಾಗಿ ಒತ್ತುತ್ತಿದೆ. ಈ ಗದ್ದುಗೆಯ ಹಿಂದೆ ಅನೇಕ ಪರಸ್ಪರ ವಿರುದ್ಧದ ದನಿಗಳಿವೆ! ಈ ತಾಲ್ಲೂಕಿನಲ್ಲಿ ನನಗಿಂತ ಪ್ರತಿಭಾವಂತರು ಮತ್ತು ಹಿರಿಯರು ಇಲ್ಲ ಎಂದು ಭಾವಿಸುವಷ್ಟು ದಡ್ಡ ನಾನಲ್ಲ. ನನ್ನ ಅಲ್ಪ ಸಾಧನೆಯನ್ನೇ ಗುರುತಿಸಿ ಪರಿಗಣಿಸಿ ಈ ಅಧ್ಯಕ್ಷ ಗದ್ದುಗೆಯ ಮೇಲೆ ನನ್ನನ್ನು ಕೂರಿಸಿರುವ ನಿಮ್ಮೆಲ್ಲರಿಗೂ ನಾನು ಋಣಿ. ನಿಮ್ಮ ಔದಾರ್ಯಕ್ಕೆ ನನ್ನ ನಮನಗಳು. ಸಾಹಿತ್ಯಕ್ಕಿಂತ ಬದುಕು ದೊಡ್ಡದು ಎಂದು ನನ್ನ ನಂಬಿಕೆ. ಅಂಥ ಬದುಕಿನಲ್ಲಿ ನುಡಿದಂತೆ ನಡೆಯುವ, ನಡೆದಂತೆ ನುಡಿಯುವ, ನಡೆ-ನುಡಿ ಸಿದ್ಧಾಂತದ ವಚನಕಾರರ ದಾರಿ ಹಿಡಿದವನು ನಾನು. ನಿಮಗೆ ಬಣ್ಣ ಬಣ್ಣದ ಲೋಕಗಳ, ಕಲ್ಪನಾ ಸೌಂದರ್ಯವನ್ನು ಬಿಚ್ಚಿ ತೋರಿಸುವ ಮಾತಿನ ಮಾಟಗಾರನಲ್ಲ, ಮಾತಿನ ಮೋಡಿಯ ಕಲೆಯ ಸಾಧಕನಲ್ಲ, ಸತ್, ಚಿತ್ ಮತ್ತು ಆನಂದ (ಸತ್ಯಂ,ಶಿವಂ ಮತ್ತು ಸುಂದರಂ) ತತ್ವ ಬೋಧಿಸಿ ನಿಮ್ಮನ್ನೆಲ್ಲಾ ಸಮೂಹ ಸನ್ನಿಗೆ ಒಳಗಾಗಿಸುವ ಗಾರುಡಿಗನೂ ಅಲ್ಲ! ನಿಮ್ಮ ಎದೆಯ ದನಿಗೆ, ನನ್ನ ದನಿ ಸೇರಿಸಿ ನಿಮ್ಮೆಲ್ಲರ ನಾಲಿಗೆಯಾಗ ಬಯಸುವವನು, ಕೇಳಿದ್ದನ್ನು, ಕಂಡದ್ದನ್ನು, ನೋಡಿದ್ದನ್ನು, ಆಚರಿಸಿದ್ದನ್ನು ಮತ್ತು ಅನುಭವಿಸಿದ್ದನ್ನು-ಇದ್ದದ್ದು ಇದ್ದಂತೆ-ಅಸಲಿಗೆ ಮೋಸವಾಗದಂತೆ ಹೇಳಿ ಬಿಡುವ ಸ್ವಭಾವ ನನ್ನದು. ನನ್ನ ಅಭಿಪ್ರಾಯಗಳನ್ನು ಒಪ್ಪುವುದು ಬಿಡುವುದು ನಿಮಗೆ ಸೇರಿದ್ದು. ನಡತೆಯಲ್ಲಿಲ್ಲದ, ಕೇವಲ ನುಡಿಯ ಏಕತೆ ಮತ್ತು ಭಾವೈಕ್ಯತೆ ಸಾರುವ ಮುಖವಾಡದ ಬದುಕೇ ಸಾವು. ಪ್ರಾಮಾಣಿಕವಾದ ಬಿಚ್ಚುನುಡಿಯ ನುಡಿ-ನುಡಿ ಸಂಘರ್ಷದ ಕಿಡಿಯೇ ಬೆಳಕಿನ ಬೆಳವಣಿಗೆಗೆ ದಾರಿ ಮತ್ತು ಪರಸ್ಪರ ಅರಿವಿನ ಮೂಲ ಎಂದು ನಂಬಿರುವ ನೇರ ನುಡಿಯ ಮುಕ್ತ ಚಿಂತಕ ನಾನು.

ಚಾರಿತ್ರಿಕವಾಗಿ ಗುಬ್ಬಿ ತಾಲ್ಲೂಕು ಕರ್ನಾಟಕದ ಪ್ರಮುಖ ಮನೆತನಗಳಾದ ಗಂಗರು, ಚಾಲುಕ್ಯರು, ಹೊಯ್ಸಳರು, ವಿಜಯನಗರ ಮತ್ತು ಮೈಸೂರು ಅರಸರ ಆಡಳಿತಕ್ಕೆ ಸೇರಿತ್ತು. ಹೊಸಳ್ಳಿ, ಹಾಗಲವಾಡಿ ಮತ್ತು ಮೂಗನಾಯಕನಕೋಟೆ ಸ್ಥಳೀಯ ಪಾಳೆಯಪಟ್ಟುಗಳು, ಇಲ್ಲಿ ಯಾವ ಪ್ರಸಿದ್ಧ ಐತಿಹಾಸಿಕ ಘಟನೆಯೂ ನಡೆದಿಲ್ಲ. ಇದು ಚರಿತ್ರೆ ರಚಿಸುವ ಗಂಡು ಮೆಟ್ಟಿದ, ರಕ್ತದಿಂದ ನೆನೆದ ನೆಲವೇನೂ ಅಲ್ಲ. ಆದರೆ ಮೂಗನಾಯಕನ ಕೋಟೆ ಮುತ್ತಿಗೆ ಹಾಕಿ ಮರಾಠರು ಮಣ್ಣು ಮಣ್ಣು ಮುಕ್ಕಿದ್ದಾರೆ. ಶಾಸನ ಮತ್ತು ಶಾಸ್ತ್ರ ಗ್ರಂಥಗಳಲ್ಲಿ ಶೈವ, ವೈಷ್ಣವ, ಶಾಕ್ತ ಮತ್ತು ಜೈನ ಮತಗಳ ಪ್ರಸ್ತಾಪವಿದೆ. ಅವರಿಂದ ಅವರವರ ಧರ್ಮ ಸಾಹಿತ್ಯವೂ ರಚನೆಯಾಗಿದೆ. ಈ ತಾಲ್ಲೂಕಿನ ಸಾಹಿತ್ಯ ಹದಿನೈದು ಮತ್ತು ಹದಿನಾರನೆಯ ಶತಮಾನಗಳಲ್ಲಿ ಸುವರ್ಣಯುಗ ಕಂಡಿದೆ. ಆಗ ತಾಲ್ಲೂಕಿಗೇ ಏಕೆ ಇಡೀ ಜಿಲ್ಲೆಯ ವೀರಶೈವ ಸಾಹಿತ್ಯದ ನಾಡಿ ಬಡಿತಕ್ಕೆ ಅಮರಗೊಂಡ ಹೃದಯವಾಗಿತ್ತು. ಗೂಳೂರಿನ ಶೂನ್ಯ ಸಂಪಾದನೆ ಮತ್ತು ಎಡೆಯೂರಿನ ಷಟ್‌ಸ್ಥಲ ಸಾರಾಮೃತಗಳಿಗೆ ಪೂರ್ವಸಿದ್ಧತೆ ಇಲ್ಲಿಯೇ ನಡೆದಿರಬಹುದು. ಗೂಳೂರಿನ ಸೆರಗು ಮತ್ತು ಕೈದಾಳ ಹಿಂದೆ ಗುಬ್ಬಿ ತಾಲ್ಲೂಕಿಗೆ ಸೇರಿದ್ದವು. ಗುಬ್ಬಿ-ಗೂಳೂರು ಸುತ್ತ ಮುತ್ತಲ ಪ್ರಾಂತ್ಯ ವೀರಶೈವ ಧರ್ಮದ ಅಧ್ಯಯನ ಮತ್ತು ಚಟುವಟಿಕೆಯ, ಕಲ್ಯಾಣದ ವಿಘಟನೆಯ ಅನಂತರದ ಸಂಘಟನೆಯ ಪ್ರಧಾನ ಕೇಂದ್ರವಾಗಿತ್ತು. ಇಂದಿಗೂ ಸಂಶೋಧಕರ ಗಮನ ಹರಿಯದ ಈ ಪ್ರದೇಶದ ಕ್ಷೇತ್ರಕಾರ್ಯದಿಂದ ಹೊಸ ಬೆಳಕು ಚೆಲ್ಲುವುದು ಸಾಧ್ಯ.

ಇಲ್ಲಿಯ ಗುಬ್ಬಿ ಮಲ್ಲಣ್ಣನ ವಂಶವೇ ವೀರಶೈವ ಸಾಹಿತ್ಯ ಸುವರ್ಣಯುಗಕ್ಕೆ ಕಾರಣರಾದ ಮೂಲ ಪುರುಷರು. ಮಲ್ಲಣ್ಣನ ಗಣಭಾಷ್ಯ ರತ್ನಮಾಲೆ, ಮಲ್ಲಣಾರ್ಯನ ವೀರಶೈವ ಪುರಾಣ ಮತ್ತು ಭಾವ ಚಿಂತಾರತ್ನ, ಚೇರಮನ ಚೇರಮಾಂಕ ಕಾವ್ಯ, ಶಾಂತೇಶನ ಸಿದ್ಧೇಶ್ವರ ಪುರಾಣ, ದೊಡ್ಡಯ್ಯನ ಚಂದ್ರಪ್ರಭ ಪುರಾಣ ಹೆಸರಿಸಬಹುದಾದಂತಹ ಕೃತಿಗಳು. ಅನೇಕ ಗ್ರಂಥಗಳಿಗೆ ವ್ಯಾಖ್ಯಾನ ಮತ್ತು ಟೀಕೆಗಳು ಹುಟ್ಟಿವೆ. ಅವುಗಳಲ್ಲಿ ಕೇಶಿರಾಜನ ಶಬ್ದ ಮಣಿದರ್ಪಣಕ್ಕೆ ಬರೆದ ನಿಟ್ಟೂರು ನಂಜಯ್ಯನ ಟೀಕೆ ಪ್ರಸಿದ್ಧವಾದುದು ಮತ್ತು ಪಾಂಡಿತ್ಯಪೂರ್ಣವಾದುದು. ಈ ತಾಲ್ಲೂಕಿನ ಸಾಹಿತ್ಯದ ಒಲವು ಕಾವ್ಯಕ್ಕಿಂತ ಶಾಸ್ತ್ರದ ಕಡೆಗೆ, ಪ್ರತಿಭೆಗಿಂತ ಪಾಂಡಿತ್ಯದತ್ತ ಹರಿದಿದೆ. ಪ್ರತಿಭಾಪೂರ್ಣ ಪಾಂಡಿತ್ಯ ವ್ಯಾಖ್ಯಾನವೇ ಇಲ್ಲಿಯ ವಿದ್ವಾಂಸರ ಗುರಿಯಾಗಿತ್ತು. ಇಲ್ಲಿ ಸಂಸ್ಕೃತ ಮತ್ತು ಕನ್ನಡ-ಈ ಎರಡು ಭಾಷೆಗಳ ಆಳವಾದ ಅಧ್ಯಯನ ನಡೆದಿದೆ. ಅಧ್ಯಯನದ ಜೊತೆಗೆ ಅನುಷ್ಠಾನಕ್ಕೂ ಮಹತ್ವ ಸಂದಿದೆ. ಸಾಹಿತ್ಯ ರಚನೆಯಲ್ಲಿ ವೀರಶೈವರದ್ದೇ ಸಿಂಹಪಾಲು. ಕೀರ್ತನೆಗಳು ಮತ್ತು ಇತರ ಧರ್ಮಗ್ರಂಥಗಳು ರಚನೆಯಾಗಿದ್ದರೂ ಅಷ್ಟೇನೂ ಹೇಳಿಕೊಳ್ಳುವಂತಿಲ್ಲ. ಕಲ್ಲೂರಿನ ಸಂತ ಕವಿ ರುದ್ರಮುನಿಸ್ವಾಮಿಯ ಅಪ್ರಕಟಿತ ಕೀರ್ತನೆಗಳು ವಿದ್ವಾಂಸರ ಗಮನ ಸೆಳೆಯುತ್ತವೆ. ಅವು ಸಾಂಸ್ಕೃತಿಕ ಅಧ್ಯಯನ ದೃಷ್ಟಿಯಿಂದ ಬಹು ಮುಖ್ಯವಾದವು. ಅವನಿಂದ ಸ್ವರವಚನಗಳೂ ರಚನೆಯಾಗಿರುವಂತೆ ತಿಳಿದುಬರುತ್ತದೆ.

ಅಮರಗೊಂಡದಲ್ಲಿ ವೀರಶೈವ ತಾಂತ್ರಿಕ ಗ್ರಂಥಗಳ ಅಧ್ಯಯನವೂ ನಡೆದಿರುವುದೊಂದು

ವಿಶೇಷ. ಮಲ್ಲಣನ ವಾತುಲ ತಂತ್ರದ ಟೀಕೆ ದೊರೆತರೆ ಹೆಚ್ಚು ವಿಷಯಗಳು ಬಹಿರಂಗವಾಗುತ್ತವೆ. ಮಲ್ಲಣಾರ್ಯನ ವೀರಶೈವ ಪುರಾಣದ ಚಿದಂಬರೋದ್ಧರಣೆಯ ವಿವರಣೆಗಳಿಂದ ತಂತ್ರ ಅಧ್ಯಯನ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ವೀರಶೈವ ಸಾಹಿತ್ಯದ ಅಧ್ಯಯನಕ್ಕೆ ಒಂದು ಹೊಸ ಆಯಾಮ ದೊರಕುತ್ತದೆ. ಬಸವಣ್ಣನವರ ಸಮಕಾಲೀನ ವಚನಕಾರ ಪುರದ ನಾಗಣ್ಣನ ಹದಿಮೂರು ವಚನಗಳು ದೊರೆತಿವೆ. ಅವುಗಳಲ್ಲಿ ವಚನಗಳ ಸತ್ವ (ಬನಿ) ಮತ್ತು ಬಂಧದಲ್ಲಿ ಅಸಲಿತನವಿದೆ. ಅವನು ಲಿಂಗ ಭಿನ್ನವಾದರೆ ಪ್ರಾಣ ಬಿಡುವುದು ಎಂದು ಹೇಳಿ ಮತ್ತೊಮ್ಮೆ ಜೀವಕ್ಕೆ ಆಸೆ ಪಟ್ಟು ಲಿಂಗ ಧರಿಸಿದರೆ "ಶುನಿಯ ಬಸುರಲ್ಲಿ ಬಂದು ಅನೇಕ ಕಾಲ ನಾಯಕ ನರಕದಲ್ಲಿರ್ಪನಯ್ಯ" ಎಂದು ಸಾರುವ ವೀರವ್ರತಿ. ಆದರೆ ಅವನ ವಚನಗಳಲ್ಲಿ ಷಟ್‌ಸ್ಥಲ ಸಾಧನೆಯ ಹಂತದ ಅನುಭವವಿದೆ ಮತ್ತು ಅಂಗದಲ್ಲಿಯೇ ಲಿಂಗ ಸಾಮರಸ್ಯ ಸಾಧಿಸಿದ ಅನುಭಾವವೂ ಇದೆ:

> **ಅನಿರ್ವಾಚ್ಯವೆ ವಾಚ್ಯವಾಗಿ ಭಾವಿಸಲಿಲ್ಲದ ಬಯಲು**
> **ಅಗಮ್ಯವೆ ಮನವಾಗಿ ಆನಂದದೊಳಿಪ್ಪ ನೋಡಾ**
> **ಮಹಾಮಹಿಮ ಅಮರಗುಂಡದ ಮಲ್ಲಿಕಾರ್ಜುನ**
> **ನಿರಾಳ ನಿಃಶೂನ್ಯವೆ ತನುವಾಗಿ.**

ಪುರದ ನಾಗಣ್ಣನ ವಚನಗಳ 'ಕಾಯಪಟ್ಟಣ'ದ ರೂಪಕದಲ್ಲಿನ ಸಹಜ ಸಾಧನೆಯ ಚಿತ್ರ ಚೆನ್ನಾಗಿದೆ ಮತ್ತು ವಚನಗಳಲ್ಲಿ ಅದೇ ಉತ್ತಮವಾದದ್ದು, ಜೀವ ದ್ವಂದ್ವಕ್ಕೆ ಸಿಕ್ಕಿದುದನ್ನು "ತಲೆಯೆರಡರ ಪಕ್ಷಿ ವಿಷ ನಿರ್ವಿಷವ ಮೆಲಿದಂತಾಯಿತ್ತಯ್ಯ" ಎನ್ನುವ ಉಪಮೆಯೂ ಸುಂದರವಾಗಿದೆ. ಇವನ ಅನಂತರ ಬಂದ ಅಮರ ಗುಂಡದ ಮಲ್ಲಿಕಾರ್ಜುನ ತಂದೆಯ ಎರಡು ವಚನಗಳೂ ದೊರಕಿವೆ. ಒಟ್ಟಿನಲ್ಲಿ ಈ ನೆಲದಲ್ಲಿಯೂ ವಚನದ ಸೆಲೆಯ ಜಲ ಕಣ್ಣಿಕ್ಕಿದುದು ಸಾಮಾನ್ಯ ಜನರ ಹೃದಯ ಸ್ಪಂದನಕ್ಕೆ ಸಾಕ್ಷಿಯಾಗಿದೆ. ಅಮರಗೊಂಡ ಮಲ್ಲಿಕಾರ್ಜುನ ಮತ್ತು ಚನ್ನಬಸವೇಶ್ವರರಂಥ (ಗುಬ್ಬಿಯಪ್ಪ) ಅನುಭಾವಿಗಳೂ ಅದೇ ಸಂಪ್ರದಾಯದಲ್ಲಿ ಉಸಿರಾಡಿದ ನೆಲ. ಕನ್ನಡ ಸಾಹಿತ್ಯ ಬೆಳವಣಿಗೆಯ ದೃಷ್ಟಿಯಿಂದ ಅಷ್ಟೇನೂ ಪ್ರಮುಖ ಪಾತ್ರ ವಹಿಸದಿದ್ದರೂ, ಈ ತಾಲ್ಲೂಕಿನ ಸಾಹಿತ್ಯ, ವೀರಶೈವ ಸಾಹಿತ್ಯ ಇತಿಹಾಸ ನಿರ್ಮಾಣಕ್ಕೆ ಅಪೂರ್ವವಾದ ಬಹುಮುಖ ಸೇವೆ ಸಲ್ಲಿಸಿದೆ. ಅಮರಗೊಂಡದ ವೀರಶೈವ ಸಾಹಿತ್ಯ ಚಿಂತನೆ ತಮಿಳುನಾಡಿನ ಪುರಾತನರ ಶೈವಭಕ್ತಿಯ ಸಿದ್ಧಾಂತ ಕಡೆ ಒಲಿದಂತೆ ತೋರುತ್ತದೆ. ವೈದಿಕ ವಿದ್ವತ್ತಿಗೆ ಪ್ರತಿಸ್ಪರ್ಧಿಯಾಗಿ ವೀರಶೈವ ವಿದ್ವತ್ತನ್ನು ಮೆರೆವ ಸ್ಪರ್ಧಾತ್ಮಕ ಮನೋಭಾವವೂ ವ್ಯಕ್ತವಾಗಿದೆ. ವೀರಶೈವ ಪುರಾತನರು ಮತ್ತು ನೂತನರ ಚಿಂತನೆಯ ಕೂಡಲ ಸಂಗಮವೇ ಅಮರಗೊಂಡ. ಇಲ್ಲಿ ವೀರಶೈವ ಸಿದ್ಧಾಂತ ಮತ್ತು ಸ್ವಾನುಭವ ಸಮರಸಗೊಂಡಿದೆ.

ರಾಜಕೀಯ ಮತ್ತು ಆರ್ಥಿಕ ಅಭಿವೃದ್ಧಿಗೆ ಬರಡಾದ ಈ ನೆಲ, ಧರ್ಮ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗಳಿಗೆ ಫಲವತ್ತಾದ ಭೂಮಿ. ಗುಬ್ಬಿಯ ಸೋ. ಮುರಿಗಾರಾಧ್ಯರು

ಕನ್ನಡದಲ್ಲಿ ಪ್ರಥಮ ಕಾದಂಬರಿ 'ಶೃಂಗಾರ ಚಾತುರ್ಯೋಲ್ಲಾಸಿನಿ' ರಚಿಸಿ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೊಸ ದಾಖಲೆ ಸ್ಥಾಪಿಸಿದರು. ಅದರಲ್ಲಿ ಆಧುನಿಕ ಕಾದಂಬರಿಯ ಲಕ್ಷಣಗಳನ್ನು ಗುರುತಿಸಬಹುದು. ಮುರಿಗಾರಾಧ್ಯರು ಬಹುಮುಖ ಪ್ರತಿಭೆ ಇದ್ದವರು. ಅವರ ಸಂಪಾದಕತ್ವದಲ್ಲಿ 'ಮಹಿಳಾ ಸಖಿ' ಎಂಬ ಮಹಿಳಾ ಪತ್ರಿಕೆ ಹೊರಬಿದ್ದು ಇತಿಹಾಸ ಸೃಷ್ಟಿಸಿತು. ಅವರು ಸಾಹಿತ್ಯೇತರ ಕೃತಿಗಳನ್ನು ರಚಿಸಿ ಶಿಕ್ಷಣ ಕ್ಷೇತ್ರಕ್ಕೂ ಸೇವೆ ಸಲ್ಲಿಸಿದ್ದಾರೆ. ನಿಘಂಟಿಗೆ ಕೆ.ವಿ. ರಾಘವಾಚಾರ್ಯರು, ಹೊಸಗನ್ನಡ ಧಾರ್ಮಿಕ ಗದ್ಯಕ್ಕೆ ಹೊಸಕೆರೆ ಚಿದಂಬರಯ್ಯನವರು, ಸಂಸ್ಕೃತ ಮತ್ತು ತಮಿಳಿನಿಂದ ಕನ್ನಡ ಭಾಷಾಂತರಕ್ಕೆ ಕೆ. ದೊರೆಸ್ವಾಮಿ ಅಯ್ಯಂಗಾರ್ ಅಪೂರ್ವ ಸೇವೆ ಸಲ್ಲಿಸಿದ್ದಾರೆ. ಈ ತಾಲ್ಲೂಕಿನವರಿಂದ ರಚಿತವಾಗಿರುವ ಸಾಹಿತ್ಯೇತರ ಕೃತಿಗಳ ಅಧ್ಯಯನ ನನಗೆ ಸಾಧ್ಯವಾಗದುದಕ್ಕೆ ವಿಷಾದಿಸುತ್ತೇನೆ. ಸಾಹಿತ್ಯ ಕೃತಿಗಳ ಅಧ್ಯಯನದ ಜೊತೆಗೆ, ವಿಜ್ಞಾನ ಮತ್ತು ಮಾನವಿಕ ಕೃತಿಗಳ ಅಧ್ಯಯನವೂ ಅಷ್ಟೇ ಮುಖ್ಯ ಎಂದು ತಿಳಿದಿದ್ದೇನೆ.

ನಾಟಕ ರತ್ನ ಗುಬ್ಬಿ ವೀರಣ್ಣನವರು ಗುಬ್ಬಿ ತಾಲ್ಲೂಕಿನ ಸಾಂಸ್ಕೃತಿಕ ಗಡಿಯನ್ನು ವಿಸ್ತರಿಸಿ, ವಿಶಾಲಗೊಳಿಸಿದರು. ಕರ್ನಾಟಕದ ನಾಟಕದ ಇತಿಹಾಸವೆಂದರೆ ಗುಬ್ಬಿ ಕಂಪನಿಯ ಇತಿಹಾಸವೇ ಆಗಿದೆ. ಗುಬ್ಬಿ ಕಂಪನಿ ನಾಟಕಕಾರರನ್ನು ಸೃಷ್ಟಿಸಿತು, ನಟರನ್ನು ತಯಾರಿಸಿತು, ನಾಟಕ ನಿರ್ದೇಶಕರಿಗೆ ಶಿಕ್ಷಣ ದೊರಕಿಸಿತು, ನೃತ್ಯ ಸಂಗೀತ ಚಿತ್ರಕಲೆ ಮುಂತಾದ ಕಲಾವಿದರನ್ನು ಗುರುತಿಸಿತು. ಅಲ್ಲದೆ ಸಿನಿಮಾ ನಟರ ಪೂರ್ವಸಿದ್ಧತೆಯ 'ರಿಹರ್ಸಲ್' ನಡೆಸುವ ತವರೂ ಆಯಿತು. ಗುಬ್ಬಿ ವೀರಣ್ಣನವರು ಹುಟ್ಟು ಕಲಾವಿದರು, ಪ್ರತಿಭಾವಂತರು ಮತ್ತು ಹೊಸ ಹೊಸ ನಾಟಕ ತಂತ್ರಗಳ ಪ್ರಯೋಗಶೀಲರು. 'ಕಲೆಯೇ ಕಾಯಕ' ಎಂಬ ಕೃತಿ ರಚಿಸಿದ ಸೃಜನಶೀಲರು. ಇಂದಿನ ಸಮೂಹ ಮಾಧ್ಯಮಕ್ಕಿಂತಲೂ ಹೆಚ್ಚು ಯಶಸ್ವಿಯಾಗಿ ಮತ್ತು ಸಮರ್ಥವಾಗಿ ನಾಟಕ ಮಾಧ್ಯಮದಿಂದ ಸಾಮಾನ್ಯ ಜನರನ್ನು ತಲುಪಿ, ಅವರ ಅಭಿರುಚಿಗೆ ಸ್ಪಂದಿಸಿದವರು. ಅವರ ಶತಮಾನೋತ್ಸವ ಅದ್ದೂರಿಯಾಗಿ ಗುಬ್ಬಿಯಲ್ಲಿ ಆಚರಿಸಬೇಕು. ವೀರಣ್ಣನವರ ಸ್ಮರಣಾರ್ಥವಾಗಿ ಶಾಶ್ವತ ನಾಟಕ ಕಾರ್ಯಾಗಾರವೊಂದು ಗುಬ್ಬಿಯಲ್ಲಿ ಸ್ಥಾಪಿತವಾಗಬೇಕು. ಕರ್ನಾಟಕದ ಮೂಲೆ ಮೂಲೆಯಿಂದ ಬಂದು ಇಲ್ಲಿ ನಟರು ತರಬೇತಿ ಹೊಂದಿ, ಹೊಸ ಹೊಸ ನಾಟಕಗಳು ಪ್ರಯೋಗವಾಗಬೇಕು.

ಅಕ್ಕ ಪಕ್ಕದವರು, ನೆರೆಹೊರೆಯವರು, ಈ ತಾಲ್ಲೂಕನ್ನು ಸುತ್ತಿ ಬಂದವರು, ಇದೊಂದು ಅತ್ಯಂತ ಹಿಂದುಳಿದ ಪ್ರದೇಶ ಎಂದು ಮನಗಾಣುವುದರಲ್ಲಿ ಸಂಶಯವೇ ಇಲ್ಲ. ಇಲ್ಲಿಯ ಬದುಕು ಜನರಿಗೆ ನರಕ. ಮಲೆನಾಡು ಮತ್ತು ತಮಿಳುನಾಡಿಗೆ ನಡುವೆ ಅಡಿಕೆಯ ವ್ಯಾಪಾರದ ಮುಖ್ಯ ಕೇಂದ್ರವಾಗಿದ್ದ ಗುಬ್ಬಿ ನಗರದಲ್ಲಿಯೇ ಪಾಳು ಬಿದ್ದ ಮನೆಗಳು. ಶ್ರೀರಾಮ ತಂಗಿದ್ದನೆಂದು ಹೇಳುವ, ರಾಮಾನುಜ ಸಂಪ್ರದಾಯದವರ ಪಂಚಗ್ರಾಮಗಳಲ್ಲಿ ಒಂದಾದ, ಒಮ್ಮೆ ತಾಲ್ಲೂಕು ಕೇಂದ್ರವಾಗಿ ಮೆರೆದ ಕಡಬದಲ್ಲಿ ಇಂದು ಹಾಳು ಹಾಳು ಸುರಿಯುತ್ತಿದೆ. ರೇಷ್ಮೆ ಕಸುಬಿನ ಕೈಗಾರಿಕಾ ಕೇಂದ್ರ ಕಲ್ಲೂರಿನ ಬೀದಿ ಬೀದಿಗಳಲ್ಲಿ

ಪಾರ್ಥೇನಿಯಂ ಬೆಳೆದು ನಿಂತಿದೆ. ದಕ್ಷಿಣ ಐಹೊಳೆ ಎಂದೇ ಪ್ರಸಿದ್ಧವಾದ ನಿಟ್ಟೂರು ಇಂದು ನಿಟ್ಟುಸಿರಿಡುತ್ತಿದೆ. ಮೂಗನಾಯಕನ ಕೋಟೆಯ ಹಾಳುವೇರಿಯಲ್ಲಿ ಬೂದಿ ಸುರಿಯುತ್ತಿದೆ. ಧಾರ್ಮಿಕ ಕ್ಷೇತ್ರ ಚೇಳೂರು ಮತ್ತು ಇತಿಹಾಸ ಪ್ರಸಿದ್ಧ ಬಿದಿರೆಗಳ ಸ್ಥಿತಿಗತಿಗಳೇನೂ ಉತ್ತಮವಾಗಿಲ್ಲ.

ಪುರಾಣ, ಇತಿಹಾಸ, ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗಳಲ್ಲಿ ವೈಭವದಿಂದ ಈ ತಾಲ್ಲೂಕು ಮೆರೆದಿತ್ತು. ಅದು ವರ್ತಮಾನವಾಗಲಿಲ್ಲ, ಭವಿಷ್ಯವಾಗಿಯೂ ರೂಪುಗೊಳ್ಳುವ ಸೂಚನೆಯೂ ಇಲ್ಲ. ಶಿಲಾಯುಗದ ಪಳೆಯುಳಿಕೆ ಮತ್ತು ಪ್ರಾಕ್ ಇತಿಹಾಸ ಕಂಡ ನೆಲಕ್ಕೆ ಇಂಥ ದುರ್ಗತಿಯೆ? ಒಮ್ಮೆ ವ್ಯಾಪಾರ ಕೇಂದ್ರವಾಗಿ ಆರ್ಥಿಕವಾಗಿ ಗರಿಗಟ್ಟಿಕೊಂಡಿದ್ದ ಈ ತಾಲ್ಲೂಕಿಗೆ ಅವನತಿ ಹೇಗಾಯಿತು? ಬೇಸಾಯಕ್ಕೆ ಫಲವತ್ತಾದ ಭೂಮಿ ಇಲ್ಲ, ನೀರಿನ ಆಸರೆ ಇಲ್ಲ, ಅರಣ್ಯ ಮತ್ತು ಖನಿಜ ಸಂಪತ್ತಿಲ್ಲ, ಅಪರೂಪದ ಪ್ರಾಣಿ ಮತ್ತು ಪಕ್ಷಿ ಸಂಕುಲವಿಲ್ಲ, ಯಾವ ಬೃಹತ್ ಕೈಗಾರಿಕೆಯೂ ಅಸ್ತಿತ್ವಕ್ಕೆ ಬರಲಿಲ್ಲ. ಇದ್ದ ಬದ್ದ ಪ್ರಕೃತಿ ಸಂಪತ್ತನ್ನ ಕ್ರೋಢೀಕರಿಸಿಕೊಂಡು ತಲೆ ಎತ್ತಿದ ಸಣ್ಣಪುಟ್ಟ ಕೈಗಾರಿಕೆಗಳೂ ಇಲ್ಲ. ಕಣ್ಣಾ ಮುಚ್ಚಾಲೆಯಾಡುವ ವಿದ್ಯುತ್ತಿನಿಂದ ರೈತರು ಮತ್ತು ಕೈಗಾರಿಕೋದ್ಯಮಿಗಳು ಕಂಗಾಲಾಗಿದ್ದಾರೆ. ಪ್ರಕೃತಿ ಸಂಪತ್ತಿನ ಜೊತೆಗೆ ಮನುಷ್ಯರ ಭ್ರಷ್ಟತೆ, ಕುತಂತ್ರಗಳೂ ಸೇರಿವೆ. ಇವುಗಳ ಮುಂದೆ ದೈವವೂ ನಿಸ್ಸಹಾಯಕ!

ಈ ತಾಲ್ಲೂಕಿನಲ್ಲಿ ಶಿಂಷಾ ನದಿ ಹರಿಯುತ್ತಿದೆ. ಕರ್ನಾಟಕ ಭೂಪಟಗಳಲ್ಲಿಯೂ ಅದರ ಗೆರೆಯ ಗುರುತಿದೆ. ಅದರ ವಿಷಯವಾಗಿ ಮೇಷ್ಟು ಪಾಠ ಹೇಳಿದರೆ ಹುಡುಗರು ನಂಬುವುದಿಲ್ಲ. ಶಿಂಷಾ ಎಲ್ಲಿ ಹರಿಯುತ್ತದೆ ಎಂದು ಪ್ರಶ್ನಿಸುತ್ತಾರೆ. ಮಳೆಗಾಲದಲ್ಲಿಯೂ ತುಂಬದ ಗುಬ್ಬಿ, ಕಡಬ ಮತ್ತು ಕಲ್ಲೂರಿನ ಕೆರೆಗಳೇ ಶಿಂಷಾ ಎಂದರಂತೂ ನಂಬುವುದೇ ಇಲ್ಲ. ಹೇಮಾವತಿ ಯೋಜನೆ ತಾಲ್ಲೂಕಿನ ಜನರ ಮುಂದೆ ಬಂಗಾರದ ಮಾಯಾ ಜಿಂಕೆಯಾಗಿ ಸುಳಿದಾಡುತ್ತಿದೆ. ಅದರಿಂದ ಸಂಪತ್ತಿನ ಹೊಳೆಯೇ ಹರಿಯುವುದೆಂದು ಕಣ್ಣು, ಬಾಯಿ ತೆರೆದು, ಕಿವಿ ನಿಮಿರಿಸಿ, ಕುಳಿತಲ್ಲಿಯೇ ಕೆಂಪು ಮತ್ತು ಕೆಬ್ಬೆ ಮಣ್ಣಿನ ನೆಲದಲ್ಲಿ ಎದೆಯುದ್ದ ಬೆಳೆದು ನಿಂತ ಫಸಲಿನ ಕನಸು ಕಾಣುತ್ತಿದ್ದರು. ಅಷ್ಟರಲ್ಲಿ ಹೇಮಾವತಿ ಕೆಲಸ ಕಾರ್ಯದಲ್ಲಿ ತಾಂತ್ರಿಕ ಅಡಚಣೆ, ಹಣದ ಕೊರತೆ, ಜಾತಿ ಮತ್ತು ರಾಜಕೀಯದ ಕುತಂತ್ರದ ಅಂಟು ರೋಗ ಬಡಿದು ಚಿಗುರಿದ ಆಸೆಗಳು ಕಮರುತ್ತಿವೆ. ತಾಲ್ಲೂಕಿನ ಗಡಿಯಲ್ಲಿಯೇ ಹೇಮಾವತಿ ಮುನಿದು ನಿಂತು ಮೈದುಂಬಿದ್ದಾಳೆ. ದಾಯಾದಿಗಳ ಪರಸ್ಪರ ಕಾದಾಟದಲ್ಲಿ ಹೇಮಾವತಿಗೆ ನಡೆ ಮುಡಿ ಹಾಸಿ ಈ ನೆಲಕ್ಕೆ ಕರೆತರುವ ಗಂಡೆದೆಯವರಾದರೂ ಯಾರಿದ್ದಾರೆ?

ಪ್ರಕೃತಿ ಸಂಪತ್ತಿಲ್ಲದ, ರಾಜಕೀಯ ಬೆಂಬಲವಿಲ್ಲದ, ಹೋರಾಟಕ್ಕೆ ಸಂಘಟನೆಯ ವೇದಿಕೆ ಇಲ್ಲದ, ದನಿಸತ್ತು ಬೆನ್ನೆಲುಬಿಲ್ಲದ ನಿಸ್ಸಹಾಯಕ ಜನರ ನೆರವಿಗೆ ಯಾರಿದ್ದಾರೆ? ಈ ಪರಿಸರಕ್ಕನುಗುಣವಾದ, ಜನರ ಅಭಿವೃದ್ಧಿಗೆ ಪೂರಕವಾಗುವ ಶಾಶ್ವತ ಯೋಜನೆಗಳನ್ನು ರೂಪಿಸುವ ಆಡಳಿತ ಬರುವುದಾದರೂ ಯಾವಾಗ? ಈ ನೆಲದ ಅಭಿವೃದ್ಧಿಗೆ ಸುರಿದ ಹಣದ

ಲೆಕ್ಕವೇನೂ ಸರ್ಕಾರಿ ಖಜಾನೆಯಲ್ಲಿದೆ. ಆದರೆ ಮಳೆಗಾಲದಲ್ಲಿ ರಸ್ತೆ ಬದಿಗೆ ಹರಡುವ ಮಣ್ಣು ಕೊಚ್ಚಿ ಹೋಗಿ ಗುಂಡಿಗೊಟರುಗಳೇ ಮತ್ತೆ ಎದ್ದು ಕಾಣುವ ಸ್ಥಿತಿ ಉಂಟಾಗಿದೆ. ಕೆಲವರು ಬೇಳೂರಿನ ಕಲ್ಲು ಬಸವ ಎದ್ದು ಗುಟುರಿಕೆ ಹಾಕಿದರೆ ಮಾತ್ರ ಎಲ್ಲಕ್ಕೂ ಪರಿಹಾರ ಎಂದರೆ, ಮತ್ತೆ ಕೆಲವರು ಆ ಮಾತಿಗೇ ಬೆಚ್ಚಿ ಬಿದ್ದು ಭಯ ಚಕಿತರಾಗುತ್ತಾರೆ. ನಾನೇನೂ ಈ ತಾಲ್ಲೂಕಿನ ನಿರಾಶಾದಾಯಕ ಚಿತ್ರ ಕೊಟ್ಟು ನರಕ ದರ್ಶನ ಮಾಡಿಸುತ್ತಿಲ್ಲ. ಇದು ಯಥಾವತ್ತಾದುದು. ಹಳ್ಳಿ ಹಳ್ಳಿ ಸುತ್ತಿದರೆ ಕಣ್ಣಿಗೆ ಕಳ್ಳಿ ಕಡ್ಡಿ ಕೈಕಾಲುಗಳು, ಬತ್ತಿದ ಮುಖ, ಗುಳಿ ಬಿದ್ದ ಕಣ್ಣುಗಳು, ಬೀಡಿ-ಬೆಂಕಿ ಕಡ್ಡಿಗೂ, ಕಾಸಿಗೂ ಗೋಗರೆಯುವ ಬಾಯಿಗಳು, ನಿರ್ಭಾವದ, ನಡೆದಾಡುವ ಜಡ-ಚೇತನಗಳು-ಪ್ರಾಥಮಿಕ ಅಗತ್ಯಗಳನ್ನು ಕೊಳ್ಳುವ ಶಕ್ತಿಯೂ ಅವರಿಗಿಲ್ಲ. ಇಂಥ ಸಾಮೂಹಿಕ ಘೋರ ಬಡತನವನ್ನು ಹಣೆ ಬರಹ, ಕರ್ಮಸಿದ್ಧಾಂತ, ವಿಧಿ, ಪುನರ್ಜನ್ಮಗಳ ತಲೆಗೆ ಕಟ್ಟಿ, ಅವರ ಭವಿಷ್ಯವನ್ನು ದೇವರ ಅನುಗ್ರಹಕ್ಕೆ ಒಪ್ಪಿಸಿ ಕೈಕಟ್ಟಿ ಕುಳಿತುಕೊಳ್ಳುವುದು ಸಾಧುವಲ್ಲ. ಪ್ರತಿಷ್ಠಿತ ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಅಕ್ಷರಸ್ಥ ವರ್ಗ ಆರ್ಥಿಕವಾಗಿ ಗರಿಗಟ್ಟಿಕೊಂಡು, ಜಾನಪದ ಸಾಂಸ್ಕೃತಿಕ ಮೌಲ್ಯದಲ್ಲಿ ಬದುಕುತ್ತಿರುವ ಈ ಬಹು ಸಂಸ್ಕೃತಿಯ ಅನಕ್ಷರಸ್ಥ ವರ್ಗ ಆರ್ಥಿಕವಾಗಿ ದಿನೇ ದಿನೇ ದುಃಸ್ಥಿತಿಗೆ ತಲುಪುತ್ತಿರುವುದಾದರೂ ಏತಕ್ಕೆ ಎಂದು ಚಿಂತಿಸಿದರೆ ಅದರ ಮೂಲ ತಿಳಿಯುವುದು ಅಸಾಧ್ಯವೇನೂ ಅಲ್ಲ. ಸಾಕ್ಷರತೆ ಆರ್ಥಿಕ ಅಭಿವೃದ್ಧಿಗೂ, ಅನಕ್ಷರತೆ ಬಡತನಕ್ಕೂ ದಾರಿಯಾಗುತ್ತದೆ ಎಂ ಸರಳ ತೀರ್ಮಾನಕ್ಕೂ ಬರುವಂತಿಲ್ಲ. ಒಂದು ಕ್ಷಣ ಅವರೊಂದಿಗೆ ನಿಂತು ಮಾತನಾಡಿದರೆ ಹರಿತವಾದ ಈಟಿಯಂತೆ ಬರುವ ಬಡತನದ ಅನುಭವದ ಮಾತುಗಳು ಯಾರನ್ನಾದರೂ ದಂಗು ಬಡಿಸುತ್ತವೆ. ಆರ್ಥಿಕವಾಗಿ ಗರಿಗಟ್ಟಿಕೊಂಡವರ ಅನಕ್ಷರಸ್ಥ ವರ್ಗದ ವಿರುದ್ಧದ ಮಾತಿನ ಬಾಣಗಳೂ ಅಷ್ಟೇ ಹರಿತವಾಗಿರುತ್ತವೆ. ಆಗ ಶೋಷಿತ ಶೋಷಕನಾಗುವ ವ್ಯವಸ್ಥೆ ನಮ್ಮದು ಎಂಬುದು ಯಾರಿಗಾದರೂ ಸ್ಪಷ್ಟವಾಗುತ್ತದೆ. ಹೀಗೆ ಹೇಳಿದ ಮಾತ್ರಕ್ಕೆ ದಲಿತ ಅಥವಾ ಬಂಡಾಯ ಸಾಹಿತ್ಯದ ಮಾತುಗಳಾಗುವುದಿಲ್ಲ. ನವ್ಯ ಮತ್ತು ನವೋದಯ, ಪುರಾಣ ಮತ್ತು ಇತಿಹಾಸ ಯುಗದಿಂದಲೂ ಕಂಡು ಬಂದಿರುವುದು ಸಾಮಾಜಿಕ ಸ್ಥಾಯಿ ಚಿತ್ರ. ರಾಜರ, ಶ್ರೀಮಂತರ ಮತ್ತು ವಿದ್ವಾಂಸರ ಶ್ರೀಮಂತಿಕೆಯ ಬಡತನ ಮತ್ತು ಕಷ್ಟ ಸಾಹಿತ್ಯದಲ್ಲಿ ಪ್ರಾಚೀನ ಕಾಲದಿಂದಲೂ ವೈಭವೀಕರಿಸಲ್ಪಟ್ಟಿತು. ಆದರೆ ಬಡವರ ಬಡತನ ಮಾತ್ರ ಶಾಶ್ವತವಾಗಿರುವಂತೆ "ಮನೆ ನೋಡಾ ಬಡವರು, ಮನ ನೋಡಾ ಸಂಪನ್ನರು" ಎಂದು ಭಕ್ತಿ ದೀಕ್ಷೆ ಕೊಟ್ಟಿತು ಸಾಹಿತ್ಯ. ಶ್ರೀಮಂತರ ದುರಾಸೆಯನ್ನೇ ಬಡತನವೆಂದರೆ, ಬಡವರ ಭಕ್ತಿಯ ಮನಸ್ಸನ್ನೇ ಸಂಪತ್ತು ಎಂದರೆ ಸಾಹಿತ್ಯದ ಗುರಿ ಸಾಧನೆಯಾಗುತ್ತದೆಯೇ? ಸಮಸ್ಯೆಗಳು ಬಗೆಹರಿಯುತ್ತವೆಯೆ? ಅನಕ್ಷರಸ್ಥ ವರ್ಗದ ಅಗತ್ಯಗಳಿಗೆ ತಕ್ಕಂತ ಸಂವೇದನೆಗಳಿಗೆ ಸಾಹಿತ್ಯ ಸ್ಪಂದಿಸಬೇಡವೆ? 'ಎಷ್ಟು ಕಾಡುತ್ತೀರಿ ಕಾಡವ್ವ, ನೀ ಕಾಡಿದಷ್ಟೂ ನನಗೆ ಪಾಡವ್ವ' ಎಂದು ಹಾಡು ಕಟ್ಟಿ ಸ್ವಯಂ ಹಿಂಸೆಯ ದೇಹ ದಂಡನೆಗೆ ಜನರನ್ನು ಸಿದ್ಧಗೊಳಿಸಿದರೆ ಸಾಹಿತ್ಯ ಸಾರ್ಥಕವಾಗುವುದೆ? ಸಹನೆ ಮೀರಿ ಸ್ಫೋಟಗೊಂಡರೆ ಪರಿಸ್ಥಿತಿಯ ನಿಯಂತ್ರಣ ಸಾಧ್ಯವೆ? ಸಾಹಿತ್ಯ ಮತ್ತು ಜೀವನ ಸಂಬಂಧಗಳು ಸ್ಪಷ್ಟ ಮಾತುಗಳಲ್ಲಿ ಖಚಿತವಾಗುವ ಅಗತ್ಯವಿಲ್ಲವೆ? ಸಾಹಿತ್ಯ ಬದುಕಿನ

ಸಮಸ್ಯೆಗಳನ್ನು ಹೇಗೆ ಎದುರಿಸುತ್ತದೆ? ಬದುಕಿನ ಸವಾಲುಗಳಿಗೆ ಮುಖಾ ಮುಖಿಯಾಗಿ ಹೇಗೆ ಸ್ಪಂದಿಸುತ್ತದೆ ಎಂಬುದು ಇಂದು ಮುಖ್ಯವಾಗಿದೆ. ತೋಟದ ಹೂವನ್ನು ತಲೆ ತುಂಬ ಮುಡಿದು ಮನೆಯ ಹಂಬಲವನ್ನು ಮರೆವ ಕಾಲ ಇದಲ್ಲ. 'ಕನಸೊಡೆದೆದ್ದು ಇನ್ನೆಲ್ಲಿಯ ನಿದ್ದೆ' ಎಂದು ನೆಮ್ಮದಿಗೆ ಭಂಗ ಬಂದು ತಿರುಗುವ ಕಾಲವೂ ಅಲ್ಲ. ಸಾಹಿತ್ಯದ ಹೊಸ ಧೋರಣೆಗೂ ಊರುಗೋಲುಗಳನ್ನು ಹುಡುಕಬೇಕಿದೆ. ಭಾವನೆಯ ಗುಂಗಿನ ಮತ್ತು ಕನಸಿನ ಅವಾಸ್ತವ ಚಿಂತನೆಗಳಿಗಿಂತ, ವಾಸ್ತವಿಕ ಚಿಂತನೆಗಳನ್ನು ಸಾಹಿತ್ಯ ಇಂದು ನಮಗೆ ಕಟ್ಟಿಕೊಡಬೇಕಿದೆ. ಮೆರಿಟ್ ಮತ್ತು ಪೇಮೆಂಟ್ ಸೀಟುಗಳು, ಕಾದಿರಿಸುವ ಮತ್ತು ಕಾದಿರಿಸದ ಉದ್ಯೋಗಗಳ, ಸೌಲಭ್ಯಕ್ಕೆ ಅರ್ಹರು ಮತ್ತು ಅನರ್ಹರ ಪಟ್ಟಿ, ಮುಂದುವರಿದವರು ಮತ್ತು ಹಿಂದುಳಿದವರ ರಾಜಕಾರಣ, ಕನ್ನಡ ಮತ್ತು ಕನ್ನಡೇತರ ಈ ಎರಡರ ನಡುವೆ ಸಮತೋಲನದ ಕಟ್ಟೆ ಬಿರುಕು ಬಿಟ್ಟಿದೆ. ಸ್ಫೋಟಕ ಪರಿಸ್ಥಿತಿ ಉಂಟಾಗಿದೆ. ಇದಕ್ಕೆ ಸಾಹಿತ್ಯದ ಪ್ರತಿಕ್ರಿಯೆಯಾದರೂ ಏನು?

ಪುರಾಣಗಳು ಮುಗಿದ ಯುಗದಲ್ಲಿಯೂ ಕನ್ನಡದಲ್ಲಿ ಇಂದಿಗೂ ಪುರಾಣಗಳು ಹುಟ್ಟುತ್ತಲೇ ಇವೆ. ಸಾಹಿತ್ಯ ಮತ್ತು ಜನ ಸಾಮಾನ್ಯರ ಅಂತರ ಅಧಿಕಗೊಳ್ಳುವುದಕ್ಕೆ ಇದು ಸಾಕ್ಷಿಯಾಗಿದೆ. ಪಾಶ್ಚಾತ್ಯರಲ್ಲಿ ಪುರಾಣ ಯುಗ ಮುಗಿದಿದೆ. ಅವುಗಳ ಜಾಗದಲ್ಲಿ ಕಾದಂಬರಿಗಳು ಹುಟ್ಟಿವೆ. ಆದರೆ ನಮ್ಮಲ್ಲಿಯಾದರೊ ಪ್ರಾಚೀನ ಪುರಾಣಗಳು ಆಧುನಿಕ ಪುರಾಣಗಳ ಮರಿ ಹಾಕುತ್ತಿವೆ. ಪ್ರಾಚೀನ ಪುರಾಣಗಳಾದರೊ ಜನ ಸಾಮಾನ್ಯರಿಗೆ ಅರಿವಾಗುವಂತೆ ಮೂರ್ತ ಸ್ವರೂಪದಲ್ಲಿ ರಚನೆಯಾದವು. ಆಧುನಿಕ ಪುರಾಣಗಳು ಅಮೂರ್ತ ಸ್ವರೂಪದಲ್ಲಿ ಮಹಾ ಕಾವ್ಯಗಳಾಗಿ ಜನರಿಂದ ದೂರ ಸರಿದಿವೆ. ವಿಚಾರ ಸಂಕಿರಣಗಳ ವಸ್ತುವಾಗಿ ಮತ್ತು ಪ್ರಶಸ್ತಿಗಳಿಸುತ್ತಾ ಬಂದಿವೆ. ಕಾದಂಬರಿ ಬರೆಯುವುದಕ್ಕೆ ಜನ ಸಾಮಾನ್ಯರ ಜೀವನಾನುಭವ ಮತ್ತು ಸಂಸ್ಕೃತಿಯ ಪರಿಚಯ ಅತ್ಯಗತ್ಯ. ಅದಕ್ಕಾಗಿ ಕ್ಷೇತ್ರಕಾರ್ಯವೂ ಅನಿವಾರ್ಯ. ಇವೆರಡರ ಬಲವಿಲ್ಲದ ಕನ್ನಡ ಬರಹಗಾರರು ಪುರಾಣ ಕಾವ್ಯಗಳ ಮಾಧ್ಯಮಕ್ಕೆ ಶರಣು ಹೋಗುತ್ತಿದ್ದಾರೆ. ಬರಹಗಾರರ ಬರವಣಿಗೆಯ ಸ್ಥಾಯಿ ಸಂಸ್ಕಾರ, ಬದಲಾದ ಬರವಣಿಗೆಯ ಪರಿಸ್ಥಿತಿಯನ್ನು ಎದುರಿಸಲಾಗದ ಮುಖೇಡಿತನದಿಂದ ಅಸ್ತಿತ್ವಕ್ಕಾಗಿ ನಡೆಸುತ್ತಿರುವ ಕಸರತ್ತೂ ಆಗಿದೆ. ಇದಕ್ಕೆ ಸಮೂಹ ಮಾಧ್ಯಮಗಳೂ ಕುಮ್ಮಕ್ಕು ಕೊಡುತ್ತಿವೆ. ಪಾಶ್ಚಾತ್ಯರಲ್ಲಿ ಕಾದಂಬರಿಗಳೇ ಪುರಾಣಗಳು, ಭಾರತದಲ್ಲಿ ಪುರಾಣಗಳೇ ಕಾದಂಬರಿಗಳು. ಪುರಾಣ ಕಾವ್ಯಗಳಲ್ಲಿಯೇ ಭಾರತ ಪುರಾಣಗಳ ಮೂರ್ತ, ಪಾಶ್ಚಾತ್ಯರ ಅಮೂರ್ತದೊಂದಿಗೆ ಕಸಿಯಾಗಿರುತ್ತದೆ. ಮತ್ತು ಪ್ರತಿಷ್ಠಿತ ವರ್ಗದ ಮೌಲ್ಯಗಳು ಸ್ಥಾಯಿಯಾಗಿ ಮುಂದುವರಿಯುತ್ತವೆ.

ಅನಕ್ಷರಸ್ಥ ವರ್ಗಕ್ಕೆ ಕವಿಗಳು ತಮ್ಮ ಧರ್ಮ ತತ್ವಗಳನ್ನು ಸರಳೀಗೊಳಿಸಿ ಪ್ರಚಾರ ಮಾಡಲು ವಚನ, ಕೀರ್ತನೆ ಮತ್ತು ಸಾಂಗತ್ಯವನ್ನು ಕಾವ್ಯ ಮಾಧ್ಯಮವನ್ನಾಗಿ ಬಳಸಿದರು. ಅನಕ್ಷರಸ್ಥರಿಗೆ ಅಕ್ಷರ ಕಲಿಯುವ ಅವಕಾಶಗಳು ಒದಗಿದಾಗ, ಅವರು ಸ್ವತಂತ್ರವಾಗಿ ಆಲೋಚಿಸಲು ತೊಡಗಿದಾಗ ಕಲಿಸುವ ವಿಧಾನ ಮತ್ತು ಸಾಧನ ಸಾಮಗ್ರಿಗಳು ಕ್ಲಿಷ್ಟವಾಗಿ ಅಮೂರ್ತಗೊಂಡವು. ಅದರಿಂದ ಏಕ ಸಂಸ್ಕೃತಿಯ ದ್ವಿಭಾಷೆಯ ವರ್ಗಕ್ಕೆ ಹೆಚ್ಚು

ಅನುಕೂಲವಾಯಿತು. ಅನಕ್ಷರಸ್ಥ ಬಹು ಸಂಸ್ಕೃತಿಯವನು ಕಲಿತು ಬರಹಗಾರನಾಗುವ ಹೊತ್ತಿಗೆ ಏಕ ಸಂಸ್ಕೃತಿಯ ಆರಾಧಕನಾಗಿ, ತನ್ನ ಹುಟ್ಟಿದ ವರ್ಗದ ಸಂಸ್ಕೃತಿಯ ದ್ವೇಷಿಯಾಗಿಬಿಡುತ್ತಿದ್ದನು. ಅಂದರೆ ಬಹು ಸಂಸ್ಕೃತಿಯ ನಿರಾಕರಣೆ ಮತ್ತು ಏಕ ಸಂಸ್ಕೃತಿಯ ಸ್ವೀಕರಣೆ ನಮ್ಮ ಕಲಿಕೆಯ, ಬರಹದ ಮತ್ತು ಬದುಕಿನ ಅಂಗವಾಯಿತು. ಸಂಸ್ಕೃತದ ಸಂಸ್ಕೃತಿ ಮತ್ತು ಇಂಗ್ಲೀಷಿನ ಸಂಸ್ಕೃತಿ ಕನ್ನಡ ಮಾಧ್ಯಮದಲ್ಲಿ ಕಲಿಯಲೇಬೇಕಾದ ಅನಿವಾರ್ಯ ಸಂಸ್ಕೃತಿಯಾಯಿತು. ಕನ್ನಡ ಸಂಸ್ಕೃತಿಯನ್ನು ಕನ್ನಡ ಮಾಧ್ಯಮದಲ್ಲಿ ಬಹು ಸಂಸ್ಕೃತಿಯ ಮಾತೃಭಾಷೆಯ ಏಕೈಕ ಭಾಷೆಯ ಕನ್ನಡಿಗರಿಗೆ ಕನ್ನಡ ಕಲಿಯುವ ಅವಕಾಶ ಒದಗಿ ಬರಲೇ ಇಲ್ಲ. ಕನ್ನಡ ಆಡಳಿತ ಭಾಷೆಗೆಂದು ಸಿದ್ಧಗೊಳಿಸಿರುವ ಪೂರಕ ಸಾಹಿತ್ಯವನ್ನು ಪರಿಶೀಲಿಸಿದರೆ ಇದು ಸ್ಪಷ್ಟವಾಗುತ್ತದೆ. ಅದು ಸಂಸ್ಕೃತ ಮತ್ತು ಇಂಗ್ಲೀಷಿಗಿಂತಲೂ ಕನ್ನಡಿಗರಿಗೆ ಕಗ್ಗಂಟಾಗಿದೆ. ಕನ್ನಡಿಗನಿಗೂ ಇಂಥ ಕನ್ನಡ ಭಾಷೆ ಆಡಳಿತ ಭಾಷೆಯಾಗುವುದು ಎಂದೆಂದಿಗೂ ಬೇಡ ಎನ್ನಿಸುತ್ತದೆ. ಆಡಳಿತ ಭಾಷೆಯ ಯೋಜನೆಯ ಸಂಪೂರ್ಣ ಪ್ರಯೋಜನ ಪ್ರತಿಷ್ಠಿತ ವರ್ಗಕ್ಕೆ ದೊರತಿದೆ. ಜನವಿರೋಧಿ ಮತ್ತು ಜೀವವಿರೋಧಿ ಕೃತಿಗಳ ಪ್ರಕಟಣೆ ಕನ್ನಡ ಮತ್ತು ಸಂಸ್ಕೃತಿಯ ಹೆಸರಿನಲ್ಲಿ ವರ್ಷ ವರ್ಷವೂ ಕನ್ನಡ ಯೋಜನೆಯ ಸಿಂಹ ಪಾಲಿನ ಹಣ ವ್ಯಯವಾಗುತ್ತಿದೆ. ಇದು ಕನ್ನಡಿಗರ ಮತ್ತು ಕನ್ನಡ ನಾಡಿನ ಕರ್ಮಕತೆ! ಅನಕ್ಷರಸ್ಥ ಬಹುಸಂಸ್ಕೃತಿಯ ಅಸಲಿ ಚಿಂತನೆಗಳು, ಆಲೋಚನೆಗಳು ಮತ್ತು ಬದುಕನ್ನು ಕುರಿತು ಬರೆದರೆ ಪ್ರಕಟಿಸುವವರು ಯಾರೂ ಇಲ್ಲ. ಸ್ವಂತ ಪ್ರಕಟಿಸಿದರೆ ಕೊಳ್ಳುವವರೂ ಇಲ್ಲ. ಸಗಟು ಕೊಳ್ಳುವುದಕ್ಕಂತೂ ಬಹು ಸಂಸ್ಕೃತಿಯ ಗ್ರಂಥಗಳು ಅಶ್ಲೀಲ ಗ್ರಂಥಗಳಂತೆ ನಿಷಿದ್ಧವೇ ಸರಿ. ಪ್ರತಿಷ್ಠಿತ ವರ್ಗವೇ ಬಹು ಸಂಸ್ಕೃತಿಯವರನ್ನು ಕುರಿತು ಬರೆಯುವ ಹಕ್ಕನ್ನು, ಬಹು ಸಂಸ್ಕೃತಿಯ ಬರಹಗಾರರಿಗೆ ಕಿತ್ತು ಕೊಳ್ಳುವ ಅಧಿಕೃತ ಹಕ್ಕು ಹೇಗೆ ದೊರಕೀತು! ದ್ವಿಭಾಷೆಯ ಏಕ ಸಂಸ್ಕೃತಿಯ ಕನ್ನಡ ಬರಹಗಾರರನ್ನು ಅಂತರರರಾಷ್ಟ್ರೀಯವಾಗಿಸಲು, ಅಂತರರಾಷ್ಟ್ರೀಯ ಜ್ಞಾನವನ್ನು ಏಕ ಸಂಸ್ಕೃತಿಯ ದ್ವಿಭಾಷೆಯ ಕನ್ನಡಿಗನ ಸ್ವತ್ತಾಗಿಸಲು ಕನ್ನಡ ಸಾಹಿತ್ಯದ ವ್ಯವಸ್ಥೆ ತೆರುತ್ತಿರುವ ಬೆಲೆ ಅಪಾರ. ಇದರಿಂದ ಕನ್ನಡ ಸಾಹಿತ್ಯ ಚಟುವಟಿಕೆ ಗುತ್ತಿಗೆ ವ್ಯಾಪಾರಗಾರರ, ಏಕ ಸಂಸ್ಕೃತಿ ಹರಿಕಾರರ ಮತ್ತು ಬುದ್ಧಿ ಜೀವಿಗಳ ಮಿತ ವಲಯದ ಸೃಜನಶೀಲ ಕಲೆಯಾಗಿ ದಂತ ಗೋಪುರವನ್ನು ಕಟ್ಟಿಕೊಂಡಿತು. ಕನ್ನಡ ಸಾಹಿತ್ಯದಲ್ಲಿ ಜಾತಿ ಮತ್ತು ವರ್ಗ ರಕ್ಷಣೆ ಶಾಶ್ವತವಾಯಿತು. ಆದ್ದರಿಂದಲೇ ಇಂದು ಕೃತಿಯ ಪರವಾದ ಮಾತು ಜಾತಿಯ ಪರವಾದ ಮಾತಾಗುತ್ತದೆ. ಯಾವುದೇ ಕೃತಿಯ ವಿರುದ್ಧದ ಮಾತು ಜಾತಿ ವಿರುದ್ಧದ ಮಾತಾಗುತ್ತದೆ. ಈ ಸೂತ್ರ ಮೀರಿ ವಿಮರ್ಶೆಯ ತತ್ವಗಳು ಬೆಳೆಯದಂತೆ ಸುಪ್ತ ಪ್ರಜ್ಞೆ ಕೆಲಸ ಮಾಡುವಂತೆ ಎಚ್ಚರಿಕೆಯಿರುತ್ತದೆ. ಒಟ್ಟಿನಲ್ಲಿ ನಮ್ಮ ಕನ್ನಡ ಅಧ್ಯಯನದ ಮಾದರಿ ಇಂಡಾಲಜಿ ಮಾದರಿಗೆ ಒಗ್ಗಿದುದೇ ಹೊರತು, ಆಂಥ್ರಪಾಲಜಿ ಮಾದರಿಯದಲ್ಲ. ನಮ್ಮ ಜಾನಪದ ಮೂರ್ತ ವಸ್ತುವಿನೊಂದಿಗೆ, ಪಾಶ್ಚಾತ್ಯರ ಅಮೂರ್ತ ಚಿಂತನೆಯನ್ನು ಕಸಿಗೊಳಿಸಿ ಸೃಜನ ಶೀಲ ಕೃತಿ ರಚಿಸುವ ಪ್ರಯೋಗಶೀಲರಾದ ಎರಡನೆಯ ಮುಂಚೂಣಿ ತಂಡದ ಬರಹಗಾರರೂ ಮುಂದೆ ಬರುತ್ತಿದ್ದಾರೆ. ಅವರದ್ದು ಏಕಕಾಲದಲ್ಲಿ ಎರಡು ಕುದುರೆ ಸವಾರಿ.

ಬುದ್ಧಿ ಜೀವಿಗಳು ಮೂರ್ತಕ್ಕೂ, ಸಾಮಾನ್ಯರು ಅಮೂರ್ತಕ್ಕೂ ಎರವಾದರು ಎಂಬ ಅಭಿಪ್ರಾಯವಿದೆ. ಆದರೆ ಈ ಹೇಳಿಕೆಯಲ್ಲಿ ಸತ್ಯಾಂಶವಿಲ್ಲ. ಅನಕ್ಷರಸ್ಥ ವೇದಾಂತಿಗಳು,

ತಾಂತ್ರಿಕ ಸಾಧಕರು ಮತ್ತು ಗುರು ಬೋಧನೆಯ ಗುಂಪಿನಲ್ಲಿ ವೇದಾಂತದ ಚರ್ಚೆ ಗುಪ್ತವಾಗಿ ಇಂದಿಗೂ ಗ್ರಾಮಾಂತರದಲ್ಲಿ ನಡೆಯುತ್ತಲೇ ಇದೆ. ಅವರು ಬೆಡಗು, ಮುಂಡಿಗೆ ಮತ್ತು ಇತರ ಅನುಭಾವದ ವಚನ, ಕೀರ್ತನೆ ಮತ್ತು ತತ್ವ ಪದಗಳಿಗೆ ಅರ್ಥವನ್ನು ಸಹಜವಾಗಿಯೇ ಹೇಳುತ್ತಾರೆ. ಮತ್ತು ಸಂವಾದವನ್ನೂ ನಡೆಸುತ್ತಾರೆ. ಯಾವ ಬುದ್ಧಿಜೀವಿ ಬರಹಗಾರನೂ ಅವರ ಸವಾಲುಗಳನ್ನು ಸ್ವೀಕರಿಸಲು ಹಿಂಜರಿಯುತ್ತಾನೆ. ಎಷ್ಟೋ ವಿಷಯಗಳಲ್ಲಿ ಆಧುನಿಕ ಬುದ್ಧಿಜೀವಿಗಳ ಬೌದ್ಧಿಕ ಮಟ್ಟಕ್ಕಿಂತಲೂ, ಅನಕ್ಷರಸ್ಥ ವಿಚಾರವಂತರ ಮಟ್ಟ ಹೆಚ್ಚಿನದಿರುತ್ತದೆ. ಅದೊಂದು ಸಂಪ್ರದಾಯವಾಗಿ ಮುಂದುವರಿದಿದೆ. ಅದೇ ಗುರು-ಶಿಷ್ಯರ ಗೂಢ ಸಂಬಂಧ! ವೈಚಾರಿಕತೆ ಮತ್ತು ಅಮೂರ್ತ ಚಿಂತನೆ ಬಹು ಸಂಸ್ಕೃತಿಯ ಒಂದು ಅಂಗ. ಆದರೆ ಪ್ರತಿಷ್ಠಿತ ವರ್ಗ ಬಹು ಸಮಾಜದ ವೈಚಾರಿಕತೆ ಮತ್ತು ಅಮೂರ್ತ ಚಿಂತನೆಗಳನ್ನು ಇಂದ್ರಿಯ ಪ್ರಮಾಣವೆಂದು ಧರ್ಮದ ಹೆಸರಿನಲ್ಲಿ ನಿಷೇಧಿಸುತ್ತಾರೆ. ಮತ್ತು ಅಸಡ್ಡೆ ಮಾಡುತ್ತಾರೆ. ಯೂರೋಪಿನ ಇಂದ್ರಿಯ ಪ್ರಮಾಣದ ವೈಚಾರಿಕತೆ ಮತ್ತು ಅಮೂರ್ತ ಚಿಂತನೆಗಳಿಗೆ ಪ್ರತಿಷ್ಠಿತ ಬುದ್ಧಿಜೀವಿಗಳು ಹೃದಯ ತೆರೆದು ಆರಾಧಕರಾಗುವ ದ್ವಂದ್ವ ವಿಷಾದನೀಯವಾದದ್ದು. ಪ್ರತಿಷ್ಠಿತ ವರ್ಗ ಯುರೋಪಿನ ವಿದ್ವಾಂಸರೊಂದಿಗೆ, ಸಂಸ್ಕೃತಿಯೊಂದಿಗೆ ಸಂವಾದ ನಡೆಸುತ್ತಾರೆಯೇ ಹೊರತು, ಬಹು ಸಂಸ್ಕೃತಿಯೊಂದಿಗೆ ಸಂಬಂಧ ಇಚ್ಚಿಸುವುದಿಲ್ಲ. ಅವರಿಗೆ ಹೆಣ್ಣು ಮತ್ತು ಹೆಂಡದ ತತ್ವ ಸಾರುವ ಉಮರ್ ಖಯ್ಯಾಂ ಹತ್ತಿರವಾಗುತ್ತಾನೆ. ಭಂಗೀಸೊಪ್ಪು ಹೆಂಡದ ಬಹು ಸಂಸ್ಕೃತಿಯ ತತ್ತ್ವ ಪದದವರು ಕ್ಷುದ್ರವಾಗುತ್ತಾರೆ. ಶಿಶುನಾಳ ಶರೀಫ ಪ್ರಿಯವಾಗುವಂತೆ, ಅದೇ ಸಂಪ್ರದಾಯದ ಬಹು ಸಂಸ್ಕೃತಿಯ ಸಂತರು ಹಿಡಿಸುವುದಿಲ್ಲ. ಆಗಂತುಕನೊಂದಿಗೆ ಆತ್ಮೀಯತೆ, ಆತ್ಮೀಯರೊಂದಿಗೆ ಆಗಂತುಕರಾಗಿ ವರ್ತಿಸುವುದು ಪ್ರತಿಷ್ಠಿತ ಸಮಾಜದ ಲಕ್ಷಣ. ಅದು ಭಾವೈಕ್ಯತೆಯ ಸೂತ್ರ, ವಿದೇಶಿಯರಿಗೆ ದಾಸರಾಗಿ, ಸ್ವದೇಶೀಯರಿಗೆ ಒಡೆಯರಾಗುವ ಇಬ್ಬಂದಿತನವೇ ನಮ್ಮ ಬದುಕಿನ ದುರಂತ.

ಪ್ರತಿಷ್ಠಿತ ವರ್ಗದ ಬರಹಗಾರರು ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಬರುತ್ತಿರುವ ಮುಸ್ಲಿಂ ಮತ್ತು ಸ್ತ್ರೀ ದನಿಗಳನ್ನು ಮಾನ್ಯ ಮಾಡಿ ಸ್ವಾಗತಿಸುತ್ತಿದ್ದಾರೆ. ಅದು ನಿಜಕ್ಕೂ ಸಂತೋಷಿಸುವ ವಿಚಾರವೇ, ಆದರೆ ಬಹು ಸಂಸ್ಕೃತಿಯ ಕೆಳವರ್ಗದ ದನಿಗಳನ್ನು ಸಾಹಿತ್ಯದಲ್ಲಿ ಅಧಿಕೃತವೆಂದು ಮಾನ್ಯ ಮಾಡಲು ಇಷ್ಟಪಡುವುದಿಲ್ಲ. ಬದಲಾಗಿ ಆ ದನಿಗಳನ್ನು ಹತ್ತಿಕ್ಕಲು ಮತ್ತು ತುಳಿಯಲು ಪ್ರಯತ್ನಿಸುತ್ತಾರೆ. ಏಕೆಂದರೆ ಮುಸ್ಲಿಂ ಮತ್ತು ಸ್ತ್ರೀದನಿಗಳು ಪ್ರತಿಷ್ಠಿತ ವರ್ಗಕ್ಕೆ ಪ್ರಕ್ರಿಯೆಯಾಗಿ ಬರುವುದಿಲ್ಲ. ಮುಸ್ಲಿಂ ದನಿಗಳು ಕನ್ನಡದಲ್ಲಿ ಹೆಚ್ಚಾಗಿ ಆಂತರಿಕ ಸಮಸ್ಯೆಗಳ ಕ್ರಿಯೆ ಮತ್ತು ಪ್ರತಿಕ್ರಿಯೆಯಾಗಿಯೂ, ಸ್ತ್ರೀ ದನಿಗಳು ಹೆಚ್ಚಾಗಿ ಲೈಂಗಿಕ ಸ್ವಾತಂತ್ರ್ಯದ ದನಿಗಳೂ ಆಗಿದ್ದು ಅವುಗಳಿಂದ ಅಪಾಯವಿಲ್ಲ. ಆದರೆ ಪ್ರತಿಷ್ಠಿತ ವರ್ಗಕ್ಕೆ ತೀವ್ರ ಪ್ರತಿಕ್ರಿಯಾತ್ಮಕವಾಗಿ ಬಹು ಸಂಸ್ಕೃತಿಯ ದನಿಗಳು ಹೆಚ್ಚು ಅಪಾಯಕಾರಿಯಾಗಿರುತ್ತವೆ. ಮತ್ತು ವ್ಯವಸ್ಥೆಯ ಬುಡವನ್ನೇ ಅಲುಗಿಸುತ್ತವೆ. ಮತ್ತು ಆ ದನಿಗಳು ಸಾಮಾಜಿಕ ಕ್ರಿಯೆಯ ಪ್ರೇರಕ ಸ್ಫೋಟಕಗಳಾಗುತ್ತವೆ. ಕೆಲವು ವರ್ಗಗಳಲ್ಲಿ ಮತ ಬ್ಯಾಂಕುಗಳಾಗಿ ಪರಿವರ್ತಿಸುವ ತಂತ್ರವೇ ಸಾಹಿತ್ಯದಲ್ಲಿಯೂ ಬಳಕೆಯಾಗುತ್ತಿದೆ. ಜಾತಿಯೇ ಸೃಜನಶೀಲ ಎಂದು ಘೋಷಿಸಿದಂತೆ ಇಂಥ ಕುಟಿಲೋಪಾಯಗಳೇ ಸಂಸ್ಕಾರವಾಗಿ ಸಾಹಿತ್ಯದಲ್ಲಿ ಸೃಜನಶೀಲ

ಶಕ್ತಿಯಾಗಿರುವುದು, ಬಹು ಸಂಸ್ಕೃತಿ ಇಂಥ ತುಳಿತಕ್ಕೆ, ಸತತ ಧಾಳಿಗೆ, ಸವಾಲುಗಳಿಗೆ ತುತ್ತಾಗಿಯೂ ಇಂದೂ ಜೀವಂತವಾಗಿ ಮುಂದುವರಿದಿರುವುದು, ಅದರ ಅತಃಶಕ್ತಿಗೆ ಸಾಕ್ಷಿಯಾಗಿದೆ. ಬಹುಸಂಸ್ಕೃತಿಯ ಬಂಡಾಯ ದಲಿತ ಸಾಹಿತ್ಯದಲ್ಲಿ ದ್ವೇಷ, ಆಕ್ರೋಶ ಸ್ಥಾಯಿಯಲ್ಲ. ಸತತ ಘರ್ಷಣೆಯೇ ಮೂಲ ಗುರಿಯಲ್ಲ. ಅದರದ್ದು ಕೇವಲ ನಿಷೇಧಾತ್ಮಕ ದಾರಿಯಲ್ಲ, ಅದರ ಇತ್ಯಾತ್ಮಕ ಗುಣಗಳಿವೆ. ಅವುಗಳನ್ನು ಅಧ್ಯಯನ ಮಾಡದೆ, ದಾಖಲಿಸದೆ, ಪರಸ್ಪರ ಪೂರ್ವಗ್ರಹ ಹೊಂದುವುದೇ ಅಮಾನವೀಯವಾಗುತ್ತದೆ. ಸತತವಾಗಿ ಬಹು ಸಂಸ್ಕೃತಿಯ ನಾಶವನ್ನು ಪ್ರತಿಷ್ಠಿತ ಸಂಸ್ಕೃತಿ ಎಸಗುತ್ತಿರುವುದು ಹೆಚ್ಚೋ, ತಮಗಾದ ಸಾಮಾಜಿಕ ಅನ್ಯಾಯದ ಗಾಯದ ನೋವಿಗೆ ಅಳುತ್ತಿರುವುದು, ಆಕ್ರೋಶ ಪಡುತ್ತಿರುವುದು ಸರಿಯೋ, ಹಾಗಾದರೆ ದೇಹದ ಪಾತಕಿಗಿಂತ ಮನದ ಪಾತಕಿಗೆ ಹೆಚ್ಚು ಶಿಕ್ಷೆ ವಿಧಿಸುವ ಪ್ರತಿಷ್ಠಿತ ವರ್ಗದ ಮನುಸ್ಮೃತಿಯ ಆಧುನಿಕ ಗದ್ಯದ ಅನುವಾದವಾಗುತ್ತದೆ. ಶಾಶ್ವತ ಸೌಲಭ್ಯಕ್ಕಾಗಿ ಬಹು ಸಂಸ್ಕೃತಿಯ ..ಕ ಪ್ರತಿಷ್ಠಿತರ ಮೇಲಿನ ದ್ವೇಷ, ಎಷ್ಟು ಕೆಟ್ಟದ್ದೋ, ಶಾಶ್ವತ ಸ್ಥಾಯಿ ಮೌಲ್ಯ ಪ್ರತಿಷ್ಠಿತರ ಬಹು ಸಂಸ್ಕೃತಿಯ ನಾಶ ಅಷ್ಟೇ ಕೆಟ್ಟದ್ದು, ಇವು ಕನ್ನಡನಾಡನ್ನು ಕಟ್ಟುವುದಕ್ಕೆ, ಕನ್ನಡ ಸಾಹಿತ್ಯವನ್ನು ಬೆಳೆಸುವುದಕ್ಕೆ ಮತ್ತು ಕನ್ನಡ ನಾಡಿನ ಸಂಸ್ಕೃತಿಯ ರಕ್ಷಣೆಗೆ ಯಾವ ರೀತಿಯಲ್ಲಿಯೂ ಪ್ರೇರಣೆಯ ಶಕ್ತಿಯಾಗಲಾರವು. ಇದರಿಂದಲೇ ಕನ್ನಡನಾಡಿನ ಆತ್ಮಗೌರವ ಕನ್ನಡಿಗರಿಂದಲೇ ದಿಲ್ಲಿಯಲ್ಲಿ ಹರಾಜಾಗುತ್ತಿರುವುದು.

ಬಹುಸಂಸ್ಕೃತಿಯ ಸಾಹಿತ್ಯ, ಪ್ರತಿಷ್ಠಿತ ಸಾಹಿತ್ಯದ ರಸ ತತ್ವದ ಕಾವ್ಯ ಮೀಮಾಂಸೆಯನ್ನು ಒಪ್ಪುವುದೇ ಇಲ್ಲ. ವ್ಯಥೆಯನ್ನು ಕಥೆಯನ್ನಾಗಿಸುವ, ಪಾಡನ್ನು ಹಿಗ್ಗಿಸಿ ಹಾಡಾಗಿಸುವ ಗುರಿ ಪ್ರತಿಷ್ಠಿತ ಸಾಹಿತ್ಯದ ಗುರಿ. ಹಾದಿಯ ಬದಿಯಲ್ಲಿ ಕುಳಿತು ಹೆಂಗಸು ತಾನು ಹಾಡುವ ಹಾಡನ್ನು ಕುರಿತು "ಇದು ನನ್ನ ಹಾಡಲ್ಲ ಒಡಲುರಿ" ಎನ್ನುವ ಜ್ಞಾನಪದದ 'ಸಾಮಾಜಿಕ ಪ್ರಜ್ಞೆ' ಯೇ ಬಹುಸಂಸ್ಕೃತಿ ಸಾಹಿತ್ಯದ ಪ್ರಜ್ಞೆಯೂ ಆಗಿದೆ. ಬದತನ ಕಡೆತನಕ ಇರಲಿ ಎಂದು ಬೇಡುವ ಭಕ್ತಿಯ ಕಾಲ ಮುಗಿದಿದೆ. ಪ್ರತಿಷ್ಠಿತ ವರ್ಗಕ್ಕೆ ಭಕ್ತಿ ರಸವಾದರೆ, ಬಹು ಸಂಸ್ಕೃತಿಯ ಕೆಳ ವರ್ಗಕ್ಕೆ ಭಕ್ತಿ ಬಲಿಯಾಗುವ, ಸಂಪೂರ್ಣ ಅರ್ಪಿಸಿಕೊಂಡು ಕರಗಿಹೋಗುವ ಸಾಧನೆ. ಪ್ರತಿಷ್ಠಿತ ವರ್ಗಕ್ಕೆ ಭಕ್ತಿ ಅಭಿನಯನದ ವಸ್ತು, ಕೆಳ ವರ್ಗಕ್ಕೆ ಭಕ್ತಿ ಸಾಕ್ಷಾತ್ಕಾರದ ಸಾಧನ.

ಶಿಕ್ಷಣ-ದೇಶ ಭಕ್ತಿಗೆ, ಆರ್ಥಿಕ ಅಭಿವೃದ್ಧಿಗೆ, ಸಾಮಾಜಿಕ ಬದಲಾವಣೆಗೆ, ವ್ಯಕ್ತಿತ್ವದ ವಿಕಾಸ ಮತ್ತು ಚಾರಿತ್ರ ನಿರ್ಮಾಣಕ್ಕೆ ಸಾಧನೆ. ಆದರೆ ಸದ್ಯದ ಶಿಕ್ಷಣ ನೀತಿ ಸರ್ಕಾರದ ಮತ್ತು ಸಾರ್ವಜನಿಕರ ಸುಲಿಗೆಗೆ ದಾರಿಯಾಗಿದೆ. ಉನ್ನತ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಗ್ರಾಮೀಣ ಮಕ್ಕಳ ಕೈತಪ್ಪಿತು. ಇಂದು ವಿದ್ಯೆ ಮಾರಾಟದ ಸರಕು; ಜೊತೆಗೆ ಗುಣಮಟ್ಟವೂ ಕುಸಿಯಿತು. ಅನಕ್ಷರಸ್ಥರಿಗೆ ಶಿಕ್ಷಣ ವರವಾದದ್ದು ಶಾಪವಾಯಿತು. ಉರಿವ ಗಾಯದ ಮೇಲೆ ಉಪ್ಪು ಸುರಿದಂತೆ ಸಮೂಹ ಮಾಧ್ಯಮಗಳು (ಟಿ.ವಿ. ಮುಂತಾದವು) ಅಂಗೈಯಲ್ಲಿ ಆಕಾಶ ಕಾಣಿಸಲು ಜನಪ್ರಿಯ ಸಂಸ್ಕೃತಿಯನ್ನು ಹುಟ್ಟುಹಾಕಿದವು. ಅದರಿಂದ ಎಲ್ಲಾ ಉತ್ತಮ ಮೌಲ್ಯಗಳು ಶಿಷ್ಟ ಮತ್ತು ಜಾನಪದ ಸಂಸ್ಕೃತಿಯ ನಾಶವಾಗುತ್ತಿದೆ. ಯಾವ ಆದರ್ಶವಾಗಲೀ, ಮಾನವೀಯತೆಯಾಗಲಿ ಇರದ, ಕೇವಲ ವ್ಯಾಪಾರ ದೃಷ್ಟಿಯ ಜನಪ್ರಿಯ ಸಂಸ್ಕೃತಿ ವಾಮನನಾಗಿ, ಮೋಹಿನಿಯಾಗಿ ಗ್ರಾಮೀಣ ಬದುಕಿಗೆ ನುಗ್ಗಿದೆ. ರಾಕ್ಷಸ ವಂಶಸ್ಥರಲ್ಲದ

ಮುಗ್ಧ ಗ್ರಾಮೀಣರು ಬಲಿ ಚಕ್ರವರ್ತಿ ಮತ್ತು ಭಸ್ಮಾಸುರರಾಗಿ ಬಲಿಯಾಗುತ್ತಿದ್ದಾರೆ.

'ಮನೆಗೆ ಮಾರಿ ಪರರಿಗೆ ಉಪಕಾರಿ' ನೀತಿಯಿಂದ ನಮ್ಮ ನೆಲ, ಜಲ, ಶಿಕ್ಷಣ, ವೃತ್ತಿ, ಉದ್ಯೋಗ, ವ್ಯಾಪಾರ ನಮ್ಮ ಕೈ ತಪ್ಪುತ್ತಿದೆ. ಜನ ಈ ನೆಲಕ್ಕೆ ರಕ್ತ ಬಸಿದರು, ಬುದ್ಧಿವಂತರನ್ನು ನಂಬಿ ದೇಶ ವಹಿಸಿಕೊಟ್ಟರು. ದೇಶದ ಮಕ್ಕಳೇ ದೇಶ ಮಾರುವ ಸ್ಥಿತಿಗೆ ತಂದರು. ನಾನೇನೂ ಸಾಧನೆ ಶೂನ್ಯ ಎಂದು ಹೇಳುತ್ತಿಲ್ಲ. ಸುರಿದ ಹಣ ಮತ್ತು ತೊಡಗಿಸಿದ ಮಾನವ ಶಕ್ತಿಯ ಮುಂದೆ ಸಾಧನೆ ಏನೇನೂ ಸಾಲದು. ಕರ್ನಾಟಕದ ಕೆಲವು ಸಮಾಜಗಳ ಅಭಿವೃದ್ಧಿ ಕರ್ನಾಟಕದ ಅಭಿವೃದ್ಧಿಯಲ್ಲ. ಕನ್ನಡದ ನೆಲ, ಕನ್ನಡದ ಭಾಷೆ ಮತ್ತು ಕನ್ನಡ ಸಂಸ್ಕೃತಿಯ ಸಮಗ್ರ ಹಿತ ರಕ್ಷಣೆಯಾದಾಗಲೇ ಕನ್ನಡದ ಏಳಿಗೆ.

ಕನ್ನಡ ಸಾಹಿತ್ಯ ಪರಿಷತ್ತು, ಸಾಹಿತ್ಯ ಗ್ರಾಮೀಣ ಬಳಿ ಹೋಗಿಸುವ ಮತ್ತು ಜನ ಸಾಮಾನ್ಯರ ವಿಶ್ವವಿದ್ಯಾಲಯವನ್ನಾಗಿಸುವ ಯೋಜನೆಗಳನ್ನು ಕುರಿತು ಮಾತನಾಡುತ್ತದೆ. ಅವು ಮೋಹಕವಾಗಿ ಆಕರ್ಷಕವಾಗಿಯೇನೊ ಇವೆ. ಆದರೆ ಅದು ನಗರದ ಸರಕನ್ನು ಗ್ರಾಮೀಣರಿಗೆ ಮಾರುವ ವ್ಯವಸ್ಥೆ ಅಷ್ಟೆ ಆಗುತ್ತದೆ. ಅದರಿಂದ ಗ್ರಾಮೀಣರ ಮನೆ ಬಳಿ ವಿದೇಶಿ ಮಾಲು ದೊರಕಿದಂತಾಗುತ್ತದೆ. ಗ್ರಾಮೀಣರ ಹೊಲ ಗದ್ದೆಗಳ ಬದುಕು ಮತ್ತು ಭಾಷೆ, ಶಿಷ್ಟ ಮಟ್ಟ ಮುಟ್ಟಿ, ಗ್ರಾಮೀಣ ಸಂವೇದನೆಗಳ ಬದುಕು ಮತ್ತು ಬರಹಕ್ಕೆ ಅಧಿಕೃತ ಮಾನ್ಯತೆ ದೊರಕುವ ಯೋಜನೆಗಳನ್ನು ಪರಿಷತ್ತು ಹಮ್ಮಿಕೊಂಡಾಗಲೇ ಸಮಗ್ರ ಕನ್ನಡದ ಅಭಿವೃದ್ಧಿ ಸಾಧ್ಯ. ಕೇವಲ ಆದರ್ಶಗಳು ಮತ್ತು ಆಶಯಗಳು ವಾಸ್ತವಿಕಗಳಲ್ಲ. ಅವು ಕ್ರಿಯಾ ರೂಪ ತಾಳಿದಾಗಲೇ ಅರ್ಥ ಪಡೆಯುವುದು. 'ಕುರಿತೋದದೆಯುಂ' ಕಾವ್ಯ ಪ್ರಯೋಗ ಪರಿಣಿತ ಮತಿಗಳಾಗಿದ್ದ ಸಾಮಾನ್ಯರು ಕ್ರಮೇಣ ಸಾಹಿತ್ಯದಿಂದಲೇ ಬಹಿಷ್ಕೃತರಾದ ಚಾರಿತ್ರಿಕ ಹಿನ್ನೆಲೆಯ ಅರಿವು ಮತ್ತು ಪ್ರಜ್ಞೆ ಅಗತ್ಯ. ಅದಕ್ಕೆ ತಕ್ಕ ಯೋಜನೆಗಳನ್ನು ರೂಪಿಸಿ ಅದರಲ್ಲಿ ಸಮಗ್ರ ಕನ್ನಡಿಗರು ತೊಡಗಿಸಿಕೊಳ್ಳುವಂತಾಗಬೇಕು. ಇಲ್ಲದಿದ್ದರೆ ಸಾಹಿತ್ಯ ಪರಿಷತ್ತು ಕೇವಲ ಸರ್ಕಾರದ ಕೃಪಾಶ್ರಯ ಮತ್ತು ಸಮೂಹ ಮಾಧ್ಯಮಗಳ ಮರ್ಜಿ ಅನುಸರಿಸಿ ಅನುದಾನದಲ್ಲಿಯೇ ಅಸ್ತಿತ್ವ ಕಂಡುಕೊಳ್ಳುವ ಸಂಪ್ರದಾಯವನ್ನು ಮುಂದುವರಿಸಿದಂತಾಗುತ್ತದೆ. ಕನ್ನಡ ಕೇವಲ ಸಾಹಿತಿಗಳ ಗುತ್ತಿಗೆಯಲ್ಲ. ಸಮಗ್ರ ಕನ್ನಡಿಗರಿಗೂ ಮತ್ತು ಕನ್ನಡದ ನೆಲದಲ್ಲಿ ನೆಲಸಿರುವ ಕನ್ನಡೇತರರಿಗೂ ಸೇರಿದ ಸ್ವತ್ತು. ಕನ್ನಡವನ್ನು ಉಳಿಸುವ ಮತ್ತು ಬೆಳೆಸುವ ಕರ್ತವ್ಯ ಎಲ್ಲರಿಗೂ ಸೇರಿದುದು.

ಸಾಹಿತ್ಯ ಸಮ್ಮೇಳನಗಳು ಜಾತ್ರೆಗಳು ಎನ್ನುವುದು ರೂಢಿ. ಅವುಗಳಲ್ಲಿ ಆಲೋಚನೆಗಳು ಮತ್ತು ಚಿಂತನೆಗಳಿಗೆ ಅವಕಾಶವಿರಬೇಕು. ಸಮ್ಮೇಳನಗಳು ಧಾರ್ಮಿಕ ವಿಧಿ (ರಿಚುಯಲ್) ಗಳಾದರೆ ಅಪಾಯಕಾರಿಗಳಾಗುತ್ತವೆ. ಮತ್ತು ಅವಕಾಶವಾದಿಗಳಿಗೆ ಏಣಿಗಳಾಗುತ್ತವೆ. ಸಾಹಿತ್ಯ ಸಮ್ಮೇಳನಗಳು ಕನ್ನಡ ವಿಚಾರ ಪೂರಿತ ಚರ್ಚೆಗಳಿಗೆ ವೇದಿಕೆಗಳಾದರೆ ಸಾಧಕಗಳಾಗುತ್ತವೆ, ಕೇವಲ ಉತ್ಸವಗಳಾದರೆ ಬಾಧಕಗಳಾಗುತ್ತವೆ. ಗುಬ್ಬಿಯ ಪ್ರಥಮ ಸಾಹಿತ್ಯ ಸಮ್ಮೇಳನ ವೇದಿಕೆ ತಾಲ್ಲೂಕಿನ ಸಮಗ್ರ ಬದುಕನ್ನು ಕುರಿತ ಚರ್ಚೆಗೆ ಅವಕಾಶ ಒದಗಿಸಿದೆ ಮತ್ತು ವಿಚಾರ ಕ್ರಾಂತಿಗೆ ಕರೆ ಕೊಡಲಾಗಿದೆ. ♦

ಪ್ರೊ॥ ಕೆ.ಜಿ ನಾಗರಾಜಪ್ಪನವರ ಜೀವನದ ಮುಖ್ಯ ಘಟನೆಗಳು.

ಜನನ : 1934 ಜನವರಿ 9 , ಕಲ್ಲೂರು, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ

ವಿದ್ಯಾಭ್ಯಾಸ :

1944 -1948 : ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆ, ಕಲ್ಲೂರು.
1953 : ಎಸ್.ಎಸ್.ಎಲ್.ಸಿ, ಡಿ.ಬಿ.ಎಚ್.ಎಸ್, ಕಡಬ
1955 : ಇಂಟರ್ ಮೀಡಿಯೆಟ್, ಸರ್ಕಾರಿ ಕಾಲೇಜು, ತುಮಕೂರು.
1959 : ಬಿ.ಎ. ಆನರ್ಸ್, ಮಹಾರಾಜ ಕಾಲೇಜು, ಮೈಸೂರು.
1960 : ಎಂ.ಎ. ಮಹಾರಾಜ ಕಾಲೇಜು, ಮೈಸೂರು.

ಅಧ್ಯಾಪಕ ವೃತ್ತಿ:

1960 -1963 : ಸಹ ಅಧ್ಯಾಪಕ ಡಿ.ಬಿ. ಎಚ್.ಎಸ್, ಕೃಷ್ಣರಾಜ ಸಾಗರ
1963-1965 : ಅಧ್ಯಾಪಕ, ಜೂನಿಯರ್ ಕಾಲೇಜು, ಶ್ರೀರಾಮಕೃಷ್ಣಾಶ್ರಮ, ಮೈಸೂರು.
1965-1966 : ಅಧ್ಯಾಪಕ, ಶ್ರೀ ಸಿದ್ಧಗಂಗಾ ಜೂನಿಯರ್ ಕಾಲೇಜು, ಸಿದ್ಧಗಂಗಾಮಠ
1966-1970 : ಅಧ್ಯಾಪಕ, ಶ್ರೀ ಸಿದ್ಧಗಂಗಾ ಕಾಲೇಜು, ತುಮಕೂರು
1971-1982 : ರೀಡರ್, ಶ್ರೀ ಸಿದ್ಧಗಂಗಾ ಕಾಲೇಜು, ತುಮಕೂರು
1983-1992 : ಪ್ರೊಫೆಸರ್, ಶ್ರೀ ಸಿದ್ಧಗಂಗಾ ಕಾಲೇಜು, ತುಮಕೂರು.
1992 : ಜನವರಿ 31 ನಿವೃತ್ತಿ
1993 : ಅತಿಥಿ ಪ್ರಾಧ್ಯಾಪಕ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
1994-1998 : ನಿರ್ದೇಶಕ, ಶ್ರೀ ಕುವೆಂಪು ಸ್ನಾತಕೋತ್ತರ ಪದವಿ ಕೇಂದ್ರ, ಚನ್ನಪಟ್ಟಣ.

ಪ್ರಕಟಣೆಗಳು :

1962 : ದೊಡ್ಡ ಸಂಕಣ್ಣನಾಯಕ (ಐತಿಹಾಸಿಕ ಕಾದಂಬರಿ)
1983 : ದೇವಾಂಗ ಸಂಸ್ಕೃತಿ ಒಂದು ಅಧ್ಯಯನ
1985 : ಮರುಚಿಂತನೆ (ವಿಮರ್ಶಾ ಸಂಕಲನ)
1989 : ಭಕ್ತಿ ಸಾಹಿತ್ಯದಲ್ಲಿ ಪ್ರತಿಭಟನೆಯ ವಿಧಾನಗಳು
1993 : ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಅಭಿವ್ಯಕ್ತಿ ಸ್ವರೂಪ.
1998 : ಇಕ್ಕಟ್ಟು-ಬಿಕ್ಕಟ್ಟು (ವಿಮರ್ಶಾ ಸಂಕಲನ)

ಸಂಪಾದಿತ ಕೃತಿಗಳು:

1963 : ಶಿವಕುಮಾರವಾಣಿ
1972 : ವೀರಕುಮಾರ ಸಂಗ್ರಾಮ
1980 : ಮಧ್ಯಕಾಲೀನ ಕನ್ನಡ ಕವಿತೆ 2 (ಸಹ ಸಂಪಾದಕರೊಂದಿಗೆ)
1998 : ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು

ಪ್ರಶಸ್ತಿ, ಸನ್ಮಾನ ಮತ್ತು ಅಭಿನಂದನೆ.

1962 : ಕರ್ನಾಟಕ ರಾಜ್ಯ ಪ್ರಶಸ್ತಿ (ಕಾದಂಬರಿಗೆ)
1967 : ಸನ್ಮಾನ, ಹಳೆ ವಿದ್ಯಾರ್ಥಿ ಸಂಘ, ಕಲ್ಲೂರು
1980 : ಸನ್ಮಾನ, ತುಮಕೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಸಮಿತಿ.
1985 : ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ವಿಮರ್ಶಾಗ್ರಂಥಕ್ಕೆ)
1989 : ಸದಸ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
1992 : ಅಭಿನಂದನೆ, ಲಲಿತ ಕಲಾ ಸಂಘ, ಹೆಚ್.ಎಂ.ಟಿ. ತುಮಕೂರು.
1993 : ಅಧ್ಯಕ್ಷ, ಗುಬ್ಬಿ ತಾಲ್ಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ
1998 : ಅಭಿನಂದನೆ ಕರ್ನಾಟಕ ಸಂಘ, ಸ್ನಾತಕೋತ್ತರ ಕೇಂದ್ರ, ತುಮಕೂರು.

ತಲೆಮಾರು :

(ದಿ) ಬೆಳ್ಳೂರು ಮಾಳಮ್ಮ = (ದಿ)ತಿರುಮಲಯ್ಯ
↓
(ದಿ) ಲಕ್ಕಮ್ಮ = (ದಿ) ಮೇಸ್ತ್ರಿ ಗಂಗಪ್ಪ
↓
(1934) ಕೆ.ಜಿ. ನಾಗರಾಜಪ್ಪ = ಎಚ್. ಸಾವಿತ್ರಿ
↓
(1968) ಕೆ.ಎನ್. ಸಂಜಯ್ = ಟಿ.ಆರ್. ಶೈಲ
↓
(1995) ಸೋನಿಷಾ

ವಿಳಾಸ :
ಪ್ರೊ|| ಕೆ.ಜಿ.ನಾಗರಾಜಪ್ಪ
98 ಇ, 15 ನೇ ಮುಖ್ಯರಸ್ತೆ,
ಇಂಡಸ್ಟ್ರಿ ಅಂಡ್ ಕಾಮರ್ಸ್ ಲೇ ಔಟ್,
ವಿಜಯನಗರ,
ಬೆಂಗಳೂರು - 560 040.

ಲೇಖಕರ ವಿಳಾಸಗಳು

ಡಾ|| ಜಿ.ಎಸ್. ಶಿವರುದ್ರಪ್ಪ
867, ಚೈತ್ರಾ,
18 ನೇ ಮುಖ್ಯ ರಸ್ತೆ,
ಬನಶಂಕರಿ, 2 ನೇ ಹಂತ
ಬೆಂಗಳೂರು - 560 070.

ಪ್ರೊ|| ನಜೀರ್ ಅಹಮದ್
ಕೆ. 28 (4), 3ನೇ ಅಡ್ಡ ರಸ್ತೆ
ಲಾಲ್‌ಬಾಗ್ ಪೋರ್ಟ್ ರೋಡ್
ಬೆಂಗಳೂರು -560 004

ಡ್ಯಾ|| ಕೆ.ಜೆ. ಈಶ್ವರಯ್ಯ
ನಿವೃತ್ತ ತತ್ವಶಾಸ್ತ್ರದ ಪ್ರಾಧ್ಯಾಪಕರು
20,12 ನೇ ಗಲ್ಲಿ
ಕಬ್ಬನ್ ಪೇಟೆ. ಬೆಂಗಳೂರು.
(ಈಗ ದಿವಂಗತರು)

ಡಾ|| ರಹಮತ್ ತರೀಕೆರ
ಪ್ರಾಧ್ಯಾಪಕರು
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ಕಮಲಾಪುರ - 583221

ಕೆ. ದೊರೆಸ್ವಾಮಿ ಅಯ್ಯಂಗಾರ್
1135, 8ನೇ ಅಡ್ಡರಸ್ತೆ,
1ನೇ ಸ್ಟೇಜ್, 2ನೇ ಬ್ಲಾಕ್
ಬಿ. ಎಸ್.ಕೆ.
ಬೆಂಗಳೂರು - 560 050

ವೀಚಿ. (ವಿ. ಚಿಕ್ಕವೀರಯ್ಯ)
ಚಲನ ಪ್ರಕಾಶನ ಸಹಕಾರಿ
ಚಿಕ್ಕಪೇರಯ್ಯನ ಪಾಳ್ಯ
ತುಮಕೂರು - 572 102

ಎಂ.ಹೆಚ್. ನಾಗರಾಜು
202, 3 ನೇ ತಿರುವು
ಹೊಸ ಬಡಾವಣೆ,
ಗುಬ್ಬಿ - 572216

ಪ್ರೊ|| ಎಂ. ಎಲ್. ನರಸಿಂಹಮೂರ್ತಿ
ಪ್ರಾಧ್ಯಾಪಕರು, ಶ್ರೀ ಟಿ.ವಿ.ವಿ. ಕಾಲೇಜು
ಮಧುಗಿರಿ - 572 132.

ಕೆ.ಜಿ.ವೆಂಕಟರಮಣಯ್ಯ
56 , ಶ್ರೇಯೋಶ್ರೀ, 4 ನೇ ಮುಖ್ಯ ರಸ್ತೆ
ಮಾರುತಿ ಗೃಹ ನಿರ್ಮಾಣ ಸ.ಸಂ.ಲೇಔಟ್
ಬಿ.ಟಿ.ಎಂ. ಮೊದಲ ಹಂತ
ಬೆಂಗಳೂರು -560 029

ಉಪಲೀಕನಹಳ್ಳಿ ಬಿ. ರಾಜಣ್ಣ
ಸಂಶೋಧನಾ ವಿದ್ಯಾರ್ಥಿ
ಪುರುಷ ವಿದ್ಯಾರ್ಥಿ ನಿಲಯ -4
ಅಂಚೆ ಕಛೇರಿ ಹತ್ತಿರ
ಜ್ಞಾನಭಾರತಿ, ಬೆಂಗಳೂರು - 560 056

ಪ್ರೊ|| ಪದ್ಮಾ ಶಿವರುದ್ರಪ್ಪ
619, ಕಾರ್ತೀಕ,18 ನೇ ಮುಖ್ಯ ರಸ್ತೆ
ಪದ್ಮನಾಭ ನಗರ,
ಬನಶಂಕರಿ, 2 ನೇ ಹಂತ
ಬೆಂಗಳೂರು - 560 070

ಬಾ.ಹ. ರಮಾಕುಮಾರಿ
24 ನೇ ಕ್ರಾಸ್
ಎಸ್. ಐ.ಟಿ. ಬಡಾವಣೆ
ತುಮಕೂರು - 572 102

ಎಸ್.ಜಿ. ರಾಮಚಂದ್ರ
793, 19 ನೇ ಮುಖ್ಯರಸ್ತೆ,
20 ನೇ ತಿರುವು
ಬನಶಂಕರಿ, 2 ನೇ ಹಂತ
ಬೆಂಗಳೂರು - 560 070.

ಕೆ.ಆರ್. ನಾಯಕ್
ಕಾರ್ಮಿಕ ಮುಖಂಡರು
ಕಮರ್ಷಿಯಲ್ ಟೈಲರ್ಸ್
ಎಂ.ಜಿ. ರಸ್ತೆ, ತುಮಕೂರು.

ಹೆಚ್.ಕೆ. ನರಸಿಂಹಮೂರ್ತಿ
ಕನ್ನಡ ಉಪನ್ಯಾಸಕರು
ಗುಬ್ಬಿ ಹೊಸಹಳ್ಳಿ
ಗುಬ್ಬಿ ತಾಲ್ಲೂಕು - 572 216.

ಜಿ. ಇಂದ್ರಕುಮಾರ್
ಪತ್ರಕರ್ತರು
ಮಾರುತಿ ನಿಲಯ, ಡಿ.ಎಂ. ಪಾಳ್ಯ
ಕಾಳಿದಾಸ ನಗರ ಅಂಚೆ
ತುಮಕೂರು - 572107

ಕವಿತಾಕೃಷ್ಣ
ಖ್ಯಾತ ಲೇಖಕರು
ವಿದ್ಯಾನಗರ
ತುಮಕೂರು - 572 104

ಜಯಮ್ಮ ಕರಿಯಣ್ಣ
ಹತ್ತಿ ಗುಪ್ಪೆ, ಪ್ರೌಢಶಾಲೆ ಎದುರು
ವಿಜಯನಗರ
ಬೆಂಗಳೂರು - 560 040.

ಪ್ರೊ।। ಹೆಚ್. ಚಲುವೇಗೌಡ
ಪ್ರಾಂಶುಪಾಲರು
ಶ್ರೀ ಕುವೆಂಪು ಪ್ರಥಮದರ್ಜೆ ಕಾಲೇಜು
ಕೆಂಗಲ್, ಚನ್ನಪಟ್ಟಣ್ಣ ತಾ।।
ಬೆಂಗಳೂರು ಗ್ರಾ. ಜಿಲ್ಲೆ.

ಪ್ರೊ।। ಎಸ್. ಬ್ಲಸವರಾಜು
ಮುಖ್ಯಸ್ಥರು, ಕನ್ನಡ ವಿಭಾಗ
ಶ್ರೀ ಕುವೆಂಪು ಪ್ರಥಮ ದರ್ಜೆ ಕಾಲೇಜು
ಕೆಂಗಲ್, ಚನ್ನಪಟ್ಟ ತಾ।।
ಬೆಂಗಳೂರು ಗ್ರಾ. ಜಿಲ್ಲೆ.

ಕೆ. ಉಮಾಲಕ್ಷ್ಮೀ
ಸಂಶೋಧನಾ ವಿದ್ಯಾರ್ಥಿನಿ
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ
ಬೆಂಗಳೂರು - 560 056.

ಜಿ. ನಾಗರತ್ನ
ಸಹ ಶಿಕ್ಷಕಿ
ಬಾಲಕಿಯರ ಸರ್ಕಾರಿ ಪ್ರೌಢ ಶಾಲೆ,
ಚೇಳೂರು.
ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.

ಸಿ. ಚೌಡಪ್ಪ
ಪ್ರಾಂಶುಪಾಲರು
ಸರ್ಕಾರಿ ಪದವಿಪೂರ್ವ ಕಾಲೇಜು (ಬಾಲಕರು)
ತುಮಕೂರು - 572102.

ಕೆ. ಹೆಚ್. ಸಂಜೀವಯ್ಯ
ಶಿಕ್ಷಕರು
ಸರ್ಕಾರಿ ಪ್ರೌಢ ಶಾಲೆ,
ಹೊಸಹಟ್ಟಿ, ಅಮ್ಮನಘಟ್ಟ ಅಂಚೆ
ಗುಬ್ಬಿ ತಾ।। ತುಮಕೂರು ಜಿಲ್ಲೆ.

ಈಚನೂರು ಇಸ್ಮಾಯಿಲ್
1 ನೇ ಮುಖ್ಯರಸ್ತೆ, 8 ನೇ ತಿರುವು
ಸೋಮೇಶ್ವರ ಬಡಾವಣೆ,
ತುಮಕೂರು - 572 102.

ಬಿ.ಸಿ. ರಾಮಚಂದ್ರೇಗೌಡ
98 ನೇ 15 ನೇ ಮುಖ್ಯರಸ್ತೆ
ಇಂಡಸ್ಟ್ರಿ ಅಂಡ್ ಕಾಮರ್ಸ್‌ಲೇಔಟ್
ವಿಜಯನಗರ
ಬೆಂಗಳೂರು - 560 040

ಎ.ಕೆ. ಹಂಪಣ್ಣ
ಕನ್ನಡ ಉಪನ್ಯಾಸಕರು
ಸರ್ಕಾರಿ ಪ್ರಥಮ ದರ್ಜೆಕಾಲೇಜು
ಗುಬ್ಬಿ - 572216

ಪ್ರೊ|| ಎಚ್. ಜಿ. ಸಣ್ಣಗುಡ್ಡಯ್ಯ
1 ನೇ 'ಎ' ಅಡ್ಡರಸ್ತೆ
ಸಿದ್ಧಗಂಗಾ ಬಡಾವಣೆ
ತುಮಕೂರು - 572102

ಪಿ. ಚಂದ್ರಿಕಾ C/o ಶ್ರೀ ರವಿಕುಮಾರ್
ಸಂಖ್ಯೆ 4148/A 3 ನೇ ಮುಖ್ಯರಸ್ತೆ,
'ಬಿ' ವಿಭಾಗ, ರಾಜಾಜಿನಗರ
ಬೆಂಗಳೂರು - 560 010

ಪ್ರೊ|| ಎಸ್.ಜಿ. ಸಿದ್ಧರಾಮಯ್ಯ
'ಹೊಂಬೆಳಕು'
ನಳಂದ ಶಾಲೆ ರಸ್ತೆ
ರಾಘವೇಂದ್ರ ನಗರ
ತುಮಕೂರು - 572 102

ಪ್ರೊ|| ಎಲ್. ಎಸ್. ಶೇಷಗಿರಿ ರಾವ್
267, 'ಜ್ಯೋತಿ'
ಜಯನಗರ, 3 ನೇ ಬ್ಲಾಕ್
ಬೆಂಗಳೂರು - 560011

ಡಾ|| ಸಿ. ಎನ್. ರಾಮಚಂದ್ರನ್
005, ಪ್ರೇಮ್‌ಸಾಗರ್ ಅಪಾರ್ಟ್‌ಮೆಂಟ್ಸ್
ಮಣ್ಣಗುಡ್ಡ
ಮಂಗಳೂರು - 575 003

ಡಾ|| ಪೋಲಂಕಿ ರಾಮಮೂರ್ತಿ
ಇಂಗ್ಲೀಷ್ ವಿಭಾಗ
ಮಾನಸ ಗಂಗೋತ್ರಿ
ಮೈಸೂರು-570 006 .
(ಈಗ ದಿವಂಗತರು)

ಡಾ|| ಯು. ಆರ್. ಅನಂತಮೂರ್ತಿ
224, ಶ್ರೀ ಶೈಲಂ
ವಿದ್ಯಾರತ್ನ ನಗರ
ಮಣಿಪಾಲ
ದಕ್ಷಿಣ ಕನ್ನಡ ಜಿಲ್ಲೆ.

ಡಾ|| ಕೇಶವ ಶರ್ಮ ಕೆ.
ಪ್ರಾಧ್ಯಾಪಕರು, ಕನ್ನಡ ಭಾರತಿ
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ - 577451
ಶಿವಮೊಗ್ಗ ಜಿಲ್ಲೆ.

ಪ್ರೊ|| ಶ್ಯಾಮಸುಂದರ ಕೋಟಿ
ದೀಪಿಕಾ 7 ನೇ ಕ್ರಾಸ್,
2 ನೇ ಲಿಂಕ್ ರಸ್ತೆ,
ಎಸ್.ಐ.ಟಿ. ಬಡಾವಣೆ,
ತುಮಕೂರು- 572 103

ಪ್ರೊ|| ಶಿವರಾಮಯ್ಯ
121, 'ಅಮ್ಮಾಜಿ' 13 ನೇ ಮುಖ್ಯ ರಸ್ತೆ
ಬಿನ್ನಿ ಲೇಔಟ್, ವಿಜಯನಗರ
ಬೆಂಗಳೂರು - 560 040.


ಎನ್. ನಾಗಪ್ಪ , ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು
ಚಿಕ್ಕನಾಯಕನಹಳ್ಳಿ
ತುಮಕೂರು ಜಿಲ್ಲೆ.

ತಿಮ್ಮನಹಳ್ಳಿ ವೇಣುಗೋಪಾಲ್
ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು
ತಿಮ್ಮನಹಳ್ಳಿ, ಚಿಕ್ಕನಾಯಕನಹಳ್ಳಿ ತಾ||
ತುಮಕೂರು ಜಿಲ್ಲೆ.

ಆರ್. ಉಮೇಶ್ ಎಂ.ಎ.
ರಾಜಾನಗರ, ಊರುಕೆರೆ ಅಂಚೆ
ತುಮಕೂರು ತಾಲ್ಲೂಕು || ಜಿಲ್ಲೆ||

ಪ್ರೊ|| ಕ.ವೆಂ ರಾಜಗೋಪಾಲ್.
ಎಂ.ಐ. ಜಿ. 41
2 ನೇ ಹಂತ, ಕೆಂಗೇರಿ ಉಪನಗರ
ಬೆಂಗಳೂರು-560 060

ಪಿ.ಭೋಗರಾಜ್ ಎಂ.ಎ.
ಕೌತಮಾರನಹಳ್ಳಿ, ಅರಳೂರು ಅಂಚೆ
ತುಮಕೂರು ತಾ|| ಜಿಲ್ಲೆ.



ನಾನು ಹುಟ್ಟಿದ್ದು ನಿರಕ್ಷರತೆ, ಅಜ್ಞಾನ, ಮೌಢ್ಯ ಮತ್ತು ಕಿತ್ತು ತಿನ್ನುವ ಬಡತನದಿಂದ ಸದಾ ಶೋಷಣೆಗೆ ಒಳಗಾದ ಕರೋಡಗಾರಿ ಕುಟುಂಬದಲ್ಲಿ. ಹುಟ್ಟುತ್ತಲೇ ನಮ್ಮ ಕುಟುಂಬ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅಜ್ಜಿ ಮತ್ತು ತಾಯಿ ತಾವು ಹೊಟ್ಟೆಬಟ್ಟೆ ಕಟ್ಟಿಯೂ, ನನ್ನನ್ನು ಮಾತ್ರ ಸದಾ ಸುಖವಾಗಿಯೇ ಸಾಕಿದರು. ಅವರು ನಿರಕ್ಷರಸ್ಥರಾದರೂ ನನ್ನನ್ನು ವಿದ್ಯಾವಂತನನ್ನಾಗಿಸಲು ತಮ್ಮ ಜೀವನವನ್ನೇ ತೇದರು. ಗಳಿಕೆ ಮತ್ತು ಕಲಿಕೆ ನನ್ನ ಸ್ವಭಾವಕ್ಕೆ ಒಗ್ಗದೆ, ಕಲಿಕೆಯೇ ನನ್ನ ಗುರಿಯಾಯಿತು. ಎಂದೂ ನಾನು ನಮ್ಮ ಕುಲ ಕಸುಬನ್ನು ಕಲಿಯದೆ, ನನ್ನ ಸಂಗಾತಿಗಳಿಗಿಂತ ಭಿನ್ನನಾದೆನು. ನನ್ನನ್ನು ಸದಾ ಕೆಲವು ಮೂಲಭೂತ ಪ್ರಶ್ನೆಗಳು ಚಿಕ್ಕಂದಿನಿಂದಲೇ ಕಾಡತೊಡಗಿದವು. ದೇವರು, ದೆವ್ವ ಮತ್ತು ಅವನ್ನು ನಂಬಿ ಬದುಕುತ್ತಿರುವ ಜನರ ಆಚಾರ ವಿಚಾರ, ಬಂದು ಹೋಗುತ್ತಿದ್ದ ಸಾಧು ಸಂತರು ನನ್ನ ಆಸಕ್ತಿಯನ್ನು ಸೆಳೆಯುತ್ತಿದ್ದರು. ಎಲ್ಲವನ್ನು ಪರೀಕ್ಷೆಗೆ ಒಡ್ಡುವ, ಒರೆಹಚ್ಚುವ ದೃಢ ಸಂಕಲ್ಪ ನನ್ನದು. ದೇವರ ಮುಂದೆ ಕುಳಿತು, ಗಂಟೆಗಟ್ಟಲೆ ಧ್ಯಾನಿಸಿ, ಪ್ರತ್ಯಕ್ಷವಾಗದಿದ್ದಾಗ, ವಿಗ್ರಹಗಳ ತಲೆಮೇಲೆ ಕಾಲಿಟ್ಟಿದ್ದೇನೆ. ದೆವ್ವಗಳಿಗಾಗಿ ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ಸ್ಮಶಾನಕ್ಕೆ ಹೋಗಿ ಕಾದು ಕುಳಿತಾಗ, ಕೆಲವು ವಿಚಿತ್ರ ಅನುಭವವಾಯಿತೇ ಹೊರತು ದೆವ್ವಗಳು ಮಾತ್ರ ಕಾಣಲಿಲ್ಲ. ಒಂಟಿಯಾಗಿ ಬೆಟ್ಟಗುಡ್ಡ, ಕಾಡುಮೇಡು ಅಲೆದು ಮಾಟ ಮಂತ್ರವಾದಿಗಳು ಮತ್ತು ಸಾಧು ಸಂತರನ್ನು ಕೆಣಕಿ ಸಾವಿನೊಂದಿಗೆ ಸರಸವಾಡಿದ್ದೇನೆ. ಇವೆಲ್ಲಕ್ಕೂ ವಿಚಿತ್ರವಾದುದು ಮನುಷ್ಯನ ಮನಸ್ಸು ಮತ್ತು ಸ್ವಭಾವ. ಭ್ರಷ್ಟ ಬದುಕಿನ ನಡುವೆ ನಾನು ನಂಬಿರುವ ಮೌಲ್ಯರಕ್ಷಣೆಗೆ ಹೋರಾಡುತ್ತ ಕಹಿಯನ್ನು ಅನುಭವಿಸುತ್ತಿದ್ದೇನೆ. ಆದರೂ ಇಂಥ ಸತ್ಯಾನ್ವೇಷಣೆಯ ಸಾಹಸದ ಬದುಕಿನಿಂದ ನನಗೆ ಶಾಂತಿ ಸಿಕ್ಕಿದೆ.

ಕೆ. ಜಿ. ನಾಗರಾಜಪ್ಪ